ಸ್ವಾತಂತ್ರ್ಯೋತ್ತರ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಗಳು – ಒಂದು ಅಧ್ಯಯನ

(ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಕೆ.ಎಸ್. ವೆಂಕಪ್ಪ

ಮಾರ್ಗದರ್ಶಕರು

ಡಾ॥ ಡಿ.ಜಿ. ರಮೇಶ್

ಅಧ್ಯಯನಾಂಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ.

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

2012

ಸ್ವಾತಂತ್ರ್ಯೋತ್ತರ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಗಳು

ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾನಿಲಯ, ಹಂಪಿಗೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು :
ಕೆ.ಎಸ್. ವೆಂಕಪ್ಪ ಎಂ.ಎ., ಬಿ.ಇಡಿ.

ಮಾರ್ಗದರ್ಶಕರು :
ಡಾ॥ ಡಿ.ಜಿ. ರಮೇಶ್

ಅಧ್ಯಯನಾಂಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ,
ಅಧ್ಯಯನ ಕೇಂದ್ರ : ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಪ್ರಮಾಣಪತ್ರ

"ಸ್ವಾತಂತ್ರ್ಯೋತ್ತರ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಗಳು"- ಒಂದು ಅಧ್ಯಯನ, ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನಾನು ಪಿಹೆಚ್.ಡಿ. ಪದವಿಗಾಗಿ 'ಕನ್ನಡ ವಿಶ್ವವಿದ್ಯಾನಿಲಯ ಹಂಪಿ'ಗೆ ಒಪ್ಪಿಸಲು ಡಾ॥ ಡಿ.ಜಿ. ರಮೇಶ್ ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧ ಅಥವಾ ಅದರ ಯಾವುದೇ ಭಾಗವನ್ನು ಹಿಂದೆ ಯಾವುದೇ ಪದವಿ, ಡಿಪ್ಲೊಮಾ, ಫೆಲೋಶಿಪ್ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 01-08-12

ಕೆ.ಎಸ್. ವೆಂಕಪ್ಪ,
ಬಿನ್. ಶಾಮಾಚಾರಿ ಕೆ.,
ಪಿಹೆಚ್.ಡಿ. ವಿದ್ಯಾರ್ಥಿ,
ತನಿಕೋಡು, ಬೆಟ್ಟಗೆರೆ ಗ್ರಾಮ,
ತೆಕ್ಕೂರು ಅಂಚೆ, ಶೃಂಗೇರಿ ತಾ॥

ದೃಢೀಕರಣ ಪತ್ರ

ಶ್ರೀ ಕೆ.ಎಸ್. ವೆಂಕಪ್ಪನವರು "ಸ್ವಾತಂತ್ರ್ಯೋತ್ತರ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಗಳು"- ಒಂದು ಅಧ್ಯಯನ, ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾನಿಲಯ ಹಂಪಿಯ 'ಭಾಷಾನಿಕಾಯ' ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 01/8/2012

[signature] 01/8/12
ಡಾ॥ ಡಿ.ಜಿ. ರಮೇಶ್,
ಮುಖ್ಯಸ್ಥರು, ಕನ್ನಡ ವಿಭಾಗ,
ಆಚಾರ್ಯ ತುಳಸಿ ರಾಷ್ಟ್ರೀಯ ವಾಣಿಜ್ಯ ಕಾಲೇಜು,
ಶಿವಮೊಗ್ಗ.

ಡಾ॥ ಡಿ.ಜಿ. ರಮೇಶ್
ಮುಖ್ಯಸ್ಥರು, ಕನ್ನಡ ವಿಭಾಗ
ಎ.ಟಿ.ಎನ್.ಸಿ. ಕಾಲೇಜು
ಶಿವಮೊಗ್ಗ.

ಸ್ವಾತಂತ್ರ್ಯೋತ್ತರ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಗಳು – ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ – 4

ಅಧ್ಯಾಯ – 5

ಪೀಠಿಕೆ

ಅಧ್ಯಾಯ – 1

1.1 ಪ್ರಬಂಧದ ಉದ್ದೇಶ

1.2 ವ್ಯಾಪ್ತಿ

1.3 ಶೃಂಗೇರಿ ಹೆಸರಿನ ಪದ ನಿಷ್ಪತ್ತಿ

1.4 ಶೃಂಗೇರಿಯ ಚಾರಿತ್ರಿಕ ಹಾಗೂ ಪೌರಾಣಿಕ ಹಿನ್ನೆಲೆ

1.5 ಶೃಂಗೇರಿ ತಾಲ್ಲೂಕಿನ ಭೌಗೋಳಿಕ ಪರಿಸರ ಮತ್ತು ಜನಸಂಖ್ಯೆ

ಪೀಠಿಕೆ

ಸಾಂಸ್ಕೃತಿಕ ಸ್ಥಿತ್ಯಂತರ ಹಾಗೂ ಹೊಸ ಆಯಾಮಗಳ ಕುರಿತು ಡಾ। ಬರಗೂರು ರಾಮಚಂದ್ರಪ್ಪನವರು ಕನ್ನಡ ಸಾಹಿತ್ಯದಲ್ಲಿ ಪುನರ್ ಮೌಲ್ಯೀಕರಣ ಸಂಪಾದಿತ ಕೃತಿಯ ಪ್ರಸ್ತಾವನೆಯಲ್ಲಿ ತಿಳಿಸಿದ ಅಂಶಗಳು ಸ್ವಾತಂತ್ರ್ಯೋತ್ತರ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಗಳ ಅಧ್ಯಯನದ ಪ್ರಾಸ್ತಾವಿಕ ಹಿನ್ನೆಲೆಗೆ ಪ್ರಸ್ತುತವೆನಿಸುತ್ತವೆ.

ಯಾವುದೇ ಕಾಲಘಟ್ಟವನ್ನು ಗಮನಿಸಿದಾಗ ಅದು ಭೂತ, ವರ್ತಮಾನ ಮತ್ತು ಭವಿಷತ್ ಕಾಲಗಳ ಸಮ್ಮಿಲನವಾಗಿರುತ್ತದೆಯೇ ಹೊರತು, ಕೇವಲ ವರ್ತಮಾನವಾಗಿರಲು ಸಾಧ್ಯವಿಲ್ಲ. ಏಕೆಂದರೆ ಯಾವುದು ಈಗ ವರ್ತಮಾನವೊ ಅದು ಹಿಂದೆ ಭವಿಷ್ಯತ್ ಕಾಲ ಆಗಿತ್ತು, ಮುಂದೆ ಭೂತಕಾಲವಾಗುತ್ತದೆ. ಈಗ ಭೂತಕಾಲವೆನ್ನಿಸಿಕೊಳ್ಳುವುದು ಕೆಲವು ಕ್ಷಣದ ಹಿಂದೆಯೆ ವರ್ತಮಾನವಾಗಿತ್ತು. ಮನುಷ್ಯನ ಜೀವನ ಹೀಗೆ ಪ್ರತಿಕ್ಷಣದಲ್ಲೂ ಮೂರು ಕಾಲಗಳೊಡನೆ ಮುಖಾಮುಖಿಯಾಗುತ್ತಾ, ಸೃಷ್ಟಿಸುತ್ತಾ, ಪ್ರತಿಕ್ರಿಯಿಸುತ್ತಾ, ವಿಕಾಸ ಹೊಂದುತ್ತಲೇ ಇರುತ್ತದೆ. ಹಾಗಾಗಿ ಇಲ್ಲಿ ಎಲ್ಲವೂ ಹೆಚ್ಚಿನಂಶ ಸಾಪೇಕ್ಷವಾಗುತ್ತ ಇರುತ್ತವೆ. ಬದುಕು ಸ್ಥಿತಿಸ್ಥಾಪಕಗುಣವನ್ನು ಹೊಂದದೇ ಇರುವುದರಿಂದ ಮತ್ತು ಮಾನವನು ಸಹಜವಾಗಿಯೇ ಸೃಜನಶೀಲನಾಗಿರುವುದರಿಂದ ಕಾಲಘಟ್ಟದ ಭೂತ, ವರ್ತಮಾನ ಮತ್ತು ಭವಿಷ್ಯತ್‌ಗಳು ಬದುಕಿನಲ್ಲಿ ಪುನರ್‌ಮೌಲ್ಯೀಕರಣ ಹೊಂದುತ್ತಿರುತ್ತವೆ ಮತ್ತು ನಿರಂತರವಾಗಿ ಮಿಶ್ರ ಸಂಸ್ಕೃತಿಯ ಸಂದರ್ಭಗಳು ಸೃಷ್ಟಿಯಾಗುತ್ತವೆ. ಈ ಪುನರ್ ಮೌಲ್ಯೀಕರಣವಾಗಲಿ, ಸೃಜನಶೀಲತೆಯಾಗಲೀ, ಪ್ರಕ್ರಿಯೆಗಳಾಗಲೀ ಪ್ರತಿಫಲಿತವಾಗುವುದು ಆಯಾ ಕಾಲಘಟ್ಟದ ಜನಾಂಗದ ಸಂಸ್ಕೃತಿಯಲ್ಲಿ. ಹಿಂದಿನ ಕಾಲಘಟ್ಟಗಳಿಗೆ ಹೋಲಿಸಿದರೆ ಇತ್ತೀಚೆಗೆ ಚಲನಶೀಲತೆ ಹೆಚ್ಚಿನ ವೇಗವನ್ನು ಪಡೆದುಕೊಂಡು ಸಾಂಸ್ಕೃತಿಕ ಪಲ್ಲಟಗಳು ತೀವ್ರಗತಿಯಲ್ಲಿ ಸಂಭವಿಸಿರುವುದನ್ನು ನೋಡಬಹುದು. ಆದರೆ ಈ ಎಲ್ಲಾ ಪಲ್ಲಟಗಳ ಮಧ್ಯದಲ್ಲಿಯೂ ಹಲವು ಮೂಲಭೂತ ಮೌಲ್ಯಗಳು ಸ್ಥಿರವಾಗಿ ನೆಲೆನಿಂತು ಚಲನಶೀಲವಾಗಿದ್ದರೂ ಸಮಾಜಕ್ಕೆ ಸ್ಥಿರತೆಯನ್ನು ಒದಗಿಸಿವೆ.

ಸಂಸ್ಕೃತಿಯ ಈ ಚಲನಶೀಲತೆ ಬಹುಮುಖಿಯಾದುದು. ಇದರಲ್ಲಿ ನಾವು ಹಿತಕರವೆನಿಸುವಂತೆ ಅಹಿತಕರವೂ ಆದ ವ್ಯತ್ಯಾಸಗಳನ್ನು ಗಮನಿಸುತ್ತೇವೆ. ಈ ಹಿತ ಅಹಿತಗಳೂ ಕೂಡ ಸಾಪೇಕ್ಷವೇ. ಒಂದು ಕಾಲದಲ್ಲಿ ಹಿತವೆನಿಸಿದ ಅನೇಕ ಮೌಲ್ಯಗಳು ಮತ್ತೊಂದು ಕಾಲದಲ್ಲಿ ಅಹಿತವೆನಿಸಿ ಮತ್ತೆ ಹಿತವಾಗಿ ಪರಿಣಮಿಸಿವೆ. ಒಮ್ಮೆ ಪ್ರಧಾನವಾಗಿದ್ದ ಸಂಸ್ಕೃತಿ ಅಧೀನವಾಗಿರುವುದೂ, ಅಧೀನವಾಗಿದ್ದ ಸಂಸ್ಕೃತಿ ಪ್ರಧಾನವಾಗಿರುವುದನ್ನು ಚರಿತ್ರೆ ದಾಖಲಿಸುತ್ತದೆ. ಒಂದೇ ಸಿದ್ಧಾಂತ ಪರಿಸ್ಥಿತಿಯ ಒತ್ತಡಗಳಿಂದಾಗಿ, ಮೌಲ್ಯೀಕರಣದ ಸಾಪೇಕ್ಷತೆಯಿಂದಾಗಿ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತ ಹೋಗುವುದನ್ನು ನಾವು ನೋಡಬಹುದು. ಈ ಕಾರಣದಿಂದಾಗಿಯೇ

ಕ್ರಾಂತಿಕಾರಿಯೆನಿಸಿಕೊಂಡ ಹಲವಾರು ಚಳುವಳಿಗಳು ತಮ್ಮ ಮೂಲ ಪ್ರವೃತ್ತಿಯನ್ನೇ ಕಳೆದುಕೊಂಡು, ವಿಘಟಿತ ಅಂಶವಾಗಿ ಉಳಿದುಬಿಟ್ಟಿರುವುದು ವಿಪರ್ಯಾಸವಾದರೂ ಸತ್ಯ.

"ಮನುಷ್ಯನಿಗೆ ಸಂಬಂಧಿಸಿದಂತೆ ಎಲ್ಲಾ ಅಂಗಗಳನ್ನು ಒಳಗೊಂಡ ತನಗೆ ತಾನೇ ಪರಿಪೂರ್ಣವಾದ ಸ್ವತಂತ್ರವಾದ ಘಟಕಗಳು ಇಲ್ಲದ, ಆದರೆ ಅನವರತವೂ ಹೊಸಹೊಸ ಸಂವೇದನೆಗಳನ್ನು ಪಡೆಯುತ್ತಾ, ಪ್ರಭಾವಗಳನ್ನು ರೂಪಿಸುತ್ತಾ, ಆ ಪ್ರಭಾವಗಳಿಗೆ ಒಳಗಾಗುತ್ತಾ, ಚಲನಶೀಲವಾಗಿರುವುದೇ ಸಂಸ್ಕೃತಿ" ಎನ್ನಬಹುದು. ಬೇರೆ ಬೇರೆ ಕಾಲಘಟ್ಟಗಳಲ್ಲಿ ಬದಲಾವಣೆಗಳಾಗುತ್ತಿದ್ದರೂ ಯಜಮಾನ ಸಂಸ್ಕೃತಿ ಹಾಗೂ ಉಪಸಂಸ್ಕೃತಿ ಇದ್ದೇ ಇರುತ್ತವೆ ಎಂಬುದನ್ನು ಚರಿತ್ರೆ ನಮಗೆ ಬೋಧಿಸುತ್ತದೆ. ಈ ಸಂಸ್ಕೃತಿಗಳ ಪರಸ್ಪರ ಕೊಡುಕೊಳ್ಳುವಿಕೆ, ಸಂಘರ್ಷ, ಪ್ರಭಾವ ಮೊದಲಾದವು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಆಯಾಮಗಳನ್ನು ಹೊಂದಿರುತ್ತವೆ. ಸಮಾಜವು ಸ್ಥಾಯಿಯಲ್ಲದಿರುವುದರಿಂದ ಈ ಎಲ್ಲಾ ಆಯಾಮಗಳಲ್ಲಿ ಪಲ್ಲಟಗಳು ನಡೆಯುತ್ತಿರುತ್ತವೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆ ಸಮಗ್ರ ವಿಶ್ವದ ಜನ ಸಮುದಾಯಗಳ ಮೇಲೆ ಬೀರಿರುವ ಪ್ರಭಾವ ಅಭೂತಪೂರ್ವವಾದುದು. ವಿಶೇಷವಾಗಿ ಈ ಬೆಳವಣಿಗೆಗಳು ಜನರ ಜೀವನ ಶೈಲಿಯ ಮೇಲೆ ಅಗಾಧ ಪರಿಣಾಮಬೀರಿ ಬಾಹ್ಯ ಜೀವನ ಹಾಗೂ ಅದಕ್ಕೆ ಸಂಬಂಧಪಟ್ಟ ಸಂಸ್ಕೃತಿಯ ನಾನಾ ಆಯಾಮಗಳು ವ್ಯತ್ಯಾಸ ಹೊಂದಿವೆ. ಆದರೆ ಇತ್ತೀಚಿನ ಬೆಳವಣಿಗೆಗಳನ್ನು ನೋಡಿದಾಗ ಈ ವಿಜ್ಞಾನ ತಂತ್ರಜ್ಞಾನಗಳು ಮನುಷ್ಯನಿಗೆ ದಾಸನಾಗುವ ಬದಲು ಮನುಷ್ಯನೇ ಅವುಗಳ ದಾಸನಾಗುತ್ತಿರುವ ದೃಶ್ಯ ಕಂಡುಬರುತ್ತದೆ. ಸಾಂಸ್ಕೃತಿಕ ಪಲ್ಲಟಗಳಲ್ಲಿ ಇದೊಂದು ಗಣನೀಯವಾದ ಅಂಶ. ಜಾಗತಿಕ ಸಂದರ್ಭದಲ್ಲಿ ಅದರಲ್ಲೂ ವಿಶೇಷವಾಗಿ ಭಾರತೀಯ ಸಂದರ್ಭದಲ್ಲಿ ಇದು ಅಕ್ಷರಶಃ ನಿಜವಾಗುತ್ತಿದೆ. ಜಾಗತೀಕರಣ, ವ್ಯಾಪಾರೀಕರಣ, ಕೊಳ್ಳುಬಾಕತನ ಮೊದಲಾದವೂ ಹೊಸ ಹೊಸ ಬೆಳವಣಿಗೆಗಳಿಗೆ ಕಾರಣವಾಗುತ್ತಿವೆ.

ವಿಜ್ಞಾನದ ಪ್ರಭಾವ ಸಾಮಾನ್ಯ ಮನುಷ್ಯನ ಅಂತರ್ಜೀವನದ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಎನ್ನುವುದು ವಿಚಾರಾರ್ಹ ಸಂಗತಿಯಾಗುತ್ತದೆ. ಉದಾಹರಣೆಗೆ ಕೈಗಾರಿಕೀಕರಣದಿಂದಾಗಿ ಗ್ರಾಮಗಳಿಂದ ನಗರಗಳಿಗೆ ವಲಸೆ ಹಿಂದೆಂದೂ ಇಲ್ಲದಷ್ಟು ನಡೆಯಿತು. ಈಗಲೂ ನಡೆಯುತ್ತಲೇ ಇದೆ. ಈ ವಲಸೆಯಿಂದಾಗಿ ನಗರಗಳು ಅಕ್ಕಪಕ್ಕದ ಹಳ್ಳಿಗಳನ್ನು ನುಂಗುತ್ತಾ ಬೆಳೆಯುತ್ತಿವೆ. ವಿಪರ್ಯಾಸವೆಂದರೆ ಈ ಹಳ್ಳಿಗಳೂ, ಹೊರಗಿನ ಹಳ್ಳಿಗಳಿಂದ ಬಂದ ಜನಗಳೂ ತಮ್ಮ ಗ್ರಾಮ್ಯತನವನ್ನು ಆಂತರಿಕವಾಗಿ ಕಳೆದುಕೊಳ್ಳದೆ ನಗರ ಮಧ್ಯದ ದ್ವೀಪಗಳಾಗಿದ್ದಾರೆ. ಉನ್ನತ ವ್ಯಾಸಂಗ ಪಡೆದವರು, ವಿಜ್ಞಾನಿಗಳೆನಿಸಿಕೊಂಡವರು, ವಿಜ್ಞಾನದ ವ್ಯಾಪ್ತಿಗೆ ನಿಲುಕದ ನಂಬಿಕೆಗಳನ್ನು ಹೊಂದಿದ್ದಾರೆ. ವೈಜ್ಞಾನಿಕ ಚಿಂತನೆಗೆ ಪಾರಂಪರಿಕ ವಿರೋಧವಂತೂ ಒಂದು ಜಾಗತಿಕ ಪ್ರಕ್ರಿಯೆಯೇ

ಆಗಿದೆ. ವ್ಯಕ್ತಿಗಳು ಬದಲಾಗಬಹುದು, ಸಂದರ್ಭಗಳು ಬದಲಾಗಬಹುದು ಆದರೆ ಇಂತಹ ಸನ್ನಿವೇಶಗಳು ಮಾತ್ರ ಮತ್ತೆ ಮತ್ತೆ ಉದ್ಭವಿಸುತ್ತಲೇ ಇವೆ.

ಶೃಂಗೇರಿಯು ಪೌರಾಣಿಕ, ಚಾರಿತ್ರಿಕ, ಪ್ರಾಕೃತಿಕವಾಗಿ ವಿಶೇಷತೆಯನ್ನು ಹೊಂದಿದೆ. ರಾಜಮಹಾರಾಜರ ಪ್ರೋತ್ಸಾಹ ನೆರವಿನಿಂದ ಶ್ರೀಮಠವು ತನ್ನ ಘನತೆಯನ್ನು ಹೆಚ್ಚಿಸಿಕೊಂಡು 'ಮಹಾಸಂಸ್ಥಾನ'ವಾಗಿದೆ. ಸನಾತನ ಧರ್ಮದ ಧ್ಯೇಯೋದ್ದೇಶವನ್ನು ಹೊಂದಿದ್ದರೂ ಬೇರೆ ಮತಧರ್ಮದವರ ಮೇಲೆ ಹೇರಿಕೆಯನ್ನುಂಟುಮಾಡದೆ ಸರ್ವಧರ್ಮಸಹಿಷ್ಣುವಾಗಿ ಸಾಗಿ ಬಂದಿದೆ. ಪ್ರಧಾನ ಸಂಸ್ಕೃತಿಯ ಅಧೀನದಲ್ಲಿ ಉಪಸಂಸ್ಕೃತಿಗಳು ಇರುವುದು ಸರ್ವೇಸಾಮಾನ್ಯವಾದುದಾದರೂ ಶ್ರೀಮಠದ ಪ್ರಧಾನ ಸಂಸ್ಕೃತಿಯು ಉಪಸಂಸ್ಕೃತಿಗೆ ಮಾರಕವಾಗದೆ ಪೂರಕವಾಗಿ ಸಾಗಿ ಬಂದಿದೆ. ಬೇರೆಲ್ಲಾ ಮಠ ಮಾನ್ಯಗಳು ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಪ್ರಮುಖವಾಗಿ ಕಂಡು ಬರುತ್ತಿದ್ದರೆ, ಶೃಂಗೇರಿಯ ಶ್ರೀಮಠವು 'ಧರ್ಮ ಸಂಸ್ಥಾಪನೆ' ಹಾಗೂ 'ಧರ್ಮ ಪ್ರಸರಣ'ವನ್ನೇ ಪ್ರಧಾನವಾಗಿಟ್ಟುಕೊಂಡು ಇಂದಿನವರೆಗೂ ನಡೆದು ಕೊಂಡು ಬಂದಿರುವುದು ವಿಶಿಷ್ಟವಾಗಿದೆ. ಶೃಂಗೇರಿಯ ಸಂಸ್ಕೃತಿ ಶ್ರೀಮಠದ ಸಂಸ್ಕೃತಿಗಳು ಅಭಿನ್ನವಾಗಿರುವುದರಿಂದ ಶೃಂಗೇರಿಯ ಸಾಂಸ್ಕೃತಿಕ ಅನನ್ಯತೆಯಲ್ಲಿ ಶ್ರೀಮಠದ ಕೊಡುಗೆ ಅಪಾರವಾದುದಾಗಿದೆ.

ಕಾಲಘಟ್ಟದ ಪರಿವರ್ತನೆಯ ದಾರಿಯಲ್ಲಿ ಘರ್ಷಣೆ ಹಾಗೂ ಪಲ್ಲಟಗಳು ಅನಿವಾರ್ಯ. ಇಲ್ಲಿ ನಡೆದಿರುವ ಸಾಂಸ್ಕೃತಿಕ ಪಲ್ಲಟಗಳು ಎಷ್ಟು ವೈವಿಧ್ಯಪೂರ್ಣವಾಗಿವೆ, ಎಷ್ಟು ಪರಿಣಾಮಕಾರಿಯಾಗಿವೆ, ಇವುಗಳಿಗೆ ಕಾರಣಗಳೇನು? ಮೊದಲಾದ ಪ್ರಶ್ನೆಗಳು ಉದ್ಭವಿಸುತ್ತವೆ. ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ, ಜವಾಬ್ದಾರಿ ಸರ್ಕಾರದ ರಚನೆಗಾಗಿ, ಹಿಂದುಳಿದ ವರ್ಗದ ಜನರ ಹಿತಕ್ಕಾಗಿ ನಡೆದ ಚಳುವಳಿಗಳು, ಜಹಗೀರಿ ರದ್ದತಿ, ಭೂ ಸುಧಾರಣೆ ಮೊದಲಾದ ಪ್ರಕ್ರಿಯೆಗಳ ಸಂದರ್ಭದಲ್ಲಿ ಸಂಘರ್ಷವೇನಾದರೂ ನಡೆಯಿತೆ? ಹಾಗಿದ್ದರೆ, ಅವುಗಳ ಸ್ವರೂಪವೇನು? ಕಾರಣಗಳೇನು? ಪರಿಣಾಮಗಳೇನು? ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಡೆದಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಸುಧಾರಣೆಗಳು ಇಲ್ಲಿಯ ಸಂಸ್ಕೃತಿಯ ಮೇಲೆ ಬೀರಿದ ಪ್ರಭಾವವೆಂತಹುದು? ಅದರ ಪರಿಣಾಮವೇನು? ಎನ್ನುವುದು ಚಿಂತನಯೋಗ್ಯವಾಗಿದೆ. ಮುಖ್ಯವಾಗಿ ಇಲ್ಲಿಗೆ ಮತ್ತು ಇಲ್ಲಿಂದ ಆದ ವಲಸೆ, ಉನ್ನತ ವಿದ್ಯಾಭ್ಯಾಸ, ಪ್ರಾಕೃತಿಕ ವಿಕೋಪಗಳ ಪರಿಣಾಮಗಳು ಸಂಸ್ಕೃತಿಯ ಮೇಲಾದ ಪ್ರಭಾವವನ್ನು ಗಮನಿಸಬೇಕಾದ ಅವಶ್ಯಕತೆಯಿದೆ. ಈ ಎಲ್ಲಾ ದೃಷ್ಟಿಯಿಂದ ಸಂಶೋಧನಾ ಕಾರ್ಯವನ್ನು ಕೈಗೊಳ್ಳಲಾಗಿದೆ.

ಭಾರತೀಯ ಸಂಸ್ಕೃತಿಯು ತನ್ನದೇ ಆದ ವಿಶಿಷ್ಟ ಹಿನ್ನೆಲೆಯಿಂದ ಜಗತ್ತಿನ ಗಮನ ಸೆಳೆದಿದೆ. ಅನಾದಿಕಾಲದಿಂದ ಇತ್ತೀಚಿನವರೆಗೆ ಅವಿಚ್ಛಿನ್ನವಾಗಿ ಸಂಸ್ಕೃತಿ ಸಾಗಿ ಬಂದಿದ್ದರೂ ಆಧುನಿಕತೆಯ ವಿಪ್ಲವವು ಪರಿವರ್ತನೆಗೆ ಕಾರಣವಾಗಿದೆ. ವಂಶ ಪರಂಪರಾಗತವಾಗಿ ಹರಿದು

ಬರಬೇಕಾದ ಸಂಸ್ಕೃತಿಯೊಂದು ಅರ್ಥಗ್ರಹಿಕೆಯ ಕೊರತೆಯಿಂದಲೊ, ಪಲ್ಲಟದಿಂದಲೊ ಮೂಲಸ್ವರೂಪವನ್ನು ಕಳೆದುಕೊಂಡಿದೆ. ಇಲ್ಲವೆ ಕಣ್ಮರೆಯಾಗಿ ಹೋಗುತ್ತಿದೆ. ಅರ್ಥಗರ್ಭಿತ ಹಿನ್ನೆಲೆಯ ಸಂಸ್ಕೃತಿಯ ಹುಟ್ಟೊಂದು ಕಾಲಾಂತರದಲ್ಲಿ ಪ್ರಧಾನ ನಂಬಿಕೆಯಾದದ್ದು, ಮೂಢನಂಬಿಕೆಯ ರೂಪಾಂತರ ಪಡೆದು ಕಂದಾಚಾರವಾಗಿ ರೂಢಿಯಲ್ಲಿರುತ್ತದೆ. ಮೂಲ ಸ್ವರೂಪ ಬದಲಾವಣೆಗೆ ಕಾರಣವಾದ ಅಂಶಗಳ ತದನಂತರದಲ್ಲಾದ ಮಾರ್ಪಾಟುಗಳ ಅಧ್ಯಯನದ ಪ್ರಸ್ತುತತೆ ಇದೆ.

ಶೃಂಗೇರಿಯು ಮಲೆನಾಡಭಾಗದ ಕೇಂದ್ರದಲ್ಲಿ ದಟ್ಟ ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶದ ನಡುವೆಯಿದ್ದುದರಿಂದ, ಬೇರೆಲ್ಲಾ ಭಾಗದಲ್ಲಾದ ತೀವ್ರತರಹದ ಬದಲಾವಣೆಗೆ ಕಾರಣವಾಗದೆ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡೇ ಆಧುನಿಕತೆಯನ್ನು ಸ್ವೀಕರಿಸಿ ಮಾರ್ಪಾಟನ್ನು ಹೊಂದುತ್ತಿದೆ. ಪ್ರಸ್ತುತ ಶೃಂಗೇರಿಯು ಎದುರಿಸುತ್ತಿರುವ ಅನೇಕ ಸಮಸ್ಯೆಗಳು ತೀವ್ರತರದ ಸಾಂಸ್ಕೃತಿಕ ಮಾರ್ಪಾಟಿಗೆ ಕಾರಣವಾಗುವ ಸಾಧ್ಯತೆ ಕಂಡು ಬರುತ್ತಿದೆ. ಸಂಸ್ಕೃತಿಯ ಮೂಲ ಸೊಗಡನ್ನು ಅರಿತು ಮಾರ್ಪಾಟಿಗೆ ಕಾರಣವಾದ ಅಂಶಗಳನ್ನು ಗಮನಿಸಲು ಸಾಹಿತ್ಯಕ, ಐತಿಹಾಸಿಕ, ಧಾರ್ಮಿಕ ಮೊದಲಾದ ವಿಷಯಗಳ ಅಧ್ಯಯನದ ಜೊತೆಗೆ ಹಿರಿಯ ತಲೆಮಾರಿನವರನ್ನು ಸಂದರ್ಶನ ಮಾಡಿ, ಆಯಾ ಜಾತಿ ಜನಾಂಗದವರ ಸಾಂಸ್ಕೃತಿಕ ಅನನ್ಯತೆ ಹಾಗೂ ತದನಂತರದ ಪಲ್ಲಟಗಳ ದಾಖಲೆ ಅನಿವಾರ್ಯವಾಗಿದೆ.

ಶೃಂಗೇರಿ ತಾಲ್ಲೂಕು ಸ್ವಾತಂತ್ರ್ಯ ಪೂರ್ವದಲ್ಲಿ ಬಹಳಷ್ಟು ಪರಿವರ್ತನೆಯಾದಂತೆ ಕಂಡು ಬರುವುದಿಲ್ಲ. ಸ್ವಾತಂತ್ರ್ಯೋತ್ತರದ ಸಂದರ್ಭದಲ್ಲಿ ಆಧುನಿಕತೆಯ ತೀವ್ರ ಪ್ರಭಾವದಿಂದಾಗಿ ಪಲ್ಲಟಗಳಾಗಿವೆ. ಈ ನಿಟ್ಟಿನಲ್ಲಿ ಸ್ವಾತಂತ್ರ್ಯೋತ್ತರ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಪ್ರಬಂಧದ ಮೊದಲ ಅಧ್ಯಾಯದಲ್ಲಿ ಪ್ರಬಂಧದ ಉದ್ದೇಶ, ವ್ಯಾಪ್ತಿಯನ್ನು ತಿಳಿಸಲಾಗಿದೆ. ಶೃಂಗೇರಿ ಹೆಸರಿನ ಪದ ನಿಷ್ಪತ್ತಿ, ವಿವಿಧ ಗ್ರಂಥಗಳಲ್ಲಿ ಶೃಂಗೇರಿಯ ಚಾರಿತ್ರಿಕ ಹಿನ್ನೆಲೆಯ ವಿವರ, ಪೌರಾಣಿಕವಾಗಿ ಹಾಗೂ ಮೌಖಿಕ ಪರಂಪರೆಯಲ್ಲಿ ಶೃಂಗೇರಿಯ ಹಿನ್ನೆಲೆಯನ್ನು ವಿವರಿಸಲಾಗಿದೆ. ಶೃಂಗೇರಿಯ ಭೌಗೋಳಿಕ ಪರಿಸರ, ಜಾತಿ, ಮತ, ಜಾತಿವಾರು ಜನಸಂಖ್ಯೆ, ವೃತ್ತಿ, ಕಸುಬು ಮೊದಲಾದವುಗಳನ್ನು ಬರೆಯಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ವಿವಿಧ ಜನಾಂಗದವರ ಸಾಂಸ್ಕೃತಿಕ ಪಲ್ಲಟವನ್ನು ಪ್ರಧಾನವಾಗಿಟ್ಟುಕೊಂಡು ಅದಕ್ಕೆ ಸಂಬಂಧಿಸಿದಂತೆ ಸ್ವಾತಂತ್ರ್ಯ ಪೂರ್ವದ ಸಮಾಜದ ಸ್ವರೂಪ, ವಿವಿಧ ಜಾತಿ ಜನಾಂಗದ ಸಾಂಸ್ಕೃತಿಕ ಅನನ್ಯತೆ, ಕೌಟುಂಬಿಕ ಜೀವನ ವಿಧಾನ, ಸಂಪ್ರದಾಯ, ಆಚರಣೆ, ಉಡುಗೆ ತೊಡುಗೆಗಳ ವೈಶಿಷ್ಟ್ಯ, ವಿವಿಧ ಜನಾಂಗದವರ ಜನಪದ ನಂಬಿಕೆಗಳು, ತಾಂತ್ರಿಕ ನಂಬಿಕೆಗಳು, ಹಬ್ಬ ಹರಿದಿನ, ಜಾತ್ರೆ, ಹರಕೆ ಮೊದಲಾದ ರೂಢಿ ಸಂಪ್ರದಾಯ ಆಚರಣೆ, ನಂಬಿಕೆ ಮೊದಲಾದವುಗಳನ್ನು ಚರ್ಚಿಸಲಾಗಿದೆ. ಇಲ್ಲಿಯ ಜಾತಿ ವ್ಯವಸ್ಥೆ ಹಾಗೂ ಸಾಮರಸ್ಯ, ವೃತ್ತಿ

ಜೀವನ ಮತ್ತು ಕೃಷಿ ಸಂಬಂಧಿತ ಸವಾಲುಗಳು, ಆಹಾರ ಪದ್ಧತಿ ಹಾಗೂ ಅದರ ಸವಾಲುಗಳು, ಪಾರಂಪರಿಕ ಆಹಾರ ಬೆಳೆಗಳು, ಸ್ಥಳೀಯ ಆಡಳಿತ ವ್ಯವಸ್ಥೆ, ಸಾಮಾಜಿಕ ಸವಲತ್ತುಗಳು ಮತ್ತು ಸಮಕಾಲೀನ ಸವಾಲುಗಳು, ಬುಡಕಟ್ಟು ಸಮಸ್ಯೆಗಳು, ಅಭಿವೃದ್ಧಿ ಹಾಗೂ ಪರಿಹಾರೋಪಾಯಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಪ್ರಬಂಧದ ಮೂರನೇ ಅಧ್ಯಾಯದಲ್ಲಿ ಶೃಂಗೇರಿಯ ಪಾರಂಪರಿಕತೆ ಹಾಗೂ ಪಲ್ಲಟಗಳ ಕುರಿತು ಬರೆಯಲಾಗಿದೆ. ಜನಪದವೈದ್ಯ ಹಾಗೂ ಅದರ ಪಲ್ಲಟ, ಜನಪದ ಕ್ರೀಡೆ ಹಾಗೂ ಅದರ ಪಲ್ಲಟ, ಧಾರ್ಮಿಕ ಪರಂಪರೆ, ಕಲೆ, ಸಂಗೀತ, ಸಾಹಿತ್ಯ ಮೊದಲಾದವುಗಳು ಬೆಳೆದು ಬಂದ ಬಗೆ ಹಾಗೂ ಪಲ್ಲಟಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಶೃಂಗೇರಿ ಮಹಾಸಂಸ್ಥಾನವನ್ನು ಪ್ರಧಾನವಾಗಿಟ್ಟುಕೊಂಡು ಸಾಂಸ್ಕೃತಿಕ ಬುನಾದಿಗೆ ಶ್ರೀಮಠದ ಕೊಡುಗೆಯನ್ನು ಚರ್ಚಿಸಲಾಗಿದೆ. ಶೃಂಗೇರಿಯ ಸಾಂಸ್ಕೃತಿಕ ಕೊಡುಗೆಯಲ್ಲಿ ಶ್ರೀಮಠವು ಪ್ರಧಾನವಾಗಿದ್ದು ಇದನ್ನನುಸರಿಸಿ ಜನ ತಮ್ಮ ಸಂಸ್ಕೃತಿ ಆಚಾರ ವಿಚಾರಾದಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಶೃಂಗೇರಿಗೆ ಮಠದ ಸಾಮಾಜಿಕ ಕೊಡುಗೆ, ಸಾಂಸ್ಕೃತಿಕ ಕೊಡುಗೆ, ಆರ್ಥಿಕ ಕೊಡುಗೆ, ಭಾವನಾತ್ಮಕವಾಗಿ ಶ್ರೀಮಠದೊಂದಿಗಿನ ಸಂಬಂಧ, ಶೈಕ್ಷಣಿಕವಾಗಿ ಶ್ರೀಮಠದ ಕೊಡುಗೆ ಹಾಗೂ ಆಡಳಿತಾತ್ಮಕವಾಗಿ ಶ್ರೀಮಠದ ಕೊಡುಗೆಯನ್ನು ಚರ್ಚಿಸಲಾಗಿದೆ.

ಉಪಸಂಹಾರವು ಐದನೆಯ ಅಧ್ಯಾಯವಾಗಿದ್ದು, ಭಾರತೀಯ ಸಂಸ್ಕೃತಿ ಹಾಗೂ ಶೃಂಗೇರಿಯ ಸಾಂಸ್ಕೃತಿಕ ಪರಿಸರವನ್ನು ಚರ್ಚಿಸಲಾಗಿದೆ. ಶೃಂಗೇರಿ ಪಟ್ಟಣದ ಸಂಸ್ಕೃತಿ ಹಾಗೂ ಹಳ್ಳಿಯ ಸಂಸ್ಕೃತಿ, ಸಾಂಸ್ಕೃತಿಕ ನಡುವಿನ ಸಂಘರ್ಷವನ್ನು ಚರ್ಚಿಸಲಾಗಿದೆ. ಒಟ್ಟು ಸಂಸ್ಕೃತಿಯ ಫಲಿತ ಹಾಗೂ ಹೆಚ್ಚಿನ ಅಧ್ಯಯನ ಸಾಧ್ಯತೆಯ ಬಗ್ಗೆ ಬರೆಯಲಾಗಿದೆ. ಛಾಯಾಚಿತ್ರಗಳು, ಪ್ರಮುಖ ವಕ್ತೃಗಳ ವಿವರ, ಗ್ರಂಥಸೂಚಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

1.1 ಪ್ರಬಂಧದ ಉದ್ದೇಶ :

ಸಂಶೋಧನಾ ಪ್ರಬಂಧಕ್ಕೆ ಈ ವಸ್ತುವನ್ನು ಆಯ್ಕೆ ಮಾಡಿಕೊಳ್ಳಲು ಮಹತ್ವದ ಕಾರಣವಿದೆ. ಮಲೆನಾಡಿನ ದಟ್ಟ ಅರಣ್ಯಪ್ರದೇಶದ ನಡುವಿರುವ ಪವಿತ್ರ ಯಾತ್ರಾಸ್ಥಳ, ಪುಣ್ಯಕ್ಷೇತ್ರ, ಪ್ರವಾಸಿ ತಾಣವಾದ ಶೃಂಗೇರಿ ಹಾಗೂ ಕಿಗ್ಗ ಕ್ಷೇತ್ರವು ಪೌರಾಣಿಕ, ಐತಿಹಾಸಿಕ, ಧಾರ್ಮಿಕ ಮಹತ್ವವನ್ನು ಹೊಂದಿದೆ. ಶ್ರೀ ಶಂಕರ ಭಗವತ್ಪಾದಾಚಾರ್ಯರು ಚತುರಾಮ್ನಾಯ ಪೀಠ ಸ್ಥಾಪನೆಯಲ್ಲಿ ಮೊದಲನೆಯದಾಗಿ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠವನ್ನು ಶೃಂಗೇರಿಯಲ್ಲಿ ಸ್ಥಾಪಿಸಿ ಪರ್ಯಂತವಾಗಿ ರಾಜ ಮಹಾರಾಜರ, ಭಕ್ತ ಮಹಾಶಯರ ಆಕರ್ಷಣೀಯ ತಾಣವಾಗಿ ಸಂಪನ್ನಗೊಂಡಿದೆ.

ಶೃಂಗೇರಿಯು ಕೈಗಾರಿಕ ನಗರವಾಗಿರದೆ, ಶುದ್ಧ ಪರಿಸರದ ಯಾತ್ರಾಸ್ಥಳವಾಗಿರುವುದರಿಂದ ಆಧುನಿಕತೆಯ ಪ್ರಭಾವಕ್ಕೆ ಅಷ್ಟಾಗಿ ಒಳಗಾಗಿಲ್ಲ. ವಿರಳ ಜನಸಂಖ್ಯೆಯಿರುವ ಈ ಭಾಗದಲ್ಲಿ ಜನ ಕೃಷಿ, ಪಶುಪಾಲನೆಯನ್ನು ಆಶ್ರಯಿಸಿದ್ದಾರೆ. ಶೃಂಗೇರಿ ಸಂಸ್ಥಾನಕ್ಕೆ ಅನೇಕ ರಾಜ ಮಹಾರಾಜರು ದಾನ ಧರ್ಮಾದಿಗಳನ್ನು ಮಾಡಿ ಭೂಮಿಯನ್ನು ಉಂಬಳಿಯಾಗಿ ನೀಡಿ ಪ್ರೋತ್ಸಾಹಿಸಿದ್ದಾರೆ. ಸ್ವತಂತ್ರ ಆಡಳಿತ ನಿರ್ವಹಣೆಯ 'ಜಹಗೀರಿ' ಯಾಗಿ ಪ್ರಸಿದ್ಧಿಗಳಿಸಿದೆ. ನಾಡಿನ ಇತರ ದೇವಾಲಯಗಳ ಮೇಲೆ ಅನ್ಯಧರ್ಮೀಯರ ಆಕ್ರಮಣವಾದ ಹಿನ್ನೆಲೆಯಿದೆ. ಆದರೆ ಶೃಂಗೇರಿ ಕ್ಷೇತ್ರವನ್ನು ಅನ್ಯ ಧರ್ಮೀಯರು ಪವಿತ್ರವಾಗಿ ಕಂಡಿದ್ದಲ್ಲದೆ ದಾನಧರ್ಮಾದಿಗಳನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಶೃಂಗೇರಿಯ ಶ್ರೀಮಠವೂ ಸಹ ಸರ್ವ ಧರ್ಮದವರನ್ನು ಸಹಿಷ್ಣುತೆಯಿಂದ ನೋಡಿಕೊಂಡಿದೆ.

ಶೃಂಗೇರಿಯಲ್ಲಿ ಗೌಡ್ಳು, ಮಲೆ ಕುಡಿಯರು, ಹಸಲರು, ಹರಿಜನರು ಬಹಳಷ್ಟು ಕುಟುಂಬಗಳು ದಟ್ಟ ಅರಣ್ಯದ ನಡುವೆ ಪರಿಸರದ ಒಂದು ಭಾಗವಾಗಿ ಜೀವನ ನಡೆಸುತ್ತಿದ್ದಾರೆ. ಇವರು ಶೃಂಗೇರಿಯ ಮೂಲನಿವಾಸಿಗಳಾಗಿದ್ದಾರೆ. ಉಳಿದ ಇತರೆ ಜಾತಿ – ಜನಾಂಗದವರು ನಾಡಿನ ಬೇರೆ ಬೇರೆ ಭಾಗದಿಂದ ವಲಸೆ ಬಂದು ನೆಲೆಸಿದವರಾಗಿದ್ದಾರೆ.[1] ಶೃಂಗೇರಿಯಲ್ಲಿ ಸರ್ವಧರ್ಮೀಯರಿದ್ದು ಧರ್ಮನಿಷ್ಠರಾಗಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಈ ಎಲ್ಲಾ ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಮಹತ್ವವನ್ನು ಪರಿಗಣಿಸಿ ಭದ್ರ ಸಂಸ್ಕೃತಿಯು ಅವ್ಯಾಹತವಾಗಿ ಹರಿದು ಬರಲು ಯಾವುದೇ ತೊಡಕಾಗದ ಶೃಂಗೇರಿಯ ಸಂಸ್ಕೃತಿಯನ್ನು ಅರಿಯುವುದು ಮಹತ್ವದ ವಿಷಯವಾಗಿದೆ. ಸ್ವಾತಂತ್ರ್ಯೋತ್ತರ ಸಮಯದಲ್ಲಾದ ಕ್ರಾಂತಿಕಾರಕ ಬದಲಾವಣೆಯು ಶೃಂಗೇರಿಯ ಮೇಲೂ ಪರಿಣಾಮವನ್ನುಂಟು ಮಾಡಿದ್ದು, ಅನೇಕ ಚಳುವಳಿ, ಹೋರಾಟ, ವಲಸೆ ಮೊದಲಾದವುಗಳನ್ನು ಕಾಣಬಹುದಾಗಿದೆ. ಈ ಎಲ್ಲಾ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಈ ಸಂಶೋಧಕರು ಇದೇ ಪರಿಸರದಲ್ಲಿ ಹುಟ್ಟಿ, ಬೆಳೆದು, ವಾಸವಿರುವುದರಿಂದ ಕಂಡು, ಕೇಳಿದ ಹಾಗೂ ಅನುಭವಕ್ಕೆ ಬಂದ ಮೇರೆಗೆ ಸಾಂಸ್ಕೃತಿಕ ಅಂಶಗಳು ಹಿಂದಿನಂತಿಲ್ಲದೆ ಕೆಲವಷ್ಟು ಬದಲಾದ ರೂಪದಲ್ಲಿ, ಕೆಲವು ಯಾಂತ್ರಿಕವಾಗಿ, ಇನ್ನೆಷ್ಟೋ ಕಣ್ಮರೆಯಾಗಿ ಹೋಗಿರುವುದು ಕಂಡುಬಂದಿದೆ. ಈ ಭಾಗಕ್ಕೆ ಹೊಂದಿಕೆಯಾಗುವ ತನ್ನದೇ ಆದ ಮಹತ್ವ ಹಿನ್ನೆಲೆಯನ್ನೊಳಗೊಂಡ ಭಾಷೆ, ಕಲೆ, ಕುಣಿತ, ಜನಪದ ಕ್ರೀಡೆ, ಜನಪದ ವೇಷ, ಹವ್ಯಾಸ, ಮನರಂಜನೆ, ವೇಷಭೂಷಣ, ಆಹಾರಪದ್ಧತಿ, ಪಾನೀಯ, ಅಡುಗೆ, ಉಪಚಾರ, ನಡೆ–ನುಡಿ, ವಸ್ತು, ಪರಿಕರ, ಚಟುವಟಿಕೆ, ಕೊಡುಕೊಳ್ಳುವಿಕೆ, ಆಚಾರ, ಸಂಪ್ರದಾಯ, ನಂಬಿಕೆ, ಆರಾಧನೆ, ನಡತೆ, ಸಂಬಂಧ, ಕೌಟುಂಬಿಕ ಕ್ರಮ, ಸಾಮಾಜಿಕ ವ್ಯವಸ್ಥೆ, ಆಡಳಿತ ಕ್ರಮ, ಉದ್ಯೋಗ ಮೊದಲಾದವುಗಳ ಮೂಲ ಸ್ವರೂಪವನ್ನು ಸಂಗ್ರಹಮಾಡಿ ದಾಖಲಿಸಿ ಅದರ ಮಹತ್ವವನ್ನು ಪ್ರಬಂಧದಲ್ಲಿ ಬರೆದಿಡಬೇಕೆಂಬ ಕಾರಣದಿಂದ

ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಗಳ ಅಧ್ಯಯನ ಮಾಡಲು ತೊಡಗಲಾಗಿದೆ.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಕ್ಕೆ ಬಹಳಷ್ಟು ಕಾರಣಗಳಿವೆ. ಪ್ರಮುಖವಾಗಿ ನಕ್ಸಲ್ ಸಮಸ್ಯೆ, ಕೃಷಿಗೆ ಮಾರಣಾಂತಿಕ ರೋಗಬಾಧೆ, ಕೃಷಿಕಾರ್ಮಿಕರ ಕೊರತೆ, ನಿರುದ್ಯೋಗ, ಬಡತನ, ಕೃಷಿಮಾರುಕಟ್ಟೆ ಇಲ್ಲದಿರುವುದು, ಕೈಗಾರಿಕೆ, ವಾಣಿಜ್ಯಸಂಕೀರ್ಣಗಳಿಲ್ಲದಿರುವುದು, ಸಾರಿಗೆ ಸಂಪರ್ಕದ ಕೊರತೆ ಮೊದಲಾದ ಕಾರಣಗಳಿಂದಾಗಿ ಇಲ್ಲಿಯ ಜನರು ವಿಚಲಿತರಾಗಿ ಊರನ್ನೇ ಬಿಟ್ಟುಹೋಗುತ್ತಿದ್ದಾರೆ. ಈ ಊರಿನ ಪುರುಷರಿಗೆ ಹೆಣ್ಣುಕೊಡಲು ಯಾರೂ ಮುಂದೆ ಬರುತ್ತಿಲ್ಲ. ಅವಿವಾಹಿತರಾಗಿಯೇ ಇರಬೇಕಾದ ಸಂದರ್ಭ ಎದುರಾಗಿದೆ. ಜನರ ಜೀವನ ಮಟ್ಟದ ಸುಧಾರಣೆಗಾಗಿ ಸರ್ಕಾರ, ಸಂಘ–ಸಂಸ್ಥೆ, ಮಠಮಾನ್ಯಗಳು ಅನೇಕ ಪ್ರಗತಿದಾಯಕ ಕ್ರಮಗಳನ್ನು ಕೈಗೊಂಡಿದೆ. ಈ ಎಲ್ಲಾ ಅಂಶಗಳು ಸಂಸ್ಕೃತಿಯ ಮೇಲೆ ಅಗಾಧವಾದ ಪರಿಣಾಮವನ್ನುಂಟುಮಾಡಿದೆ. ಇದರ ಸಾಧಕ ಬಾಧಕಗಳನ್ನು ಅರಿತು, ಮೂಲ ಸಂಸ್ಕೃತಿಗೆ ಇದರಿಂದಾದ ಪ್ರಭಾವವನ್ನು ಗಮನಿಸಿ ದಾಖಲಿಸಬೇಕೆಂಬ ಕಾರಣದಿಂದ ಅಧ್ಯಯನ ಮಾಡಲಾಗಿದೆ.

ಬುಡಕಟ್ಟು ಜನಾಂಗದವರು ಇಲ್ಲಿಯ ಮೂಲನಿವಾಸಿಗಳಾಗಿದ್ದು ಅವರು ಪರಿಸರದ ಒಂದು ಭಾಗವಾಗಿ ಜೀವನ ನಿರ್ವಹಣೆ ಮಾಡುತ್ತಿದ್ದವರು. ಇವರು ಮುಗ್ಧಜನರಾಗಿದ್ದು ಅತಿಯಾದ ಆಸೆ ಇವರಲ್ಲಿಲ್ಲ. ಪ್ರಾಣಿ, ಪಕ್ಷಿ, ಹಾವು ಮೊದಲಾದ ಜೀವಸಂಕುಲಗಳೊಂದಿಗೆ ಒಬ್ಬರಾಗಿ ಬದುಕುತ್ತಿದ್ದವರು. ಅವುಗಳಿಗೆ ತೊಂದರೆಯಾಗದಂತೆ ನೋಡಿಕೊಂಡು, ವನಸಂಪತ್ತನ್ನು ಜತನದಿಂದ ಬಳಸಿ ಜೀವನ ನಿರ್ವಹಣೆ ಮಾಡುತ್ತಿದ್ದವರು. ಈಗಲೂ ಸಹ ಬುಡಕಟ್ಟು ಕುಟುಂಬವರ್ಗದವರು ಹೇರಳವಾದ ಭೂಮಿಯನ್ನು ಬಳಸಿಕೊಂಡ ಉದಾಹರಣೆ ಸಿಗುವುದಿಲ್ಲ. ಸರಳ ಸುಂದರವಾದ ಬದುಕನ್ನು ಕಟ್ಟಿಕೊಂಡಿದ್ದಾರೆ. ಬದಲಾದ ನಾಗರೀಕತೆಯ ಪ್ರಭಾವವು ಇತ್ತೀಚಿನವರೆಗೂ ಅವರನ್ನು ತಲುಪಿರಲಿಲ್ಲ. ಸ್ವಾತಂತ್ರ್ಯೋತ್ತರ ಸಮಯದ ಅನೇಕ ಪ್ರಗತಿಪರ ಕಾರ್ಯಕ್ರಮಗಳು ಇವರ ಬದುಕು ಹಾಗೂ ಸಂಸ್ಕೃತಿಯ ಮೇಲೆ ತೀವ್ರತರದ ಪರಿವರ್ತನೆಗೆ ಕಾರಣವಾಗಿದೆ. ನಕ್ಸಲ್ ಸಮಸ್ಯೆ, ಸರ್ಕಾರದ ನೀತಿ ಧೋರಣೆ, ಪೊಲೀಸ್ ದೌರ್ಜನ್ಯ, ತುಂಗಭದ್ರ ನದಿ ಉಳಿಸಿ ಹೋರಾಟ ಚಳುವಳಿ, ಕುದುರೇಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟ, ಕುದುರೇಮುಖ ಕಂಪನಿ ವಿರೋಧಿ ಹೋರಾಟ ಮೊದಲಾದ ಚಳುವಳಿಗೆ ಈ ಮುಗ್ಧಜನರನ್ನು ಎಳೆದು ಮುಂದಿಟ್ಟುಕೊಂಡ ಕೆಲ ಹೋರಾಟಗಾರರು ಇವರ ಬದುಕಿನ ಮಾರ್ಗವನ್ನೇ ಬುಡಮೇಲುಮಾಡಿದ್ದಾರೆ. ಸಾಂಸ್ಕೃತಿಕ ಪಲ್ಲಟಕ್ಕೆ ಇವೂ ಪ್ರಮುಖ ಕಾರಣಗಳಾಗಿವೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಇತ್ತೀಚೆಗೆ ಶೃಂಗೇರಿ ಧರ್ಮಸಂಸ್ಥಾನಕ್ಕೆ ನಾಡಿನ ಹಾಗೂ ದೇಶದ ವಿವಿಧ ಭಾಗಗಳಿಂದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದುಹೋಗುತ್ತಿದ್ದಾರೆ. ಆಯಾ ಪ್ರದೇಶದ ಸಂಸ್ಕೃತಿಯು

ಇಲ್ಲಿನ ಪರಿಸರದ ಮೇಲೆ ಗೊತ್ತಿಲ್ಲದಂತೆ ಪ್ರಭಾವಬೀರಿ ಕೆಲವಷ್ಟು ಅನುಕರಣೆ ಮಾಡಿಯೋ, ಇನ್ನಷ್ಟು ಅನುಸಂಧಾನಗೊಂಡೋ ಇಲ್ಲಿಯ ಮೂಲಸಂಸ್ಕೃತಿಯಲ್ಲಿ ವಿಲೀನಗೊಂಡಿರುವುದು ಕಂಡುಬಂದಿದೆ. ಮಲೆನಾಡಿನ ಸಂಸ್ಕೃತಿಯ ಪಲ್ಲಟ ಹಾಗೂ ಮಾರ್ಪಾಟಿಗೆ ಇದು ಪ್ರಮುಖ ಕಾರಣವಾಗಿದೆ. ಆಯಾ ಪ್ರಾಂತ್ಯದ ಜನತೆಗೆ ಹೊಂದಿಕೆಯಾಗುವಂತೆ ಊಟ, ಉಪಚಾರ, ವಿಧಿ ವಿಧಾನಗಳನ್ನು ಮಾಡುತ್ತಿದ್ದಾರೆ. ವಿವಿಧ ಭಾಷಾ ಪ್ರಭಾವವೂ ಇಲ್ಲಿಯವರ ಮೇಲಾಗಿರುವುದರಿಂದ ವೇಷಭೂಷಣಗಳಲ್ಲೂ ಬದಲಾವಣೆಯಾಗಿ ಸಾಂಸ್ಕೃತಿಕ ಬದಲಾವಣೆಯಾಗಿರುವುದು ಕಂಡುಬಂದಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

1.2 ವ್ಯಾಪ್ತಿ:

ಪ್ರಬಂಧದ ಶೀರ್ಷಿಕೆಯು "ಸ್ವಾತಂತ್ರ್ಯೋತ್ತರ ಶೃಂಗೇರಿಯ ಸಾಂಸ್ಕೃತಿಕ ಪಲ್ಲಟ"ವಾಗಿದ್ದು ಈ ನೆಲೆಯಲ್ಲಿ ಅಧ್ಯಯನ ಮಾಡುವುದಾಗಿದೆ. ಸ್ವಾತಂತ್ರ್ಯಪೂರ್ವದ ಸಾಂಸ್ಕೃತಿಕ ಅನನ್ಯತೆ, ಸೊಗಡು, ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ವೈಜ್ಞಾನಿಕ ಮೊದಲಾದವುಗಳನ್ನು ಅಧ್ಯಯನದ ಸಫಲತೆಯ ದೃಷ್ಟಿಯಿಂದ ಸಂಕ್ಷಿಪ್ತವಾಗಿ ಗಮನಹರಿಸಿ ದಾಖಲಿಸಲಾಗಿದೆ. ಸಂಸ್ಕೃತಿಯ ವಿವಿಧ ಅಂಗಗಳ ಬಗ್ಗೆ ಸಮಗ್ರ ದೃಷ್ಟಿಕೋನವನ್ನು ಹರಿಸಲಾಗಿದೆ. ಶೃಂಗೇರಿಯವನೇ ಆದ ನಾನು ಇಲ್ಲಿ ಗಮನಿಸಿದ ಅಂಶಗಳು ಹಾಗೂ ಪರಿವರ್ತನೆಗೆ ಕಾರಣವಾದ ಅಂಶಗಳು ಹಾಗೂ ಪರಿವರ್ತನಾರೂಪವನ್ನು ಗಮನಿಸಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ. ಇದರೊಂದಿಗೆ ಇಲ್ಲಿಯ ಹಿರಿಯ ನಾಗರಿಕರ ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಶೃಂಗೇರಿಯ ಸಂಸ್ಕೃತಿಗೆ ಸಂಬಂಧಿಸಿದ ವಿವಿಧ ಗ್ರಂಥಗಳ ಅಧ್ಯಯನ ಮಾಡಿ ಅದರಲ್ಲಿ ದಾಖಲಾದ ಅಂಶಗಳನ್ನು ಪ್ರಬಂಧದಲ್ಲಿ ಸೇರಿಸಲಾಗಿದೆ.

ಕಾಲಘಟ್ಟದ ಪ್ರಭಾವಕ್ಕೆ ಒಳಗಾಗಿ ಶೃಂಗೇರಿ ತಾಲ್ಲೂಕು ಹೇಗೆ ಪಲ್ಲಟಗೊಳ್ಳುತ್ತಾ ಬಂದಿದೆ ಹಾಗೂ ಬರುತ್ತಿದೆ ಎಂಬುದರ ಕಡೆಗೆ ಹೆಚ್ಚು ಗಮನ ಹರಿಸಲಾಗಿದೆ. ನಗರ ಪ್ರದೇಶದ ಸಂಪರ್ಕದಿಂದ ಶೃಂಗೇರಿಯಂತಹ ಗ್ರಾಮ್ಯ ಪ್ರದೇಶವು ಪರಿವರ್ತನೆ ಪಡೆದಿದೆ. ಗ್ರಾಮಗಳಲ್ಲಿನ ಜನರು ವರ್ಷದಲ್ಲಿ ಒಂದೊ, ಎರಡೊ ಬಾರಿ ನಗರಕ್ಕೆ ಬಂದು ಹೋಗುತ್ತಿದ್ದು, ತಮಗೆ ಬೇಕಾಗಬಹುದಾದ ವಸ್ತು ಮೊದಲಾದವುಗಳನ್ನು ಆಗಲೇ ಕೊಂಡು ಸಂಗ್ರಹಿಸಿಡುತ್ತಿದ್ದರು. ರಸ್ತೆ, ವಾಹನಗಳ ಸೌಕರ್ಯ ಇಲ್ಲದಿದ್ದುದರಿಂದ ಅನಿವಾರ್ಯವಾಗಿ ಹಳ್ಳಿಯಲ್ಲಿಯೇ ವಾಸವಿರಬೇಕಾಗುತ್ತಿತ್ತು. ಈಗ ಆಧುನಿಕತೆಯ ಪ್ರಭಾವದಿಂದ ನಗರ ಸಂಪರ್ಕವಾಗಿ, ನಗರ ಜೀವನ ವಿಧಾನ, ಶೈಲಿ, ಸಂಪ್ರದಾಯ ಪದ್ಧತಿಗಳಿಗೆ ಆಕರ್ಷಿತರಾಗಿ ಹಳೆಯ ಸಂಸ್ಕೃತಿಯನ್ನು ಬಿಟ್ಟಿದ್ದಾರೆ. ಅನುಸರಿಸುವವರು ಹಳೆಯದು ಮತ್ತು ಹೊಸತನ್ನು ಮಿಶ್ರಣಮಾಡಿದ್ದಾರೆ. ಕೆಲವರು ಹಳೆಯದನ್ನು ಬಿಟ್ಟು ಆಧುನಿಕ ಪರಂಪರೆಯನ್ನು

ಅನುಸರಿಸಿದ್ದಾರೆ.

ಶೃಂಗೇರಿಯ ದಕ್ಷಿಣಾಮ್ನಾಯ ಶಾರದಾ ಪೀಠವು ಭಕ್ತಾದಿಗಳನ್ನು ದೇಶದ ಮೂಲೆ ಮೂಲೆಗಳಿಂದ ಬರಮಾಡಿಕೊಳ್ಳುತ್ತಿದೆ. ನಾಡಿನ ಬೇರೆ ಬೇರೆ ಭಾಗದಲ್ಲಿರುವ ಕ್ರಮ, ರೀತಿ, ಪದ್ಧತಿ, ನಂಬಿಕೆ ಮೊದಲಾದವುಗಳು ಗೊತ್ತಿಲ್ಲದಂತೆ ಇಲ್ಲಿಯವರ ಮೇಲೆ ಪ್ರಭಾವ ಬೀರುತ್ತಿದೆ. ಸಾಂಸ್ಕೃತಿಕ ಸಂಘರ್ಷದ ಮೂಲಕ ಸಾಂಸ್ಕೃತಿಕ ವಿನಿಮಯವಾಗಿ ತದನಂತರ ಅನುಸಂಧಾನವಾಗುತ್ತದೆ. ಜನವಿರಳವಾದ ದಟ್ಟ ಅರಣ್ಯದ ನಡುವಿನ ಪುಟ್ಟ ಪ್ರದೇಶದ ಮೇಲೆ ತೀವ್ರಗತಿಯ ಬದಲಾವಣೆಗೆ ಕಾರಣವಾಗಿದೆ. ಈ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

ಮಾಧ್ಯಮದ ಪ್ರಭಾವವು ಗಣನೀಯವಾದುದು. ದೈನಿಕ, ಮಾಸಿಕ, ಅರ್ಧ ವಾರ್ಷಿಕ ಪತ್ರಿಕೆ, ಸ್ಥಳೀಯ ಪತ್ರಿಕೆ ಮೊದಲಾದವು ಕ್ರಾಂತಿಕಾರಕ ಬದಲಾವಣೆಗೆ ಸಹಕಾರಿಯಾಗಿದೆ. ಅದರಲ್ಲಿ ದೃಶ್ಯ ಹಾಗೂ ಲಿಖಿತ ವಿವರಣೆಯು ಬಹುಬೇಗ ಮುಗ್ಧ ಜನರನ್ನು ಪರಿವರ್ತನೆಯತ್ತ ತಿರುಗುವಂತೆ ಮಾಡಿದೆ. ವಿದ್ಯುನ್ಮಾನ ಮಾಧ್ಯಮ ಇತ್ತೀಚಿನ ದಿನಗಳಲ್ಲಿ ಕ್ರಾಂತಿಯನ್ನೇ ಮಾಡಿದೆ. ಸಾಂಸ್ಕೃತಿಕ ನೆಲಗಟ್ಟನ್ನು ಸಂಪೂರ್ಣವಾಗಿ ಶಿಥಿಲಗೊಳಿಸಿದೆ. ಇವುಗಳ ಪ್ರಭಾವ ಹಾಗೂ ಪರಿವರ್ತನೆಗೆ ಕಾರಣವಾದ ಅಂಶಗಳನ್ನು ಈ ಅಧ್ಯಯನ ವ್ಯಾಪ್ತಿಯೊಳಗೆ ತಿಳಿಸಲಾಗಿದೆ.

ಹಿಂದೆ ಕೆಲವೇ ಕೆಲವರಿಗೆ ಸೀಮಿತವಾದ, ಅವರಿಗೆ ಮಾತ್ರ ಅನುಕೂಲಕರವಾದ ಶಿಕ್ಷಣ ವ್ಯವಸ್ಥೆಯಿತ್ತು. ಈ ಭಾಗದ ಬಹುತೇಕ ಜನರು ಅನಕ್ಷರಸ್ಥರಾಗಿಯೇ ಉಳಿದಿದ್ದರು. "ಅನಕ್ಷರಸ್ಥರ ಸಮೂಹ ಕೇಂದ್ರದಲ್ಲಿ ಸಂಸ್ಕೃತಿ ಯಥಾ ಪ್ರಕಾರ ಉಳಿದಿದೆ."[2] ಈಗಿನ ಶಿಕ್ಷಣ, ಕಡ್ಡಾಯ ಶಿಕ್ಷಣ, ಪುಸ್ತಕಗಳನ್ನು ಓದುವ ಹವ್ಯಾಸ, ಪತ್ರಿಕೆಗಳನ್ನು ಓದುವುದರಿಂದ ತಮ್ಮ ಜ್ಞಾನಕ್ಷೇತ್ರ ವಿಸ್ತರಿಸಿದೆ. ಮೌಢ್ಯ, ಕಂದಾಚಾರದ ಆಚರಣೆ ನಂಬಿಕೆಗಳನ್ನು ತ್ಯಜಿಸಿದ್ದಾರೆ. ಆಧುನಿಕತೆಗೆ ಬೇಕಾದ ಹೊಸಜ್ಞಾನ ಶಾಖೆ ವಿಸ್ತರಿಸಿ ಮುಂದುವರಿಯುತ್ತಿದೆ. ಇವುಗಳ ಪ್ರಭಾವ ಸಂಸ್ಕೃತಿಯ ಪಲ್ಲಟದಲ್ಲಿ ಹೇಗೆ ಕಾರಣವಾಗಿದೆ ಎಂಬುದನ್ನು ಪ್ರಬಂಧವು ಒಳಗೊಂಡಿದೆ.

ಸಂಪ್ರದಾಯಬದ್ಧ ಕೃಷಿ ಪದ್ಧತಿ ಹಾಗೂ ಸಾಂಪ್ರದಾಯಿಕ ಬೆಳೆಯನ್ನು ಬೆಳೆಯುವುದು ರೂಢಿಯಲ್ಲಿತ್ತು. ಇಳುವರಿ ಕಡಿಮೆಯಾದರೂ ಅನಿವಾರ್ಯವಾಗಿ ಕೃಷಿ ಕಾಯಕವನ್ನು ಮಾಡುತ್ತಿದ್ದರು. ಈಗ ಕೃಷಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿದೆ. ಸಾಂಪ್ರದಾಯಿಕ ಕೃಷಿ ಪದ್ಧತಿ ಹೋಗಿದೆ. ಸಾವಯವ ಪದ್ಧತಿಯ ಬದಲಾಗಿ ರಾಸಾಯನಿಕಗಳು ಹಾಗೂ ರಸಗೊಬ್ಬರಗಳನ್ನು ಬಳಸುತ್ತಿದ್ದಾರೆ. ಸಾಂಪ್ರದಾಯಿಕ ಬೆಳೆಗಳ ಜೊತೆಗೆ ಆಧುನಿಕವಾದ ಮಿಶ್ರತಳಿ ಬಳಕೆಯಲ್ಲಿದೆ. ಬೆಲೆ ಹೆಚ್ಚಿಗೆ ಸಿಗುವ ಬೆಳೆಗಳನ್ನು ಮಾತ್ರ ಬೆಳೆಯುತ್ತಿದ್ದಾರೆ. ಭತ್ತದ ಬೆಳೆಯು ಈ ಭಾಗದಲ್ಲಿ ಪ್ರಮುಖ ಬೆಳೆಯಾಗಿದ್ದರೂ ಅದರ ನಿರ್ವಹಣೆ ಕಷ್ಟಕರವಾಗಿರುವುದು ಹಾಗೂ ಆದಾಯ ಕಡಿಮೆಯಿರುವುದರಿಂದ ಬದಲಾಗಿ ಅಡಿಕೆ, ಕಾಫಿ ಬೆಳೆಯನ್ನು ಬೆಳೆಯಲಾಗುತ್ತಿದೆ. ಹಣಕಾಸು ಸೌಲಭ್ಯ, ಮಾರುಕಟ್ಟೆ ಸೌಲಭ್ಯ,

ಮಾರ್ಗದರ್ಶನ, ಸಹಾಯಧನ ಮೊದಲಾದವುಗಳು ದೊರೆಯುತ್ತಿರುವುದರಿಂದ ಬಹಳಷ್ಟು ಬದಲಾವಣೆಗಳಾಗಿವೆ. ಆರ್ಥಿಕ ಪ್ರಗತಿಯಿಂದ ಈ ಭಾಗದ ಸಾಂಸ್ಕೃತಿಕ ಪರಿವರ್ತನೆಯನ್ನು ಗಮನಿಸಿ ಚರ್ಚಿಸಲಾಗಿದೆ.

ಶ್ರೀಮಠದ ಜಹಗೀರಿನ ಸಂದರ್ಭದಲ್ಲಿ ಆಡಳಿತವ್ಯವಸ್ಥೆ, ಜಹಗೀರಿ ರದ್ದತಿಯ ತರುವಾಯ ಸ್ವತಂತ್ರ ಆಡಳಿತ ವ್ಯವಸ್ಥೆಯಲ್ಲಾದ ಬದಲಾವಣೆ, ಸ್ಥಳೀಯ ಆಡಳಿತ ವ್ಯವಸ್ಥೆಯಿಂದಾದ ಬದಲಾವಣೆ, ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿಯ ಸೌಲಭ್ಯದಿಂದಾಗಿ ಜನಸಾಮಾನ್ಯನೂ ಸಹ ಮುಖ್ಯವಾಹಿನಿಗೆ ಬಂದಿರುವುದು ಬಹಳಷ್ಟು ಪರಿವರ್ತನೆಗೆ ಕಾರಣವಾಗಿದೆ. ಈ ಎಲ್ಲಾ ಅಂಶಗಳು ಪ್ರಧಾನ ಭೂಮಿಕೆಯಲ್ಲಿ ಚರ್ಚಿತವಾಗಿವೆ.

ಪ್ರಜಾರಾಜ್ಯ ವ್ಯವಸ್ಥೆಯ ಮೀಸಲಾತಿ ಸೌಲಭ್ಯ ಸಿಕ್ಕಿ ಸಾಂವಿಧಾನಿಕ ಬಲ ಬಂದಿರುವುದು, ಸಮಾನತೆ, ಜಾತ್ಯತೀತ ನಿಲುವು, ಉದ್ಯೋಗ, ಶಿಕ್ಷಣ, ರಾಜಕೀಯ ಮೊದಲಾದ ಕ್ಷೇತ್ರದಲ್ಲಿಯ ಅವಕಾಶಗಳು ಎಲ್ಲಾ ಜಾತಿ ಜನಾಂಗದವರನ್ನೂ, ದುರ್ಬಲ ವರ್ಗದವರನ್ನು, ಅಬಲರನ್ನೂ ಮುಖ್ಯವಾಹಿನಿಯಲ್ಲಿ ಬರುವಂತೆ ಮಾಡಿರುವುದು ಸಮರ್ಥವಾಗಿ ಎಲ್ಲರೊಳಗೊಂದಾಗಿ ಬಾಳುವಂತಾಗಿರುವುದು ಸ್ವಾತಂತ್ರ್ಯೋತ್ತರದ ಕೊಡುಗೆಯಾಗಿದೆ. ಶೃಂಗೇರಿಯಂತಹ ಪುಟ್ಟ ಪ್ರದೇಶದಲ್ಲೂ ಬಹಳಷ್ಟು ಬದಲಾವಣೆ, ಸುಧಾರಣೆಯಾಗಿದೆ. ಆಯಾ ಕಾಲಘಟ್ಟ ಸಂದರ್ಭದ ಹಿನ್ನೆಲೆಯಲ್ಲಿ ಮೂಡಿಬಂದ ಸಂಸ್ಕೃತಿಯು ಪ್ರಸ್ತುತ ಸಂದರ್ಭದಲ್ಲಿ ಅಪ್ರಸ್ತುತವಾಯಿತು, ಅನಗತ್ಯವಾಯಿತು. ಈ ಎಲ್ಲಾ ಬದಲಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಸಂಶೋಧನೆಯು ಶೃಂಗೇರಿ ತಾಲ್ಲೂಕಿನ ಭೌಗೋಳಿಕ ವ್ಯಾಪ್ತಿಗೆ ಸೀಮಿತಗೊಂಡಿದೆ. ಶೃಂಗೇರಿಯ ಚರಿತ್ರೆ, ಭೂ ಪ್ರದೇಶದ ಮಾಹಿತಿ, ಜಾತಿ – ಜನಾಂಗದವರ ಸ್ಥಿತಿ–ಗತಿ, ಆಚರಣೆ, ನಂಬಿಕೆ, ಆರಾಧನೆ ಮೊದಲಾದವುಗಳನ್ನು ಒಳಗೊಂಡಿದೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಮೊದಲಾದ ಪ್ರಮುಖ ಕ್ಷೇತ್ರಗಳಲ್ಲಾದ ಬದಲಾವಣೆ ಹಾಗೂ ಬದಲಾವಣೆಗೆ ಕಾರಣವಾದ ಪ್ರಮುಖ ಅಂಶಗಳನ್ನು ದಾಖಲಿಸಲಾಗಿದೆ. ಜನಪದ ವೈದ್ಯ ಪದ್ಧತಿ ಹಾಗೂ ಅದರ ಪಾಲನೆಯ ಮೇಲೆ ಆಧುನಿಕ ವೈದ್ಯ ಪದ್ಧತಿಯ ಪ್ರಭಾವವು ಉಂಟು ಮಾಡಿದ ಪರಿಣಾಮಗಳನ್ನು ಒಳಗೊಂಡಿದೆ.

ಇಲ್ಲಿಯ ಪರಿಸರದ ಮೇಲೆ ಅನ್ಯಪ್ರದೇಶೀಯರ, ಅನ್ಯಮತೀಯರ ಪ್ರಭಾವ ಹಾಗೂ ಆಧುನಿಕತೆಯ ಪ್ರಭಾವವೂ ಆಗಿದೆ. ಕಾಲದ ದೃಷ್ಟಿಯಿಂದಲೂ ಪ್ರಾಚೀನಕಾಲ, ಜಹಗೀರಪೂರ್ವಕಾಲ, ಜಹಗೀರಿಕಾಲ, ಸ್ವಾತಂತ್ರ್ಯೋತ್ತರ ಜಹಗೀರಿಕಾಲ, ಜಹಗೀರಿನಂತರದ ಇಂದಿನ ವರೆಗಿನ ಕಾಲವನ್ನು ಪ್ರಧಾನವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

1947ರ ಸ್ವಾತಂತ್ರ್ಯೋದಯಕ್ಕಿಂತ ಮೊದಲಿನ ಸ್ವರೂಪ ಹಾಗೂ ಸ್ವಾತಂತ್ರ್ಯಾನಂತರದ ತೀವ್ರ ಸ್ವರೂಪದ ಬದಲಾವಣೆಗೆ ಕಾರಣವಾದ ಪ್ರಮುಖವಾದ ಅಂಶಗಳನ್ನು ಈ ಅಧ್ಯಯನ

ಒಳಗೊಂಡಿದೆ. ಶೃಂಗೇರಿಯು ಸ್ವತಂತ್ರ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದ ಜಹಗೀರಾಗಿದ್ದು, ಸಾಂಸ್ಕೃತಿಕ ಕ್ಷೇತ್ರಕ್ಕೆ ಅದರ ಕೊಡುಗೆ, ಭಾರತಕ್ಕೆ ಸ್ವಾತಂತ್ರ್ಯ ಬಂದು ಹನ್ನೆರಡು ವರ್ಷಗಳು ಸಂದರೂ 1959ರ ವರೆಗೆ ಶ್ರೀಮಠದ ಜಹಗೀರಿ ಪದ್ಧತಿಯ ಔಚಿತ್ಯ ಹಾಗೂ ಕೊಡುಗೆಯನ್ನು ದಾಖಲಿಸಲಾಗಿದೆ. ಮಲೆನಾಡ ಭಾಗದ ಕೃಷಿ ಸಂಬಂಧಿ ಸವಾಲುಗಳು, ವೃತ್ತಿ, ವ್ಯಾಪಾರ, ಉದ್ಯೋಗ ಮೊದಲಾದ ಸಮಸ್ಯೆಗಳು, ಭೂ ಸುಧಾರಣಾ ಕಾಯ್ದೆಯ ಅಡಿಯಲ್ಲಾದ ಪರಿವರ್ತನೆ, ಇತ್ಯಾದಿಗಳು ಸಾಂಸ್ಕೃತಿಕ ಅನನ್ಯತೆಯ ಮೇಲೆ ಪರಿಣಾಮವನ್ನುಂಟು ಮಾಡಿದ್ದು, ಆ ಎಲ್ಲಾ ಅಂಶಗಳನ್ನು ಗುರುತಿಸಿ ದಾಖಲಿಸುವ ಅನಿವಾರ್ಯತೆಯನ್ನು ವ್ಯಕ್ತಪಡಿಸಿದೆ. ಶೃಂಗೇರಿಯು ಪ್ರಮುಖ ಯಾತ್ರಾಸ್ಥಳ, ಧಾರ್ಮಿಕ ಪುಣ್ಯಕ್ಷೇತ್ರವಾದುದರಿಂದ ಈ ಭಾಗದ ದೇವಾಲಯ, ಜಾತ್ರೆ, ರಥೋತ್ಸವ, ಹರಕೆ, ಪ್ರೇಕ್ಷಣೀಯ ಹಾಗೂ ಐತಿಹಾಸಿಕ ಮಹತ್ವವನ್ನೊಳಗೊಂಡ ಸ್ಥಳ ಮಹಿಮೆಯ ಚಿತ್ರಣ ನೀಡುವುದು ಅನಿವಾರ್ಯವಾಗಿದೆ. ಶೃಂಗೇರಿಗಿಂತಲೂ ಹಿಂದಿನ ಐತಿಹಾಸಿಕ ಮಹತ್ವವನ್ನು ಪಡೆದ ಕಿಗ್ಗ ಕ್ಷೇತ್ರದ ಐತಿಹಾಸಿಕ, ಧಾರ್ಮಿಕ ಮಹತ್ವವು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ.

1.3 ಶೃಂಗೇರಿ ಹೆಸರಿನ ಪದ ನಿಷ್ಪತ್ತಿ

ಶೃಂಗೇರಿಯನ್ನು 'ಶೃಂಗಪುರ' ' ಶೃಂಗಗಿರಿ' 'ಸಿಂಗೇರಿ' 'ಶೃಂಗೇರಿ' ಯಾಗಿ ಬಳಕೆಯಲ್ಲಿ ಕರೆಯಲಾಗುತ್ತದೆ. ಶೃಂಗೇರಿಯ ಸಮೀಪವಿರುವ ಕಿಗ್ಗಾ ಕ್ಷೇತ್ರದಲ್ಲಿ ಮಹರ್ಷಿ ಋಷ್ಯಶೃಂಗರು ತಪೋನಿರತರಾಗಿ ಈಶ್ವರನಲ್ಲಿ ಲೀನರಾದುದರಿಂದ 'ಋಷ್ಯಶೃಂಗಪುರ'ವೆನಿಸಿ ನಂತರ 'ಶೃಂಗಪುರ'ವಾಗಿ ಬಳಿಕ 'ಶೃಂಗೇರಿ'ಯಾಗಿ ಹೆಸರನ್ನು ಪಡೆದಿದೆ ಎಂದು ಸ್ಥಳ ಪುರಾಣ ಹೇಳುತ್ತದೆ. ಶೃಂಗೇರಿಯು ದಟ್ಟ ಮಲೆನಾಡ ಗುಡ್ಡಗಾಡು ಪ್ರದೇಶದ ಮಧ್ಯದಲ್ಲಿದೆ. ದಕ್ಷಿಣ ಹಾಗೂ ಪಶ್ಚಿಮ ಭಾಗಗಳು ಕರಾವಳಿ ಪ್ರದೇಶವಾಗಿದ್ದು, ಘಟ್ಟಪ್ರದೇಶದ ಗಿರಿಶೃಂಗಗಳ ಮಧ್ಯದಲ್ಲಿರುವುದರಿಂದ 'ಶೃಂಗಗಿರಿ' ಹೆಸರಾಗಿ ನಂತರ 'ಶೃಂಗೇರಿ' ಯಾಯಿತೆಂದು ಉಲ್ಲೇಖವಿದೆ. ಬಸವನ ಕೊಂಬಿನಂತಹ ಬೆಟ್ಟಗಳ ನಡುವಿರುವುದರಿಂದ 'ಶೃಂಗಗಿರಿ' 'ಶೃಂಗೇರಿ' ಯಾಗಿದೆಯೆಂದು ಮೌಖಿಕ ಪರಂಪರೆಯ ನಂಬಿಕೆಯಾಗಿದೆ. ಕ್ರಿ.ಶ. 1390ರ ಸಮಯದಲ್ಲಿ ಶೃಂಗೇರಿ ಸಂಸ್ಥಾನಕ್ಕೆ ನೀಡಿದ ದಾನಗಳ ಮೊತ್ತವು ಮೂರು ಸಾವಿರದ ಮೂರು ಪಗೋಡಗಳಾಗಿದ್ದರಿಂದ 'ಮೂರು ಸಾವಿರದ ಸೀಮೆ' ಎಂದು ಕರೆಯುತ್ತಿದ್ದರು[3] ಎನ್ನುವುದು ದಾಖಲಾಗಿದೆ.

1.4 ಶೃಂಗೇರಿಯ ಚಾರಿತ್ರಿಕ ಹಾಗೂ ಪೌರಾಣಿಕ ಹಿನ್ನೆಲೆ:

ಶೃಂಗೇರಿಯು ಐತಿಹಾಸಿಕ ಧಾರ್ಮಿಕ ಪ್ರಸಿದ್ಧಿ ಪಡೆದ ಕೇಂದ್ರವಾಗಿದೆ. ಪ್ರಾಗೈತಿಹಾಸದ ಕಾಲದಿಂದಲೇ ತನ್ನ ಐತಿಹಾಸಿಕ ಹಿನ್ನೆಲೆಯನ್ನು ಪಡೆದಿದೆ. ತುಂಗಾನದಿಯ ದಂಡೆಯ ಮೇಲೆ

ಶಿಲಾಯುಗದ ಕಾಲದಲ್ಲಿ ಮನುಷ್ಯರ ನೆಲೆಯಿತ್ತೆಂಬುದನ್ನು ಪುರಾತತ್ತ್ವಜ್ಞರು ಉತ್ಖನನದಿಂದ ದೃಢಪಡಿಸಿದ್ದಾರೆ.[4] ನೂತನ ಶಿಲಾಯುಗ ಕಾಲಕ್ಕೆ ಸೇರಿದ ಆಯುಧಗಳು, ಬೂದು ಬಣ್ಣದ ಮಡಿಕೆಯ ಚೂರುಗಳು ಮುಂತಾದ ಅನೇಕ ಅವಶೇಷಗಳು ಇದಕ್ಕೆ ಪುಷ್ಟಿ ನೀಡುತ್ತವೆ.

ಶೃಂಗೇರಿ ಸಮೀಪದ ಬೆಳವಿನಕೊಡಿಗೆಯಲ್ಲಿ ಬೃಹತ್ ಶಿಲಾಯುಗ ಕಾಲದ ಸಮಾಧಿಗಳು ಕಂಡು ಬಂದಿವೆ. 'ಚಿದರವಳ್ಳಿ' ಎಂಬಲ್ಲಿ ನೂತನ ಶಿಲಾಯುಗದ ಕೊಡಲಿಯೊಂದು ದೊರೆತಿದೆ. ಅದರ ಸಮೀಪದಲ್ಲಿಯೇ ಕ್ರಿಸ್ತಶಕ ಆರಂಭ ಕಾಲದವು ಎಂದು ಇತಿಹಾಸ ತಜ್ಞರು ನಿರ್ಣಯಿಸಿರುವ ಕುರುಹುಗಳಿವೆ, ಪ್ರಾಗ್ಐತಿಹಾಸಕಾಲಕ್ಕೆ ಸಂಬಂಧಿಸಿದಂತೆ ಇಲ್ಲಿ ಖಚಿತವಾದ ಕುರುಹುಗಳು ದೊರಕಿವೆ.[5]

ಶ್ರೀಮದ್ರಾಮಾಯಣದಲ್ಲಿ ಶೃಂಗೇರಿಯ ಬಗ್ಗೆ ಉಲ್ಲೇಖವಿದೆ. ಶ್ರೀ ಋಷ್ಯಶೃಂಗಮುನಿಗಳ ತಂದೆಯವರಾದ ಶ್ರೀ ವಿಭಾಂಡಕ ಮಹರ್ಷಿಗಳು ತಪಸ್ಸು ಮಾಡಿದ ಪುಣ್ಯಕ್ಷೇತ್ರವಿದು. ಇಲ್ಲಿನ ಮಲಹಾನಿಕರೇಶ್ವರ ಲಿಂಗದಲ್ಲಿ ಅವರು ಐಕ್ಯರಾದರೆಂದು ಐತಿಹ್ಯವಿದೆ. ಸಮೀಪದ ಕಿಗ್ಗ ಕ್ಷೇತ್ರದಲ್ಲಿ ಶ್ರೀ ಋಷ್ಯಶೃಂಗರಲ್ಲಿ ಪರಮೇಶ್ವರನು ಐಕ್ಯವಾದ ಕ್ಷೇತ್ರವೆಂದು ಪ್ರಸಿದ್ಧವಾಗಿದೆ. ಕಿಗ್ಗದ ಸಮೀಪದ ಪ್ರದೇಶವೊಂದು ಬಭ್ರುವಾಹನನ ರಾಜಧಾನಿಯಾದ ಮಣಿಪುರದ ಕೋಟೆ ಎಂದು ಕರೆಯಲಾಗುತ್ತದೆ. ಪಾಂಡವರ ತುಳಸೀಕಟ್ಟೆ ಎಂಬ ಪ್ರದೇಶವು ನೆಮ್ಮಾರಿನ ಬಳಿ ಇದೆ.[6] ಶೃಂಗೇರಿಯ ಕೆಲವು ಶಾಸನಗಳಲ್ಲಿ ಸಮೀಪದ ಪಶ್ಚಿಮವಾಹಿನಿಯನ್ನು ವಸಿಷ್ಠಾಶ್ರಮ ಎಂದು ಉಲ್ಲೇಖಿಸಿದೆ. ಮಹರ್ಷಿ ವಸಿಷ್ಠರ ಸಂಬಂಧವನ್ನು ಕಲ್ಪಿಸಲಾಗಿದೆ.[7]

ಶೃಂಗೇರಿ ತಾಲ್ಲೂಕಿನ ಕಿಗ್ಗವು ಶೃಂಗೇರಿಗಿಂತಲೂ ಪ್ರಾಚೀನವಾದ ಇತಿಹಾಸ ಹೊಂದಿರುವಂತೆ ಕಾಣುತ್ತದೆ. ಇದು ಕದಂಬ ಮಂಡಲಕ್ಕೆ ಸೇರಿದ ಭೂ ಭಾಗವಾಗಿತ್ತು ಎಂಬುದಕ್ಕೆ ಕ್ರಿ.ಶ. 675 ರ ಕಿಗ್ಗದ ಶಾಸನವೊಂದು ಪ್ರಮಾಣವಾಗುತ್ತದೆ.[8] ಕ್ರಿ.ಶ.ಆರನೇ ಶತಮಾನದ ಗಂಗರ ದೊರೆ ಅವನೀತನ ಕಾಲದ ತಾಮ್ರ ಶಾಸನವೇ ಈ ಭಾಗದಲ್ಲಿ ದೊರೆತ ಮೊದಲ ಶಾಸನವಾಗಿದೆ. ಕ್ರಿ.ಶ.ಏಳನೆಯ ಶತಮಾನದ ಉತ್ತರಾರ್ಧದಲ್ಲಿ ಕಿಗ್ಗದ 'ಕಿಳ್ಗಾನೇಶ್ವರ' ದೇವರಿಗೆ ಸಂಬಂಧಿಸಿದ ಆಳುಪ ವಂಶದ ಚಿತ್ರವರ್ಧನ (ಕ್ರಿ.ಶ 663–730)ನ ಶಾಸನಗಳಲ್ಲೂ ಕಿಗ್ಗದ ಉಲ್ಲೇಖಗಳಿವೆ. 'ಮರಕಲು' ಎಂಬುದು ಇದರ ಪ್ರಾಚೀನ ಹೆಸರು. ಚಾಳುಕ್ಯ ತ್ರಿಭುವನ ಮಲ್ಲ ಕಲ್ಯಾಣದ ನೆಲೆವೀಡಿನಿಂದ ರಾಜ್ಯವಾಳುವ ಉಲ್ಲೇಖವಿರುವ ತುಂಡುಶಾಸನವೊಂದು ಲಭಿಸಿದೆ. ಕದಂಬರ ಮಂಡಲಕ್ಕೆ ಸೇರಿದ್ದ ಇದರಲ್ಲಿ ವಿಜಯನಗರದ ಅರಸರ ಕಾಲದಲ್ಲಿ 'ಕಿಗನ ನಾಡು' ಎಂಬ ಆಡಳಿತ ವಿಭಾಗವಿದ್ದಿತು. 'ಋಷ್ಯಶೃಂಗಪುರ' ಎಂಬ ಹೆಸರು ಇತ್ತೀಚೆಗೆ ಬಂದಿರಬೇಕೆಂದು ತೋರುತ್ತದೆ. ಕಿಗ್ಗದ ದೇವಸ್ಥಾನದಲ್ಲಿ ಈಗಿರುವ ಮುಖ ಮಂಟಪ ವಿಜಯನಗರದ ಅರಸರ ಕಾಲದಲ್ಲಿ ನಿರ್ಮಿತವಾಗಿರಬಹುದೆಂದು ಇತಿಹಾಸ ತಜ್ಞರು ಭಾವಿಸುತ್ತಾರೆ.[9]

ಶೃಂಗೇರಿ ಇತಿಹಾಸದಲ್ಲಿ ಕ್ರಿ.ಶ.9ನೇ ಶತಮಾನವು ಪ್ರಮುಖ ಕಾಲಘಟ್ಟವಾಗಿದೆ. ಶ್ರೀ

ಶಂಕರ ಭಗವತ್ಪಾದಾಚಾರ್ಯರು ಇಲ್ಲಿ ಮಠವನ್ನು ಸ್ಥಾಪಿಸಿರುವುದು ತಿಳಿಯುತ್ತದೆ. ಆ ಸಮಯದಲ್ಲಿ ಶೃಂಗೇರಿಯ ಪರಿಸರ ಹೇಗಿತ್ತೆಂದು ತಿಳಿಯಲು ನೇರವಾದ ದಾಖಲೆಗಳಿಲ್ಲ. ಶ್ರೀ ಶಂಕರ ಭಗವತ್ಪಾದಾಚಾರ್ಯರ ಜೀವನ ವೃತ್ತಾಂತವನ್ನು ವರ್ಣಿಸುವ 'ಮಾಧವೀಯ ಶಂಕರ ವಿಜಯ'ವು ಹೆಚ್ಚು ಪ್ರಾಮಾಣಿಕವೆಂಬುದನ್ನು ಬಹುಜನ ವಿದ್ವಾಂಸರು ಒಪ್ಪುತ್ತಾರೆ. ಆದರೆ ಇದು ಮೂಲಭೂತವಾಗಿ ಕಾವ್ಯವೇ ಹೊರತು ಇತಿಹಾಸವಲ್ಲ. ಆದರೂ ಅಲ್ಲಿಯ ಹಲವಾರು ಅಂಶಗಳು ಚರಿತ್ರೆಯನ್ನು ತಿಳಿಯಲು ಸಹಕರಿಸುತ್ತದೆ.

ಮಾಧವೀಯ ಶಂಕರ ವಿಜಯದ 12ನೇ ಸರ್ಗದ ಶ್ಲೋಕ ಸಂಖ್ಯೆ 64, 65 ರಲ್ಲಿ ಶೃಂಗೇರಿಯ ಕುರಿತು ವರ್ಣನೆಯಿದೆ.

ಯತ್ರಾಧುನಾಪ್ಯುತ್ತಮಮೃಷ್ಯಶೃಂಗಸ್ತಪಶ್ಚರತ್ಯಾತ್ಮಭೃದಂತರಂಗಃ
ಸಂಸ್ಪರ್ಶಮಾತ್ರೇಣ ವಿತೀರ್ಣಭದ್ರಾ ವಿದ್ಯೋತತೇ ಯತ್ರ ಚ ತುಂಗಭದ್ರಾ॥
ಅಭ್ಯಾಗತಾರ್ಚಾಲ್ಪಿತಕಲ್ಪಶಾಖಾಃ ಕೂಲಂಕಷಾಧೀತಸಮಸ್ತಶಾಖಾಃ
ಇಜ್ಯಾ್ಯಶತ್ಯೈರ್ಯತ್ರಸಮುಲ್ಲಸಂತಃ ಶಾಂತಾಂತರಾಯಾ ನಿವಸಂತಿ ಸಂತಃ॥

ಈ ಶ್ಲೋಕದಲ್ಲಿ ಶೃಂಗೇರಿಯು ಋಷ್ಯಶೃಂಗರ ತಪೋಭೂಮಿಯಾಗಿದ್ದು, ಇಲ್ಲಿ ಮಂಗಳದಾಯಿನಿಯಾದ ತುಂಗಭದ್ರೆ ಪ್ರವಹಿಸುತ್ತಿದ್ದಾಳೆ. ಅತಿಥಿ ಸತ್ಕಾರದಲ್ಲಿ ನಿರತರಾಗಿರುವ ಸತ್ಪುರುಷರು ವೇದಗಳನ್ನು ಸಾಂಗವಾಗಿ ಅಧ್ಯಯನ ಮಾಡಿ, ನೂರಾರು ಯಜ್ಞಗಳನ್ನು ಮಾಡುತ್ತಿದ್ದರೆಂದು ಶೃಂಗೇರಿ ಕ್ಷೇತ್ರವನ್ನು ವರ್ಣಿಸಿದ್ದಾರೆ. ಇದರಿಂದ ಇಲ್ಲಿ ವೈದಿಕ ಧರ್ಮದ ಆಚರಣೆ ಪ್ರಬಲವಾಗಿತ್ತೆಂದು ತೋರುತ್ತದೆ.

ಶೃಂಗೇರಿ ಹಾಗೂ ಇದರ ಸುತ್ತಮುತ್ತಲ ಭಾಗದಲ್ಲಿ ಜೈನ ಮತದ ಪ್ರಾಬಲ್ಯ ಇದ್ದಿರಬೇಕೆಂದೆನಿಸುತ್ತದೆ. ನರಸಿಂಹರಾಜಪುರ, ಹುಂಚ, ವೇಣೂರು, ಕಾರ್ಕಳ, ಮೂಡಬಿದರೆ, ಕೊಗ್ರೆಯ ಸಮೀಪದ ಕಲ್ಲುಗುಡ್ಡೆ, ಕುಂದಾದ್ರಿ ಮೊದಲಾದ ಜೈನಕ್ಷೇತ್ರಗಳನ್ನು ಕಾಣಬಹುದಾಗಿದೆ. ಶೃಂಗೇರಿ ಸಮೀಪದ ಹೊಳೆಕೊಪ್ಪ ಎಂಬ ಹಳ್ಳಿಯ ಕಾಡಿನಲ್ಲಿ ಜೈನಾವಶೇಷಗಳು ಕಂಡುಬಂದಿವೆ. ಶೃಂಗೇರಿ ಶ್ರೀ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ತಂದಿರಿಸಿರುವ ಜಿನಮೂರ್ತಿಗಳು ಕ್ರಿ.ಶ. 7–8ನೇ ಶತಮಾನದ್ದಿರಬಹುದೆಂದು ಅವುಗಳ ಲಕ್ಷಣದಿಂದ ಇತಿಹಾಸ ತಜ್ಞರು ಊಹಿಸಿದ್ದಾರೆ. ಇದನ್ನು ಗಮನಿಸಿದಾಗ ಶೃಂಗೇರಿಯ ಆಸುಪಾಸಿನಲ್ಲಿದ್ದ ಜೈನಮತದ ಪ್ರಾಬಲ್ಯವನ್ನು ಕಡಿಮೆ ಮಾಡುವುದು ಶ್ರೀ ಶಂಕರ ಭಗವತ್ಪಾದಾಚಾರ್ಯರು ಈ ಸ್ಥಳವನ್ನು ಆರಿಸಿಕೊಂಡಿರುವುದಕ್ಕೆ ಕಾರಣ ಇರಬಹುದೇನೋ ಎಂದೆನಿಸುತ್ತದೆ.

ಶ್ರೀ ಶಂಕರಾಚಾರ್ಯರ ತರುವಾಯ ಕ್ರಿ.ಶ.14ನೆಯ ಶತಮಾನದವರೆಗೆ ನಮಗೆ ಐತಿಹಾಸಿಕ ದಾಖಲೆಗಳು ದೊರೆತಿಲ್ಲ. ಶ್ರೀ ಶಾರದಾ ಪೀಠದ ಜಗದ್ಗುರು ಪರಂಪರೆಯಲ್ಲಿ ಬಂದ ಆಚಾರ್ಯರುಗಳ ಬಗ್ಗೆ 'ಗುರುವಂಶಕಾವ್ಯ' ಹಾಗೂ ಇತರೆ ಕಾವ್ಯಗಳಿಂದ ತಿಳಿದು ಬರುತ್ತದೆಯಾದರೂ ಐತಿಹಾಸಿಕವಾಗಿ

ಸಮರ್ಥನೀಯ ವಿಚಾರಗಳು ಇವುಗಳಲ್ಲಿಲ್ಲ. ಈ ಅವಧಿಯಲ್ಲಿ ಮಠದ ಸ್ವರೂಪವೂ ಕೂಡ ತಪಸ್ಸು, ಅಧ್ಯಯನಗಳೇ ಇದ್ದ ಗುರುಕುಲದಂತೆ ಇದ್ದಿರಬೇಕು. ಈ ಅವಧಿಯ ಸಾಮಾಜಿಕ, ಧಾರ್ಮಿಕ ವಿಚಾರಗಳು ಹೆಚ್ಚು ತಿಳಿದುಬರುವುದಿಲ್ಲ. ಮಠವು ಪ್ರಮುಖವಾದ ಸಂಸ್ಥೆಯಾಗಿದ್ದುದರಿಂದ ವೈದಿಕ ಧರ್ಮದ ಪ್ರಾಬಲ್ಯವೇ ಇದ್ದಿರಬಹುದೆಂದು ನಾವು ಊಹಿಸಬಹುದು.

ಶ್ರೀ ವಿದ್ಯಾರಣ್ಯರ ಪ್ರೇರಣೆಯಂತೆ ಹಕ್ಕಬುಕ್ಕರು ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದಂದಿನಿಂದಲೂ ಶ್ರೀಮಠ ಹಾಗೂ ವಿಜಯನಗರ ಸಾಮ್ರಾಜ್ಯಕ್ಕೆ ನಿಕಟಸಂಪರ್ಕವೇರ್ಪಟ್ಟಿತು. ವಿಜಯನಗರ ಪತನಾನಂತರ ಕೆಳದಿಯ ಅರಸರು ಶ್ರೀಮಠದ ರಕ್ಷಣೆ ಮಾಡಿದರು. ಮೈಸೂರು ಒಡೆಯರಿಗೂ ಶೃಂಗೇರಿ ಮಠಕ್ಕೂ ಉತ್ತಮವಾದ ಸಂಬಂಧ ಮೊದಲಿನಿಂದಲೂ ಇದ್ದದ್ದರಿಂದ ಶೃಂಗೇರಿ ಜಹಗೀರಿನ ಸ್ವತಂತ್ರ ಅಸ್ತಿತ್ವ ಉಳಿದುಕೊಂಡು ಬಂದಿತ್ತು ಎನ್ನಬಹುದು. ಈ ಮನೆತನದವರು ಶೃಂಗೇರಿ ಮಠಕ್ಕೆ ವಿಶೇಷವಾಗಿ ನಡೆದುಕೊಂಡರಲ್ಲದೆ, ತಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಗ್ರಾಮಗಳನ್ನು ದಾನವಾಗಿ ನೀಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ್, ದಿವಾನ್ ಪೂರ್ಣಯ್ಯ, ಹೈದರಾಲಿ, ಟಿಪ್ಪು ಮೊದಲಾದವರು ಶೃಂಗೇರಿಯ ಮೇಲೆ ಅಪಾರವಾದ ಗೌರವಾದರವನ್ನು ಹೊಂದಿದ್ದರು ಎನ್ನುವುದನ್ನು ದಾಖಲೆಗಳು ತಿಳಿಸುತ್ತವೆ.

ಟಿಪ್ಪುಸುಲ್ತಾನನ ಕಾಲದಲ್ಲಿ ನಡೆದ ಘಟನೆಯೊಂದು ವಿಶೇಷವಾಗಿ ಉಲ್ಲೇಖಾರ್ಹ. ಕ್ರಿ.ಶ.1791ರ ಮೂರನೇ ಮೈಸೂರು ಯುದ್ಧದ ಕಾಲದಲ್ಲಿ ಪರಶುರಾಮಭಾವೆ, ಬಿದನೂರಿನ ಕಡೆಗೆ ಹೊರಟಾಗ ಲಂಬಾನಿ ಮತ್ತು ಪಿಂಡಾರೆಯವರು ರಘುನಾಥರಾವ್ ಪಟವರ್ಧನ್ ಎಂಬುವವನ ನೇತೃತ್ವದಲ್ಲಿ ಶೃಂಗೇರಿಯನ್ನು ಲೂಟಿಮಾಡಿದರು. ಸುಮಾರು 60 ಲಕ್ಷ ಮೌಲ್ಯದ ಸಂಪತ್ತು ಲೂಟಿಯಾಯಿತು. ಅನೇಕ ನಿರಪರಾಧಿ ಅರ್ಚಕರು ಹತರಾದರು. ಈ ವಿಷಯ ತಿಳಿದ ಟಿಪ್ಪು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳಿಗೆ ಪತ್ರದಲ್ಲಿ "ಅಂಥಾ ಸ್ಥಳಕ್ಕೆ ಈಗ್ಗೆ ದ್ರೋಹಿತನ ಮಾಡಿದ ಮೇಲೆ 'ಹಸದ್ಭಿ: ಕ್ರಿಯತೇ ಕರ್ಮ ರುದದ್ಭಿರನು ಭೂಯತೇ' ಎಂಬ ಶ್ಲೋಕಾರ್ಥ ಪ್ರಕಾರ ಕಲಿಯುಗದಲ್ಲಿ ಮಾಡಿದ್ದನ್ನು ತ್ವರೆಯಿಂದಲೇ ಅವರು ಅನುಭವಿಸಬೇಕಾದೀತು" ಇತ್ಯಾದಿಯಾಗಿ ಬರೆದು ಶಾರದಮ್ಮನವರ ಪ್ರತಿಷ್ಠೆ, ದೇವರ ಸೇವೆಗಳಿಗೆ ನಗದು, ದವಸ, ಪಲ್ಲಕ್ಕಿ, ಆನೆ ಇತ್ಯಾದಿಗಳನ್ನು ಕಳುಹಿಸುತ್ತಾನೆ. ಮುಂದೆ ಮಾಧವರಾವ್ ಪೇಶ್ವೆ ಆದ ಕಾರ್ಯಕ್ಕೆ ಪಶ್ಚಾತ್ತಾಪ ಪಟ್ಟು ಲೂಟಿಯಾದ ವಸ್ತುಗಳನ್ನು ಹಿಂದಿರುಗಿಸಿ ಶ್ರೀಗಳವರಿಗೆ ಕಾಣಿಕೆ ಇತ್ಯಾದಿಗಳನ್ನು ಕಳುಹಿಸಿದ.[10] ಈ ರಾಜ ಮನೆತನಗಳಲ್ಲದೇ, ನೆರೆಂಕಿಯ ಬಲ್ಲಾಳ ಚವುಟ, ಹೆಬ್ರಿಯ ಬಲ್ಲಾಳ, ತರೀಕೆರೆಯ ನಾಯಕರು, ಬನವಾಸಿಯ ಪ್ರಮುಖರು, ಸಂತೆಬೆನ್ನೂರಿನ ಪಾಳೆಯಗಾರರು ಶ್ರೀಮಠಕ್ಕೆ ನಡೆದುಕೊಂಡಿದ್ದಲ್ಲದೇ ಬೇಕಾದಷ್ಟು ದಾನಾದಿಗಳನ್ನು ಮಾಡಿದರು. ಮಹಾರಾಷ್ಟ್ರದ ಅನೇಕ ರಾಜಮನೆತನಗಳೂ ತಮ್ಮ ಶ್ರದ್ಧಾದರಗಳನ್ನು ತೋರಿಸಿದ್ದಾರೆ. ಈ ಎಲ್ಲಾ ವಿಚಾರಗಳು ಶೃಂಗೇರಿಯು ಹೇಗೆ ಚಾರಿತ್ರಿಕವಾಗಿ

ಮಹತ್ವವನ್ನು ಹೊಂದಿತ್ತೆಂಬುದನ್ನು ತಿಳಿಸುತ್ತದೆ. ಈ ಅವಧಿಯಲ್ಲೇ ಶೃಂಗೇರಿ ಜಹಗೀರು ಸಂಸ್ಥಾನವಾಗಿ ಪೋಲೀಸ್, ಅಬ್ಕಾರಿ, ನೀರಾವರಿ ಮೊದಲಾದ ಎಲ್ಲಾ ಅಧಿಕಾರಗಳನ್ನು ಹೊಂದಿ ರೂಪುಗೊಂಡಿದ್ದು ಕ್ರಿ.ಶ.18ನೇ ಶತಮಾನದ ಉತ್ತರಾರ್ಧದಿಂದ ಆರಂಭವಾದ ಅನೇಕ ಕಾರ್ಯಗಳು ಸಾಧನೆಗಳು ಅಚ್ಚರಿ ಮೂಡಿಸುತ್ತವೆ."

1.5 ಶೃಂಗೇರಿ ತಾಲ್ಲೂಕಿನ ಭೌಗೋಳಿಕ ಪರಿಸರ ಮತ್ತು ಜನಸಂಖ್ಯೆ:

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಸಮುದ್ರ ಪಾತಳಿಯಿಂದ 654 ಮೀಟರ್ ಎತ್ತರದಲ್ಲಿ ಹಾಗೂ ಅರಬ್ಬಿ ಸಮುದ್ರದಿಂದ 60 ಮೈಲುಗಳ ದೂರದಲ್ಲಿದೆ. 2001ರ ಜನಗಣತಿಯ ಆಧಾರದ ಮೇಲೆ 2007–08ರಲ್ಲಿ ಚಿಕ್ಕಮಗಳೂರು ಜಿಲ್ಲಾ ಮಾಹಿತಿ ಪುಸ್ತಕದಲ್ಲಿ ಪ್ರಕಟಿಸಿದ ದಾಖಲೆಯಂತೆ ಮಾಹಿತಿ ಹೀಗಿದೆ. ಶೃಂಗೇರಿ ತಾಲ್ಲೂಕು ಎರಡು ಹೋಬಳಿಗಳು, 9 ಗ್ರಾಮ ಪಂಚಾಯ್ತಿಗಳು, 1 ಪಟ್ಟಣ ಪಂಚಾಯಿತಿ, 48 ಜನವಸತಿಯಿರುವ ಗ್ರಾಮ ಹಾಗೂ ಒಂದು ಜನವಸತಿಯಿಲ್ಲದ ಗ್ರಾಮವನ್ನು ಹೊಂದಿದೆ. ವಿದ್ಯುತ್ ಇಲಾಖೆಗೆ ಸಂಬಂಧಿಸಿದಂತೆ ಎರಡು ಉಪವಿಭಾಗಗಳಿವೆ. 17 ನ್ಯಾಯಬೆಲೆ ಅಂಗಡಿಗಳು, 4490 ಬಿ.ಪಿ.ಎಲ್ ಪಡಿತರ ಚೀಟಿದಾರರು, 4509 ಎ.ಪಿ.ಎಲ್ ಪಡಿತರ ಚೀಟಿದಾರರು, 802 ಎ.ಎ.ವೈ ಪಡಿತರ ಚೀಟಿದಾರರು, ಒಟ್ಟು 9801 ಪಡಿತರ ಚೀಟಿ ಹೊಂದಿದವರಿದ್ದಾರೆ. ಒಂದು ಆರಕ್ಷಕ ವೃತ್ತ ನಿರೀಕ್ಷಕರಿರುವ ಪೊಲೀಸ್ ಠಾಣೆಯಿದೆ.

ಶೃಂಗೇರಿ ತಾಲ್ಲೂಕಿನಲ್ಲಿ ಗಂಡಸರು 18538, ಹೆಂಗಸರು 18392 ಒಟ್ಟು 36930 ಜನರಿದ್ದಾರೆ. ಜನಸಾಂದ್ರತೆಯು 1 ಕಿಲೋ ಮೀಟರಿಗೆ 83 ರಂತೆಯಿದೆ. ಶೃಂಗೇರಿಯು ಒಟ್ಟು 443 ಚದರ ಕಿಲೋಮೀಟರ್ ಭೂ ಪ್ರದೇಶವನ್ನು ಹೊಂದಿದೆ. ಹೆಣ್ಣು ಲಿಂಗ ಪ್ರಮಾಣ ಸಾವಿರಕ್ಕೆ 992 ರಷ್ಟಿದೆ. ದಶಕದ ಬೆಳವಣಿಗೆಯ ಪ್ರಮಾಣವು ಶೇ 11 ರಷ್ಟಿದೆ. ಗ್ರಾಮೀಣ ಪ್ರದೇಶದಲ್ಲಿ 32681 ಜನರಿದ್ದು ನಗರ ಪ್ರದೇಶದಲ್ಲಿ 4249 ಜನ ವಾಸವಿದ್ದಾರೆ.

ಪರಿಶಿಷ್ಟ ಜಾತಿಯವರು ಒಟ್ಟು 3752 ಇದ್ದು ಅದರಲ್ಲಿ 1840 ಗಂಡಸರು ಹಾಗೂ 1912 ಹೆಂಗಸರಿದ್ದಾರೆ. ಪರಿಶಿಷ್ಟ ಪಂಗಡದ ಗಂಡಸರು 1359 ಹಾಗೂ ಹೆಂಗಸರು 1405 ಒಟ್ಟು 2764 ಜನರಿದ್ದಾರೆ. ಸಾಕ್ಷರತೆಯ ಪ್ರಮಾಣವು ಶೇ 86.07 ಗಂಡಸರು ಹಾಗೂ ಶೇ 74.8 ಹೆಂಗಸರಿದ್ದಾರೆ.

ಕೆಲಸಗಾರರು

ಮುಖ್ಯ ಕೆಲಸಗಾರರು–14162

ಅರೆಕಾಲಿಕ ಕೆಲಸಗಾರರು–2214

ಕೆಲಸಗಾರರಲ್ಲದವರು–20554

ಕೃಷಿ ಸಾಗುವಳಿದಾರರು–5043

ಕೃಷಿ ಕಾರ್ಮಿಕರು–5266

ಕೈಗಾರಿಕಾ ಕೆಲಸಗಾರರು–429

ಇತರೆ ಕೆಲಸಗಾರರು–5638

ಮಳೆಯ ಪ್ರಮಾಣ

ವಾಡಿಕೆಯ ಪ್ರಮಾಣ – 3864 ಮಿ.ಮೀ

ವ್ಯವಸಾಯ (ಹೆಕ್ಟೇರುಗಳಲ್ಲಿ)

ವಿಸ್ತೀರ್ಣ – 44284

ಅರಣ್ಯಪ್ರದೇಶ – 28366

ವ್ಯವಸಾಯೇತರ ಹಾಗೂ ಬಂಜರು ಭೂಮಿ – 1971

ಸಾಗುವಳಿ ಯೋಗ್ಯವಾದ ಬಂಜರು – 62

ಖಾಯಂ ಗೋಮಾಳ – 4041

ವೃಕ್ಷ ಮತ್ತು ತೋಪುಗಳು – 3679

ಬಿತ್ತನೆಯ ಭೂಮಿ – 6120

2005–06ರ ಕೃಷಿ ಗಣತಿಯಂತೆ

ಅತಿ ಸಣ್ಣ ರೈತರು – 3830

ಸಣ್ಣ ರೈತರು – 1339

ಮಧ್ಯಮ ವರ್ಗದ ರೈತರು – 593

ದೊಡ್ಡ ರೈತರು – 35

ಒಟ್ಟು 5797 ರೈತ ಕುಟುಂಬಗಳಿವೆ.

ಭತ್ತದ ಗದ್ದೆಯ ವಿಸ್ತೀರ್ಣ – 3261 (ಹೆಕ್ಟೇರ್‌ಗಳಲ್ಲಿ)

ದ್ವಿದಳ ಧಾನ್ಯ –12

ಹಣ್ಣುಗಳು– 162

ಬಾಳೆ –135

ಅಡಿಕೆ –2121

ತೆಂಗು –56

ಕಾಫಿ –337

ಏಲಕ್ಕಿ –81

ಕರಿಮೆಣಸು –36

ರಾಸಾಯನಿಕ ಗೊಬ್ಬರಗಳ ಬಳಕೆ

ಸಾರಜನಕ – 161.98 ಟನ್

ರಂಜಕ – 111.57 ಟನ್

ಪೊಟ್ಯಾಷ್ – 108.81 ಟನ್

ಒಟ್ಟು 382.66 ಟನ್

ರೇಷ್ಮೆ :

ಹಿಪ್ಪುನೇರಳೆ ಬೆಳೆ –8.50 (ಹೆಕ್ಟೇರ್)

ರೇಷ್ಮೆಗೂಡು ಉತ್ಪಾದನೆ– 0.245 ಟನ್

ರೈತರ ಸಂಖ್ಯೆ –18

ಪಶುಪಾಲನೆ

ದನಕರುಗಳು – 19884

ಎಮ್ಮೆಗಳು – 4913

ಕುರಿಗಳು – 03

ಹಂದಿಗಳು – 115

ಮೊಲಗಳು – 10

ನಾಯಿಗಳು – 3710

ಕೋಳಿಗಳು – 8308

ಶೃಂಗೇರಿ ತಾಲ್ಲೂಕಿನಲ್ಲಿ 474 ಕೈಗಾರಿಕಾ ಉದ್ಯೋಗಿಗಳಿದ್ದಾರೆ.

45 ಸಣ್ಣ ಕೈಗಾರಿಕೆಗಳಿವೆ.

ಟೆಕ್ಸ್‌ಟೈಲ್, ಮರಗೆಲಸ, ಕಾಗದ ಮುದ್ರಣ, ಆಟೋಮೊಬೈಲ್ಸ್ – 1804 ಮಂದಿ ಕಾರ್ಯನಿರತ ಉದ್ಯೋಗಿಗಳಿದ್ದಾರೆ.

ಶೃಂಗೇರಿಯಲ್ಲಿ ಮೋಟಾರು ವಾಹನಗಳ ಸಂಖ್ಯೆ

ಮೋಟಾರ್ ಸೈಕಲ್ – 6521

ಕಾರುಗಳು – 715

ಬಾಡಿಗೆ ಕಾರುಗಳು – 43

ಅಂಬುಲೆನ್ಸ್ – 02

ಇತರೆ ವಾಹನಗಳು – 722

ಆಟೋರಿಕ್ಷಾ – 317

ಆಮ್ನಿ ಬಸ್ – 43

ಟ್ರಾಕ್ಟರ್ ಮತ್ತು ಟಿಲ್ಲರ್ – 396

ಸರಕು ಸಾಗಾಣಿಕ ವಾಹನ – 238

ಒಟ್ಟು – 8997 ವಾಹನಗಳಿವೆ.

ಶೃಂಗೇರಿ ತಾಲ್ಲೂಕಿನ ಎಲ್ಲಾ ವಿಧದ ರಸ್ತೆಯ ಉದ್ದ – 498.5 ಕಿ.ಮಿ.

ಶೃಂಗೇರಿ ತಾಲ್ಲೂಕಿನ ಪ್ರಾಥಮಿಕ ಶಾಲೆಗಳು 84, ಅದರಲ್ಲಿ

2268 ಹುಡುಗರು 2190 ಹುಡುಗಿಯರು.

ಶೃಂಗೇರಿ ತಾಲ್ಲೂಕಿನ ಪ್ರೌಢಶಾಲೆಗಳು 11, ಅದರಲ್ಲಿ 956 ಹುಡುಗರು 1067 ಹುಡುಗಿಯರು.

ಶೃಂಗೇರಿ ತಾಲ್ಲೂಕಿನ ಪದವಿ ಪೂರ್ವ ಕಾಲೇಜು 5, ಅದರಲ್ಲಿ

589 ಹುಡುಗರು 741 ಹುಡುಗಿಯರು ಇದ್ದಾರೆ.

ಅಕ್ಷರ ದಾಸೋಹ ಕೇಂದ್ರ – 75

ಪದವಿ ಕಾಲೇಜು – 3, ಬಿಇಡಿ ಕಾಲೇಜು – 1,

ಡಿ.ಇಡಿ ಕಾಲೇಜು– 1, ದಾದಿಯರ ತರಬೇತಿ ಕೇಂದ್ರ– 1

ಗ್ರಂಥಾಲಯಗಳು –10

ಆಸ್ಪತ್ರೆ 01 (ನೂರು ಹಾಸಿಗೆ ಸಾಮರ್ಥ್ಯ)

ಆರೋಗ್ಯಕೇಂದ್ರ – 2

ಆರೋಗ್ಯ ಘಟಕ –1

ಅಂಗನವಾಡಿ ಕೇಂದ್ರಗಳು –105

ಸ್ವಸಹಾಯ ಗುಂಪುಗಳು - 183

ಯುವತಿ ಮಂಡಳಿ -33

ಯವಕ ಮಂಡಳಿ - 61

ಮಹಿಳಾ ಮಂಡಳಿ - 48

ವೃದ್ಧಾಪ್ಯ ವೇತನದಾರರು - 780

ಅಂಗವಿಕಲ ಮಾಸಾಶನದಾರರು - 815

ವಿಧವಾ ಪಿಂಚಣಿದಾರರು - 1227

ಪರಿಶಿಷ್ಟ ಜಾತಿಯವರ ವಿದ್ಯಾರ್ಥಿ ನಿಲಯ: ಮೆಟ್ರಿಕ್ ಪೂರ್ವ -1 (75 ವಿದ್ಯಾರ್ಥಿಗಳು)

ಮೆಟ್ರಿಕ್ ನಂತರ 1 (50 ವಿದ್ಯಾರ್ಥಿಗಳು)

ಮೊರಾರ್ಜಿ ವಸತಿಶಾಲೆ - 1 (50 ವಿದ್ಯಾರ್ಥಿಗಳು)

ಪರಿಶಿಷ್ಟ ಪಂಗಡ ಆಶ್ರಮಶಾಲೆ - 1 (100 ವಿದ್ಯಾರ್ಥಿಗಳು)

ಹಿಂದುಳಿದ ವರ್ಗದವರ ವಿದ್ಯಾರ್ಥಿನಿಲಯ - 04 (200 ವಿದ್ಯಾರ್ಥಿಗಳು)

ಹಿಂದುಳಿದ ವರ್ಗದವರ ಮೆಟ್ರಿಕ್ ನಂತರದ ವಸತಿ ನಿಲಯ - 1 (60 ವಿದ್ಯಾರ್ಥಿಗಳು)

ಪರಿಶಿಷ್ಟ ಕಾಲೋನಿಗಳ ಸಂಖ್ಯೆ - 50

ಪ್ರಮುಖ ಆಹಾರ ಬೆಳೆ/ವಾಣಿಜ್ಯ ಬೆಳೆಗಳು

ಭತ್ತ, ಎಳ್ಳು, ಸೂರ್ಯಕಾಂತಿ, ಹುರುಳಿ, ದ್ವಿದಳಧಾನ್ಯ ಮೊದಲಾದ ಆಹಾರಬೆಳೆಗಳು, ಅಡಿಕೆ, ಬಾಳೆ, ಕಾಳುಮೆಣಸು, ಕೋಕೊ, ವಿಳ್ಯೆದೆಲೆ, ಕಾಫ್ಟಿ, ತೆಂಗು, ಏಲಕ್ಕಿ, ರೇಷ್ಮೆ, ವೆನಿಲ್ಲ, ಅಗರ್‌ವುಡ್ ಮೊದಲಾದ ವಾಣಿಜ್ಯಬೆಳೆಗಳನ್ನು ಬೆಳೆಯಲಾಗುತ್ತದೆ.[12] ಇತ್ತೀಚೆಗೆ ಸಾಂಬಾರು ಬೆಳೆಯಾದ ವೆನಿಲ್ಲಾವನ್ನು ಹಾಗೂ ಪ್ಲಾಂಟೇಶನ್ ಬೆಳೆಗಳಾದ ರಬ್ಬರ್, ಜತ್ರೋಪಾ, ಅಗರ್‌ವುಡ್ ಮತ್ತು ಅಕೇಶಿಯಾಗಳನ್ನು ಬೆಳೆಯುತ್ತಿದ್ದಾರೆ.

ಕೊನೆ ಟಿಪ್ಪಣಿ :

1. ಚಂದ್ರಶೇಖರ್, ಹೆಬ್ಬಿಗೆ, ಬ್ರಾಹ್ಮಣ
2. ಚಿನ್ನಮ್ಮ, ಕುಂತೂರು, ವಿಶ್ವಕರ್ಮ
3. ರಾಮಚಂದ್ರ ಜಿ.ಎಸ್., ಶೃಂಗೇರಿ ವಿದ್ಯಾರಣ್ಯ ಇತಿಹಾಸ ದರ್ಶನ, ಪುಟ:04
4. ಅ. ಸುಂದರ, ಮೆಗಲಿಥ್ಸ್ ಇನ್ ದಿ ಕೋಸ್ಟಲ್ ಅಂಡ್ ಘಾಟ್ ರೀಜನ್ ಆಫ್ ಕರ್ನಾಟಕ ಎಸ್ಟಡಿ ಪುಟ: 2.

5. ಭಾಮತಿ ವಾರ್ಷಿಕ ಸಂಚಿಕೆ, ಶ್ರೀ ಜೆ.ಸಿ.ಬಿ.ಎಂ. ಕಾಲೇಜು, ಶೃಂಗೇರಿ, 2006, ಪುಟ: 91–96

6. ಅದೇ

7. ಶಾಸ್ತ್ರೀ ಎ.ನ., ಶೃಂಗೇರಿ ಶ್ರೀ ಶಾರದಾ ಪೀಠದ ಇತಿಹಾಸ, ಪುಟ: 1

8. ಭಾಮತಿ ವಾರ್ಷಿಕ ಸಂಚಿಕೆ, ಶ್ರೀ ಜೆ.ಸಿ.ಬಿ.ಎಂ.ಕಾಲೇಜು, ಶೃಂಗೇರಿ, 2006, ಪುಟ: 91–96.

9. ಅದೇ

10. ಶಾಸ್ತ್ರೀ ಎ.ಕೆ., ಶೃಂಗೇರಿ ಧರ್ಮಸಂಸ್ಥಾನ, ಪುಟ: 189–190

11. ವೀರಪ್ಪಗೌಡ ಹೆಚ್.ಸಿ., ಚಾರಿತ್ರಿಕ ಹಿನ್ನೆಲೆಯಲ್ಲಿ ಶೃಂಗೇರಿ ಮಹಾಸಂಸ್ಥಾನದ ಆರ್ಥಿಕ ಅಧ್ಯಯನ, ಪುಟ: 28

12. ಜಿಲ್ಲಾ ಸಂಗ್ರಹಣಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆಯ ಅಂಕಿ ಅಂಶಗಳ ನೋಟ–ಚಿಕ್ಕಮಗಳೂರು, 2007–08

ಅಧ್ಯಾಯ – 2

ಶೃಂಗೇರಿ ತಾಲ್ಲೂಕಿನ ವಿವಿಧ ಜನಾಂಗದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು

2.1 ಸಂಸ್ಕೃತಿ

2.2 ಬ್ರಾಹ್ಮಣರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು

2.3 ಒಕ್ಕಲಿಗರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು

2.4 ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು

2.5 ಇತರ ಜನಾಂಗದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು

2.6 ಜೀವನ ವಿಧಾನ ಹಾಗೂ ಪಲ್ಲಟಗಳು

ಶೃಂಗೇರಿ ತಾಲ್ಲೂಕಿನ ವಿವಿಧ ಜನಾಂಗದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು

2.1 ಸಂಸ್ಕೃತಿ

ಸಂಸ್ಕೃತಿ ಎಂಬ ಪದವು ಇಂಗ್ಲೀಷ್ ಭಾಷೆಯ ಕಲ್ಚರ್ (Culture) ಎಂಬ ಪದದಿಂದ ಬಂದಿದೆ. ಲ್ಯಾಟಿನ್ ಭಾಷೆಯಲ್ಲಿ ಕೊಲೆರೆ (Colere= to cultivate, to till the soil) ಎಂಬ ಪದದಿಂದ ವ್ಯುತ್ಪತ್ತಿ ಹೊಂದಿದೆ. 'ಕೊಲೆರೆ' ಎಂದರೆ 'ಬೆಳೆಸು', 'ಕೃಷಿ ಮಾಡು' ಗೌರವಿಸು ಎಂಬ ಅರ್ಥವನ್ನು ಕೊಡುತ್ತದೆ.[1]

ಎಡ್ವರ್ಡ್ ಬಿ ಟೈಲರ್ (Edward B Tylor) ಎಂಬ ಇಂಗ್ಲೀಷ್ ಮಾನವಶಾಸ್ತ್ರಜ್ಞನು, "ಜ್ಞಾನ, ನಂಬುಗೆ, ಕಲೆ, ನೈತಿಕ ನಿಯಮ, ಕಾನೂನು, ರೂಢಿ ಮತ್ತು ಮಾನವನು ತನ್ನ ಸಮಾಜದ ಸದಸ್ಯನಾಗಿದ್ದುಕೊಂಡು ಸಾಧಿಸಿದ ಇನ್ನುಳಿದ ಸಾಮರ್ಥ್ಯಗಳನ್ನು, ನೈಪುಣ್ಯಗಳನ್ನು ಒಳಗೊಂಡಿರುವ ಅಖಂಡವಾದ ಒಂದು ಸಂಕೀರ್ಣ ವ್ಯವಸ್ಥೆ" ಎಂದಿದ್ದಾನೆ. ಬಿ.ಮ್ಯಾಲಿನೊಸ್ಕಿ (B.Malinoski) ಎಂಬ ತಜ್ಞನು " ಮಾನವ ತನ್ನ ಜೀವಿತದ ಗೊತ್ತುಗುರಿಯನ್ನು ರೂಪಿಸಿಕೊಳ್ಳಲು ನಿರ್ಮಿಸಿಕೊಂಡ ಸಾಧನವೇ ಸಂಸ್ಕೃತಿ" ಎಂದಿದ್ದಾನೆ.

ಗ್ರಹಾಂ ವ್ಯಾಲಸ್ (Graham Wallas) ಎಂಬ ಇಂಗ್ಲೀಷ್ ಸಾಮಾಜಿಕ ಚಿಂತಕ "ಸಂಸ್ಕೃತಿಯು ಸಾಂಪ್ರದಾಯಿಕವಾಗಿ ಬಂದ ಪದ್ಧತಿಗಳ, ಜೀವನ ಮೌಲ್ಯಗಳ ಮತ್ತು ಆದರ್ಶಗಳ ಸಂಗ್ರಹ. ಈ ಸಾಮಾಜಿಕ ಪರಂಪರೆಯನ್ನು ನಾವು ಹಿಂದಿನ ತಲೆಮಾರುಗಳಿಂದ ಹಾಗೂ ಜ್ಞಾನಾರ್ಜನೆಯಿಂದ ಪಡೆದುಕೊಂಡಿದ್ದೇವೆ" ಎಂದು ಸಂಸ್ಕೃತಿಯ ಬಗ್ಗೆ ವಿವರಣೆ ನೀಡಿದ್ದಾನೆ.

ಸಿ.ಸಿ.ನಾರ್ಥ್ (C.C.North) "ಮಾನವನು ತನ್ನ ಆಶೋತ್ತರಗಳನ್ನು ಪೂರೈಸಿಕೊಳ್ಳಲು ಸಹಕಾರಿಯಾಗುವಂತೆ ಸೃಷ್ಟಿಸಿಕೊಂಡಿರುವ ಸಾಧನಗಳನ್ನೊಳಗೊಂಡಿರುವುದೇ ಸಂಸ್ಕೃತಿ" ಎಂದೂ, ಇ.ವಿ.ಡಿ.ರಾಬರ್ಟಿ (E.V.de.Roberty) "ತಾತ್ವಿಕವಾದ ಮತ್ತು ಪ್ರಾಯೋಗಿಕವಾದ ಆದರೆ ಮಾನವನು ಮಾತ್ರ ಹೊಂದಿರುವ ಜ್ಞಾನ ಸಂಪತ್ತು ಮತ್ತು ವಿಚಾರಪ್ರಣಾಲಿಗಳ ಒಟ್ಟು ರೂಪವೇ ಸಂಸ್ಕೃತಿ" ಎಂದಿದ್ದಾರೆ.

ಸಂಸ್ಕೃತಿಯೆಂದರೆ ಅದೊಂದು ಜೀವನ ವಿಧಾನ, ಒಂದು ಜನ ಸಮೂಹಜೀವನ ವಿಧಾನವೇ ಆ ಸಮಾಜದ ಸಂಸ್ಕೃತಿ. ಜನಸಮುದಾಯದ ಬದುಕಿನ ವಿಧಿ, ಆಚರಣೆಗಳು, ರೀತಿ ನೀತಿಗಳು, ಇವೆಲ್ಲವುಗಳನ್ನೊಳಗೊಂಡು ಅರ್ಥೈಸುವ ಪದವೇ ಸಂಸ್ಕೃತಿ. ಸಾಹಿತ್ಯ, ಸಂಗೀತ, ಕಲೆ ಮೊದಲಾದವುಗಳಲ್ಲಿ ಸಂಸ್ಕೃತಿ ಸಮ್ಮಿಳನಗೊಂಡಿದೆ ಎಂದು ಶಿವರಾಮಯ್ಯ ತಿಳಿಸಿದ್ದಾರೆ.

"ಕಾಮ – ಸಾವಿನ ನಡುವಣ ಸಂಬಂಧದ ನಿರ್ವಚನೆಯೇ ಸಂಸ್ಕೃತಿ" ಎಂದು ಫ್ರಾಯ್ಡ್, "ಸ್ವ ಅರಿವೆ ಸಂಸ್ಕೃತಿ" ಎಂದು ಹೆಗಲ್ ಹೇಳಿದ್ದಾರೆ.

ಪ್ರಧಾನ ಸಂಸ್ಕೃತಿಯೊಂದು ಯಾವುದೇ ಒತ್ತಡಕ್ಕೆ ಒಳಗಾಗದ ಸಂದರ್ಭದಲ್ಲಿ ಮಾರ್ಪಾಟು ಹೊಂದಿಯೋ, ಸ್ವರೂಪ ಬದಲಿಸಿಕೊಂಡೋ, ಹೊಸರೂಪವನ್ನು ಪಡೆಯಬಹುದು, ಉಪಸಂಸ್ಕೃತಿಗಳಾಗಿ ತನ್ನದೇ ಆದ ಬದಲಾವಣೆಯೊಂದಿಗೆ ಮುಂದುವರಿಯಬಹುದು. ಅನೇಕ ಸಂದರ್ಭದಲ್ಲಿ ಉಪಸಂಸ್ಕೃತಿಯೆ ಮುಂದುವರಿಯುತ್ತದೆ. 'ಸಂಸ್ಕೃತಿ' ಮತ್ತು 'ನಾಗರಿಕತೆ' ಇವೆರಡನ್ನು ಮಾನವಶಾಸ್ತ್ರಜ್ಞರು ಒಂದೇ ಅರ್ಥದಲ್ಲಿ ಬಳಸಿದ್ದಾರೆ. ಆದರೆ ಹೆನ್ರಿ ಲೂಕಾಸರು ಸಂಸ್ಕೃತಿ ಮತ್ತು ನಾಗರಿಕತೆಗಳೆರಡೂ ಸಮಾನಾರ್ಥಕ ಪದಗಳೆಂದು ಸ್ಪಷ್ಟವಾಗಿ ಹೇಳಿ ಅವುಗಳಿಗೆ ಇರುವ ವ್ಯತ್ಯಾಸವನ್ನು ಹೀಗೆ ಸೂಚಿಸಿದ್ದಾರೆ.

These two words (culture and civilization) however are correctly used to express the some concept except that culture we speak of Homeric culture and western civilization.

ನಾಗರಿಕತೆಯೆಂಬುದು ವಿಶಾಲವಾದ ಅರ್ಥವನ್ನೊಳಗೊಂಡಿದ್ದು ' ಸಂಸ್ಕೃತಿ' ಎಂಬುದು ಸಂಕುಚಿತ ವ್ಯಾಪ್ತಿಯನ್ನು ಒಳಗೊಂಡುದಾಗಿದೆ. ಸಂಸ್ಕೃತಿಯು ಮನುಷ್ಯನ ಅಂತರಂಗ ಜೀವನದ ಕೈಗನ್ನಡಿಯಾಗಿದೆ.[2] ಮಾನವನ ಬಹುಮುಖವಾದ ಸ್ವಭಾವ ಮತ್ತು ಭಾವಗಳ ಸೂಕ್ಷ್ಮವಾದ ಮತ್ತು ಸುಂದರವಾದ ಚಿತ್ರಗಳನ್ನು ಸಂಸ್ಕೃತಿಯ ಅಂಗಗಳಲ್ಲಿ ಕಾಣಬಹುದು, ಮಾನವನ ಅಂತರಂಗದ ಜೀವಂತ ಚಿತ್ರಣವೇ ಸಂಸ್ಕೃತಿ. ಇದರಲ್ಲಿ ಸಂಗೀತ, ಚಿತ್ರ, ನೃತ್ಯ, ಸಾಹಿತ್ಯ ಮತ್ತು ಧರ್ಮ ಈ ಮೊದಲಾದವುಗಳು ಕವಲುಗಳಾಗಿ ಹರಿಯುತ್ತಿರುತ್ತವೆ. ಈ ಎಲ್ಲಾ ಮಾತುಗಳು ಸಂಸ್ಕೃತಿಯೆಂಬ ವಲಯದೊಳಗೆ ಹರಿಯುತ್ತವೆ.[3]

"Culture is then properly described not having its origin in curiosity but as having its origin in the love of perfection, it is a study of perfection"[4] ಎಂದೂ "ಪರಿಪೂರ್ಣತೆಯ ಬಯಕೆಯೇ ಸಂಸ್ಕೃತಿಯ ಉಗಮಸ್ಥಾನವೆಂದು" ಮ್ಯಾಥ್ಯೂ ಅರ್ನಾಲ್ಡ್‌ರವರು ವಿವರಿಸಿದ್ದಾರೆ.

ಮಾನವ ಜಾತಿಯ ಸಾವಿರಾರು ವರ್ಷಗಳ ಬಾಳಿನ ಅನುಭವ, ಆಲೋಚನಾ ಫಲ, ನಂಬಿಕೆಗಳು, ನಡವಳಿಕೆಗಳು ಸಂಸ್ಕೃತಿಯ ಮೂಲವಾಗಿದೆ. "ಸಂಸ್ಕೃತಿ ಎಂಬುದು ಮಾತಿಗೆ ನಿಲುಕದೆ, ಜನರ ಆಚರಣೆಯ ರೀತಿ ನೀತಿಗಳಿಂದ ಅನುಭವಕ್ಕೆ ಗೋಚರವಾಗುವ ಅಂಶ"[5]

ಈ ಎಲ್ಲಾ ವ್ಯಾಖ್ಯಾನಗಳನ್ನು ಗಮನಿಸಿದಾಗ ಸಂಸ್ಕೃತಿ ಎಂಬುದು ಒಂದು ಜನಾಂಗದ ಸಮಗ್ರ ಅಂಶಗಳನ್ನು ಹೊರಗಾಣಿಸುವ ಪ್ರತಿಬಿಂಬವಾಗಿದೆ. ಅದು ಪ್ರತಿಯೊಂದನ್ನು ಒಳಗೊಂಡುದಾಗಿದೆ. ಕಾಲಕಾಲಕ್ಕೆ ಹಾಗೂ ಸಂದರ್ಭಾನುಸಾರ ಕೆಲವಂಶ ಮಾರ್ಪಾಡುಗಳಾಗಿವೆ ಕೆಲವಂಶ ಮರೆಯಾಗಿವೆ ಮತ್ತು ಹಲವಂಶ ಹೊಸರೂಪವನ್ನು ಪಡೆದುಕೊಂಡಿವೆ ಎಂಬುದು ವೇದ್ಯವಾಗುತ್ತದೆ. ಶೃಂಗೇರಿ ತಾಲ್ಲೂಕು ಸಹ ತನ್ನದೇ ಆದ ಸಂಸ್ಕೃತಿಯನ್ನು ಒಳಗೊಂಡಿದ್ದು,

ವಿಶಿಷ್ಟವಾದ ಮಹತ್ವವನ್ನು ಪಡೆದಿದೆ. ಸಮಾಜದಲ್ಲಿ ಕಾಲಾಂತರದ ಸನ್ನಿವೇಶದ ಘರ್ಷಣೆಯಿಂದಾಗಿ ಪಲ್ಲಟಗಳಾಗಿರುವುದು ಕಂಡು ಬರುತ್ತದೆ. ಈ ರೀತಿಯ ಪರಿವರ್ತನೆಯಿಂದ ಶೃಂಗೇರಿಯು ಹೊರತಾಗಿಲ್ಲ. ನಾಡಿನ ಉಳಿದೆಲ್ಲ ಪ್ರದೇಶಗಳಲ್ಲಾದಷ್ಟು ತೀವ್ರಗತಿಯ ಪರಿವರ್ತನೆಯಲ್ಲದಿದ್ದರೂ, ಪಲ್ಲಟಗಳಾಗಿರುವುದು ಸತ್ಯಸಂಗತಿ. ಈ ನೆಲೆಯಲ್ಲಿ ಸಾಂಸ್ಕೃತಿಕವಾಗಿ ಮೊದಲಿನ ಸ್ಥಿತಿಗತಿ, ನಂತರ ಘರ್ಷಣೆ, ಘರ್ಷಣೆಗೆ ಕಾರಣವಾದ ಪ್ರಮುಖ ಅಂಶಗಳನ್ನು ದಾಖಲಿಸುವುದು, ತರುವಾಯದಲ್ಲಾದ ಬದಲಾವಣೆಯನ್ನು ಗುರುತಿಸುವುದು ಈ ಪ್ರಬಂಧದ ಉದ್ದೇಶವಾಗಿದೆ. ಬೇರೆ ಬೇರೆ ಚಿಂತಕರು ನೀಡಿದ ಸಂಸ್ಕೃತಿಯ ವ್ಯಾಖ್ಯಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಸ್ಕೃತಿ ಹಾಗೂ ಸಂಸ್ಕೃತಿಯಲ್ಲಾದ ಪಲ್ಲಟಗಳನ್ನು ಅಧ್ಯಯನ ಮಾಡಲಾಗಿದೆ.

ಪ್ರಾಚೀನ ಭಾರತದಿಂದ ಇಂದಿನವರೆಗೂ ಸಂಸ್ಕೃತಿಯು ಅವ್ಯಾಹತವಾಗಿ ಹರಿದುಬಂದಿದೆ. ಈ ದೃಷ್ಟಿಯಿಂದ ಇತಿಹಾಸಕಾರರು ಭಾರತವನ್ನು "ಸಂಸ್ಕೃತಿಯ ತವರುಮನೆ" "ಸಂಸ್ಕೃತಿಗಳ ತೊಟ್ಟಿಲು" ಎಂದೆಲ್ಲಾ ಕರೆದಿದ್ದಾರೆ. ಭಾರತ ದೇಶದ ಮೇಲೆ ವಿದೇಶಿಯರು ಹಾಗೂ ಸ್ವದೇಶಿಯ ಸ್ವಜನ ಪಕ್ಷಪಾತಿ ಧೋರಣೆಯವರಿಂದ ಆಕ್ರಮಣವಾಗಿ ಭವ್ಯ ಸಂಸ್ಕೃತಿಯ ಮೇಲೆ ಪ್ರಹಾರ ನಡೆದರೂ ಭಾರತೀಯ ಭದ್ರ ಸಂಸ್ಕೃತಿಯನ್ನು ಬದಲಾಯಿಸಲು ಸಾಧ್ಯವಾಗಿಲ್ಲ. ಈ ಭಾಗದ ಜನರಲ್ಲಿ ಮೂಡಿರುವ ಮನಸ್ಸು, ಭಾವನೆ, ಜೀವದ ಒಂದು ಅಂಗವಾಗಿ ಜೊತೆಯಲ್ಲೇ ಮುಂದುವರಿದುಕೊಂಡು ಬಂದುದಾಗಿರುವುದರಿಂದ ತನ್ನ ಅನನ್ಯತೆಯನ್ನು ಉಳಿಸಿಕೊಂಡು ಬಂದಿದೆ. ಅಲ್ಲದೆ ಬೇರೆ ದೇಶಿಯರಿಗೆ ಮಾದರಿಯಾಗಿ ಕಂಗೊಳಿಸುತ್ತಿದೆ. ಕಾಲಘಟ್ಟದ ಪ್ರಭಾವಕ್ಕೆ ಒಳಗಾಗಿ ಬದಲಾವಣೆ ಅಥವಾ ಮಾರ್ಪಾಟುಗಳಾಗಿರುವುದು, ಕೆಲವಷ್ಟು ಕ್ಷೀಣಿಸಿರುವುದು ಕಂಡು ಬಂದಿದೆ. ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ವಸ್ತುಗಳು ಸ್ಮಾರಕಗಳಲ್ಲಿಯೋ, ವಸ್ತು ಸಂಗ್ರಹಾಲಯದಲ್ಲಿಯೋ ಇರುವುದು ಕಂಡು ಬರುತ್ತದೆ.[6] ಶೃಂಗೇರಿಯು ಸಹ ಪ್ರಾತಿನಿಧಿಕವಾದ ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿದ ತಾಲ್ಲೂಕಾಗಿದೆ.

ಶೃಂಗೇರಿಯ ಮೌಖಿಕ ಪರಂಪರೆ ಹಾಗೂ ಐತಿಹ್ಯಗಳನ್ನೊಳಗೊಂಡ ಹಿನ್ನೆಲೆ ಹೊಂದಿದೆ. ಒಂದು ಸತ್ಯ ಘಟನೆಯ ಸುತ್ತ ಹೆಣೆದಿರುವ ಕಥೆಗಳು ಹಾಗೂ ಅತಿಶಯೋಕ್ತಿಗಳನ್ನು ಇತಿಹಾಸಕಾರರು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಸತ್ಯಾಸತ್ಯತೆಯ ಬಗ್ಗೆ ಅರಿಯಬೇಕಾಗುತ್ತದೆ. ಇತಿಹಾಸಕಾರರು ನಿರ್ಣಯಿಸಿರುವಂತೆ ಕೆಲವು ಐತಿಹ್ಯದ ಆಧಾರದ ಮೇಲೆ ಸ್ಥಳ ಮಹಿಮೆ ಹಾಗೂ ಚರಿತ್ರೆಯನ್ನು ಗುರುತಿಸಲಾಗಿದೆ. ಬಾಲಕರಾದ ಶ್ರೀ ಶಂಕರರು ನದಿಯಲ್ಲಿ ಸ್ನಾನ ಮಾಡುವಾಗ ಮೊಸಳೆ ಅವರ ಕಾಲನ್ನು ಹಿಡಿಯುವುದು, ಸುವರ್ಣ ವೃಷ್ಟಿಯನ್ನು ಬರಿಸುವುದು, ಬಳಲಿದ ಕಪ್ಪೆಗೆ ಹಾವೊಂದು ಹೆಡೆ ಎತ್ತಿ ನೆರಳನ್ನು ನೀಡುತ್ತಿರುವುದು ಐತಿಹ್ಯವಾದರೂ ಇದೊಂದು ಪ್ರಾಚೀನಸಂಸ್ಕೃತಿಯ ಪ್ರಮುಖ ಲಕ್ಷಣವೆಂಬುದನ್ನು ಮರೆಯುವಂತಿಲ್ಲ. [7] ಶೃಂಗೇರಿಯ ಸಂಸ್ಕೃತಿಯ ಅಧ್ಯಯನದ ಸಂದರ್ಭದಲ್ಲಿ

ಇಂತಹ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಶೃಂಗೇರಿಯು ತನ್ನದೇ ಆದ ಸ್ಥಳ ಮಹಿಮೆಯನ್ನು ಹೊಂದಿದೆ. ಪುರಾಣ ಕಾಲದಿಂದಲೂ ಇದರ ಉಲ್ಲೇಖವಿರುವುದರಿಂದ ಇದರ ಇತಿಹಾಸವೇನೆಂಬುದು ಗೊತ್ತಾಗುತ್ತದೆ. ಋಷ್ಯಶೃಂಗ ಮುನಿಗಳ ತಪೋಭೂಮಿ ಇದು. ಸಹ್ಯಾದ್ರಿಯ ಮಡಿಲಿನ ನಿತ್ಯಹರಿದ್ವರ್ಣ ಕಾಡುಗಳ ರಮಣೀಯ ಹಾಗೂ ಪ್ರಶಾಂತವಾದ ಈ ಸುಂದರ ಭೂಮಿಯನ್ನು ಮುನಿಗಳು ಆಯ್ಕೆ ಮಾಡಿಕೊಳ್ಳುತ್ತಾರೆ. ಋಷ್ಯಶೃಂಗರ ತಂದೆ ವಿಭಾಂಡಕ ಮುನಿಗಳು ತಮ್ಮ ಆಶ್ರಮವನ್ನು ಸ್ಥಾಪಿಸುವುದರ ಮೂಲಕ ವೈದಿಕ ಮಾರ್ಗ ಪ್ರವರ್ತಕರಾಗಿದ್ದ ತಮ್ಮ ಮಗ ಋಷ್ಯಶೃಂಗರೇ ಈ ಮತವನ್ನು ಮುಂದುವರಿಸಿದವರಾಗಿದ್ದಾರೆ. ಋಷ್ಯಶೃಂಗರು ಉಗ್ರ ತಪಸ್ವಿಗಳು ಅವರ ಪಾದಸ್ಪರ್ಶದಿಂದ ಕ್ಷಾಮ ಮರೆಯಾಗಿ ಸುಭೀಕ್ಷೆ ಉಂಟಾಗುತ್ತದೆಂಬ ನಂಬಿಕೆಯಿತ್ತು. ರೋಮಪಾದನೆಂಬ ರಾಜನ ಆಡಳಿತ ಸಮಯದಲ್ಲಿ ಕ್ಷಾಮ ಬರಲಾಗಿ ಶ್ರೀ ಋಷ್ಯಶೃಂಗರ ಪಾದಸ್ಪರ್ಶದಿಂದ ಮಳೆ ಸುರಿದು ಸಂಪದ್ಭರಿತವಾಯಿತೆಂದು ತಿಳಿದುಬರುತ್ತದೆ. ಅವರ ಹೆಸರು ಮತ್ತು ಮಹಿಮೆಯಿಂದ ಈ ಊರಿಗೆ ಋಷ್ಯಶೃಂಗಪುರವೆಂದು ಹೆಸರು ಬಂದಿತೆಂದು ತಿಳಿದು ಬರುತ್ತದೆ. ಶೃಂಗೇರಿಯಿಂದ ಸುಮಾರು ಒಂಬತ್ತು ಕಿಲೋ ಮೀಟರ್ ದೂರದಲ್ಲಿರುವ ಕಿಗ್ಗ ಅಥವಾ ಋಷ್ಯಶೃಂಗಪುರದಲ್ಲಿ ಈಶ್ವರಲಿಂಗವಿರುವ ದೇವಾಲಯವಿದೆ. ಶಾಂತಾಋಷ್ಯಶೃಂಗರ ದೇವಾಲಯವಿದೆ. ಸ್ಥಳ ಮಹಿಮೆ ಹಾಗೂ ಇತಿಹಾಸವನ್ನು ತಿಳಿಯಲು ಅನುಕೂಲವಾಗುವಂತೆ ಈ ದೇವಾಲಯದಲ್ಲಿ ಅನೇಕ ಶಾಸನಗಳಿದ್ದು ಕ್ರಿ.ಶ. ಏಳನೆಯ ಶತಮಾನಕ್ಕೆ ಸೇರಿದ ಅತ್ಯಂತ ಪ್ರಮುಖ ಶಾಸನವೂ ಇಲ್ಲಿದೆ.[8]

ಶೃಂಗೇರಿಯ ಪ್ರಾಚೀನತೆ ಸ್ಥಳ ಮಹಿಮೆ ಹಾಗೂ ಋಷ್ಯಶೃಂಗಪುರದ ಮಹಿಮೆಯನ್ನು ಗಮನಿಸಿದಾಗ ಧರ್ಮ ಮತ್ತು ಸಂಸ್ಕೃತಿಯ ಪ್ರಧಾನವಾದ ಕೇಂದ್ರವಾಗಿ ಗೋಚರಿಸುತ್ತಿದೆ. ಇವುಗಳ ಪ್ರಭಾವಕ್ಕೆ ನಾಡಿನ ಜನರು ಒಳಗಾಗಿದ್ದು ದೇವಾಲಯದಲ್ಲಿ ಏನೇನು ನಡೆಯುತ್ತಿತ್ತೋ ಅದರಂತೆ ನಡೆದು ಅನುಸರಿಸಿಕೊಂಡು ಹೋಗುತ್ತಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಕಿಗ್ಗಾ ಹೋಬಳಿಯು ಕೊಪ್ಪ ತಾಲ್ಲೂಕಿಗೆ ಸೇರಿದ್ದು, ಶೃಂಗೇರಿಯ ಕಸಬಾ ಹೋಬಳಿ ಶ್ರೀಮಠದ ಜಹಗೀರಿನ ಒಳಗಿತ್ತು. ಸ್ವಾತಂತ್ರ್ಯ ಬಂದ ನಂತರವೂ ಜಹಗೀರು ಪದ್ಧತಿ ಮುಂದುವರಿದಿದ್ದು ಕ್ರಿ.ಶ. 1959ರಲ್ಲಿ ಇದು ರದ್ದಾಯಿತು.[9] ಈ ಕಾರಣದಿಂದಾಗಿ ಕಿಗ್ಗ ಹೋಬಳಿಯ ಜನರ ನಂಬಿಕೆ ಆಚಾರ-ವಿಚಾರ, ಮೊದಲಾದವುಗಳು ಕಸಬಾ ಹೋಬಳಿಯವರಿಗಿಂತ ಭಿನ್ನವಾಗಿದೆ. ಇದಕ್ಕೆ ಪ್ರಮುಖವಾದ ಕಾರಣ ಆಯಾ ಭಾಗದ ಪ್ರಭಾವಿ ದೇವತೆಗಳು ಹಾಗೂ ಅಲ್ಲಿಯ ಪದ್ಧತಿಗಳು ಅದರಂತೆಯೆ ಹೆಚ್ಚಿನವರು ನಡೆದುಕೊಂಡಿದ್ದಾರೆ. ಕಿಗ್ಗಾ ಹೋಬಳಿಯಲ್ಲಿ ತುಳಸಿಗಿಡವನ್ನು ಮನೆ ಮುಂದೆ ನೆಡುವುದಾಗಲಿ, ತುಳಸಿ ದೀಪಾಚರಣೆ ಮಾಡುವುದಾಗಲಿ ಇಲ್ಲ. ಕದಿರನ್ನು ತರುವ ಪದ್ಧತಿಯು ಕಸಬಾ ಹೋಬಳಿಗಿಂತ ಭಿನ್ನವಾಗಿದೆ. ಋಷ್ಯಶೃಂಗೇಶ್ವರ ದೇವಾಲಯದಲ್ಲಿ ಊರವರೆಲ್ಲರಿಗೂ ಒಂದು ದಿನ ಕದಿರನ್ನು

ವಿತರಿಸಲಾಗುತ್ತದೆ. ಈ ಸಮಯ ಸ್ಥಳೀಯ ಕದಿರು ಸಿಗುವುದಿಲ್ಲವಾದರೂ ದಕ್ಷಿಣ ಕನ್ನಡದಿಂದ ತರಿಸಿ ದೇವಾಲಯದಲ್ಲಿ ಪೂಜೆ ಇತ್ಯಾದಿಗಳನ್ನು ಮಾಡಿ ತರುವಾಯ ಭಕ್ತಾದಿಗಳಿಗೆ ಕದಿರನ್ನು ವಿತರಿಸಲಾಗುತ್ತಿದೆ. ಅವರು ಅದನ್ನು ತಂದು ತಮ್ಮ ಮನೆಯ ಬೆಂಕಟೆಗೆ, ಹೊಸಲಿಗೆ, ತೋರಣಕ್ಕೆ, ದವಸಮಂಟಪದ ಮುಂದೆ ಇತ್ಯಾದಿ ಪ್ರಮುಖ ಭಾಗಗಳಲ್ಲಿ ಕಟ್ಟಿ ಶೃಂಗರಿಸುತ್ತಾರೆ. ಕಸಬಾ ಹೋಬಳಿಯವರು ಅವರ ಮನೆಯ ಗದ್ದೆಯಲ್ಲಿ ಬಂದ ಕದಿರನ್ನು ಪೂಜೆ ಮಾಡಿ ಮನೆಗೆ ತಂದು ಪ್ರಮುಖ ಜಾಗದಲ್ಲಿ ಇಟ್ಟು ಪೂಜಿಸುತ್ತಾರೆ. ಇದಲ್ಲದೆ ಅನೇಕ ಪ್ರಮುಖ ಬದಲಾವಣೆಗಳನ್ನು ಗುರುತಿಸಲಾಗಿದೆ. ಕಿಗ್ಗಾದ ಋಷ್ಯಶೃಂಗೇಶ್ವರ ದೇವರ ರಥೋತ್ಸವದಂದು ಜಾತ್ರೆ ಹಬ್ಬವನ್ನು ಆಚರಿಸುತ್ತಾರೆ. ಕಸಬಾ ಹೋಬಳಿ ಹಾಗೂ ಇತರೆ ಭಾಗದ ನೆಂಟರಿಷ್ಟರು ಸಂಬಂಧಿಕರು ಹಾಗೂ ಸ್ನೇಹಿತರನ್ನು ಕರೆದು ಸಂಭ್ರಮ ಸಡಗರದಿಂದ ಆಚರಿಸುತ್ತಾರೆ. ಹಿಂದಿನ ರೀತಿ ರಿವಾಜು ಕ್ರಮಗಳು ಮರೆಯಾಗಿ ಆಧುನಿಕತೆಯ ಸ್ಪರ್ಶವಾಗಿರುವುದರಿಂದ ಪದ್ಧತಿ, ಆಚರಣೆ, ನಿಯಮ ಮೊದಲಾದವುಗಳು ಬದಲಾವಣೆಗೊಳ್ಳುತ್ತಿವೆ.[10]

ಶೃಂಗೇರಿ ಸುತ್ತಮುತ್ತಲ ಜನರ ಕೌಟುಂಬಿಕ ಜೀವನವಿಧಾನವು ಸುಸಂಸ್ಕೃತ ನೆಲೆಯ ತಳಪಾಯದಲ್ಲಿ ನಿಂತಿವೆ. ಇಲ್ಲಿ ಪ್ರಧಾನವಾಗಿ ಒಕ್ಕಲಿಗರು ಹಾಗೂ ಬ್ರಾಹ್ಮಣವರ್ಗದವರಿದ್ದು ಉಳಿದಂತೆ ಇತರೆ ಜಾತಿ ಜನಾಂಗದವರು ವಿರಳವಾಗಿದ್ದಾರೆ. ಸಾಂಸ್ಕೃತಿಕ ಆಚರಣೆಯಲ್ಲಿ ಬ್ರಾಹ್ಮಣವರ್ಗದವರ ಕ್ರಮ, ಇತರೆ ಜಾತಿಯವರ ಆಚರಣೆಯ ಕ್ರಮ, ಒಕ್ಕಲಿಗರ ಕ್ರಮಗಳನ್ನು ನೋಡಬಹುದಾಗಿದೆ. ಇತರೆ ಜಾತಿಯವರ ಆಚಾರ, ಕ್ರಮ, ವಿಧಿ–ವಿಧಾನಗಳು ಒಕ್ಕಲಿಗ ಜಾತಿಯವರಲ್ಲಿರುವಂತೆ ಸಾಮ್ಯತೆಗಳಿರುವುದು ಕಂಡುಬರುತ್ತದೆ. ನಾಡಿನ ಬೇರೆ ಬೇರೆ ಭಾಗದಿಂದ ಬಂದವರು ಆಯಾ ಪ್ರದೇಶದ ಹಿನ್ನೆಲೆ ಕ್ರಮಗಳನ್ನು ಇಲ್ಲಿಯ ಪರಿಸರಕ್ಕೆ ಹೊಂದಿಕೆಯಾಗುವಂತೆ ನಡೆಸುತ್ತಿದ್ದಾರೆ.

2.2 ಬ್ರಾಹ್ಮಣರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು :

9 ನೇ ಶತಮಾನದ ವೇಳೆ ಶಂಕರಾಚಾರ್ಯರು ಶೃಂಗೇರಿಯ ಶ್ರೀಮಠವನ್ನು ಸ್ಥಾಪಿಸಿದರು. ಶಂಕರರು ಶೃಂಗೇರಿಗೆ ಬರುವ ಮೊದಲೇ ಈ ಭಾಗದಲ್ಲಿ ವೈದಿಕ ಧರ್ಮ ಪ್ರಬುದ್ಧವಾಗಿದ್ದು ಬ್ರಾಹ್ಮಣರು ನೆಲೆಸಿದ್ದರು ಎಂಬುದು ಖಚಿತವಾಗಿದೆ. 15–16 ನೇ ಶತಮಾನದಲ್ಲಿ ಸ್ಮಾರ್ತ ಮಾಧ್ವಮತಗಳ ಘರ್ಷಣೆಯಾದಾಗ ಸ್ಮಾರ್ತರು ರಕ್ಷಣೆಗಾಗಿ ದಕ್ಷಿಣಕನ್ನಡದಿಂದ ಘಟ್ಟದ ಮೇಲೆ ವಲಸೆ ಬಂದು ಶೃಂಗೇರಿ ಶ್ರೀಮಠದ ಆಶ್ರಯದಲ್ಲಿ ನೆಲೆಸಿದರು.[11]

ಮಹಾಭಾರತದ ಮೋಕ್ಷಧರ್ಮದಲ್ಲಿ ಮೊದಲು ಎಲ್ಲರೂ ಬ್ರಾಹ್ಮಣರೇ ಆಗಿದ್ದರೂ ಕಾಲಕ್ರಮೇಣ ಬೇರೆ ಬೇರೆ ಕರ್ಮ, ಗುಣ ಸ್ವಭಾವಗಳಿಂದ ಪ್ರತ್ಯೇಕ ಗುಂಪುಗಳಾದವು ಎಂದಿದೆ. ಯಾರು ಸಾತ್ವಿಕರಾಗಿದ್ದು

ಸದಾಕಾಲ ಆಧ್ಯಾತ್ಮ ಚಿಂತನೆ ನಡೆಸುತ್ತಾ ಬ್ರಹ್ಮಜ್ಞಾನವನ್ನು ಪಡೆದು ಲೋಕಕಲ್ಯಾಣಕ್ಕಾಗಿ ಶ್ರೌತ ಸ್ಮಾರ್ತ ಕರ್ಮಗಳನ್ನು ಆಚರಿಸುತ್ತಾ ಜಪ ತಪ ಅನುಷ್ಠಾನ ನಿರತರಾಗಿ ಸಕಲರ ಹಿತ ಬಯಸುವವರು ಬ್ರಾಹ್ಮಣರೆಂದು ಗುರುತಿಸಲ್ಪಟ್ಟರು. ಉಳಿದ ಮೂರು ವರ್ಗದವರು ತಮ್ಮ ಗುಣ ಸ್ವಭಾವ ಮತ್ತು ಕರ್ಮಗಳಿಂದ ಪ್ರತ್ಯೇಕವಾಗಿ ಗುರುತಿಸಲ್ಪಟ್ಟರು.[12] ಹೀಗೆ ತಮ್ಮ ಗುಣ ಕರ್ಮಗಳವರೊಂದಿಗೆ ವಿವಾಹ ಸಂಬಂಧಗಳನ್ನೇರ್ಪಡಿಸಿಕೊಂಡು ಜಾತಿಗಳಾಗಿ ವಿಂಗಡಿಸಿಕೊಂಡರು. ಸಾತ್ವಿಕರು ಲೋಕ ಕಲ್ಯಾಣವನ್ನು ಬಯಸುವವರಾದರು. ಬ್ರಾಹ್ಮಣರು ಉಳಿದ ಮೂರು ವರ್ಣದವರ ಗೌರವಾದರಕ್ಕೆ ಪಾತ್ರರಾದರು. ಮೂಲತಃ ಬ್ರಾಹ್ಮಣರೆಲ್ಲರೂ ವೈದಿಕರೇ ಆಗಿದ್ದು, ಕಾಲಕ್ರಮೇಣ ಜೀವನೋಪಾಯಕ್ಕಾಗಿ ಬೇರೆ ಬೇರೆ ವೃತ್ತಿಗಳನ್ನವಲಂಬಿಸಿದ್ದರಿಂದ ವೈದಿಕ–ಲೌಕಿಕರೆಂಬ ಭೇದವನ್ನು ಕಾಣಲು ಸಾಧ್ಯವಾಯಿತು.[13]

ಕಾಲಾಂತರದ ಸನ್ನಿವೇಶಗಳಿಗೆ ಒಳಗಾಗಿ ವಲಸೆ ನಡೆದಿದ್ದು ಆಚಾರ ವಿಚಾರ ಶೈಲಿ ಭಾಷೆ ಮೊದಲಾದವುಗಳು ಭಿನ್ನವಾಗಿ ಪ್ರಾದೇಶಿಕತೆಯನ್ನು ಪಡೆಯಿತು. ಸಂಪರ್ಕಸಾಧನಗಳ ಅಲಭ್ಯದಿಂದಾಗಿ ಪ್ರತಿಯೊಂದು ಗುಂಪು ಪ್ರತ್ಯೇಕವೆಂದು ಗುರುತಿಸಲ್ಪಟ್ಟಿತು. ಹೀಗೆ ಕರ್ನಾಟಕದಲ್ಲಿ ಬೇರೆ ಬೇರೆ ಸ್ಥಳ, ಪರಿಸರದ ಹಿನ್ನಲೆಯಿಂದಾಗಿ ಅನೇಕ ಒಳಪಂಗಡಗಳನ್ನು ಕಾಣಬಹುದು. ಶೃಂಗೇರಿಯಲ್ಲೂ ಸಹ ಅನೇಕ ಒಳಪಂಗಡದ ಬ್ರಾಹ್ಮಣರಿದ್ದಾರೆ. ಪ್ರತಿಯೊಂದು ಪಂಗಡದ ಬ್ರಾಹ್ಮಣರಿಗೂ ಗುರುಮಠವಿದ್ದು, ಅದನ್ನು ನಂಬಿ ಅನುಸರಿಸುತ್ತಿದ್ದರು. ಶೈವಬ್ರಾಹ್ಮಣ, ಸ್ಮಾರ್ತರು, ಅರವೇಲು, ಕಮ್ಮೆ ಮೊದಲಾದ ಕುಲದವರಿಗೆ ಶೃಂಗೇರಿ ಮಠವು ಗುರುಮಠವಾಗಿದೆ. ಹಾಗೆಯೇ ಇತರೆ ಒಳಪಂಗಡದ ಬ್ರಾಹ್ಮಣರು ಹರಿಹರಪುರ, ಬಂಡಿಗಡಿ, ಶ್ರೀರಾಮಚಂದ್ರಾಪುರ, ಉಡುಪಿ, ಬಾಳೆಕುದ್ರು ಮೊದಲಾದ ಮಠದ ವ್ಯಾಪ್ತಿಗೆ ಬರುತ್ತಾರೆ.[14]

ಸ್ವಾತಂತ್ರ್ಯ ಪೂರ್ವದಲ್ಲಿನ ಸಾಮಾಜಿಕ ವ್ಯವಸ್ಥೆ:

ಒಂದು ಕುಟುಂಬದಲ್ಲಿ 3–4 ತಲೆಮಾರಿನವರು (ಮುತ್ತಜ್ಜಿಯಿಂದ ಹಿಡಿದು ಮರಿ ಮಗನವರೆಗೆ) ಒಂದೆ ಮನೆಯಲ್ಲಿ 30–40ಕ್ಕೂ ಹೆಚ್ಚು ಜನ ಒಟ್ಟಿಗೆ ವಾಸವಿರುತ್ತಿದ್ದರು. ಕುಟುಂಬದ ಹಿರಿಯ ಯಜಮಾನನಾಗಿರುತ್ತಿದ್ದರು. ಹಣಕಾಸು ವ್ಯವಹಾರ ವ್ಯಾಪಾರವಿನಿಮಯ, ಮಾರುವುದು– ಕೊಳ್ಳುವುದು, ಸಾಲ ಮೊದಲಾದವುಗಳು ಅವನ ಉಸ್ತುವಾರಿಯಲ್ಲಿ ಸಾಗುತ್ತಿತ್ತು. ಎಲ್ಲರು ಆತನನ್ನು ಅನುಸರಿಸುತ್ತಿದ್ದರು. ಅವನ ಅಪ್ಪಣೆಯನ್ನು ಮನೆಯ ಎಲ್ಲಾ ಸದಸ್ಯರು ವಿಧೇಯತೆಯಿಂದ ಅನುಸರಿಸುತ್ತಿದ್ದರು. ಚಿಕಿತ್ಸಾ ಸೌಲಭ್ಯಗಳಿಲ್ಲದೆ ಹೆರಿಗೆ ಸಮಯದಲ್ಲಿ ಗರ್ಭಿಣಿ ಮರಣ ಹೊಂದುವುದು, ಮಗು ಸಾಯುವುದು, ಬಾಣಂತಿಯ ಆರೈಕೆ ಸರಿಯಾಗದೆ ಸಾಯುವುದು ಸರ್ವೇಸಾಮಾನ್ಯವಾಗಿತ್ತು. ಗಂಡ ಮರಣ ಹೊಂದಿ ಹೆಂಡತಿ ವಿಧವೆಯಾಗಿರುವುದು ಸಾಮಾನ್ಯವಾಗಿತ್ತು. ಪ್ರತಿಯೊಂದು ಮನೆಯಲ್ಲಿ ಇಬ್ಬರು ಮೂವರು ವಿಧವೆಯರು ಇರುತ್ತಿದ್ದರು. ವಿಧವಾ ಮರುವಿವಾಹ ಪದ್ಧತಿ ಇಲ್ಲದಿದ್ದುದರಿಂದ ತನ್ನ

ಜೀವತಾವಧಿಯ ಕೊನೆಯವರೆಗೂ ಆಕೆ ಹಂಗಿನಲ್ಲಿಯೇ ಬದುಕಬೇಕಾಗಿತ್ತು. ಪುರುಷರು ಎರಡು ಮೂರು ಮದುವೆ ಮಾಡಿಕೊಳ್ಳುತ್ತಿದ್ದರು. ಶ್ರೀಮಂತರು ಉಪ ಪತ್ನಿಯರನ್ನು ಹೊಂದಿರುವುದು ಶ್ರೀಮಂತಿಕೆಯ ದ್ಯೋತಕವಾಗಿತ್ತು.

ಈಗಿನ ಕಾಲಸ್ಥಿತಿಗನುಗುಣವಾಗಿ ಎಲ್ಲಾ ವಿಭಕ್ತ ಕುಟುಂಬಗಳಾಗಿದ್ದು, ಒಂದು ಕುಟುಂಬವು ಗಂಡ, ಹೆಂಡತಿ ಹಾಗೂ ಒಂದು ಅಥವಾ ಎರಡು ಮಕ್ಕಳ ಸಂಸಾರ ಹೊಂದಿವೆ. ಮದುವೆಯಾದ ಕೂಡಲೆ ಪ್ರತ್ಯೇಕ ವಾಸದ ಹಂಬಲಹೊಂದಿ ಸ್ವತಂತ್ರ ವಾಗಿ ಬದುಕು ನಡೆಸುತ್ತಾರೆ. ಒಬ್ಬನೇ ಮಗನಿದ್ದರೂ ಆತ ತಂದೆ, ತಾಯಿಯಿಂದ ಪ್ರತ್ಯೇಕ ವಾಸವಿರುತ್ತಾನೆ. ಗಂಡಹೆಂಡತಿ ಇಬ್ಬರು ವಿದ್ಯಾವಂತರಾಗಿದ್ದು ಸ್ವತಂತ್ರ ಅಭಿವ್ಯಕ್ತಿಯುಳ್ಳವರಾಗಿದ್ದಾರೆ. ವಿಧುರರು ವಿಧವೆಯರು ಮರು ಮದುವೆಯಾಗಬಹುದು. ಉಪಪತ್ನಿಯರ ಹವ್ಯಾಸವಿಲ್ಲ. ಒಂದಕ್ಕಿಂತ ಹೆಚ್ಚಿನ ಮದುವೆಗೆ ಕಾನೂನಿನ ತೊಡಕಿದೆ.

ಸ್ವಾತಂತ್ರ್ಯೋತ್ತರ ಸ್ಥಿತಿ:

ಸ್ವಾತಂತ್ರ್ಯಾನಂತರದಲ್ಲಿ ಕೃಷಿ, ವಾಣಿಜ್ಯ ಬೆಳೆಗಳಿಗೆ ಬೇಡಿಕೆ, ಬೆಲೆ ಹೆಚ್ಚಾದಂತೆ ಅರ್ಥಿಕ ಸ್ಥಿತಿಗತಿಯೂ ಉತ್ತಮವಾಗುತ್ತಾ ಬಂದಿತು. ಶಾಲಾ ಕಾಲೇಜುಗಳೂ ಬಂದವು. ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳಿಸಿ ಇಂದು ದೇಶ ವಿದೇಶಗಳಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಶಿಕ್ಷಣ ನಾಗರೀಕತೆ ಬೆಳೆದಂತೆ ತಮ್ಮ ಹಕ್ಕು ಬಾಧ್ಯತೆಗಳ ಅರಿವು ಹಾಗೂ ಸ್ವತಂತ್ರವಾಗಿ ಬದುಕುವ ಹಂಬಲ ಹೆಚ್ಚಾಗಿ, ಅವಿಭಕ್ತ ಕುಟುಂಬಗಳೂ ವಿಭಕ್ತವಾಗುತ್ತಾ ಹೋಗಿವೆ. ಆಸ್ತಿಯೂ ಭಾಗವಾಗಿ ಆದಾಯದ ಕೊರತೆಯಾಗಿದೆ. ಸ್ತ್ರೀ ಶಿಕ್ಷಣದಿಂದ ಇಂದು ಹಳ್ಳಿಗಳಿಗೆ ಬರಲು ನಿರಾಕರಿಸುತ್ತಿದ್ದಾರೆ. ಆಧುನಿಕ ಸೌಲಭ್ಯಗಳು, ವಿದ್ಯುತ್, ಗ್ರೈಂಡರ್, ಮಿಕ್ಸಿ, ಫ್ರಿಜ್, ಟಿ.ವಿ, ವಾಹನ, ರಸ್ತೆ ಸೌಲಭ್ಯವಿದ್ದರೂ ಕೃಷಿಕರ ಮಕ್ಕಳಿಗೆ ಹೆಣ್ಣು ಸಿಗದೇ ಅನೇಕರು ಅವಿವಾಹಿತರಾಗಿರುವ ಸನ್ನಿವೇಶ ಬಂದಿದೆ. ಭೂಸುಧಾರಣಾ ಕಾಯಿದೆಯಿಂದ ಗೇಣಿದಾರರು ಭೂಮಾಲೀಕರಾಗಿದ್ದಾರೆ. ಇದರ ಜೊತೆಗೇ ಬಂದ ಅಡಿಕೆ ಹಳದಿ ಎಲೆ ರೋಗದಿಂದ ಅಡಿಕೆ ತೋಟಗಳು ನಾಶವಾಗಿರುವುದರಿಂದ ಕೊಪ್ಪ ತಾಲ್ಲೂಕಿನ ಮೇಗುಂದಾ ಹೋಬಳಿ, ಶೃಂಗೇರಿ ತಾಲ್ಲೂಕಿನ ಅನೇಕ ಕುಟುಂಬಗಳು ಪರ್ಯಾಯಮಾರ್ಗವಿಲ್ಲದೆ ಜೀವನ್ಮರಣ ಸ್ಥಿತಿಯಲ್ಲಿದ್ದಾರೆ. ಕೃಷಿ ಕಾರ್ಮಿಕರ ಅಭಾವ, ಬೆಳೆಗೆ ಸರಿಯಾದ ಬೆಲೆ ಇಲ್ಲದೆ ಪರಿತಪಿಸುವಂತಾಗಿದೆ. ಇದರಿಂದ ಬೇರೆ ಬೇರೆ ಉದ್ಯಮಗಳಿಗಾಗಿ ನಗರದತ್ತ ವಲಸೆ ಪ್ರಾರಂಭವಾಗಿದೆ. ಈಗಾಗಲೇ ಸುಮಾರು ಕುಟುಂಬಗಳು ನಗರಕ್ಕೆ ಹೋಗಿವೆ.

ಕಾಲಕ್ಕೆ ತಕ್ಕಂತೆ, ವೇಷ-ಭೂಷಣ, ಜೀವನಪದ್ಧತಿ, ಆಹಾರ, ಶಿಕ್ಷಣಗಳು ಇದ್ದರೂ ಮೂಲ ಸಂಸ್ಕೃತಿ, ಗುಣಸ್ವಭಾವಗಳಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಮಹಿಳೆಯರಲ್ಲೂ ಜಾಗೃತಿಯಾಗಿ ಆರ್ಥಿಕವಾಗಿ ಸ್ವಾವಲಂಬಿಗಳಾಗಿರಬೇಕೆಂಬ ಬಯಕೆಯಿಂದ ಇಂದು ಕೆಲವರು ಗೃಹೋದ್ಯಮದಿಂದ

(ಉಪಕಸುಬು) ಹಾಲುಮಾರಾಟ, ಚಿಪ್ಸ್ ಖಾರತಿಂಡಿ ತಯಾರಿಕೆ, ಹಪ್ಪಳ, ಹೋಲಿಗೆ, ಬತ್ತಿ, ಗೆಜ್ಜೆವಸ್ತ್ರ ತಯಾರುಮಾಡಿ ತಮ್ಮ ಆದಾಯಮಾಡಿಕೊಳ್ಳುತ್ತಿದ್ದಾರೆ. ಮಕ್ಕಳಿಗೆ ಉನ್ನತ ಶಿಕ್ಷಣ ನೀಡಲು ಪ್ರಯತ್ನಿಸುತ್ತಿದ್ದಾರೆ. ಕೃಷಿಕರಲ್ಲೂ ಗಂಡ ಹೆಂಡತಿ ಇಬ್ಬರೆ, ವಿಭಕ್ತ ಕುಟುಂಬಗಳೇ ಜಾಸ್ತಿ. ಹೆಂಚಿನ ಮನೆಗಳೆಲ್ಲಾ ಈಗ RCC, Tiles, Ceramics ಹಾಕಿದ ಮನೆಗಳಾಗುತ್ತಿವೆ. ಇಂದು ಹಳ್ಳಿಗಳಿಗೂ ಡಾಮರ್ ರಸ್ತೆ, ವಿದ್ಯುತ್, Phone, Mobile ಗಳಿವೆ. ಕೃಷಿ ಇಂದು ಯಾರಿಗೂ ಬೇಡವಾದ ಉದ್ಯೋಗವಾಗಿದೆ. ಹೆಣ್ಣು ಮಕ್ಕಳಿಗೂ ತಾನು ತನ್ನ ಗಂಡ ಸ್ವಚ್ಛಂದವಾಗಿ ಬದುಕಬೇಕು, ಅತ್ತೆ ಮಾವ ಯಾರೂ ಇರಬಾರದು, ಎಂಬ ಕಲ್ಪನೆಯಲ್ಲಿದ್ದಾರೆ. ತಾವೂ ನಾಳೆ ಮುದುಕರಾಗುತ್ತೇವೆಂಬ ಪರಿಜ್ಞಾನವೇ ಇಲ್ಲವಾಗಿದೆ.

ಹಿಂದಿನ ಅತಿರೇಕದ ಮಡಿ, ಮೈಲಿಗೆ, ಆಚಾರ ಸಂಪ್ರದಾಯಗಳ ಅರಿವು, ಆಚರಣೆ ಕಡಿಮೆಯಾದರೂ ಕನಿಷ್ಠ ಮಟ್ಟದಲ್ಲಿ ಆಚರಣೆ ಇದೆ. ವ್ರತ– ಕಥೆಗಳು, ನವರಾತ್ರಿ, ಸರಳವಾಗಿ ಆಚರಣೆ ಇದೆ. ಹಿಂದಿನಿಂದ ನಡೆದು ಬಂದಿದ್ದನ್ನು ಯಾರೂ ಬಿಟ್ಟಿಲ್ಲ. ಆಡಂಬರ, ಅದ್ದೂರಿ, ನೂರಾರು ಜನರ ಸಂತರ್ಪಣೆ ಕಡಿಮೆಯಾಗಿದೆ.

ವಿಧವೆಯರ ಸ್ಥಾನ:

ವಿಧವೆಯರಿಗೆ ಕೇಶಮುಂಡನ ಮಾಡಿ, ಕೆಂಪು ಸೀರೆಯನ್ನು ಉಡಿಸುತ್ತಿದ್ದರು. ರವಿಕೆಯನ್ನು ಹಾಕುವಂತಿರಲ್ಲಿಲ್ಲ ಮಣ್ಣಿನ ಬಳೆ ಹಾಕುವಂತಿಲ್ಲ, ಬೆಳಿಗ್ಗೆ ಸಂಜೆ ಉಪಾಹಾರ ಮಾಡಬೇಕು, ಮಧ್ಯಾಹ್ನ ಒಂದು ಹೊತ್ತು ಮಾತ್ರ ಊಟ. ಧಾರ್ಮಿಕ ಹಾಗೂ ಮಂಗಳಕರ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಿರಲಿಲ್ಲ, ಆದರೆ ಶ್ರಾದ್ಧದ ಅಡುಗೆ ವಿಧವೆಯರು ಮಾಡಿದರೆ ಶ್ರೇಷ್ಠವೆಂಬ ಪ್ರತೀತಿ ಇತ್ತು. ವಿಧವೆಯರು ಮಕ್ಕಳಿಲ್ಲದವರಾಗಿದ್ದರಂತೂ ಕುಟುಂಬದಲ್ಲಿ ಎಲ್ಲರಿಂದಲೂ ಉಪೇಕ್ಷೆಗೆ ಒಳಗಾಗಿ ಬದುಕಬೇಕಾಗಿದ್ದಿತ್ತು. ಆಕೆಯನ್ನು ಒಂದು 'ಪ್ರಾಣಿ' ಎಂದು ಸಂಬೋಧಿಸುತ್ತಿದ್ದರು. ಅನಾಥ ಬಡವಿಧವೆಯರನ್ನು ಜೀವನಕ್ಕೆ ಆಶ್ರಯ ನೀಡುವುದಾಗಿ ಭರವಸೆ ನೀಡಿ ತಮ್ಮ ಇಂದ್ರಿಯ ಚಾಪಲ್ಯಕ್ಕೆ ಬಳಸಿಕೊಂಡು, ಗರ್ಭಿಣಿಯಾದ ನಂತರ 'ಘಟಸ್ಫೋಟ' ಅಥವಾ 'ಘಟಶ್ರಾದ್ಧ' ವಿಧಿ ನಡೆಸಿ ಸಮಾಜದಿಂದ ಅವರನ್ನು, ಅವರ ಮಕ್ಕಳನ್ನು ಬಹಿಷ್ಕಾರ ಮಾಡುತ್ತಿದ್ದರು. ಕೆಲಕಾಲ ಅನುಭವಿಸಿ ಸಾಕೆನಿಸಿದಾಗ ಅವರನ್ನು ತ್ಯಜಿಸುವುದು, ಅವರು ಇನ್ನೊಬ್ಬ ಶ್ರೀಮಂತರನ್ನು ಆಶ್ರಯಿಸುವುದು ಸಾಮಾನ್ಯವಾಗಿತ್ತು. ಇದು ಬ್ರಾಹ್ಮಣ ಹಾಗೂ ಬ್ರಾಹ್ಮಣೇತರರಲ್ಲೂ ಇದ್ದಿತ್ತು.

ಇಂದು ವಿಧವೆಯರಿಗೆ ಕೇಶ ಮುಂಡನವಿಲ್ಲ, ಕೆಂಪು ಸೀರೆ ಉಡುವುದಿಲ್ಲ ಎಲ್ಲಾ ಸುಮಂಗಲಿಯರಂತೆ, ಬಳೆ, ಸರ, ಓಲೆ ಧರಿಸಿ ಹೂಮುಡಿಯುತ್ತಾರೆ. ಮಂಗಳ ಕಾರ್ಯದಲ್ಲಿ, ಮಂಟಪದ ಕೆಲಸದಲ್ಲಿ ಭಾಗವಹಿಸುವುದಿಲ್ಲ ಈಗ ಈಕೆಯನ್ನು ಕೀಳಾಗಿ ಕಾಣುವುದಿಲ್ಲ.

ಮರುವಿವಾಹವಾಗುವ ಸಾಧ್ಯತೆಯಿದೆ. ಮರುವಿವಾಹ ವಾಗಬಾರದೆಂದೇನೂ ಇಲ್ಲ. ಬ್ರಾಹ್ಮಣವರ್ಗದಲ್ಲಿ ಹುಡುಗಿಯರ ಸಂಖ್ಯೆ ಕಡಿಮೆಯಿರುವುದರಿಂದ ಹಾಗೂ ಶೃಂಗೇರಿಯ ಸುತ್ತಮುತ್ತಲ ಹೆಣ್ಣು ಮಕ್ಕಳು ನಗರ ಪ್ರದೇಶಕ್ಕೆ ಹೋಗಬೇಕೆಂಬ ಹಂಬಲದಿಂದ ಹಳ್ಳಿಮನೆಯಲ್ಲಿ ವಾಸಿಸುವ ಹುಡುಗರಿಗೆ ಹೆಣ್ಣುಸಿಗುವುದು ಕಷ್ಟವಾಗಿದೆ. ಈ ಹಿನ್ನೆಲೆಯಿಂದಲೂ ವಿಧವಾ ಮರುವಿವಾಹಕ್ಕೆ ಉತ್ತೇಜನ ಸಿಗುತ್ತಿದೆ. ಹಿಂದೆಯೂ ವಿಧುರ ವಿವಾಹ ನಡೆಯುತ್ತಿತ್ತು. ಈಗಲೂ ವಿವಾಹ ನಡೆಯುತ್ತದೆ.

ವರದಕ್ಷಿಣೆ/ವರೋಪಚಾರ: ಹಿಂದೆ ವರದಕ್ಷಿಣೆಯಿರಲಿಲ್ಲ ಹೆಣ್ಣಿನ ಮನೆಯವರು ಆರ್ಥಿಕವಾಗಿ ಸಶಕ್ತರಾಗಿಲ್ಲದಿದ್ದಲ್ಲಿ ಗಂಡಿನ ಕಡೆಯವರೇ ಸಹಕರಿಸುತ್ತಿದ್ದರು. ಇತರೆ ಜಾತಿಯವರಲ್ಲಿ ಈಗ ವರದಕ್ಷಿಣೆ ಕೊಡಲೇಬೇಕಾಗಿದೆ ಇಲ್ಲದಿದ್ದರೆ ಮದುವೆಯೇ ಇಲ್ಲ. ವರದಕ್ಷಿಣೆಯ ರೂಪದಲ್ಲಿ ಸೈಟು, ಮನೆ, ಜಮೀನು, ಒಡವೆ ಇತ್ಯಾದಿ. ಇಂದೊಂದು ಸಾಮಾಜಿಕ ಪಿಡುಗಾಗಿರುವುದರಿಂದ ಸರ್ಕಾರ ಕಠಿಣ ಕ್ರಮ ಕೈಗೊಂಡು ವರದಕ್ಷಿಣೆ ಕೇಳುವುದು ಅಪರಾಧವೆಂದಾಗಿದೆ. ತಪ್ಪಿತಸ್ಥರಿಗೆ ಕಾನೂನಿನ ರೀತಿ ಸೂಕ್ತ ಕ್ರಮ ಜರುಗಿಸುತ್ತಾರೆ.

ಆಹಾರ:

ಮಕ್ಕಳಿಗೆ ಬೆಳಿಗ್ಗೆ ಗಂಜಿ ಊಟ ಅಥವಾ ಹಿಂದಿನ ದಿನದ ಅನ್ನಕ್ಕೆ ಮಜ್ಜಿಗೆಯೊಡನೆ ಕಲಿಸಿ ಒಲೆಯಲ್ಲಿ ಕಲ್ಲನ್ನು ಕೆಂಪಗೆಕಾಯಿಸಿ ಅದನ್ನು ಅನ್ನದೊಂದಿಗೆ ಸೇರಿಸಿ ಬಿಸಿ ಮಾಡಿ ಸೇವಿಸುತ್ತಿದ್ದರು. ಪುರುಷರು– ಮಹಿಳೆಯರಿಗೆ, ದೋಸೆ, ರೊಟ್ಟಿ, ಉಪ್ಪಿಟ್ಟು, ಅರಳು, ಅವಲಕ್ಕಿ ಇತ್ಯಾದಿ. ಮಧ್ಯಾಹ್ನ ಮಡಿಯಲ್ಲಿ ಅಡುಗೆ, ದೇವರ ನೈವೇದ್ಯವಾದ ನಂತರ ಊಟ. ಸಂಜೆ, ಸಂಧ್ಯಾವಂದನೆ ದೇವರಿಗೆ ಹಾಲು ನೈವೇದ್ಯ ಭಜನೆ, ಸ್ತೋತ್ರ ಪಠಣ ನಂತರ ಊಟ. ಎಲ್ಲರಿಗೂ ಬಡಿಸಿ ನಂತರ ಗೃಹಿಣಿಯ ಊಟ. ಸ್ಥಳೀಯವಾಗಿ ಸಿಗುವ ಸೊಪ್ಪು, ತರಕಾರಿಗಳ ಉಪಯೋಗ ತಂಬುಳಿ, ಸಾಸಿವೆ, ಹುಳಿ, ಸಾರು, ಚಟ್ನಿ, ಗೊಜ್ಜು ಮೊದಲಾದವುಗಳನ್ನು ತಯಾರಿಸುತ್ತಿದ್ದರು.

ವಿಶೇಷ ಊಟವೆಂದರೆ ಹಬ್ಬ, ಹುಣ್ಣಿಮೆ, ವ್ರತ, ಶ್ರಾದ್ಧ, ಶುಭಸಮಾರಂಭಗಳಲ್ಲಿ ಮಾತ್ರ, ಭಕ್ಷ್ಯ ಬ್ರಾಹ್ಮಣರಲ್ಲಿ ಒಬ್ಬಟ್ಟು, ಹೋಳಿಗೆ, ಅತಿರಸ ಇತ್ಯಾದಿ ಬೆಲ್ಲಹಾಕಿದ ತಿಂಡಿಗಳು ಮಾತ್ರ, ಇತರೆ ಜಾತಿಯವರು ಖಾರ ಹುಳಿಯಿರುವ ತರಹಾವರಿ ಭಕ್ಷ್ಯಗಳನ್ನು ತಿನ್ನುತ್ತಿದ್ದರು. ಪಾನೀಯ: ಅರಳ ಹಿಟ್ಟಿನ ಪಾನಕ, ರಾಗಿ ತಿರುವಿದ್ದು, ಅಕ್ಕಚ್ಚು (ಅಕ್ಕಿ ತೊಳೆದನೀರು + ಬೆಲ್ಲ) ಬೆಲ್ಲದ ಪಾನಕ, ಹೆಸರು ತಿರುವಿ ಬೆಲ್ಲ ಸೇರಿಸಿದ ಪಾನಕ, ಮೆಣಸಿನ ಕಾಳು, ಜೀರಿಗೆ, ಕೊತ್ತಂಬ್ರಿ ಕಷಾಯಗಳು, ದೊಡ್ಡವರಿಗೆ ಬೆಲ್ಲ ಹಾಕಿದ ಕಾಫಿ ಸೇವಿಸುತ್ತಿದ್ದರು.

ಈಗಿನ ಆಹಾರ ಪದ್ಧತಿಯಲ್ಲಿ ಬದಲಾವಣೆಗಳಾಗಿದ್ದು ಬೆಳಿಗ್ಗೆ ಇಡ್ಲಿ, ದೋಸೆ, ಉಪ್ಪಿಟ್ಟು ಮೊದಲಾದ ತಿಂಡಿಗಳು, ಮ್ಯಾಗಿ ಮೊದಲಾದ ಫಾಸ್ಟ್‌ಫುಡ್‌ಗಳನ್ನು ಉಪಯೋಗಿಸುತ್ತಾರೆ. ಗಂಜಿ ಊಟಮಾಡುವವರು ತೀರಾ ಕಡಿಮೆಯಿದ್ದಾರೆ, ಇದ್ದರೂ ವಯಸ್ಕರು ಮಾತ್ರ ಉಪಯೋಗಿಸುತ್ತಾರೆ. ಕೆಲವು ಕುಟುಂಬದಲ್ಲಿ ಮಾತ್ರ ದೇವರಿಗೆ ನೈವೇದ್ಯ ಮಾಡಿ ಸಂಪ್ರದಾಯದಂತೆ ಭೋಜನ ಮಾಡುತ್ತಾರೆ. ಬಹುತೇಕರು ಸಂಪ್ರದಾಯವನ್ನು ಮೀರಿ ಟೇಬಲ್ ಮೇಲೆ, ಟಿವಿ ಮುಂದೆ ಓಡಾಡಿಕೊಂಡು ಊಟಮಾಡುತ್ತಾರೆ, ಸಹಭೋಜನ ಕಡಿಮೆಯಾಗಿದೆ. ಈಗ ಜಾತಿ ವ್ಯವಸ್ಥೆಯ ತಾರತಮ್ಯ ಅಷ್ಟಾಗಿ ಇಲ್ಲದಿರುವುದರಿಂದ ಯಾರು ಯಾರೊಂದಿಗೆ ಎಲ್ಲಿ ಬೇಕಾದರೂ ಒಟ್ಟಿಗೆ ಓಡಾಡುವುದು, ಊಟ ತಿಂಡಿ ಮಾಡುವುದು ಕಂಡು ಬರುತ್ತಿದೆ. ಹಳ್ಳಿಗಳಲ್ಲಿ ಹಿಂದಿನಂತೆ ಮುಂದುವರಿದುಕೊಂಡು ಬಂದಿದೆ. ಆದರೂ ಹಿರಿಯರು ಹೆಚ್ಚಿನ ಆಸಕ್ತಿಯಿಂದ ಮುಂದುವರಿಸುತ್ತಿದ್ದಾರೆ, ಯುವ ಜನಾಂಗದವರು ತೀರಾ ಕಡಿಮೆ ಆಸಕ್ತಿ ತೋರುತ್ತಿದ್ದಾರೆ. ಈಗ ಗಂಡ, ಹೆಂಡತಿ, ಮಕ್ಕಳು ಹಾಗೂ ಮನೆಯವರೆಲ್ಲರೂ ಒಟ್ಟಿಗೆ ಬಡಿಸಿಕೊಂಡು ಊಟಮಾಡುವುದು ಅಥವಾ ತಮ್ಮ ಅನುಕೂಲತೆಯಂತೆ ಅವರಿಷ್ಟದಂತೆ ಊಟಮಾಡುವುದನ್ನು ಕಾಣುತ್ತೇವೆ.

ಸ್ಥಳೀಯ ಸೊಪ್ಪು ತರಕಾರಿಗಳನ್ನು ಬಳಸದೆ ಹಾಗೂ ಹಿಂದೆ ಬೆಳೆಯುತ್ತಿದ್ದವರು ಬೆಳೆಯದೆ, ಹೊರಭಾಗದಿಂದ ಬಂದ ತರಕಾರಿ ಸೊಪ್ಪನ್ನು ಮಾರುಕಟ್ಟೆಯಿಂದ ಕೊಂಡು ತಿನ್ನುತ್ತಾರೆ. ಈಗ ನೆಂಟರು ಮನೆಗೆ ಬಂದರೆ ಅಥವಾ ತಿನ್ನಬೇಕೆನಿಸಿದಾಗ ತಮಗೆ ಇಷ್ಟವಾದ ಭಕ್ಷ್ಯ, ತಿಂಡಿ–ತೀರ್ಥಗಳನ್ನು ಸ್ವೀಕರಿಸುತ್ತಾರೆ. ಇಂತಿಂಥ ಹಬ್ಬಗಳಿಗೆ ಇಂತಹುದೇ ಭಕ್ಷ್ಯವನ್ನು ಮಾಡಬೇಕೆಂಬ ಪದ್ಧತಿಯಂತೆ ಅನಿವಾರ್ಯವಾಗಿ ಮಾಡಿ ತಿನ್ನುತ್ತಿದ್ದವರು ಕಾಲಘಟ್ಟದ ಪರಿವರ್ತನೆಯಿಂದಾಗಿ ಸಂಪ್ರದಾಯದ ಭಕ್ಷ್ಯದ ಹೊರತಾಗಿ ಅತ್ಯಾಧುನಿಕ ರೆಡಿಮೇಡ್ ತಿಂಡಿಗಳನ್ನು ತಿನ್ನುತ್ತಾರೆ. ಸ್ಲೈಸ್, ಬಾಟಲ್ ಜ್ಯೂಸ್, ಎಸೆನ್ಸ್ ಮೊದಲಾದವುಗಳು ಬಳಕೆಯಲ್ಲಿವೆ. ವಿಧವೆಯರು ಲಘು ಉಪಾಹಾರಮಾಡಿ ಒಂದು ಹೊತ್ತಿನ ಊಟ ಕ್ರಮ ಬದಲಾವಣೆಯಾಗಿದ್ದು ಇತರೆ ಸ್ತ್ರೀಯರಂತೆ ಆಹಾರ–ವೇಷ ಭೂಷಣವನ್ನು ಹೊಂದಿದ್ದಾರೆ.

ವಿಶೇಷ ಕಾರ್ಯಕ್ರಮ, ಮಂಗಳಕರ ಕಾರ್ಯದಲ್ಲಿ ಬಂಧುಗಳ ಸಹಕಾರದಿಂದ ವಿಶಿಷ್ಟ ಭೋಜನ ಹಾಗೂ ಕಾರ್ಯಕ್ರಮ ಜರುಗುತ್ತಿತ್ತು. ಶುಭ ಕಾರ್ಯಕ್ರಮಕ್ಕೆ ಒಂದು ವಾರವಿರುವಾಗಲೆ ಬಂಧುಗಳು ಬರುತ್ತಿದ್ದರು. ಅಂದಿನಿಂದಲೆ ಭತ್ತ ಕುಟ್ಟಿ ಅವಲಕ್ಕಿ ಮಾಡುತ್ತಿದ್ದರು. ಅರಳನ್ನು ಮಾಡುತ್ತಿದ್ದರು. ಅರಳ ಹಿಟ್ಟು, ಉಂಡೆ, ಹಪ್ಪಳ, ಸಂಡಿಗೆ ತಯಾರಿಸುತ್ತಿದ್ದರು. ಹೆಚ್ಚಾಗಿ ಒಬ್ಬಟ್ಟು, ಹೋಳಿಗೆ, ಅತಿರಸ, ಅಂಬೊಡೆ, ಸುಕ್ಕನುಂಡೆ, ರವೆಯುಂಡೆ ಮೊದಲಾದವುಗಳನ್ನು ತಯಾರಿಸುತ್ತಿದ್ದರು.

ಹಬ್ಬಹರಿದಿನಗಳು:

ಪ್ರತಿ ಸಂವತ್ಸರದ ಪ್ರತಿ ಮಾಸದಲ್ಲೂ ಸಾಂಪ್ರದಾಯಿಕವಾಗಿ ಆಚರಿಸಲೇಬೇಕಾದ ಹಬ್ಬಹರಿದಿನಗಳು ಸಂಸ್ಕೃತಿಯ ಪ್ರತೀಕವಾಗಿ ಬ್ರಾಹ್ಮಣರಲ್ಲಿ ಬೆಳೆದು ಬಂದಿದೆ. ಬ್ರಾಹ್ಮಣ ವರ್ಗದ ಎಲ್ಲ ಪಂಗಡದವರೂ ಆಚರಿಸುವ ಈ ಹಬ್ಬಗಳಲ್ಲಿ ಸಮಾನ ಆಚರಣೆಗಳಿರುತ್ತವೆ. ಕೆಲವೊಮ್ಮೆ ಆಯಾ ಪ್ರದೇಶದ ಪದ್ಧತಿಗಳಿಗನುಗುಣವಾಗಿ ಕೆಲವು ಪ್ರದೇಶನಿಷ್ಠ ಜಾನಪದೀಯ ಅಂಶಗಳನ್ನು ಅಳವಡಿಸಿಕೊಂಡಿರುತ್ತಾರೆ. ಸಾಂಪ್ರದಾಯಿಕವಾದ ಈ ಹಬ್ಬಗಳ ಆಚರಣೆಗಳಲ್ಲಿ ಪೌರಾಣಿಕ ಹಿನ್ನೆಲೆಗಳಿರುವಂತೆಯೇ, ಕೌಟುಂಬಿಕ ಪದ್ಧತಿಗಳೂ ಹಾಸು ಹೊಕ್ಕಾಗಿವೆ. ಹಬ್ಬಗಳ ಮುಖೇನ ಇಷ್ಟ ದೇವತಾಚರಣೆಗಳನ್ನು ಶ್ರದ್ಧಾಭಕ್ತಿಯಿಂದ ನಡೆಸುವುದರಿಂದ ವರ್ಷವಿಡೀ ತಮಗೆ ಮಂಗಳವಾಗುತ್ತದೆಂದು, ಆ ಮುಖೇನ ಪುಣ್ಯಫಲ ಲಭ್ಯವಾಗುತ್ತದೆಂಬ ನಂಬಿಕೆಯೂ ಬ್ರಾಹ್ಮಣರಿಗಿದೆ. ಹಬ್ಬ ಆಚರಿಸಲಾರದ ಪರಿಸ್ಥಿತಿ ಒದಗಿದಾಗ ವೈರಾಗ್ಯಭಾವ ಉಂಟಾಗುತ್ತದೆ. ಹೀಗಾಗಿ ಹಬ್ಬಗಳ ಆಚರಣೆಯನ್ನು ಮೈಲಿಗೆಯ, ಸೂತಕದ ಸಂದರ್ಭಗಳನ್ನು ಬಿಟ್ಟು ಬೇರೆಲ್ಲಾ ಸಂದರ್ಭಗಳಲ್ಲೂ ವಿಧಿವತ್ತಾಗಿ ಆಚರಿಸುತ್ತಾರೆ. ಬ್ರಾಹ್ಮಣರು ಚೈತ್ರದಿಂದ ಫಾಲ್ಗುಣ ಮಾಸದವರೆಗೆ ಈ ಕೆಳಗಿನ ಹಬ್ಬ ಹಾಗೂ ವ್ರತ-ಕಥೆಗಳನ್ನು ನಡೆಸುತ್ತಾರೆ.

1. ಚೈತ್ರ– ಚಾಂದ್ರಮಾನ ಯುಗಾದಿ, ರಾಮನವಮಿ.
2. ವೈಶಾಖ– ಅಕ್ಷಯತದಿಗೆ, ಶಂಕರ ಜಯಂತಿ, ವ್ಯಾಸಪೂರ್ಣಿಮ.
3. ಜ್ಯೇಷ್ಠ–ಕಾರುಹುಣ್ಣಿಮೆ.
4. ಆಷಾಢ– ಭೀಮೇಶ್ವರ ವ್ರತ, ಅಮಾವಾಸ್ಯೆ ವ್ರತ.
5. ಶ್ರಾವಣ–ವರಮಹಾಲಕ್ಷ್ಮೀ, ಉಪಾಕರ್ಮ, ಮಂಗಳಗೌರಿ,
   ಗೋಕುಲಾಷ್ಟಮಿ, ಶಿರಿಯಾಳ ಷಷ್ಠಿ
6. ಭಾದ್ರಪದ–ಗೌರಿ ಗಣಪತಿ, ಅನಂತವ್ರತ, ಮಹಾಲಯ ಅಮಾವಾಸ್ಯೆ.
7. ಆಶ್ವೀಜ– ಶರನ್ನವರಾತ್ರಿ, ದುರ್ಗಾಷ್ಟಮಿ, ಮಹಾನವಮಿ, ವಿಜಯದಶಮಿ,
   ನೀರು ತುಂಬುವ ಹಬ್ಬ, ನರಕಚತುರ್ದಶಿ.
8. ಕಾರ್ತಿಕ –ಬಲಿಪಾಡ್ಯಮಿ
9. ಮಾರ್ಗಶಿರ–ಹೊಸ್ತಿಲ ಹುಣ್ಣಿಮೆ.
10 ಪುಷ್ಯ–ಬನದ ಹುಣ್ಣಿಮೆ, ಸಂಕ್ರಾಂತಿ.
11. ಮಾಘ– ರಥಸಪ್ತಮಿ, ಶಿವರಾತ್ರಿ
12. ಫಾಲ್ಗುಣ– ಹೋಳಿ.

ಪಾಡ್ಯ-ಯುಗಾದಿ ಪಾಡ್ಯ: ಈ ಹಬ್ಬ ಚೈತ್ರ ಶುಕ್ಲ ಪಾಡ್ಯದ ದಿನ ಆಚರಿಸಲ್ಪಡುತ್ತದೆ. ಬೇವು-ಬೆಲ್ಲ ಹಂಚಿ ತಿನ್ನುವುದು ಇಲ್ಲಿ ಬಹುಮುಖ್ಯ. ಆ ದಿನ ಹೊಸ ಬಟ್ಟೆ ಧರಿಸಿ ದೇವತಾ ಪೂಜೆಯನ್ನು ಆಚರಿಸುತ್ತಾರೆ. ಪಂಚಾಂಗ ಪೂಜೆ ಮತ್ತು ಪಂಚಾಂಗ ಶ್ರವಣ ಮಾಡಿ ರಾಶಿಫಲವನ್ನು ತಿಳಿಯುತ್ತಾರೆ. ಬಿದಿಗೆ ಚಂದ್ರದರ್ಶನದಿಂದ ಯಾವ ಅಪವಾದವೂ ಬರುವುದಿಲ್ಲವೆಂಬ ನಂಬಿಕೆ ಇದೆ. ಬೇವು ಬೆಲ್ಲವನ್ನು ತಿನ್ನುವಾಗ "ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯಚ ಸರ್ವಾರಿಷ್ಟ ವಿನಾಶಾಯ ನಿಂಬಕದಳ ಭಕ್ಷಣಂ" ಈ ಶ್ಲೋಕವನ್ನು ಹೇಳುತ್ತಾರೆ.

ಬಿದಿಗೆ-ಭಾವನ ಬಿದಿಗೆ: ದೀಪಾವಳಿಯ ಐದು ದಿನಗಳ ಹಬ್ಬಗಳಲ್ಲಿ ಇದು ಒಂದು ದಿನದ ಹಬ್ಬ. ಅಕ್ಕ-ತಂಗಿಯರ ಮನೆಗೆ ಹೋಗಿ ಅವರಿಗೆ ಉಡುಗೊರೆ ನೀಡಿ ಶುಭ ಹಾರೈಸುತ್ತಾರೆ. ಹಿರಿಯರಿಂದ ಆಶೀರ್ವಾದ ಪಡೆಯುತ್ತಾರೆ. ಈ ಆಚರಣೆ ಹಿಂದಿನ ಪೌರಾಣಿಕ ಸಂದರ್ಭ ನರಕದ ಅಧಿಪತಿಯಾದ ಯಮನು ತನ್ನ ಸಹೋದರಿ ಯಮಿಯ ಮನೆಗೆ ತೆರಳಿ ಉಡುಗೊರೆ ಕೊಟ್ಟು ಆಶೀರ್ವದಿಸಿದ್ದರಿಂದ ಯಮಿ ನಿತ್ಯ ಸುಖಿಯಾಗಿದ್ದಳು ಎಂಬುದು.

ತದಿಗೆ-ಅಕ್ಷಯ ತದಿಗೆ: ವೈಶಾಖ ಶುಕ್ಲ ತೃತೀಯೆ ಎಂದು ಇದನ್ನು ಆಚರಿಸಲಾಗುತ್ತದೆ. ಈ ದಿನ ಪುಣ್ಯಕರ್ಮ ಮಾಡಿದರೆ ಅದಕ್ಕೆ ಅನಂತವಾದ ಫಲ ಪ್ರಾಪ್ತಿ. ಹೀಗಾಗಿ ಸುಮಂಗಲೆಯರು ಹಲವು ಪೂಜಾ ಮತ್ತು ವ್ರತಗಳನ್ನು ಆಚರಿಸುತ್ತಾರೆ.

ಚೌತಿ-ವಿನಾಯಕ ಚೌತಿ: ಇದು ಸಾಮಾನ್ಯ ಎಲ್ಲ ವರ್ಗಗಳಲ್ಲಿಯೂ ಆಚರಿಸುವ ರಾಷ್ಟ್ರೀಯ ಹಬ್ಬ. ಇದರ ಹಿಂದಿನ ದಿನ ಗೌರಿಯ ಆರಾಧನೆಯು ಬ್ರಾಹ್ಮಣರಲ್ಲಿದೆ. ವಿನಾಯಕ ವ್ರತ ಹಾಗೂ ಗೌರಿಯ ವ್ರತ, ಪುರುಷರಿಗೆ, ಸ್ತ್ರೀಯರಿಗೆ ಬಹು ಒಳಿತನ್ನು ಮಾಡುತ್ತದೆಂದು ನಂಬಿ ಶ್ರದ್ಧಾ-ಭಕ್ತಿಗಳಿಂದ ಆಚರಿಸುತ್ತಾರೆ. ಈ ದಿನ ಮಂಗಳ ಗೌರಿ ಬಾಗಿನಗಳನ್ನು ಮುತ್ತೈದೆಯರಿಗೆ ನೀಡುತ್ತಾರೆ. ಈ ಸಂದರ್ಭದಲ್ಲಿ ತೌರುಮನೆಯಿಂದ ಮಂಗಳ ದ್ರವ್ಯಗಳನ್ನು ಕಳಿಸಿಕೊಡುತ್ತಾರೆ. ಸಿದ್ಧಿ ವಿನಾಯಕನ ಪೂಜೆಗೆ ದೂರ್ವೆ ಬಹಳ ಶ್ರೇಷ್ಠ, ಗಣಪತಿಗೆ ಫಲಪುಷ್ಪಗಳ ಶಾಸ್ತ್ರೋಕ್ತ ಪೂಜೆಯ ಜೊತೆಗೆ ಪರಮಾನ್ನ ಭಕ್ಷ ಶಾಲ್ಯಾನ್ನಗಳನ್ನು ಮಾಡಿ ನಿವೇದಿಸಿ ನಂತರ ಸಂತೋಷದಿಂದ ಭುಂಜಿಸುತ್ತಾರೆ.

ಪಂಚಮಿ-ನಾಗರ ಪಂಚಮಿ: ಬಹಳ ಮಡಿ ಉಪವಾಸದಿಂದ ಅಶ್ವತ್ಥ ವೃಕ್ಷದ ಬುಡದ ನಾಗ ಪ್ರತಿಮೆಗೆ, ಹುತ್ತಕ್ಕೆ ಅಥವಾ ದೇವಾಲಯದ ನಾಗ ಪ್ರತಿಮೆಗೆ 'ತನಿ' ಎರೆಯುವ ಪದ್ಧತಿಯಿದೆ. ತಂಪಾದ ಎಳನೀರು, ಹಾಲು ಎರೆದು ಕೇದಿಗೆ ಹೂವಿನಿಂದ ನಾಗನನ್ನು ಅರ್ಚನೆ ಮಾಡುವುದು ಈ ದಿನ ಶ್ರೇಷ್ಠ. ಹಸಿಯಾದ ತಂಬಿಟ್ಟು ಎಳ್ಳು ಉಂಡೆ, ಬಾಳೆಹಣ್ಣು, ಕಡಲೆ ಕಾಳನ್ನು ನಾಗನಿಗೆ ಸಮರ್ಪಿಸುತ್ತಾರೆ. ಅರಿಶಿನದ ಬೇರನ್ನು ಹಾಲಿನಲ್ಲಿ ತೇಯಿದು ನಾಗ ಪ್ರತಿಮೆಗೆ ಅಭಿಷೇಕ ಮಾಡುತ್ತಾರೆ. ಅಣ್ಣ ತಮ್ಮಂದಿರು ಈ ಅಭಿಷೇಕದ ಜಲವನ್ನು ಬೆನ್ನಿಗೆ ಸವರಿಸಿಕೊಳ್ಳುವ ಪದ್ಧತಿಯೂ ಇದೆ.

ಷಷ್ಠಿ-ಸುಬ್ರಹ್ಮಣ್ಯ ಷಷ್ಠಿ: ಸುಬ್ರಹ್ಮಣ್ಯನಿಗೆ ಅರ್ಥಾತ್ ನಾಗದೇವತೆಗೆ ಸಲ್ಲಿಸುವ ವಿಶೇಷ ಪೂಜೆಯಿದು.

ಈತನನ್ನು ಸ್ಕಂದ, ಕುಮಾರಸ್ವಾಮಿ ಮುಂತಾಗಿ ಹೆಸರಿಸುತ್ತಾರೆ. ನಾಗದೋಷ ಪರಿಹಾರಕ್ಕಾಗಿ ಹಾಗೂ ಸಂತಾನ ಪ್ರಾಪ್ತಿಗಾಗಿ ಆಚರಿಸುವ ಹಬ್ಬವಿದು. ಬ್ರಹ್ಮಚಾರಿಗಳನ್ನು ಕರೆದು ಭೋಜನ ಊಟ ಬಡಿಸುವುದು ಬಹಳ ಶ್ರೇಷ್ಠವೆಂದು ಭಾವಿಸಿದ್ದಾರೆ. ಬ್ರಹ್ಮಚಾರಿ ವಟುಗಳಿಗೆ ವಸ್ತ್ರದಾನವನ್ನು ನೀಡುತ್ತಾರೆ.

ಸಪ್ತಮಿ–ರಥ ಸಪ್ತಮಿ: ಇದು ಸೂರ್ಯನ ಚಲನೆಯ ಹಿನ್ನೆಲೆಯಲ್ಲಿ ಆಚರಿಸುವಂಥದು. ಸೂರ್ಯನ ಕುದುರೆಗಳು ಈ ಸಪ್ತಮಿಯಂದು ಉತ್ತರಕ್ಕೆ ಸಮೀಪವಾಗಿ ತನ್ನ ಗತಿಯನ್ನು ಮುಂದುವರಿಸುತ್ತವೆ. ಈ ಸಂದರ್ಭದಲ್ಲಿ ಯಾವುದೇ ಶುಭ ಕಾರ್ಯವನ್ನೂ ಆಚರಿಸಬಹುದು. ಈ ದಿನ ಎಕ್ಕದ ಎಲೆಗಳನ್ನು ಮೈಮೇಲೆ ಹಾಕಿಕೊಂಡು ಸ್ನಾನ ಮಾಡುತ್ತಾರೆ. ಮನೆಯ ಮುಂದೆ ಸೂರ್ಯಮಂಡಲ ಬರೆದು ಹರಿದ್ರಾ–ಕುಂಕುಮಗಳಿಂದ ಅಲಂಕರಿಸಿ ಸೂರ್ಯದೇವನನ್ನು ಆವಾಹಿಸಿ ಪೂಜಿಸುವರು. ಉತ್ತರಾಯಣ ಬಹಳ ಪುಣ್ಯಕಾಲವೆಂದು ನಂಬುತ್ತಾರೆ.

ಅಷ್ಟಮಿ–ಕೃಷ್ಣಾಷ್ಟಮಿ: ವರ್ಷಂಪ್ರತಿ ಆಚರಿಸುವ ಸಾಂಪ್ರದಾಯಿಕ ಆಚರಣೆ ಇದಾಗಿದೆ. ರೋಹಿಣೀ ನಕ್ಷತ್ರದ ನಡುರಾತ್ರಿ ಶ್ರೀ ಕೃಷ್ಣನು ಭೂಮಿಯಲ್ಲಿ ಜನಿಸಿದ ದಿನವಿದು, ಅಂದು ಹಗಲು ಉಪವಾಸವಿದ್ದು ಮಧ್ಯರಾತ್ರಿಯಲ್ಲಿ ಈ ಪೂಜೆ ಸಾಂಪ್ರದಾಯಿಕವಾಗಿ ಆಚರಿಸಲ್ಪಡುತ್ತದೆ.

ನವಮಿ–ಮಹಾನವಮಿ: ನವರಾತ್ರಿ 9 ದಿನಗಳ ಕಾಲ ನಡೆಯುವ ಹಬ್ಬ. ದಶಮಿಯೂ ಸೇರಿ 10 ದಿನಗಳ ಕಾಲ ಈ ಹಬ್ಬ ನಡೆಯುತ್ತದೆ. ಈ ಒಂಭತ್ತು ದಿನಗಳು ದುರ್ಗೆ, ಸರಸ್ವತಿ, ಲಕ್ಷ್ಮಿಯರನ್ನು ವಿಶೇಷವಾಗಿ ಆರಾಧಿಸುತ್ತಾರೆ.

ದಶಮಿ–ವಿಜಯದಶಮಿ: ರಾಜಮಹಾರಾಜರು ಆಳುತ್ತಿದ್ದ ಕಾಲದಲ್ಲಿ ಈ ಹಬ್ಬ ವಿಶೇಷ ಪುರಸ್ಕಾರವನ್ನು ಪಡೆದಿತ್ತು. ಇದು ಆಯುಧಗಳನ್ನು ಪೂಜಿಸಿ ಯುದ್ಧಮಾಡಿ ಗೆದ್ದು ಬಂದ ನಂತರದ ಸಂಭ್ರಮದ ಆಚರಣೆಯೂ ಆಗಿದೆ. ಆ ದಿನ ಶಮಿ ವೃಕ್ಷವನ್ನು ಪೂಜಿಸುತ್ತಾರೆ. ಯಾವುದೇ ಶುಭಕಾರ್ಯವನ್ನು ಆಚರಿಸಬಹುದು. ಶೃಂಗೇರಿಯ ಸುತ್ತಮುತ್ತಲ ಜನರು ಈ ದಿನದಂದು ಶುಭಕಾರ್ಯಗಳನ್ನು ಇಟ್ಟುಕೊಂಡಿರುತ್ತಾರೆ.

ಏಕಾದಶಿ– ಪ್ರಥಮೈಕಾದಶಿ: ಶ್ರೀಕೃಷ್ಣನು ಕ್ಷೀರ ಸಾಗರದಲ್ಲಿ ಯೋಗನಿದ್ದೆ ಮಾಡುತ್ತಾ ಆರು ತಿಂಗಳು ಮಲಗಿರುತ್ತಾನೆ. ಈ ದಿನಗಳು ನಿರಾತಂಕವಾಗಿ ಕಳೆಯಲು ಉಪವಾಸ ವ್ರತ ಆಚರಿಸುತ್ತಾರೆ. ಈ ದಿನಗಳಲ್ಲಿ ಭಜನೆ, ಪೂಜೆ, ಪ್ರಾರ್ಥನಾದಿಗಳು ನಡೆಯುತ್ತವೆ.

ದ್ವಾದಶಿ–ಉತ್ಥಾನ ದ್ವಾದಶಿ: ಯೋಗ ನಿದ್ರೆಯಲ್ಲಿದ್ದ ಶ್ರೀ ಕೃಷ್ಣನು ದ್ವಾದಶಿಯಂದು ಎಚ್ಚರಗೊಳ್ಳುತ್ತಾನೆ. ಅದಕ್ಕಾಗಿ ಇದು ಉತ್ಥಾನ ದ್ವಾದಶಿ. ಆ ದಿನ ಬೃಂದಾವನವನ್ನು ಅಲಂಕರಿಸಿ ತುಳಸಿ ಗಿಡದೊಂದಿಗೆ ನೆಲ್ಲಿಯನ್ನು ಪೂಜಿಸುತ್ತಾರೆ. ರಾತ್ರಿಯಲ್ಲಿ ಈ ತುಳಸೀ ಪೂಜೆಯೂ ವಿಶೇಷವಾಗಿ ನಡೆಯುತ್ತದೆ. ವೃಂದಳು ಪತಿವ್ರತೆಯಾಗಿದ್ದುದರಿಂದ ಶ್ರೀ ಕೃಷ್ಣನು (ವಿಷ್ಣು) ರಕ್ಕಸನಾಗಿದ್ದ ಆಕೆಯ ಪತಿಯನ್ನು ಮರ್ದಿಸಿ ವೃಂದಳಿಗೆ ಪೂಜೆಸಲ್ಲುವಂತೆ ವರ ನೀಡುತ್ತಾನೆ. ಈ ದಿನ ವಿಶೇಷವಾದ ಪೂಜಾದಿಗಳು ಜರುಗುತ್ತವೆ.

ತ್ರಯೋದಶಿ– ಶನಿತ್ರಯೋದಶಿ: ಈ ದಿನ ನವಗ್ರಹಗಳಲ್ಲಿ ಓರ್ವನಾದ ಶನೀಶ್ವರನ ವ್ರತವನ್ನು ವಿಧಿ ವಿಧಾನದಿಂದ ಪೂಜಿಸುವ ಹಬ್ಬ, ಶನಿಯು ಸೂರ್ಯನ ಮಗ ಇವನ ಗತಿಯು ಬಹಳ ಮಂದ, ಇವನ ಪೀಡಾ ಪರಿಹಾರಕ್ಕಾಗಿ ತ್ರಯೋದಶಿಯಂದು ಪ್ರದೋಷ ಕಾಲದಲ್ಲಿ ವ್ರತವನ್ನು ಆಚರಿಸುವುದು, ಶನಿಗೆ ಇಷ್ಟವಾದ ಧಾನ್ಯ ಎಳ್ಳನ್ನು ಹೊಸ ಬಟ್ಟೆಯಲ್ಲಿ ಕಟ್ಟಿ ದಾನ ಕೊಡುವುದು, ಎಳ್ಳೆಣ್ಣೆಯಿಂದ ದೀಪ ಬೆಳಗಿಸುವುದು ಇವು ಈ ಹಬ್ಬದ ವೈಶಿಷ್ಟ್ಯ.

ಚತುರ್ದಶಿ–ಅನಂತ ಚತುರ್ದಶಿ: ಅನಂತ ಎಂದರೆ ಕೊನೆಯಿಲ್ಲದವನು. ಇದು ಶ್ರೀಕೃಷ್ಣನ ಸಾವಿರ ನಾಮಗಳಲ್ಲೊಂದು ಈ ದಿನ ಕಲಶವನ್ನು ಪ್ರತಿಷ್ಠಾಪಿಸಿ ಅದರಲ್ಲಿ ಅನಂತನನ್ನು ಆವಾಹನೆ ಮಾಡಿ ಹದಿನಾಲ್ಕು ಎಳೆಗಳಿರುವ ದಾರವನ್ನು ಕೈಗೆ ಕಟ್ಟಿಕೊಂಡು ಬ್ರಾಹ್ಮಣರಿಗೆ ಉಪಾಯನ ದಾನವನ್ನು ಕೊಟ್ಟು ಕತೆಯನ್ನು ಕೇಳುವುದು. ಅಂದು ಕಲಶವನ್ನು ವಿಸರ್ಜಿಸದೆ ಮರುದಿನ ಯಥಾಶಕ್ತಿ ಪೂಜೆ ಮಾಡಿ ಬ್ರಾಹ್ಮಣರಿಗೆ, ಸುವಾಸಿನಿಯರಿಗೆ ಸಂತರ್ಪಣೆ ಮಾಡಿ ಅನಂತನನ್ನು ಕಳುಹಿಸುವುದು. ಇಲ್ಲಿ ಅನಂತನಿಗೆ ಪ್ರಿಯವಾದ ಭಕ್ಷ್ಯ ಹಾಗೂ ಹೋಳಿಗೆ (ದೋಸೆ) ನೈವೇದ್ಯ ಮಾಡಿ ಬಾಗಿನ ಕೊಡುವುದು.

ಹುಣ್ಣಿಮೆ–ಭೂಮಿ ಹುಣ್ಣಿಮೆ: ಪಂಚಮಹಾಭೂತಗಳಲ್ಲಿ ಮೊದಲನೆಯದು ಭೂಮಿ, ನಮಗೆ ಆಶ್ರಯ ನೀಡಿದ ನೆಲ. ಇದಕ್ಕೆ ನಾವು ಹಲವು ರೀತಿಯಲ್ಲಿ ಅಂದರೆ ಕಾಲಿನಿಂದ ತುಳಿದು ಹೊಂಡ ತೋಡಿ ತ್ಯಾಜ್ಯ ವಸ್ತುಗಳನ್ನು ಮೇಲೆರಚಿ ಅಪರಾಧ ಮಾಡಿರುತ್ತೇವೆ. ಈ ತಪ್ಪಿನ ಕ್ಷಮೆಗಾಗಿ ಹುಣ್ಣಿಮೆಯಂದು ಭೂಮಿಯನ್ನು ಪೂಜಿಸುವುದು ಸಂಪ್ರದಾಯ. ಗ್ರಾಮಾಂತರ ಪ್ರದೇಶದಲ್ಲಿ ಕೃಷಿಕರು ತಮ್ಮ ಹೊಲಗದ್ದೆಗಳಲ್ಲಿ ಸಗಣಿಯಿಂದ ಸಾರಿಸಿ, ರಂಗವಲ್ಲಿ ಇಟ್ಟು, ತೋರಣ ಕಟ್ಟಿ ಸಿಂಗರಿಸಿ, ಪೂಜಿಸಿ, ಕಡಬು ನೈವೇದ್ಯ ಮಾಡಿ ಅದನ್ನು ಬಲಿಯ ರೂಪದಲ್ಲಿ ಹೊಲಗದ್ದೆಗಳಲ್ಲಿ ಎರಚುತ್ತಾರೆ. ಆ ದಿನ ಯಾರೂ ಭೂಮಿಯನ್ನು ನೋಯಿಸುವ ಯಾವ ಕೆಲಸವನ್ನು ಮಾಡದೆ ಭೂ ತಾಯಿಗೆ ಗೌರವವನ್ನು ಸಲ್ಲಿಸುತ್ತಾರೆ.

ಅಮಾವಾಸ್ಯೆ–ಎಳ್ಳಮಾವಾಸ್ಯೆ: ಅಮಾವಾಸ್ಯೆ ಎಂಬುದು ಪರ್ವತಿಥಿಗಳಲ್ಲಿ ಒಂದಾಗಿದೆ. ವರ್ಷದಲ್ಲಿ ಹನ್ನೆರಡು ಅಮಾವಾಸ್ಯೆ ಬಂದರೂ ಈ ಎಳ್ಳಮಾವಾಸ್ಯೆಗೆ ಬಹಳ ಮಹತ್ವ ಉಂಟು. ಪಿತೃಗಳಿಗೆ ತರ್ಪಣಾದಿಗಳನ್ನು ಕೊಡಲು ಇದು ಸಕಾಲ ಜೊತೆಗೆ ಇದು ಸುಗ್ಗಿ ಕಾಲವೂ ಹೌದು, ಸಮೃದ್ಧ ಮಳೆಬೆಳೆಯಾಗಿ ಜನರಿಗೆ ಸಂತಸ ಕೊಡುವ ಸಂದರ್ಭದಲ್ಲಿ ಅಲ್ಲಲ್ಲಿ ಜಾತ್ರೆ ಉತ್ಸವ ಇತ್ಯಾದಿಗಳು ವಿಶೇಷವಾಗಿ ನಡೆಯುತ್ತವೆ. ಶಿವಾಲಯಗಳಲ್ಲಿ ಅಂದು ವಿಶೇಷ ಪೂಜೆ ದೀಪೋತ್ಸವಗಳನ್ನು ಜರುಗಿಸುವರು. ದಾನಧರ್ಮಾದಿಗಳಿಗೂ ಇದು ಪ್ರಶಸ್ತ ಕಾಲ.

ಶ್ರೀ ರಾಮನವಮಿ: ದಶಾವತಾರಗಳಲ್ಲಿ ಒಂದು ಅವತಾರ ಶ್ರೀ ರಾಮ. ದುಷ್ಟಶಿಕ್ಷಣ ಶಿಷ್ಟರಕ್ಷಣೆಗಾಗಿ ಅವತಾರವೆತ್ತಿದ ದೇವಮಾನವ ಶ್ರೀರಾಮ. ಆ ಪುಣ್ಯಪುರುಷನ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸುವ ಹಬ್ಬ. ಇದಕ್ಕೂ ಮುನ್ನ ಅಂದರೆ ಚೈತ್ರ ಮಾಸದ ಮೊದಲ ದಿನದಿಂದ ನವಮಿಯ

ತನಕ ಒಂಭತ್ತು ದಿನಗಳೂ ಈ ಉತ್ಸವವನ್ನು ಆಚರಿಸುತ್ತಾರೆ. ಪಾನಕ, ಪನಿವಾರಗಳನ್ನು ಮಾಡಿ ವಿತರಣೆ ಮಾಡುತ್ತಾರೆ. ರಾಮಭಜನೆ, ರಾಮೋತ್ಸವ, ದೀಪಾರಾಧನೆ, ವಿಶೇಷ ಪೂಜೆ ಇವೆಲ್ಲವೂ ಇಲ್ಲಿ ಪ್ರಧಾನವಾದ ಅಂಶಗಳು. ಕೊನೆಯ ದಿನ (ಅಂದರೆ ದಶಮಿ) ಶ್ರೀರಾಮ ಸಾಮ್ರಾಜ್ಯದ ಪಟ್ಟಾಭಿಷೇಕ ನಡೆದು ಅನ್ನಸಂತರ್ಪಣೆಯೊಂದಿಗೆ ಈ ರಾಮೋತ್ಸವ ಮಂಗಳವಾಗುವುದು.

ಭೀಮನ ಅಮಾವಾಸ್ಯೆ: ಈ ಹಬ್ಬವು ವಿಶೇಷವಾಗಿ ಸುಮಂಗಲಿಯರು ಆಚರಿಸುವ ಹಬ್ಬ. ಇದಕ್ಕೆ ಜ್ಯೋತಿಸ್ತಂಭವ್ರತ, ಭೀಮನ ಅಮವಾಸ್ಯೆ (ಕೊಡೆ ಅಮವಾಸ್ಯೆ) ಎಂದು ಕರೆಯುತ್ತಾರೆ. ಸುವಾಸಿನಿಯರು ಅಂದು ಬೆಳಗ್ಗಿನಿಂದ ಉಪವಾಸವಿದ್ದು, ಸಂಜೆ ಗೋಧೂಳಿ ಸಮಯದಲ್ಲಿ ಗೋಪೂಜೆ ಮಾಡಿ ವ್ರತವನ್ನು ಪ್ರಾರಂಭಿಸುತ್ತಾರೆ. ಒಂದು ದೀಪದ ಕಂಬದಲ್ಲಿ ಶಿವನನ್ನು ಮತ್ತೊಂದು ದೀಪದ ಕಂಬದಲ್ಲಿ ಪಾರ್ವತಿಯನ್ನು ಆವಾಹನೆ ಮಾಡಿ ಪಂಚಾಮೃತಾದಿ ಅಭಿಷೇಕಗಳಿಂದ ಪೂಜಿಸುತ್ತಾರೆ.[15]

ದೈನಂದಿನ ಅಚರಣೆ: ಆಚರಣೆಯು ಹೆಚ್ಚಾಗಿ ಬ್ರಾಹ್ಮಣ ಜಾತಿಯವರಲ್ಲಿ ಹೆಚ್ಚಾಗಿದ್ದು, ಅವರು ನಿರಂತರವಾಗಿ ಮುಂದುವರಿಸಿಕೊಂಡು ಬಂದಿರುತ್ತಾರೆ. ಬ್ರಾಹ್ಮಣ ಜಾತಿಯವರ ದೈನಂದಿನ ಆಚರಣೆಯು ವಿಶೇಷವಾಗಿದೆ. ಹೆಚ್ಚಿನವರು ಕೃಷಿಕರು, ಪೌರೋಹಿತ್ಯ ಮಾಡುತ್ತಿದ್ದರು. ಗಂಡಸರು ಬೆಳಿಗ್ಗೆ ಮುಂಚೆ ಐದು ಅಥವಾ ಐದುವರೆಗೆ ಎದ್ದು ಮುಖತೊಳೆದು ಪ್ರಾತರ್ವಿಧಿ ಮುಗಿಸಿ, ಉದಯರಾಗ ಹೇಳವುದು, ಸ್ತೋತ್ರಪಠಣ, ಸ್ನಾನ, ಸಂಧ್ಯಾವಂದನೆ, ದೇವರ ಪೂಜೆ, ಉಪಾಹಾರ, ಕೃಷಿಕಾರ್ಯದಲ್ಲಿ ತೊಡಗುವುದು. ಮಧ್ಯಾಹ್ನ ಮಡಿಯುಟ್ಟು ಮಧ್ಯಾಹ್ನಿಕಮಾಡಿ ದೇವರಿಗೆ ಅನ್ನ ನೈವೇದ್ಯ, ಗೋಗ್ರಾಸ, ಸ್ವಲ್ಪ ಅನ್ನವನ್ನು ಪಕ್ಷಿಗಳಿಗಾಗಿ ಮನೆಯ ಮಾಡಿನ ಮೇಲೆ ಹಾಕಿ, ಅನಂತರ ಊಟಮಾಡುವುದು. ನಂತರ ಸ್ವಲ್ಪ ವಿಶ್ರಾಂತಿ, ಪುನಃ ಸಂಜೆಯವರೆಗೆ ಕೃಷಿಕೆಲಸಗಳು, ರಾತ್ರಿ ಸಂಧ್ಯಾವಂದನೆ, ಮನೆದೇವರಿಗೆ ಹಾಲು ನೈವೇದ್ಯ–ಊಟ– ಪುರಾಣಪುಣ್ಯಕತೆ ಓದುವುದು, ಮಕ್ಕಳಿಗೆ ಅಮರಕೋಶ, ಬಾಯಿಪಾಠ (ಸಂವತ್ಸರ–ತಿಥಿ ಇತ್ಯಾದಿ) ಉಪನಯನವಾದವರಿದ್ದರೆ ಮಂತ್ರಹೇಳಿ ಕೊಡುವುದು ಇತ್ಯಾದಿ ನಡೆಯುತ್ತದೆ. ಇತರೆ ಜಾತಿಯವರಲ್ಲಿ ಈ ಎಲ್ಲಾ ಆಚರಣೆಗಳಿಲ್ಲದಿದ್ದರೂ ಕೆಲವಷ್ಟನ್ನು ಅನುಸರಿಸಿಕೊಂಡು ತಮ್ಮ ಜಾತಿಧರ್ಮಕ್ಕನುಸಾರವಾಗಿ ನಡೆದು ಬಂದಿದ್ದಾರೆ.

ವಿವಾಹ ಕ್ರಮದ ವಿಧಿ–ವಿಧಾನ :

ಹಿಂದೆ ಋತುವಾಗುವ ಮೊದಲೇ ವಿವಾಹ ಮಾಡಬೇಕೆಂಬ ನಂಬಿಕೆಯಿಂದ ಬಾಲ್ಯವಿವಾಹ ಪದ್ಧತಿಯು 8 ರಿಂದ 12 ವರ್ಷದೊಳಗಿನ ಹೆಣ್ಣು ಹಾಗೂ 18 ರಿಂದ 22 ವರ್ಷ ವಯೋಮಾನದ ವರನೊಂದಿಗೆ ನಡೆಯುತ್ತಿತ್ತು. ವಿವಾಹವು ನಾಲ್ಕು ದಿನ ನಡೆಯುತ್ತಿದ್ದು, ಐದನೇ ದಿನದಂದು ಸ್ತಂಭಬಲಿ ಇರುತ್ತಿತ್ತು. ಈಗ ಮದುವೆಯು ಒಂದು ಎರಡು ದಿನಗಳಿಗೆ ಬಂದಿದೆ. ಹಿಂದೆ ಮನೆಯಲ್ಲೇ ನಡೆಯುತ್ತಿತ್ತು. ಈಗ ಕಲ್ಯಾಣ ಮಂಟಪಗಳಲ್ಲಿ ನಡೆಯುತ್ತದೆ. ಹಿಂದೆ ಬಂಧುಗಳು ಸೇರಿ ಚಪ್ಪರ–

ಚಾವಡಿ, ಅಡುಗೆ, ಮಂಟಪ ಮೊದಲಾದವುಗಳನ್ನು ಪರಸ್ಪರ ಸಹಕಾರದಿಂದ ನಡೆಸುತ್ತಿದ್ದರು. ಈಗ ಎಲ್ಲವೂ ಸಂಬಳದ ಜನರಿಂದ ನಡೆಯುತ್ತಿದೆ. ಸಾಮೂಹಿಕವಿವಾಹ ದೇವಾಲಯಗಳಲ್ಲಿ ನಡೆಯುವುದು ಬಳಕೆಯಲ್ಲಿದೆ. ಇತ್ತೀಚೆಗೆ ರಿಜಿಸ್ಟರ್ಡ್ ಮದುವೆಗಳು ನಡೆಯುತ್ತಿವೆ. ಹತ್ತಿರದ ಬಂಧುಗಳು ಉಡುಗೊರೆ ಕೊಡುವ ಪದ್ಧತಿಯಿತ್ತು. ಇತ್ತೀಚೆಗೆ ಪ್ರೇಮವಿವಾಹ ಆಗುತ್ತಿರುವುದರಿಂದ ಹೆಚ್ಚಾಗಿ ಅಂತರ್ಜಾತಿಯ ವಿವಾಹಗಳು ನಡೆಯುತ್ತಿವೆ. ಕನ್ಯೆಯರ ಅಭಾವದಿಂದಲೂ ಅಂತರ್ಜಾತಿಯ ವಿವಾಹಗಳು ನಡೆಯುತ್ತಿವೆ.

ಬ್ರಾಹ್ಮಣ ಜಾತಿಯವರಲ್ಲಿ ಆಚರಣೆ, ಸಂಪ್ರದಾಯಗಳಂತೆ ವಿವಾಹ ಕ್ರಮಗಳು ನಡೆಯುತ್ತಿದ್ದವು. ಇತರ ಜಾತಿಯವರಲ್ಲಿ ಅವರದೇ ಆದ ರೀತಿ ರಿವಾಜುಗಳನ್ನು ಕಾಣಬಹುದಾಗಿದೆ. ಬ್ರಾಹ್ಮಣರ ವಿವಾಹ ಪದ್ಧತಿಯಂತೆ ಸ್ವಾಗತ, ಗಣಪತಿ ಪೂಜೆ, ಪುಣ್ಯಾಹ, ವಾಗ್ದಾನ, ನಿಶ್ಚಿತಾರ್ಥ, ಮಧುಪರ್ಕ, ಕನ್ಯಾನಿರೀಕ್ಷಣೆ, ಮುಹೂರ್ತ, ಅಕ್ಷತಾರೋಪಣ, ಕನ್ಯಾದಾನ, ವಧೂ–ವರರ ಪೂಜೆ, ಮಾಂಗಲ್ಯಧಾರಣೆ, ಲಾಜಾಹೋಮ, ಸಪ್ತಪದಿ, ಕನ್ಯಾಲಂಕಾರ, ವಿವಾಹಹೋಮ, ಸಭಾಪೂಜೆ, ಆರತಕ್ಷತೆ ಮೊದಲಾದವುಗಳು ನಡೆಯುತ್ತವೆ. ಸೋದರಮಾವ ಮದುಮಗಳನ್ನು ಮಂಟಪಕ್ಕೆ ತರುವುದು, ವಧುವಿನ ತಮ್ಮ ಅರಳು ಹೊಯ್ಯುವುದು ಕ್ರಮವಾಗಿದೆ. ಆಷಾಢ–ಪುಷ್ಯ, ಅಧಿಕಮಾಸ–ಕ್ಷಯಮಾಸ, ಗುರು–ಶುಕ್ರ ಲಿಪ್ತವಾದಾಗ ಮೊದಲಾದ ಕಾಲದಲ್ಲಿ ಮಂಗಳಕಾರ್ಯಗಳು ನಡೆಯುತ್ತಿರಲಿಲ್ಲ. ಈಗ ಎಲ್ಲಾ ಮಾಸಗಳಲ್ಲೂ ನಡೆಯುತ್ತಿವೆ.

ಹಿಂದೆ ಬಾಲ್ಯದಲ್ಲಿಯೇ ವಿವಾಹವಾಗುತ್ತಿದ್ದುದರಿಂದ ವಧು– ವರರಿಬ್ಬರಿಗೂ ಪರಸ್ಪರ ಪರಿಚಯವಿರುತ್ತಿರಲಿಲ್ಲ. ಮಂಟಪದಲ್ಲಿಯೆ ಮುಖದರ್ಶನವಾಗುತ್ತಿತ್ತು. ಆದ್ದರಿಂದ ಅವರೀರ್ವರ ನಡುವೆ ಪ್ರೀತಿ, ವಿಶ್ವಾಸ, ಅನ್ಯೋನ್ಯತೆ ಬರುವ ಸಲುವಾಗಿ ಅರಶಿಣಎಣ್ಣೆ, ಹಸೆ ಆಟ, ಸರಿಬೆಸ, ಅಕ್ಕಿಯಲ್ಲಿ ಚಕ್ರ ಹುಡುಕುವುದು, ಓಕುಳಿ ಆಡಿಸುವುದು, ಚೆಂಡಾಟ ಮೊದಲಾದವುಗಳನ್ನು ಆಡಿಸುತ್ತಾರೆ. ಈಗ ವಯಸ್ಕರಾದವರ ವಿವಾಹ ನಡೆದಿರುವುದು. ಮದುವೆಗೆ ಮೊದಲೆ ಪರಸ್ಪರ ಪರಿಚಯ, ವಿಚಾರ ವಿನಿಮಯ ನಡೆದಿರುವುದರಿಂದ ಈಗ ಹಾಸ್ಯಸ್ಪದವೆನಿಸುತ್ತದೆ.

ವಧು ಪರೀಕ್ಷೆ: ಹಿಂದೆ ಹಿರಿಯರು ಈ ವರನಿಗೆ ಇಂತಹ ವಧುವಾಗಿರಬೇಕೆಂದು ನಿಶ್ಚಯಿಸಿ ನಿಗದಿಪಡಿಸುತ್ತಿದ್ದರು.[16] ವಧುವರರಿಬ್ಬರು ಈ ನಿರ್ಣಯವನ್ನು ಒಪ್ಪಿಕೊಂಡು ಮದುವೆಯಾಗುತ್ತಿದ್ದರು. ಹುಡುಗಿಯ ಕುಟುಂಬದ ಹಿನ್ನೆಲೆಗೊತ್ತಿದ್ದು, ಆಕೆಯ ಗುಣ, ಸ್ವಭಾವ, ನಡವಳಿಕೆ ಮೊದಲಾದವುಗಳನ್ನು ತಿಳಿದ ವರನ ತಂದೆ–ತಾಯಿಯರು ನೋಡಿ ನಿಶ್ಚಯಿಸುತ್ತಿದ್ದರು. ಸೀಮಿತ ವ್ಯಾಪ್ತಿಯ ಕುಟುಂಬಗಳೊಳಗೇ ಸಂಬಂಧಗಳು ಏರ್ಪಡುತ್ತಿತ್ತು. ಈಗ ದೂರದ ಅಪರಿಚಿತರೊಂದಿಗೆ ಸಂಬಂಧಗಳು ಏರ್ಪಡುತ್ತವೆ. ಎರಡು ಕಡೆಯವರು ಬೇರೆ ಬೇರೆಯವರಿಂದ ವಧು–ವರರ ಹಿನ್ನಲೆ ತಿಳಿಯುತ್ತಾರೆ. ಈಗ ವಧು ಪರೀಕ್ಷೆಯಿದೆ. ಹಿಂದೆ ವಧುವಿನ ಒಪ್ಪಿಗೆಯ ಅಗತ್ಯವಿರಲಿಲ್ಲ. ತಂದೆ ತಾಯಿ ಒಪ್ಪಿದರೆ ಸರಿ. ಈಗ ವಧು–ವರರಿಬ್ಬರೂ ಒಬ್ಬರನ್ನೊಬ್ಬರು ಒಪ್ಪಿಕೊಂಡಾದ ತರುವಾಯ ಮದುವೆ ನಡೆಯುತ್ತದೆ. ಪರಿಚಿತ

ಸಂಬಂಧದಲ್ಲೇ ವಿವಾಹವೇರ್ಪಡುವುದಾದರೆ ಬಂಧುಗಳು ಮಧ್ಯವರ್ತಿಗಳಾಗಿ, ಹೊರಗಿನವರ ನಡುವೆ ಸಂಬಂಧ ಏರ್ಪಡುವುದಾದರೆ ಇತರೆ ಮಧ್ಯವರ್ತಿಗಳಿಂದ ಅಥವಾ ವಿವಾಹ ಸಂಪರ್ಕ ಕೇಂದ್ರದ ಮೂಲಕ ನಡೆಯುತ್ತಿದೆ.

ಜಾತಕ ಕೂಡುವಿಕೆ-ಸಗೋತ್ರವಿವಾಹ: ಹಿಂದೆ ಸೋದರಮಾವನ ಮಗಳನ್ನು ಮದುವೆಯಾಗುವುದಾದರೆ ಜಾತಕ ತಾಳೆ ನೋಡುತ್ತಿರಲಿಲ್ಲ. ಉಳಿದಂತೆ ಜಾತಕ ತಾಳೆ ಬರಬೇಕು. ಈಗಲೂ ಜಾತಕಕ್ಕೆ ಪ್ರಾಶಸ್ತ್ಯವಿದೆ. ಹಿಂದೆ ಸಗೋತ್ರ ವಿವಾಹವಿರಲಿಲ್ಲ. ಈಗ ಹೆಣ್ಣಿನ ಸಂಖ್ಯೆ ಕಡಿಮೆ ಇರುವುದರಿಂದ ಬದಲಾವಣೆಗಳಾಗಿದ್ದು ಗೋತ್ರ, ಉಪಜಾತಿಗಳ ಬಗ್ಗೆ ಯೋಚಿಸುವುದಿಲ್ಲ. ಹಿಂದೆ ಒಳಪಂಗಡಗಳ ನಡುವೆ ವಿವಾಹ ನಡೆಯುತ್ತಿರಲಿಲ್ಲ. ಈಗ ನಡೆಯುತ್ತದೆ. ಶ್ರೀಮಂತರ ಬಡವರ ಮಧ್ಯೆ ವಿವಾಹಗಳು ನಡೆಯುತ್ತಿದ್ದವು, ಯಾವ ತಾರತಮ್ಯವೂ ಇರುತ್ತಿರಲಿಲ್ಲ. ಈಗಲೂ ಸಂಬಂಧಗಳು ನಡೆಯುತ್ತಿವೆ. ಗುಣಸ್ವಭಾವ, ಕುಟುಂಬದ ಹಿನ್ನೆಲೆಗೆ ಪ್ರಾಶಸ್ತ್ಯವೇ ವಿನಾ ಆರ್ಥಿಕ ಮಟ್ಟವಲ್ಲ.

ವಿವಾಹ ಉಪನಯನಗಳ ಹಿಂದಿನ ದಿನ ಮುತ್ತೈದೆಯರು ಕೇಲು-ಕಂದೀಲು(ಗೂಡೆ)ಗೆ, ಬಳೆ, ಬಿಚ್ಚೋಲೆ, ಅರಶಿಣ-ಕುಂಕುಮ, ಅಕ್ಕಿ, ತೆಂಗಿನ ಕಾಯಿ, ತಾಂಬೂಲ, ಹೂ ಇತ್ಯಾದಿ ತುಂಬಿಸಿ ಪೂಜಿಸುವುದು. ಅನಂತರ ಕುಲದೇವತೆಯ ಎದುರಿನಲ್ಲಿ ಅಕ್ಕಿ-ಅರಶಿಣ ಕುಟ್ಟುವುದು[17] (ಅರಶಿಣ ಕುಟ್ಟುವುದು ಮಂಗಲಕಾರ್ಯ ಪ್ರಾರಂಭಿಸಿದ ಸೂಚಕವಾಗಿ, ನಂದಾದೀಪ ಸದಾ ಇರಬೇಕೆಂಬುದಾಗಿ).

ಎಣ್ಣೆಶಾಸ್ತ್ರ: ಹಿಂದಿನ ದಿನ ವಟು-ವಧು-ವರರ ಜೊತೆಗೆ ಚಿಕ್ಕಮಕ್ಕಳನ್ನು ದೇವರ ಮುಂದೆ ಕೂರಿಸಿ ತಾಂಬೂಲ ನೀಡಿ, ತಲೆ, ಮೈಕೈಗೆ ಎಣ್ಣೆ ಸವರುವುದು, ಅನಂತರ ಮಂಗಳ ಸ್ನಾನ ಮಾಡುವುದು ಈಗಲೂ ರೂಢಿಯಲ್ಲಿದೆ.

ಸಭಾಕಾಣಿಕೆ: ಸಭಾ ಪೂಜೆಯಲ್ಲಿ ಮೊದಲು ಶೃಂಗೇರಿ ಶ್ರೀ ಜಗದ್ಗುರು ಪೀಠಕ್ಕೆ, ಅವರವರ ಕುಲದೇವರಿಗೆ, ಗ್ರಾಮದೇವತೆಗೆ, ನಂತರ ತಮ್ಮ ಸಂಘ ಸಂಸ್ಥೆಗೆ ಕಾಣಿಕೆ ಓದಿ ಸಲ್ಲಿಸುವುದು.

ಮಂತ್ರಾಕ್ಷತೆ: ಭೋಜನದ ನಂತರ ಪುರೋಹಿತರು, ಸಭಿಕರನ್ನು ನಮಸ್ಕರಿಸಿ ಆಶೀರ್ವಾದ ಪಡೆಯುವುದು. ಪುರೋಹಿತರು ಕರ್ಮಾಂಗದ ಮಹತ್ವವನ್ನು ಸಂಕ್ಷಿಪ್ತವಾಗಿ ತಿಳಿಸಿ ಉತ್ತರೋತ್ತರ ಶ್ರೇಯಸ್ಸನ್ನು ಕೋರಿ ಸಭೆಯ ಪರವಾಗಿ ಆಶೀರ್ವದಿಸುವರು.

ಮುಹೂರ್ತ: ಜೋಯಿಸರಿಂದ ನಾಲ್ಕೈದು ಮುಹೂರ್ತವನ್ನು ಗುರುತಿಸಿಕೊಂಡು, ಉಭಯತರಿಗೂ ಇರುವ ಅಡ್ಡಿ-ಆತಂಕಗಳನ್ನು ವಿಮರ್ಶಿಸಿ ಅನುಕೂಲವಾದ ದಿನವನ್ನು ನಿಶ್ಚಯಿಸುವುದು.

ಹೊರೆ ಕಾಣಿಕೆ-ಮರ್ಯಾದೆ: ಹಿಂದೆ ಒಡೆಯನ ಮನೆಯ ಶುಭಸಮಾರಂಭಗಳಿಗೆ, ತರಕಾರಿ, ಬಾಳೆಎಲೆ ಇತ್ಯಾದಿ ಸಲ್ಲಿಸಿ, ಚಪ್ಪರ, ಚಾವಡಿ, ಸುಣ್ಣ, ಬಣ್ಣ ಇತ್ಯಾದಿಗಳನ್ನು ಮಾಡಬೇಕಿತ್ತು. ಈಗ ಎಲ್ಲಾ ಕೆಲಸಗಳು ಸಂಬಳದ ಮೂಲಕ ನಡೆಯಬೇಕಿದೆ ಕೊನೆಯ ದಿನ ಒಡೆಯ ಒಂದು ತೆಂಗಿನ

ಕಾಯಿಯನ್ನು ಮರ್ಯಾದೆ ಎಂದು ನೀಡುತ್ತಿದ್ದರು. ಉಡುಗೊರೆ ನೀಡಿದವರಿಗೆ ತಾಂಬೂಲ ನೀಡಿ ಗೌರವ ಸೂಚಿಸುವ ಪರಿಪಾಠವಿದೆ. ವಿವಾಹ-ಉಪನಯನ ಮೊದಲಾದ ಕಾರ್ಯಕ್ರಮಗಳನ್ನು ಯಥಾಶಕ್ತಿ ಇತಿಮಿತಿಯೊಳಗೇ ಮಾಡುತ್ತಾರೆ. ಅದ್ಧೂರಿ, ಆಡಂಬರಕ್ಕೆ ಆಸ್ಪದ ಕಡಿಮೆಯಿತ್ತು ಇತ್ತೀಚೆಗೆ ನಗರದಲ್ಲಿ ನೆಲೆಸಿರುವ ಶ್ರೀಮಂತರು ಆಡಂಬರಕ್ಕೆ ಪ್ರಾಶಸ್ತ್ಯ ನೀಡುವುದೂ ಕಂಡು ಬರುತ್ತದೆ.

ನಿಶ್ಚಿತಾರ್ಥ, ಲಗ್ನಪತ್ರಿಕೆ: ಹಿಂದೆ ನಿಶ್ಚಿತಾರ್ಥವಿರಲಿಲ್ಲ, ವರನ ತಂದೆ, ಸೋದರ ಮಾವನವರು ವಧುವಿನ ಮನೆಗೆ ಹೋಗಿ ಗಣಪತಿ ಪೂಜೆ ಮಾಡಿ ಅಕ್ಷತೆ ಹೊರಡಿಸುತ್ತಿದ್ದರು. ಈಗ ನಿಶ್ಚಿತಾರ್ಥವು ಬಹಳ ಅದ್ಧೂರಿಯಾಗಿ ನಡೆಯುತ್ತಿದ್ದು ಅದನ್ನು ಸಹ ಪ್ರತಿಷ್ಠೆಯಾಗಿ ಸ್ವೀಕರಿಸಿದ್ದಾರೆ. ಹಿಂದೆ ಲಗ್ನಪತ್ರಿಕೆಯಿರಲಿಲ್ಲ ಅರಶಿಣ ಮಿಶ್ರಿತ ಅಕ್ಕಿಯನ್ನು ಅಕ್ಷತೆಯನ್ನಾಗಿ ಮಾಡಿಕೊಂಡು ಆಹ್ವಾನಿಸುತ್ತಿದ್ದರು. ಈಗಲೂ ಅಕ್ಷತೆಗೆ ಹೆಚ್ಚಿನ ಮಹತ್ವವಿರುವುದು ಕಂಡುಬರುತ್ತಿದೆ. ಪತ್ರಿಕೆಯನ್ನು ಮಾಡಿಸಿದ್ದರೂ ಅದರೊಳಗೆ ನಾಲ್ಕುಕಾಳು ಅಕ್ಷತೆ ಹಾಕಿ ಕೊಡುತ್ತಾರೆ. ಇಲ್ಲವೆ ಅಕ್ಷತೆ ಹಾಗೂ ಪತ್ರಿಕೆಗಳೆರಡನ್ನು ಒಟ್ಟಿಗೆ ನೀಡಿ ಆಹ್ವಾನಿಸುತ್ತಾರೆ. ಹಿಂದೆ ಸಮೀಪದ ಬಂಧುಗಳಿಗೆ ಮಾತ್ರ ವಿವಾಹ ಆಮಂತ್ರಣ ಮಾಡುತ್ತಿದ್ದರು. ಈಗ ಅದರ ವ್ಯಾಪ್ತಿ ವಿಸ್ತರಿಸಿದ್ದು, ಬಂಧು-ಮಿತ್ರರಲ್ಲದೆ, ಜಾತಿಭೇದವಿಲ್ಲದೆ ಎಲ್ಲರಿಗೂ ಆಹ್ವಾನ ನೀಡುತ್ತಾರೆ.

ಆಚರಣೆಗಳು, ಶಾಸ್ತ್ರಗಳು, ವಿಧಿವಿಧಾನಗಳು:

ಗರ್ಭಾದಾನ: ಹಿಂದೆ ವಧು ಋತುವಾಗುವ ಮೊದಲೇ ವಿವಾಹವಾಗುತ್ತಿತ್ತು. ಋತುವಾದ ನಂತರ ಗಂಡನಮನೆಯಲ್ಲಿ 'ಗರ್ಭಾದಾನ' ನಡೆಯುತ್ತಿತ್ತು. ಋತುಮತಿಯಾದ ನಂತರ ಗಂಡನ ಮನೆಗೆ 'ಒಸಗೆ' ಕಳುಹಿಸುತ್ತಿದ್ದರು. ಒಂದು ವರ್ಷದೊಳಗೆ ಮೂರು 'ತಿಥಿ' ಕಾಣಬಾರದೆಂಬ ನಂಬಿಕೆಯಿಂದ ಆ ತಿಂಗಳ ನಂತರ ಗರ್ಭಾದಾನ ನಡೆಯುತ್ತಿತ್ತು. ಈಗ ಮದುವೆಯ ದಿನ ಅಥವಾ ಮೂರನೆಯ ದಿನ ನಡೆಯುತ್ತದೆ. ನವಗ್ರಹ ಹೋಮ, ಭುವನೇಶ್ವರಿ ಶಾಂತಿ, ಗರ್ಭಾದಾನ ಹೋಮ, ಮಡಿಲು ತುಂಬುವುದು ಮೊದಲಾದವುಗಳು ಆಚರಣೆಯಲ್ಲಿದ್ದವು.

ಒಸಗೆ: ತಂದೆಯ ಮನೆಯಲ್ಲಿ ಕನ್ಯೆ ಪ್ರಥಮ ರಜೋದರ್ಶನವಾದಾಗ ಗಂಡನ ಮನೆಗೆ ಇಬ್ಬರು ಮಂಗಳದ್ರವ್ಯಗಳೊಂದಿಗೆ ತೆರಳಿ ಋತುಮತಿಯಾದ ಸುದ್ದಿ ತಿಳಿಸುವುದು. ಮೂರುದಿನ ಅಸ್ಪೃಶ್ಯತೆ, ಪ್ರತ್ಯೇಕವಾಸ, ಚಟ್ಟು ಹಚ್ಚುವುದಿದೆ.

ಶುದ್ಧಿ : ಮೂರುರಾತ್ರಿ ಕಳೆದು ನಾಲ್ಕನೇದಿನ ಸ್ನಾನಮಾಡುವುದು, ನಾಲ್ಕನೆ ದಿನ ಸ್ನಾನ ಮಾಡಿದರೂ ಅಸ್ಪೃಶ್ಯತೆಯಿದ್ದು ದೇವರಮನೆಗೆ, ಅಡುಗೆಮನೆಗೆ ಪ್ರವೇಶಿಸುವಂತಿರಲಿಲ್ಲ. ಐದನೇ ದಿನ ಸ್ನಾನದ ನಂತರ ಶುದ್ಧಿಮಾಡಿಕೊಳ್ಳಬೇಕು. ಹಿಂದೆ ಅಗಸಗಿತ್ತಿ ಮೈಲಿಗೆ ಬಟ್ಟೆಯನ್ನು ಒಗೆಯುವ ಪದ್ಧತಿಯಿತ್ತು. ಈಗ ಅವರೇ ತಮ್ಮ ಬಟ್ಟೆಗಳನ್ನು ಒಗೆದುಕೊಳ್ಳುತ್ತಾರೆ.

ಹಾಲು-ತುಪ್ಪ: ಮಂಗಳ ಕಾರ್ಯದಲ್ಲಿ ಆರತಕ್ಷತೆಯ ನಂತರ ಹಾಲು-ತುಪ್ಪವನ್ನು ಸೇರಿಸಿ ಕರ್ತೃಗಳಿಗೆ ಕೊಡುತ್ತಿದ್ದರು. ಈಗ ಮದುವೆಯ ಸಮಯ ವಧು-ವರರಿಗೆ ಕೊಡುವುದು ಬಳಕೆಯಲ್ಲಿದೆ.

ಪುಂಸವನ -ಸೀಮಂತ : ಹಿಂದೆ ನಡೆಯುತ್ತಿತ್ತು, ಈಗ ಅಪರೂಪಕ್ಕೆ ಕೆಲವರು ಆಚರಿಸುತ್ತಾರೆ. ಬಯಕೆ ಶಾಸ್ತ್ರವಾಗಿ ವಿಜೃಂಭಣೆಯಿಂದ ನಡೆಸಲಾಗುತ್ತದೆ. ಏಳು ತಿಂಗಳ ಗರ್ಭವತಿಗೆ ವಿವಿಧ ತರಹದ ಉಂಡೆಗಳು, ಚಕ್ಕುಲಿ, ಅತ್ರಾಸ, ಹೋಳಿಗೆ ಇತ್ಯಾದಿ ತಿಂಡಿಗಳನ್ನು ವಿವಿಧ ಬಗೆಯ ಹಣ್ಣುಗಳನ್ನು ಕೊಡುವ ಶಾಸ್ತ್ರವಾಗಿದೆ. ದಂಪತಿಗಳನ್ನು ದೇವರ ಮುಂದೆ ಕುಳ್ಳಿರಿಸಿ ಆರತಕ್ಷತೆ ಮಾಡಿ ತಿಂಡಿಯನ್ನು ಕೊಡಲಾಗುತ್ತದೆ. ಹಸಿರು ಸೀರೆ, ರವಿಕೆ ಬಟ್ಟೆ ಹಸಿರು ಬಳೆ ಕೊಡುವುದು. ತವರ ಮನೆಯವರು ಹಾಗೂ ಹತ್ತಿರದ ಬಂಧುಗಳನ್ನು ಆಹ್ವಾನಿಸುತ್ತಿದ್ದರು.

ಶಿಶುಜನನ: ಶಿಶುಜನನವಾಗಿ ಹತ್ತುದಿನಗಳವರೆಗೆ ಅಸ್ಪೃಶ್ಯತೆಯಿರುತ್ತದೆ. ಕುಟುಂಬದವರಿಗೆ ದಾಯಾದಿಗಳಿಗೆ ವೃದ್ಧಿ ಇರುತ್ತದೆ ಹನ್ನೊಂದನೇ ದಿನ ಸ್ನಾನ ಮಾಡಿ ಶುದ್ಧಿ ಮಾಡಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಮೊದಲ ಹೆರಿಗೆಯು ತವರ ಮನೆಯಲ್ಲೆ ನಡೆಯುತ್ತದೆ.

ಬಜೆಬೆಣ್ಣೆ ತಿನ್ನಿಸುವುದು: ಮಗುಹುಟ್ಟಿ ಏಳುದಿನವಾದಾಗ ಅಕ್ಕ ಪಕ್ಕದ ಮಹಿಳೆಯರನ್ನು ಕರೆದು ಒಂದು ತಟ್ಟೆಯಲ್ಲಿ ಬಜೆ ಬೆಣ್ಣೆಯನ್ನು ತೇದು ಮಗುವಿನ ಬಾಯಿಗೆ ಹಾಕುತ್ತಾರೆ, ಆರತಿ ಎತ್ತುತ್ತಾರೆ, ಉಂಡಲಿಗೆ ಮಾಡಿ ಹಂಚುತ್ತಾರೆ. ಈಗ ನಾಮಕರಣದ ದಿನದಂದು ಬಜೆಬೆಣ್ಣೆ ತಿನ್ನಿಸುವುದುಂಟು. ಇದರೊಂದಿಗೆ ಚಿನ್ನದ ಚೂರನ್ನು ಕಲ್ಲಿನಲ್ಲಿ ತೇದು ಅದನ್ನು ಮಗುವಿನ ಬಾಯಿಗೆ ಹಾಕುತ್ತಾರೆ.

ನಾಮಕರಣ: ಹೆಣ್ಣಾದರೆ ಹುಟ್ಟಿದ ಹನ್ನೊಂದನೆಯ ದಿನ ನಾಮಕರಣ. ಗಂಡಾದರೆ ಹನ್ನೆರಡನೆಯ ದಿನ ನಾಮಕರಣ ಮಾಡುತ್ತಾರೆ. ಇದರಲ್ಲಿ ಜಾತಕರಣ, ನಾಮಕರಣ, ಅನ್ನಪ್ರಾಶನ, ನಿಷ್ಕ್ರಮಣ ಎಲ್ಲವೂ ಒಂದೇದಿನ ನಡೆಯುತ್ತದೆ. ಅನಿವಾರ್ಯ ತೊಂದರೆಯಿದ್ದರೆ ನೂರೊಂದನೆಯ ದಿನ ಅಥವಾ ಶುಭದಿನದಂದು ನಡೆಸಲಾಗುತ್ತದೆ. ಅಜ್ಜ, ಅಜ್ಜಿಯರು ಹೆಸರಿಡುವ ಕ್ರಮವಿತ್ತು.

ತೊಟ್ಟಿಲು ಶಾಸ್ತ್ರ: ನಾಮಕರಣದ ದಿನ ಮಧ್ಯಾಹ್ನದ ಮೇಲೆ ತೊಟ್ಟಿಲ ಒಳಗೆ ಒಂದು ಗುಂಡುಕಲ್ಲನ್ನು ಇರಿಸಿ ಸೋದರ ಮಾವನಿಂದ ಪೂಜೆ ಮಾಡಿಸುತ್ತಾರೆ. ಅನಂತರ ತೊಟ್ಟಿಲುಕಟ್ಟಿ ಐದು ಜನ ಮುತ್ತೈದೆಯರು ಮಗುವನ್ನು ಮಲಗಿಸಿ ತೂಗುವರು ಇದಕ್ಕೆ ಮೊದಲು ತೊಟ್ಟಿಲಿಗೆ ಪೂಜೆ ಮಾಡುತ್ತಾರೆ. ಮೂರು ಬಾರಿ ಮಗುವನ್ನು ತೊಟ್ಟಿಲ ಮೇಲಿಂದ ಸುತ್ತುಬರಿಸಿ ಒಳಗೆ ಮಲಗಿಸುತ್ತಾರೆ. ಒಂದು ತಟ್ಟೆಯಲ್ಲಿ ಬೆಣ್ಣೆ, ಜೇನುತುಪ್ಪ ಹಾಗೂ ಚಿನ್ನದ ಉಂಗುರವನ್ನು ತೇದು ಮಗುವಿಗೆ ಉಂಗುರದಲ್ಲಿ ತಿನ್ನಿಸುತ್ತಾರೆ. ತೊಟ್ಟಿಲು ತೂಗುವಾಗ ಪುರೋಹಿತರು ಮಂಗಲಾಷ್ಟಕ ಪಠಿಸುತ್ತಾರೆ.

ಬಾಲೆ ಬಾಣಂತಿ ನೋಡಲು ಬರುವುದು: ಹತ್ತು ದಿನಗಳೊಳಗೆ ಅಥವಾ ಅನಂತರ ಸಮೀಪ ಬಂಧುಗಳು ಆಗಮಿಸಿ ಸಿಹಿ ನೀಡಿ ಯೋಗಕ್ಷೇಮ ವಿಚಾರಿಸುವರು. ನಾಮಕರಣಕ್ಕಿಂತ ಮೊದಲು ಶಿಶುವಿಗೆ ಉಡುಗೊರೆ ನೀಡುವುದಿಲ್ಲ.

ಬಾಣಂತಿತನ: ಹತ್ತುದಿನದವರೆಗೆ ಶುಂಠಿ, ಮೆಣಸು ಮೊದಲಾದವುಗಳನ್ನು ಹಾಕಿದ ಖಾರದ ಸಾಂಬಾರು, ಬಿಸಿ ಅನ್ನ ತಿನ್ನುವುದು. ಅನಂತರ ಲೇಹ್ಯ-ಕಷಾಯಗಳನ್ನು ಕೊಡುತ್ತಾರೆ. ಕನಿಷ್ಠ ಮೂರು ತಿಂಗಳು ವಿಶ್ರಾಂತಿ ನೀಡುತ್ತಾರೆ.

ಕಿವಿಚುಚ್ಚುವುದು: ಮಗುವಿಗೆ ಶುಭದಿನ, ಶುಭಗಳಿಗೆಯಂದು ಅಕ್ಕಸಾಲಿಗರ ಮನೆಗೆ ಅಥವಾ ಅಂಗಡಿಗೆ ಹೋಗಿ ಕಿವಿಚುಚ್ಚಿಸಿ ಚಿನ್ನವನ್ನು ಹಾಕಿಸುತ್ತಾರೆ.ಕೆಲವರು ಅಕ್ಕಸಾಲಿಗರನ್ನು ಮನೆಗೆ ಕರೆಸುವುದು ಉಂಟು.

ಚೂಡಾಕರ್ಮ: ಬ್ರಾಹ್ಮಣ ಜಾತಿಯವರು ಚೂಡಾಕರ್ಮವನ್ನು ವಿಧಿವಿಧಾನದಂತೆ ನಡೆಸುತ್ತಿದ್ದರು. ಮೂರು ವರ್ಷ ಅಥವಾ ಐದು ವರ್ಷದ ಹುಡುಗನಿಗೆ ಹಣೆಯ ಮೇಲ್ಭಾಗದಲ್ಲಿ ಅರ್ಧ ವೃತ್ತಾಕಾರ ಕೂದಲನ್ನು ಕತ್ತರಿಸಿ ಜುಟ್ಟು ಬಿಡುತ್ತಿದ್ದರು. ಎಲ್ಲಾ ಗಂಡಸರಿಗೂ ಶಿಖೆ ಕಡ್ಡಾಯವಾಗಿತ್ತು. ಈಗ ದೇವಾಲಯಗಳಿಗೆ ಹೋಗಿ ಹರಕೆಯಂತೆ ನುಣ್ಣಗೆ ಬೋಳಿಸಿಕೊಂಡು ಬರುತ್ತಾರೆ. ಕೆಲವರು ಕ್ರಾಪ್‌ಕಟ್ ಮಾಡಿಸುತ್ತಾರೆ. ಇತ್ತೀಚೆಗೆ ಉಪನಯನದ ದಿನವೇ ಚೂಡಾಕರ್ಮ ಮಾಡಿಸಿಕೊಳ್ಳುತ್ತಾರೆ. ಇತರೆ ಜಾತಿಯವರು ಚೂಡಕರ್ಮಗಳನ್ನು ಮಾಡಿಸುವುದು ಕಡಿಮೆ ಪ್ರಮಾಣದಲ್ಲಿದೆ.

ಹೆರಿಗೆ-ಬಾಣಂತಿತನ: ಹಿಂದೆ ಮನೆಯಲ್ಲೇ ಹೆರಿಗೆ ಆಗುತ್ತಿತ್ತು. ಪ್ರತಿಗ್ರಾಮದಲ್ಲೂ ಅನುಭವಿ ಹಿರಿಯ ಹೆಂಗಸರು ಇರುತ್ತಿದ್ದರು. ಅವರು ಹೆರಿಗೆ ಮಾಡಿಸುತ್ತಿದ್ದರು. ಬಾಣಂತಿಯ ಆರೈಕೆಯನ್ನು ಮಾಡಲಾಗುತ್ತಿತ್ತು. ಹೊಟ್ಟೆ ಚಟ್ಟಲು ಸೀರೆಯನ್ನು ಸೊಂಟಕ್ಕೆ ಬಿಗಿಯಾಗಿ ಸುತ್ತು ಹಾಕಿ ಕಟ್ಟುತ್ತಿದ್ದರು. ಪ್ರತಿದಿನ ಬಾಲೆ ಬಾಣಂತಿಯರಿಗೆ ಬಿಸಿನೀರಿನ ಸ್ನಾನ ಮಾಡಿಸುತ್ತಿದ್ದರು. ಈಗ ಗರ್ಭಿಣಿಯೆಂದು ಗೊತ್ತಾದಾಗಿನಿಂದಲು ಆಸ್ಪತ್ರೆಯ ಸಂಪರ್ಕದಲ್ಲಿರುತ್ತಾರೆ. ವೈದ್ಯರ ತಪಾಸಣೆ ಮಾಡಿಸಿ ಔಷಧಿ, ಟಾನಿಕ್ ಪಡೆಯಲಾಗುತ್ತದೆ. ಈಗ ಹೆರಿಗೆಯು ಆಸ್ಪತ್ರೆಯಲ್ಲಿ ನಡೆಯುತ್ತಿದ್ದು, ನಿತ್ಯ ಬಾಲೆ ಬಾಣಂತಿಯರಿಗೆ ಸ್ನಾನ ಮಾಡಲೇಬೇಕೆಂದೇನೂ ಇಲ್ಲ. ಬಾಣಂತಿಯ ಆರೈಕೆಗಾಗಿ ಕಷಾಯ ಕುಡಿಯುವುದಿಲ್ಲ. ಆಧುನಿಕ ಔಷಧಿ ಪಡೆಯುತ್ತಾರೆ.

ಮರ್ಯಾದೆ: ವಧುವಿನ ಸಹೋದರನು ಅರಳನ್ನು ವಧೂವರರ ಕೈಗೆ ಕೊಡುತ್ತಾನೆ. ಆತನಿಗೆ ಮತ್ತು ಅಗ್ನಿ ತಂದವರಿಗೆ ಉಡುಗೊರೆಯಿದೆ. ವಧುವಿನ ಕಡೆಯವರು ತಮ್ಮ ಸಮೀಪ ಬಂಧುಗಳು, ಹಿರಿಯರಿಗೆ ಮತ್ತು ವರನ ತಂದೆ ತಾಯಿ , ವರನ ಅಕ್ಕ ತಂಗಿ(ಕಲಶಗಿತ್ತಿ), ವರನ ಸೋದರ ಮಾವ, ಅಜ್ಜ ಅಜ್ಜಿಯರಿಗೆ ಮರ್ಯಾದೆಯ ರೂಪವಾಗಿ ಉಡುಗೊರೆ ಕೊಡುತ್ತಾರೆ. ವರನ ಕಡೆಯವರು ತಮ್ಮ ಸಮಾಜ ಬಂಧುಗಳಿಗೆ, ವಧುವಿನ ತಂದೆ ತಾಯಿಯರಿಗೆ, ಕಲಶಗಿತ್ತಿಗೆ, ಸೋದರಮಾವನಿಗೆ ಮತ್ತು ಪುರೋಹಿತರಿಗೆ ಕೊಡುತ್ತಾರೆ. ಮದುಮಗಳ ಜೊತೆಗೆ ಅಜ್ಜಿ ಹೋಗುವ ಪದ್ಧತಿಯಿದೆ. ಅವರಿಗೆ ವರನ ಮನೆಯಲ್ಲಿ ಸೀರೆ ಕೊಡುವರು.[18]

ಕೈಎತ್ತಿ ಕೊಡುವ ಶಾಸ್ತ್ರ: ವಿವಾಹದ ನಾಲ್ಕನೇ ದಿನ ಮಧ್ಯಾಹ್ನದ ಮೇಲೆ ಮಂಟಪದಲ್ಲಿ ಹಸೆಚಾಪೆ,

ಜಮಖಾನಹಾಸಿ, ವಧೂವರರನ್ನು ಕುಳ್ಳಿರಿಸಿ ವಧುವರರ ಸೋದರ ಮಾವಂದಿರು ನಿಶ್ಚಯತಾಂಬೂಲದ ಎಲೆ ಅಡಿಕೆಗೆ ಸುಣ್ಣ ಬೆರಸಿ ನವದಂಪತಿಗಳಿಗೆ ನೀಡುತ್ತಾರೆ. ಇಲ್ಲಿಂದ ಮುಂದೆ ಅವರು ಎಲೆ ಅಡಿಕೆ ತಿನ್ನಬಹುದು. ಅನಂತರ ಆರತಿ ಎತ್ತಿ, ಮಡಿಲು ತುಂಬಿಸಿ, ಹಾಲು ತುಪ್ಪ ನೀಡಿ ವಧೂವರರಿಗೆ ತಂದೆ-ತಾಯಿ ಬಂಧು ಬಳಗದವರು ಸಕ್ಕರೆ ನೀಡುತ್ತಾರೆ. ಬಳುವಳಿ ಸಾಮಾನು (ಅಡಿಗೆ ಊಟದ ಪಾತ್ರೆಗಳು, ಬೊಂಬೆ, ತೊಟ್ಟಿಲು, ಕಡಗೋಲು, ಆರತಿ, ಘಂಟೆ ಇತ್ಯಾದಿ) ನೀಡುತ್ತಾರೆ. ಪುರೋಹಿತರು ವಧೂ-ವರರ ಕೈಜೋಡಿಸಿ ಅತ್ತೆ ಮಾವಂದಿರ ಕೈಮೇಲೆ ವಧುವಿನ ತಂದೆ-ತಾಯಂದಿರ ಕೈ ಇರಿಸಿ 'ಈ ವರೆಗೆ ಪಾಲಿಸಿದ ನನ್ನ ಮಗಳನ್ನು ನಿಮ್ಮ ಕೈಗೆ ಒಪ್ಪಿಸಿದ್ದೇನೆ. ನಿಮ್ಮ ಮಗಳಂತೆ ಪಾಲಿಸಿ' ಎಂದು ಹೇಳುತ್ತಾರೆ. ಇದನ್ನು ಹೆಣ್ಣು ಕೈ ಎತ್ತಿ ಕೊಡುವುದು ಎನ್ನುತ್ತಾರೆ. ಅನಂತರ ವರನ ಮನೆಗೆ ದಿಬ್ಬಣ ಹೊರಡುತ್ತದೆ.

ನವದಂಪತಿಗಳು ಬಂದಾಗ ವರನಮನೆಯಲ್ಲಿನ ಶಾಸ್ತ್ರ: ದಿಬ್ಬಣ ಬಂದೊಡನೆ ನವದಂಪತಿಗಳ ಪಾದ ತೊಳೆಸಿ, ಜಗುಲಿಯಲ್ಲಿ ಕುಳ್ಳಿರಿಸುವುದು. ಸುಮುಹೂರ್ತದಲ್ಲಿ ದ್ವಾರಪೂಜೆ (ಬಾಗಿಲಿಗೆ ತೆರೆಹಾಕಿರುತ್ತಾರೆ) ಮತ್ತು ಒಂದು ಸಿದ್ದೆ ಅಕ್ಕಿಯನ್ನು ಹೊಸ್ತಿಲ ಮೇಲೆ ಇರಿಸಿರುತ್ತಾರೆ. ಪುರೋಹಿತರು ಮಂಗಳಾಷ್ಟಕ ಹೇಳುವಾಗ ವಧು ಸಿದ್ದೆಯನ್ನು ಬಲಗಾಲಲ್ಲಿ ಎಡವಿ ಅಕ್ಕಿಯನ್ನು ಚಲ್ಲಿ ಒಳಗೆ ಪ್ರವೇಶಿಸುವುದು. ಅನಂತರ ವರನ ಸಹೋದರಿಯರು ಬಾಗಿಲು ತಡೆಯುವುದು. ವರನು ತನ್ನ ಹೆಂಡತಿಯ ಹೆಸರನ್ನು ಹೇಳುವವರೆಗೂ ಒಳಗೆ ಬಿಡುವುದಿಲ್ಲ. ಹೆಸರನ್ನು ಹೇಳಿದ ಮೇಲೆ ಒಳಗೆ ಬಿಡುತ್ತಾರೆ. ಅನಂತರ ಔಪಾಸನ, ನೂತನ ವಧೂಗೃಹಪ್ರವೇಶನೀಯಹೋಮ ಆರತಕ್ಷತೆ, ವಧು ಚಟ್ಟು ಹೊಯ್ಯುವುದು, ಹಾಲು ಉಕ್ಕಿಸುವುದು ಮೊದಲಾದ ಶಾಸ್ತ್ರಗಳನ್ನು ಮಾಡಿಸುತ್ತಾರೆ.

ಚಟ್ಟು ಹೊಯ್ಯುವುದು: ಅರಶಿಣ ಬಣ್ಣದ ತ್ರಿಕೋನಾಕಾರದ (ಯೋನಿಯ ಚಿಹ್ನೆ) ಗುರುತಾಗಿ ಕಾಣುವ 'ಚಟ್ಟು' ಮೂಲತಃ ಲೈಂಗಿಕ ಸಂಕೇತವಾಗಿದೆ. ಸಂತಾನಾಪೇಕ್ಷೆ, ಮನಸ್ಸಿಗೆ ತಾನು ಸೃಷ್ಟಿಕ್ರಿಯೆಗೆ ಸಿದ್ಧಳೆಂಬುದರ ಸೂಚಕವಾಗಿದೆ.

ಹಾಲುತುಪ್ಪ: ಮೈನೆರೆದ ನಾಲ್ಕನೇದಿನ ಗಂಡನಮನೆಯವರು ದಿಬ್ಬಣ ಸಮೇತ ಬಂದು ನಡೆಸುವ ಶಾಸ್ತ್ರ. ಮುಟ್ಟಾದ ಪ್ರಕ್ರಿಯೆಯಲ್ಲಿ ರಕ್ತವನ್ನು ಕಳಕೊಂಡ ಹೆಣ್ಣು ಹಾಲುತುಪ್ಪದ ಮೂಲಕ ಪುನಃ ರಕ್ತವನ್ನು ಪಡೆಯಲು ಎಳ್ಳು ಕುಟ್ಟಿ ಬೆಲ್ಲಸೇರಿಸಿ ಚಿಗಳಿಉಂಡೆ ಮಾಡಿ ತಿನ್ನಲು ಕೊಟ್ಟು ಅನಂತರ ಚಟ್ಟು ಹೊಯ್ಯುವುದು.

ಬಯಕೆ ಶಾಸ್ತ್ರ: ಗರ್ಭಿಣಿಯರಾದಾಗ ಅಪೇಕ್ಷೆಗಳು ಹೆಚ್ಚಾಗಿರುತ್ತವೆ. ಆಕೆಯ ಅಪೇಕ್ಷೆಗಳನ್ನು ಪೂರೈಸಿ ಸಂತೋಷವಾಗಿರಲು ವಿವಿಧ ತಿಂಡಿ ತಿನಿಸು, ಸೀರೆ ಇತ್ಯಾದಿ ನೀಡಿ ಸಂತೋಷಗೊಳಿಸುವುದರ ಸೂಚಕವಾಗಿದೆ.

ಸಂಬಂಧಗಳು: ಜನನದಿಂದ ಮರಣದವರೆಗಿನ ಎಲ್ಲಾ ಕಾರ್ಯಗಳಲ್ಲೂ ರಕ್ತಸಂಬಂಧಿಕರ,

ಬಂಧು ಬಳಗದವರ ಸಂಬಂಧವಿರುವುದು ಕಂಡುಬರುತ್ತದೆ. ವಧೂ–ವರ ಇಬ್ಬರ ಸೋದರಮಾವಂದಿರು, ಸಹೋದರ ಸಹೋದರಿಯರು, ಸೋದರತ್ತೆಯರು, ತಂದೆ–ತಾಯಿ ಅಜ್ಜಿ–ಅಜ್ಜ ಇವರುಗಳಿಗೆ ನಿರ್ದಿಷ್ಟ ಜವಾಬ್ದಾರಿ– ಕರ್ತವ್ಯಗಳಿವೆ. ಭಾವ (ಅಕ್ಕ–ತಂಗಿಯರ ಗಂಡ) ಇವರಿಗೆ ತೆರೆಶಾಲು ಹಿಡಿಯುವುದು ಕರ್ತವ್ಯ. ಇದು ರಕ್ತ ಸಂಬಂಧವನ್ನು ಸೂಚಿಸುವ. ಮತ್ತು ಗೌರವಿಸುವ ಪದ್ಧತಿಯಾಗಿದೆ.

ಕಾಯಿಸಿಂಗಾರ ಕೊಡುವುದು: ಪ್ರಾಯಶಃ ಇನ್ನೂ ಒಡೆಯದ ಸಿಂಗಾರವನ್ನು (ಯೋನಿಯ ಪ್ರತೀಕ) ಇಂಥದಿನದಂದು ಗರ್ಭಾದಾನ ಕಾರ್ಯಕ್ರಮವೆಂದು ಶುಭಸೂಚಕವಾಗಿ ನೀಡುವುದಾಗಿದೆ.

ಮಡಿಲು ತುಂಬುವುದು: ಸಿಂಗಾರ ಸ್ತ್ರೀ ಗರ್ಭಾಶಯದ ಸಂಕೇತವಾಗಿದೆ. ಅರಶಿಣ–ಎಳ್ಳು ಗೋಪುರಗಳು ಸ್ತ್ರೀ–ಪುರುಷ, ಅಂಡಾಣು– ಬೀಜಾಣುಗಳ ಸಂಕೇತ. ಇವುಗಳನ್ನು ಮಡಿಲು ತುಂಬುವುದು. ಇದು ಸ್ತ್ರೀಗೆ ಪುರುಷನ ಸಂಪರ್ಕಕ್ಕೆ ಸಿದ್ಧಳಾಗು ಎಂಬುದರ ಸಂಕೇತ

ಎಳ್ಳು ಬೆಲ್ಲದ ಗೋಪುರ ಪುಡಿಮಾಡಿ ತಿನ್ನುವುದು: ತಾನು ಬೀಜಾಣುವನ್ನು ಗರ್ಭದಲ್ಲಿ ಸ್ವೀಕರಿಸಿದ್ದೇನೆ ಎಂಬುದರ ಸಂಕೇತವಾಗಿದೆ.

ತೊಟ್ಟಿಲಲ್ಲಿ ಗುಂಡಪ್ಪನನ್ನಿಡಿಸಿ ಪೂಜಿಸುವುದು: ತೊಟ್ಟಿಲಲ್ಲಿ ಮಲಗುವ ಶಿಶು ಗುಂಡುಕಲ್ಲಿನಂತೆ ಗಟ್ಟಿಯಾಗಿರಲಿ ಎಂಬುದರ ಸಂಕೇತವಾಗಿದೆ.

ಹಿಂದಿನ ಕಾಲದ ಸಂಪ್ರದಾಯಗಳು:

1. ಗಂಡಸರು ಬೋಳು ತಲೆಯಲ್ಲಿರಬಾರದು. ಪ್ರವಾಸ, ದಿಬ್ಬಣ, ಆರತಕ್ಷತೆ, ಸಭಾಪೂಜೆಗಳಲ್ಲಿ ಮುಂಡಾಸು ಅಥವಾ ಟೋಪಿ, ಕಚ್ಚೆಪಂಚೆ, ಶಲ್ಯಧರಿಸಿರಬೇಕು.
2. ಮನೆಗೆ ಅತಿಥಿ– ಅಭ್ಯಾಗತರು ಬಂದಾಗ (ಹಿರಿಯರು) ಕಾಲು ತೊಳೆಯಲು ನೀರು ನೀಡಿ ನಮಸ್ಕರಿಸುವುದು.
3. ಮನೆಗೆ ಬಂದವರಿಗೆ ಗಂಗೋದಕ, ಊಟ ನೀಡಿ ಉಪಚರಿಸುವುದು.
4. ಕನ್ಯಾದಾನದ ನಂತರ ಅಗ್ನಿ ಪ್ರತಿಷ್ಠೆ.
5. ಧಾರೆಸೀರೆ ಪುರೋಹಿತರಿಗೆ ಕೊಡುವ ಪದ್ಧತಿ ಇಲ್ಲ.
6. 4ನೇ ದಿನ ನಾಗೋಲೆ 5ನೇದಿನ ಸ್ತಂಭ ಬಲಿ, ಹೊಳಲು.
7. ಋತುವಾಗದ ಕನ್ಯೆ ಮದುವೆ.
8. ಕನ್ಯೆ ಗಂಡನ ಮನೆಯಲ್ಲಿ ಋತುವಾದರೆ ತೌರು ಮನೆಗೆ, ತೌರುಮನೆಯಲ್ಲಿ ಋತುವಾದರೆ ಗಂಡನ ಮನೆಗೆ ಒಸಗೆ ಕೊಡುವುದು. (ಕಾಯಿ–2, ಬಾಳೆ ಹಣ್ಣು–4 ಅರಶಿನ ಕುಂಕುಮ, ಹೂ. ತಾಂಬೂಲ, ಸಿಂಗಾರ ಬಳೆ, ಖಣ) ಇಬ್ಬರು ಹೋಗಿ ಕೊಡುವುದು.
9. ಗರ್ಭಾದಾನ ದಿನ ನಿಶ್ಚಯ ಮಾಡಿ ತವರು ಮನೆಗೆ ಮೇಲಿನ ವಸ್ತುಗಳನ್ನು ನೀಡುವುದು.

ಇದಕ್ಕೆ 'ಕಾಯಿ ಸಿಂಗಾರ' ಕೊಡುವುದು ಎನ್ನುತ್ತಿದ್ದರು (ಅಡಿಕೆ ಸಿಂಗಾರ).

10 ಗರ್ಭಾದಾನದ ದಿನ ತೌರು ಮನೆಯವರು ಮೇಲಿನ ವಸ್ತುಗಳೊಂದಿಗೆ ಅರಿಶಿನ ಗೋಪುರ, ಎಳ್ಳು ಗೋಪುರ, ಉಂಡೆ ಅಡಿಕೆ ಇರಿಸಿ ಮಡಿಲು ತುಂಬುವುದು, 2 ಖಣ-1ಸೀರೆ.

11. ಪ್ರಥಮ ರಜೋದರ್ಶನವಾದೊಡನೆ ಲಿಂಬೆ ಗಿಡದ ಹತ್ತಿರ ನಿಂತಿರುವುದು. ಮುತ್ತೈದೆಯರು ಅರಶಿನ ಕುಂಕುಮದೊಂದಿಗೆ ಹೋಗಿ ಮನೆಗೆ ಕರೆತರುವುದು. ಪ್ರತ್ಯೇಕವಾಸ್ತವ್ಯ, ಅಸ್ಪೃಶ್ಯತೆ ಆಚರಣೆ, ಪ್ರತಿದಿನ ಎಳ್ಳು ಬೆಲ್ಲ ತಿನ್ನಲು ಕೊಡುವುದು, ಚಟ್ಟುಹಚ್ಚುವುದು ಸಂಜೆ, ಆರತಿ ಎತ್ತುವುದು, 4ನೇ ದಿನ ಸ್ನಾನ ಅಡಿಗೆ ಮನೆ, ದೇವರ ಮನೆಗೆ ಪ್ರವೇಶವಿಲ್ಲ 5ನೇ ದಿನ ಸ್ನಾನದ ನಂತರ ಶುದ್ಧಿ, ಅಡುಗೆ ಮಾಡಲು, ದೇವರ ಮನೆಗೆ ಹೋಗಲು ಅವಕಾಶ.

12 ಮಗು ಹುಟ್ಟಿ 7ನೇ ದಿನ ಮಗುವಿಗೆ ಬೆಣ್ಣೆ, ಜೇನುತುಪ್ಪ, ಬಜೆಯನ್ನು ಬಂಗಾರದ ಉಂಗುರದಿಂದ ತೇಯ್ದು ತಿನ್ನಿಸುವುದು, ಬಾಣಂತಿ, ಮಗುವಿಗೆ ಆರತಿ, ಉಂಡಲಿಗೆ ಮಾಡಿ ಹಂಚುವುದು.

13. ವಧೂ ಪ್ರವೇಶದ ನಂತರ ಚಟ್ಟು ಹಚ್ಚುವ ಪದ್ಧತಿ ಇದೆ.

14. ಮಹಿಳೆಯರಿಗೆ ಕೆಲವು ವ್ರತ, ಪೂಜೆ ಇದೆ.

15. ವಿವಾಹ-ಉಪನಯನಗಳ ಹಿಂದಿನ ದಿನ, ಕೇಲು-ಕಂದೀಲು ಅರಶಿನ ಕುಂಕುಮ, ಬಳೆ-ಬಿಚ್ಚೋಲೇ ಅಕ್ಕಿ, ತಾಂಬೂಲ ಹಾಕಿ ಕುಲದೇವತಾಸ್ಥಾಪನೆ ಅವರ ಮುಂದೆ ಅರಶಿನ ಕುಟ್ಟುವುದು, ಗೋಧಿ ಬೀಸುವುದು ಇತ್ಯಾದಿ. (ಮಂಗಳ ಕಾರ್ಯ ಪ್ರಾರಂಭಿಸುವ ಸಂಕೇತವಾಗಿ).

16. ಹಿಂದಿನ ದಿನ ಮದುಮಗಳ ಜೊತೆಗೆ ಕಲಶಗಿತ್ತಿಯನ್ನು ಕರೆಸಿ ಎಣ್ಣೆ ಹಚ್ಚುವ ಶಾಸ್ತ್ರವಾದ ನಂತರ ಸ್ನಾನ.

17. ಕಿರಿಯರ ಅಂತ್ಯಕ್ರಿಯೆ-ಶ್ರಾದ್ಧಗಳಿಗೆ ಸಮೀಪ ಬಂಧುಗಳ ವಿನಾ ಬೇರೆ ಹಿರಿಯರು ಭಾಗವಹಿಸುವುದು ಕಡಿಮೆ.

18. ಬ್ರಹ್ಮೋಪದೇಶದ ನಂತರ ತಂಗಳನ್ನ ಊಟ ಮಾಡುವುದಿಲ್ಲ.

ಬ್ರಾಹ್ಮಣರು ದಕ್ಷಿಣ ಕನ್ನಡದಿಂದ ಘಟ್ಟದಮೇಲೆ ಬಂದವರಾದರೂ, ಘಟ್ಟದಿಂದ ದಕ್ಷಿಣ ಕನ್ನಡಕ್ಕೆ ಹೋಗಿ ಬಂದವರಿದ್ದರೂ ಕರಾವಳಿ ಬ್ರಾಹ್ಮಣರ ನಡವಳಿಕೆಗೆ ಸಾಮ್ಯ ಕಾಣುವುದಿಲ್ಲ. ಮದುವೆಯಲ್ಲಿ ವಧುವಿಗೆ ಬಳಿಸೀರೆ ಉಡಿಸಿ ಕನ್ಯಾದಾನದ ನಂತರ ಆ ಸೀರೆಯನ್ನು ಪುರೋಹಿತರಿಗೆ ಕೊಡುವುದಿಲ್ಲ. ಐದನೇ ದಿನ ನವದಂಪತಿಗಳು ಕೆರೆಗೆ ಹೋಗಿ ಮೀನು ಹಿಡಿಯುವ ಪದ್ಧತಿಯಿಲ್ಲ. ಶ್ರಾದ್ಧದಲ್ಲಿ ಸಹೋದರರು ಒಟ್ಟಿಗೆ ಶ್ರಾದ್ಧ ಮಾಡುತ್ತಿದ್ದರೆ ಪ್ರತ್ಯೇಕ ಪಿಂಡದಾನವಿಲ್ಲ. ವಾಯಸಕ್ಕೆ ಪ್ರತಿ ಮಕ್ಕಳಿಗೂ (ಹೆಣ್ಣು ಮಕ್ಕಳು ಸೇರಿ) ಪ್ರತ್ಯೇಕ ಎಡೆ ಬಡಿಸಿ ಹೊರಗಡೆ ಇಡುವುದಿಲ್ಲ ವಾಯಸ ಪಿಂಡಮಾತ್ರ. ಕನ್ಯಾದಾನವಾದ ನಂತರ ಮಂಟಪಕ್ಕೆ ಅಗ್ನಿತರುವುದು. ಮರಣ ಹೊಂದಿದ ಮನೆಗೆ 10 ದಿನಗಳವರೆಗೆ ಸಿಹಿ ತಿಂಡಿ ಕೊಡುವುದಿಲ್ಲ ಮಹಿಳೆಯರಿಗೆ ವ್ರತಗಳ ಆಚರಣೆಯಿದೆ, ಕರಾವಳಿಯಲ್ಲಿ ಇಲ್ಲ. ಮರಣದಲ್ಲಿ

13ನೇ ದಿನ ಶ್ರವಣಾರಾಧನೆ, 361 ನೇ ದಿನ ಪಿತೃಸಂಗವ ಶ್ರಾದ್ಧವಿಲ್ಲ.[19]

ಪಿತೃ ಕಾರ್ಯ ಸಂಪ್ರದಾಯಗಳು:

1. ಶ್ರಾದ್ಧಕರ್ತೃ, ಪೂರ್ವಪಂಕ್ತಿಯ ಬ್ರಾಹ್ಮಣರು, ಅಡುಗೆ ಮಾಡುವವರು, ನೀರನ್ನು ಕುಡಿಯದೆ ಉಪವಾಸವಿರುವರು.
2. ಮೃತಾಶೌಚವಿರುವವರ ಸ್ಪರ್ಶವಿಲ್ಲ, ಅವರಿಂದ ಆಹಾರ ಸ್ವೀಕರಿಸುವುದಿಲ್ಲ.
3. ಪಿತೃಪಕ್ಷದಲ್ಲಿ ಮಹಾಲಯ ಅಥವಾ ವಿಷ್ಣುಶ್ರಾದ್ಧ ತರ್ಪಣ.
4. ಪರ್ವಕಾಲ, ಗ್ರಹಣಗಳಲ್ಲಿ ತರ್ಪಣ ಕೊಡುವುದು.
5. ಶ್ರಾದ್ಧದಲ್ಲಿ ವಾಯಸಕ್ಕೆ ಪ್ರತ್ಯೇಕ ಎಡೆ ಬಡಿಸುವುದಿಲ್ಲ, ವಾಯಸ ಪಿಂಡ ಮಾತ್ರ.
6. ಅಪರಾಹ್ಣಾಧಿಕ್ಯ ಪಕ್ಷ– ಚಾಂದ್ರಮಾನ ತಿಥಿ.
7. ಅಬ್ದವಿಮೋಕ (ಮಾಸಿಕ) ಪ್ರಥಮಾಬ್ದಿಕ (ವರ್ಷಾಂತಿಕ) ಮಾತ್ರ ಸೌರಮಾನದಂತೆ 13ನೇದಿನ ಶ್ರವಣಾರಾಧನೆ, 360ನೇ ದಿನಕ್ಕೆ ಪತಂಗ ಶ್ರಾದ್ಧವಿಲ್ಲ.
8. ಸಮೀಪ ಬಂಧುಗಳಲ್ಲಿ ಮರಣವಾದವರ ಮನೆಗೆ ಗೌರಿ ದೀಪಾವಳಿ ಯುಗಾದಿ ಹಬ್ಬಗಳಲ್ಲಿ ಸಿಹಿ ತಿಂಡಿ, ಕೊಡುವುದಿಲ್ಲ.
9. ಸಂಪಿಡೀಕರಣದ ದಿನ ಪುಣ್ಯಾಹ. ಆರತಿ ಆದನಂತರ ಕರ್ತೃಗಳಿಗೆ ಮಡಿಕೆ ಬಿಚ್ಚಿದ ಹೊಸವಸ್ತ್ರ ಹಿಂಭಾಗದಿಂದ ಹಾಕುವುದು (ಆ ಬಟ್ಟೆಯನ್ನು ಒಂದು ವರ್ಷದ ನಂತರ ಬಳಸಬಾರದು)
10. ಅಕ್ಕ ತಂಗಿಯರು ವಿಧವೆಯರಾದರೆ 12ನೆಯ ದಿನ ಶುದ್ಧಸ್ನಾನವಾದ ನಂತರ ಬಚ್ಚಲಲ್ಲಿ ಹಿಂಭಾಗದಿಂದ ಹೊಸ ಸೀರೆ ಮಡಿಕೆ ಬಿಚ್ಚಿ ಹಿಂಭಾಗದಿಂದ ಹಾಕುವುದು.
11. ವಿಧವೆ ಸಹೋದರಿಯನ್ನು 12ನೆಯ ದಿನ ಸಂಜೆ ತೌರು ಮನೆಗೆ ಕರೆತಂದು ಮಾರನೆ ದಿನ ಬೆಳಿಗ್ಗೆ ಅಲ್ಲಿಗೆ ಕಳುಸುವುದು.
12. ಶವಕ್ಕೆ ತಣ್ಣೀರು ಸ್ನಾನ (ಎಣ್ಣೆ ಹಚ್ಚಿ ಬಿಸಿನೀರಿನ ಸ್ನಾನವಿಲ್ಲ)

ಶ್ರಾದ್ಧದ ಅಡುಗೆ :

ತರಕಾರಿಗಳು, ಕದಳೀಪಂಚಕ (ಬಾಳೆಕಾಯಿ, ಹಣ್ಣು, ದಿಂಡು, ಮೂತಿ(ಹೂ) ಬಾಳೆಎಲೆ) ಕೆಸು, ನೆಲ್ಲಿ, ಹಾಗಲ, ಕಳಲೆ, ಪದಾರ್ಥಗಳು, ವಿಶೇಷವೆಂದರೆ ಅರಶಿಣ, ಇಂಗು, ಕಡಲೆಬೇಳೆ ಬಳಸುವುದಿಲ್ಲ. ಕಂಚಿಕಾಯಿ ಉಪ್ಪಿನಕಾಯಿ, ತೊವ್ವೆ, ನೆಲ್ಲಿಕಾಯಿಯ ಹಸಿವಾಳೆ, ಪಲ್ಯಗಳು, ಮಜ್ಜಿಗೆ ಹುಳಿ. ಕಾಯಿರಸ, ಸಾಸ್ವೆ ಇತ್ಯಾದಿ.

ಭಕ್ಷ್ಯಗಳು: ಒಡೆ. ಸುಕ್ಕಿನುಂಡೆ. ಮುಳಕ, ರವೆ–ಎಳ್ಳು ಉಂಡೆ ಇತ್ಯಾದಿ.

ಶ್ರಾದ್ಧದಲ್ಲಿ ಬಡಿಸುವ ಕ್ರಮ:

ಅಭಿಗಾರ, ಸಿಹಿಪಲ್ಯ, ಪಲ್ಯಗಳು, ಸಾಸಿವೆ, ಕಂಚಿಕಾಯಿಯ ಉಪ್ಪಿನ ಕಾಯಿ, ಅನ್ನ, ನೆಲ್ಲಿಕಾಯಿ ತಂಬುಳಿ, ಒಡೆ, ಅಭಿಗಾರ, ಅನಂತರ ಹಸಿವಾಳೆ ತೊವ್ವೆ ಪಲ್ಯ, ಮಜ್ಜಿಗೆಹುಳಿ, ಕಾಯಿರಸ, ಪಾಯಸ, ರಸಾಯನ, ಮಜ್ಜಿಗೆ.

ಮಂಗಲ ಸಮಾರಂಭಗಳಲ್ಲಿ ಬಡಿಸುವ ಕ್ರಮ:

1. ಅಭಿಗಾರ, 2. ಪಾಯಸ, 3. ಕೋಸಂಬ್ರಿ, 4. ಕಡಲೆ ಹೂರ್ಣ, 5. ಚಿತ್ರಾನ್ನ 6. ಚಟ್ನಿ, 7. ಸಾಸಿವೆ 8. ಅಭಿಗಾರ, (ಮತ್ತೊಮ್ಮೆ) ಹಸ್ತೋದಕದ ನಂತರ ಉಪ್ಪು–ಉಪ್ಪಿನಕಾಯಿ ಬಡಿಸುವುದು.

ಮರಣ ಸಂಪ್ರದಾಯಗಳು: ಮರಣ ನಿಶ್ಚಿತವೆನಿಸಿದಾಗ ಗಂಗಾಜಲವನ್ನು ಕುಡಿಸಿ ಮನೆಯ ಪಡಸಾಲೆಯಲ್ಲಿ ನೆಲಕ್ಕೆ ಗೋಮಯ ಪ್ರೋಕ್ಷಿಸಿ, ದಕ್ಷಿಣೋತ್ತರವಾಗಿ ದರ್ಭೆ ಹಾಕಿ, ಎಳ್ಳು ಹಾಕಿ, ಮಲಗಿಸುವುದು, ಹೊಸ ವಸ್ತ್ರಹೊದಿಸಿ, ಕಾಲನ್ನು ಜೋಡಿಸಿ ಉಂಗುಷ್ಠ ಸೇರಿ ಕಟ್ಟುವುದು, ಕಿವಿ, ಮೂಗು, ಬಾಯಿಗೆ ಹತ್ತಿಯನ್ನಿರಿಸಿ, ತಲೆಕಾಲುಬುಡಕ್ಕೆ ಸ್ವಲ್ಪ ಅಕ್ಕಿಹಾಕಿ, ಒಂದು ತೆಂಗಿನಕಾಯಿ ಒಡೆದು ಎರಡು ಹೋಳಿಗೂ ತುಪ್ಪಹಾಕಿ ಒಂದು ಬತ್ತಿಯಿಂದ ದೀಪ ಹಚ್ಚಿ ತಲೆ ಕಾಲುಬುಡದಲ್ಲಿಡುವುದು. ಗಂಡಸರಾದರೆ ತುಳಸಿ ಮಾಲೆ, ವಿಭೂತಿ ಹಚ್ಚುವುದು. ಹೆಂಗಸರಾದರೆ ಅರಶಿನ, ಕುಂಕುಮ–ಹೂಮಾಲೆ ಹಾಕಿ, ನಿರ್ವಾಣಗೊಳಿಸಿ, ಆಭರಣಗಳನ್ನು ತೆಗೆಯುವುದು. ಮುತ್ತೈದೆಯರಾದರೆ ಮಾಂಗಲ್ಯ ಓಲೆ–ಬಳೆ ತೆಗೆಯುವುದಿಲ್ಲ ಮನೆಯ ಬಲಭಾಗದಲ್ಲಿ ಬೆಂಕಿ ಹಾಕಲಾಗುವುದು.

ಮರಣ ಸುದ್ಧಿ ತಿಳಿಸುವುದು: ಬಂಧುಗಳಿಗೆ ಮರಣದ ಸುದ್ದಿ ತಿಳಿಸುವುದು ಹಿಂದೆ 'ಮಾದಾರ' ನ ಕರ್ತವ್ಯವಾಗಿದ್ದಿತ್ತು. ಈಗ ದೂರವಾಣಿ ಮೂಲಕ ತಿಳಿಸಲಾಗುತ್ತಿದೆ.

ಚಿತೆ ನಿರ್ಮಾಣ : ಚಿತೆ ನಿರ್ಮಿಸುವುದು ಸ್ಮಶಾನದಲ್ಲಿ ಮಾದಾರನ ಕರ್ತವ್ಯ. ಹಿಂದೆ ಕಟ್ಟಿಗೆ ಸಮೀಪದಲ್ಲೆ ಹೇರಳವಾಗಿ ಸಿಗುತ್ತಿತ್ತು. ಈಗ ಮನೆಯಿಂದ ತೆಗೆದುಕೊಂಡು ಹೋಗಲಾಗುತ್ತಿದೆ. ಇತ್ತೀಚೆಗೆ ಕೆಲವರು ಸ್ವಂತ ಜಮೀನಿನಲ್ಲೇ ದಹನ ಕ್ರಿಯೆ ಮುಗಿಸುತ್ತಾರೆ.

ಪುರೋಹಿತರು : ಪುರೋಹಿತರು ಬಂದ ನಂತರ ಶಾಸ್ತ್ರವಿಧಿಯಂತೆ ಕರ್ಮಾಂಗ ನಡೆಸಲಾಗುವುದು ದಶದಾನ ಕ್ಷೌರ, ಮಂತ್ರಾಗ್ನಿ ಇತ್ಯಾದಿ.

ಶವದ ಬಾಯಿಗೆ ಅಕ್ಕಿ-ನೀರು, ಎಳ್ಳು-ನೀರು ಬಿಡುವುದು.

ಸೇರಿದವರಲ್ಲಿ ತಂದೆ ಇರುವವರು ಮತ್ತು ಹೆಂಗಸರು ಅಕ್ಕಿ-ನೀರು, ಇತರ ಪುರುಷರು ಎಳ್ಳು-ನೀರು ಬಿಡುವುದು, ತಂದೆ ಇಲ್ಲದವರು ಜನಿವಾರ ಅಪಸವ್ಯ-ತಂದೆ ಇರುವವರು ಮಾಲಾಕಾರ ಎಡಗೈ ಹೆಬ್ಬೆರಳಿಗೆ ಸಿಗಿಸುವುದು.

ಸ್ಮಶಾನಕ್ಕೆ ಶವಸಾಗಣೆ :ಶವವನ್ನು ಚಟ್ಟದ ಮೇಲೆ ಇರಿಸಿ ಬಾಳೆಎಲೆ, ಮಾವಿನ ಸೊಪ್ಪು ಮುಚ್ಚಿ ನಾಲ್ಕು ಜನ ತಮ್ಮ ಜನಿವಾರವನ್ನು ನಿವೀತಿ (ಮಾಲಾಕಾರ) ಮಾಡಿಕೊಂಡು ಸಾಗಿಸುತ್ತಾರೆ. ಮನೆಯಿಂದ ಹೊರಡುವಾಗ ಕಾಲುಮುಂದೆ ತಲೆ ಹಿಂದೆಬರುವಂತೆ ಮಧ್ಯದಾರಿಯಲ್ಲಿ ಇಳಿಸಿ, ಮಕ್ಕಳಿಂದ ತಿಲೋದಕ ಬಿಡಿಸಿ ತಲೆಮುಂದೆ ಕಾಲು ಹಿಂದೆ ಬರುವಂತೆ ಮಾಡಿ ಸಾಗಿಸಲಾಗುವುದು. ತಂದೆ ತಾಯಿ ಇರುವವರು-ಹೆಂಗಸರು ಸ್ಮಶಾನಕ್ಕೆ ಹೋಗುವುದಿಲ್ಲ.

ಚಿತೆಬಿಡಿಸಿಕೊಳ್ಳುವುದು :ಚಿತೆ ಸಮೀಪಕ್ಕೆ ಒಯ್ದ ನಂತರ ಮಾದಾರ ನಿಂದ ಮೂರು ಮೆಟ್ಟು ಜಾಗ ಕೇಳಬೇಕು. ಆಗ ಆತನು ಇಂದಿಗೆ ಕೊಡುತ್ತೇನೆ ನಾಳೆಗೆ ಕೊಡುವುದಿಲ್ಲ ಎಂದು ಹೇಳಿ ಕೊಡಲಿಯನ್ನು ಚಿತೆಯ ಈಚೆ ಹಾಕುತ್ತಾನೆ ಅದನ್ನು ತಿರಗ-ಮುರಗಮಾಡಿ ಆಚೆಗೆ ಹಾಕಿ ಆತನಿಗೆ ಹಣ ನೀಡಿ ಚಿತೆ ಬಿಡಿಸಿಕೊಂಡು ಶವವನ್ನು ಚಿತೆಯ ಮೇಲೆ ಇರಿಸಿ ಸೊಪ್ಪು ಮುಚ್ಚಿ ಹೊದಿಸಿದ ವಸ್ತ್ರ ತೆಗೆಯುವುದು ಈ ವಸ್ತ್ರವನ್ನು ಹಿಂದೆ ಮಾದಾರರು ತೆಗೆದುಕೊಂಡು ಹೋಗಿ ಬಳಸುತ್ತಿದ್ದರು. ಈಗ ನದಿ, ಬೆಂಕಿಗೆ ಹಾಕಲಾಗುತ್ತಿದೆ.

ದಹನ ಕ್ರಿಯೆ: ಪುರೋಹಿತರ ಅಣತಿಯಂತೆ ದಹನ ಕ್ರಿಯೆ ನಡೆಯುತ್ತದೆ, ದರ್ಭೆತೋರಣದನಂತರ ಸ್ಮಶಾನಕ್ಕೆ ಹೋದವರು ಸ್ನಾನಮಾಡಿ ಮನೆಗೆ ಬರುವರು ಮನೆಯ ಮುಂಭಾಗದಲ್ಲಿ ಬಂದು ಹರಿವಾಣವನ್ನು ವಾಲಿಸಿ ಇಟ್ಟು ಕಾಲು ತೊಳೆಯಲು ಬಿಸಿನೀರು ಇಟ್ಟಿರುತ್ತಾರೆ. ಕಾಲು ತೊಳೆದು ಕೆಂಡದ ಮೇಲೆ ಗಂಧದ ಹುಡಿ ಹಾಕಿದ ಹೊಗೆಯಲ್ಲಿ ಅಂಗಾಲನ್ನು ಕಾಯಿಸಿ ಒಳಗೆ ಬರುವರು.

ಶವವನ್ನು ಮಲಗಿಸಿದ ಸ್ಥಳದಲ್ಲಿ ಮೇಲಿನಿಂದ ಒಂದು ದಾರ ಇಳಿ ಬಿಟ್ಟು ಮಧ್ಯಾಹ್ನ ದೊನ್ನೆಯಲ್ಲಿ ಪ್ರೇತಕ್ಕೆ ಅನ್ನ-ನೀರು ಸಂಜೆ ಹಾಲು ಇಡಲಾಗುವುದು. ಇದು 10ನೇ ದಿನದವರೆಗೆ ನಡೆಯುತ್ತದೆ.

ನಿತ್ಯವಿಧಿ : ತಂದೆ ತಾಯಿಯಾದರೆ ಪ್ರತಿದಿನ-ಬೇರೆಯವರಾದರೆ 7-9ನೇ ದಿನದಿಂದ ಪ್ರಾರಂಭಿಸುವುದು.

ಅಸ್ಥಿಸಂಚಯನ 3-5ನೇದಿನ ಅಥವಾ ಪುರೋಹಿತರ ಮಾರ್ಗದರ್ಶನದಂತೆ.

10ನೇ ದಿನ ಧರ್ಮೋದಕ: ಬಂಧುಗಳು ತಿಲೋದಕ ಪಾದೋದಕ-ಕೇಶೋದಕ ನೀಡುವರು

12 ನೇ ದಿನ : ಸಪಿಂಡೀಕರಣ ದಶದಾನ, ವೈತರಣಿಗೋದಾನ ಇತ್ಯಾದಿ.

13ನೇ ದಿನ: ಸೂರ್ಯೋದಯಕ್ಕೆ ಮೊದಲು ಪಾಥೇಯ ಶ್ರಾದ್ಧ ಮಾಸಿಕ.

14ನೇ ದಿನ : ಪವಮಾನ ಹೋಮ ಭೂರಿ ಭೋಜನ.

ಇತರೆ ಸಂಪ್ರದಾಯಗಳು

ಮೃತಾಶೌಚ: ಮೃತಾಶೌಚವು ಇರುವವರಲ್ಲಿ ಅಸ್ಪೃಶ್ಯತೆ ಇದೆ. ಅವರಲ್ಲಿ ಆಹಾರ ಸ್ವೀಕರಿಸುವುದಿಲ್ಲ. ಕುಟುಂಬವರ್ಗಕ್ಕೆ ದಶರಾತ್ರಿ, ಆಶೌಚವಿರುವವರಿಗೆ 10ರಾತ್ರಿ–ತ್ರಿರಾತ್ರಿ ಆಶೌಚ ವಿರುವವರಿಗೆ 3 ರಾತ್ರಿ ಅಸ್ಪೃಶ್ಯತೆ ಇದೆ 1–1½ ದಿನ ಆಶೌಚಾಚರಣೆ ಇದೆ.

ಸಹೋದರಿ ವಿಧವೆಯಾದರೆ 12ನೇ ದಿನ ಸಪಿಂಡೀಕರಣವಾಗಿ ಸ್ನಾನದ ನಂತರ ಬಚ್ಚಲಲ್ಲಿ ಹಿಂದಿನಿಂದ ಹೊಸ ಸೀರೆ ಮಡಿಕೆ ಬಟ್ಟೆ ಹಿಂಭಾಗದಿಂದ ಹೆಗಲ ಮೇಲೆ ಹಾಕುವುದು. ಮತ್ತು ಅದೇದಿನ ಸಂಜೆ ತವರುಮನೆಗೆ ಕರೆದುಕೊಂಡು ಬರುವುದು, ಹಿಂಬಾಗಿಲಿನಿಂದ ಪ್ರವೇಶ–ಮೂರನೇ ದಿನ ಬೆಳಿಗ್ಗೆ ಪುನಃ ಅಲ್ಲಿಗೆ ಕಳಿಸುವುದು. ಸಪಿಂಡೀಕರಣದ ನಂತರ ಕರ್ತೃಗಳು ಸ್ನಾನಕ್ಕೆ ಹೋಗುವ ಮುನ್ನ ಸೂರಿನ ಅಡಿ ಕರ್ತೃಗಳನ್ನು ನಿಲ್ಲಿಸಿ ಕಬ್ಬಿಣದ ಸೌಟಿನಲ್ಲಿ ಎಣ್ಣೆ ಬಿಸಿ ಮಾಡಿ ಅವರ ತಲೆ ಮೇಲೆ ಹಾಕುವುದು. ಪುಣ್ಯಾಹದ ನಂತರ ಕದಲಾರತಿ ಎತ್ತುವುದು ಮತ್ತು ಕರ್ತೃಗಳಿಗೆ ಮಾವ, ಬಂಧುಗಳು ಹೊಸವಸ್ತ್ರವನ್ನು ಮಡಿಕೆ ಬಿಚ್ಚಿ ಹಿಂಭಾಗದಿಂದ ಬೆನ್ನ ಮೇಲೆ ಹಾಕಲಾಗುವುದು.

ಏಕೋದ್ದಿಷ್ಟಕ್ಕೆ ಅನ್ನ : ಸೂರಿನ ಅಡಿಯಲ್ಲಿ ದಕ್ಷಿಣ ದಿಕ್ಕಿಗೆ ಒಲೆ ಹಾಕಿ ಏಕೋದ್ದಿಷ್ಟಕ್ಕೆ ಅನ್ನ ಮಾಡುವುದು.

ಹಬ್ಬಗಳ ಆಚರಣೆ : ಕುಟುಂಬದ ಹಿರಿಯರು ಮೃತರಾದರೆ 1 ವರ್ಷ ಹಬ್ಬ–ವ್ರತಾದಿಗಳು ಆಚರಣೆ ಇಲ್ಲ ಬಂಧುಗಳು ಭಕ್ಷ್ಯ ತಂದು ಕೊಡುವರು.

ಅಬ್ದವಿಮೋಕ, ಶ್ರಾದ್ಧ ಮತ್ತು ಪ್ರಥಮಾಬ್ದಿಕ ಶ್ರಾದ್ಧ : ಒಂದು ವರ್ಷದಲ್ಲಿ ಮೃತತಿಥಿಯ ಹಿಂದಿನ ದಿನ ಅಬ್ದ ವಿಮೋಕ ಶ್ರಾದ್ಧ (ಮಾಸಿಕ) ಮೃತತಿಥಿಯಂದು ಪ್ರಥಮಾಬ್ದಿಕ (ವರ್ಷಾಂತಿಕ) ಶ್ರಾದ್ಧ. ಈ ದಿನ ದಶದಾನ ಕೊಡಲಾಗುವುದು. ಅಧಿಕ ಮಾಸದಲ್ಲಿ ಮೃತತಿಥಿಬಂದರೆ ಅಂದೇ ನಡೆಯುತ್ತದೆ.

ಆಹ್ವಾನ : ಮರಣದಲ್ಲಿ ಸಪಿಂಡೀಕರಣದವರೆಗೆ ಯಾರಿಗೂ ಆಹ್ವಾನ ನೀಡುವುದಿಲ್ಲ ಅವರಾಗಿಯೇ ಬರಬೇಕು. ವೈಕುಂಠಕ್ಕೆ ಕರೆ ಇದೆ. 12ನೇ ದಿನ ಆ ಮನೆಯಲ್ಲಿ ರಾತ್ರಿ ತಂಗಬಾರದು ಮತ್ತು ಬಂದವರಿಗೆ 'ಸ್ವಾಗತ' ಹೇಳುವುದಿಲ್ಲ ಮತ್ತು ಹೊರಡುವವರು 'ಹೋಗಿ ಬರುತ್ತೇನೆ' ಎಂದು ಹೇಳುವುದಿಲ್ಲ.

ನಂಬಿಕೆಗಳು : ಮುತ್ತೈದೆಯರು ಮರಣವಾದರೆ ಮಾಂಗಲ್ಯ ಸಹಿತವಾಗಿ ದಹನ ಮಾಡಿ ಅಸ್ಥಿಸಂಚಯನದ ದಿನ ಬಂಗಾರವನ್ನು ಆಯ್ದುಕೊಳ್ಳುತ್ತಾರೆ. ಇದರಿಂದ ಮಗನ ಮದುವೆಯಲ್ಲಿ ಸೊಸೆಗೆ ಮಾಂಗಲ್ಯ ಮಾಡಿಸುವರು.

ಪ್ರೇತ ಕರ್ಮ : ಪ್ರೇತಕ್ಕೆ ಸದ್ಗತಿಯಾಗದಿದ್ದರೆ ಕುಟುಂಬದಲ್ಲಿ ತೊಂದರೆಗಳು ಉದ್ಭವಿಸುತ್ತವೆ

ಎಂಬ ನಂಬಿಕೆ. ಅಂಥಹ ಸಮಯದಲ್ಲಿ ಪ್ರಶ್ನೆ ನೋಡಿ ನಿವೃತ್ತಿಗಾಗಿ ಗೋಕರ್ಣದಲ್ಲಿ ಪ್ರೇತವಿಮುಕ್ತಿಗೆ ಶ್ರಾದ್ಧ-ತಿಲ ಹೋಮ ಮಾಡುವರು.

ರಾಹು ತೆಗೆಯುವುದು: ಚಿಕ್ಕಮಕ್ಕಳ ಅನಾರೋಗ್ಯದಲ್ಲಿ ಅರ್ಧಬೆಂದ ಅನ್ನ ಓಕುಳಿ ಹಾಕಿ-ಒಂದು ಕಕ್ಕಡ ಹಚ್ಚಿ ಅಡಿಕೆ ಹಾಳೆಗಿರಿಸಿ ಮಗುವಿಗೆ ಪ್ರದಕ್ಷಿಣ-ಅಪ್ರದಕ್ಷಿಣವಾಗಿ 3+3 ಸುತ್ತುಸುಳಿದು 3ದಾರಿ ಸೇರಿದಲ್ಲಿ ಇಡುವುದು.

ಗಾಳಿ ಸೋಂಕು : ಮಕ್ಕಳಿಗೆ ಪ್ರಾಣಾಂತಿಕ ಕಾಯಿಲೆಯಲ್ಲಿ ಓಕುಳಿ ನೀರಿಗೆ ಕೆಂಪಗೆ ಕಾಯಿಸಿದ ಕತ್ತಿ ಅಥವಾ ಕಕ್ಕಡವನ್ನು ಮಗುವಿಗೆ ಸುತ್ತುಬರಿಸಿ ಓಕುಳಿಯಲ್ಲಿ ಅದ್ದಿ ಅದರ ನೀರನ್ನು ಪ್ರೋಕ್ಷಿಸುವುದು ಸ್ವಲ್ಪ ಕುಡಿಸುವುದು.

ಕೊದಿ ಮಂತ್ರಿಸುವುದು, ದೃಷ್ಟಿ ತೆಗೆಯುವುದು : ಚಿಕ್ಕಮಕ್ಕಳಿಗೆ ಹೊಟ್ಟೆಕೆಟ್ಟು ಆಹಾರ ತೆಗೆದುಕೊಳ್ಳದಿದ್ದರೆ ಅಥವಾ ದೃಷ್ಟಿದೋಷ ಉಂಟಾದರೆ ಹುಣಸೆಹಣ್ಣು, ಮೆಣಸಿನ ಕಾಯಿ, ಸಾಸಿವೆ, ಉಪ್ಪನ್ನು ಸೇರಿಸಿ ಮಗುವಿಗೆ 3 ಸುತ್ತು ಸುಳಿದು ಒಲೆಗೆ ಹಾಕುತ್ತಾರೆ.

ಇಂದ್ರಾಕ್ಷಿ ಭಸ್ಮ : ಮಗು ವಿಪರೀತ ಹಟ ಮಾಡುತ್ತಿದ್ದರೆ ವಿಭೂತಿಯನ್ನು ಅಂಗೈನಲ್ಲಿರಿಸಿಕೊಂಡು ಇಂದ್ರಾಕ್ಷಿ ಸ್ತೋತ್ರ ಜಪ ಮಾಡಿ ಮಗುವಿಗೆ ಭಸ್ಮವಿರಿಸುವುದು.
ಭೂತ-ಪಿಶಾಚಿ ಕಾಡದಂತೆ ಬಾಣಂತಿ ಹಾಸಿಗೆ ಸಮೀಪ ಕಬ್ಬಿಣದ ಕತ್ತಿ ಇಡುವುದು.

ಚಿಟಕೆ ಹಾಕುವುದು : ಗಾಜಿನ ಬಳೆ ಚೂರನ್ನು ಕಾಯಿಸಿ, ಚಿಕ್ಕಮಕ್ಕಳ ನಾಡಿ ನೋಡಿ ಅಲ್ಲಿಗೆ ಚುಚ್ಚುವುದು. ಇದರಿಂದ ತಂಡಿ ಕಾಯಿಲೆ ಹಾಗೂ ವಿಪರೀತ ಅಳುವುದು, ಕಡಿಮೆಯಾಗುತ್ತದೆ.

ರಂಚು ಹಿಡಿಯುವುದು ಅಥವಾ ಬಟ್ಟೆ ಕಟ್ಟುವುದು: ಚಿಕ್ಕ ಮಕ್ಕಳಿಗೆ ಹೊಟ್ಟೆ ನೋವಿಗೆ ಹೊಟ್ಟೆಮೇಲೆ ಚಿಕ್ಕದೀಪವಿರಿಸಿ ಒಂದುಬಟ್ಟಲನ್ನು ಕವಚಿಹಾಕುವುದು- ನಿರ್ವಾತದಿಂದ ದೀಪ ಆರುವಾಗ ಬಟ್ಟಲು ಚರ್ಮಕ್ಕೆ ಕಚ್ಚಿಹಿಡಿಯುತ್ತದೆ.[20] ಇಂತಹ ಅನೇಕ ಸಂಪ್ರದಾಯ, ಆಚರಣೆ, ವಿಧಿ ವಿಧಾನಗಳನ್ನು ಮಲೆನಾಡಿನ ಬ್ರಾಹ್ಮಣರು ರೂಢಿಯಲ್ಲಿಟ್ಟುಕೊಂಡಿದ್ದರು. ಕಾಲಾಂತರದ ಬದಲಾವಣೆಯಂತೆ ಅನೇಕ ಮಾರ್ಪಾಟುಗಳಾಗಿರುವುದು ಕಂಡು ಬಂದಿದೆ.

ಊಟದ ಮನೆಗೆ ಹೋಗುವಾಗ ಮಡಿಪಂಚೆ ಪಾತ್ರೆ ಹಿಡಿದುಕೊಂಡು ಹೋಗುತ್ತಿದ್ದರು. ಶ್ರೀಮಂತರು ಹಾಗೂ ಸಮಾಜದಲ್ಲಿ ಗೌರವಾದರಣೆಗೆ ಪಾತ್ರರಾದ ವ್ಯಕ್ತಿಗಳು ಕೋಟು, ಟೊಪ್ಪಿಯನ್ನು ಧರಿಸುತ್ತಿದ್ದರು.

ಹಿಂದೆ ಸೋಪು ಇರಲಿಲ್ಲ ಬದಲಿಗೆ ಈ ಭಾಗದಲ್ಲಿ ಸೀಗೆಪುಡಿ. ಅಂಟವಾಳವನ್ನು ಸೋಪಿನ ಬದಲಿಯಾಗಿ ಬಳಸುತ್ತಿದ್ದರು. ಹಲ್ಲುಜ್ಜಲು ಬೂದಿ ಹಾಗೂ ಇದ್ದಿಲು ಉಮಿಕರಿಯನ್ನು ಬಳಸುತ್ತಿದ್ದರು. ನಂಜನಗೂಡು ಬ್ರಾಂಡ್ ಹಲ್ಲುಪುಡಿಯನ್ನು ಬಳಸುತ್ತಿದ್ದರು ಮಹಿಳೆಯರು ಬೆಳ್ಳಟ್ಟೆ, ಮತ್ತಿಸೊಪ್ಪಿನಗುಳವನ್ನು ತಲೆಗೆ ಹಾಕಿಕೊಳ್ಳುತ್ತಿದ್ದರು. ಹಬ್ಬದ ಸಂದರ್ಭದಲ್ಲಿ ವಿಶೇಷ ಸಮಾರಂಭದಲ್ಲಿ ಅಭ್ಯಂಜನ ಸ್ನಾನ ಮಾಡುತ್ತಿದ್ದರು. ಮಧ್ಯಾಹ್ನದ ಊಟಕ್ಕೆ ಮೊದಲು ಗಂಧಾಕ್ಷತೆ, ತೀರ್ಥ, ಪ್ರಸಾದ

ಸ್ವೀಕರಿಸಿ ಊಟ ಮಾಡುತ್ತಿದ್ದರು ಇತರ ವರ್ಗದವರು ವಾರದಲ್ಲಿ ಒಂದೊಂದು ದಿನ, ಬೆಳಗ್ಗೆ, ಮಧ್ಯಾಹ್ನ ಅಥವಾ ಸಂಜೆಯ ವೇಳೆ ಈ ನೇಮವನ್ನಿಟ್ಟು ಕೊಂಡಿದ್ದರು.

ಈಗ ವರ್ಷಕ್ಕೆ ಅನೇಕ ಬಾರಿ ಹೊಸ ಬಟ್ಟೆತರುತ್ತಾರೆ. ಹುಟ್ಟುಹಬ್ಬ, ಶುಭ ಸಮಾರಂಭ, ಜಾತ್ರೆ ಮೊದಲಾದವುಗಳಿಗೆ, ಶಾಲಾ ಕಾಲೇಜಿನ ಸಂಭ್ರಮದ ದಿನಗಳಿಗಾಗಿ ತರುತ್ತಾರೆ. ವೇಷ ಭೂಷಣದಲ್ಲಿ ಭಾರೀ ಸುಧಾರಣೆಯಾಗಿದ್ದು ಮಕ್ಕಳಾದಿಯಾಗಿ ವಯಸ್ಕ ಪುರುಷರು ಪ್ಯಾಂಟ್ ಶರ್ಟ್ ಕೋಟ್ ಧರಿಸುತ್ತಾರೆ, ಮಕ್ಕಳಿಂದ ಹಿಡಿದು ವಯಸ್ಕ ಸ್ತ್ರೀಯರವರೆಗೆ ಫ್ರಾಕ್, ಚೂಡಿದಾರ್, ನೈಟಿ ಮೊದಲಾದವುಗಳು ಬಳಕೆಯಲ್ಲಿವೆ. ಪುರುಷರಲ್ಲಿ ಪಂಚೆ ಸುತ್ತುವವರ ಸಂಖ್ಯೆ ತೀರಾ ಕಡಿಮೆಯಾಗಿದೆ. ಬ್ರಾಹ್ಮಣ ವರ್ಗದವರೂ ಆಧುನಿಕ ಉಡುಪನ್ನು ಧರಿಸುತ್ತಾರೆ. ಕೋಟು ಟೊಪ್ಪಿಯ ಬಳಕೆಯು ತೀರಾ ಕಡಿಮೆಯಾಗಿದೆ. ಜಾತಿ ಭೇದವಿಲ್ಲದೆ ಎಲ್ಲರೂ ಸಮಾನ ವೇಷಭೂಷಣ ಧರಿಸುತ್ತಾರೆ. ತಲೆಗೆ ಶ್ಯಾಂಪೂ, ಮೈಗೆ ವಿವಿಧ ಬಗೆಯ ಸೋಪು, ಬಟ್ಟೆಗೆ ಅದರದೇ ಆದ ಸೋಪನ್ನು ಬಳಸುತ್ತಿದ್ದಾರೆ ಹಲ್ಲುಜ್ಜಲು ಟೂತ್‌ಪೇಸ್ಟ್, ಪೌಡರ್ ಬ್ರೆಷ್ ಮೊದಲಾದವುಗಳನ್ನು ಎಲ್ಲರೂ ಉಪಯೋಗಿಸುತ್ತಾರೆ, ಸುವಾಸನೆಯ ದ್ರವ್ಯ ಸಿಂಪಡಿಸಿಕೊಳ್ಳುತ್ತಾರೆ. ನಿತ್ಯಸ್ನಾನ ಮಾಡಿದರೂ ಅಭ್ಯಂಜನವಿಲ್ಲ. ದೇವರ ಬಗ್ಗೆ, ಧರ್ಮಾಚರಣೆಯ ಬಗ್ಗೆ ಹೆಚ್ಚಿನ ಆಸಕ್ತಿಯಿಲ್ಲ, ಊಟ, ತಿಂಡಿ, ವ್ಯವಹಾರದಲ್ಲಿ ಯಾವುದೇ ಬಗೆಯ ಸಂಪ್ರದಾಯಾಚರಣೆಯನ್ನು ಪಾಲಿಸದ ಅನೇಕ ಕುಟುಂಬಗಳಿವೆ. ಸಂಪ್ರದಾಯಸ್ಥರನ್ನು ಅವಹೇಳನಕಾರಿಯಾಗಿ ಕಾಣುವ ವಾತಾವರಣ ನಿರ್ಮಾಣವಾಗಿದೆ. ತಮ್ಮ ಸ್ವಂತಮನೆಯಲ್ಲಿ ಗೌಪ್ಯವಾಗಿ ಅಚರಣೆಯನ್ನು ಕೆಲವು ಹಿರಿಯರು ಮುಂದುವರಿಸಿಕೊಂಡು ಬರುತ್ತಿದ್ದಾರೆ.

2.3 ಒಕ್ಕಲಿಗರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು

ಮಲೆನಾಡು ಪ್ರದೇಶದ ಒಕ್ಕಲಿಗರಲ್ಲಿ ಮುಖ್ಯವಾಗಿ ನಾಮಧಾರಿ ಒಕ್ಕಲಿಗ, ಶೈವ ಒಕ್ಕಲಿಗ ಎಂಬ ಎರಡು ಪ್ರಧಾನ ಪಂಗಡಗಳಿವೆ. ಶೃಂಗೇರಿಯಲ್ಲಿರುವ ಒಕ್ಕಲಿಗರು ಶ್ರೀ ವೈಷ್ಣವರಾಗಿದ್ದಾರೆ. ಇವರು ತಮ್ಮದೇ ಆದ ಸಂಪ್ರದಾಯ, ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ನಂಬಿಕೆ, ದೇವತಾ ಕಾರ್ಯ, ಆಚಾರ ವ್ಯವಹಾರ, ದೇವತಾಕಾರ್ಯ, ಮದುವೆ, ಹುಟ್ಟು, ಮರಣ ಹೀಗೆ ಎಲ್ಲಾ ವಿಚಾರಗಳನ್ನು ತಮ್ಮ ವೃತ್ತಿ ಧರ್ಮ ಮತ್ತು ಜೀವನಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ರೀತಿಯಲ್ಲಿ ಅಂದಿನ ರೀತಿ ನೀತಿಗೆ ಅನುಗುಣವಾಗಿ ಆಚರಿಸಿಕೊಂಡು ಬರುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.[21]

ಜೈನರು ಮತಾಂತರ ಹೊಂದಿ ಶ್ರೀ ವೈಷ್ಣವ ಪಂಥಕ್ಕೆ ಸೇರಿ ನಂತರ ನಾಮಧಾರಿ ಒಕ್ಕಲಿಗರಾದರು. ತಮ್ಮ ಗುರುಗಳಾದ ಶ್ರೀ ರಾಮಾನುಜಾಚಾರ್ಯರು ಹಣೆಯ ಮೇಲೆ ಮೂರು ನಾಮದ ಪಟ್ಟಿಯನ್ನು ಧರಿಸುತ್ತಿದ್ದರು. ಹಣೆಯ ಮೇಲೆ ಆಚೀಚೆಗೆ ನೆಟ್ಟಗೆ ಬಿಳಿ ನಾಮದ ಪಟ್ಟಿ ಎಳೆದು ಮಧ್ಯ ಒಂದು ಕೆಂಪು ನಾಮದ ಪಟ್ಟಿ ಎಳೆದುಕೊಳ್ಳುತ್ತಾರೆ. ಶಿಷ್ಯರೂ ಸಹ ಅನುಸರಿಸಿದ್ದಾರೆ. ಮೂಲತ:

ಜೈನರಾದುದರಿಂದ ಈಗಲೂ ಅನೇಕ ಮನೆಗಳಲ್ಲಿ ಪಿತೃಗಳಿಗೆ ಎಡೆಯಿಡುವಾಗ 'ಜೈನ ಎಡೆ' ಎಂದು ಪ್ರತ್ಯೇಕವಾಗಿ ಎರಡು ಎಡೆಗಳನ್ನು ಇಡುವ ಪದ್ಧತಿಯಿದೆ. ಈ ಎಡೆಗಳಿಗೆ ಮಾಂಸಾಹಾರ ಬಡಿಸುವುದಿಲ್ಲ. ಈಗಲೂ ಶೃಂಗೇರಿಯ ಸುತ್ತಮುತ್ತ ಜೈನಾವಶೇಷಗಳನ್ನು ಕಾಣಬಹುದಾಗಿದೆ.

ವಿಜಯನಗರದ ಅರಸರ ಕಾಲದಲ್ಲಿ ಅವರ ಆಸ್ಥಾನದ ಆಡಳಿತವನ್ನು ನೋಡಿಕೊಳ್ಳುತ್ತಿದ್ದವನಿಗೆ 'ಗೌಡ' ಎಂತಲೂ ಸೈನ್ಯಾಧಿಕಾರಿಗೆ 'ನಾಯ್ಕ' ಎಂತಲೂ ನ್ಯಾಯಾಂಗವನ್ನು ನೋಡಿಕೊಳ್ಳುತ್ತಿದ್ದವನಿಗೆ 'ಹೆಗ್ಗಡೆ' ಎಂತಲೂ ಆಯಾಯ ಸ್ಥಾನಗಳಿಗೆ ಕೊಟ್ಟ ಹೆಸರುಗಳಾಗಿವೆ. ಯುದ್ಧ ಕಾಲದಲ್ಲಿ ಈ ಭಾಗಕ್ಕೆ ಬಂದವರು ಕೆಲವರು ಇಲ್ಲಿಯೆ ನೆಲೆಸಿದ್ದಾರೆ.

ಆಚಾರ, ವಿಚಾರ ಮತ್ತು ಸಂಪ್ರದಾಯಗಳು ಒಂದೇ ಆಗಿವೆ. ಮನೆಯ ಮುಂದೆ ತುಳಸಿ ಕಟ್ಟೆ ಮಾಡಿ ತುಳಸಿಗಿಡ ನೆಡುತ್ತಾರೆ. ತುಳಸಿಯಲ್ಲಿ ಶ್ರೀ ವಿಷ್ಣು ವಾಸಿಸುತ್ತಾನೆಂಬ ನಂಬಿಕೆಯಿಂದ ನಿತ್ಯ ಪೂಜಿಸುತ್ತಾರೆ. ಶನಿವಾರ ಉಪವಾಸವಿದ್ದು ವಿಶೇಷವಾದ ಆಚರಣೆ ಮಾಡುತ್ತಾರೆ. ದೇವಾಲಯಗಳಿಗೆ ದಾನದತ್ತಿಗಳನ್ನು ಕೊಡುತ್ತಿದ್ದರು. ಬ್ರಾಹ್ಮಣರಿಗೆ, ಗುರುಗಳಿಗೆ ನಿಷ್ಠೆಯನ್ನು ತೋರಿಸುತ್ತಿದ್ದರು. ಜಾತಿ ಪಾಡು, ಕುಲಗೋತ್ರಗಳ ಬಗ್ಗೆ ನಂಬಿಕೆ ಹೆಚ್ಚು. ಭೂತ, ಚೌಡಿ, ರಣ, ಪಂಜ್ರೊಳ್ಳಿ ಮೊದಲಾದ ದೆವ್ವಗಳ ಬಗ್ಗೆ ನಂಬಿಕೆ ಜಾಸ್ತಿ. ಇವುಗಳಿಗೆ ಪ್ರಾಣಿಗಳನ್ನು ಬಲಿಕೊಟ್ಟು ಪೂಜಿಸುತ್ತಿದ್ದರು ಹಾಗೂ ಗ್ರಾಮದೇವತೆಯನ್ನು ಪೂಜಿಸುತ್ತಿದ್ದರು. ಕೃಷಿ ಪ್ರಧಾನ ಕಸುಬಾಗಿದ್ದು, ಪಶುಪಾಲನೆಯನ್ನು ಮಾಡುತ್ತಿದ್ದರು. ಆಡಳಿತ ವ್ಯವಹಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ವ್ಯವಸಾಯ ವೃತ್ತಿ ಮಾಡುತ್ತಿದ್ದರಿಂದ ಇವರಿಗೆ ಒಕ್ಕಲಿಗರೆಂಬ ಹೆಸರು ಬಂದಿದೆ.[22] ವ್ಯವಸಾಯಕ್ಕಾಗಿ ಭೂಮಿಯನ್ನು ವಿಸ್ತರಿಸಿಕೊಂಡಿದ್ದರು

ಮಲೆನಾಡು ಪ್ರಾಂತ್ಯದ ತಾಲ್ಲೂಕುಗಳಿಗೆ ಅನುಕೂಲವಾಗುವಂತೆ ಕೊಪ್ಪ ತಾಲ್ಲೂಕಿನಲ್ಲಿ ಶ್ರೀ ವೈಷ್ಣವ ಮಠವನ್ನು ಸ್ಥಾಪನೆ ಮಾಡಿದ್ದರು. ಇದು ಶ್ರೀ ಅನ್ನರಾಯ ಒಡೆಯರ ಶ್ರೀಮಠ ಎಂದು ಪ್ರಸಿದ್ಧಿ ಪಡೆದಿತ್ತು. ಗುರು ಪರಂಪರೆ ಹೊಂದಿದ್ದು ಸುತ್ತಮುತ್ತಲ ಐದು ತಾಲ್ಲೂಕುಗಳ ಗೌಡರು ಈ ಮಠದ ವ್ಯಾಪ್ತಿಗೆ ಬರುತ್ತಿದ್ದರು ಹಾಗೂ ಈ ಮಠದ ಶಿಷ್ಯರಾಗಿದ್ದರು. ಇದಕ್ಕೆ ಒಡೆಯರ ಮಠವೆಂಬ ಹೆಸರು ಈಗಲೂ ಇದೆ. ಕಾಲಾಂತರದ ಸನ್ನಿವೇಶದ ಬದಲಾವಣೆಯಿಂದ ಬಹಳಷ್ಟು ಬದಲಾವಣೆಗಳಾಗಿವೆ. ರೂಢಿ ಸಂಪ್ರದಾಯಗಳಲ್ಲಿ ಬದಲಾವಣೆಗಳಾಗಿವೆ. ಕೆಲವಷ್ಟು ಮರೆಯಾಗಿವೆ.

ಗೌಡರಿಗೆ ಸೀಮೆಯ ಮುಖಂಡತ್ವ , ಪಾಲು ಮುಖಂಡತ್ವ ಗೌಡಿಕೆ, ಪಟೇಲಿಕೆ ಮೊದಲಾದ ಜವಾಬ್ದಾರಿಗಳಿದ್ದವು. ಪ್ರಜಾತಂತ್ರ ವ್ಯವಸ್ಥೆಗಿಂತ ಮೊದಲು ತಮ್ಮ ಪಾಲಿನ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದರು. ಈಗಲೂ ಸಹ ಅಂತಹ ಕುಟುಂಬದವರನ್ನು ಅವರ ಆಡಳಿತ ನಿರ್ವಹಣೆಯ ಹಿನ್ನೆಲೆಯಿಂದ ಗೌರವಪೂರ್ವಕವಾಗಿ ಸಂಬೋಧಿಸುವುದಿದೆ. ಈಗಿನ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಎಲ್ಲಾ ಜಾತಿ ಜನಾಂಗದವರಿಗೂ ಮೀಸಲಾತಿಯ ಆಧಾರದ ಮೇಲೆ ಆಡಳಿತ ಜವಾಬ್ದಾರಿ ದೊರೆಯುತ್ತಿದೆ.

ಒಡೆಯರ ಮಠಕ್ಕೆ ಇನ್ನೊಂದು ವರ್ಗದ ಶಿಷ್ಯರಿದ್ದರು. ಅವರನ್ನು 'ದಾಸಯ್ಯ'ಗಳೆಂದು ಕರೆಯುತ್ತಿದ್ದರು. ಗೌಡರ ಮನೆಗಳಲ್ಲಿ ನಡೆಯುವ ವಿಶೇಷ ಕಾರ್ಯಗಳಿಗೆ ಬಂದು ತುಳಸಿ ಪೂಜೆ ಮಾಡುವುದು. ಯಾರಾದರೂ ಸತ್ತಾಗ ಸೂತಕ ಕಳೆದ ದಿನ ಬಂದು ತೀರ್ಥ ಹಾಕುವುದು, ಗುರುಮುದ್ರೆಯನ್ನು ಒತ್ತುವುದು ಇವರ ವೃತ್ತಿಯಾಗಿತ್ತು. ಸೀಮೆಯ ಮುಖಂಡರು, ಪಾಲು ಮುಖಂಡರು, ಶ್ರೀಮಠದೊಂದಿಗೆ ಸಂಬಂಧವಿಟ್ಟುಕೊಂಡು ಆಡಳಿತ ನಡೆಸುತ್ತಿದ್ದರು.

ವಿದ್ವಾಂಸರ ಅನುಕೂಲತೆ ಕಡಿಮೆಯಿತ್ತು. ನಗರಗಳಲ್ಲಿ ಒಂದೊಂದು ಶಾಲೆಗಳಿದ್ದವು. ಶ್ರೀಮಂತರ ಮನೆಗಳಲ್ಲಿ ದಕ್ಷಿಣಕನ್ನಡದಿಂದ ಬಂದ ಐಗಳನ್ನು ಇಟ್ಟುಕೊಂಡು ಶಿಕ್ಷಣ ಕೊಡಿಸುತ್ತಿದ್ದರು. ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. ಓದು, ಬರಹ, ಲೆಕ್ಕ, ಇತಿಹಾಸ ಮೊದಲಾದವುಗಳನ್ನು ಕಲಿಸುತ್ತಿದ್ದರು. ಶಿಕ್ಷಣದ ಮಟ್ಟ ಉತ್ತಮವಾಗಿತ್ತು. ಸಾಮಾನ್ಯ ತರಗತಿ ಓದಿದ ವಿದ್ಯಾರ್ಥಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದ ಮತ್ತು ಶಿಕ್ಷಣ ಜ್ಞಾನದಿಂದ ಆಡಳಿತವನ್ನು ಸುಗಮವಾಗಿ ನಡೆಸುತ್ತಿದ್ದರು. ಕೆಲವರು ಹೊರಭಾಗದ ನಗರಗಳಿಗೆ ತೆರಳಿ ಇಂಗ್ಲೀಷ್ ಶಿಕ್ಷಣವನ್ನು ಪಡೆಯುತ್ತಿದ್ದರು. ಹಕ್ಕಿಗಳ ಗರಿಗಳನ್ನು ಲೇಖನಿಯಾಗಿ ಬಳಸುತ್ತಿದ್ದರು. ಅಳಲೆಕಾಯಿಯ ರಸವನ್ನು ಇಂಕನ್ನಾಗಿ ಮಾಡಿಕೊಳ್ಳುತ್ತಿದ್ದರು. ಪತ್ರವ್ಯವಹಾರಗಳನ್ನು ಇದರಿಂದಲೇ ಮಾಡುತ್ತಿದ್ದರು.[23] ಆಧುನಿಕತೆಯ ಕ್ರಾಂತಿಯಿಂದಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಹಾಗೂ ಕ್ರಮ ವಿಧಾನಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಇಂಗ್ಲೀಷ್ ಮಾದರಿಯ ಶಿಕ್ಷಣ ಬಳಕೆಯಲ್ಲಿದೆ. ಹಳ್ಳಿ ಹಳ್ಳಿಗಳಲ್ಲಿ ಶಾಲೆ, ಅಂಗನವಾಡಿ, ಆರೋಗ್ಯಕೇಂದ್ರಗಳ ವ್ಯವಸ್ಥೆಯಾಗಿದೆ. ಹದಿನಾಲ್ಕು ವರ್ಷ ವಯೋಮಾನದ ವರೆಗೆ ಕಡ್ಡಾಯ ಶಿಕ್ಷಣ ಕಾನೂನು ಜಾರಿಯಿದ್ದು ಅದರಂತೆ ಶಿಕ್ಷಣ ಪಡೆಯಲೇಬೇಕಾಗಿದೆ. ಯಾವುದೇ ಜಾತಿ, ಮತ ಎನ್ನದೆ ಪ್ರತಿಭಾವಂತ ಅರ್ಹರು ಅಧ್ಯಾಪಕ ವೃತ್ತಿಯಲ್ಲಿದ್ದಾರೆ. ಶಾಲೆಗಳಲ್ಲಿ ಎಲ್ಲಾ ಬಗೆಯ ಅಧ್ಯಯನಗಳಿಗೆ ಅವಕಾಶವಿದೆ. ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಿದ್ದು ಸ್ಪರ್ಧಾತ್ಮಕ ಕ್ರಮದಿಂದ ತಮ್ಮ ಪ್ರತಿಭೆಯನ್ನು ಹೊರಪಡಿಸುತ್ತಿದ್ದಾರೆ. ಕಲಾಭಿವ್ಯಕ್ತಿಯನ್ನು ಆಸ್ವಾಧಿಸುತ್ತಾರೆ. ದೈಹಿಕ ಶಿಕ್ಷಣ, ವ್ಯಾಯಾಮ, ಯೋಗ, ಕಲೆ ಮೊದಲಾದವುಗಳನ್ನು ಅಧ್ಯಯನದೊಂದಿಗೆ ಮಾಡುತ್ತಾರೆ. ಇಂತಹ ಹಲವಾರು ಮಾರ್ಪಾಟುಗಳು ಈಗ ಆಗಿದ್ದು, ಪ್ರತಿಯೊಬ್ಬರು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅವರವರ ಅರ್ಹತೆ ಯೋಗ್ಯತೆಗನುಗುಣವಾಗಿ ಉದ್ಯೋಗ ಸೃಷ್ಟಿಯು ನಿರ್ಮಾಣಗೊಂಡಿದೆ. ಒಕ್ಕಲಿಗ ಜನಾಂಗದವರು ಸರ್ಕಾರಿ, ಖಾಸಗಿ ಹಾಗೂ ಇತರೆ ಉದ್ಯೋಗದಲ್ಲಿ ಹೆಚ್ಚಿನವರಿದ್ದಾರೆ. ಒಕ್ಕಲುವೃತ್ತಿಯೊಂದಿಗೆ ವ್ಯಾಪಾರ, ವ್ಯವಹಾರ, ಉದ್ದಿಮೆ ಮೊದಲಾದವುಗಳನ್ನು ಮಾಡುತ್ತಿದ್ದಾರೆ. ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ಅವರದ್ದೇ. ಈ ಪ್ರಾಂತ್ಯದಲ್ಲಿರುವ ಪ್ರಜಾತಂತ್ರ ವ್ಯವಸ್ಥೆಯ ಜನಪ್ರತಿನಿಧಿಗಳು ಹಾಗೂ ಅಲ್ಲಿಯ ಉನ್ನತ ಸ್ಥಾನಗಳು ಬಹುತೇಕ ಇವರಿಗೆ ದೊರೆಯುತ್ತಿವೆ.

ಕೌಟುಂಬಿಕ ಜೀವನ ವಿಧಾನ :

ಮಲೆನಾಡ ಭಾಗದ ಹೆಚ್ಚಿನ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿದ್ದು ಒಂದು ಮನೆಯಲ್ಲಿ ನಲವತ್ತು, ಐವತ್ತಕ್ಕೂ ಹೆಚ್ಚಿನ ಜನ ವಾಸಿಸುತ್ತಿದ್ದರು. ಮನೆಯ ಹಿರಿಯ ಬುದ್ಧಿವಂತ, ವಿದ್ಯಾವಂತ, ವ್ಯವಹಾರಜ್ಞಾನ ಹೊಂದಿದವನು ಯಜಮಾನನಾಗಿರುತ್ತಿದ್ದನು. ಮನೆಯ ಕೆಲಸ ಕಾರ್ಯಗಳು ಇವನ ಮಾರ್ಗದರ್ಶನದಲ್ಲಿ ನಡೆಯುತ್ತಿತ್ತು. ಅವನ ಹೆಂಡತಿ ಹೆಗ್ಗಡತಿಯು ಯಜಮಾನಿಯಾಗಿರುತ್ತಿದ್ದಳು. ಮನೆಯ ಇತರೆ ಹೆಂಗಸರಿಗೆ ಕೆಲಸ ಕಾರ್ಯದ ಜವಾಬ್ದಾರಿಗಳ ಹಂಚಿಕೆಯನ್ನು ಹೆಗ್ಗಡತಿಯವರು ಹೇಳಿ ಮಾಡಿಸುತ್ತಿದ್ದರು. ಯಜಮಾನ ಮತ್ತು ಹೆಗ್ಗಡ್ತಮ್ಮನವರಿಗೆ ವಿಶೇಷ ಗೌರವವಿದ್ದು ಅವರ ವಿರುದ್ಧ ಅಪಸ್ವರ ಎತ್ತುತ್ತಿರಲಿಲ್ಲ. ಮನೆಯ ಅಭಿವೃದ್ಧಿ ಶುಭ-ಅಶುಭ ಯಾವುದೇ ಕೆಲಸ ಕಾರ್ಯಗಳು, ತರುವುದು, ಮಾಡುವುದು ಮೊದಲಾದವುಗಳನ್ನು ಇವರೇ ನಿರ್ವಹಿಸುತ್ತಿದ್ದರು. ಈ ಕಾರಣದಿಂದಾಗಿ ಮನೆಯ ಹಿರಿಯ ಮಗನಿಗೆ ಹೆಣ್ಣು ಕೊಡಲು ವಧುವಿನ ಕಡೆಯವರು ಹೆಚ್ಚು ಇಷ್ಟಪಡುತ್ತಿದ್ದರು. ಮನೆಗೆ ತಂದ ಸಾಮಾನುಗಳನ್ನು ಒಂದು ಕೋಣೆಗಳಿಗೆ ಹಾಕಿ ಬೀಗ ಹಾಕುತ್ತಿದ್ದರು. ಆಭರಣಗಳು, ಬೆಲೆಬಾಳುವ ವಸ್ತು ಮೊದಲಾದವುಗಳನ್ನು ಹೆಗ್ಗಡತಿಯು ತನ್ನ ಸುಪರ್ದಿನಲ್ಲಿಟ್ಟುಕೊಂಡು ಅಗತ್ಯವಿದ್ದಾಗ ಇತರರಿಗೆ ಕೊಡುತ್ತಿದ್ದಳು. ಅದರ ಬೀಗದ ಕೀಲಿಗಳು ಆಕೆಯ ಹತ್ತಿರವೇ ಇರುತ್ತಿತ್ತು.

ಮನೆಯ ಇತರೆ ಸದಸ್ಯರು ಕೃಷಿ, ಪಶುಪಾಲನೆ ಹಾಗೂ ಇತರೆ ಕೆಲಸ ಕಾರ್ಯಗಳಲ್ಲಿ ತೊಡಗುತ್ತಿದ್ದರು. ಮನೆಯವರಿಗೆ ಬೇಕಾದ ವಸ್ತ್ರ, ವಸ್ತು ಇತ್ಯಾದಿಗಳನ್ನು ಯಜಮಾನರು ತರುತ್ತಿದ್ದರು. ನಾಡಜಾತ್ರೆ, ಹಬ್ಬಗಳು ಬಂದರೆ ಮನೆಯ ಇತರೆ ಸದಸ್ಯರುಗಳಿಗೆ ಖರ್ಚಿಗೆ ಅಲ್ಪಸ್ವಲ್ಪ ಹಣವನ್ನು ಕೊಡುತ್ತಿದ್ದರು. ಜಾತ್ರೆಗೆ ಬೇರೆ ಬೇರೆ ಭಾಗಗಳಿಂದ ಅಂಗಡಿ ಸಾಮಾನುಗಳು ಬರುತ್ತಿದ್ದು ಆ ಸಮಯದಲ್ಲಿ ಮನೆಗೆ ಬೇಕಾದ ವಸ್ತು, ಪಾತ್ರೆ, ಜವಳಿ, ಸಾಮಾನು, ಮಣ್ಣಿನ ಪಾತ್ರೆ ಮೊದಲಾದವುಗಳನ್ನು ಕೊಂಡುಕೊಳ್ಳುತ್ತಿದ್ದರು. ಊರಿನವರಿಗೆ ಬೇಕಾಗುವ ಎಲ್ಲಾ ಬಗೆಯ ವಸ್ತು ಸಲಕರಣೆಗಳು ಜಾತ್ರೆಯಲ್ಲಿ ದೊರೆಯುತ್ತಿತ್ತು. ಹೆಂಗಸರು ಬೇರೆ ಸಮಯದಲ್ಲಿ ಪೇಟೆಗೆ ಹೋಗಿ ವಸ್ತುಗಳನ್ನು ಖರೀದಿಸುತ್ತಿರಲಿಲ್ಲ. ಜಾತ್ರೆಯ ಸಮಯ ಊರಿನ ಇತರೆ ಮಹಿಳೆಯರೊಂದಿಗೆ ಹೋಗಿ ಬೇಕಾದ ವಸ್ತುಗಳನ್ನು ತರುತ್ತಿದ್ದರು. ಹಬ್ಬ ಜಾತ್ರೆಯೆಂದರೆ ಅವರಿಗೆ ಸಡಗರ ಸಂಭ್ರಮವಿರುತ್ತಿತ್ತು. ಮುಕ್ತವಾಗಿ ಓಡಾಡಿ ಬರುವ, ಬೇಕಾದುದನ್ನು ತರುವ ಮನರಂಜನೆಯನ್ನು ಪಡೆಯುವ ಅವಕಾಶಗಳು ಇರುತ್ತಿತ್ತು.

ಸಂಕುಚಿತ ಮನೋಭಾವ, ನಾವೇ ಶ್ರೇಷ್ಠವೆಂಬ ಅಹಂಭಾವ, ಆಧುನಿಕ ಶಿಕ್ಷಣ ಪದ್ಧತಿ, ಬದಲಾವಣೆಯ ಭರಾಟೆಗತಿ ಮೊದಲಾದವುಗಳಿಂದ ಹಿಂದಿನ ಪದ್ಧತಿ ಕ್ರಮ, ರೀತಿ-ರಿವಾಜುಗಳು ಮರೆಯಾಗಿವೆ. ಯುವ ಪೀಳಿಗೆಯಲ್ಲಿ ಇವುಗಳ ಗಂಧಗಾಳಿಯು ಇಲ್ಲದಂತಾಗಿದೆ. ಹಿರಿಯ ತಲೆಮಾರಿನವರು ಅತಂತ್ರ ಸ್ಥಿತಿಯಲ್ಲಿದ್ದು, ಹಿಂದಿನ ಪದ್ಧತಿಯನ್ನು ಅನುಸರಿಸಲಾಗದೆ ಹೊಸ ಪದ್ಧತಿಗೆ ಅಳವಡದೆ ಗೊಂದಲದಲ್ಲಿದ್ದಾರೆ.[24]

ಯುಗಾದಿ ಹಬ್ಬದಂದು ವರ್ಷಕ್ಕೊಮ್ಮೆ ಮನೆಯವರೆಲ್ಲರಿಗೂ ಜವಳಿ ತರುತ್ತಿದ್ದರು. ಅದನ್ನು ಬಿಟ್ಟರೆ ಮನೆಯಲ್ಲಿ ಏನಾದರೂ ಮಂಗಳ ಕಾರ್ಯ ನಡೆದರೆ ಜವಳಿಯನ್ನು ತರುತ್ತಿದ್ದರು. ಹೆಂಗಸರು ಜಿಡ್ಡಿನ ಸೀರೆ, ಮಕ್ಕಳಿಗೆ ಪರಿಕಾರ (ಲಂಗ) ದೊಡ್ಡ ಹೆಣ್ಣುಮಕ್ಕಳಿಗೆ 'ಕಿರಿಗೆ' (ಉದ್ದ ಮತ್ತು ಅಗಲ ಕಡಿಮೆ ಇರುವ ಲಂಗ) ಗಂಡು ಹುಡುಗರಿಗೆ 'ಅಂಗಿ' ಕೊಡಿಸುತ್ತಿದ್ದರು.

ವ್ಯವಸಾಯ ಮಾಡಿ ಮನೆಗೆ ಸಂಜೆ ಬಂದಾಗ ಅಕ್ಕಿಹೆಂಡ, ಬೆಳೆ, ಶರಾಬು, ಕಳ್ಳು ಮೊದಲಾದ ಮದ್ಯಸೇವನೆಯಿರುತ್ತಿತ್ತು. ಅಕ್ಕಿಹೆಂಡವನ್ನು ಹೆಚ್ಚಿನ ಕುಟುಂಬದಲ್ಲಿ ಮಾಡುತ್ತಿದ್ದರು. ಕರಿ ಮೀನು ಚಟ್ನಿ, ಏಡಿ ಚಟ್ನಿಯನ್ನು ಹೆಂಡ ಕುಡಿಯುವಾಗ ನೆಂಚುತ್ತಿದ್ದರು. ಸಾಮಾನ್ಯವರ್ಗದ ನೆಂಟರಿಷ್ಟರು ಬಂದರೆ ಅವರಿಗೆ ಮೀನು, ಏಡಿ ಚಟ್ನಿ, ಸಾಂಬಾರುಗಳಲ್ಲಿ ಆತಿಥ್ಯ ಮುಗಿಯುತ್ತಿತ್ತು. ಅಪರೂಪದ ನೆಂಟರು ಬಂದರೆ ಕೋಳಿ, ಕಡುಬು, ರೊಟ್ಟಿ, ಮದ್ಯ ಮೊದಲಾದವುಗಳನ್ನು ಮಾಡಿ ಬಡಿಸುತ್ತಿದ್ದರು. ಶಿಕಾರಿ ಮಾಡುವುದು ಇವರ ಹವ್ಯಾಸವಾಗಿರುವುದರಿಂದ ಕಾಡು ಶಿಕಾರಿ ಮಾಡಿ ಹಂದಿ, ಮೊಲ, ಬರಕ, ಕುರಿ, ಕೋಳಿ ಮೊದಲಾದವುಗಳನ್ನು ಬೇಟೆಯಾಡುತ್ತಿದ್ದರು. ಈ ಭಾಗದಲ್ಲಿ ಕಾಡು ದಟ್ಟವಾಗಿದ್ದು, ಪ್ರಾಣಿ ಪಕ್ಷಿಗಳು ಅಧಿಕವಾಗಿದ್ದವು. ಶಿಕಾರಿಗೆ ಹೋದರೆ ಬರಿಗೈಯಲ್ಲಿ ಬಂದ ಉದಾಹರಣೆಗಳೇ ಇರುತ್ತಿರಲಿಲ್ಲ.[25]

ಹಳೇ ಪೈಕದವರು ಬೈನೆಮರದಿಂದ ಕಳ್ಳನ್ನು ತಯಾರಿಸುತ್ತಿದ್ದರು. ಇದನ್ನು ಸೇಂದಿ ಎಂದು ಕರೆಯುತ್ತಿದ್ದರು. ಬೈನೆ ಮರದ ಹತ್ತಿರ ಕಳ್ಳುಗುತ್ತನ್ನು ಮಾಡಿಕೊಂಡಿರುತ್ತಿದ್ದರು. ಊರಿನ ಪಟೇಲರು, ಗೌಡರು ಮುಖಂಡರು ಆ ಗುತ್ತಿಗೆ ಬಂದು ಅಲ್ಲಿ ಕಳ್ಳನ್ನು ಕುಡಿಯುತ್ತಿದ್ದರು. ಬೆಂಕಿಯನ್ನು ಹಾಕಿ ಸುತ್ತಲು ಕುಳಿತು ಕಳ್ಳನ್ನು ಕುಡಿಯುವುದು ರೂಢಿ. ನೆಂಟರಿಷ್ಟರು ಯಾರಾದರೂ ಬಂದರೆ ಅವರನ್ನು ಸಹ ಕಳ್ಳುಗುತ್ತಿನ ಹತ್ತಿರ ಕರೆದೊಯ್ದು ಆತಿಥ್ಯ ನೀಡುತ್ತಿದ್ದರು. ಈಗಿನ ಬಾರುಗಳಲ್ಲಿ ಪ್ರತ್ಯೇಕ ಕೋಣೆ, ಮಂದ ಬೆಳಕಿನ ವ್ಯವಸ್ಥೆಯಿರುವಂತೆ ಕಾಡಿನ ನಡುವೆ ಮರದ ಹತ್ತಿರ ಪ್ರತ್ಯೇಕ ಪ್ರತ್ಯೇಕವಾಗಿ ಬೆಂಕಿಯ ಬೆಳಕಿನಲ್ಲಿ ಕಳ್ಳನ್ನು ಸೇವಿಸುತ್ತಿದ್ದರು. ಕಾಯಿಸಿದ ಕಳ್ಳನ್ನು ಕುಡಿಯುತ್ತಿದ್ದರು. ಕಾಯಿಸಿದ ಕಳ್ಳು ಹೆಚ್ಚು ನಶೆ ಏರುತ್ತದೆ.[26] ಕಳ್ಳಿನವನಿಗೆ ಒಂದು ಬಾಟಲ್ ಕಳ್ಳಿಗೆ ಒಂದಾಣೆ ಅಥವಾ ಎರಡಾಣೆ ಕೊಡುತ್ತಿದ್ದರು.

ಮನೆಯಲ್ಲಿರುವ ಗಂಡಸರು ಎರಡು, ಮೂರು ಮದುವೆಯಾಗುವುದುಂಟು. ಕೆಲವು ಕುಟುಂಬದಲ್ಲಿ ಹೆಂಡತಿಯಲ್ಲದೆ ಬೇರೆ ಹೆಣ್ಣನ್ನು ಇಟ್ಟುಕೊಂಡು ಆಕೆಗೆ ಬೇರೆ ಮನೆ, ವ್ಯವಸ್ಥೆಗಳನ್ನು ಮಾಡಿಕೊಡುತ್ತಿದ್ದರು. ಅವರ ಮಕ್ಕಳ ಪಾಲನೆ, ಪೋಷಣೆಗಳನ್ನು ಆತ ಮಾಡುತ್ತಿದ್ದನು. ಇದನ್ನು ಸಮಾಜ ಒಪ್ಪಿಕೊಂಡಿತ್ತು. ಈಗ ಒಬ್ಬನಿಗೆ ಒಂದೇ ಹೆಂಡತಿ, ಬೇರೆ ಹೆಣ್ಣನ್ನು ಮದುವೆಯಾಗಬೇಕಾದರೆ ಮೊದಲಿನ ಹೆಂಡತಿಗೆ ವಿಚ್ಛೇದನ ನೀಡಬೇಕು. ನ್ಯಾಯಾಲಯದ ಅನುಮತಿ ಬೇಕು ಅಥವಾ ಮೊದಲ ಹೆಂಡತಿಯ ನಿರಾಕ್ಷೇಪಣೆಯಿದ್ದಲ್ಲಿ ಇನ್ನೊಂದು ಮದುವೆ ಆಗುತ್ತದೆ.

ಶ್ರೀಮಂತ ಒಕ್ಕಲಿಗರು ಬೇರೆಯವರಿಗೆ ಸಾಲಕೊಡುತ್ತಿದ್ದರು. ಸಾಲದ ಬಾಬ್ತಿಗೆ ಹಣ ಅಥವಾ ಆತ ಬೆಳೆದ ಬೆಳೆಗಳನ್ನು ಗೇಣಿರೂಪದಲ್ಲಿ ಪಡೆಯುತ್ತಿದ್ದರು, ಹಾಗೂ ಸರಿಯಾಗಿ ಗೇಣಿ ಕೊಡುತ್ತಿದ್ದರು. ಪಡೆದ ಸಾಲ ಹಿಂದಿರುಗಿಸದಿದ್ದರೆ ಆತನ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದರು. ಹೀಗೆ ಶ್ರೀಮಂತರು ಶ್ರೀಮಂತರಾಗಿಯೇ ಮುಂದುವರಿಯುತ್ತಿದ್ದರು. ಅಕ್ರಮ ಸಾಗುವಳಿಯನ್ನು ಮಾಡಿ ತಮ್ಮ ಕೃಷಿ ಭೂಮಿಯನ್ನು ವಿಸ್ತರಿಸಿಕೊಂಡಿದ್ದರು. ಎಲ್ಲ ಬಗೆಯ ತರಕಾರಿಯನ್ನು ಬೆಳೆಯುತ್ತಿದ್ದರು, ಕಾಡುಪ್ರಾಣಿಗಳನ್ನು ಮೀನು ಏಡಿಗಳನ್ನು ಶಿಕಾರಿ ಮಾಡಿ ತಿನ್ನುತ್ತಿದ್ದರು. ಹಳ್ಳುಗುರುಗಿ ಬೀಜ, ಮುರಗನ ಬೀಜ, ಹೆಬ್ಬಲಸಿನ ಬೀಜ ಮೊದಲಾದವುಗಳನ್ನು ಎಣ್ಣೆಗಾಗಿ ಉಪಯೋಗಿಸುತ್ತಿದ್ದರು. ಅಡುಗೆಗೆ ದೀರ್ಕನ ಹುಳಿ, ಓಟೆ ಹುಳಿಗಳನ್ನು ಬಳಸುತ್ತಿದ್ದರು. ದೀರ್ಕನ ಹುಳಿ ಮೀನು ಸಾಂಬಾರಿಗೆ ಹೆಚ್ಚಾಗಿ ಬಳಸುತ್ತಿದ್ದರು. ಮಲೆನಾಡು ಭಾಗದಲ್ಲಿ ಬೆಳೆಯದಿರುವ ವಸ್ತುಗಳನ್ನು ನಾಡಿನ ಇತರೆ ಭಾಗದಿಂದ ಹೊತ್ತುಕೊಂಡು ಬರುತ್ತಿದ್ದರು. ಜಾತ್ರೆಗಳಲ್ಲಿ ತಂದಿಡುತ್ತಿದ್ದರು. ತಮ್ಮಲ್ಲಿರುವ ಭತ್ತ, ಅಡಿಕೆ, ಕಾಫಿ ಇತ್ಯಾದಿ ವಸ್ತುಗಳನ್ನು ಅವರಿಗೆ ಕೊಟ್ಟು ಅವರಲ್ಲಿರುವ ಕೆಲವು ವಸ್ತುಗಳನ್ನು ಪಡೆಯುತ್ತಿದ್ದರು. ಈ ಪದ್ಧತಿ ತೀರಾ ಇತ್ತೀಚಿನವರೆಗೂ ಇತ್ತು. ಮಲೆನಾಡ ಭಾಗದಲ್ಲಿ ಬೆಳೆಯುವ ಅಡಿಕೆ, ಕಾಫಿ, ಮೆಣಸು ಮೊದಲಾದ ಬೆಳೆಗಳ ಬೆಲೆಯು ಅಧಿಕವಾಗಿರುವುದರಿಂದ ವಿನಿಮಯ ಮಾಡುವುದಿಲ್ಲ. ಬೇಕಾದ ಉತ್ತಮಮಟ್ಟದ ವಸ್ತುಗಳು ಮಾರುಕಟ್ಟೆಯಲ್ಲಿ ದೊರೆಯುವುದರಿಂದ ಮನೆಗೆ ತಂದು ಮಾರುವವರಿಂದ ಕೊಳ್ಳುವುದಿಲ್ಲ.

ಗೌರಿ ಹಬ್ಬದ ನಂತರ ಒಂದು ತಿಂಗಳು ಹೆಂಗಸರಿಗೆ ಬಿಡುವು ಸಿಗುತ್ತಿತ್ತು. ಆಗ ಅವರು ನೆಂಟರಿಷ್ಟರ ಮನೆಗೆ, ಬಂಧು ಬಳಗದವರ ಮನೆಗೆ ಹೋಗಿ ಬರುತ್ತಿದ್ದರು. ಹೆಂಗಸರು ಗದ್ದೆ ನಾಟಿ, ಕಳೆ ಕೀಳುವುದು, ಹಳು ಸವರುವುದು, ಕಟ್ಟಿಗೆ ತರುವುದು, ಮನೆಗೆಲಸ ಮಾಡುವುದು, ಪುರುಷರ ಜೊತೆಗೆ ಹೋಗಿ ಕೆಲಸ ಮಾಡುತ್ತಿದ್ದರು. ಮನೆಯ ಯಜಮಾನ, ಯಜಮಾನತಿಯವರ ಬಗ್ಗೆ ಗೌರವ ಭಾವವಿತ್ತು, ಅವರ ಸರಿಸಮವಾಗಿ ಯಾರು ಕುಳಿತುಕೊಳ್ಳುತ್ತಿರಲಿಲ್ಲ. ಎದುರು ಮಾತನಾಡುತ್ತಿರಲಿಲ್ಲ. ಅವರು ಹೇಳಿದುದನ್ನು ಚಾಚೂ ತಪ್ಪದೆ ನಡೆಸುತ್ತಿದ್ದರು. ಗಂಡಸರು ಬೇಸಾಯವಾದ ನಂತರ ಓಟೆಯಿಂದ ಬುಟ್ಟಿ, ಗೊರಬು ಮೊದಲಾದವುಗಳನ್ನು ಮಾಡುತ್ತಿದ್ದರು. ಕಾಡಿನಿಂದ ಬೀಳನ್ನು ತಂದು ಬುಟ್ಟಿ ಹಾಗೂ ಅಗತ್ಯ ವಸ್ತುಗಳನ್ನು ತಯಾರಿಸುತ್ತಿದ್ದರು. ಮಲೆನಾಡ ಸುತ್ತಮುತ್ತಲು ಕೆಲಸ ಕಾರ್ಯ ಮಾಡುವಾಗ ಒಳಗಾಳು ಪದ್ಧತಿ ಅನುಸರಿಸುತ್ತಿದ್ದರು. ತಮ್ಮ ಮನೆಗೆ ಕೆಲಸಕ್ಕೆ ಬಂದರೆ ಅವರ ಮನೆಯ ಕೆಲಸಕ್ಕೆ ಇವರು ಹೋಗುತ್ತಿದ್ದರು. ಸಂಬಳ ಕೊಡುವುದಿಲ್ಲ. ಹೆಚ್ಚಿನ ಕೆಲಸ ಕಾರ್ಯಗಳಲ್ಲಿ ಹೀಗೆಯೇ ನಡೆಯುತ್ತಿತ್ತು. ಒಕ್ಲಾಟ ಮಾಡುವುದು, ಕಟ್ಟಿಗೆ ಕಡಿಯುವುದು, ತೋಟದ ಬೇಸಾಯ, ಗದ್ದೆ ಸಾಗುವಳಿ ಇತ್ಯಾದಿ. ಈಗ ಕೃಷಿ ಕಾರ್ಮಿಕರ ಮಕ್ಕಳು ಕೃಷಿ ಕೆಲಸ ಮಾಡುತ್ತಿಲ್ಲ. ಜಮೀನು ಹೊಂದಿದವರ ಮಕ್ಕಳು ಆ ಉದ್ಯೋಗ ಮಾಡುವುದಿಲ್ಲ. ಯುವ

ಜನಾಂಗದವರಿಗೂ ಕೃಷಿ ಕೆಲಸ ಮಾಡಲು ಆಸಕ್ತಿಯಿಲ್ಲ. ಇತ್ತೀಚೆಗೆ ಸ್ತ್ರೀಶಕ್ತಿ ಸಂಘಗಳು, ಶ್ರೀಕ್ಷೇತ್ರ ಧರ್ಮಸ್ಥಳ ಸ್ವ ಸಹಾಯ ಸಂಘದ ಸದಸ್ಯರುಗಳು ಒಳಗಾಳು ಕ್ರಮದಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಉಳಿದಂತೆ ಬಯಲುಸೀಮೆಯ ಜನರನ್ನು ಕರೆಸಿ ಕೃಷಿ ಕೆಲಸ ಮಾಡುವ ಸಂದರ್ಭ ಎದುರಾಗಿದೆ. ಕೃಷಿಯನ್ನೇ ಬಿಟ್ಟು ಅನ್ಯ ವೃತ್ತಿ ಹಿಡಿಯುವ ಆಲೋಚನೆಯು ಕೃಷಿಕರಲ್ಲಿ ಬಂದಿದೆ.[27]

ಉಡುಗೆ-ತೊಡುಗೆ : ಕೆಲಸ ಕಾರ್ಯ ಮಾಡುವ ಗಂಡಸರು ಸೊಂಟಕ್ಕಿಂತ ಕೆಳಗೆ ಬರುವ ದೊಗಳೆ ಅಂಗಿ ಹಾಕಿಕೊಳ್ಳುತ್ತಿದ್ದರು. ಸೊಂಟಕ್ಕೆ ಬಾರಪರದಿ ಪಂಚೆಯನ್ನು ಅರ್ಧ ತೊಡೆ ಮುಚ್ಚುವಷ್ಟು ಸುತ್ತಿಕೊಳ್ಳುತ್ತಿದ್ದರು. ಒಳಗಡೆ ಲಂಗೋಟಿಯನ್ನು ಕಟ್ಟಿಕೊಳ್ಳುತ್ತಿದ್ದರು. ಮಳೆಗಾಲದಲ್ಲಿ ಕೆಲಸಕ್ಕೆ ಹೋಗುವಾಗ ಮೈಗೆ ಕಂಬಳಿ, ಸೊಂಟದವರೆಗೆ ಉದ್ದವಿರುವ ತೋಳಿಲ್ಲದ ಕೋಟು, ಕೆಲವರು ಬಿಲಗೊಬ್ಬೆ ತೊಡುತ್ತಿದ್ದರು. ಬಿಲಗೊಬ್ಬೆ ಎಂದರೆ ಎದೆ, ಹೊಟ್ಟೆ, ಬೆನ್ನು ಮುಚ್ಚುವಷ್ಟು ಭಾಗಕ್ಕೆ ದಪ್ಪನಾದ ಬಟ್ಟೆ ಅಥವಾ ಕಂಬಳಿ ತುಂಡನ್ನು ಭುಜದ ಮೇಲಿನಿಂದ ಎಡದಿಂದ ಬಲಕ್ಕೆ ಮತ್ತು ಬಲದಿಂದ ಎಡಕ್ಕೆ ಹಾಕಿ ಸೊಂಟದ ಬಳಿ ಗಂಟು ಹಾಕುತ್ತಾರೆ. ನೆಂಟರ ಮನೆಗೆ ಹೋಗುವಾಗ ಗಂಡಸರು ಉದ್ದನೆ ಪಂಚೆಯನ್ನು ಪಾದದವರೆಗೆ ಕಚ್ಚೆ, ಮೈಗೆ ಬನಿಯನ್ ಅದರ ಮೇಲೆ ಕೋಟು, ತಲೆಗೆ ಜರಿಪೇಟ (ಮುಂಡಾಸ್) ಧರಿಸುತ್ತಿದ್ದರು. ಇನ್ನು ಕೆಲವರು ತಲೆಗೆ ರೇಷ್ಮೆ, ಕೆಂಪು ಹಸಿರು ಪಟ್ಟೆವಸ್ತ್ರ ಕಟ್ಟುತ್ತಿದ್ದರು. ಕೆಲವರು ತಲೆಗೆ ಟೊಪ್ಪಿ ಹಾಕುತ್ತಿದ್ದರು. ಆಗ ಗಂಡಸರು ತಲೆಗೂದಲನ್ನು ಬಾಚಿ ಜುಟ್ಟನ್ನು ಹಾಕುತ್ತಿದ್ದರು. ಬರಿ ತಲೆಯಲ್ಲಿ ಹೋಗುತ್ತಿರಲಿಲ್ಲ.[28]

ಹೆಂಗಸರು ಹದಿನೆಂಟು ಮೊಳದ ಜಿಡ್ಡು ಸೀರೆಯನ್ನು ಉಡುತ್ತಿದ್ದರು. ಮೊಣಕಾಲು ಗಂಟಿನ ಕೆಳಭಾಗ, ಅರ್ಧಕಾಲು ಮುಚ್ಚುವಷ್ಟು ಉದ್ದವಾಗಿಯೂ, ಸೊಂಟಕ್ಕೆ ಮೂರು ನಾಲ್ಕು ಸುತ್ತು ಬರುವಂತೆ ಸುತ್ತಿ ಸೆರಗನ್ನು ಎಡಭಾಗದ ತೋಳ ಅಡಿಯಿಂದ ಬಗಲಿನ ಮುಖಾಂತರ ಬೆನ್ನಿಗೆ ತೆಗೆದುಕೊಂಡು ಬಲಭುಜದ ಮುಂಭಾಗಕ್ಕೆ ತಂದು ಮುಂಭಾಗದ ಮತ್ತು ಹಿಂಭಾಗದ ಕುಚ್ಚನ್ನು ಸೇರಿಸಿ ಗಂಟು ಹಾಕುತ್ತಾರೆ. ಈ ಕ್ರಮದ ಸೀರೆ ಉಡುವುದಕ್ಕೆ ಗೊಬ್ಬೆ ಸೀರೆ ಎಂದು ಕರೆಯುತ್ತಾರೆ. ಮದುವೆಯಾದ ಹೆಂಗಸರೆಲ್ಲ ಈ ರೀತಿ ಸೀರೆ ಉಡುತ್ತಿದ್ದರು. ವಯಸ್ಸಾದವರು ಕುಪ್ಪಸ ತೊಡುತ್ತಿರಲಿಲ್ಲ. ಅವರು ವಲ್ಲಿಯಂತಹ ಒಂದು ತುಂಡು ಬಣ್ಣ ಬಣ್ಣದ ವಸ್ತ್ರವನ್ನು ಬೆನ್ನಿನ ಮೇಲಿಂದ ಹೊದೆದು ಎರಡು ಭುಜದ ಮುಖಾಂತರ ಎದೆಗೆ ತೆಗೆದುಕೊಂಡು ಎರಡು ತುದಿಯನ್ನು ಸೇರಿಸಿ ಗಂಟು ಹಾಕುತ್ತಿದ್ದರು. ಗೊಬ್ಬೆ ಸೀರೆ ಉಡುವವರು ಚಿಕ್ಕವಯಸ್ಸಿನವರಾದರೆ ಅರ್ಧ ತೋಳು ಮುಚ್ಚುವ, ಸೊಂಟದವರೆಗೆ ಬರುವಷ್ಟು ಉದ್ದದ ಕುಪ್ಪಸ ತೊಡುತ್ತಿದ್ದರು. ಆಗಿನ ಕಾಲದಲ್ಲಿ ಗಂಡಸರಿಗೆ ಮೈಯನ್ನು ತೋರಿಸಬಾರದೆಂಬ ಹಿನ್ನೆಲೆಯಿಂದ ಹೆಂಗಸರು ಮೈ ತುಂಬ ಬಟ್ಟೆ ತೊಡುತ್ತಿದ್ದರು. ಸೆರಗು ಹಾಕಿ ಸೀರೆ ಉಡುವುದನ್ನು ಮದುವಳಿಗೆ ಸೀರೆ ಉಡುವ ಕ್ರಮವೆಂದು ಹೆಸರು. ಎಂಟು ಹತ್ತು ವಯಸ್ಸಿನ ಹುಡುಗಿಯರು ಒಂದು ಪರಿಕಾರ (ಲಂಗ) ಹಾಕಿಕೊಳ್ಳುತ್ತಿದ್ದರು. ಹತ್ತು ಹನ್ನೊಂದು ವರ್ಷದ

ಹೆಣ್ಣು ಮಕ್ಕಳು ಕಿರಿಗೆ (ಕಡಿಮೆಯುದ್ದದ ಸೀರೆ)ಯನ್ನು ಉಡುತ್ತಿದ್ದರು. ಗಂಡು ಹುಡುಗರಿಗೆ ಮೈಗೆ ಅರ್ಧತೋಳಿನ ಒಂದು ಅಂಗಿ (ದಗಲೆ) ತಲೆಗೆ ಒಂದು ಟೊಪ್ಪಿ, ಒಂದು ಚಡ್ಡಿ ತೊಡುತ್ತಿದ್ದರು. ನೆಂಟರ ಮನೆಗೆ ಹೋಗುವಾಗ ನಾಲ್ಕು ಮೊಳದ ಮುಂಡು ಪಂಚೆ ಉಟ್ಟುಕೊಳ್ಳುತ್ತಿದ್ದರು. ಈ ಪಂಚೆಗೆ 'ಬಚಕಾನೆ' ಎಂದು ಹೆಸರು. ಬಟ್ಟೆಗಳು ಹಾಗೂ ಉಡುವ ಕ್ರಮಕ್ಕೆ ಬೇರೆ ಬೇರೆ ರೀತಿಯಲ್ಲಿ ಹೆಸರುಂಟು. ಹೆಂಗಸರ ಜಿದ್ದು ಸೀರೆ, ಕುಪ್ಪಸ, ವಲ್ಲಿ, ಕಿರಿಗೆ, ಪರಿಕಾರ, ಗಂಡಸರದ್ದು ಅಂಗಿ, ದಗಲೆ, ಪಂಚೆ,ಕೋಟು, ರುಮಾಲು, ಹುಡುಗರದ್ದು ಅಂಗಿ, ಟೊಪ್ಪಿ, ಚಡ್ಡಿ, ಬಚಕಾನೆ ಉಡುಗೆಗಳಿಗೆಲ್ಲಾ ಈ ರೀತಿಯಾಗಿ ಕರೆಯುತ್ತಿದ್ದರು.[29] ತೊಡುಗೆಗಳಾಗಿ ಕತ್ತಿನಲ್ಲಿ ಮಾಂಗಲ್ಯ, ಹವಳದ ಸರ, ಕೈಗೆ ಬೆಳ್ಳಿಯ ಕಡಗ, ಗಾಜಿನ ಬಳೆ, ಸೊಂಟಕ್ಕೆ ಬೆಳ್ಳಿಯ ಪಟ್ಟಿ ಮೊದಲಾದವುಗಳನ್ನು ಬಳಸುತ್ತಿದ್ದರು.

ಆಧುನಿಕತೆಯ ಪ್ರಭಾವದಿಂದಾಗಿ ವೇಷ ಭೂಷಣಗಳಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಸಂಪ್ರದಾಯದ ಉಡುಗೆ ಮರೆಯಾಗಿ ಪ್ಯಾಂಟು, ಶರ್ಟ್, ಟೀ ಶರ್ಟ್, ರೈನ್ ಕೋಟ್, ಪ್ಲಾಸ್ಟಿಕ್ ವಸ್ತು ಮೊದಲಾದವುಗಳು ಬಳಕೆಯಲ್ಲಿವೆ. ಬೇಸಿಗೆ, ಮಳೆಗಾಲ, ಚಳಿಗಾಲದಲ್ಲಿನ ಉಡುಗೆಯಲ್ಲೂ ಬದಲಾವಣೆಯಾಗಿದೆ. ಹೆಂಗಸರೂ ಪ್ಯಾಂಟ್, ಶರ್ಟ್ ಧರಿಸುತ್ತಾರೆ. ನೂತನ ಶೈಲಿಯ ಪ್ರಾಕ್, ಚೂಡಿದಾರ, ಗಾಗರ ಮೊದಲಾದವುಗಳು ಬಳಕೆಯಲ್ಲಿವೆ. ಯಾವುದೇ ವಯೋಮಾನವಿಲ್ಲದೆ ಹೆಚ್ಚಿನ ಮಹಿಳೆಯರು ನೈಟಿ ಎಂಬ ವಸ್ತ್ರವನ್ನು ಧರಿಸುತ್ತಾರೆ. ತೊಡುಗೆಗಳು ಕಡಿಮೆಯಾಗಿವೆ. ಕುಂಕುಮ, ಬಳೆ, ಹೂವು ಮೊದಲಾದವುಗಳನ್ನು ಧರಿಸುವವರ ಸಂಖ್ಯೆ ಕಡಿಮೆಯಾಗಿದೆ.

ಅತಿಥಿ ಸತ್ಕಾರ : ಮನೆಗೆ ಯಾರೇ ನೆಂಟರು ಬಂದರೂ ಮೊದಲು 'ಬಂದ್ರೆ' ಎಂದು ಹೇಳುವುದು, ನಂತರ ಹಿತ್ತಾಳೆ ತಂಬಿಗೆಯಲ್ಲಿ ಕಾಲು ತೊಳೆಯಲು ನೀರು ಕೊಡುವುದು ಪದ್ಧತಿ. ಅವರು ಕಾಲು ತೊಳೆದು ಒಳಗೆ ಬಂದಾದ ಮೇಲೆ ಬೇಸಿಗೆ ಕಾಲವಾದರೆ ಬೆಲ್ಲ ನೀರು ಕೊಡುವುದು, ಅನಂತರ ತಾಂಬೂಲವನ್ನು ಹರಿವಾಣದಲ್ಲಿ ತಂದಿಡುತ್ತಿದ್ದರು. ಕಾಫ಼ಿ ಇತ್ಯಾದಿಗಳಿಲ್ಲ. ತಾಂಬೂಲ ಹಾಕಿಕೊಂಡು ತಮ್ಮ ಕೆಲಸವನ್ನು ಮುಗಿಸಿಕೊಂಡು ಹೋಗುತ್ತಾರೆ ಅಥವಾ ಊಟಕ್ಕೆ ಇದ್ದರೆ ಮಾಡಿದ ಅಡುಗೆಯನ್ನೇ ಬಡಿಸುತ್ತಾರೆ. ರಾತ್ರಿ ಉಳಿದರೆ ಸಂಜೆ ಹೆಂಡ, ಕರಿಮೀನು ಚಟ್ನಿ ಮಾಡುವುದಿದೆ. ಹತ್ತಿರದ ಹೆಗ್ಗಳಿಕೆಯ ನೆಂಟರಾಗಿದ್ದರೆ ರಾತ್ರಿ ಕೋಳಿ ಸಾಂಬಾರು ಮಾಡಿ ರೊಟ್ಟಿಯನ್ನು ಕಡುಬನ್ನು ಮಾಡಿ ಬಡಿಸಿ ಉಪಚರಿಸುತ್ತಿದ್ದರು.

ಆಭರಣ : ಒಕ್ಕಲಿಗರ ಮನೆಗಳಲ್ಲಿ ತುಂಬಾ ನಗ ನಾಣ್ಯಗಳಿರುತ್ತಿದ್ದವು. ಮದುವೆ ಮೊದಲಾದ ಶುಭ ಸಮಾರಂಭಗಳಂದು ಒಡವೆಗಳನ್ನು ಧರಿಸುತ್ತಿದ್ದರು. ಬೇರೆಯವರಿಗೂ ಶುಭ ಸಮಾರಂಭಗಳಿಗೆ ತೊಡಲು ಕೊಡುತ್ತಿದ್ದರು. ಶೃಂಗೇರಿ ಸುತ್ತಮುತ್ತಲು ವಿಶೇಷವಾಗಿ ಬಳಸುತ್ತಿರುವ ಆಭರಣಗಳಲ್ಲಿ ಕೊರಳಿಗೆ ಧರಿಸುವ ಆಭರಣಗಳು ಗುಂಡಿನಸರ, ಅವಲಕ್ಕಿಸರ, ಹವಳದ ಸರ, ಮುತ್ತಿನಸರ,

ಮುತ್ತಿನಸರ, ಕಾಸಿನಸರ, ಕಟ್ಟಾಣಿಸರ, ಗೆಜ್ಜೆಡಿಕೆ, ಬಂದಿಸರಿಗೆ, ಪವನ್ ಸರ, ಕೈಗೆ ಧರಿಸುವಂತವು ಒಂಕಿ, ತೋಳುಬಂದಿ, ಪಿಂಛಾಳೆ, ಗಿಣಿಬಳೆ, ಜೊಂಬಾಯಿಬಳೆ, ಸುರುಗಿ ಬಳೆ ಕಿವಿಗೆ ಧರಿಸುವಂತಹವು, ಕೆನ್ನೆ ಸರಪಳಿ, ಬೆಂಡೋಲೆ, ಮುತ್ತಿನ ಓಲೆ, ಮುತ್ತಿನ ಬುಗುಡಿ, ಲವಂಗದ ಕಡ್ಡಿ, ಚೆಂದ್ರಮುರ, ಸೊಂಟಕ್ಕೆ ಬಂಗಾರದ ಗೆಜ್ಜೆ ಪಟ್ಟಿ, ಬಂಗಾರದ ಸಾದಾ ಪಟ್ಟಿ , ಬೆಳ್ಳಿ ಪಟ್ಟಿ, ತಲೆಗೆ ಧರಿಸುವ ಆಭರಣಗಳು, ಜಡೆ ಹೂವು, ಮಲ್ಲಿಗೆ ಮೊಗ್ಗು, ಕೇದಿಗೆ ಹೂವು, ರಾಗಟೆ, ತಿರುಪಿನ ಹೂವು ನಾಗರು, ಗುಲಾಬಿ, ಇವುಗಳಲ್ಲಿ ಕೆಲವನ್ನು ಮದುವೆಯ ಸಂದರ್ಭದಲ್ಲಿ ಮಾತ್ರ ಬಳಸುತ್ತಿದ್ದರು. ಗಂಡಸರು ಸೊಂಟಕ್ಕೆ ಬಂಗಾರದ ನೆವಳ, ಕೈಗೆ ಬಂಗಾರದ ಪಟ್ಟಿ, ಕಿವಿಗೆ ಉಂಟಿ, ಮುದ್ರೆಯುಂಗುರ, ಬೆಳ್ಳಿಯ ನೆವಳಗಳನ್ನು ಸೊಂಟಕ್ಕೆ ಬಳಸುತ್ತಿದ್ದರು.

ಈಗ ಹಳೆಯ ಮಾದರಿಯ ಬಂಗಾರದ ಒಡವೆಗಳಾವುವೂ ಬಳಕೆಯಲ್ಲಿಲ್ಲ. ಮದುವೆಯ ಸಮಾರಂಭಗಳಿಗೆ ಬಾಡಿಗೆ ತಂದು ಶೃಂಗರಿಸುವುದಿತ್ತು. ಇತ್ತೀಚೆಗೆ ಮರೆಯಾಗಿದೆ. ಆಧುನಿಕ ಶೈಲಿಯ ಒಡವೆಗಳು ಸಿಗುತ್ತವೆ. ತಮ್ಮ ವೇಷ-ಭೂಷಣಗಳಿಗೆ, ಬಣ್ಣದ ಹೊಂದಾಣಿಕೆಗೆ ಅನುಗುಣವಾಗಿ ಸರಗಳು, ಆಭರಣಗಳನ್ನು ಧರಿಸುತ್ತಿದ್ದಾರೆ. ಯುವ ಜನಾಂಗದವರು ಯಾವುದನ್ನು ತೊಡದೆ ಅದನ್ನೇ ಫ್ಯಾಷನ್ನೆಂದು ಹಾಗೆಯೇ ಇರುತ್ತಾರೆ. ಹೊಸ ಅಭಿರುಚಿ ಹಾಗೂ ಪಾಶ್ಚಾತ್ಯರ ಪ್ರಭಾವದಿಂದಾಗಿ ಮಾರ್ಪಾಟಾಗಿದೆ.[30]

ಮಹಿಳೆಯರಿಗೆ ವೈಯಕ್ತಿಕ ಶೃಂಗಾರದ ಬಗ್ಗೆ ಕಳಕಳಿಯಿತ್ತು. ಕಡಲೆ ಹಿಟ್ಟು ಲೇಪನ, ಅರಶಿಣ ಹಚ್ಚಿಕೊಳ್ಳುತ್ತಿದ್ದರು. ಎಣ್ಣೆಯನ್ನು ಸವರಿ ಸ್ನಾನ ಮಾಡಿ ದೇಹವನ್ನು ನಯವಾಗಿರುವ ಹಾಗೆ ಮಾಡಿಕೊಳ್ಳುತ್ತಿದ್ದರು. ಶೀಗೆಪುಡಿಯನ್ನು ಹಚ್ಚಿ ಸ್ನಾನ ಮಾಡುತ್ತಿದ್ದುದರಿಂದ ದೇಹದ ಎಲ್ಲಾ ಕೊಳೆಗಳು ಹೋಗಿ ದೇಹ ಹೊಳಪು ಹಾಗೂ ನಯವಾಗಿ ಕಂಗೊಳಿಸುತ್ತಿತ್ತು. ಕಣ್ಣಿಗೆ ಕಪ್ಪು, ಹಣೆಗೆ ಕುಂಕುಮ, ಕೆನ್ನೆಗೆ ಅರಶಿಣ ಹಚ್ಚಿಕೊಳ್ಳುತ್ತಿದ್ದರು. ಈಗ ಟಾಲ್ಕಮ್ ಪೌಡರ್, ಕ್ರೀಮ್, ಎಣ್ಣೆ, ವಿಶೇಷ ಬಗೆಯ ಸೋಪು ಮೊದಲಾದವುಗಳು ಬಳಕೆಯಲ್ಲಿವೆ. ಸಾಂಪ್ರದಾಯಿಕ ಪದ್ಧತಿಯನ್ನು ಬಿಟ್ಟಿದ್ದಾರೆ. ತುಟಿಗೆ ಲಿಪ್‌ಸ್ಟಿಕ್, ನೈಲ್ ಪಾಲಿಶ್, ಆಲಂಕಾರಿಕ ಸಿದ್ಧಪಡಿಸಿದ ವಸ್ತುಗಳನ್ನು ಹಚ್ಚಿಕೊಳ್ಳುತ್ತಾರೆ.

ಒಕ್ಕಲಿಗರು ಲೇವಾದೇವಿ ವ್ಯವಹಾರವನ್ನು ಮಾಡುತ್ತಿದ್ದರು. ಜಮೀನನ್ನು ದೀಡು ಮಾಡಿಕೊಂಡು ಅಥವಾ ಭೋಗ್ಯದ ರೂಪದಲ್ಲಿ ಸಾಲ ನೀಡುತ್ತಿದ್ದರು. ಸಾಲ ತೀರಿಸಲಾಗದವರು ಆ ಜಮೀನನ್ನು ಅವರಿಗೆ ಬಿಡುತ್ತಿದ್ದರು. ತಿಳುವಳಿಕೆ ಕಡಿಮೆಯಿರುವ ಕೃಷಿಕರಿಂದ ಮೋಸ ಮಾಡಿ ಸಹಿ ಪಡೆದು ಜಮೀನನ್ನು ತಮ್ಮದಾಗಿ ಮಾಡಿಕೊಳ್ಳುತ್ತಿದ್ದರು. ಗೇಣಿದಾರರಾಗಿ ಭೂ ಸುಧಾರಣಾ ಕಾಯಿದೆ ಬರುವವರೆಗೂ ಗೇಣಿಯನ್ನು ಕೊಟ್ಟು ಜೀವನ ನಡೆಸುತ್ತಿದ್ದರು. ಕೆಲವರು ಸಾಲದ ಬಾಬಿಗಾಗಿ ಅಡಿಕೆ, ಭತ್ತ, ಕಾಫಿ, ಮೊದಲಾದ ಬೆಳೆಗಳನ್ನು ಕಡಿಮೆ ಬೆಲೆಗೆ ಕೊಡುತ್ತಿದ್ದರು. ಸಾಲದ ಅವಧಿ ಒಂದು ವರ್ಷವಾದರೆ ಒಂದು ವರ್ಷದ ಬಡ್ಡಿ ಆರು ತಿಂಗಳಾದರೂ ಒಂದು ವರ್ಷದ ಬಡ್ಡಿಯನ್ನೇ

ವಿಧಿಸುತ್ತಿದ್ದರು. ಆಶ್ವೀಜ ಬಹುಳ ಅಮಾವಾಸ್ಯೆಗಿಂತ ಒಂದು ದಿನ ಮೊದಲು ಸಾಲ ತೆಗೆದುಕೊಂಡರೂ ಅದಕ್ಕೆ ಒಂದು ವರ್ಷದ ಬಡ್ಡಿ ವಿಧಿಸುತ್ತಿದ್ದರು. ಶೀಮೆ ಧಾರಣೆಯಲ್ಲಿ ಸಾಲಗಾರರ ಬೆಳೆಗಳನ್ನು ಪಡೆಯುತ್ತಿದ್ದರು. ಕಡಿಮೆ ಬೆಲೆ ನೀಡಿ ಸಾಲ ಮರು ಜಮಾವಣೆ ಮಾಡುತ್ತಿದ್ದರು. ಆತ ಬೆಳೆದ ಬೆಳೆಯನ್ನು ಆರೆಂಟು ತಿಂಗಳು ಮೊದಲೇ ಲೇವಾದೇವಿದಾರರ ಮನೆಗೆ ಹಾಕಿದ್ದರೂ ಅದಕ್ಕೆ ಬಡ್ಡಿಯಿಲ್ಲ. ಆದರೆ ಸಾಲಕ್ಕೆ ಮಾತ್ರ ಬಡ್ಡಿ ವಿಧಿಸಿ ಶ್ರೀಮಂತರಾಗುತ್ತಿದ್ದರು.

ಇನ್ನು ಕೆಲವರು ಬಂಗಾರ, ಬೆಳ್ಳಿ ಆಭರಣ, ತಾಮ್ರ, ಹಿತ್ತಾಳೆ ಪಾತ್ರೆ ಪಗಡೆಗಳ ಮೇಲೆ ಸಾಲ ನೀಡುತ್ತಿದ್ದರು. ಆ ವಸ್ತುವಿನ ಅರ್ಧ ಬೆಲೆಯಷ್ಟು ಸಾಲ ನೀಡುತ್ತಿದ್ದರು. ನಿಗದಿತ ಅವಧಿಯೊಳಗೆ ಮರು ಜಮಾವಣೆ ಮಾಡದಿದ್ದರೆ ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದರು. ಸಾಲ ಜಮಾವಣೆಯ ಸಮಯದಂದು ಸಾಲ ನೀಡಿದವನು ತಪ್ಪಿಸಿಕೊಂಡು ಒಂದೆರಡು ದಿನದ ತರುವಾಯ ಕಾಣಿಸುತ್ತಿದ್ದನು. ಸಮಯಕ್ಕೆ ಸರಿಯಾಗಿ ಸಾಲ ನೀಡಿಲ್ಲವೆಂದು ಅದನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದನು. ಇಂತಹ ಸಂದರ್ಭ ಬಂದರೆ ದೇವಾಲಯದಲ್ಲಿ ಹುಯಿಲು, ಆಣೆ, ಪ್ರತಿಜ್ಞೆಗಳು ನಡೆಯುತ್ತಿತ್ತು.

ಭೂ ಮಾಲೀಕರು ಗೇಣಿರೂಪದಲ್ಲಿ ಸಂಗ್ರಹಿಸಿದ ಭತ್ತವನ್ನು ಪಣತದಲ್ಲಿ, ತಟ್ಟಿಯಲ್ಲಿ ಕಟ್ಟಿಡುತ್ತಿದ್ದರು. ಊಟಕ್ಕೆ ಸಾಕಾಗದ ಕುಟುಂಬದವರು ಇವರಿಂದ ಹುಲಿಭತ್ತವನ್ನು ಪಡೆಯುತ್ತಿದ್ದರು. ತಮ್ಮ ಫಸಲು ಕೈಗೆ ಸಿಕ್ಕಾಗ ಅವರಿಗೆ ಒಂದಕ್ಕೆ ಎರಡು ಪಟ್ಟು ಭತ್ತವನ್ನು ಭೂ ಮಾಲೀಕರಿಗೆ ನೀಡಬೇಕಿತ್ತು. ಈ ಹೆಚ್ಚುವರಿ ಭತ್ತವನ್ನು ಹುಲಿಭತ್ತವೆಂದು ಕರೆಯುತ್ತಿದ್ದರು.[31] ಎಷ್ಟೋ ರೈತರು ತಾವು ಬೆಳೆದ ಭತ್ತವನ್ನು ಹುಲಿಭತ್ತದರೂಪದಲ್ಲಿ ನೀಡಿ ನಂತರ ಹುಲಿಭತ್ತವನ್ನು ಪಡೆಯುತ್ತಿದ್ದರು. ಈ ರೂಪದಿಂದಲೂ ಭೂ ಮಾಲೀಕರು ಹೆಚ್ಚು ಹೆಚ್ಚು ಶ್ರೀಮಂತರಾಗುತ್ತಿದ್ದರು.

ಮಲೆನಾಡು ಭಾಗದ ಶ್ರೀಮಂತರು ಕೆಲಸ ಕಾರ್ಯಗಳಿಗಾಗಿ ಜೀತದಾಳುಗಳನ್ನು ಇಟ್ಟುಕೊಳ್ಳುತ್ತಿದ್ದರು. ಹೆಚ್ಚಾಗಿ ಕೂಲಿ ಆಳುಗಳಾಗಿರುತ್ತಿದ್ದರು. ಅವರಿಗೆ ಕುಲುಮರೆ (ಮದುವೆ)ಯನ್ನು ಜಮೀನ್ದಾರರು ಮಾಡಿಸುತ್ತಿದ್ದರು. ಅದರ ಖರ್ಚು ವೆಚ್ಚವನ್ನು ಶ್ರೀಮಂತರೇ ಭರಿಸುತ್ತಿದ್ದರು. ಆ ಖರ್ಚನ್ನು ಅವರಿಂದ ಪಡೆಯುತ್ತಿರಲಿಲ್ಲ. ಇವರ ಮನೆಗೆ ಇನ್ನೊಂದು ಆಳು ಹೆಚ್ಚಿಗೆ ಬಂದಂತಾಯಿತು. ಕೂಲಿ ಆಳುಗಳಿಗೆ ಸಂಬಳ ಕೊಡುತ್ತಿರಲಿಲ್ಲ. ಕೂಲಿ ಆಳುಗಳು ಅವರ ಸಂಬಂಧಿಕರೆಲ್ಲ ಒಂದು ಕಡೆ ನೆಲೆಸುತ್ತಿದ್ದರು. ಅವರಿಗೂ ಶಿಕ್ಷಣ ದೊರೆಯದೆ, ತಿಳುವಳಿಕೆ ಆಗದೆ ಜೀವನ ಪರ್ಯಂತ ಶ್ರೀಮಂತರ ಮನೆಯಲ್ಲಿಯೇ ದುಡಿದು ಸಾಯುತ್ತಿದ್ದರು[32] ಮುಗ್ಧ ಜನರನ್ನು ವಂಚಿಸಿ ಇವರುಗಳು ದೊಡ್ಡ ಶ್ರೀಮಂತರಾಗುತ್ತಿದ್ದರು.

ಸಾಮಾನ್ಯವರ್ಗದ ಜನರಿಗೆ ಈಗ ಶಿಕ್ಷಣ ಸಿಕ್ಕಿದೆ. ತಿಳುವಳಿಕೆ ಬಂದಿದೆ. ಆರ್ಥಿಕ, ಮಾನಸಿಕ ಸಹಕಾರ ಬೆಂಬಲ ದೊರೆಯುತ್ತಿದೆ. ಕಾನೂನಿನ ರಕ್ಷಣೆಯಿದೆ. ಉದ್ಯೋಗಾವಕಾಶಗಳು ದೊರೆಯುತ್ತಿವೆ. ಎಲ್ಲ ಜನರಂತೆ ಸಮಾನವಾಗಿ ಬದುಕಲು ಅವಕಾಶ ದೊರೆತಿದೆ. ಅವರಲ್ಲೂ ಸಹ ಬೇರೆ ಬೇರೆ

ವೃತ್ತಿ, ವ್ಯಾಪಾರ, ಉದ್ಯೋಗ, ಕೃಷಿ ಮೊದಲಾದವುಗಳನ್ನು ಮಾಡಿ ಜೀವನ ಸುಧಾರಣೆ ಮಾಡಿಕೊಂಡಿದ್ದಾರೆ. ಇದು ತೀರಾ ಇತ್ತೀಚಿಗಿನ ಬದಲಾವಣೆಯಾಗಿದೆ. ನಗರ ಪ್ರದೇಶದಲ್ಲಿ ಬದಲಾವಣೆ ಹೆಚ್ಚಾಗಿದ್ದು ಹಳ್ಳಿಯಲ್ಲಿ ಬಹಳಷ್ಟು ಮಾರ್ಪಾಟುಗಳಾಗದೆ ಯಥಾ ಪ್ರಕಾರ ಮುಂದುವರಿಯುತ್ತಿದೆ.

ಗೇಣಿದಾರರು ಭೂ ಮಾಲೀಕನಿಗೆ ಒಂದು ಖಂಡುಗ ಗದ್ದೆಗೆ ನಾಲ್ಕರಿಂದ ಆರು ಖಂಡುಗ ಭತ್ತವನ್ನು ಗೇಣಿರೂಪದಲ್ಲಿ ಕೊಡುತ್ತಿದ್ದರು. ಒಂದು ಎಕರೆ ಅಡಿಕೆ ತೋಟಕ್ಕೆ 12 ಮಣ (120 ಕೆ.ಜಿ) ಅಡಿಕೆ ಕೊಡುತ್ತಿದ್ದರು. ಅಡಿಕೆ ಬೆಳೆ ಬರದಿದ್ದರೂ, ಭತ್ತ ಬೆಳೆಯದಿದ್ದರೂ ಮಾಲೀಕನಿಗೆ ಗೇಣಿ ನೀಡಬೇಕಿತ್ತು. ಎಷ್ಟೋ ಸಾರಿ ಗೇಣಿಕೊಟ್ಟು ಉಳಿಯುತ್ತಿರಲಿಲ್ಲ. ಮತ್ತೆ ಅವನಿಂದಲೇ ಸಾಲ ಪಡೆದು ಜೀವಿಸಬೇಕಾಗುತ್ತಿತ್ತು. ಒಕ್ಕಲು ಒಡೆಯರ ಮನೆಯಲ್ಲಿ ಕೆಲವು ದಿನಗಳು ಬಿಟ್ಟಿ ಕೆಲಸ ಮಾಡಬೇಕಾಗುತ್ತಿತ್ತು. ಗದ್ದೆ ಬಿತ್ತನೆ ಕಾಲದಲ್ಲಿ ಒಂದು ಜೊತೆ ಎತ್ತು, ಹೂಟಿ ಆಳು ಮತ್ತು ಹೆಣ್ಣಾಳು ಹೋಗಿ ಉಚಿತವಾಗಿ ಕೆಲಸ ಮಾಡಬೇಕು. ಮನೆ ಹೊದಿಸಲು ಒಂದು ದಿನ ಬರಬೇಕು. ಕಟ್ಟಿಗೆ ಕಡಿಯಲು, ಕಂಬಳಕ್ಕೆ ಒಂದೋ ಎರಡೋ ದಿನ ಉಚಿತವಾಗಿ ಬರಬೇಕು. ಸಸಿ ನೆಟ್ಟಿ ಸಮಯ ಒಂದೆರಡು ದಿನ ಬರಬೇಕು. ಇದಾವಕ್ಕೂ ಕೂಲಿ ಇಲ್ಲ. ಆ ದಿನ ಒಂದು ಊಟ ಕೊಡುತ್ತಿದ್ದರು. ಗಂಡು ಮಕ್ಕಳನ್ನು ದನ ಕಾಯಲು, ಹೆಣ್ಣು ಮಕ್ಕಳು ಮಕ್ಕಳನ್ನು ಆಡಿಸಲು ಬಿಡಬೇಕು. ಇವರಿಗೆ ಅಲ್ಪಸ್ವಲ್ಪ ಸಂಬಳ ಕೊಡುತ್ತಿದ್ದರು. ಒಕ್ಕಲಿಗರಿಗೆ ಏನೇ ಗಂಡಾಂತರ ಆದರೂ ಸಹಾಯ ಮಾಡುತ್ತಿದ್ದರು. ಒಡೆಯನೊಂದಿಗೆ ಒಕ್ಕಲು ಜನರು ಭಯ ಭಕ್ತಿಯಿಂದ ಅವನು ಹೇಳಿದಂತೆ ಕೇಳಿ ಬದುಕಬೇಕಿತ್ತು.

ಭೂ ಸುಧಾರಣೆ ಕಾಯಿದೆಯಿಂದಾಗಿ ಗೇಣಿ ಪದ್ಧತಿ ರದ್ದಾಗಿದೆ. ಆಳುಗಳು ಖಾಯಂ ಕೆಲಸ ಮಾಡದೆ ಬೇರೆ ಕಡೆಗೆ ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಿದ್ದಾರೆ. ಹಿಂದೆ ಊರಿಗೆ ಕೆಲವೇ ಕೆಲವರು ಶ್ರೀಮಂತರಿರುತ್ತಿದ್ದರು. ಈಗ ಪ್ರತಿಯೊಬ್ಬರೂ ಅವರವರ ಮಟ್ಟಿಗೆ ಜೀವನ ಸುಧಾರಣೆ ಮಾಡಿಕೊಂಡು ಉತ್ತಮ ಸ್ಥಿತಿಯಲ್ಲಿದ್ದಾರೆ. ಯುವಕರು ಹೊರ ಊರಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ದಬ್ಬಾಳಿಕೆ, ದೌರ್ಜನ್ಯಗಳು ಕಡಿಮೆಯಾಗಿವೆ. ಬಡವ ಶ್ರೀಮಂತರ ನಡುವಿನ ಅಂತರ ಕಡಿಮೆಯಾಗಿದೆ. ಸಮಾನ ಗೌರವ, ಸಮಾನ ಸ್ಥಾನಮಾನ ದೊರೆಯುವ ಸನಿಹದಲ್ಲಿದ್ದಾರೆ.

ಸಂಪ್ರದಾಯಗಳು

ಮುಹೂರ್ತ ನೋಡುವುದು: 'ಯಾವುದೇ ಕೆಲಸ ಕಾರ್ಯಗಳನ್ನು, ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸುವ ಮೊದಲು ಮುಹೂರ್ತ ಕೇಳಿ ಒಳ್ಳೆಯ ಮುಹೂರ್ತದಂದು ವೀಳ್ಯದೆಲೆ, ಅಡಿಕೆ, ಅರಶಿನ, ಕುಂಕುಮ, ಹಣ್ಣು ಕಾಯಿ ಮೊದಲಾದವುಗಳೊಂದಿಗೆ ಸ್ವತಃ ತಾವೇ ಪೂಜೆ ನಡೆಸಿ

ಪ್ರಾರಂಭಿಸುತ್ತಾರೆ. ಆರುಕಟ್ಟುವುದು, ಸಸಿಬೀಜ ಬಿತ್ತನೆ, ಕೊನೆ ತೆಗೆಯುವುದು ಗದ್ದೆ ಹೂರೆ ಇತ್ಯಾದಿ ಸಂದರ್ಭದಲ್ಲಿ.

ಮುಟ್ಟಾದಾಗ: ಹೆಂಗಸರು ಮುಟ್ಟಾದಾಗ ಅಸ್ಪೃಶ್ಯತೆಯಿರುತ್ತದೆ. ನಾಲ್ಕು ದಿನ ಮನೆಯೊಳಗೆ ಪ್ರವೇಶವಿಲ್ಲ. ತಾವು ಧರಿಸಿದ ಬಟ್ಟೆ ಪಾತ್ರೆ ಮೊದಲಾದವುಗಳನ್ನು ತೊಳೆದು ತಾವು ಮಲಗಿದ ಸ್ಥಳವನ್ನು ಗೋಮಯಹಾಕಿ ಸಾರಿಸಿ ಶುದ್ಧಿಮಾಡಬೇಕು. ಸ್ನಾನ ಮಾಡಿ ಒಳಗೆ ಬರುವುದು.

ಹೊಲಸು: ಒಕ್ಕಲಿಗ ಜನಾಂಗದವರು ಮಾಂಸಾಹಾರ ಪದಾರ್ಥಗಳನ್ನು ಮಾಡುತ್ತಾರೆ. ಅದಕ್ಕೆ 'ಹೊಲಸು' ಎಂದು ಮಲೆನಾಡಿನ ಭಾಷೆಯಿದೆ. ಅದಕ್ಕಾಗಿಯೇ ಪ್ರತ್ಯೇಕ ಕೋಣೆ, ಒಲೆ, ಪಾತ್ರೆಗಳಿರುತ್ತವೆ. ನಿತ್ಯ ಅಡುಗೆಮಾಡುವಲ್ಲಿ ಹೊಲಸಿನ ಅಡುಗೆ ಮಾಡುವುದಿಲ್ಲ.

ಋತುಮತಿಯಾದಾಗ: ಋತುಮತಿಯಾದ ಹೆಣ್ಣನ್ನು ಹಾಲುಮರದಡಿ ಅಥವಾ ಫಲವೃಕ್ಷದಡಿಯಲ್ಲಿ ನಿಲ್ಲಿಸಿ ಅಕ್ಕ ಪಕ್ಕದ ಮನೆಯವರೆಲ್ಲಾ ಸೇರಿ ಆಕೆಯನ್ನು ಮನೆಗೆ ಕರೆತಂದು ಬಿಸಿನೀರಿನ ಸ್ನಾನ ಮಾಡಿಸುತ್ತಾರೆ. ಆಕೆ ದೇವರ ಮನೆ, ಅಡುಗೆ ಮನೆಗೆ ಹೋಗುವಂತಿಲ್ಲ. ಅವಳಿಗೆ ಹುಗ್ಗಿಅನ್ನ ಮಾಡಿ ಊಟಕ್ಕೆ ಬಡಿಸುತ್ತಾರೆ. ಹನ್ನೊಂದನೆ ದಿನ ನೀರೆರೆಯುವ ಕ್ರಮ. ಮಾವನ ಮನೆಯವರು ಬಾಳೆಹಣ್ಣು, ಎಲೆ, ಅಡಿಕೆ, ಕೊಬ್ರಿ, ಬೆಲ್ಲ, ತೆಂಗಿನಕಾಯಿ, ಸಿಂಗಾರ ಮೊದಲಾದ ವಸ್ತುಗಳು ಒಂದು ಸೀರೆ, ಕುಪ್ಪಸ, ತಂದು ಕೊಂಬು ಹಲಗೆ ವಾದ್ಯಗಳ ಮೂಲಕ ಕರೆತಂದು ನೀರೆರೆಯುತ್ತಾರೆ. ನಂತರ ಸೋದರ ಮಾವನ ಮನೆಗೆ ಕರೆದೊಯ್ದು ಅರಶಿನ ಕುಂಕುಮ ಹಚ್ಚಿ ಮಾವನ ಮನೆಯಲ್ಲಿ ಎಲ್ಲಾ ಮಹಿಳೆಯರು ಒಂದೊಂದು ತಂಬಿಗೆ ನೀರನ್ನು ಹಾಕುತ್ತಾರೆ. ದಾಸಯ್ಯ ಬಂದು ಶುದ್ಧೋದಕ ಎರಚುತ್ತಾರೆ. ಆಕೆಯನ್ನು ಮನೆಯೊಳಗೆ ಕರೆದು ಆರತಿ ಎತ್ತಿ, ಶಾಸ್ತ್ರಗಳನ್ನು ಮಾಡುತ್ತಾರೆ. ಹುಗ್ಗಿಅನ್ನವನ್ನು ಮಾಡುತ್ತಾರೆ.

ಜನನ: ಹಿಂದೆ ಮೊದಲ ಹೆರಿಗೆ ತೌರುಮನೆಯಲ್ಲಿಯೆ ಸೂಲಗಿತ್ತಿಯರು ಬಂದು ಹೆರಿಗೆ ಮಾಡಿಸುತ್ತಿದ್ದರು. ಚೊಚ್ಚಲ ಹೆರಿಗೆಯು ಹೆಚ್ಚು ಅಪಾಯಕಾರಿಯಾಗಿದ್ದು ಸಾವಿನ ಸಾಧ್ಯತೆ ತುಂಬಾ ಜಾಸ್ತಿ. ಐದು, ಏಳನೆ ತಿಂಗಳ ಗರ್ಭಿಣಿಯನ್ನು ಕರೆತರುತ್ತಾರೆ. ಬಯಕೆ ಶಾಸ್ತ್ರವಿದೆ. ಹೆಚ್ಚಿನ ಬಗೆಯ ತಿಂಡಿಗಳನ್ನು ಮಾಡಿ ಆಕೆಗೆ ಬಡಿಸುತ್ತಿದ್ದರು. ಹಿಂದೆ ಪ್ರಸವದ ಸಮಯ ಸಾಯುವ ಸಾಧ್ಯತೆ ಹೆಚ್ಚಾಗಿದ್ದುದರಿಂದ ಬಸರಿಗೆ ಬೇಕಾದ ತಿಂಡಿ, ವಸ್ತ್ರ, ಉಡುಗೊರೆ ನೀಡಿ ಕರೆದೊಯ್ಯುತ್ತಿದ್ದರು. ಸೂಲಗಿತ್ತಿ ಹೆರಿಗೆ ಮಾಡಿಸುವಾಗ ಹೊಟ್ಟೆಗೆ ಎಣ್ಣೆ ಹಚ್ಚಿ ತಿಕ್ಕುತ್ತಿದ್ದರು. ಕೆಲವೊಮ್ಮೆ ಸೂಲಗಿತ್ತಿಯರಿಂದಲೆ ಮಗು ಮತ್ತು ಬಾಣಂತಿಯರು ಸಾಯುವುದಿತ್ತು. ಆಗ ಜಕಣಿಯ ಕಾಟವೆಂದೂ, ದೆವ್ವ ಮುರಿದುಕೊಂಡು ಹೋದುದೆಂದೂ ಹೇಳುತ್ತಿದ್ದರು. ಬಾಣಂತಿಯರಿಗೆ ಖಾರದ ಪದಾರ್ಥ ಕೊಡುತ್ತಿದ್ದರು. ನಿತ್ಯ ಸ್ನಾನವಿರುತ್ತಿತ್ತು. ಆಕೆ ಊಟಮಾಡುವುದನ್ನು ಯಾರೂ ನೋಡುವಂತಿರಲಿಲ್ಲ. ಹನ್ನೊಂದನೆ ದಿನದ ನಂತರ ಖಾರ ಜಾಸ್ತಿ ಹಾಕಿದ ಮಾಂಸಾಹಾರವನ್ನು ಕೊಡುತ್ತಿದ್ದರು.

ಶಿಶುಜನನಸೂತಕ: ಶಿಶು ಜನಿಸಿ ಹತ್ತು ದಿನಗಳವರೆಗೆ ಸೂತಕವಿರುತ್ತದೆ. ಮಂಗಳಕರವಾದ ಕಾರ್ಯಕ್ರಮ ನಡೆಯುವುದಿಲ್ಲ. ಹನ್ನೊಂದನೆ ದಿನ ಅಗಸಗಿತ್ತಿ ಬಂದು ಆ ಮನೆಯವರ ಹಾಗೂ ಬಾಣಂತಿಯ ಎಲ್ಲಾ ಬಟ್ಟೆಗಳನ್ನು ಒಗೆದು ಶುದ್ಧಿಗೊಳಿಸುತ್ತಾಳೆ. ದಾಸಯ್ಯ ಬಂದು ತುಳಸಿ ಪೂಜೆ ಮಾಡಿ ತೀರ್ಥವನ್ನು ಸಿಂಪಡಿಸಿ ಶುದ್ಧಿಗೊಳಿಸುತ್ತಾರೆ. ಆ ದಿನವೇ ರಾತ್ರಿ ಮಗುವಿಗೆ ನಾಮಕರಣ ಶಾಸ್ತ್ರವಿರುತ್ತದೆ.

ನಾಮಕರಣ: ಮಗು ಹುಟ್ಟಿದ ಸಮಯವನ್ನು ಜೋಯಿಸರಿಗೆ ತಿಳಿಸಿ, ಅವರು ಜಾತಕ ಬರೆದು ಕೊಡುತ್ತಾರೆ. ಅವರು ನೀಡಿದ ಗಳಿಗೆಗೆ ನಾಮಕರಣ ಮಾಡುತ್ತಾರೆ. ನಕ್ಷತ್ರಕ್ಕನುಗುಣವಾಗಿ ನಾಮಾಕ್ಷರ ಅಥವಾ ಹೆಸರನ್ನು ಹೇಳುತ್ತಾರೆ. ಮಲೆನಾಡಿನಲ್ಲಿ ಪ್ರಚುರವಿರುವ ಹೆಸರನ್ನು, ಹಿಂದಿನ ಹಿರಿಯರ ಹೆಸರನ್ನು ಮಕ್ಕಳಿಗೆ ಇಡುವುದಿದೆ. ಮಗು ಹಾಗೂ ತಾಯಿಗೆ ಹೊಸಬಟ್ಟೆ ಧರಿಸಿ ಶೃಂಗರಿಸಿ, ತೊಟ್ಟಿಲನ್ನು ಶೃಂಗರಿಸಿ, ತೊಟ್ಟಿಲಪೂಜೆ ಮಾಡಿದ ನಂತರ ಮುತ್ತೈದೆಯರಿಬ್ಬರು ತೊಟ್ಟಿಲ ಆಚೆ ಈಚೆ ನಿಂತುಕೊಂಡು ಒಬ್ಬರು ಆ ಮಗುವನ್ನು ತೊಟ್ಟಿಲ ಒಳಗಿಟ್ಟು ಎತ್ತಿ ಅಡಿಯಿಂದ ಆಚೆ ಇದ್ದವರಿಗೆ ಕೊಡುತ್ತಾರೆ. ಆ ಕಡೆಯವರೂ ಹಾಗೆ ಮಾಡಿದ ನಂತರ ತೊಟ್ಟಿಲೊಳಗೆ ಮಗುವನ್ನು ಮಲಗಿಸುತ್ತಾರೆ. ಜೋಯಿಸರು ಹೇಳಿದ ಹೆಸರನ್ನು ಹೇಳಿ ತೂಗುತ್ತಾರೆ. ಬಂದವರು ಮಗುವಿಗೆ ಉಡುಗೊರೆ ಕೊಡುತ್ತಾರೆ. ಹೆಣ್ಣು ಮಗುವಾದರೆ ಪುಡಿಸಕ್ಕರೆ, ಗಂಡು ಮಗುವಾಗಿದ್ದರೆ ಕಲ್ಲುಸಕ್ಕರೆ ಕೊಡುತ್ತಾರೆ. ರಾತ್ರಿ ಮಾಂಸದೂಟವಿರುತ್ತದೆ. ಇದನ್ನು ತೊಟ್ಟಿಲು ಶಾಸ್ತ್ರವೆಂದು ಕರೆಯಲಾಗುತ್ತದೆ.

ಬಾಲೆ ತೊಟ್ಟಿಲು ಕಳುಹಿಸುವುದು:

ಮೂರು ತಿಂಗಳಾದ ಬಾಣಂತಿಯನ್ನು ಗಂಡನ ಮನೆಗೆ ಕಳುಹಿಸುತ್ತಾರೆ. ಗಂಡನ ಮನೆಯಿಂದ ಮುತ್ತೈದೆಯರು ಹಾಗೂ ತೊಟ್ಟಿಲನ್ನು ಹೊರಲು ಮಡಿವಾಳನೊಬ್ಬನು ಬರುತ್ತಾರೆ. ತೊಟ್ಟಿಲ ಮೇಲುಗಡೆ ಕಮಾನು ಮಾಡಿ ಬಟ್ಟೆ ಮುಚ್ಚಿರುತ್ತಾರೆ. ಎಣ್ಣೆ ಕುಡಿಕೆ, ಹಾಲು ಕುಡಿಕೆಗಳನ್ನು ಶಿಕ್ಕದಲ್ಲಿ ಹಾಕಿ ಇಟ್ಟುಕೊಳ್ಳುತ್ತಾರೆ. ಊಟೋಪಚಾರವಾದ ನಂತರ ಮುಹೂರ್ತಕ್ಕೆ ಸರಿಯಾಗಿ ಹೊರಡುತ್ತಾರೆ. ಸ್ವಲ್ಪ ದೂರ ತವರು ಮನೆಯವರು ಬಂದು ಬೀಳ್ಕೊಡುತ್ತಾರೆ. ದಾರಿ ಮಧ್ಯದಲ್ಲಿ ಹೊಳೆ ಹಳ್ಳಗಳು ಸಿಕ್ಕರೆ ವೀಳ್ಯದೆಲೆ, ಅಡಿಕೆಯಿಟ್ಟು ಮಗುವಿಗೆ ಸುಳಿದು ಗಂಗೆಯಲ್ಲಿ ತೇಲಿಬಿಡುತ್ತಾರೆ. ಕೈಯಲ್ಲಿ ನೀರನ್ನು ತೆಗೆದು ಚಿಮುಕಿಸುತ್ತಾರೆ. ಗಂಡನ ಮನೆಯಲ್ಲಿ ಸ್ವಾಗತಕ್ಕೆ ಸಿದ್ಧರಾಗಿದ್ದು, ಬಾಣಂತಿಗೆ ಕಾಲು ತೊಳೆಯಲು ನೀರು ಕೊಡುತ್ತಾರೆ. ಕೆಂಪು ಓಕಳಿ ಆರತಿ ಎತ್ತಿ ಮಗುವಿನ ಹಣೆಗೆ ಮಸಿ ಬೊಟ್ಟು ಇಟ್ಟು ಲಟಗೆ ತೆಗೆದು ಮಗು ಮತ್ತು ಬಾಣಂತಿಯರನ್ನು ತುಳಸಿಕಟ್ಟೆಗೆ ಪ್ರದಕ್ಷಿಣೆ ಬರಿಸಿ ಮನೆ ಒಳಗೆ ಪ್ರವೇಶಿಸುತ್ತಾರೆ.

ಮದುವೆ ಸಂಪ್ರದಾಯಗಳು:

ಸಮಾನ ಸ್ಥಾನಮಾನ, ಮನೆ, ಆಸ್ತಿ, ಅಂತಸ್ತನ್ನು ನೋಡಿ ವಧು ವರರನ್ನು ಹಿರಿಯರೆ ನೋಡಿ ನಿರ್ಧರಿಸುತ್ತಿದ್ದರು. ನಂತರ ವಧುವರರ ಸಮ್ಮತಿ ಕೇಳುತ್ತಿದ್ದರು. ಒಂದೇ ಗೋತ್ರವಿದ್ದರೆ ಮದುವೆ ನಿಷಿದ್ಧ. ನಾಮಧಾರಿ ಒಕ್ಕಲಿಗರಲ್ಲಿ ಗಂಗರಬಳಿ, ತೋಳರಬಳಿ, ರೌಡಿಬಳಿ, ಬಾಲೆಬಳಿ ಹೀಗೆ ಅವರವರ ವಂಶದಲ್ಲಿ ಚಾಲ್ತಿಯಲ್ಲಿತ್ತು. ಇದು ತಾಯಿಯಿಂದ ಬರುತ್ತಿತ್ತು. ತಾರಾನುಕೂಲ, ಜಾತಕ, ದೇವರಲ್ಲಿ ಪ್ರಸಾದ ನೋಡಿಸುವುದಿದೆ. ವಧು ಅಥವಾ ವರನನ್ನು ನೋಡಲು ಹೋಗುವ ದಾರಿಯಲ್ಲಿ ಶಕುನ ಅಪಶಕುನ ಆಗುವುದನ್ನು ಗಮನಿಸುತ್ತಿದ್ದರು. ಇದರ ಕುರಿತು ನಿಮಿತ್ಯ ಕೇಳಿ ಪರಿಹರಿಸಿಕೊಳ್ಳುತ್ತಿದ್ದರು.[33] ಜೋತಿಷ್ಯಗಾರರು ಲಗ್ನ ಪತ್ರಿಕೆ ಬರೆದು ಕೊಡುತ್ತಿದ್ದರು. ಅದನ್ನು ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ ವಿನಿಮಯ ಮಾಡಿ ವೀಳ್ಯದೆಲೆ ಅಡಿಕೆ ತೆಂಗಿನಕಾಯಿ ಅದಲು ಬದಲು ಮಾಡಿಕೊಂಡು ನಿಶ್ಚಿತಾರ್ಥ ನಡೆಯುತ್ತಿತ್ತು. ಸಾಮಾನ್ಯವಾಗಿ ರಾತ್ರಿ ಮದುವೆಗಳಾಗುತ್ತಿದ್ದವು. ಅಕ್ಷತೆ ಕೊಟ್ಟು ಕರೆ ಮಾಡುವುದು. ಮದುವೆಗಾಗಿ ಒಂದುವಾರ ಮೊದಲೆ ಪೂರ್ವಸಿದ್ಧತೆ ನಡೆಯುತ್ತಿತ್ತು. ಮಡಿಲು ತುಂಬಿದ ವಸ್ತುಗಳನ್ನು ಒಂದು ಬುಟ್ಟಿಯಲ್ಲಿ ತುಂಬಿ, ಮಡಿವಾಳರ ಹತ್ತಿರ ಹೊರಿಸಿಕೊಂಡು ಹೋಗುತ್ತಿದ್ದರು. ಮದುವೆಯ ಹಿಂದಿನ ದಿನ ಹೂಮುಡಿಸುವ ಶಾಸ್ತ್ರವಿತ್ತು. ನಿಶ್ಚಿತಾರ್ಥವಾದ ನಂತರ ಆ ಮದುವೆ ನಿಲ್ಲುವಂತಿಲ್ಲ. ಆ ಕಾರಣದಿಂದ ಹಿಂದಿನ ದಿನವೇ ಹೂವು ಮುಡಿಸುವ ಶಾಸ್ತ್ರಮಾಡುತ್ತಿದ್ದರು. ಆ ದಿನ ತಂದ ಜವಳಿಗೆ ಪೂಜೆ ಮಾಡಿ ಪಿತೃಗಳಿಗೆ ಎಡೆಯಿಡುತ್ತಿದ್ದರು. ಮಾದಾರನು ಮನೆಯ ಮುಂದೆ ತೋರಣ ಕಟ್ಟಿ ಶೃಂಗರಿಸುತ್ತಿದ್ದನು.

ಹಸೆಗೋಡೆ: ಬಣ್ಣಗಾರರು ಹಸೆಗೋಡೆ ಬರೆಯುತ್ತಾರೆ. ಗೋಡೆಯ ಮೇಲೆ ಮೂರು ಅಡಿ ಉದ್ದ, ಎತ್ತರಕ್ಕೆ ಬಣ್ಣದಿಂದ ಗೆರೆಹಾಕುತ್ತಾರೆ. ಆ ಚೌಕದೊಳಗೆ ಸೂರ್ಯ, ಚಂದ್ರ, ಹಾಗೂ ಇನ್ನೇನಾದರೂ ಚಿತ್ರ ಬರೆಯುತ್ತಾರೆ. ಮದುವೆಯಾದ ಗಂಡು ಹೆಣ್ಣನ್ನು ಆ ಹಸೆಗೋಡೆಯ ಕೆಳಗೆ ಕೂರಿಸಿ ಶಾಸ್ತ್ರ ಮಾಡುತ್ತಾರೆ. ಬಣ್ಣಗಾರರಿಗೆ ತೆಂಗಿನಕಾಯಿ ಹಣ ನೀಡಿ ಮರ್ಯಾದೆ ಸಲ್ಲಿಸುತ್ತಾರೆ.

ಕುಕ್ಕೆ ತುಂಬುವುದು: ಓಟೆ ಅಥವಾ ಬಿದಿರಿನಿಂದ ಹೆಣೆದ ಎರಡು ಬುಟ್ಟಿಗಳನ್ನು ಮದುವೆಯ ಸಂದರ್ಭದಲ್ಲಿ ಬಳಸುತ್ತಾರೆ. ಒಂದನ್ನು 'ಸಾಲಾವಳಿ ಕುಕ್ಕೆ' ಎಂದೂ ಇನ್ನೊಂದನ್ನು 'ಧಾರೆ ಕುಕ್ಕೆ' ಎಂದೂ ಕರೆಯುತ್ತಾರೆ. ವರನ ಮನೆಯವರು ಮಡಿಲು ತುಂಬಲು ಸಾಲಾವಳಿ ಕುಕ್ಕೆ ಬಳಸುತ್ತಾರೆ. ಧಾರೆ ಸಮಯದಲ್ಲಿ ಉಪಯೋಗಿಸುವ ಕುಕ್ಕೆಗೆ ಧಾರೆಕುಕ್ಕೆ ಎಂದು ಕರೆಯುತ್ತಾರೆ. ಈ ಕುಕ್ಕೆಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಮುತ್ತೈದೆಯರು ಧಾರೆಗೆ ಬೇಕಾದ ಕೊಬ್ಬರಿ, ದ್ರಾಕ್ಷಿ, ಕಲ್ಲುಸಕ್ಕರೆ, ಕನ್ನಡಿ, ಬಾಚಣಿಗೆ, ಎಣ್ಣೆ, ಬೆಲ್ಲ, ವಿಭೂತಿ, ಅಡಿಕೆ, ಹಿಂಗಾರ, ಕಂಕಣದಾರ, ತುಂಬೆಹೂವಿನ ಹಾರ ಮೊದಲಾದ ವಸ್ತು ಉಪಕರಣಗಳನ್ನು ಇದಕ್ಕೆ ತುಂಬುತ್ತಾರೆ.

ಸಾಲಾವಳಿ ಕುಕ್ಕೆಗೆ ಎರಡು ಬಾಳೆ ಎಲೆಗಳನ್ನು ಹಾಸಿ ಅರಶಿನ, ಕುಂಕುಮ, ಅಕ್ಕಿ, ತೆಂಗಿನಕಾಯಿ, ಕುಪ್ಪಸ, ಬಟ್ಟೆ, ವೀಳ್ಯದೆಲೆ, ಸೌತೆಕಾಯಿ, ಲಿಂಬೆಹಣ್ಣು, ಬಾಳೆಹಣ್ಣು, ಬಿಚ್ಚೋಲೆ, ದ್ರಾಕ್ಷಿ, ಉತ್ತುತ್ತೆ,

ಕಲ್ಲುಸಕ್ಕರೆ, ಬಾದಾಮಿ, ಗೋಡಂಬಿ ತುಂಬಿಸಿರುವ ಕತ್ತರಿಸಿದ ಕೊಬ್ಬರಿ ಬಾಚಣಿಗೆ, ವಿಭೂತಿಉಂಡೆ, ಗರಿಕೆ ಮೊದಲಾದವುಗಳಿರುತ್ತವೆ. ತಲೆಯ ಮೇಲೆ ಚಕ್ರಾಕಾರವಾಗಿ ಮಾಡಿದ ಇರಿಕೆಯನ್ನಿಟ್ಟು ಅದರ ಮೇಲಿಟ್ಟು ಹೊತ್ತುಕೊಳ್ಳುತ್ತಾರೆ.

ತಳಿಗೆ ಬಟ್ಟಲು (ಕಲಶದ ತಟ್ಟೆ)

ತಳಿಗೆ ಬಟ್ಟಲು ಅಗಲ ಹಾಗೂ ಉರುಟಾಗಿರುತ್ತದೆ. ಇದರ ಮಧ್ಯದಲ್ಲಿ ಒಂದು ಗಿಂಡಿಯನ್ನು ಇಟ್ಟಿರುತ್ತಾರೆ. ತಟ್ಟೆಯಲ್ಲಿ ಅರಿಶಿನ, ಕುಂಕುಮ, ವೀಳ್ಯದೆಲೆ, ಅಡಿಕೆ ಸುರುಳಿಮಾಡಿಟ್ಟು, ವೀಳ್ಯದೆಲೆ ಪಟ್ಟಿ, ಕೊಬ್ಬರಿ, ಬಳೆ ಬಿಚ್ಚೋಲೆ, ಕನ್ನಡಿ, ಕಳಶ ಇತ್ಯಾದಿಗಳನ್ನು ಇಟ್ಟು ಸಿದ್ಧಪಡಿಸುತ್ತಾರೆ. ಮದುವೆ ಹೆಣ್ಣಿನ ಮತ್ತು ಗಂಡಿನ ಮನೆಯ ಶಾಸ್ತ್ರಮಾಡುವಾಗೆಲ್ಲಾ ಈ ತಳಿಗೆ ಬಟ್ಟಲು ಬೇಕು. ಮುತ್ತೈದೆಯರು ಇದನ್ನು ಹಿಡಿದುಕೊಳ್ಳುತ್ತಾರೆ. ಇದನ್ನು ಹೊತ್ತವರಿಗೆ ಉಡುಗೊರೆ, ಉಪಚಾರಗಳನ್ನು ಮಾಡುತ್ತಾರೆ. ಒಂದು ಪೆಟ್ಟಿಗೆಯಲ್ಲಿ ಹೆಣ್ಣಿನ ಮನೆಗೆ ತೆಗೆದುಕೊಂಡು ಹೋಗಬೇಕಾದ ಬಂಗಾರ, ಮಾಂಗಲ್ಯ, ಕಡಗ, ಕಾಲುಂಗುರ ಮೊದಲಾದವುಗಳು ಹಾಗೂ ಹಣ ಮತ್ತು ಬೆಲೆ ಬಾಳುವ ವಸ್ತುಗಳನ್ನು ಇದರಲ್ಲಿ ತುಂಬಿಸುತ್ತಾರೆ. ಒಬ್ಬ ನಂಬಿಕಾರ್ಹ ವ್ಯಕ್ತಿಯ ಹತ್ತಿರ ನಿಗಾವಣೆಯ ಜವಾಬ್ದಾರಿಯನ್ನು ಕೊಟ್ಟಿರುತ್ತಾರೆ. ಹಸೆಗೋಡೆಯ ಕೆಳಗೆ ಚಾಪೆಯನ್ನು ಹಾಸಿ ಅದರ ಮೇಲೆ ತಳಿಗೆ ಬಟ್ಟಲನ್ನಿಡುತ್ತಾರೆ. ವರನನ್ನು ಹಸೆ ಗೋಡೆ ಬಳಿಗೆ ಕರೆತಂದು ತಳಿಗೆ ತಟ್ಟೆಯನ್ನು ತೆರೆಯುತ್ತಾರೆ. ಆತ ತಳಿಗೆ ತಟ್ಟೆಗೆ, ಹಸೆಗೋಡೆಗೆ, ಚಾಪೆಗೆ, ಸಭಿಕರಿಗೆ ನಮಸ್ಕರಿಸಿ ಶಾಸ್ತ್ರಕ್ಕೆ ಸಿದ್ಧವಾಗುತ್ತಾನೆ. ಅವನ ಕೊರಳಿಗೆ ಬಂಧಿ ಸರಿಗೆಯನ್ನು ಹಾಕುತ್ತಾರೆ. ಅಲ್ಲಿಂದ ವರನ ಶಾಸ್ತ್ರ ಪ್ರಾರಂಭವಾಗುತ್ತದೆ.

ಗೋಪೂಜೆ-ಅರಿಶಿಣೆಣ್ಣೆ:

ಹಸೆ ಶಾಸ್ತ್ರ ಆದ ನಂತರ ಗೋಪೂಜೆ ಮಾಡಿಸುತ್ತಾರೆ. ಹಸುಕರುವಿಗೆ ಪೂಜೆ ಮಾಡಿ, ಅದರ ಪಾದಗಳನ್ನು ತೊಳೆಯುತ್ತಾನೆ. ಹಸುಕರುವಿಗೆ ತಿನ್ನಲು ಹಣ್ಣು ಆಹಾರಗಳನ್ನು ಕೊಡುತ್ತಾರೆ. ಗೋಪೂಜೆ ಆದ ನಂತರ ವರನ ಕೆನ್ನೆಗೆ ಅರಿಶಿನ ಕುಂಕುಮ ಹಚ್ಚುತ್ತಾರೆ. ಹರಳೆಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ ಈ ಮೂರನ್ನು ಸೇರಿಸಿದ ಅರಿಶಿನ ಮಿಶ್ರಿತ ಎಣ್ಣೆಯನ್ನು ಅವನ ಕೆನ್ನೆಗೆ, ತಲೆಗೆ, ದೇಹದ ಕೆಲ ಭಾಗಗಳಿಗೆ ಹಚ್ಚುತ್ತಾರೆ. ಅಂಗಳದಲ್ಲಿ ಕ್ಷೌರಿಕನನ್ನು, ಮದುಮಗನನ್ನು ಮಣೆ ಹಾಕಿ ಎದುರು ಬದಿರು ಕೂರಿಸಿ ಕ್ಷೌರಿಕ ವರನ ಕೈಕಾಲುಗಳಲ್ಲಿ ಮುಂದೆ ಬಂದ ಉಗುರುಗಳನ್ನು ಕತ್ತರಿಸಿ ಮುಖ ಕ್ಷೌರ ಮಾಡಿಸುತ್ತಾರೆ. ಮರ್ಯಾದೆ ಕೊಟ್ಟು ಕಳುಹಿಸುತ್ತಾರೆ.[34]

ವಧುವಿನ ಮನೆಯಲ್ಲೂ ಇದೇ ರೀತಿಯ ಶಾಸ್ತ್ರ ನಡೆಯುತ್ತದೆ. ಮಡಿವಾಳನು ಬಂದು ಚಪ್ಪರಕ್ಕೆ ಮಡಿ ಬಟ್ಟೆ ಕಟ್ಟುತ್ತಾನೆ. ಇದಕ್ಕೆ ಮೇಲುಕಟ್ಟೆಂದು ಹೆಸರು. ಕುಂಬಾರ ಕೇಲುಗಡಿಗೆಯನ್ನು ಹೊತ್ತುಕೊಂಡು

ಒದುತ್ತಾನೆ. ಆಚಾರಿಯು ಅಕ್ತಿಮಣೆ, ತೋರಣದ ಹಲಗೆ ತರುತ್ತಾನೆ. ಈ ಅಕ್ತಿಮಣೆ ವಧುವರರು ನಿಲ್ಲುವುದಕ್ಕೆ. ತೋರಣದ ಹಲಗೆಯನ್ನು ಮನೆಯ ಎದುರು ಬಾಗಿಲ ಮುಂಭಾಗಕ್ಕೆ ನಿಲ್ಲಿಸಿ ಜೋಡಿಸುತ್ತಾನೆ. ಮಾದಾರನು ಹಾಲುಕಂಬ(ಹಲಸಿನ ಸಣ್ಣ ರೆಂಬೆಗಳಿಂದ ಮಾಡಿದ್ದು ಸುಮಾರು ಆರು ಅಡಿ ಎತ್ತರ ಇರುತ್ತದೆ) ತರುತ್ತಾನೆ. ಮುತ್ತೈದೆಯರು ಅರಿಶಿನ ಕುಂಕುಮ ಹಚ್ಚಿ ಸ್ವಾಗತಿಸುತ್ತಾರೆ. ಇವರೆಲ್ಲರಿಗೂ ತೆಂಗಿನಕಾಯಿ, ವೀಳ್ಯೆದೆಲೆ ಕೊಟ್ಟು ಮರ್ಯಾದೆ ಸಲ್ಲಿಸುತ್ತಾರೆ. ಇದೆಲ್ಲಾ ಆದ ನಂತರ ದಾಸಯ್ಯ ಬಂದು ತುಳಸಿ ಪೂಜೆ ಮಾಡಿ ಎಲ್ಲರಿಗೂ ತೀರ್ಥಪ್ರಸಾದ ಕೊಡುತ್ತಾರೆ. ಓಲಗದವರು ಬಂದು ಓಲಗ ಊದುತ್ತಾರೆ. ಬಣಗಾರ ಗಂಡಿನ ಮನೆಗೆ ಬಾಸಿಂಗ ತಂದುಕೊಡುತ್ತಾನೆ.

ಬಾಪಿಕಟ್ಟೆ ಕೆರೆ ಹಳ್ಳದ ಹತ್ತಿರ ಹೋಗಿ ವರ ಗಂಗೆಪೂಜೆ ಮಾಡುತ್ತಾನೆ. ದಡದ ಮೇಲೆ ಕುಡಿ ಬಾಳೆಎಲೆ ಹಾಸಿ ಅದರ ಮೇಲೆ ಸ್ವಲ್ಪ ಅಕ್ಕಿ ಹಾಕಿ, ಅದರ ಮೇಲೆ ನೀರು ತುಂಬಿಸಿದ ಕಳಸದ ಗಿಂಡಿಯನ್ನು ಇಡುತ್ತಾರೆ. ಕೇಲುಗಡಿಗೆಗಳನ್ನು ಸಾಲಾಗಿ ಇಟ್ಟು ಅದಕ್ಕೆ ನೀರನ್ನು ತುಂಬಿಸಿ ಅವುಗಳಿಗೆ ಅರಿಶಿನ ಕುಂಕುಮ ಹಚ್ಚಿ ಅಕ್ಷತೆ, ಅಕ್ಕಿ, ತೊಂಡೆಕಾಯಿ, ಹಾಲು ಹಾಕುತ್ತಾರೆ. ಗಂಗೆಪೂಜೆ ಮಾಡಿಬಂದ ವರನ ಪಾದ ತೊಳೆದು ಕದರಾರತಿ ಮಾಡುತ್ತಾರೆ.

ಹಾಲುಗಂಬ ನಿಲ್ಲಿಸುವುದು:

ಮಾದಾರನು ಹಾಲುಗಂಬವನ್ನು ತಂದುಕೊಡುತ್ತಾನೆ. ತುಳಸಿಯ ಮುಂದೆ ಎಡಬಲಭಾಗದಲ್ಲಿ ಹೊಂಡಮಾಡಿ ವರನು ಆ ಹೊಂಡಕ್ಕೆ ಅರಿಶಿನ ಕುಂಕುಮ ಹಾಕಿ ಹಾಲು ಹೊಯ್ದು ಆ ಕಂಬಕ್ಕೆ ಅರಿಶಿನ ಕುಂಕುಮ ಹಚ್ಚಿ ಪೂಜೆ ಮಾಡಿ ನೆಡುತ್ತಾನೆ. ದಾಸಯ್ಯ ತುಳಸಿ ಪೂಜೆ ಮಾಡಿ ತೀರ್ಥ ಪ್ರಸಾದ ಕೊಡುತ್ತಾನೆ. ನಂತರ ವರ ಅಡುಗೆ ಒಲೆಗೆ ಪೂಜೆ ಮಾಡುತ್ತಾನೆ. ಹೀಗೆಯೇ ವಧುವಿನ ಮನೆಯಲ್ಲೂ ನಡೆಯುತ್ತದೆ. ಮಧ್ಯಾಹ್ನ ಸಿಹಿ ಊಟ ನಡೆಯುತ್ತದೆ. ಬಂದ ನೆಂಟರೆಲ್ಲಾ ಸಾಲಾಗಿ ಊಟಕ್ಕೆ ಕುಳಿತು ಮನೆಯ ಯಜಮಾನ ಬಂದು ಎಲ್ಲರೂ ಸಾವಕಾಶವಾಗಿ ಊಟ ಮಾಡಿ ಎಂದು ಹೇಳಿದ ನಂತರ ಊಟ ಮಾಡುತ್ತಾರೆ.

ಊಟವಾದ ನಂತರ ದಿಬ್ಬಣ ಹೊರಡುತ್ತದೆ. ಹೇರಕ್ಕಿ ತೆಗೆದುಕೊಂಡು ಹೋಗುತ್ತಾರೆ. ಇದಕ್ಕೆ ಒಂದು ಚೀಲದಲ್ಲಿ 10 ಕೊಳಗ ಅಕ್ಕಿ, 10–15 ತೆಂಗಿನ ಕಾಯಿ, ಒಂದು ಬಣ್ಣದ ಸೌತೆಕಾಯಿ, ವೀಳ್ಯೆದೆಲೆ ಕಟ್ಟು, ಅಡಿಕೆ ಮೊದಲಾದವು ಇರುತ್ತದೆ. ಇದನ್ನು ತಲೆಹೊರೆ ಅಥವಾ ಗಾಡಿಯಲ್ಲಿ ತುಂಬಿಸಿ ಮಾದಾರನ ವಾದ್ಯದೊಂದಿಗೆ ಸಾಗುತ್ತದೆ. ಅಲ್ಲಿ ನಡೆಯುವ ಎಲ್ಲಾ ಬಗೆಯ ಶಾಸ್ತ್ರ, ಸಂಪ್ರದಾಯಗಳಿಗೂ ಇದನ್ನು ಬಳಸುತ್ತಾರೆ.

ಮದುಮಗನ ಶೃಂಗಾರ:

ಮದುಮಗನಿಗೆ ಕಚ್ಚೆಪಂಚೆ, ಬನಿಯನ್ ಹಾಕಿ, ಕೋಟು, ಜರಿಪೇಟ, ಹೆಗಲ ಮೇಲೆ ಶಲ್ಯ, ಕುತ್ತಿಗೆಗೆ ಗುಂಡಿನ ಸರ (ಬಂದಿ ಸರಿಗೆ) ಹಾಕುತ್ತಾರೆ. ಕಾಲಿಗೆ ಬೆಳ್ಳಿಯ ಮಿಂಚು, ಉಂಗುರ, ಬಾಸಿಂಗ ಕಟ್ಟುತ್ತಾರೆ. ಹಸೆಮಣೆಗೆ ಕೂರಿಸಿ ಉಡುಗೊರೆ ಮಾಡುತ್ತಾರೆ. ಒಬ್ಬರು ಬರೆದುಕೊಳ್ಳಲು ಕುಳಿತಿರುತ್ತಾರೆ. ಯಾರು ಇವರಿಗೆ ಉಡುಗೊರೆ ಮಾಡಿದ್ದಾರೋ ಅವರಿಗೆ ಇನ್ನೊಮ್ಮೆ ಉಡುಗೊರೆಮಾಡುವ ಸಲುವಾಗಿ ಬರೆದುಕೊಳ್ಳುತ್ತಾರೆ. ಬಂದ ಹಣ, ವಸ್ತುಗಳನ್ನು ಪೆಟ್ಟಿಗೆ (ಟ್ರಂಕ್)ಗೆ ಹಾಕಿ ಬೀಗ ಹಾಕುತ್ತಿದ್ದರು. ವಧುವಿನ ಮನೆಗೆ ಕುಳಿತುಕೊಂಡು ಹೋಗಲು ದಂಡಿಗೆ, ಕುದುರೆ, ಎತ್ತಿನಗಾಡಿ, ಕಾಲುನಡಿಗೆ ಹೀಗೆ ಅವರ ಯಥಾನುಸಾರ ನಡೆಯುತ್ತಿತ್ತು.[35]

ದಂಡಿಗೆ ಬಾಡಿಗೆಗೆ ದೊರೆಯುತ್ತಿತ್ತು. ದಕ್ಷಿಣ ಕನ್ನಡದಿಂದ ಭೋವಿ ಜನರು ದಂಡಿಗೆ ಶೃಂಗರಿಸಲು, ಹೊರಲು ಬರುತ್ತಿದ್ದರು. ರೇಷ್ಮೆ ದಿಂಬು, ಬಟ್ಟೆ ಗೊಂಡೆಗಳು, ಹೂವಿನ ಅಲಂಕಾರ ಮಾಡುತ್ತಿದ್ದರು. ವರನಿಗೆ ಹಾಲು-ತುಪ್ಪ ಕುಡಿಯಲು ಕೊಟ್ಟು, ಹಸೆಮಣೆಯಿಂದ ಕರೆದು ಒಳಹೋಗಿ ದೇವರಿಗೆ ನಮಸ್ಕರಿಸಿ, ತುಳಸಿಗೆ ನಮಸ್ಕರಿಸಿ ದಿಬ್ಬಣ ಹೊರಡಲು ಶುರುವಾಗುತ್ತದೆ. ದಂಡಿಗೆಗೆ ಪೂಜೆ ಮಾಡಿ ವರನನ್ನು ಕೂರಿಸಿ ಹೊರುತ್ತಾರೆ. ನಂತರ ಕೊಂಬು, ಕಹಳೆ, ಹಲಗೆ, ವಾದ್ಯಗಳು ಪ್ರಾರಂಭಿಸುತ್ತವೆ. ಗರ್ನಲ್ ಹೊಡೆಯುತ್ತಾರೆ. ಎಲ್ಲರೂ ನಡೆದುಕೊಂಡು ಹೋಗುತ್ತಾರೆ. ಮಾರ್ಗಮಧ್ಯದಲ್ಲಿ ಸಂಬಂಧಿಕರು ಹಾಲು ತುಪ್ಪವನ್ನು ಕುಡಿಯಲು ವರನಿಗೆ ಕೊಡುತ್ತಾರೆ.

ಮದುಮಗಳ ಶೃಂಗಾರ:

ಸ್ನಾನ ಮಾಡಿಸಿ, ಜರಿ ಸೀರೆ, ಕುಪ್ಪಸ ಧರಿಸಿ, ತಲೆಬಾಚಿ, ಬಂಗಾರದ ಒಡವೆಗಳು, ಜಡೆ ಹೂವು, ಮಲ್ಲಿಗೆ ಮೊಗ್ಗು, ರಾಗಟೆ, ನಾಗರು ಇವುಗಳನ್ನು ತಲೆ ಮತ್ತು ಜಡೆಗೆ, ಕುತ್ತಿಗೆಗೆ ಸರ, ಗಜ್ಜಡಿಕೆ, ತೋಳಿಗೆ ವಂಕಿ, ಸೊಂಟಕ್ಕೆ ಬಂಗಾರದ ಪಟ್ಟಿ ಕಟ್ಟುತ್ತಾರೆ. ಹಸೆ ಗೋಡೆಯ ಬಳಿ ಕೂರಿಸುತ್ತಾರೆ. ಐದು ಜನ ಮುತ್ತೈದೆಯರು ಬಂದು ಅಕ್ಕಿ, ತೆಂಗಿನಕಾಯಿ, ವೀಳ್ಯದೆಲೆ, ಅಡಿಕೆ, ಬಳೆ, ಬಿಚ್ಚೋಲೆ, ಕುಪ್ಪಸ ಬಟ್ಟೆ, ಅಡಿಕೆ ಸಿಂಗಾರ ಹಾಗೂ ನಾಲ್ಕು ಕಾಲು ರೂಪಾಯಿ ಹಣ ಇಟ್ಟು ಮಡಿಲು ತುಂಬುತ್ತಾರೆ. ಹಿರಿಯರೆಲ್ಲ ಅಕ್ಷತೆ ಹಾಕಿ, ಹಾಲು ತುಪ್ಪ ಕೊಟ್ಟು ಆಕೆಯನ್ನು ಏಳಿಸುತ್ತಾರೆ. ಮಡಿಲು ತುಂಬಿರುವ ವಸ್ತ್ರವನ್ನು ಬಟ್ಟೆಯಲ್ಲಿ ಸುತ್ತಿ ಸೊಂಟಕ್ಕೆ ಗಟ್ಟಿಯಾಗಿ ಕಟ್ಟುತ್ತಾರೆ.

ದಿಬ್ಬಣ ಎದಿರುಗೊಳ್ಳುವುದು:

ವರನ ದಿಬ್ಬಣ ವಧುವಿನ ಮನೆಯ ಸ್ವಾಗತ ಚಪ್ಪರದ ಹತ್ತಿರ ಬಂದಾಗ ಕುಕ್ಕೆ ಹೊತ್ತ ಮುತ್ತೈದೆಯರು ವರನ ಮುಂದೆ ಬರುತ್ತಾರೆ. ವಧುವಿನ ಕಡೆಯಿಂದ ತಳಿಗೆ ಹಿಡಿದವರು ಅವರನ್ನು ಸ್ವಾಗತಿಸಿ, ಅಲ್ಲಿಗೆ

ಹೋಗುತ್ತಾರೆ. ಅರಿಶಿನ ಕುಂಕುಮವನ್ನು ಪರಸ್ಪರ ಹಚ್ಚಿಕೊಳ್ಳುತ್ತಾರೆ. ವಾದ್ಯ ಗರ್ನಾಲ್‌ಗಳ ಅಬ್ಬರ ಹೆಚ್ಚಾಗುತ್ತದೆ. ಅಕ್ಷತೆಯನ್ನು ಪರಸ್ಪರ ಎರಚಿಕೊಳ್ಳುತ್ತಾರೆ. ಒಂದು ಕೋಳಿ ಪಿಳ್ಳೆಯನ್ನು ಮದುಮಗನಿಗೆ ಸುತ್ತುಬರಿಸಿ ಅದನ್ನು ದಂಡಿಗೆ ಹೊತ್ತವರಿಗೆ ಕೊಡುತ್ತಾರೆ. ಅತ್ತಿಮಣೆ ಮೇಲೆ ವರನನ್ನು ನಿಲ್ಲಿಸಿ ತಳಿಗೆಕುಕ್ಕೆ ಹೊತ್ತವರಿಗೆ ಕರಡಾರತಿಯನ್ನು ಬೆಳಗಿಸುತ್ತಾರೆ. ತೆಂಗಿನಕಾಯಿಯನ್ನು ಸುಳಿದು ಒಡೆಯುತ್ತಾರೆ. ವರನ ಪಾದ ತೊಳೆದ ನಂತರ ಹೆಣ್ಣಿನ ತಂದೆ ಹಾರ ಹಾಕಿ ಚಪ್ಪರದೊಳಗೆ ಕರೆದೊಯ್ಯುತ್ತಾನೆ. ನಿಗದಿತ ಸ್ಥಳಕ್ಕೆ ಕರೆದು ಕೂರಿಸಿ ಬಂದ ಅತಿಥಿಗಳಿಗೆ ಆದರಾತಿಥ್ಯ ಮಾಡುತ್ತಾರೆ.ವರನ ಕಡೆಯವರು ತಳಿಗೆ ದೀಪವನ್ನು ಹಚ್ಚಿಕೊಳ್ಳುತ್ತಾರೆ. ಈ ದೀಪ ಬೆಳಗಿನವರೆಗೆ ಆರಬಾರದು. ಬೆಳಗಾದ ಮೇಲೆ ಉರಿಯುತ್ತಿರುವ ಬತ್ತಿಯನ್ನು ಅಡುಗೆ ಒಲೆಯ ಬೆಂಕಿಗೆ ಹಾಕಬೇಕು. ಅದಕ್ಕೆ ಅಗ್ನಿ ಕೂಡಿಸುವುದು ಎನ್ನುತ್ತಾರೆ.[36] ದೀಪ ಆರದಂತೆ ಕಾದಿರಬೇಕು. ದೀಪ ಆರಿದರೆ ಅಪಶಕುನ ಎಂಬ ನಂಬಿಕೆ ಇದೆ.

ಗಳಿಗೆ ಕಂಡುಹಿಡಿಯುವುದು:

ಒಂದು ಉರುಟಾದ ತಪ್ಪಲೆ ಅದರ ಮಧ್ಯ ಒಂದು ಚಿಕ್ಕ ರಂಧ್ರ ಮಾಡಿ ಅರಿಶಿನ ನೀರಿರುವ ದೊಡ್ಡ ತಟ್ಟೆಯೊಳಗೆ ಇಡುತ್ತಾರೆ. ಆ ರಂಧ್ರದಲ್ಲಿ ನೀರು ತುಂಬಿ ಒಳಗೆ ಮುಳುಗಿದರೆ ಒಂದು ಗಳಿಗೆ ಎಂದು. ಹೀಗೆ ಎಷ್ಟುಗಳಿಗೆ ಎಂದು ಪುರೋಹಿತರು ಹೇಳಿರುತ್ತಾರೊ ಅಷ್ಟು ಸಾರಿ ತಟ್ಟೆ ಮುಳುಗಿದ ನಂತರ ಮಂಗಳ ಸೂತ್ರ ಧಾರಣೆಯಾಗುತ್ತದೆ. ಒಂದೊಂದು ಗಳಿಗೆಗೂ ಗೋಡೆಯಲ್ಲಿ ಗುರುತು ಮಾಡಿಕೊಳ್ಳುತ್ತಾರೆ. ಗಳಿಗೆ ಕೂಡಿ ಬರುವವರೆಗೂ ವಧು ವರರಿಬ್ಬರಿಗೂ ಮಡಿಲು ತುಂಬುವುದು ಹಾಗೂ ಇತರ ಶಾಸ್ತ್ರಗಳು ನಡೆಯುತ್ತಿರುತ್ತವೆ.

ಮಡಿವಾಳನು ಹೇರಕ್ಕಿಯನ್ನು ಮಂಟಪಕ್ಕೆ ತರುತ್ತಾನೆ. ಮಡಿಬಟ್ಟೆ ಹಾಸಿ ಪೂರ್ವಪಶ್ಚಿಮಾಭಿಮುಖವಾಗಿ ಸಿಬ್ಬಲ ಹಾಕುತ್ತಾನೆ. ವಧುವರರನ್ನು ತೆರೆ ಹಿಡಿದು ನಿಲ್ಲಿಸುತ್ತಾರೆ. ಮುಹೂರ್ತಕ್ಕೆ ಸರಿಯಾಗಿ ವಧುವರರ ಕೆನ್ನೆಗಳಿಗೆ ಪರಸ್ಪರ ಜೀರಿಗೆ ಬೆಲ್ಲ ಹಚ್ಚಿಕೊಂಡು ತುಂಬೆಹೂವಿನ ಹಾರವನ್ನು ಹಾಕಿಕೊಳ್ಳುತ್ತಾರೆ. ಇದೇ ಶ್ರೇಷ್ಠ. ಬಹಳಷ್ಟು ಸಂಪ್ರದಾಯದ ನಂತರ ಬೊಗಸೆಯಲ್ಲಿ ಅಕ್ಕಿ ಹಾಕಿ, ತೆಂಗಿನ ಕಾಯಿ ಇಟ್ಟು ಗಿಂಡಿಯಿಂದ ನೀರನ್ನು ಹಾಕಿ ಪ್ರಮುಖ ದೇವರ ಸಾಕ್ಷಿ, ಹಿರಿಯರ ಸಾಕ್ಷಿ ಬಳಿಯನ್ನು ಹೇಳಿ ಧಾರೆ ಎರೆದು ಕೊಡುತ್ತಿದ್ದೇನೆ ಎಂದು ವಧುವಿನ ತಂದೆ ತಾಯಿ ಹೇಳುತ್ತಾರೆ. ಧಾರೆಯಾದ ನಂತರ ಕೈಯಲ್ಲಿರುವ ಅಕ್ಕಿಯನ್ನು ಎರಡು ಭಾಗ ಮಾಡಿ ವಧುವರರ ಇಬ್ಬರ ತಲೆಮೇಲೆ ಹಾಕುತ್ತಾರೆ.

ಮೂರುಬಾರಿ ಹೀಗೆ ಮಾಡಿದ ನಂತರ ಮಾಂಗಲ್ಯಧಾರಣೆ ಮಾಡುತ್ತಾರೆ. ವಧುವಿನ ಕಾಲಿಗೆ ಕಾಲುಂಗರ ಹಾಕುತ್ತಾನೆ. ಧಾರೆಯಾದ ನಂತರ ವಧುವರರ ಸೆರಗು ಗಂಟುಹಾಕುತ್ತಾರೆ. ವರನ ಮನೆಯಿಂದ ಹೊದಿಸಿದ ಮುಸುಕಿನ ಸೀರೆಯ ಸೆರಗಿಗೂ ವರನ ಶಲ್ಯಕ್ಕೂ ಕಟ್ಟುತ್ತಾರೆ. ನಂತರ ವಸಿಷ್ಠ ಅರುಂಧತಿ ನಕ್ಷತ್ರವನ್ನು ತೋರಿಸುತ್ತಾರೆ.

ಬ್ರಾಹ್ಮಣರಿಗೆ ದಕ್ಷಿಣೆ ಫಲತಾಂಬೂಲವನ್ನು ಕೊಟ್ಟು ಗೌರವಿಸುತ್ತಾರೆ. ಭೋಜನ ಆದ ನಂತರ ಸರಿಬೆಸ ಆಟ, ಪಗಡೆ ಆಟ, ಓಕುಳಿ ಆಟ ಆಡಿಸುತ್ತಾರೆ. ಮಹಿಳೆಯರು ಜೀಗರ ಹಾಡು ಹಾಗೂ ಇತರೆ ಜನಪದ ಗೀತೆಗಳನ್ನು ಹಾಡುತ್ತಾರೆ. ಬೆಳಿಗ್ಗೆ ಅಂದುಗೆಯ ಮೇಲೆ ದಂಪತಿಗಳನ್ನು ಕರೆದೊಯ್ದು ಮುಖ ತೊಳೆಸುವ ಶಾಸ್ತ್ರ ಮಾಡುತ್ತಾರೆ. ವಧುವಿನ ಮನೆಯವರಿಗೆ ಆರತಿ ಬೆಳಗಿದ ಬಾಬ್ತು ಇಪ್ಪತ್ನಾಲ್ಕು ರೂಪಾಯಿಗಳನ್ನು ತೆರದ ಹಣವಾಗಿ, ಹೆಣ್ಣಿನ ಕಿಮ್ಮತ್ತಿನ ರೂಪವಾಗಿ ಕೊಡುತ್ತಿದ್ದರು, ಶ್ರೀಮಂತರಲ್ಲೂ ಇತ್ತು.

ವಧುವನ್ನು ವರನ ತಂದೆಗೆ ಕೈಎತ್ತಿ ಕೊಡುವುದಿದೆ. ಮಗಳ ಮೇಲಿನ ಅಭಿಮಾನದ ಮಾತನ್ನು ಆಡುತ್ತಾನೆ. ಜೋಪಾನವಾಗಿ ಸಾಕುವಂತೆ ಕೇಳಿಕೊಳ್ಳುತ್ತಾನೆ. ದಂಡಿಗೆಯ ಮೇಲೆ ಇಬ್ಬರನ್ನು ಕೂರಿಸಿ ಹಲಗೆ ವಾದ್ಯಗಳೊಂದಿಗೆ ದಿಬ್ಬಣ ವರನ ಮನೆಗೆ ಬರುತ್ತದೆ. ಹಾಲು ತುಪ್ಪ ನೀಡಿ ಸ್ವಾಗತಿಸುತ್ತಾರೆ. ತುಳಸಿಪೂಜೆ ಹೊಸ್ತಿಲಪೂಜೆಯ ನಂತರ ಪ್ರವೇಶ. ಪ್ರವೇಶದ ವೇಳೆ ಬಾಗಿಲು ತಡೆಯುವುದು, ಹೆಸರನ್ನು ಪರಸ್ಪರ ಹೇಳಿಸುವುದಿದೆ. ಹಸೆಗೋಡೆಯ ಹತ್ತಿರ ಕೂರಿಸಿ ಕೆಲವು ಶಾಸ್ತ್ರಗಳನ್ನು ಮಾಡಿಸುತ್ತಾರೆ. ಸರಿಬೆಸ ಆಟ, ಚಕ್ರ ಹುಡುಕುವುದು, ಓಕುಳಿ ಆಡುವುದು, ಕದ್ದು ಕುಳಿತು ಹುಡುಕುವುದು ನಡೆಯುತ್ತದೆ. ಅಂದಿನ ರಾತ್ರಿ ಮಾಂಸದೂಟ ಮಾಡಿಸುತ್ತಾರೆ. ಇದನ್ನು ಹಿರಿದಿಬ್ಬಣದ ಊಟವೆಂದು ಕರೆಯುತ್ತಾರೆ.

ಗಂಡನ ಮನೆಯಲ್ಲಿ ಹಾಲುಕರೆಸುವುದು, ಮಜ್ಜಿಗೆ ಕಡೆಯುವುದು, ಸಗಣಿಯಿಂದ ನೆಲ ಸಾರಿಸುವುದು, ರಂಗೋಲಿ ಹಾಕಿಸುವ ಶಾಸ್ತ್ರಗಳು ನಡೆಯುತ್ತವೆ. ಅಡುಗೆ ಮಾಡಿಸುತ್ತಾರೆ. ಆಕೆಗೆ ಈ ಎಲ್ಲಾ ಕೆಲಸಗಳು ಬರುತ್ತದೆಯೋ ಇಲ್ಲವೋ ಎಂದು ತಿಳಿಯಲು ಇದನ್ನು ಮಾಡಿಸುತ್ತಾರೆ ಹೀಗೆ ಮೂರುದಿನಗಳ ಕಾಲ ಮದುವೆ ನಡೆಯುತ್ತಿತ್ತು.

ಒಂದು ವಾರದ ಮೇಲೆ ಮದುಮಕ್ಕಳು ಮಾವನಮನೆಗೆ ಹೋಗುವ ಶಾಸ್ತ್ರವಿದೆ. ಅದನ್ನು 'ಧಾರೆದೀಪ'ವೆಂದು ಕರೆಯುತ್ತಾರೆ. ಮದುವೆದಿನ ನೆಟ್ಟ ಹಾಲುಗಂಬವನ್ನು ಅಂದು ಕೀಳುತ್ತಾರೆ. ಹಸೆಗೋಡೆ ಮುಂದೆ ಹಾಕಿದ ಚಾಪೆಯನ್ನು ಅಂದು ತೆಗೆಯುತ್ತಾರೆ. ರಾತ್ರಿ ವಿಶೇಷ ಊಟೋಪಚಾರವಿರುತ್ತದೆ.

ಮಾವ ಅಳಿಯನಿಗೆ ಪಾತ್ರೆಪಗಡೆ ತುಂಬಿದ ವಸ್ತುಗಳನ್ನು ಕಳುಹಿಸಿಕೊಡುತ್ತಾನೆ. ಇದನ್ನು ತಿಂಗಳ ಬದ್ದಿನ ಶಾಸ್ತ್ರ ಎನ್ನುತ್ತಾರೆ. ಗೌರಿಹಬ್ಬಕ್ಕೆ ಕರೆಯಲು ತವರು ಮನೆಯಿಂದ ಹೆಚ್ಚಿನ ಜನರು ಬರುತ್ತಾರೆ. ಆಗ ಕಾಯಿಗುದ್ದಿ ಒಡೆಯುವುದು, ಕಾಯಿಗೆ ಕಾಯಿಗುದ್ದಿ ಜೂಜು ಆಡುವುದಿದೆ. ಗೌರಿ ಹಬ್ಬವಾದ ಮೇಲೆ ಒಂದು ಒಳ್ಳೆಯದಿನ ನೋಡಿ ಗಂಡ ಹೆಂಡರಿಬ್ಬರನ್ನು ಒಟ್ಟುಗೂಡಿಸುತ್ತಾರೆ. ಈ ದಿನದ ಶಾಸ್ತ್ರವನ್ನು 'ಪ್ರಸ್ಥಮನೆ ಶಾಸ್ತ್ರ' ಎಂದು ಕರೆಯುತ್ತಾರೆ.

ಚಿನ್ನದಿಂದ ತಾಳಿಯನ್ನು ಮಾಡಿ ಕರಿಮಣಿ ಪೋಣಿಸಿ ಮಾಂಗಲ್ಯವನ್ನು ಮಾಡುತ್ತಾರೆ. ಇದು ಬಹಳ ಪ್ರಶಸ್ತವಾದದ್ದು. ಮದುವೆಯಾದ ಹೆಣ್ಣು ಮಾಂಗಲ್ಯಧಾರಣೆ, ಹಣೆಗೆ ಕುಂಕುಮ, ಕೈಬಳೆ,

ಜಡೆಗೆ ಹೂವು, ಕಿವಿಯಲ್ಲಿ ಓಲೆ, ಮೂಗಲ್ಲಿ ಮೂಗುತಿ ಇರಬೇಕು ಇದು ಪವಿತ್ರವಾದುದು. ಗಂಡಸತ್ತ ವಿಧವೆಯರು ಇದಾವುದನ್ನು ಧರಿಸುವಂತಿಲ್ಲ. ಆಕೆಗೆ ಸಮಾಜದಲ್ಲಿ ಗೌರವ ಸಿಗುವುದಿಲ್ಲ.

ಎಕ್ಕೆ ಗಿಡಕ್ಕೆ ಧಾರೆ ಎರೆಯುವುದು: ಹೆಂಡತಿ ಸತ್ತರೆ ಗಂಡ ಎಷ್ಟು ಜನರನ್ನಾದರೂ ಮದುವೆಯಾಗಬಹುದು. ಹಿಂದೆ ಎರಡನೆಯ ಹೆಂಡತಿ ಸತ್ತನಂತರ ಮೂರನೆಯ ಮದುವೆಯಾಗಬೇಕಾದರೆ, ಆ ಮದುವೆಗೆ ಅವರ ನಂಬಿಕೆಯಂತೆ ಎರಡಾದ ಮೇಲೆ ಮೂರಕ್ಕೆ ಮುಕ್ತಾಯ ಎಂಬ ಮಾತಿನಂತೆ ಮೂರನೆ ಹೆಂಡತಿ ಸಾಯುವುದು ನಿಶ್ಚಿತವೆಂದು ನಂಬಿ ಎಕ್ಕೆ ಗಿಡದೊಂದಿಗೆ ಮದುವೆ ಮಾಡಿಸಿ ನಂತರ ರಾತ್ರಿ ಹೆಣ್ಣಿನೊಂದಿಗೆ ವಿವಾಹ ಆಗುತಿತ್ತು.[37] ಆಗ ಆತನಿಗೆ ನಾಲ್ಕನೆಯ ಮದುವೆಯೆಂದು ನಂಬುತ್ತಿದ್ದರು.

ಉಡ್ಡಿಮದುವೆ: ವಿಧವೆಯ ಪುನರ್‌ಮದುವೆಯನ್ನು ಉಡ್ಡಿ ಅಥವಾ ಶೀಲುಡ್ಡಿ ಮದುವೆ ಎಂದು ಕರೆಯುತ್ತಾರೆ. ಹೆಣ್ಣು ಮತ್ತು ಗಂಡಿನ ಕಡೆಯವರು ಸೇರಿ ಕೂಡಿಕೆ ಮಾಡಿಸುತ್ತಾರೆ. ಜೋಯಿಸರು ಇರುತ್ತಾರೆ. ತಾಳಿ ಕಟ್ಟುತ್ತಾರೆ. ಧಾರೆ ಎರೆಯುವುದಿಲ್ಲ. ಅಂದು ರಾತ್ರಿ ಮಾಂಸದೂಟದ ವ್ಯವಸ್ಥೆಮಾಡಿರುತ್ತಾರೆ.

ತೆರ: ಹೆಣ್ಣಿಗೆ ಹಣಕೊಟ್ಟು ಮದುವೆಯಾಗುವುದಿತ್ತು. ಅದನ್ನು ತೆರ ಕೊಡುವುದೆಂದು ಕರೆಯುತ್ತಾರೆ. ಶ್ರೀಮಂತ ವಯಸ್ಕರು ಮರುಮದುವೆ ಆಗುವಾಗ ಬಡವರ ಎಳೆವಯಸ್ಸಿನ ಹೆಣ್ಣುಮಕ್ಕಳನ್ನು ಹಣಕೊಟ್ಟು ಕೊಂಡುಕೊಂಡು ಮದುವೆ ಆಗುತ್ತಿದ್ದರು.

ಕಡಚ: ಶ್ರೀಮಂತರು ಮರುಮದುವೆಯಾಗುವಾಗ ಬಡವರ ಎಳೆಹೆಣ್ಣು ಮಕ್ಕಳಿಗೆ ತೆರ ಕೊಡುವುದಲ್ಲದೆ ಮದುವೆ ಖರ್ಚಿಗೆ ಕೈಗಡ ಹಣ, ಭತ್ತ, ಬೆಲ್ಲ ಮೊದಲಾದವುಗಳನ್ನು ಕೊಡುತ್ತಿದ್ದರು. ಇದನ್ನು ವಾಪಸ್ಸು ಕೊಡಬೇಕಾಗಿಲ್ಲ. ಇದಕ್ಕೆ 'ಕಡಚ' ಎಂದು ಕರೆಯುತ್ತಿದ್ದರು.

ನಂಬಿಕೆ, ಮೂಢನಂಬಿಕೆಗಳು:

ರೋಗ, ಚಿಕಿತ್ಸೆ: ಮಲೇರಿಯಾ, ಚಳಿಜ್ವರ ಹಾಗೂ ಇತರೆ ಕಾಯಿಲೆಗಳು ಬರುತ್ತಿತ್ತು. ದೇಹದ ಒಳಗೆ ಗಡ್ಡೆ, ಹುಣ್ಣು, ವಾತ, ಕಫ, ದೈಹಿಕ, ಮಾನಸಿಕ ಮೊದಲಾದ ರೋಗಗಳು ಬರುತ್ತಿತ್ತು. ಹಳ್ಳಿಗಳಲ್ಲಿ ಆಸ್ಪತ್ರೆಯಿರುತ್ತಿರಲಿಲ್ಲ. ಮಂತ್ರವಾದಿ, ಗಣ, ನಾಟಿವೈದ್ಯರನ್ನು ನಚ್ಚಿಕೊಂಡಿದ್ದರು. ಎಲ್ಲಾ ರೋಗಗಳಿಗೆ ದೆವ್ವಭೂತಗಳ ಕಾಟವೆಂದು ನಂಬಿದ್ದರು. ಅದರ ನಿವಾರಣೆಗೆ ಹರಕೆ, ಬಲಿ, ಮಂತ್ರ, ತಂತ್ರ, ನಿಮಿತ್ತ, ಜ್ಯೋತಿಷ್ಯಗಳನ್ನು ನಂಬಿದ್ದರು. ಕುಟುಂಬದಲ್ಲಿ ಗಂಡಸರು ಅಥವಾ ಹೆಂಗಸರು ಸತ್ತರೆ ಅವರು 'ಜಕಣಿ'ಗಳಾಗುತ್ತಾರೆ. ಪ್ರಾಯಸ್ಥರು ಮದುವೆಯಾಗದೆ ಸತ್ತರೆ 'ರಣ' ಗಳಾಗುತ್ತಾರೆ. ಚಿಕ್ಕಮಕ್ಕಳು ಸತ್ತರೆ 'ಪಿಶಾಚಿ'ಗಳಾಗುತ್ತಾರೆ ಎಂದು ನಂಬಿದ್ದರು. ಯಾರಿಗಾದರೂ ಕಾಯಿಲೆಯಾದರೆ ಇವುಗಳ ಕಾಟವೆಂದು ಗಣಪಾತ್ರಿಗಳು, ನಿಮಿತ್ತಕರು ಸೂಚಿಸುತ್ತಿದ್ದರು. ಅವರು ಹೇಳಿದಂತೆ ಅಂತ್ರ(ಯಂತ್ರ)

ಚೀಟು, ಹರಕೆ, ವಿಭೂತಿ, ಪೂಜೆ ಪುನಸ್ಕಾರಗಳನ್ನು ಮಾಡಿಸುತ್ತಿದ್ದರು. ಅದೃಷ್ಟ ಚೆನ್ನಾಗಿರುವವರು ಬದುಕುತ್ತಿದ್ದರು. ಉಳಿದಂತೆ ಹೆಚ್ಚಿನವರು ಸಾಯುತ್ತಿದ್ದರು. ಇದಕ್ಕೆ ಅವರ ಮೂಢನಂಬಿಕೆಯೆ ಪ್ರಧಾನವಾಗಿತ್ತು

ಒಕ್ಕಲಿಗರು ಜೋಯಿಸರನ್ನು ಕೇಳಿ ಶುಭ, ಅಶುಭ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಗಳಿಗೆ, ಮುಹೂರ್ತ ಕೇಳುವುದು, ಯುಗಾದಿ ಫಲ ಕೇಳುವುದು, ನಾಮಕರಣ, ಪೂಜೆ, ವ್ರತ ಮೊದಲಾದವುಗಳಿಗೆ ಜೋಯಿಸರನ್ನು ಆಶ್ರಯಿಸುತ್ತಿದ್ದರು.

ನಿಮಿತ್ತ ಹೇಳುವವರು ಪ್ರತಿಹಳ್ಳಿಯಲ್ಲೂ ಇದ್ದರು. ನಿಮಿತ್ತ ಕೇಳಿ ಅವರು ಹೇಳಿದಂತೆ ನಡೆದುಕೊಳ್ಳುತ್ತಿದ್ದರು. ಒಕ್ಕಲಿಗರು ಇಂತಹ ನಂಬಿಕೆಗಳ ಬಗ್ಗೆ ಹಾಗೂ ನಿಮಿತ್ತಿಕರ ಬಗ್ಗೆ ಅಪಾರ ನಂಬಿಕೆ ಇಟ್ಟುಕೊಂಡಿದ್ದರು. ಚೀಟು ವಿಭೂತಿ ಹಾಕುವವರಿದ್ದರು. ಮಕ್ಕಳಿಗೆ ಬಾಲಗ್ರಹಪೀಡೆ ಜ್ವರ ಬಂದರೆ ಚೀಟು ಬರೆಸಿ ಕಟ್ಟುತ್ತಿದ್ದರು. ಓಲೆಗರಿಯಲ್ಲಿ ಚಾಕುವಿನಿಂದ ಏನೋ ಬರೆದು ಒಲೆ ಬೂದಿ ಹಾಕಿ ಸುತ್ತಿ ಮಕ್ಕಳ ಕುತ್ತಿಗೆಗೆ ಕಟ್ಟುತ್ತಿದ್ದರು. ಗುಣವಾಗುತ್ತದೆಂಬ ನಂಬಿಕೆಯಿತ್ತು. ತಾಮ್ರದ್ದೋ, ಬೆಳ್ಳಿಯದ್ದೋ, ಬಂಗಾರದ್ದೊ ತಾಯಿತಕ್ಕೆ ತಾಮ್ರದ ತಗಡಿನಲ್ಲಿ ಏನೋ ಬರೆದು ತುಂಬಿ ಕುತ್ತಿಗೆಗೆ ಅಥವಾ ರಟ್ಟೆಗೆ ಕಟ್ಟುತ್ತಿದ್ದರು. ಇದನ್ನು ಯಂತ್ರ ಹಾಕುವುದು ಅಥವಾ ತಾಯಿತ ಕಟ್ಟುವುದು ಎನ್ನುತ್ತಾರೆ. ಬಹಳಷ್ಟು ಜನ ಒಂದಕ್ಕಿಂತ ಹೆಚ್ಚು ತಾಯಿತವನ್ನು ಕಟ್ಟಿಕೊಳ್ಳುತ್ತಿದ್ದರು. ಆಕಸ್ಮಿಕವಾಗಿ ಹೆದರಿ ಕಾಯಿಲೆ ಬಂದರೆ ರಾವು ತೆಗೆಯುತ್ತಾರೆ. ಕೆಂಪುಕೋಳಿ ಹುಂಜ, ಕಕ್ಕಡ, ಬಾಳೆಹಣ್ಣು, ಅಕ್ಕಿ, ಚರ ಇಟ್ಟುಕೊಂಡು ರೋಗಪೀಡಿತನನ್ನು ಮನೆಯ ಮುಂದೆ ಅಂಗಳದಲ್ಲಿ ಕೂರಿಸಿ ದೊಂದಿ ಹಚ್ಚಿ ಕೋಳಿಯನ್ನು ಮೂರು ಸುತ್ತುಬರಿಸಿ ಆ ಚರಕ್ಕೆ ರಕ್ತ ಬೀಳುವಂತೆ ಕತ್ತರಿಸುತ್ತಾರೆ. ಅದರ ರಕ್ತವನ್ನು ಅವನ ಹಣೆಗೆ ಹಚ್ಚುತ್ತಾರೆ. ಆ ಕೋಳಿಯನ್ನು ಸಾಂಬಾರುಮಾಡಿ ತಿನ್ನುತ್ತಾರೆ. ದೊಡ್ಡದೆವ್ವಗಳು ಸೋಕಿರುವುದಾದರೆ ರಾವು ತೆಗೆಯಲು ಕುರಿಯನ್ನು ಉಪಯೋಗಿಸುತ್ತಾರೆ. ಅಕ್ಕಪಕ್ಕದ ಮನೆಯವರಿಗೆ ತೊಂದರೆಕೊಡಲು ಮಂತ್ರವಾದಿಗಳು ಅಥವಾ ಗಣಮಗನು ಮಾಟಮಂತ್ರ ಮಾಡುತ್ತಿದ್ದರು. ಹಾಗೆಯೇ ತೆಗೆಯುತ್ತಿದ್ದರು. ಗಣಮಕ್ಕಳು ಇರುತ್ತಿದ್ದರು. ದೇವಾಲಯದಲ್ಲಿ ಪ್ರಸಿದ್ಧ ಸ್ಥಳಗಳಲ್ಲಿ ನಿಗದಿತವಾರದಂದು ಗಣಬರುತ್ತಿತ್ತು. ಗಣದ ಹತ್ತಿರ ಕಾಯಿಲೆ, ಸಮಸ್ಯೆ, ಭವಿಷ್ಯ ಮೊದಲಾದವುಗಳನ್ನು ಕೇಳುತ್ತಿದ್ದರು. ಕೆಂಪು ವಸ್ತ್ರಧಾರಿಯಾದ ಗಣಮಗನು ತುಂಬಾ ಕುಂಕುಮವನ್ನು ಭಸ್ಮವನ್ನು ಹಚ್ಚಿಕೊಂಡಿರುತ್ತಾರೆ. ಕಾಲಿಗೆ ಗಗ್ರ, ಕೈಯಲ್ಲಿ ಬೆತ್ತ, ಕತ್ತಿಯನ್ನು ಹಿಡಿದುಕೊಂಡಿರುತ್ತಾರೆ. ವಿಕಾರವಾಗಿ, ಜೋರಾಗಿ ದೇವರ ಹೆಸರನ್ನು ಕೂಗುತ್ತಾರೆ. ಶಂಖ, ಜಾಗಟಗಳನ್ನು ಜೋರಾಗಿ ಬಾರಿಸುತ್ತಾರೆ. ದೇವಾಲಯದ ಸುತ್ತಮುತ್ತ ಕಕ್ಕಡ, ದೀಪಗಳಿರುತ್ತವೆ. ಗಣಮಗನು ಲಿಂಬೆಹಣ್ಣು, ತೆಂಗಿನಕಾಯನ್ನು ಮಂತ್ರಿಸಿ ಕೊಟ್ಟು, ಎರಡುವಾರಬಿಟ್ಟು ಬರಲು ಸೂಚಿಸುತ್ತಾನೆ. ಹೀಗೆ ಕ್ರಿಯೆ ನಿರಂತರವಾಗಿ ನಡೆಯುತ್ತಿರುತ್ತಿತ್ತು.

ಮುದ್ದುಮಕ್ಕಳನ್ನು ಯಾರಾದರೂ ನೋಡಿ ತುಂಬಾ ಮುದ್ದಾಗಿದೆ ಎಂದರೆ ದೃಷ್ಟಿಯಾಯಿತೆಂದು

ಅರ್ಥ. ಅಂತಹ ಮಕ್ಕಳು ಅಳು, ಕಾಯಿಲೆ, ಊಟಮಾಡದಿರುವುದು, ಹಟಮಾಡುವುದು ಮಾಡುತ್ತವೆ. ಅದಕ್ಕೆ ದೃಷ್ಟಿ ತೆಗೆದರೆ ಕಡಿಮೆಯಾಗುತ್ತದೆ. ಒಂದು ಬೆಳ್ಳನೆಯ ಕಲ್ಲನ್ನು ಒಲೆಯಲ್ಲಿ ಕಾಯಿಸಿ ಅದನ್ನು ಮಗುವಿನ ಮುಂದಿಟ್ಟು ಹಿಡಿಕಡ್ಡಿ, ತಲೆಕೂದಲು, ಮೆಣಸಿನ ಕಾಯಿ, ಇದ್ದಿಲು, ಉಪ್ಪು ಮೊದಲಾದವುಗಳನ್ನು ಸುಳಿದು ಆ ಕಲ್ಲಮೇಲೆ ಹಾಕುತ್ತಾರೆ. ಅದು ಪಟಪಟವೆಂದು ಒಡೆಯುತ್ತದೆ. ಆಗ ದೃಷ್ಟಿಹೋಯಿತೆಂದು ನಂಬುತ್ತಾರೆ. ಇನ್ನು ಕೆಲವರು ಹಿಡಿಕಡ್ಡಿ, ಮೆಣಸು, ಉಪ್ಪು, ತಲೆಕೂದಲುಗಳನ್ನು ಮಗುವಿಗೆ ನಿವಾಳಿಸಿ ಒಲೆಗೆ ಹಾಕಿ ಅದರ ಬೂದಿಯನ್ನು ಹಣೆಗೆ ಹಚ್ಚುತ್ತಾರೆ. ಕೈಯಲ್ಲಿ ದೃಷ್ಟಿಮುರಿಯುತ್ತಾರೆ.

ದೆವ್ವಗಳು ಕೆಲವರಿಗೆ ಹಿಡಿಯುವುದಿದೆ. ಹೆಚ್ಚಾಗಿ ಹೆಂಗಸರಿಗೆ ಹಿಡಿಯುತ್ತದೆ. ಯಾರದೋ ಸತ್ತಪಿಶಾಚಿ, ಭೂತ ಹಿಡಿದಿದೆಯೆಂದು ನಂಬುತ್ತಾರೆ. ಗಣ ಮಂತ್ರವಾದಿಗಳಿಂದ ಬಿಡಿಸುವ ತಂತ್ರಗಾರಿಕೆ ಮಾಡುತ್ತಾರೆ. ಶ್ರೀ ಧರ್ಮಸ್ಥಳ ಕ್ಷೇತ್ರಕ್ಕೆ ಹೋಗಿ ದೆವ್ವ ಬಿಡಿಸುವುದು ಅಥವಾ ನುಡಿಕಟ್ಟು ಬರುವಂತೆ ಮಾಡಿಸಿಕೊಂಡು ಬರುತ್ತಿದ್ದರು.

ಮಗು ಹುಟ್ಟಿದ ಸಮಯದಲ್ಲಿ ಸೂರ್ಯನ ಸ್ಥಾನವನ್ನು ಗಮನಿಸಿ ನೆರಳನ್ನು ಮೆಟ್ಟಿನಿಂದ ಲೆಕ್ಕಹಾಕಿ ಅಂದಾಜಿನ ಮೇಲೆ ತೀರ್ಮಾನಿಸುತ್ತಿದ್ದರು. ರಾತ್ರಿಯಾದರೆ ಸೂರ್ಯಾಸ್ತವಾದ ನಂತರ ಸಮಯ ಅಥವಾ ಬೆಳಗ್ಗೆ ಕೋಳಿ ಕೂಗುವ ಮೊದಲಿನ ಸಮಯವನ್ನು ಅಂದಾಜಿನ ಲೆಕ್ಕಚಾರದಲ್ಲಿ ಜೋಯಿಸರಿಗೆ ತಿಳಿಸಿ ಜಾತಕ ಬರೆಸುತ್ತಿದ್ದರು.[38] ಫಲಾಫಲಗಳು ದೋಷಗಳು ಹುಟ್ಟಿನ ನಕ್ಷತ್ರದಿಂದ ನಿರ್ಧಾರವಾಗುತ್ತಿತ್ತು. ಯಾರಿಗಾದರೂ ಅನಾರೋಗ್ಯವಾಗಿದ್ದರೆ ಶ್ರೀಧರ್ಮಸ್ಥಳ ದೇವರಿಗೆ, ತಿರುಪತಿ ತಿಮ್ಮಪ್ಪನಿಗೆ ದೆವ್ವ, ಭೂತಗಳಿಗೆ ಕಾಣಿಕೆಯನ್ನು ತೆಗೆದಿಟ್ಟು ಪ್ರಾರ್ಥನೆ ಸಲ್ಲಿಸುತ್ತಿದ್ದರು. ಏನಾದರೂ ತೊಂದರೆಯಾದರೆ ಜ್ಯೋತಿಷ್ಯಗಾರರಲ್ಲಿ ಜಾತಕ ತೋರಿಸಿ ಅವರು ಹೇಳಿದಂತೆ ಹರಕೆ, ಪ್ರಾರ್ಥನೆ, ಪೂಜೆ, ಹೋಮ, ಶಾಂತಿ, ಸಂಧಿದೋಷ ಮೊದಲಾದವುಗಳನ್ನು ಮಾಡಿಸುತ್ತಿದ್ದರು.

ಕುಟುಂಬದ ಯಜಮಾನ ಅರವತ್ತು ವರ್ಷ ತುಂಬುಜೀವನ ನಡೆಸಿದ್ದರೆ ಅವರು ಬ್ರಾಹ್ಮಣರಿಗೆ ದಾನವನ್ನು ಕೊಟ್ಟರೆ ಶ್ರೇಯೋಭಿವೃದ್ಧಿಯಾಗುತ್ತದೆಯೆಂಬ ನಂಬಿಕೆ. ಹಾಗಾಗಿ ಹಣ, ಗೋವು, ಬೆಳ್ಳಿ, ಬಂಗಾರ, ಬಟ್ಟೆ, ಪಾತ್ರೆ ಭೂಮಿಯನ್ನು ದಾನಕೊಡುತ್ತಿದ್ದರು. ಭೂಮಿಯನ್ನು ದಾನಕೊಟ್ಟು, ಆ ಭೂಮಿಯ ಬೆಲೆಯನ್ನು ಬ್ರಾಹ್ಮಣರಿಗೆ ಕೊಟ್ಟು ಮತ್ತೆ ಆ ಭೂಮಿಯನ್ನು ಪಡೆಯುತ್ತಿದ್ದರು. ಕೆಲವರು ಗೇಣಿಕೊಟ್ಟು ಭೂಮಿಯನ್ನು ನೋಡುತ್ತಿದ್ದರು. ಈಗಲೂ ಕೆಲವು ಭಾಗದಲ್ಲಿ ಜೋಯಿಸರಗದ್ದೆಯನ್ನು ಕಾಣಬಹುದು.

ಮದ್ದು ಹಾಕುವುದೆಂಬ ಕೆಟ್ಟ ಪದ್ಧತಿ ಈ ಭಾಗದಲ್ಲಿದೆ. ಮದ್ದು ಹಾಕಿ ಅದು ದೇಹದೊಳಗೆ ಸೇರಿದರೆ ಈಚೆಗೆ ಬರುವುದಿಲ್ಲ. ಮುಖ ಊತ, ಹೊಟ್ಟೆ ದೊಡ್ಡದಾಗುವುದು, ಅನಾರೋಗ್ಯ ಪೀಡಿತವಾಗಿರುವುದು ಇದರ ಲಕ್ಷಣ. ಮದ್ದನ್ನು ಹೇಗೆ ಮಾಡುತ್ತಾರೆ ಎಂದು ಯಾರಿಗೂ ಯಾರು

ಹೇಳುವುದಿಲ್ಲ. ಆದರೂ ನಂಬಿಕೆ ಇದೆ. ಮದ್ದು ತೆಗೆಯುವವರಿದ್ದಾರೆ. ವಾಂತಿ ಮಾಡಿಸಿ ಅಥವಾ ಭೇದಿ ಮಾಡಿಸಿ ಮದ್ದು ತೆಗೆಯುತ್ತಾರೆ.[39] ಇದೊಂದು ಮೂಢನಂಬಿಕೆಯಾಗಿದೆ. ಇತ್ತೀಚಿನವರೆಗೂ ನಡೆಸಿಕೊಂಡು ಬಂದವರಿದ್ದಾರೆ. ಮಲೆನಾಡಭಾಗದಲ್ಲಿ ಭಟ್ಟಿ ಕಟ್ಟುವುದು ಒಂದು ಚಿಕಿತ್ಸಾಪದ್ಧತಿಯಾಗಿದೆ. ಹೊಟ್ಟೆನೋವಾದರೆ ಭಟ್ಟಿಜಾರಿದೆ ಎಂದು ತಿಳಿದು ಹೊಟ್ಟೆಗೆ ಎಣ್ಣೆ ಹಚ್ಚಿ ದೀಪ ಇಟ್ಟು, ಕುಡಿಕೆಯನ್ನು ಮುಚ್ಚಿಹಾಕುತ್ತಾರೆ. ಆ ಮಾಂಸದ ಭಾಗವನ್ನು ಕುಡಿಕೆ ಎಳೆದುಕೊಳ್ಳುತ್ತದೆ. ಭಟ್ಟಿ ಬಿಟ್ಟ ಮೇಲೆ ಹೊಟ್ಟೆನೋವು ಸ್ವಲ್ಪ ಕಡಿಮೆಯಾಗುವ ಸಾಧ್ಯತೆಯಿದೆ. ಈ ಪದ್ಧತಿ ಈಗಲೂ ಮುಂದುವರಿದಿದೆ.

ದೇವತಾಕಾರ್ಯ

ಒಕ್ಕಲಿಗ ಜನಾಂಗದವರು ತಮ್ಮ ಜಮೀನಿನ ಸನಿಹ ಪುರೋಹಿತರ ಹತ್ತಿರ ಕಲ್ಲನ್ನು ಇಡಿಸಿ ಭೂತ, ರಣಕಲ್ಲು, ಚೌಡಿ ಹೀಗೆಲ್ಲ ದೇವತೆ ದೆವ್ವಗಳನ್ನು ಪ್ರತಿಷ್ಠಾಪಿಸಿ ಪ್ರತಿವರ್ಷ ಪೂಜೆ, ಹರಕೆಗಳನ್ನು ಸಲ್ಲಿಸುತ್ತಾರೆ. ಪುರೋಹಿತರು ಪೂಜೆ ಮಾಡಿದ ನಂತರ ಭೂತನಿಗೆ ಕುರಿ ಅಥವಾ ಹಂದಿ ಹರಕೆ ಹಾಗೂ ಉಳಿದ ದೆವ್ವಗಳಿಗೆ ಕೋಳಿ ಹರಕೆ ಕೊಡುತ್ತಾರೆ. ಆ ಪ್ರಾಣಿ ಪಕ್ಷಿಗಳ ಮಾಂಸಮಾಡಿ, ಕಡಬನ್ನು ಮಾಡಿ ಎಡೆ ಇಟ್ಟು ನಂತರ ಎಲ್ಲರೂ ಸೇವಿಸುತ್ತಾರೆ.

ಹೊಸದಾಗಿ ಫಸಲು ಬಂದ ತೋಟಕ್ಕೆ ಪುರೋಹಿತರನ್ನು ಕರೆಸಿ ಶಾಂತಿ, ಹೋಮ ಮಾಡಿಸುತ್ತಾರೆ. ಹಂದಿ ಅಥವಾ ಕುರಿಯನ್ನು ತೋಟದ ಮಧ್ಯದಲ್ಲಿ ಕಡಿದು ಬಲಿಕೊಟ್ಟು ಅದರ ಪದಾರ್ಥಮಾಡಿ ನೆಂಟರಿಷ್ಟರಿಗೆ ಬಡಿಸುತ್ತಾರೆ. ಮಕ್ಕಳಾಗದಿದ್ದವರು ನಾಗರ ಕಲ್ಲನ್ನು ಪ್ರತಿಷ್ಠೆ ಮಾಡಿಸುತ್ತಾರೆ. ಪುರೋಹಿತರಿಂದ ಪೂಜೆ, ನೈವೇದ್ಯ ಮೊದಲಾದವುಗಳನ್ನು ಮಾಡಿಸುತ್ತಾರೆ. ಬಹಳ ನೇಮ, ನಿಷ್ಠೆ, ಮಡಿಯಿಂದ ನೋಡಿಕೊಳ್ಳಬೇಕಾಗುತ್ತದೆ.[40]

ಪ್ರತಿಯೊಬ್ಬ ಒಕ್ಕಲಿಗನ ಮನೆಯಲ್ಲಿ ನಾಮದ ಪೆಟ್ಟಿಗೆ ಇರುತ್ತಿತ್ತು. ಮರ ಅಥವಾ ಬೆತ್ತದಿಂದ ಮಾಡಿದ ಪೆಟ್ಟಿಗೆಯೊಳಗೆ ನಾಮದ ಉಂಡೆ, ಕಡ್ಡಿ, ಕನ್ನಡಿ ಮೊದಲಾದವುಗಳನ್ನು ಪ್ರತಿದಿನ ಸ್ನಾನಮಾಡಿದ ನಂತರ ತುಳಸಿಪೂಜೆ ಮಾಡಿ ನಾಮದ ಗೆರೆಯನ್ನು ಎಳೆದುಕೊಳ್ಳುತ್ತಾರೆ. ತಿರುಪತಿಗೆ ಹೋಗಿ ಬಂದವರು ಬೆಳ್ಳನೆನಾಮದ ಗೆರೆಯನ್ನು ತಿರುಪತಿಗೆ ಹೋಗದವರು ಕೆಂಪುನಾಮದ ಗೆರೆಯನ್ನು ಎಳೆದುಕೊಳ್ಳುತ್ತಿದ್ದರು.

ಜೋಯಿಸರನ್ನು ಕೇಳಿ ಸ್ಥಳಪರಿಶೀಲಿಸಿ ಆಯ ನೋಡಿ ಮನೆ ನಿರ್ಮಿಸುತ್ತಿದ್ದರು. ಮನೆಯ ಅಂದಕ್ಕೆ ಹೆಚ್ಚಿನ ಒತ್ತುಕೊಡದೆ ಸ್ಥಳಾವಕಾಶಕ್ಕೆ ಆದ್ಯತೆ ನೀಡುತ್ತಿದ್ದರು. ಚೌಕಿಮನೆಗಳು, ಅದಕ್ಕೆ ಹೊಂದಿಕೆಯಾಗುವ ಕೊಟ್ಟಿಗೆಗಳು ಬಚ್ಚಲ ಕೊಟ್ಟಿಗೆ, ಸೌದೆ ಕೊಟ್ಟಿಗೆ ಜೊತೆಯಲ್ಲಿರುತ್ತಿದ್ದವು. ಮನೆ ಪ್ರವೇಶಕ್ಕೆ ತಾಮ್ರದ ಕಲಶ ಅದಕ್ಕೆ ಕಾಯಿ, ಪಂಚೆ, ಸೀರೆ, ಖಣ ಇತ್ಯಾದಿ ಇಡುತ್ತಿದ್ದರು. ಬಡವರ ಮನೆ ಒಕ್ಕಲಿಗೆ ಮಣ್ಣಿನ ಹೊಸಪಾತ್ರೆಗಳನ್ನು ಬಳಸುತ್ತಿದ್ದರು. ನವಗ್ರಹ ದವಸಧಾನ್ಯ, ಹೋಮ

ಇತ್ಯಾದಿ ಆಚರಣೆ ಇತ್ತು. ಆಚಾರಿಯಿಂದ ಮನೆಯನ್ನು ಬಿಟ್ಟುಕೊಡಲು ಹೇಳಿ ಅವರಿಗೆ ಉಡುಗೆ, ಉಪಚಾರ ಮಾಡುತ್ತಿದ್ದರು ಆಚಾರಿ ಮನೆಯ ಯಾವುದೇ ಮೂಲೆಯಲ್ಲಿ ಇಟ್ಟ ಗೊಂಬೆಯನ್ನೋ ಕೀಲನ್ನೋ ತೆಗೆದು ಮರಕ್ಕೆ ಕಟ್ಟುತ್ತಾರೆ. ಈ ಗೊಂಬೆಗೆ ಕಳ್ಳ ಎಂದು ಹೆಸರು.[41] ಈ ಕಳ್ಳನನ್ನು ಕಟ್ಟಿದ ಮರಕ್ಕೆ ಮುಂದೆ ಕಳ್ಳನನ್ನು ಕಟ್ಟಿದ ಮರವೆಂದು ಕರೆಯುತ್ತಾರೆ.

ಪುರೋಹಿತರು ಮನೆಗೆ ಪುಣ್ಯಾಹ ಮಾಡಿದ ನಂತರ ನವಗ್ರಹ ಪೂಜೆ, ವಾಸ್ತು ಪೂಜೆ, ಹೋಮ ಅಷ್ಟದಿಕ್ಪಾಲಕರಿಗೆ ಬಲಿ, ಮನೆಸುತ್ತಾ ಎರಡುದಿಕ್ಕಿಗೆ ಚರು ಇಟ್ಟು ಕಕ್ಕಡ ಹಚ್ಚಿ, ಕುಂಬಳಕಾಯಿ ಬಲಿ ಮಾಡುತ್ತಾರೆ. ಮನೆಯ ಮಾಡಿನ ಸುತ್ತ ದರ್ಭೆಯಿಂದ ಮಾಡಿದ ಹಗ್ಗ ಹಾಗೂ ಜೊತೆಯಲ್ಲಿ ಇನ್ನೊಂದು ಬಿಳಿ ದಾರವನ್ನು ಸುತ್ತುತ್ತಾರೆ. ಕುರಿ, ಕೋಳಿಗಳನ್ನು ಅವರ ಶಕ್ತ್ಯಾನುಸಾರ ಬಲಿ ಕೊಡುತ್ತಾರೆ. ಬಾಗಿಲಿಗೆ ಪಂಚೆ ತೆರೆ ಹಾಕಿರುತ್ತಾರೆ. ಮನೆಯವರು ಹಣದ ಪೆಟ್ಟಿಗೆ, ಪೋಟೋ, ನೀರು, ಮಗುವಿರುವ ತೊಟ್ಟಿಲು, ಗೃಹಕೃತ್ಯದ ಸಾಮಾನುಗಳನ್ನು ಒಂದರ ನಂತರ ಒಂದರಂತೆ ಒಳಗೆ ತರುವ ಮೊದಲು ಯಜಮಾನತಿ ತನ್ನ ಬಲಗಾಲನ್ನು ಅಕ್ಕಿ ಸೇರಿಗೆ ತಾಗಿಸಿ ಅದನ್ನು ಒಳಗೆ ಬೀಳಿಸಿದ ನಂತರ ಒಳಗೆ ಪ್ರವೇಶಿಸುತ್ತಾರೆ. ಆಯಾ ವಸ್ತುಗಳನ್ನು ಎಲ್ಲೆಲ್ಲಿ ಇಡಬೇಕೋ ಅಲ್ಲಲ್ಲಿಟ್ಟು ಒಲೆಯಲ್ಲಿ ಹಾಲನ್ನು ಕಾಯಿಸಿ ಉಕ್ಕಿಸುತ್ತಾರೆ. ಮಜ್ಜಿಗೆ ಕಂಬ ಹುಗಿಸುವುದು, ಕೊಲೆಹಲಿಗೆ ಹುಗಿಸುವುದು, ತುಳಸಿ ಪ್ರತಿಷ್ಠೆ ಮಾಡಿಸುತ್ತಾರೆ. ಮಧ್ಯಾಹ್ನದ ಊಟಕ್ಕೆ ನೆಂಟರಿಷ್ಟರೆಲ್ಲ ಬಂದಿರುತ್ತಾರೆ. ಅವರೆಲ್ಲರಿಗೂ ಮಾಂಸದ ಊಟ ಮಾಡಿಸುತ್ತಾರೆ.

ಮಾರಿಹರಕೆ:

ಮಲೆನಾಡು ಭಾಗದಲ್ಲಿ ಮಾರಿಹರಕೆಯು ವಿಶೇಷವಾದುದಾಗಿದೆ. ಸಾಮಾನ್ಯವಾಗಿ ಮಂಗಳವಾರ ನಡೆಸುತ್ತಿದ್ದರು. ಊರವರು ತೀರ್ಮಾನಿಸಿ ಚಂದ ನಿಗದಿಪಡಿಸಿ ದಿನ ಗೊತ್ತುಪಡಿಸುತ್ತಿದ್ದರು. ಒಂದು ವಾರ ಮೊದಲೆ ಕುರಿಯನ್ನು ತಂದು ಪಾಲುಮುಖಂಡರು ಹಾಗೂ ಊರವರ ಸಮ್ಮುಖದಲ್ಲಿ ಕೆಂಪು ಹಾರಹಾಕಿ ತಲೆಗೆ ಎಣ್ಣೆಸವರಿ ಹರಕೆಯ ಕುರಿ ಬಿಡುತ್ತಾರೆ. ಮಾದಾರನನ್ನು ಈ ಕುರಿಯೊಂದಿಗೆ ಪ್ರತಿಯೊಂದು ಮನೆಯ ಮುಂದೆ ಕಳಿಸುತ್ತಾರೆ. ಹೀಗೆ ಒಂದು ವಾರ ಎಲ್ಲಾ ಮನೆಗಳಿಗೆ ಹೋಗಿ ಬರುತ್ತದೆ.

ಆಚಾರಿ ಮಾರಿಗೊಂಬೆ (ಗಂಡು ಹೆಣ್ಣು) ಮಾಡುತ್ತಾನೆ. ಮುಖಂಡರು ಆಚಾರಿಮನೆಗೆ ಹೋಗಿ ಮಾರಿ ಗೊಂಬೆಯನ್ನು ವಿಧಿವಿಧಾನವನ್ನನುಸರಿಸಿ ತರುತ್ತಾರೆ. ಬಣಗಾರ ಬಂದು ಗಂಡುಗೊಂಬೆಗೆ ಗಂಡಿನ ಅಲಂಕಾರ ಹೆಣ್ಣುಗೊಂಬೆಗೆ ಹೆಣ್ಣಿನ ಅಲಂಕಾರ ಮಾಡುತ್ತಾರೆ. ಬಡಿಗೆಮನೆ ಪೂಜೆಯಾದ ನಂತರ ದೇವಾಲಯಕ್ಕೆ ಎಳೆದುಕೊಂಡು ಬರುತ್ತಾರೆ. ಮಾರಿಗುಡಿಯ ಹತ್ತಿರ ಚಪ್ಪರದ ಕೆಳಗೆ ಮಾರಿಗೊಂಬೆ ನಿಲ್ಲಿಸಿ ಅದರ ಮುಂದೆ ಚರು ಹಾಕಿರುತ್ತಾರೆ. ಕುರಿಯನ್ನು ದೇವಾಲಯಕ್ಕೆ ಮೂರುಸುತ್ತು

ಬಲಿಸಿ ಮುಂಭಾಗದ ಚರುಪಿನ ರಾಶಿಗೆ ಕಡಿಯುತ್ತಾರೆ. ಒಂದು ಕಂಬಕ್ಕೆ ಕೋಳಿಯನ್ನು ಕಾಲುಕಟ್ಟಿ ತಲೆಕೆಳಗಾಗಿ ನೇತು ಹಾಕಿರುತ್ತಾರೆ. ಈ ಕಂಬಕ್ಕೆ 'ಶೂಲದಕಂಬವೆಂದು' ಕರೆಯುತ್ತಾರೆ. ಕಡಿದ ಕುರಿಯ ಚರ್ಮಸುಲಿದು ಮಾಂಸಮಾಡಿ ಪದಾರ್ಥಮಾಡುತ್ತಾರೆ. ಕಡುಬನ್ನು ಮಾಡುತ್ತಾರೆ. ಅದನ್ನು ತಂದು ದೇವರ ಮುಂದೆ ಇಟ್ಟು ನೈವೇದ್ಯ ಮಾಡುತ್ತಾರೆ. ಅಡುಗೆಯನ್ನು ಕುಂಬಾರರು ತಯಾರು ಮಾಡುತ್ತಾರೆ. ನಂತರ ಪ್ರತ್ಯೇಕವಾಗಿ ತಂದ ಅವರವರ ಹಂದಿ, ಕುರಿ, ಕೋಳಿಗಳ ಹರಕೆ ನಡೆಯುತ್ತದೆ. ಮಾರಿಗೊಂಬೆಯನ್ನು ಎಳೆದುಕೊಂಡು ಹೋಗಿ ಇನ್ನೊಂದು ಊರಿನ ಗಡಿಗೆ ಹೋಗುತ್ತಾರೆ. ಅಲ್ಲಿಯವರು ಆ ಮಾರಿಗೊಂಬೆಗಳನ್ನು ಎಳೆದುಕೊಂಡು ಮುಂದೆ ಹೋಗಿ ಹರಕೆ ತೀರಿಸುತ್ತಾರೆ. ಹೀಗೆ ಅಮ್ಮ ಕೆಲವು ದೂರದ ವರೆಗೆ ಹೋಗುತ್ತದೆ. ಇದಕ್ಕೆ ಗಡಿಮಾರಿ ಹರಕೆ ಎಂದು ಕರೆಯುತ್ತಾರೆ.

ಗಡಿಮಾರಮ್ಮನನ್ನು ದಾಟಿಸಿದ ಮೇಲೆ ಇಲ್ಲಿ ಶೂಲದ ಮೇಲಿದ್ದ ಕೋಳಿಯ ಹರಕೆ ನಡೆಯುತ್ತದೆ. ಅದನ್ನು ನೇತುಹಾಕಿದ ಚಪ್ಪರಕ್ಕೆ ಬೆಂಕಿ ಹಚ್ಚುತ್ತಾರೆ. ಇತರೆ ಕುರಿಕೋಳಿಗಳ ಹರಕೆ ಮಾಡಿ, ಅಲ್ಲಿಯೇ ಮಾಂಸದ ಭೋಜನ ನಡೆಯುತ್ತದೆ. ಊರಿನ ಕೆಲವು ತೀರ್ಮಾನಗಳನ್ನು ಅಂದು ಮಾಡುತ್ತಾರೆ.

ಗಡಿಮಾರಿ ಹರಕೆಯನ್ನು ಬ್ಯಾನೆ, ಶಿಡುಬು, ಗೋರೆ, ಪ್ಲೇಗು, ಜಾನುವಾರುಗಳಿಗೆ ಕಾಲುಬಾಯಿರೋಗ ಗಂಟಲುಕಟ್ಟುವ ರೋಗ ಮತ್ತು ಬೆಳೆಗೆ ಹುಳುಗಳು ಬೀಳದಂತೆ ತಡೆಯಲು ಮಾಡುತ್ತಾರೆ. ಇಂತಹ ರೋಗಗಳು ಬರುವುದು ಅಮ್ಮನವರ ತೊಂದರೆಯಿಂದ ಎಂಬ ನಂಬಿಕೆಯಿಂದ ಅದು ಊರಿಗೆ ಬರದಂತೆ ಅಮ್ಮನವರನ್ನು ಸಂತೃಪ್ತಿಪಡಿಸುವ ಸಲುವಾಗಿ ಮಾರಿಹರಕೆಯನ್ನು ಶ್ರದ್ಧಾಭಕ್ತಿಯಿಂದ ತಪ್ಪದೆ ಮಾಡುತ್ತಿದ್ದರು. ಕೆಲವು ಕಡೆ ಈಗಲೂ ಮಾಡುತ್ತಾರೆ.

ಶಿಡಿ: ಮಲೆನಾಡಿನ ಕೆಲವುಭಾಗದಲ್ಲಿ ಶಿಡಿ ಆಡುವುದಿತ್ತು. ಕೆಲವು ದೇವಾಲಯಗಳಲ್ಲಿ ಹರಕೆ ಹೇಳಿಕೊಂಡಿರುತ್ತಿದ್ದರು. ದೇವಾಲಯದ ಮುಂದೆ ಶಿಡಿಕಂಬವಿದ್ದು ಭಕ್ತರ ಬೆನ್ನಿನ ಚರ್ಮಕ್ಕೆ ಕಬ್ಬಿಣದ ಕೊಕ್ಕೆಯನ್ನು ಸಿಕ್ಕಿಸಿ ಸಿಡಿ ಕಂಬದ ಮೇಲೆ ನೇತಾಡಿಸುವ ಪದ್ಧತಿ. ಹರಕೆ ಹೊತ್ತವರೆ ಶಿಡಿ ಆಡುವುದಿದೆ. ಸಿಡಿ ಆಡುವವರನ್ನೇ ಕರೆಸಿ ಶಿಡಿ ಹರಕೆಯನ್ನು ತೀರಿಸುವವರಿದ್ದಾರೆ. ಶಿಡಿ ಆಡುವವನು ನೇಮ ನಿಷ್ಠೆಯಿಂದ ಅನುಷ್ಠಾನದಲ್ಲಿರಬೇಕು. ಶೃಂಗೇರಿಯ ಸುತ್ತಮುತ್ತಲು ಶಿಡಿ ಆಡುವುದಾಗಲಿ ಅಂತಹ ಅಮ್ಮನವರ ದೇವಾಲಯವಿಲ್ಲ. ಶಿಡಿ ಹರಕೆ ಹೊತ್ತ ಭಕ್ತರು ಇರುತ್ತಿದ್ದರು. ಈಗ ಎಲ್ಲೂ ಇಲ್ಲ.

ಕೊಟ್ಟಣ ಕುಟ್ಟುವುದು: ಹಿಂದೆ ಭತ್ತ ಕುಟ್ಟಿ ನುಚ್ಚು ತೌಡನ್ನು ಮಾಡುತ್ತಿದ್ದರು. ಕೊಟ್ಟಣವ ಕುಟ್ಟುವ ಸ್ತ್ರೀಯರ ಗುಂಪೆ ಇರುತಿತ್ತು. ಅವರಿಗೆ ಒಂದು ಖಂಡುಗ ಭತ್ತ ಕುಟ್ಟಿದರೆ ಇಂತಿಷ್ಟು ಅಕ್ಕಿ ಕೊಡವುದೆಂದು ನಿಗದಿ ಮಾಡಿರುತ್ತಿದ್ದರು. ಭತ್ತವನ್ನು ಬೇಯಿಸಿ ಅದನ್ನು ಕುಟ್ಟಿದಾಗ ಬರುವ ಅಕ್ಕಿಯನ್ನು ಕುಚಲಕ್ಕಿ ಎಂದು ಹಾಗೆಯೇ ಭತ್ತವನ್ನು ಕುಟ್ಟಿ ಬಂದ ಅಕ್ಕಿಯನ್ನು ಬೆಳತಿಅಕ್ಕಿ ಎನ್ನುತ್ತಿದ್ದರು. ಇತ್ತೀಚಿನವರೆಗೂ ಭತ್ತಕುಟ್ಟುವುದಿತ್ತು.

ಒಡೆಕಲ್ಲು: ಬೀಸುಕಲ್ಲಿನ ಹಾಗೆ ದೊಡ್ಡಗಾತ್ರದ ಕಲ್ಲನ್ನು ಮಾಡಿಕೊಂಡಿರುತ್ತಿದ್ದರು. ಅದಕ್ಕೆ ಕಬ್ಬಿಣದ ಪಟ್ಟಿ ಹಾಗೂ ಮೂರು ಮರದ ತುಂಡುಗಳನ್ನು ಅಳವಡಿಸಿ ಭತ್ತವನ್ನು ಹಾಕುವಂತೆ ಮಾಡಿರುತ್ತಾರೆ. ಮೇಲಿನ ಕಲ್ಲನ್ನು ಬೀಸಿದಾಗ ಭತ್ತದ ಸಿಪ್ಪೆ ಒಡೆದು ಅಕ್ಕಿ, ಸಿಪ್ಪೆ ಒಟ್ಟಾಗಿ ಹೊರಗೆ ಬರುತ್ತಿತ್ತು. ಅಕ್ಕಿ ಪುಡಿಯಾಗದಂತೆ ಮರದ ತುಂಡುಗಳು ಸಮತೋಲನ ಕಾಯ್ದುಕೊಳ್ಳುತ್ತಿದ್ದವು. ಅದನ್ನು ಕೇರಿ ಅಕ್ಕಿ ಬೇರ್ಪಡಿಸುತ್ತಿದ್ದರು. ಕೇಸಕ್ಕಿಯನ್ನು ಒರಳಿಗೆ ಹಾಕಿ ಕುಟ್ಟಿದರೆ (ತೋಳ್ಳುವುದು) ಶುದ್ಧವಾದ ಅಕ್ಕಿ ಸಿಗುತ್ತಿತ್ತು.

ಬೇಟೆ/ಶಿಕಾರಿ: ಶಿಕಾರಿ ಮಾಡೂದು ತಿನ್ನೂಕೆ, ಚಟ ತಿರ್ಲೂಕೆ.[42] ಮಲೆನಾಡು ಭಾಗದ ಹೆಚ್ಚಿನವರು ಬೇಟೆಯಾಡುವುದನ್ನು ಹವ್ಯಾಸವಾಗಿಟ್ಟುಕೊಂಡು ಕ್ರೀಡೆಯಂತೆ ನಡೆಸುತ್ತಿದ್ದರು. ಉತ್ತಮ ಬೇಟೆಗಾರನಿಗೆ ಸಮಾಜದಲ್ಲಿ ಗೌರವ, ಮರ್ಯಾದೆ ಸಿಗುತ್ತಿತ್ತು. ಹುಲಿ, ಚಿರತೆಗಳನ್ನು ಬೇಟೆಯಾಡಿದವನನ್ನು ಮೆರವಣಿಗೆ ಮಾಡುತ್ತಿದ್ದರು. ಜಾತ್ರೆ, ಹಬ್ಬ ಹರಿದಿನಗಳಂದು ಊರವರೆಲ್ಲಾ ಒಟ್ಟು ಸೇರಿ ಕಡವೆ, ಹಂದಿ, ಕುರಿ ಮೊದಲಾದ ಪ್ರಾಣಿಗಳನ್ನು ಶಿಕಾರಿ ಮಾಡಿ ಕಾಡಿನಲ್ಲಿಯೇ ಅದರ ಸ್ವಲ್ಪ ಮಾಂಸಕ್ಕೆ ಉಪ್ಪನ್ನು ಮಾತ್ರಾ ಹಾಕಿ ಹುರಿತುಂಡು ಮಾಡಿ ಹಂಚುತ್ತಿದ್ದರು. ಉಳಿದ ಮಾಂಸವನ್ನು ಪಾಲುಮಾಡಿ ಹಂಚಿಕೊಳ್ಳುತ್ತಿದ್ದರು. ಶಿಕಾರಿಯನ್ನು ಸಂಭ್ರಮದಿಂದ ನಡೆಸುತ್ತಿದ್ದರು.

ಈಗ ಅರಣ್ಯ ಭಾಗ ಕಡಿಮೆಯಾಗಿದ್ದು ಪ್ರಾಣಿಸಂಕುಲವೂ ಕ್ಷೀಣಿಸಿದೆ. ಆಧುನಿಕ ಯಂತ್ರೋಪಕರಣಗಳು ಇರುವುದರಿಂದ ಬೇಟೆ ಸುಲಭಸಾಧ್ಯವಾಗಿ ಪ್ರಾಣಿಗಳ ಅವನತಿಗೆ ಕಾರಣವಾಗಿದೆ. ಇತ್ತೀಚೆಗೆ ಅರಣ್ಯ ಹಕ್ಕು ಕಾಯ್ದೆಯಂತೆ ಪ್ರಾಣಿ, ಪಕ್ಷಿ, ಮೀನುಗಳನ್ನು ಬೇಟೆಯಾಡುವುದು ಅಪರಾಧವಾಗಿದೆ. ಹಿಂದೆ ಬಳಕೆಯಲ್ಲಿದ್ದ ಶಿಕಾರಿಯ ವಿಧಿ ವಿಧಾನಗಳನ್ನು ನೀಡಲಾಗಿದೆ.

ಮಲೆನಾಡಿನ ಹೆಚ್ಚಿನವರ ಮನೆಯಲ್ಲಿ ಕೋವಿಗಳಿರುತ್ತಿದ್ದವು. ಬತ್ತಿಕೋವಿ, ಕೇಪಿನ ಕೋವಿ, ತೋಟ ಕೋವಿಗಳು. ಒಂದು ಕುಟುಂಬದಲ್ಲಿ ಒಬ್ಬರಾದರೂ ಪರಿಣತ ಬೇಟೆಗಾರರಿರುತ್ತಿದ್ದರು. ಬೇರೆ ಬೇರೆ ವಿಧಾನಗಳಿಂದ ಬೇಟೆಯಾಡಿ ಪ್ರಾಣಿ ಪಕ್ಷಿಗಳನ್ನು ಸಾಯಿಸಿ ಪದಾರ್ಥಮಾಡಿ ತಿನ್ನುತ್ತಿದ್ದರು.

ದೊಡ್ಡ ಶಿಕಾರಿ: ತುಂಬಾ ಜನ ಕೋವಿಕಾರರು, ಇಪ್ಪತ್ತು ಮೂವತ್ತು ಜನ ಹಳುಸೋಯುವವರು ಸೇರಿ ದೊಡ್ಡಕಾಡಿಗೆ ಹೋಗಿ ಬೇಟೆ ಮಾಡುತ್ತಾರೆ. ಈ ಶಿಕಾರಿಯಲ್ಲಿ ಹಂದಿ, ಕಡ, ಸಾರಂಗ, ಕುರಿ, ಬರ್ಕ ಮೊದಲಾದ ದೊಡ್ಡಪ್ರಾಣಿಗಳನ್ನು ಹೊಡೆಯುತ್ತಿದ್ದರು.

ಸಾರಾಕಿ ಶಿಕಾರಿ: ಒಬ್ಬರೇ ಕಾಡಿನಲ್ಲಿ ಮರದ ಮೇಲೆ ಕುಳಿತು ಪ್ರಾಣಿಗಳು ನೀರನ್ನು ಕುಡಿಯುವ ಸ್ಥಳ. ಹಣ್ಣುತಿನ್ನಲು ಬರುವ ಹಣ್ಣಿನಮರಗಳ ಸನಿಹ ಮರೆಯಲ್ಲಿ ಕಾದುಕುಳಿತು ಹೊಡೆಯುತ್ತಿದ್ದರು.

ಮರಸುಶಿಕಾರಿ: ಇದು ರಾತ್ರಿ ತಿಂಗಳಬೆಳಕಿನಲ್ಲಿ ಹಣ್ಣಿನ ಮರದ ಬುಡದಲ್ಲಿ ಮರಸು(ಮರೆ) ಮಾಡಿಕುಳಿತು ಪ್ರಾಣಿಗಳನ್ನು ಹೊಡೆಯುವುದು. ಮೊಲ, ಬರ್ಕ, ಕಬ್ಬೆಕ್ಕು, ಪುಣಗಿನ ಬೆಕ್ಕು, ಮುಳ್ಳುಹಂದಿಗಳನ್ನು ಹೀಗೆ ಹೊಡೆಯುತ್ತಿದ್ದರು.

ಸಣ್ಣಶಿಕಾರಿ: ಕಾಡುಕೋಳಿ, ಚಟ್ಟುಕೋಳಿ, ನವಿಲು ಇತರೆ ಪಕ್ಷಿಗಳನ್ನು ಹೊಡೆಯುವುದು. ಪ್ರಾಣಿಗಳು ಓಡಾಡುವ ಸ್ಥಳದಲ್ಲಿ ಅಡ್ಡಲಾಗಿ ದಾರಕಟ್ಟಿ, ದಾರದ ಎಳೆತದಿಂದ ಕೋವಿ ಈಡಾಗುವಂತೆ ಮಾಡಿರುತ್ತಾರೆ.ಇದಕ್ಕೆ ಕೋವಿಕಟ್ಟುವುದು ಅಥವಾ ಸೂತ್ರದ ಕೋವಿ ಶಿಕಾರಿ ಎನ್ನುತ್ತಿದ್ದರು.

ಹಸಿರುಬೇಟೆ: ರಾತ್ರಿ ಹತ್ತಾರು ಜನರು ತಿಂಗಳ ಬೆಳಕಿನ ಸಮಯದಲ್ಲಿ ಗದ್ದೆ ಬಯಲಲ್ಲಿ ಅಲ್ಲಲ್ಲಿ ಬಲೆಗಳನ್ನು ಕಟ್ಟುತ್ತಾರೆ. ಎದುರಾಗಿ ಜನರು ಶಬ್ದ ಮಾಡುತ್ತಾ ಬರುತ್ತಾರೆ. ರಾತ್ರಿ ಮೇಯಲು ಬಂದ ಮೊಲ, ಕಬ್ಬೆಕ್ಕು, ಪುಣಗಿನ ಬೆಕ್ಕು, ಬರ್ಕ ಮೊದಲಾದವುಗಳು ಬಲೆಗಳಿಗೆ ಬೀಳುತ್ತವೆ.

ಸುಡಕ್ಕ ಬೇಟೆ: ರಾತ್ರಿ ಗಿಡಮರದ ಮೇಲೆ ಹಳ್ಳದ ಪಕ್ಕದಲ್ಲಿ, ಕೆಲವು ಪಕ್ಷಿಗಳು ಪ್ರಾಣಿಗಳು ನಿದ್ದೆ ಮಾಡುತ್ತಿರುವಾಗ ದೊಣ್ಣೆಯಿಂದ, ಕಲ್ಲಿನಿಂದ ಹೊಡೆದು ಬೇಟೆಯಾಡುತ್ತಿದ್ದರು.

ಉಳ್ಳ ಹಾಕುವುದು: ಪ್ರಾಣಿಗಳು ಓಡಾಡುವ ಗಂಡಿಗೆ ಹಗ್ಗದ ಅಥವಾ ತಂತಿಯ ಉಳ್ಳ (ಉರುಳು) ಹಾಕಿ ಪ್ರಾಣಿಗಳನ್ನು ಹಿಡಿಯುತ್ತಿದ್ದರು.

ಅಡಸಲು: ಒಂದಡಿ ಎತ್ತರಕ್ಕೆ ಹಲಗೆ ಇಟ್ಟು ಕಲ್ಲು ಹೇರಿ ಸೂತ್ರದ ಕಡ್ಡಿಯ ಮೂಲಕ ನಿಲ್ಲಿಸುತ್ತಾರೆ. ಹಲಿಗೆಯ ಅಡಿಯಲ್ಲಿ ಆಹಾರ ಪದಾರ್ಥಕಟ್ಟಿಡುತ್ತಾರೆ. ಅದನ್ನು ತಿನ್ನಲು ಬಂದಾಗ ಸೂತ್ರದ ಕಡ್ಡಿ ಜಗಿದು ಮೇಲಿದ್ದ ಹಲಗೆ ಮೈಮೇಲೆ ಬಿದ್ದು ಸಾಯುತ್ತದೆ.

ಹಕ್ಕಿಗಳ ಶಿಕಾರಿ: ಹಕ್ಕಿಯನ್ನು ಹಿಡಿಯಲು ಸೆಬೆ, ಉಳ್ಳಗಳನ್ನು ಹಾಕುತ್ತಿದ್ದರು. ಚಾಟಿಬಿಲ್ಲಿನಿಂದ ಹೊಡೆಯುತ್ತಿದ್ದರು. ಬಸರಿಮರದ ಮೇಣವನ್ನು ಕಡ್ಡಿಗೆ ಅಂಟಿಸಿ ಮರದ ಹತ್ತಿರ ಇಟ್ಟು ಹಕ್ಕಿಗಳು ಅದರ ಮೇಲೆ ಕೂತಾಗ ಆ ಅಂಟು ಅವುಗಳಿಗೆ ಹಿಡಿದು ಹಾರಲಾಗದೆ ಬಿದ್ದಿರುತ್ತಿದ್ದವು. ಮರಗಿಡದ ಸನಿಹ ಸಂಜೆ ಗುತ್ತುಕೂತು ಕಾಡುಕೋಳಿ ಯಾವಮರದಲ್ಲಿ ಕೂರುತ್ತದೆಂದು ನೋಡಿ ಬೆಳಗ್ಗೆ ಮುಂಚೆ ಹೋಗಿ ಹೊಡೆಯುತ್ತಿದ್ದರು.

ಮೀನು ಬೇಟೆ: ಮೀನುಗಳನ್ನು ಹಿಡಿಯಲು ಕೂಣೆ, ಬಲೆ, ಗಾಳ, ಮದ್ದು ಹಾಕುವುದರ ಮೂಲಕ ಹಿಡಿಯುತ್ತಿದ್ದರು. ಗೋಚುವುದು, ತೊಳಕುವುದು, ಕಡಿಯುವುದು ಇತ್ಯಾದಿ ಈಗ ತೋಟಹಾಕುವುದು, ಮೈಲುತುತ್ತಾ ಕದಡಿ ಹಿಡಿಯುತ್ತಾರೆ. ಸಿಗುವುದಕ್ಕಿಂತ ಹೆಚ್ಚಾಗಿ ಸಿಗದೆ ಸತ್ತು ಹೋಗುತ್ತವೆ. ಏಡಿಯನ್ನು ಬೇಟೆಯಾಡುತ್ತಿದ್ದರು. ಕಾರೇಡಿ, ಹ್ವಾಂಟೇಡಿ, ಬೆಳ್ಳೇಡಿಗಳನ್ನು ಹಿಡಿಯುತ್ತಿದ್ದರು. ಶಿಕಾರಿಯು ಹಳೆಯ ಹಾಗೂ ಹೊಸ ಸಂಪ್ರದಾಯಗಳೊಂದಿಗೆ ಇಂದಿಗೂ ಮುಂದುವರಿದುಕೊಂಡು ಬರುತ್ತಿದೆ. ಕಾಡುಕಡಿಮೆಯಾಗಿ ಜನಸಂಖ್ಯೆ ಜಾಸ್ತಿಯಿರುವುದರಿಂದ ಪ್ರಾಣಿಪಕ್ಷಿಗಳ ಸಂಖ್ಯೆ ತೀರಾಕಡಿಮೆಯಿದೆ.

ಆಹಾರ: ಇಲ್ಲಿ ಅಕ್ಕಿಯನ್ನು ಬೆಳೆಯುತ್ತಿದ್ದುದರಿಂದ ಅಕ್ಕಿ ಪದಾರ್ಥವನ್ನೇ ಬಳಸುತ್ತಿದ್ದರು. ಅನ್ನ, ಗಂಜಿ, ರೊಟ್ಟಿ, ದೋಸೆ, ಕಡುಬು ಇತ್ಯಾದಿಗಳನ್ನು ತಯಾರಿಸುತ್ತಿದ್ದರು. ಅಕ್ಕಿ ತೊಳೆದ ನೀರನ್ನು ದನಗಳಿಗೆ ಕೊಡುತ್ತಿದ್ದರು. ಕೆಲವೊಮ್ಮೆ ಅದಕ್ಕೆ ಬೆಲ್ಲ ಏಲಕ್ಕಿ ಪುಡಿಸೇರಿಸಿ ಪಾನಕ ಮಾಡುತ್ತಿದ್ದರು. ಅನ್ನದ ತಿಳಿಯನ್ನೇ ಊಟಕ್ಕೆ ಬಳಸುತ್ತಿದ್ದರು. ಹೆಚ್ಚಾದದ್ದನ್ನು ದನಕರುಗಳಿಗೆ ಕೊಡುತ್ತಿದ್ದರು. ರಾಗಿ, ಗೋಧಿಯನ್ನು ಕೆಲವರು ಮಾತ್ರಾ ಬಳಸುತ್ತಿದ್ದರು.

ತಿಂಡಿತಿನಿಸು: ಹಣ್ಣಿನಿಂದ ಮಾಡಬಹುದಾದ ಹಲಸಿನ ಹಣ್ಣಿನ ದೋಸೆ, ಮುಳುಕ, ಕೊಟ್ಟೆ ಕಡುಬು ಮೊದಲಾದವುಗಳು ಹೋಳಿಗೆ, ಸುಕಿನುಂಡೆ, ಅತ್ರಾಸ, ಕಜ್ಜಾಯ, ಅಕ್ಕಿರೊಟ್ಟಿ, ಎಣ್ಣೆರೊಟ್ಟಿ, ಶಾವಿಗೆ, ವಡೆ, ಚಕ್ಕುಲಿ, ಕೋಡುಬಳೆ, ಉದ್ದಿನ ಕಡುಬು, ಚೀನೀಕಾಯಿ ಕಡುಬು ಮೊದಲಾದವುಗಳನ್ನು ಮಾಡುತ್ತಿದ್ದರು. ಕಡಬು, ರೊಟ್ಟಿ, ಶಾವಿಗೆ ಮೊದಲಾದ ತಿಂಡಿಗಳನ್ನು ಮಾಡಲು ಮರದ ವಸ್ತುಗಳನ್ನು ಮಾಡಿಕೊಂಡಿರುತ್ತಿದ್ದರು. ಪಾಯಸ, ಕಾಯಿಹಾಲು, ಹಾಲಿನ ಗಿಣ್ಣನ್ನು ಮಾಡುತ್ತಿದ್ದರು.

ಕರಿಮೀನು: ರೈತರ ನಾಡಿಯಾದ ಗದ್ದೆಯಲ್ಲಿ ಮೀನುಗಳಿರುತ್ತಿದ್ದವು. ಅಕ್ಟೋಬರ್ ನವೆಂಬರ್ ಸಮಯ ಮಳೆಬಂದಾಗ ಮಳೆನೀರಿನಲ್ಲಿ ಹಳ್ಳಗಳ ಮೂಲಕ ಹೊಳೆಗೆ ಸೇರುತ್ತಿದ್ದವು. ಪ್ರತಿಯೊಬ್ಬರೂ ತಮ್ಮ ಗದ್ದೆಯ ತುದಿಯಲ್ಲಿ ಒಂದು ಜಾಗದಲ್ಲಿ ನೀರು ಬೀಳುವಂತೆ ಮಾಡಿ ಅಲ್ಲಿಗೆ ಕೊಳೆ, ತಟ್ಟೆಗೂಡೆ ಹಾಕಿ ಮೀನನ್ನು ಹಿಡಿಯುತ್ತಿದ್ದರು. ಅವುಗಳನ್ನು ತಂದು ಹೊಗೆದಟ್ಟಿಯಲ್ಲಿ ಒಣಗಿಸಿ ಇಡುತ್ತಿದ್ದರು. ಈ ಮೀನನ್ನು ಕರಿಮೀನು ಎಂದು ಕರೆಯುತ್ತಿದ್ದರು. ಹೊಗೆ ಹಿಡಿದು ಮತ್ತೆ ಕಪ್ಪಾಗಿರುವುದರಿಂದ ಈ ರೀತಿ ಕರೆಯುತ್ತಿದ್ದರು. ಕರಿಮೀನು ಚಟ್ನಿ ಹಾಗೂ ಸಾಂಬಾರು ಬಹಳ ರುಚಿಕರವಾದುದು. ಯಾರಾದರೂ ನೆಂಟರು ಬಂದಾಗ, ವಿಶೇಷ ಸಮಾರಂಭಗಳಲ್ಲಿ ಇದರ ಸಾಂಬಾರು ಮಾಡುತ್ತಿದ್ದರು.

ಏಡಿಹಿಡಿಯುವುದು: ಮಳೆಗಾಲದಲ್ಲಿ ನಾಟಿಗದ್ದೆಗಳಲ್ಲಿ ಚಿಕ್ಕಗಾತ್ರದ ಏಡಿಗಳಿರುತ್ತವೆ. ಇದನ್ನು ಬೆಳ್ಳೇಡಿ ಅಥವಾ ಹ್ವಾಂಟೇಡಿ ಎನ್ನುತ್ತಾರೆ. ಇವುಗಳನ್ನು ಹಿಡಿದು ಚಿಪ್ಪನ್ನು ತೆಗೆದು ಸಾಂಬಾರನ್ನು, ಚಟ್ನಿ, ಪಲ್ಯವನ್ನೂ ಮಾಡುತ್ತಾರೆ. ದೊಡ್ಡ ಏಡಿಯನ್ನು ಕಾರೇಡಿ ಎಂದು ಕರೆಯುತ್ತಾರೆ. ಅವುಗಳನ್ನು ಕಪ್ಪೆಗೋಲಿನ ಸಹಾಯದಿಂದ ಅಥವಾ ಹೊರಗೆ ಬಂದಾಗ ಹಿಡಿದು ಶಿಕಾರಿ ಮಾಡುತ್ತಿದ್ದರು. ಈಗ ಗದ್ದೆಗಳಿಗೆ ಔಷಧಿ, ರಾಸಾಯನಿಕ ಗೊಬ್ಬರ ಸಿಂಪಡಣೆಯಿಂದ ಮೀನು, ಏಡಿಗಳು ಕಡಿಮೆಯಾಗಿವೆ. ಏಡಿಯನ್ನು ಸಾಯಿಸಲು ತಿಮೇಟನ್ನು ಬಳಸುತ್ತಿದ್ದಾರೆ.[43]

ಮೀನು ಬಚ್ಚುವುದು: ಮಲೆನಾಡಿನ ಶೂದ್ರಾವರ್ಗದವರ ಮನೆಗಳಲ್ಲಿ ಮೀನು ಏಡಿಗಳನ್ನು ಸಾಂಬಾರು ಮಾಡುವಾಗ ಬಚ್ಚುವುದಿದೆ. ಅಗಲವಾದ ಕಡಿಮೆ ಎತ್ತರದ ಮಣ್ಣಿನ ಅಥವಾ ಬಳಪದ ಕಲ್ಲಿನ ಪಾತ್ರೆಗಳನ್ನು ಬಳಸುತ್ತಿದ್ದರು. ಮಲೆನಾಡಿನ ಭಾಷೆಯಲ್ಲಿ ಇದನ್ನು 'ಚ್ವಾರೆ' ಎನ್ನುತ್ತಾರೆ. ಮೀನು ಏಡಿಗಳನ್ನು ಸೋಚಿ, ಶುದ್ಧವಾದ ಮೇಲೆ ಬೇಕಾದಷ್ಟು ಕಾರ, ಉಪ್ಪು, ದಿರಕನ ಹುಳಿ ಹಾಕಿ ಕಡಿಮೆ ಪ್ರಮಾಣದ ನೀರನ್ನು ಹಾಕಿ ಬೇಯಿಸುತ್ತಾರೆ. ನಂತರ ಅದನ್ನು ಸೌಟಿನಿಂದ ತಿರುಗಿಸುವುದಿಲ್ಲ. ನೀರೆಲ್ಲ ಒಣಗಿ ಒಳ್ಳೆಯ ರುಚಿಕರ ಪದಾರ್ಥವಾಗುತ್ತದೆ. ಎರಡು ಮೂರುದಿನವಿಟ್ಟರೂ ಹಾಳಾಗುವುದಿಲ್ಲ.

ಮಾಂಸದ ಸಂಡಿಗೆ ಮಾಡುವುದು: ದೊಡ್ಡಪ್ರಾಣಿಗಳನ್ನು ಶಿಕಾರಿ ಮಾಡಿ ಅದರ ಒಳ್ಳೆಯ ಮಾಂಸವನ್ನು ಒಲೆಯಮೇಲೆ ಒಣಗಿಸಿ ಇಡುತ್ತಿದ್ದರು. ಬೇಕಾದಾಗ ಅದನ್ನು ತೆಗೆದು ನೀರಿನಲ್ಲಿ ನೆನೆಸಿ ಕಲ್ಲಿನಿಂದ ಗುದ್ದಿ ಸಾಂಬಾರನ್ನು ಮಾಡುತ್ತಿದ್ದರು. ಇದನ್ನು ಸಂಡಿಗೆ ಪಲ್ಯವೆಂದು ಕರೆಯುತ್ತಿದ್ದರು.

ಚಿಗಳಿ ಚಟ್ನಿ: ಚಿಗಳಿ ಇರುವೆಯನ್ನು ಒಣಗಿಸಿಟ್ಟು, ಇದಕ್ಕೆ ಉಪ್ಪುಹುಳಿಖಾರ ಇತ್ಯಾದಿಗಳನ್ನು ಹಾಕಿ ಕಡೆದು, ಚಟ್ನಿಯನ್ನು ಮಾಡುತ್ತಿದ್ದರು. ರೋಗನಿರೋಧಕ ಶಕ್ತಿ ಚಿಗಳಿಯಲ್ಲಿದೆ. ರುಚಿಕರವೂ ಆರೋಗ್ಯಕರವೂ ಆಗಿತ್ತು.

ದಿರ್ಕನ ಹುಳಿ: ಮಲೆನಾಡಿನಲ್ಲಿ ದೀರ್ಕ ಎಂಬ ಒಂದು ಜಾತಿಯ ಮರವಿದೆ. ಹೇರಳವಾಗಿ ಅದರಲ್ಲಿ ಕಾಯಿಗಳು ಬಿಡುತ್ತವೆ. ಆ ಕಾಯಿಯನ್ನು ಸಣ್ಣ ಚೂರುಗಳನ್ನಾಗಿ ಮಾಡಿ ಬಿಸಿಲಲ್ಲಿ ಒಣಗಿಸುತ್ತಾರೆ. ಒಣಗಿದ ಚೂರುಗಳನ್ನು ನೀರಿನಲ್ಲಿ ಹಾಕಿ ಅದರ ಹುಳಿ ಬಿಡುವಂತೆ ಮಾಡುತ್ತಾರೆ. ಬಿಟ್ಟ ಹುಳಿಯನ್ನು ಒಂದು ತಾಮ್ರದ ಪಾತ್ರೆ ಅಥವಾ ಮಣ್ಣಿನ ಹರಿವೆಯೊಳಗೆ ಹಾಕಿ ಬೆಂಕಿಯಿಂದ ಕಾಯಿಸಿ ಬಚ್ಚುತ್ತಾರೆ. ಹೀಗೆ ಕೊನೆಯಲ್ಲಿ ಗಟ್ಟಿಯಾಗಿ ಸಿಗುವ ಹುಳಿಯನ್ನು ಅಡ್ಡುಳಿ ಎಂದು ಕರೆಯುತ್ತಾರೆ. ಮೀನು, ಏಡಿ ಪಲ್ಯವನ್ನು ಬಚ್ಚಲು ಇದನ್ನೇ ಬಳಸುತ್ತಾರೆ.

ವಾಟೆಹುಳಿ: ಕಾಡಿನಲ್ಲಿ ದೊಡ್ಡದಾಗಿ ಬೆಳೆಯುವ ಒಂದು ಜಾತಿಯಮರವೆ ವಾಟೆಮರ. ಇದರ ಕಾಯಿ ಹುಳಿಯಾಗಿರುತ್ತದೆ. ಅವುಗಳನ್ನು ತಂದು ಸಣ್ಣದಾಗಿ ಕತ್ತರಿಸಿ ಬಿಸಿಲಲ್ಲಿ ಒಣಗಿಸಿ ಇಟ್ಟುಕೊಳ್ಳುತ್ತಾರೆ. ಎಲ್ಲಾ ಸಾಂಬಾರು ಪದಾರ್ಥಕ್ಕೂ ಈ ಹುಳಿಯನ್ನು ಬಳಸುತ್ತಾರೆ. ಇದಕ್ಕೆ ವಾಟೆ ಹುಳಿ ಎಂದು ಕರೆಯುತ್ತಾರೆ.

ಹಳ್ಳುಗುರುಗಿ ಎಣ್ಣೆ: ಕಾಡಿನಲ್ಲಿ ಬೆಳೆಯುವ ಒಂದು ಜಾತಿಯಮರ. ಇದರ ಬೀಜವನ್ನು ಎಣ್ಣೆಯಾಗಿ ಬಳಸುತ್ತಿದ್ದರು. ಒಗ್ಗರಣೆಗೆ ಹೆಚ್ಚಾಗಿ ಬಳಸುತ್ತಿದ್ದರು.

ಮುರುಗನ ಹುಳಿ: ಕಾಡಿನಲ್ಲಿ ದೊಡ್ಡದಾಗಿ ಮರಬೆಳೆಯುತ್ತದೆ. ಇದರ ಕಾಯಿಯ ಬೀಜವನ್ನು ಎಣ್ಣೆಯಾಗಿ ಬಳಸುತ್ತಿದ್ದರು. ಎಣ್ಣೆಯನ್ನು ತಿಂಡಿಮಾಡಲು, ಒಗ್ಗರಣೆ ಹಾಕಲು ದೀಪಹಚ್ಚಲು ಬಳಸುತ್ತಿದ್ದರು.

ಹೆಬ್ಬಲಸಿನ ಎಣ್ಣೆ: ಹೆಬ್ಬಲಸು ದೊಡ್ಡದಾಗಿ ಬೆಳೆಯುವ ಮರ. ಹಲಸಿನ ಕಾಯಿಗಿಂತಲು ಚಿಕ್ಕದಾದ ಕಾಯಿ ಬರುತ್ತದೆ. ಅದರಲ್ಲಿರುವ ಬೀಜವು ಎಣ್ಣೆಯನ್ನು ಕೊಡುತ್ತದೆ. ಇದನ್ನೂ ಸಹ ಉಪಯೋಗಿಸುತ್ತಿದ್ದರು.

ಶವಸಂಸ್ಕಾರ ಪದ್ಧತಿ: ಚಿಕ್ಕಮಕ್ಕಳು ಸತ್ತರೆ ಹೂಳುವುದು, ವಯಸ್ಸಾದವರು ಸತ್ತರೆ ಸುಡುತ್ತಾರೆ. ಸಾಯುವ ಕೊನೆಕ್ಷಣದಲ್ಲಿ ತುಳಸಿಕುಡಿಯಿಂದ ಬಾಯಿಗೆ ನೀರು ಬಿಡುತ್ತಾರೆ. ಪ್ರಾಣ ಹೋದ ಕೂಡಲೆ ಕದನಿ ಅಥವಾ ಈಡನ್ನು ಹೊಡೆಯುತ್ತಾರೆ. ಉತ್ತರಕ್ಕೆ ತಲೆ ಬರುವಂತೆ ಮಲಗಿಸಿ ಶವದ ಮುಖಬಿಟ್ಟು ಬಟ್ಟೆಯನ್ನು ಹೊದಿಸುತ್ತಾರೆ. ತಲೆಯ ಹತ್ತಿರ ಎಣ್ಣೆ ದೀಪವನ್ನು ಹಚ್ಚಿ ಇಡುತ್ತಾರೆ. ಅಂತೆಯೆ ಅಕ್ಕಿ ಭತ್ತವನ್ನು ಇಡುತ್ತಾರೆ. ಹೆಂಗಸರಾದರೆ ಹಣೆಗೆ ಕುಂಕುಮ ಅಂಗಾಲಿಗೆ ಅರಿಶಿಣ ಹಚ್ಚುತ್ತಾರೆ. ಹಣೆಗೆ ನಾಣ್ಯವನ್ನು ಅಂಟಿಸುತ್ತಾರೆ. ಪಾದಗಳ ಹತ್ತಿರ ಧೂಪ ಇಟ್ಟು ತೆಂಗಿನಕಾಯನ್ನು ಒಡೆದು ಇಟ್ಟಿರುತ್ತಾರೆ. ಮಾದಾರನು ಸತ್ತ ಸುದ್ದಿಯನ್ನು ತಿಳಿಸುತ್ತಾನೆ. ಚಿತೆ ನಿರ್ಮಾಣ ಮಾಡುತ್ತಾನೆ.

ಚಟ್ಟ ಸಿದ್ಧಪಡಿಸುತ್ತಾನೆ. ಮಣ್ಣಿನ ಗಡಿಗೆಯಲ್ಲಿ ಚಿತೆ ಹಾಕಿಕೊಳ್ಳುತ್ತಾರೆ. ಎರಡು ಮಣ್ಣಿನ ಕೊಡಗಳಲ್ಲಿ ನೀರನ್ನು ತುಂಬಿಸಿ ಹೊತ್ತುಕೊಂಡು ಹೋಗುತ್ತಾರೆ. ಚಿತೆಯ ಹತ್ತಿರ ಚಟ್ಟ ಇಳಿಸಿ ಹೆಣದಲ್ಲಿದ್ದ ವಸ್ತ್ರ, ಒಡವೆಯನ್ನು ಬಿಚ್ಚಿಡುತ್ತಾರೆ. ಒಂದು ಮಡಿಕೆ ನೀರನ್ನು ಕಾಯಿಸಿ, ಹೆಣಕ್ಕೆ ಸ್ನಾನ ಮಾಡಿಸಿ ಹೊಸಬಟ್ಟೆಯನ್ನು ಹೊದಿಸುತ್ತಾರೆ. ತಲೆಯ ಹತ್ತಿರ ಸ್ವಲ್ಪ ಅಕ್ಕಿಯನ್ನು, ನಾಲ್ಕಾಣೆ ಹಣವನ್ನು ಕಟ್ಟಿಡುತ್ತಾರೆ. ಇದು ಮಾದಾರನ 'ತೆರ'ವಾಗಿದೆ. ಹೆಣವನ್ನು ಚಿತೆಯಮೇಲೆ ಇಟ್ಟಾದ ಮೇಲೆ ಶಿರದಕ್ಕಿಯನ್ನು ಬಟ್ಟೆ ಸಮೇತ ಕತ್ತರಿಸಿ ಮಾದರನಿಗೆ ಕೊಡುತ್ತಾರೆ. ಮಾದರನು ಶವ ಸುಡಲು ಅನುಮತಿ ನೀಡುತ್ತಾನೆ. ಕೊಡಲಿಯನ್ನು ಶವದ ಚಿತೆಯ ಮೇಲಿನಿಂದ ಆ ಕಡೆ ಈಕಡೆ ಹಾರಿಸುತ್ತಾರೆ. ಪ್ರತಿಯೊಬ್ಬರು ಎಡಗೈಯಲ್ಲಿ ಒಂದೊಂದು ಕಟ್ಟಿಗೆಯನ್ನು ಹೆಣದ ಮೇಲೆ ಇಡುತ್ತಾರೆ. ಹಿರಿಯ ಮಗ ಕೊಳ್ಳಿಯನ್ನು ಇಡುತ್ತಾನೆ. ಮಣ್ಣಿನ ಮಡಿಕೆಯಲ್ಲಿ ತುಂಬಿದ ನೀರನ್ನು ಹೊತ್ತು ಮೂರು ಸುತ್ತುಬರುತ್ತಾರೆ. ಪ್ರತಿಯೊಂದು ಸುತ್ತು ಮುಗಿದಾಗಲೂ ಒಂದೊಂದು ತೂತನ್ನು ಕತ್ತಿಯಿಂದ ಮಾಡುತ್ತಾರೆ. ನಂತರ ಮಡಿಕೆಯನ್ನು ಒಡೆಯುತ್ತಾರೆ. ಮಾದಾರನಿಗೆ ಭತ್ತವನ್ನು ಕೊಡುತ್ತಿದ್ದರು. ಗರ್ಭಿಣಿಹೆಂಗಸರು ಸತ್ತರೆ ಆಕೆಯ ಹೊಟ್ಟೆಯಲ್ಲಿರುವ ಮಗುವನ್ನು ಹೊರತೆಗೆದು ಚಿತೆಗೆ ಹಾಕಿಸುಡುತ್ತಾರೆ. ಇನ್ನೂ ಕೆಲವುಕಡೆಗಳಲ್ಲಿ ಮಗುವನ್ನು ಮಾತ್ರ ಹೂಳುತ್ತಾರೆ.[44]

ಸಾಮಾನ್ಯವಾಗಿ ಹನ್ನೊಂದನೇ ದಿನಕ್ಕೆ ಸೂತಕ ಕಳೆದುಕೊಳ್ಳುತ್ತಾರೆ. ಕುಟುಂಬದ ದಾಯಾದಿಗಳಿಗೆ ಮಾತ್ರ ಸೂತಕವಿರುತ್ತದೆ. ಸತ್ತವರಿಗಿಂತ ಕಡಿಮೆ ವಯಸ್ಸಿನವರು ಗಡ್ಡ ಮೀಸೆ ತೆಗೆಸುತ್ತಾರೆ. ಮಕ್ಕಳು ತಲೆಕೂದಲು ಗಡ್ಡಮೀಸೆ ತೆಗೆಸುತ್ತಾರೆ. ಸೂತಕದ ದಿನ ಅಗಸರು ಬಂದು ಬಟ್ಟೆಯನ್ನು ಒಗೆಯುತ್ತಾರೆ. ಕ್ಷೌರಿಕ ಕ್ಷೌರಮಾಡುತ್ತಾನೆ, ದಾಸಯ್ಯಗಳು ತೀರ್ಥಹಾಕಿ ಶುದ್ಧಮಾಡುತ್ತಾರೆ.

ಹೆಣ ಸುಟ್ಟ ಜಾಗಕ್ಕೆ ಹೋಗಿ ಬೂದಿ ತೆಗೆದು ಅಲ್ಲಿ ಕಟ್ಟೆ ಕಟ್ಟಿ ತುಳಸಿ, ತುಂಬೆ, ಸೇವಂತಿಗೆ ಈ ಮೂರುಗಿಡಗಳನ್ನು ನೆಡುತ್ತಾರೆ. ಒಂದು ಕುಡಿಕೆಯನ್ನು ಅಲ್ಲಿ ಇಡುತ್ತಾರೆ. ಅರಿಶಿನ ಕುಂಕುಮ ಹಚ್ಚಿ ವಿನಾಯಕನ ಉಂಡೆಯನ್ನು ಅಲ್ಲಿ ಇರಿಸುತ್ತಾರೆ. ಕಾಯಿ ಒಡೆದು ಪೂಜೆ ಮಾಡುತ್ತಾರೆ. ಮಧ್ಯಾಹ್ನದ ಊಟಕ್ಕೆ ಬಾಳೆಕಾಯಿ ಪಲ್ಯ, ವಡೆ, ಬೆಲ್ಲದ ಪಾಯಸ ಮಾಡುತ್ತಾರೆ. ರಾತ್ರಿ ಕಡಬು, ಮಾಂಸ, ಮದ್ಯವನ್ನು ಮಾಡುತ್ತಾರೆ. ನೆಂಟರಿಷ್ಟರು ಬರುತ್ತಾರೆ. ಈ ಊಟಕ್ಕೆ ಬಜ್ಜ ಎಂದು ಕರೆಯುತ್ತಾರೆ.

ಸತ್ತವರನ್ನು ಜಕಣಿ ಕೂಡಿಸುವುದಕ್ಕಾಗಿ ವೈಕುಂಠಸಮಾರಾಧನೆ ಮಾಡುತ್ತಾರೆ. ಸತ್ತು ಒಂದು ತಿಂಗಳೊಳಗೆ ಮಾಡಬೇಕು. ಒಂದು ಪ್ರಶಸ್ತವಾದ ದಿನಕೇಳಿ ನೆಂಟರಿಷ್ಟರು ಬಂಧುಬಳಗದವರು ಹಾಗೂ ಇತರೆ ಜಾತಿಯವರನ್ನು ಕರೆದು ಭಾರಿ ಭೋಜನ ಮಾಡಿಸುತ್ತಿದ್ದರು. ಕಾಡು ಪ್ರಾಣಿಗಳನ್ನು ಶಿಕಾರಿ ಮಾಡಿ, ಮಾಂಸದಡುಗೆ ಮಾಡುವುದು ಪದ್ಧತಿ, ಸಿಗದಿದ್ದರೆ ತಿನ್ನಬಹುದಾದ ಸಾಕುಪ್ರಾಣಿಗಳನ್ನು ಮಾಡುತ್ತಿದ್ದರು. ಆಚರಣೆಯಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ. ಒಂದೊಂದು ಕುಟುಂಬದಲ್ಲೂ ಬದಲಾದ ರೂಪಗಳನ್ನು ಕಾಣಬಹುದಾಗಿದೆ.

ಶೃಂಗೇರಿ ತಾಲ್ಲೂಕಿನಾದ್ಯಂತ ಒಕ್ಕಲಿಗ ಜನಾಂಗದವರ ಸಂಖ್ಯೆ ಅಧಿಕವಾಗಿದೆ. ಕೆಲವಷ್ಟು ನಂಬಿಕೆ ಆಚರಣೆಗಳು ಬ್ರಾಹ್ಮಣವರ್ಗದವರಲ್ಲಿರುವಂತೆ ತಾವೂ ಸಹ ಅನುಸರಿಸಿಕೊಂಡು ಹೋಗುತ್ತಿದ್ದಾರೆ. ಶೃಂಗೇರಿ ಶ್ರೀಮಠದ ವಿಧಿ ವಿಧಾನ ಕ್ರಮದಂತೆ ಸುತ್ತಮುತ್ತಲ ಎಲ್ಲಾ ಜನಾಂಗದವರು ಅನುಸರಿಸಿದ್ದಾರೆ. ಈ ಪ್ರಬಂಧದಲ್ಲಿ ಈಗಾಗಲೇ ಶ್ರೀಮಠ ಶೃಂಗೇರಿ ಹಾಗೂ ಬ್ರಾಹ್ಮಣ ಜಾತಿಯವರ ಸಂಸ್ಕೃತಿಯ ಬಗ್ಗೆ ವಿವರಣೆ ನೀಡಲಾಗಿದೆ. ಅಂತೆಯೇ ಪಲ್ಲಟವಾದ ಅಂಶಗಳನ್ನು ದಾಖಲಿಸಲಾಗಿದೆ. ಪ್ರಮುಖವಾಗಿ ಒಕ್ಕಲಿಗರಲ್ಲಿಯ ನಂಬಿಕೆ, ಆಚರಣೆ, ವ್ರತ ಮೊದಲಾದವುಗಳನ್ನು ಚರ್ಚಿಸಲಾಗಿದೆ. ಒಕ್ಕಲಿಗರ ಸಂಸ್ಕೃತಿಯು ಮಲೆನಾಡ ವಿಶಿಷ್ಟ ಸಂಸ್ಕೃತಿಯೆಂದು ಬಿಂಬಿತವಾಗಿದೆ.

ಹಿಂದೆ ಗ್ರಾಮದ ಮುಖಂಡನಾಗಿ ಊರಿನ ಗೌರವಾದರಗಳಿಗೆ ಪಾತ್ರನಾಗಿದ್ದರೂ ಆತ ಸೋಗೆ, ಹುಲ್ಲಿನ ಮನೆಗಳಲ್ಲಿ ವಾಸವಿರುತ್ತಿದ್ದ. ಮನೆಗೆ ಹೊಂದಿಕೊಂಡಂತೆ ಅನೇಕ ಕೊಟ್ಟಿಗೆ ಇರುತ್ತಿದ್ದವು. ಅವುಗಳಲ್ಲಿ ಸೌದೆ ಕೊಟ್ಟಿಗೆ, ಬಚ್ಚಲುಕೊಟ್ಟಿಗೆ, ಮೊದಲಾದವುಗಳು ಮನೆಯ ಸುತ್ತಮುತ್ತಲಿರುದ್ದವು. ಇವುಗಳು ಅವರ ಘನತೆ ಗೌರವಗಳನ್ನು ಪ್ರತಿಷ್ಠೆಯನ್ನು ಹೆಚ್ಚಿಸುತ್ತಿದ್ದವು. ಶೃಂಗೇರಿಯ ಸುತ್ತಮುತ್ತಲು ಇನ್ನೂರು ವರ್ಷಕ್ಕಿಂತ ಹಿಂದೆ ಹಂಚಿನ ಮನೆಯಿದ್ದಂತೆ ಕಂಡು ಬರುವುದಿಲ್ಲ. ಆ ಮನೆಗಳಿಗೆ ಅಡಿಕೆ ದಬ್ಬೆ, ಮರ, ಬಿದಿರು ಮೊದಲಾದ ಜಂತೆಗಳನ್ನು ಬಳಸುತ್ತಿದ್ದರು. ಜೆಂಜೀರಿಗೆ, ಓಟೆ, ಬೆತ್ತ, ಬಳ್ಳಿ ಮೊದಲಾದವುಗಳನ್ನು ಮನೆಯ ನಿರ್ಮಾಣದಲ್ಲಿ ಬಳಸುತ್ತಿದ್ದರು. ಮನೆಯ ಮಾಡನ್ನು ಹೊಳೆಬೈಸಿ ಬೂದುಬೀಳು ಇತರೆ ಬಲಿಷ್ಠ ಬಳ್ಳಿಗಳನ್ನು ಬಳಸಿ ಕಟ್ಟುತ್ತಿದ್ದರು. ಎಂಬತ್ತು ತೊಂಬತ್ತರ ದಶಕದವರೆಗೂ ಈ ರೀತಿಯ ಮನೆಗಳನ್ನು ಕಾಣಲು ಸಿಗುತ್ತಿತ್ತು. ಈಗ ಸರ್ಕಾರ ನೀಡುತ್ತಿರುವ ಮನೆಗಳು ಹಾಗೂ ಅವರೇ ನಿರ್ಮಾಣ ಮಾಡುವ ಮನೆಗಳು ಆಧುನಿಕ ಶೈಲಿಯ ವಸ್ತು ಉಪಕರಣ ಹಾಗೂ ವಾಸ್ತುಗಳನ್ನೊಳಗೊಂಡವುಗಳಾಗಿವೆ. ಈಗಲೂ ಕೊಟ್ಟಿಗೆಗಳನ್ನು ಕಾಣಬಹುದಾಗಿದೆ. ಗುಡ್ಡಗಾಡು ಪ್ರದೇಶ ಹಾಗೂ ತೀರಹಳ್ಳಿಯ ಪ್ರದೇಶದಲ್ಲಿ ಈಗಲೂ ಸೋಗೆ, ಹುಲ್ಲಿನ ಮನೆ ಕೊಟ್ಟಿಗೆಗಳಿವೆ.

ಹುಲ್ಲು, ಸೋಗೆಯ ನಂತರ ಕೈ ಹಂಚಿನ ಮನೆಗಳು ಪ್ರಾರಂಭಗೊಂಡವು. ತರುವಾಯ ಮಂಗಳೂರು ಹಂಚು, ಶೃಂಗೇರಿ ಹಂಚು ಬಳಸಿ ಮನೆ ನಿರ್ಮಿಸುತ್ತಿದ್ದರು. ಈಗ ಬಹುತೇಕರ ಸಿಮೆಂಟಿನ ಆರ್.ಸಿ.ಸಿ. ಮನೆಗಳನ್ನು ಅವುಗಳಿಗೆ ಬೇಕಾಗುವ ಟೈಲ್ಸ್, ಗ್ಲಾಸ್, ಫೈಬರ್, ಸಿಮೆಂಟ್ ಬಾಗಿಲು, ಕಿಟಕಿ ಮೊದಲಾದ ನೂತನ ವಸ್ತುಗಳನ್ನು ಬಳಸಲಾಗುತ್ತಿದೆ. ಜಮೀನ್ದಾರರು ಹಂಚಿನ ಮನೆಯನ್ನು ಮಾಡುವಾಗ ಉಪ್ಪರಿಗೆ, ಒಳಾಂಗಣ, ಚೌಕಿ, ಪ್ರಾಕಾರ, ಜಗಲಿ, ಕಿರುಜಗಲಿ ಮೊದಲಾದವುಗಳನ್ನೊಳಗೊಂಡ ಬೃಹದಾಕಾರದ ಮನೆಯನ್ನು ನಿರ್ಮಾಣ ಮಾಡುತ್ತಿದ್ದರು. ಶೃಂಗೇರಿ ಸಮೀಪದ ಕೂತಗೋಡು ನಾಗಭೂಷಣರಾಯರ ಮನೆ, ಕವಿಲುಕುಡಿಗೆ ಸುಬ್ರಾಯರ ಮನೆ, ಹುಲುಗಾರು ಚಂದ್ರಮೌಳಿರಾಯರ ಮನೆ ಮೊದಲಾದವುಗಳು ಹಳೆಯ ಮನೆಗಳಾದರೂ ಆಧುನಿಕ

ಮಾರ್ಪಾಟನೊಂದಿಗೆ ಹಳೆಯ ಸ್ವರೂಪವಿರುವ ಮನೆಗಳನ್ನು ಕಾಣಬಹುದಾಗಿದೆ. ಇಂತಹ ಮನೆಗಳು ಚಳಿ, ಮಳೆ, ಬೇಸಿಗೆಗೆ ಹೊಂದಿಕೆಯಾಗುತ್ತಿದ್ದವು. ಗಾಳಿ ಬೆಳಕಿಗೆ ಅನುಕೂಲಕರವಾದ ವ್ಯವಸ್ಥೆಯಿರುತ್ತಿತ್ತು. ಸಂಪ್ರದಾಯಬದ್ಧವಾದ ಬಾಗಿಲ ನಿರ್ಮಾಣ, ದೇವರ ಕೋಣೆ ಇತ್ಯಾದಿಗಳನ್ನು ಕಾಣಬಹುದಾಗಿದೆ.

ಮನೆಯ ಒಳಭಾಗದ ನೆಲವನ್ನು ಸಾರಿಸುವಾಗ (ಬಳಿಯುವುದು) ಕರಿಯನ್ನು ಬಳಸುತ್ತಿದ್ದರು. ಕರಿಯ ಜೊತೆಗೆ ಹಸುವಿನ ಸಗಣಿಯನ್ನು ಸೇರಿಸುತ್ತಿದ್ದರು. ಅಂಟಾಗಲು ಕೆಲವು ತೆಪ್ಪೆಯ ಗುಳ ಬೀಳಿನ ಗುಳವನ್ನು ಬಳಸುತ್ತಿದ್ದರು. ಕರಿಯನ್ನು ಅಡಿಕೆ ಕೊನೆಮಟ್ಟೆಯನ್ನು ಸುಟ್ಟು ಮಾಡುತ್ತಿದ್ದರು. ಇನ್ನು ಕೆಲವರು ಅಡಿಕೆ ಕೊನೆಮಟ್ಟೆಯಿಲ್ಲದಿದ್ದರೆ, ಕಬ್ಬಿನ ಅಲ್ಲಟ್ಟೆಯನ್ನೋ ಅಥವಾ ಲಂಟಾನ ಕಡ್ಡಿಯನ್ನೋ ಸುಟ್ಟು ಕರಿಯನ್ನು ಮಾಡಿ ಉಪಯೋಗಿಸುತ್ತಿದ್ದರು. ನೆಲದಿಂದ ಮೂರು ನಾಲ್ಕು ಅಡಿ ಎತ್ತರಕ್ಕೆ ಮಣ್ಣಿನ ಗೋಡೆಗೆ ಕೆಮ್ಮಣ್ಣನ್ನು (ಮಣ್ಣನ್ನು ಕದರಿ ಅದರ ಮಣ್ಣು ಮಿಶ್ರಿತ ನೀರು) ಹಚ್ಚುತ್ತಿದ್ದರು. ಅದರ ಮೇಲ್ಭಾಗಕ್ಕೆ ಜೇಡಿಯನ್ನು ಹದಮಾಡಿ ಹಚ್ಚುತ್ತಿದ್ದರು. ಕೆಲ ಶ್ರೀಮಂತರು, ಅನುಕೂಲವಿದ್ದವರು ಸುಣ್ಣವನ್ನು ಗೋಡೆಗೆ ಹಚ್ಚುತ್ತಿದ್ದರು. ಮನೆಯ ಹೊರಭಾಗಕ್ಕೆ, ಕೊಟ್ಟಿಗೆಗೆ, ಕಣ, ಅಂಗಳ ಮುಂತಾದ ಸ್ಥಳಗಳಿಗೆ ಸಗಣಿ ನೀರನ್ನು ಬಳಿದು ಧೂಳು ಏಳದಂತೆ ಶುದ್ಧವಾಗಿಟ್ಟುಕೊಂಡಿರುತ್ತಿದ್ದರು. ಈಗಲೂ ಕೃಷಿ ಚಟುವಟಿಕೆಗಳನ್ನು ಮಾಡಲು, ಅದನ್ನು ಶೇಖರಣೆ ಮಾಡಲು ಸಗಣಿ ನೀರನ್ನು ಹೊಡೆಯುವುದುಂಟು. ಆಧುನಿಕತೆಯ ಸ್ಪರ್ಶದಿಂದ ಬಹುತೇಕ ಕ್ರಮಗಳು ಮರೆಯಾಗಿ ಹೋಗಿವೆ. ಆದರೆ ಹಳ್ಳಿಯಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ವಾಸವಿರುವವರ ಕುಟುಂಬದವರು ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಓಟೆ, ಬಿದಿರು, ಬೆತ್ತ, ಬೀಳು ಮೊದಲಾದವುಗಳಿಂದ ಅಗತ್ಯ ವಸ್ತು ಉಪಕರಣಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಕೃಷಿಯೇ ಪ್ರಧಾನವೃತ್ತಿಯಾದುದರಿಂದ ಇದನ್ನೇ ಆಧರಿಸಿಕೊಂಡಿದ್ದರು. ಇಂತಹ ವಸ್ತುಗಳು ಹಾಳಾಗದಂತೆ ಸಮರ್ಪಕವಾಗಿ ಇರಬೇಕಾದರೆ ಅವುಗಳಿಗೆ ಕಾಲ ಕಾಲಕ್ಕೆ ಸಗಣಿ ಮಣ್ಣು, ಸಗಣಿ ಕರಿ ಅಥವಾ ಬರಿ ಸಗಣಿಯನ್ನು ಒಳಗೆ ಹೊರಗೆ ಬಳಿಯುತ್ತಿದ್ದರು. ಇತ್ತೀಚಿಗೆ ಪಲ್ಲಟವಾಗಿ ಕೆಲವರು ಕಾಗದದ ಚೂರುಗಳನ್ನು ನೀರಿನಲ್ಲಿ ನೆನೆಸಿ ಅದಕ್ಕೆ ಮೆಂತ್ಯವನ್ನು ಸೇರಿಸಿ ಕಡೆದು ನುಣ್ಣಗಿನ ಹಿಟ್ಟನ್ನು ಅದಕ್ಕೆ ಬಳಿಯುತ್ತಾರೆ. ದೀಪಾವಳಿ ಹಬ್ಬದ ಮೊದಲು ಮನೆಯಲ್ಲಿರುವ ಎಲ್ಲಾ ಬುಟ್ಟಿ, ಸಣ್ಣತಟ್ಟಿ, ಇತರೆ ವಸ್ತುಗಳಿಗೆ ಬಳಿಯುತ್ತಿದ್ದರು. ನಂತರ ಬಳಿದ ವಸ್ತುಗಳಿಗೆ ಜೇಡಿ ಮತ್ತು ಕೆಮ್ಮಣ್ಣಿನ ಪಟ್ಟಿಯನ್ನು ಎಳೆಯುತ್ತಿದ್ದರು. ಮಧ್ಯದಲ್ಲಿ ಸೂರ್ಯಚಂದ್ರರ ಚಿತ್ರಗಳನ್ನು ಬರೆಯುತ್ತಿದ್ದರು. ಇನ್ನು ಕೆಲವರು ದೇವರ ಚಿಹ್ನೆಗಳನ್ನು ಬರೆಯುತ್ತಿದ್ದರು.

ದೀಪಾವಳಿಯ ಹಬ್ಬದಂದು ರೈತರು ಬಳಸುತ್ತಿದ್ದ ನೇಗಿಲು, ನೊಗ, ನೊಳ್ಳಿ ಇತರೆ ಕೃಷಿ ಸಂಬಂಧಿ ವಸ್ತುಗಳನ್ನು ತೊಳೆದು ಒಣಗಿಸಿದ ನಂತರ ಅವುಗಳಿಗೆ ಅಲಂಕಾರಿಕವಾಗಿ ಜೇಡಿ ಕೆಮ್ಮಣ್ಣು ಪಟ್ಟಿಯನ್ನು ಎಳೆಯುತ್ತಿದ್ದರು. ಕಬ್ಬಿಣದ ವಸ್ತುಗಳಿದ್ದರೆ ಅವುಗಳನ್ನು ತೊಳೆದು ಒಣಗಿಸಿದ ನಂತರ ಎಣ್ಣೆಯ

ಲೇಪನ ಮಾಡುತ್ತಿದ್ದರು. ನಾಡಕೋವಿ (ಬಂದೂಕು) ಯನ್ನು ತೊಳೆದು ಒಣಗಿಸಿ ಎಣ್ಣೆ ಲೇಪಿಸುವುದು. ನಂತರ ಈ ಎಲ್ಲಾ ವಸ್ತು ಉಪಕರಣಗಳನ್ನು ಇಟ್ಟು ಪೂಜೆ ಮಾಡುವುದು. ಮನೆಯ ಒಳಗೆ ಪ್ರಶಸ್ತವಾದ ಖಾಯಂ ಬಳಕೆಯ ಜಾಗದಲ್ಲಿ ಕ್ರಮವಾಗಿ ಜೋಡಿಸಿ ಇಟ್ಟು ಪೂಜೆ ಮಾಡುವುದು ರೂಢಿಯಲ್ಲಿತ್ತು. ಇವುಗಳ ಜೊತೆಗೆ ತಾವು ಬೆಳೆದ ಅಡಿಕೆ, ಭತ್ತ, ಕಾಳ್ಷಿ ಬೀಜ ಮೊದಲಾದವುಗಳನ್ನು ಕೊಳಗ, ಬುಟ್ಟಿಗಳಲ್ಲಿ ತುಂಬಿಡುತ್ತಿದ್ದರು. ಒಂದು ತಾಮ್ರದ ತಂಬಿಗೆಯೊಳಗೆ ನೀರು ಹಾಕಿ ಗಂಧಹಚ್ಚಿ ತೋರಣಕಟ್ಟಿ ಅದರ ಮೇಲೆ ಒಂದು ತೆಂಗಿನಕಾಯಿಯನ್ನು ಇಟ್ಟು ಕಳಶ ಮಾಡುತ್ತಿದ್ದರು. ಇದನ್ನು ಪ್ರಧಾನದೇವರೆಂದು ನಂಬಿದ್ದಾರೆ. ಇದರ ಪಕ್ಕದಲ್ಲಿ ಗ್ರಂಥಗಳನ್ನು, ಒಡವೆ, ಹಣವನ್ನು ಇಡುತ್ತಾರೆ. ಇದನ್ನು ಮೇಳದೇವರೆಂದು ಕರೆಯುತ್ತಾರೆ. ಈ ಮೇಳ ದೇವರ ಮೇಲ್ಭಾಗದಲ್ಲಿ ಫಲವನ್ನು ಕಟ್ಟುತ್ತಾರೆ. ಸಂಜೆ ದೀಪದ ಕೋಲನ್ನು ಇದಕ್ಕೆ ಹಚ್ಚಿ ದೀಪೋಳಿಗೆ ಹೇಳಿ ಪೂಜಿಸುತ್ತಾರೆ. ಸಂಜೆ ದೀಪವನ್ನು ಅದರ ಮುಂದೆ ಹಚ್ಚುತ್ತಾರೆ. ಹೀಗೆ ಮೂರು ದಿನವಿಡುತ್ತಾರೆ. ಮೂರುದಿನವೂ ಬೆಳಿಗ್ಗೆ ಮತ್ತು ಸಂಜೆ ಪೂಜೆ ಮಾಡುತ್ತಾರೆ. ಮಾರನೆಯ ದಿನ ಭಕ್ಷ್ಯ ಭೋಜನದ ಎಡೆಯನ್ನು ಇಟ್ಟು ದೇವರನ್ನು ಆಹ್ವಾನಿಸಿ ನೀರುಬಿಟ್ಟು ಆ ಪದಾರ್ಥವನ್ನು ಪ್ರಸಾದ ರೂಪದಲ್ಲಿ ಮನೆಯವರೆಲ್ಲರೂ ಊಟಮಾಡುತ್ತಾರೆ. ಶೂದ್ರವರ್ಗದ ಕೆಲವರಲ್ಲಿ ಮೇಳದೇವರಿಗೆ ಪೂಜೆಯ ಜೊತೆಗೆ ಕೋಳಿ ಬಲಿ ಕೊಡುವುದಿದೆ. ನಂತರ ಅದರ ಸಾಂಬಾರನ್ನು ಮಾಡಿ ಎಡೆಯಿಟ್ಟು ನಂತರ ಊಟ ಮಾಡುತ್ತಾರೆ.

ದೀಪಾವಳಿಯ ದಿನದಂದು ದನಕರುಗಳಿಗೆ ಸ್ನಾನ ಮಾಡಿಸಿ ಅವುಗಳ ದೇಹಕ್ಕೆ ಜೇಡಿ ಮತ್ತು ಕೆಮ್ಮಣ್ಣಿನಿಂದ ಬಿಳಿ ಕೆಂಪು ಪಟ್ಟಿಯನ್ನು ಎಳೆಯುತ್ತಾರೆ. ಕೋಡಿಗೆ (ಕೊಂಬು) ಒಂದಕ್ಕೆ ಕೆಂಪು ಇನ್ನೊಂದಕ್ಕೆ ಬಿಳಿ ಅಥವಾ ಅರ್ಧ ಕೆಂಪು, ಅರ್ಧ ಬಿಳಿ ಬಣ್ಣ ಹಚ್ಚುತ್ತಾರೆ. ಇನ್ನು ಕೆಲವರು ದನಕರುಗಳ ದೇಹಕ್ಕೆ ಸೂರ್ಯ ಚಂದ್ರರ ಚಿತ್ರ ಬರೆಯುವುದು, ವೃತ್ತಾಕಾರವಾಗಿ ಅಚ್ಚನ್ನು ಮೈಯಲ್ಲಿ ಒತ್ತುವುದಿದೆ. ಮುಹೂರ್ತಕ್ಕೆ ಸರಿಯಾಗಿ ಗೋಪೂಜೆ ಮಾಡಿ ಬಾಳೆಹಣ್ಣು ಮೆಂತ್ಯದ ದೋಸೆಯನ್ನು ಕೊಡುತ್ತಾರೆ. ಅವುಗಳ ಕೊರಳಿಗೆ ಗೋಮಾಲೆಯನ್ನು ಕಟ್ಟುತ್ತಾರೆ. ಮಾಲೆಯನ್ನು ಮಾಡಲು ದಾರವಾಗಿ ಬಸರಿ ಮರದ ತೆಪ್ಪೆಯ ನಾರನ್ನು ಬಳಸುತ್ತಾರೆ. ಗೋಮಾಲೆಗೆ ವೀಳ್ಯೆದೆಲೆ, ಬಾಳೆಹಣ್ಣು, ಏಲಕ್ಕಿಗೆರೆ, ಪಚ್ಚೆತೆನೆ, ಸಿಂಗಾರ, ಅಡಿಕೆಕಾಯಿ, ಕಿತ್ತಲೆ ಸೊಪ್ಪಿರುವ ಹಣ್ಣು ಅಥವಾ ಕಾಯಿಗಳ ಮಾಲೆಯನ್ನು ಕಟ್ಟುತ್ತಾರೆ. ದನಕರುಗಳ ಹಣೆಗೆ ಎಣ್ಣೆ ಸವರಿ, ಅರಸಿನ, ಕುಂಕುಮ ಹಚ್ಚುವುದು ಕಾಲು ತೊಳೆಸುವುದು ಪೂಜಾಕ್ರಮದಲ್ಲಿ ಸೇರಿದೆ.

ಗೋಪೂಜೆಯಾದ ನಂತರ ಗೋವುಗಳನ್ನು ಮೇಯಲು ಬಿಡುತ್ತಾರೆ. ಆಗ ದನದ ಕೊಟ್ಟಿಗೆಯ ಬಾಗಿಲ ಕೆಳಗೆ ತೊಳೆದು ಪಟ್ಟಿ ತೆಗೆದ ಒನಕೆಯನ್ನು ಅಡ್ಡಲಾಗಿಡುತ್ತಾರೆ. ಅವು ದಾಟಿ ಹೋದ ನಂತರ ಕೊಟ್ಟಿಗೆಯ ಗೊಬ್ಬರವನ್ನು ಸಂಪೂರ್ಣವಾಗಿ ತೆಗೆದು ಶುದ್ಧ ಮಾಡಿ ಹೊಸಮಣ್ಣನ್ನು ಹಾಕಿ ಸಮತಟ್ಟು ಮಾಡುತ್ತಾರೆ. ರಿಪೇರಿ ಕೆಲಸವಿದ್ದರೆ ಸರಿಪಡಿಸುತ್ತಾರೆ. ನಂತರ ಸೊಪ್ಪನ್ನು

ತಳೆದು ಕೊಟ್ಟಿಗೆ ಬಾಗಿಲಿಗೆ ಒನಕೆಯನ್ನು ಅಡ್ಡವಿಟ್ಟು ದನಕರುಗಳು ಒಳಗೆ ಬಂದಮೇಲೆ ಅದನ್ನು ತೆಗೆಯುತ್ತಾರೆ.

ಬೆಳಿಗ್ಗೆ, ಮಧ್ಯಾಹ್ನ ಎರಡು ಬಾರಿಯೂ ಊಟದ ಬದಲಿಗೆ ದೋಸೆಯನ್ನೇ ತಿನ್ನುತ್ತಾರೆ. ಆ ದಿನ ಅನ್ನ ಸಾಂಬಾರು ಮಾಡುವುದಿಲ್ಲ. ಸಂಜೆ ತೋಟ, ಗದ್ದೆ, ನೀರಿನ ಬಾವಿ, ಕಣ, ದನದ ಕೊಟ್ಟಿಗೆ, ತುಳಸಿಗಿಡ, ಊರಿನ ಪ್ರಮುಖದೇವರಿಗೆ, ದೆವ್ವಗಳಿಗೆ, ನಾಡಿನ ಪ್ರಸಿದ್ಧ ದೇವರ ಹೆಸರನ್ನು ಹೇಳಿ ದೀಪದ ಕೋಲನ್ನು ಹಚ್ಚುತ್ತಾರೆ. ದೀಪದ ಕೋಲನ್ನು ಹಚ್ಚಲು ಹೋಗುವವರು ಕೈಯಲ್ಲಿ ದೊಂದಿಯನ್ನು ಹಿಡಿದುಕೊಂಡು ಹೋಗುತ್ತಾರೆ. ದೊಂದಿಯನ್ನು ಅಡಿಕೆದಬ್ಬೆ ಅಥವಾ ಜೆಂಜೀರಿಗೆ ದಬ್ಬೆಯ ಚೂರುಗಳಿಂದ ಮಾಡಿರುತ್ತಾರೆ. ಅದು ಉರಿಯಲು ಹರಳುಮಡಿಯನ್ನು ಎರಚುವುದಿದೆ. ದೀಪದ ಕೋಲನ್ನು ಮುಸ್ಸಂಜೆಯ ಹೊತ್ತಿನಲ್ಲಿ ಹತ್ತಿಸುತ್ತಾರೆ.

ದೀಪಹಚ್ಚಿ ಮನೆಗೆ ಬಂದು ಕೊಲೆ (ಕೂಲೆ)ಗೆ ಇಡುವುದಿದೆ. ಬಾಳೆ ಎಲೆ ಮೇಲುಭಾಗದಲ್ಲಿ ಮಣೆ, ಮಣೆ ಮೇಲೆ ಗಿಂಡಿ, ಗಿಂಡಿ ಎದುರಿಗೆ ದೀಪಹಚ್ಚಿ ಗಂಧದ ಚಕ್ಕೆಯ ಧೂಪವನ್ನು ಹಾಕುತ್ತಾರೆ. ನಂತರ ಮೇಳದಾರಿ ಅಥವಾ ಮೇಳದೇವರ ಪೂಜೆಯನ್ನು ಮಾಡಲಾಗುತ್ತದೆ. ಮೇಳದಾರಿ ಬಿಚ್ಚುವವರೆಗೆ ಒಬ್ಬರು ಅಲ್ಲಿಯೆ ಕಾವಲು ಮಲಗುತ್ತಾರೆ.

ದೀಪಾವಳಿಯ ಹಿಂದಿನ ದಿನವನ್ನು 'ಮಣ್ಣುಬೂದಿ' ಎಂದು ಕರೆಯುತ್ತಾರೆ. ಆ ದಿನ ಮನೆ, ಕೊಟ್ಟಿಗೆ, ಕಣ, ಅಂಗಳಗಳನ್ನು ಶುದ್ಧ ಮಾಡುತ್ತಾರೆ. ಎರಡನೆಯ ದಿನ 'ಗನಾಬೂದಿ' ಎಂದು ಕರೆಯುತ್ತಾರೆ. ಕಹಿ ಹಿಂಡಲೆ ಬೀಳನ್ನು ಸ್ನಾನದ ಹಂಡೆಯ ಕಂಠಕ್ಕೆ ಸುತ್ತಲಾಗುತ್ತದೆ. ಬಚ್ಚಲಹಂಡೆಯನ್ನು ತೊಳೆದು ಶುದ್ಧ ಮಾಡಿ ಹೊಸನೀರನ್ನು ತುಂಬಿಡುತ್ತಾರೆ. ಒಲೆಗೆ ಬಳಿದು ರಂಗೋಲಿ ತೆಗೆದು ಪಚ್ಚೆತೆನೆ, ಸಿಂಗಾರ, ಹಣ್ಣು ಇತ್ಯಾದಿಗಳಿಂದ ಅಲಂಕರಿಸುವರು. ಮಾರನೆಯದಿನ ಬೆಳಿಗ್ಗೆ ಹಂಡೆ ಒಲೆಗೆ ಪೂಜೆ ಮಾಡಿ ಬೆಂಕಿ ಹಾಕುತ್ತಾರೆ. ನಂತರ ಮನೆಯವರೆಲ್ಲರೂ ಸ್ನಾನ ಮಾಡುತ್ತಾರೆ. ಮಕ್ಕಳು ದೊಡ್ಡವರೆಲ್ಲರೂ ಎಣ್ಣೆಯನ್ನು ಮೈಗೆಲ್ಲ ಹಚ್ಚಿ ಅಭ್ಯಂಜನ ಸ್ನಾನ ಮಾಡುತ್ತಾರೆ. ಇದನ್ನು ಸ್ನಾನದ ಹಬ್ಬವೆಂದು ಕರೆಯುತ್ತಾರೆ.

ಆ ದಿನ ಬೆಳಿಗ್ಗೆ ಮಾದಾರ ಬಂದು ಭೂಮಿ ಪೂಜೆ ಮಾಡಿದ ಜಾಗ, ಹೊಸಲು, ಕಣ ಮೊದಲಾದ ಪ್ರಮುಖ ಜಾಗಕ್ಕೆ ಹೂವನ್ನು ಹಾಕುತ್ತಾನೆ. ಮಾದಾರ ಜೋಯಿಸರ ಹತ್ತಿರ ಕೇಳಿ ಯಾವ ಜಾತಿಯ ಹೂವನ್ನು ಹಾಕಬೇಕೆಂದು ಕೇಳಿಕೊಂಡಿರುತ್ತಾನೆ. ಹೆಚ್ಚಾಗಿ ಓಟೆಎಲೆ, ಓಲೆ, ಕೇದಿಗೆ ಹೂವಿನ ಎಸಳು ಅಥವಾ ಗರಿ, ತೊಂಡೆಹುಲಿಸೊಪ್ಪನ್ನು ಹಾಕುತ್ತಾನೆ. ಮಾದಾರನಿಗೆ ಎಡೆ ಕೊಡುತ್ತಾರೆ. ಇತ್ತೀಚೆಗೆ ಎಡೆ ಕೊಡುವ ಬದಲಿಗೆ ಅಕ್ಕಿಯನ್ನು, ಹಣವನ್ನು ಕೊಡುತ್ತಾರೆ. ಬಹುಶ: ಎಲ್ಲಾ ಮನೆಯಲ್ಲಿ ಕೊಟ್ಟ ಎಡೆಯನ್ನು ತಿನ್ನಲು ಸಾಧ್ಯವಾಗದೆ ಹಾಳಾಗುವ ಕಾರಣ ಈ ಬದಲಾವಣೆಯಾದಂತಿದೆ.

ಮಲೆನಾಡ ಭಾಗದಲ್ಲಿ ಬೇರೆಲ್ಲಾ ಹಬ್ಬಾಚರಣೆಗಿಂತ ದೀಪಾವಳಿಯು ಹೆಚ್ಚು ಸಂಭ್ರಮ ಸಡಗರ, ಭಕ್ತಿಯಿಂದ ಮಾಡುತ್ತಿದ್ದರು. ಆಧುನಿಕ ಕಾಲದಲ್ಲಿ ಈಗ ಹಬ್ಬಾಚರಣೆಯು ಯಾಂತ್ರಿಕವಾಗಿ ಕಾಟಾಚಾರವಾಗಿ ಆಚರಿಸಲ್ಪಡುತ್ತದೆ. ಹೆಚ್ಚಿನವರಿಗೆ ಅದರ ಮಹತ್ವವೇ ಗೊತ್ತಿಲ್ಲ. ಮುಂದಿನ ದಿನಗಳಲ್ಲಿ ಇಂತಹ ಹಬ್ಬಾಚರಣೆಯ ವಿಶೇಷತೆಯೇನೆಂಬುದನ್ನು ಯುವಜನಾಂಗದವರು ತಿಳಿಯದೆ ಕಣ್ಮರೆಯಾಗಿ ಹೋಗುವುದರಲ್ಲಿ ಯಾವ ಸಂಶಯವೂ ಇಲ್ಲ.

ತುಳಸಿ ಪೂಜೆ ಹಾಗೂ ದೀಪಾರಾಧನೆಯನ್ನು ಶೃಂಗೇರಿಯ ಕಸಬಾ ಪ್ರಾಂತ್ಯದ ಹೆಚ್ಚಿನ ಮನೆಯವರು ನಡೆಸಿಕೊಂಡುಬರುತ್ತಿದ್ದಾರೆ. ಕಿಗ್ಗಾ ಹೋಬಳಿಯಲ್ಲಿ ತುಳಸಿ ಗಿಡ ನೆಡುವುದಿಲ್ಲ. ಅದರಂತೆ ತುಳಸಿ ದೀಪಾರಾಧನೆಯಿಲ್ಲ. ಜಾತಿ ಧರ್ಮಕ್ಕನುಗುಣವಾಗಿ ಆಚರಣೆಯಲ್ಲಿ ವೈವಿಧ್ಯತೆಯಿದೆ. ತುಳಸಿದೀಪದ ದಿನ ನೆಂಟರಿಷ್ಟರೆಲ್ಲರು ಹಾಗೂ ಅಕ್ಕಪಕ್ಕದ ಮನೆಯವರೆಲ್ಲರನ್ನು ಕರೆದು ಆಚರಿಸುತ್ತಾರೆ. ಬಂದವರಿಗೆ ಹುಸಲಿ, ಕೋಸಂಬರಿ, ಅವಲಕ್ಕಿ, ಹಣ್ಣು ಮೊದಲಾದವನ್ನು ದೇವರಿಗೆ ನೈವೇದ್ಯ ಮಾಡಿ ಪನಿವಾರವನ್ನು ಕೊಡುತ್ತಾರೆ. ತುಳಸಿಕಟ್ಟೆ ಸಾರಿಸಿ, ರಂಗೋಲಿ ತೆಗೆದು, ಅರಶಿನ ಕುಂಕುಮ ಹಚ್ಚಿ ಶೃಂಗಾರ ಮಾಡಿ ನಾಲ್ಕು ಮೂಲೆಗೂ ಬಾಳೆ ಕಂಬ, ಕಬ್ಬನ್ನು ನಿಲ್ಲಿಸಿ ಎಲ್ಲಾ ದಿಕ್ಕಿಗೂ ದಬ್ಬೆಗಳನ್ನು ಇಟ್ಟು ಅದರ ಮೇಲೆ ದೀಪಗಳನ್ನು ಸಾಲಾಗಿ ಇಟ್ಟು ಹಚ್ಚುತ್ತಾರೆ. ತಿರುಪತಿಯ ತಿಮ್ಮಪ್ಪನಿಗೆ, ಧರ್ಮಸ್ಥಳದ ಮಂಜುನಾಥಸ್ವಾಮಿಗೆ ಇತರೆ ದೇವಾನುದೇವತೆಗಳ ಹೆಸರಿನಲ್ಲಿ ಹಣವನ್ನು ತೆಗೆದಿಡಲಾಗುತ್ತದೆ. ಗೋವಿಂದ ಎನ್ನುತ್ತ ಹಣದ ಚೀಲವನ್ನು ತಲೆಯ ಮೇಲಿಟ್ಟುಕೊಂಡು ತುಳಸಿದೇವರಿಗೆ ಪ್ರದಕ್ಷಿಣೆ ಬರುತ್ತಾರೆ. ದೀಪಹಚ್ಚಿ ಹಣ್ಣುಕಾಯಿ ಮಾಡುತ್ತಾರೆ. ಮಲೆನಾಡಭಾಗದಲ್ಲಿ ವಿಶೇಷವಾಗಿ ಕಾರ್ತಿಕ ಷಷ್ಠಿ ಯಂದು ತುಳಸಿದೀಪವನ್ನು ಮಾಡುತ್ತಾರೆ.

ನಾಮಧಾರಿ ಒಕ್ಕಲಿಗರಲ್ಲಿ ತುಳಸಿ ಪೂಜೆ (ದೀಪಾರಾಧನೆ) ವಿಶೇಷವಾಗಿ ನಡೆಯುತ್ತದೆ. ಕಾರ್ತಿಕ ಮಾಸದ ನಾಲ್ಕು ವಾರಗಳಲ್ಲಿ ಒಂದು ಶನಿವಾರ ವಿಶೇಷವಾಗಿ ಆಚರಿಸುತ್ತಾರೆ. ಆ ದಿನ ಮಾಂಸಾಹಾರ ಮದ್ಯವನ್ನು ಸೇವಿಸುವುದಿಲ್ಲ. ನೆಲವನ್ನು ಕರಿಯಿಂದ ಸಾರಿಸುತ್ತಾರೆ. ಪಾತ್ರೆಗಳನ್ನು ತೊಳೆದು, ಬೆಳಗಿ, ಶುಭ್ರವಾಗಿಟ್ಟುಕೊಳ್ಳುತ್ತಾರೆ. ಆ ದಿನ ಉಪವಾಸವಿದ್ದು ಬೆಳಿಗ್ಗೆ ಮತ್ತು ಮಧ್ಯಾಹ್ನ ದೋಸೆಯನ್ನು ತಿನ್ನುತ್ತಾರೆ. ಹಲಸಿನ ಮತ್ತು ಮಾವಿನ ಎಲೆಗಳಿಂದ ಮಾಡಿದ ತೋರಣವನ್ನು ಗದ್ದೆಯ ಭತ್ತದ ಕೆವಿಗೆ ಕಟ್ಟಿ ಪೂಜೆ ಮಾಡಿ ಕದಿರನ್ನು ತರುತ್ತಾರೆ. ಬಾಗಿಲಿಗೆ, ದೇವರಕೋಣೆಗೆ ತುಳಸಿ ಮಂಟಪದ ಮುಂದೆ ತೋರಣಗಳನ್ನು ಕಟ್ಟುತ್ತಾರೆ. ಗದ್ದೆಯಿಂದ ಗಂಟೆ, ಜಾಗಟೆಯ ಶಬ್ದದೊಂದಿಗೆ ಕದಿರನ್ನು ಮನೆಗೆ ತಂದು ತುಳಸಿಯ ಮುಂಭಾಗದಲ್ಲಿ ಪೂಜೆ ಮಾಡಿ ಮನೆಯ ಬಾಗಿಲುಗಳ ಮೇಲೆ ನಿಲುವಿಗೆ ಕಟ್ಟುತ್ತಾರೆ. ಬೆಂಕಟಿಗೆ, ತೊಲೆಗಳಿಗೆ, ಅಟ್ಟಕ್ಕೆ ಕದಿರನ್ನು ಕಟ್ಟುತ್ತಾರೆ.

ಕಿಗ್ಗಾ ಹೋಬಳಿಯ ಜನರು ಕಿಗ್ಗಾದ ಋಷ್ಯಶೃಂಗೇಶ್ವರ ಸ್ವಾಮಿಗೆ ಭತ್ತದ ತೆನೆಯನ್ನು ಸಮರ್ಪಿಸಿ ದೇವಾಲಯದ ಬಾಗಿಲಿಗೆ ಕಟ್ಟುತ್ತಾರೆ. ದೇವರ ಪೂಜೆ ಮಾಡಿ ನಂತರ ಭತ್ತದ ತೆನೆಯನ್ನು

ಮನೆಯ ಬಾಗಿಲಿಗೆ ಹಾಗೂ ದೇವರ ಫೋಟೋ ಹಾಗೂ ಇನ್ನಿತರ ಸ್ಥಳಗಳಲ್ಲಿ ಕಟ್ಟುತ್ತಾರೆ. ಮನೆಯದೇವರ ಸ್ಥಳ, ನಾಗರಬನ, ಚೌಡೇಶ್ವರಿ ಬನ ಮೊದಲಾದ ಊರ ದೇವತೆಯ ಸ್ಥಳಗಳಲ್ಲಿ ಭತ್ತದ ತೆನೆಯನ್ನು ಕಟ್ಟುತ್ತಾರೆ.

ನಾಮಧಾರಿ ಒಕ್ಕಲಿಗರ ಮನೆಯಲ್ಲಿ ಸಾಯಂಕಾಲ ತುಳಸಿಗೆ ದೀಪಹಚ್ಚಿಟ್ಟು, ಶಂಖ ಊದಿ ಜಾಗಟೆ ಬಾರಿಸಿ, ಭಜನೆ ಮಾಡುತ್ತಾರೆ. ಈಗ ಬಹುತೇಕ ಆಚರಣೆ, ಪದ್ಧತಿಗಳನ್ನು ಮಾಡುತ್ತಿಲ್ಲ. ಕೆಲವರು ಕಾರ್ತಿಕ ದೀಪವಲ್ಲದೆ ಗೌರಿ ಹಬ್ಬದಂದು ತುಳಸಿ ಪೂಜೆ ಮಾಡುತ್ತಾರೆ. ಶ್ಯಾವಿಗೆ ಊಟ, ಶ್ಯಾವಿಗೆಗೆ ಕಾಯಿರಸ ಅಥವಾ ಕಾಯಿಹಾಲು ಹಾಕಿ ತಿನ್ನುತ್ತಾರೆ. ಪಾಯಸ ಮಾಡುವುದಿಲ್ಲ. ಮಾಡಿದ ಪದಾರ್ಥವನ್ನು ಕೊಲೆಗಿಡುವ ಪದ್ಧತಿಯಿದೆ. ಇತ್ತೀಚಿನವರೆಗೂ ಹೀಗೆಯೇ ಮುಂದುವರಿದಿದೆ.

ಗಣಪತಿ ಹಬ್ಬಾಚರಣೆಯನ್ನು ಶ್ರದ್ಧಾಭಕ್ತಿಯಿಂದ ಮೇಲ್ಜಾತಿಯವರು ಮಾಡಿದರೆ ಗಣಪತಿ ವಿಸರ್ಜನೆ ಮಾಡಿದ ದಿನವನ್ನು ಇಲಿವಾರದ ಹಬ್ಬವೆಂದು ಆಚರಿಸುತ್ತಾರೆ. ಅಂದು ಮಾಂಸ, ಮದ್ಯ, ಕಡುಬು, ರೊಟ್ಟಿಯನ್ನು ಮಾಡಿ ತಿನ್ನುತ್ತಾರೆ. ಅಕ್ಕಿಯ ಹೆಂಡವನ್ನು ಹಿಂದೆ ಮಾಡುತ್ತಿದ್ದರು. ಹಬ್ಬದ ದಿನ ಮಾತ್ರವಲ್ಲದೆ ಹೆಂಡ ಖಾಲಿಯಾಗುವವರೆಗೂ ಕುಡಿಯುತ್ತಿದ್ದರು.

ಕಸಬಾ ಹೋಬಳಿಯವರಿಗೆ ಶಿವರಾತ್ರಿಯ ಹಬ್ಬ ವಿಶೇಷವಾಗಿದ್ದು ಶೂದ್ರವರ್ಗದವರು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಅಂದು ಬೆಟ್ಟದ ಮಲ್ಲಿಕಾರ್ಜುನ ದೇವರಿಗೆ ಪೂಜೆ ಸಲ್ಲಿಸಿ ಸುರಗಿ ಹೂವನ್ನು ತರುವುದು ರೂಢಿಯಲ್ಲಿದೆ. ಈಶ್ವರದೇವರಿಗೆ ತುಂಬೆ ಹೂವನ್ನು ಹಣ್ಣುಕಾಯಿಯೊಂದಿಗೆ ಸಲ್ಲಿಸುತ್ತಾರೆ. ಉಪವಾಸವ್ರತವನ್ನು ಮಾಡಿದ ಮಾರನೆಯ ದಿನ ಶ್ರೀಮಠದವರು ರಥೋತ್ಸವ ಮಾಡಿದ ದಿನ ಶಿವರಾತ್ರಿ ಹಬ್ಬಾಚರಣೆಯನ್ನು ಮಾಡುತ್ತಾರೆ. ತುಂಬಾ ಜನ ನೆಂಟರಿಷ್ಟರು ಈ ಹಬ್ಬಕ್ಕೆ ಬರುತ್ತಾರೆ. ಹಂದಿ ಮಾಂಸ, ಕುರಿ, ಕೋಳಿ, ಮೀನು ಮಾಂಸಗಳಲ್ಲದೆ ಕಾಡು ಶಿಕಾರಿ ಮಾಡಿ ಕಡ, ಹಂದಿ, ಕಾಡುಕುರಿ, ಮೊಲ, ಬರಕ ಮೊದಲಾದ ಪ್ರಾಣಿಗಳನ್ನು ಹೊಡೆದು ಅದರ ಮಾಂಸವನ್ನು ಮಾಡಿ ತಿನ್ನುತ್ತಾರೆ. ಶಿವರಾತ್ರಿಯ ಹಬ್ಬಕ್ಕೆ ಕಾಡು ಶಿಕಾರಿ ಮಾಡುವುದು ವಿಶೇಷವಾಗಿದೆ. ಊರವರು ಹೆಚ್ಚಿನವರು ಸೇರಿ ಹಳುನುಗ್ಗಿ ಬೇಟೆಯಾಡುತ್ತಿದ್ದರು. ಅಕ್ಕಿ ಹೆಂಡ ಮಾಡಿ ಹೊಸಅಕ್ಕಿ ರೊಟ್ಟಿ, ತಿಂಡಿಗಳನ್ನು ಮಾಡಿ ಹುಂಚಿಕಟ್ಟೆ ಮಾಡುತ್ತಿದ್ದರು. ಕಣದಲ್ಲಿ ಹುಂಚಿಗೆ ಎಡೆಯಿಟ್ಟು ನೀರುಬಿಟ್ಟು ನಂತರ ಅಲ್ಲಿಯೆ ಪನಿವಾರವನ್ನು ತಿನ್ನುತ್ತಾರೆ. ಹೆಂಡವನ್ನು ಕುಡಿಯುತ್ತಾರೆ. ಅದಕ್ಕಿಂತ ಮೊದಲು ಹುಂಚಿಕಲ್ಲಿಗೆ ತಾವೇ ಹಣ್ಣುಕಾಯಿ ಪೂಜೆ ಮಾಡಿ ಬರುತ್ತಾರೆ. ಈಗಲೂ ಹಳ್ಳಿಯಲ್ಲಿ ಹೊಸಕ್ಕಿ ರೊಟ್ಟಿ, ಹುಂಚಿಕಟ್ಟೆಯನ್ನು ಕಾಣಬಹುದು. ಅಕ್ಕಿ ಹೆಂಡದ ಬಳಕೆ ಕಡಿಮೆಯಿದ್ದು ಬದಲಾಗಿ ಶರಾಬು, ಬ್ರಾಂಡಿ ಕಳ್ಳಭಟ್ಟಿ ಮೊದಲಾದ ಮದ್ಯಗಳನ್ನು ದೇವರಿಗೆ ಇಟ್ಟು ತಾವೂ ಕುಡಿಯುತ್ತಾರೆ.

ಕಿಗ್ಗಾ ಸೀಮೆಯವರಿಗೆ ಕಿಗ್ಗಾ ಜಾತ್ರೆ ಪ್ರಮುಖವಾಗಿದ್ದು ಅಂದು ವಿಶೇಷ ಆಚರಣೆ ಮಾಡುತ್ತಾರೆ. ಆದರೆ ಶಿವರಾತ್ರಿಯ ಹಬ್ಬದಾಚರಣೆಯು ತೆಕ್ಕೂರು, ಕುಂಚೇಬೈಲು, ಅಡ್ಡಗದ್ದೆ ಹಾಗೂ ಕಸಬಾ

ಹೋಬಳಿಯಲ್ಲಿದ್ದು, ಕಿಗ್ಗಾ ಸೀಮೆಯವರು ಹಾಗೂ ಇತರೆ ಭಾಗದ ನೆಂಟರಿಷ್ಟರು ಬರುತ್ತಾರೆ, ಶಿವರಾತ್ರಿಯಂದು ಶೃಂಗೇರಿಯಲ್ಲಿ ರಾತ್ರಿ ರಥೋತ್ಸವ ನಡೆಯುತ್ತಿದ್ದು, ಹಳ್ಳಿಯ ಹೆಚ್ಚಿನವರು ಭಾಗವಹಿಸುತ್ತಿದ್ದರು. ಆ ದಿನ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸ್ವಾಮಿ ಕೃಪಾಪೋಷಿತ ಯಕ್ಷಗಾನ ಮಂಡಳಿಯವರು ಯಕ್ಷಗಾನ ಮಾಡುವುದು ರೂಢಿಯಲ್ಲಿತ್ತು. ಆದರೆ ತೀರಾ ಇತ್ತೀಚೆಗೆ ರಾತ್ರಿ ರಥೋತ್ಸವದ ಸಮಯದಲ್ಲಿ ನಡೆದ ಹಿಂಸೆ, ಅನಾಚಾರ ಮೊದಲಾದ ಅಂಶಗಳನ್ನು ಗಮನಿಸಿ ಶ್ರೀಮಠದವರು ರಾತ್ರಿ ರಥೋತ್ಸವನ್ನು ನಿಲ್ಲಿಸಿ ಕೇವಲ ಹಗಲು ಮಾತ್ರ ನಡೆಸುತ್ತಾರೆ. ಯಕ್ಷಗಾನವೂ ಈಗ ಆ ದಿನ ನಡೆಯುವುದಿಲ್ಲ.[45]

ಒಕ್ಕಲಿಗ ಹಾಗೂ ಶೂದ್ರ ಜನಾಂಗದವರಲ್ಲಿ ನವರಾತ್ರಿಯ ಆಚರಣೆಯಿರಲಿಲ್ಲ. ಶ್ರೀಮಠದಲ್ಲಿ ನಡೆಸಲಾಗುತ್ತಿದ್ದ ಧಾರ್ಮಿಕ ಆಚರಣೆ, ವಿಧಿ ವಿಧಾನಗಳಲ್ಲಿ ಸ್ಥಳೀಯರು ಭಾಗವಹಿಸುತ್ತಿದ್ದರು. ವರ್ಷಗಳ ಮೊದಲು ಈಗ ನೀಡುತ್ತಿದ್ದಂತೆ ನಿತ್ಯ ಸಾರ್ವಜನಿಕ ಭೋಜನ ವ್ಯವಸ್ಥೆಯಿರಲಿಲ್ಲ. ನವರಾತ್ರಿಯ ಸಮಯ ಮಾತ್ರ ಸಾರ್ವಜನಿಕರಿಗೆ ಭೋಜನವಿರುತ್ತಿತ್ತು. ನವರಾತ್ರಿಯ ಸಮಯದಲ್ಲಿ ಅಮ್ಮನವರ ಪ್ರಸಾದ ಸ್ವೀಕರಿಸಬೇಕೆಂಬ ಮಹದಾಸೆಯಿಂದ ಹಳ್ಳಿಯ ಮೂಲೆ ಮೂಲೆಯಿಂದ ಭಕ್ತರು ಶ್ರದ್ಧಾಭಕ್ತಿಯಿಂದ ಭಾಗವಹಿಸುತ್ತಿದ್ದರು. ಈಗ ಪರ ಊರಿನ ಭಕ್ತಾದಿಗಳ ಸಂಖ್ಯೆ ಅಧಿಕವಾಗಿದೆ. ಅದಕ್ಕನುಗುಣವಾಗಿ ಭೋಜನ, ವಸತಿ, ನೀರು ಇತ್ಯಾದಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಕೊಡೆ ಅಮವಾಸ್ಯೆಯ ದಿನ ದೊಡ್ಡ ಏಡಿ (ಕಾರೇಡಿ)ಗಳನ್ನು ಹಿಡಿದು ಸಾಂಬಾರು ಮಾಡಿ ದೈವಗಳಿಗೆ ನೈವೇದ್ಯಮಾಡಿ ತಾವು ಭೋಜನ ಮಾಡುತ್ತಿದ್ದರು. ಶೂದ್ರವರ್ಗದ ಅನೇಕರು ಇದನ್ನು ಮಾಡುತ್ತಿದ್ದರು. ಈಗ ಆಧುನಿಕ ಕೃಷಿ ಪದ್ಧತಿಯಂತೆ ಗದ್ದೆ ತೋಟಗಳಿಗೆ ಔಷಧಿ ಗೊಬ್ಬರಗಳನ್ನು ಬಳಸುತ್ತಿರುವುದರಿಂದ ಏಡಿ, ಕಾರೇಡಿಗಳು ಕಡಿಮೆಯಾಗಿವೆ. ಕೆಲವು ಭಾಗದಲ್ಲಿ ಅವುಗಳ ಸಂತಾನವೇ ಇಲ್ಲವಾಗಿದೆ. ತುಂಗಾ ನದಿಯ ಪಕ್ಕದಲ್ಲಿ ವಾಸವಿರುವ ಮನೆಯವರು 'ಬಿಳ್ಚಿ' ಜಾತಿಯ ಮೀನನ್ನು ಆ ದಿನ ಹಿಡಿದು ಸಾಂಬಾರು ಮಾಡುತ್ತಾರೆ. ಬಿಳ್ಚಿ ಮೀನನ್ನು ಹಿಡಿಯಲು ಚಿಕ್ಕ ಗಾಣವನ್ನು ಓಟೆಯಿಂದ ಮಾಡಿದ ಚಳೆಗೆ ಕಟ್ಟಿರುತ್ತಾರೆ. ಒರಲೆ ಹುಳವನ್ನು ಆಹಾರವಾಗಿ ಹಾಕಿ ಮೀನನ್ನು ಹಿಡಿಯುತ್ತಾರೆ. ಅಲ್ಲದೆ ಮಿಟ್ಟೆ, ಕಟ್ಟುಗಾಣ, ಬಲೆಗಳನ್ನು ಬಳಸಿ ಹೊಳೆಯ ಮೀನನ್ನು ಹಿಡಿಯುತ್ತಿದ್ದರು. ಈಗ ಮನುಷ್ಯನ ದುರಾಸೆಯಿಂದ ತುಂಗಾನದಿ ಹಾಗೂ ಅದಕ್ಕೆ ಸೇರುವ ಉಪನದಿಗಳಲ್ಲಿ ಇರುವ ಮೀನನ್ನು ಹಿಡಿಯಲು ನೀರಿಗೆ ಮೈಲುತುತ್ತು, ತಿಮೆಟ್, ರಾಸಾಯನಿಕ ಔಷಧಿಗಳನ್ನು ನೀರಿಗೆ ಹಾಕಿ ಮೀನುಗಳು ಬಲೆಗೆ ಸಿಗುವಂತೆ ಮಾಡಿ ಹಾಗೂ ಕೂಳೆಗೆ ಬೀಳುವಂತೆ ಮಾಡಿ ಮೀನನ್ನು ಹಿಡಿಯುತ್ತಾರೆ. ಇದರಿಂದ ಜಲಚರಗಳಾದ ಮೀನು ಏಡಿ ಹಾಗೂ ನೀರಿನಲ್ಲಿರುವ ಇತರೆ ಜೀವಿಗಳ ಸಂಖ್ಯೆ ಕಡಿಮೆಯಾಗಿದೆ. ಹೊಳೆಗೆ ಡೈನಮೆಂಟ್ (ತೋಟ) ಹಾಕಿ ಮೀನನ್ನು ಹಿಡಿಯುತ್ತಾರೆ. ಇದರಿಂದಲೂ ಮೀನು ಸಿಗುವುದಕ್ಕಿಂತ ಸಾಯುವುದೇ ಹೆಚ್ಚಾಗಿದೆ. ಗದ್ದೆ, ತೋಟಗಳಿಗೆ ಸಿಂಪಡಿಸಿದ ಔಷಧಿ

ಗೊಬ್ಬರ ಮೊದಲಾದ ರಾಸಾಯನಿಕಗಳು ನದಿಗೆ ಸೇರುವುದರಿಂದ ನದಿ ನೀರು ವಿಷಕಾರಿಯಾಗಿ ಜಲಚರಗಳು ಸಾಯುತ್ತಿವೆ.

ಹಿಂದಿನ ಕಾಲದಲ್ಲಿ ಗದ್ದೆಗಳಲ್ಲಿ ಚಿಕ್ಕದಾದ ಮೀನುಗಳು ಹೇರಳವಾಗಿರುತ್ತಿದ್ದವು. ಅವುಗಳು ದೊಡ್ಡ ಮಳೆ ಬಂದು ಗದ್ದೆ ತುಂಬಿ ನೀರು ಹರಿದು ಹೊಳೆಗೆ ಸೇರುತ್ತಿದ್ದವು. ಇವುಗಳನ್ನು ಹಿಡಿಯಲು ಗೂಡೆ, ಕೂಳೆ, ಮಂಕರಿಗಳನ್ನು ಬಳಸುತ್ತಿದ್ದರು. ಮೇಲಿನಗದ್ದೆಯಿಂದ ಕೆಳಗಿನಗದ್ದೆಗೋ, ಹಳ್ಳಕ್ಕೋ ನೀರು ಬೀಳುವ ಜಾಗಕ್ಕೆ ಓಟೆಸಲಕಿನಿಂದ ಮಾಡಿದ ದೊಡ್ಡದಾದ ಬುಟ್ಟಿ (ಗೂಡೆ)ಯನ್ನು ಇಡುತ್ತಿದ್ದರು. ನೀರು ನೇರವಾಗಿ ಗೂಡೆಯ ಒಳಗೆ ಹೋಗಿ ಬೀಳುವಂತೆ ತಟ್ಟೆಯನ್ನು ಹಾಸುತ್ತಿದ್ದರು. ಅದರ ಮೂಲಕ ಹೋಗಿ ಗೂಡೆಯ ಒಳಗೆ ಬೀಳುತ್ತಿದ್ದವು. ಅತಿಯಾಗಿ ಸಿಕ್ಕ ಮೀನನ್ನು ತಟ್ಟೆಗೆ ಹಾಕಿ ಒಲೆಯ ಮೇಲೆ "ಬಿಸ್ಗಿ" ಕಟ್ಟಿ ಒಣ ಹಾಕುತ್ತಿದ್ದರು. ಒಣಗಿಸಿದ ಈ ಮೀನನ್ನು ಕರಿಮೀನು ಎಂದು ಕರೆಯುತ್ತಿದ್ದರು. ಇಂತಹ ಮೀನನ್ನು ತರಕಾರಿಯ ಜೊತೆಗೆ ಹಾಕಿ ಅಥವಾ ಅದನ್ನೇ ಪ್ರತ್ಯೇಕವಾಗಿ ಸಾಂಬಾರು ಮಾಡುತ್ತಿದ್ದರು. ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾದರೆ ನೆಂಟರಿಷ್ಟರಿಗೆ ಹಾಗೂ ಅಕ್ಕಪಕ್ಕದ ಮನೆಯವರಿಗೆ ಕೊಡುವುದಿತ್ತು. ಈಗ ಮೀನಿಲ್ಲದಿರುವುದರಿಂದ ಈ ರೀತಿಯ ಮೀನು ಹಿಡಿಯುವ ಪದ್ಧತಿ ಕಣ್ಮರೆಯಾಗಿದೆ.

ಬಸವನ ಅಮವಾಸ್ಯೆಯಂದು ತುಂಗಾನದಿಯಲ್ಲಿ ಸ್ನಾನ ಮಾಡುತ್ತಿದ್ದರು. ಆ ದಿನ ಎತ್ತುಗಳನ್ನು ಬಳಸುತ್ತಿರಲಿಲ್ಲ. ಬಸವಗಳಿಗೆ ವಿಶೇಷ ಪೂಜೆ ಮಾಡಿ ಅವುಗಳಿಗೆ ವಿಶ್ರಾಂತಿ ನೀಡುತ್ತಿದ್ದರು. ಇತ್ತೀಚೆಗೆ ಕೃಷಿ ಕಾರ್ಯಕ್ಕೆ ಬಸವನನ್ನು ಬಳಸುವವರು ಕಡಿಮೆಯಿದ್ದಾರೆ. ಇಂತಹ ಆಚರಣೆಗಳನ್ನು ಕೆಲವರು ಮಾಡುವುದಿಲ್ಲ. ಕೃಷಿ ಕ್ಷೇತ್ರದಲ್ಲಿ ಯಂತ್ರಗಳ ಬಳಕೆಯಾಗಿರುವುದರಿಂದ ಇದರ ಮಹತ್ವ ಕಳೆದು ಹೋಗಿದೆ. ನಿತ್ಯ ಕೃಷಿ ಚಟುವಟಿಕೆಯಲ್ಲಿ ತೊಡಗಿ ಎತ್ತುಗಳು ಸುಸ್ತಾಗಿರುವುದರಿಂದ ಹಬ್ಬದಾಚರಣೆಯಂದು ಅವುಗಳಿಗೆ ವಿಶ್ರಾಂತಿ ಸಿಗುತ್ತಿತ್ತು ಅಲ್ಲದೆ ವಿಶೇಷ ಆಹಾರವೂ ದೊರಕುತ್ತಿತ್ತು. ಬಸವನ ಅಮಾವಾಸ್ಯೆಯಂದು ಹಲಸಿನ ಹಣ್ಣಿನ ಕಡುಬು, ಮಾಂಸದಡುಗೆ ಮಾಡಿ ಪಿತೃಗಳಿಗೆ ಎಡೆಹಾಕಿ ಪೂಜಿಸಿ ನಂತರ ಊಟ ಮಾಡುತ್ತಿದ್ದರು.

ಸಂಕಷ್ಟಹರ ವ್ರತಾಚರಣೆಯು ಹಿಂದಿನ ಕಾಲದಲ್ಲಿ ಶೂದ್ರ ವರ್ಗದವರಲ್ಲಿ ಇದ್ದಂತೆ ಕಾಣುವುದಿಲ್ಲ. ಈಗ ಬಹಳಷ್ಟು ಜನ ಆಚರಿಸುತ್ತಾರೆ. ಅದರಲ್ಲೂ ವಿದ್ಯಾವಂತರು ಹೆಚ್ಚಾಗಿ ಆಚರಿಸುತ್ತಾರೆ. ಸ್ಥಳೀಯ ಅಥವಾ ಪ್ರಸಿದ್ಧ ಗಣಪತಿ ದೇವಾಲಯಗಳಿಗೆ ಹೋಗಿ ವಿಶೇಷ ಪೂಜೆ ಮಾಡಿ ಉಪವಾಸವಿದ್ದು ಚಂದ್ರದರ್ಶನದ ತರುವಾಯ ಊಟ ಮಾಡುತ್ತಾರೆ. ಚಂದ್ರದರ್ಶನದವರೆಗೂ ಏನೂ ಆಹಾರ ಪದಾರ್ಥವನ್ನು ತಿನ್ನದೆ ನಡೆಸುವವರೂ ಅನೇಕ ಜನರಿದ್ದಾರೆ.

ಶೂದ್ರ ಜನಾಂಗದವರು ವಾರಾಚರಣೆಯನ್ನು ಮಾಡುತ್ತಿದ್ದರು, ವಿಶೇಷವಾಗಿ ಶನಿವಾರ, ಸೋಮವಾರ, ಗುರುವಾರ ಪ್ರಶಸ್ತವಾದ ದಿನಗಳಾಗಿವೆ. ಆ ದಿನ ಸ್ನಾನ ಪೂಜಾದಿಗಳನ್ನು ಮಾಡಿ

ಉಪವಾಸ ಅಥವಾ ಒಪ್ಪೊತ್ತನ್ನು ಮಾಡುತ್ತಾರೆ. ಮದ್ಯಮಾಂಸಾಹಾರವಿಲ್ಲ. ಹಿಂದಿನ ಕಾಲದಲ್ಲಿ ಬಹಳಷ್ಟು ಜನರು ಆಚರಿಸುತ್ತಿದ್ದರು. ಅದರಲ್ಲಿ ಬೋವಿ, ಮೊಗವೀರ, ಮಡಿವಾಳ ಮೊದಲಾದ ಜಾತಿಯವರು ಹೆಚ್ಚಿನ ಪ್ರಮಾಣದಲ್ಲಿ ಆಚರಿಸುತ್ತಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಮಂಜುನಾಥ ಸ್ವಾಮಿಯನ್ನು ನಂಬಿದ ಭಕ್ತರು ಸೋಮವಾರಾಚರಣೆ ಮಾಡುತ್ತಾರೆ.

ಊರಿಗೆ ಹೊಂದಿಕೆಯಾದ ಸ್ಥಳದಲ್ಲಿ ನಾಗರಕಲ್ಲು, ಚೌಡಿ, ಬ್ರಹ್ಮ ದೇವರ ಬನಗಳಿರುತ್ತವೆ. ಕೃಷಿ ಭೂಮಿಯಿರುವಲ್ಲಿ ಆ ಭೂಭಾಗಕ್ಕೆ ಸಂಬಂಧಿಸಿದ ಬನಗಳು, ದೇವತೆಗಳು ಇರುತ್ತವೆ. ಪ್ರತಿವರ್ಷ ನಾಗದೇವರ ದೀಪೋತ್ಸವ, ತನಿ ಎರೆಯುವುದು, ಆರಾಧನೆ ಮಾಡಿಸುತ್ತಾರೆ. ಇತರ ದೇವಾನುದೇವತೆಗಳಿಗೂ ಪೂಜೆ ಆರಾಧನೆ ಮಾಡಿಸುತ್ತಾರೆ. ಚೌಡಿ, ಭೂತ, ಪಂಜುರ್ಲಿ ಮೊದಲಾದ ದೆವ್ವಗಳಿಗೆ ಪೂಜೆ ಮಾಡಿಸಿ ಹರಕೆಯಾಗಿ ಪ್ರಾಣಿ ಪಕ್ಷಿಗಳ ಬಲಿ ಕೊಟ್ಟು ನೆಂಟರಿಷ್ಟರೆಲ್ಲರೂ ಸೇರಿ ಸಂಭ್ರಮದಿಂದ ಆಚರಿಸುತ್ತಾರೆ. ಪೂಜೆ ಮಾಡಲು ಬ್ರಾಹ್ಮಣರನ್ನು ಕರೆಸುತ್ತಿದ್ದರು. ವರ್ಷದಲ್ಲಿ ಅನೇಕ ಬಾರಿ ಪೂಜೆ ಆರಾಧನೆಯನ್ನು ಮಾಡಿಸುತ್ತಿದ್ದರು. ಇತ್ತೀಚೆಗೆ ತೀರಾ ಯಾಂತ್ರಿಕವಾಗಿ ಆಚರಿಸುತ್ತಾರೆ. ಕೆಲವರು ಆಚರಿಸದೆ ಇರುವವರಿದ್ದಾರೆ.

ಗೌರಿಹಬ್ಬದಂದು ಹೆಣ್ಣುಮಕ್ಕಳೆಲ್ಲಾ ಸೇರಿ ಬಾವಿಕಟ್ಟೆಯಲ್ಲಿ ಗಂಗೆಯನ್ನು ಪೂಜಿಸುತ್ತಾರೆ. ಮಧ್ಯಾಹ್ನ ತುಳಸಿ ಪೂಜೆ, ಸಿಹಿಯೂಟ ಮಾಡಿಸಿ ಪಿತೃಗಳಿಗೆ ಎಡೆಯಿಟ್ಟು ನಂತರ ಭೋಜನ. ಗಣಪತಿಹಬ್ಬದ ದಿನ ಮಧ್ಯಾಹ್ನ ತುಳಸಿ ಪೂಜೆ ಆದ ಮೇಲೆ ಶ್ಯಾವಿಗೆ, ಕಾಯಿಕಡುಬು, ಕಾಯಿಹಾಲು, ಶ್ಯಾವಿಗೆ ಪಾಯಸ ಮಾಡಿ ಪಿತೃಗಳಿಗೆ ಎಡೆಯಿಟ್ಟು ತರುವಾಯ ಊಟಮಾಡುತ್ತಾರೆ. ಮದುವೆಯಾದ ಹೆಣ್ಣುಗಂಡು ಮೊದಲ ಹಬ್ಬಕ್ಕೆ ಬರುತ್ತಾರೆ. ಹಬ್ಬಕ್ಕಿಂತ ಮೊದಲು ಹೆಣ್ಣುಮಕ್ಕಳಿಗೆ ಬಾಗಿನ ಕೊಟ್ಟು ಕರೆ ನೀಡುತ್ತಾರೆ. ಕಾಯಿ ಜೂಜು ಈ ಹಬ್ಬದ ಗ್ರಾಮೀಣ ಕ್ರೀಡೆಯಲ್ಲಿ ಪ್ರಮುಖವಾದದ್ದು.

ಮಲೆನಾಡಿನ ಎಲ್ಲಾ ರೈತರು ಮಖೆ ಮಳೆಯಂದು ಮಖೆ ಮುಂಡಗ ಅಥವಾ ಕರಿಮುಂಡಗ ನಿಲ್ಲಿಸುತ್ತಾರೆ. ಇವನ್ನು ಗದ್ದೆಗೆ ಹುಳಬೀಳದಿರಲೆಂದು, ಪಕ್ಷಿಗಳು ಕೂರಲೆಂದು, ದೃಷ್ಟಿಬೀಳದಿರಲೆಂದು ಅನೇಕ ಹಿನ್ನೆಲೆಯಿಂದ ನೆಟ್ಟಿರುತ್ತಾರೆ. ಇತ್ತೀಚೆಗೆ ಮುಂಡಗ ಕಡಿಮೆಯಾಗಿದೆ. ಈ ಪದ್ಧತಿಯನ್ನು ಬಿಟ್ಟಿದ್ದಾರೆ. ಕರಿ ಮುಂಡಗ ನೆಡುವುದು ತೀರ ಕಡಿಮೆ, ಹೆಚ್ಚಿನವರು ಮುಂದುವರಿಸುತ್ತಿಲ್ಲ.

ಮಲೆನಾಡಭಾಗದಲ್ಲಿ ಭತ್ತ, ಅಡಿಕೆ, ಕಬ್ಬು ಮೊದಲಾದ ಬೆಳೆಗಳಿಗೆ ಯಾವುದೇ ಬಗೆಯ ರೋಗ ತೊಂದರೆ ಬರದಂತೆ ತಡೆಯಲು 'ಕಟ್ಟಜ್ಜ' ಮಾಡುತ್ತಾರೆ.[46] ಮಖೆಮಳೆಯಾಗಿ ಒಂದು ಶುಕ್ರವಾರ ಅಥವಾ ಮಂಗಳವಾರ ಮಾಡುತ್ತಾರೆ. ಊರವರೆಲ್ಲಾ ಸೇರಿ ಒಂದು ಹಂದಿಯನ್ನು ಜಮೀನಿನ ಸುತ್ತಾ ಹೊತ್ತು ಸುತ್ತುಬರಿಸಿ ಮಧ್ಯಭಾಗದಲ್ಲಿ ಪ್ರತಿಯೊಬ್ಬರ ಮನೆಯಿಂದ ತಂದ ಚರುವಿನ ರಾಶಿಯ ಮೇಲೆ ಕಡಿಯುತ್ತಾರೆ. ರಕ್ತಬಿದ್ದ ಆ ಚರುವನ್ನು ಪ್ರಸಾದವೆಂದು ತಮ್ಮ ತಮ್ಮ ಜಮೀನುಗಳಿಗೆ ತಳಿಯುತ್ತಾರೆ. ನಂತರ ಎರಡು ಗಡಿಗೆಗಳನ್ನು ಒಂದರ ಮೇಲೆ ಒಂದಿಟ್ಟು ಅದರ

ಮೇಲೆ ಒಡೆದ ಗಡಿಗೆಯ ತುಂಡನ್ನು ಮುಚ್ಚಿ ಅದರೊಳಗೆ ಉಪ್ಪು, ಮೆಣಸಿನಕಾಯಿ ಹಾಕಿ ಹಗ್ಗದಿಂದ ಶಿಕ್ಕ ಮಾಡಿ ಅದರಲ್ಲಿಟ್ಟು ನೆಲ್ಲಿಯ ಕೋಲಿಗೆ ಸಿಕ್ಕಿಸುತ್ತಾರೆ. ಇದರ ಜೊತೆ ಹರಕು ಮೊರ, ಕಸಪರಿಕೆ, ಎಲ್ಲಾ ಹಿಡಿದುಕೊಂಡು ಬಂದು ಗುದ್ದಲಿಯನ್ನು ಬಡಿದು ಶಬ್ದ ಮಾಡುತ್ತಾ ಅವರವರ ಜಮೀನಿನ ಸುತ್ತ ಈ ಸಾಮಾನುಗಳನ್ನು ಇಡುತ್ತಾರೆ. ಹಂದಿ ಮಾಂಸದ ಪದಾರ್ಥ ಹಾಗೂ ರೊಟ್ಟಿ ಕಡಬನ್ನು ಈ ಸ್ಥಳಗಳಲ್ಲಿ ಎಡೆಯಿಟ್ಟು ಧೂಪ ಹಾಕಿ ದೇವರಿಗೆ ನೈವೇದ್ಯ ಮಾಡಿ ಎಡೆಯನ್ನು ಹಳ್ಳಕ್ಕೆ ಎಸೆಯುತ್ತಾರೆ. ಅದಕ್ಕೆ 'ಕಟ್ಟಜ್ಜ' ಮಾಡುವುದು ಎನ್ನುತ್ತಾರೆ. ಇದೊಂದು ಮೂಢನಂಬಿಕೆ ಪ್ರಧಾನವಾದ ಪ್ರಮುಖ ಆಚರಣೆಯಾಗಿತ್ತು. ವೈಜ್ಞಾನಿಕ ಮನೋಭಾವದಿಂದಾಗಿ ಈಗ ನಡೆಯುತ್ತಿಲ್ಲ. ಹಿಂದೆ ಮಾಂಸ, ಮದ್ಯಸೇವನೆಗೆ ಹಬ್ಬಗಳು, ಹರಕೆಗಳು ಬೇಕಾಗುತ್ತಿತ್ತು. ಊರವರೆಲ್ಲ ಸೇರಿ ಸಾಲ ಸೋಲ ಮಾಡಿ ಹರಕೆಗಳನ್ನು ಮಾಡಿ ಸಂಭ್ರಮಾಚರಣೆ ಮಾಡುತ್ತಿದ್ದರು. ಈಗ ಪರಿಸ್ಥಿತಿ ಬದಲಾವಣೆಯಾಗಿದೆ. ಸಮಯ ಸಂದರ್ಭಗಳಿಲ್ಲದೆ ಮದ್ಯ ಮಾಂಸಾದಿಗಳ ಸೇವನೆ ನಡೆಯುತ್ತಿದೆ.

ಪಿತೃಪಕ್ಷವನ್ನು ಒಕ್ಕಲಿಗರು ಜೋರಾಗಿ ಮಾಡುತ್ತಾರೆ. ಭಾದ್ರಪದ ಬಹುಳ ಹದಿನೈದು ದಿನಗಳಲ್ಲಿ ಮಾತ್ರ ಮಾಡುತ್ತಾರೆ. ಆದಿನ ರಾತ್ರಿ ಪಿತೃಗಳಿಗೆ ಎಡೆಯಿಡುತ್ತಾರೆ. ಸಿಹಿಭಕ್ಷ್ಯ ಹಾಗೂ ಮಾಂಸಾಹಾರ, ಕಡುಬು, ರೊಟ್ಟಿ, ಮದ್ಯವಿರುತ್ತದೆ. ಒಂದು ಮಣೆಯ ಮೇಲೆ ಹೂವು, ಹಣ್ಣು, ವೀಳ್ಯೆದೆಲೆ, ಅಡಿಕೆ, ಗಿಂಡಿಯೊಂದರಲ್ಲಿ ನೀರಿಟ್ಟು ಹಣತೆ ದೀಪ ಹಚ್ಚುತ್ತಾರೆ. ಕಾಯನ್ನು ಒಡೆದು ಪೂಜೆ ಮಾಡುತ್ತಾರೆ. ಮಗಳು ಅಳಿಯ ಹಾಗೂ ಸಂಬಂಧಿಕರೆಲ್ಲರೂ ಬಂದಿರುತ್ತಾರೆ. ಎಲ್ಲರೂ ಧೂಪ ಹಾಕಿ ಪಿತೃಗಳಿಗೆ ತೃಪ್ತಿಪಡಿಸುತ್ತಾರೆ. ಪಿತೃಗಳು ತೃಪ್ತಿಪಟ್ಟರೆ ಯಾವುದೇ ತೊಂದರೆ ಸಮಸ್ಯೆಗಳು ಬರುವುದಿಲ್ಲ ಎಂಬ ನಂಬಿಕೆಯಿದೆ. ಈಗಲೂ ಪಿತೃಪಕ್ಷವನ್ನು ಯಥಾಪ್ರಕಾರ ನಡೆಸಿಕೊಂಡು ಬರುತ್ತಿದ್ದಾರೆ. ಮದ್ಯ ಮಾಂಸಾದಿಗಳಲ್ಲಿ ಆಧುನಿಕತೆ ಪ್ರವೇಶಿಸಿದೆ.

ಕೊನೆ ಮುಹೂರ್ತವನ್ನು ಶ್ರದ್ಧಾಭಕ್ತಿಯಿಂದ ಮಾಡುತ್ತಾರೆ. ಮನೆಯ ಯಜಮಾನನೇ ಸ್ನಾನ ಮಾಡಿಕೊಂಡು ತೋಟಕ್ಕೆ ಹೋಗಿ ಅಡಿಕೆ ಮರ ತೊಳೆದು ಅರಿಶಿನ, ಕುಂಕುಮ, ಗಂಧ ಮೊದಲಾದವುಗಳನ್ನು ಹಚ್ಚಿ ಹೂವನ್ನು ಮುಡಿಸಿ, ಸಗಣಿಯ ಬೆನಕನನ್ನಿಟ್ಟು ಸಾರಿಸಿ ರಂಗೋಲಿ ಹಾಕಿದ ಜಾಗದಲ್ಲಿ ಪೂಜೆ ಮಾಡುತ್ತಾನೆ. ಪ್ರಸಾದ ರೂಪದಲ್ಲಿ ಕಾಯಿಯ ತುಂಡನ್ನು, ಹಣ್ಣನ್ನು ಕೊಡುತ್ತಾರೆ. ಕೊನೆ ತೆಗೆಯುವವನಿಗೆ ದಕ್ಷಿಣೆಯನ್ನು ಕೊಟ್ಟು, ಕೊನೆತೆಗೆಯಲು ಕೇಳಿಕೊಳ್ಳುತ್ತಾನೆ. ತೆಗೆದ ಕೊನೆಗಳನ್ನು ಬುಟ್ಟಿಯಲ್ಲಿ ಹಾಕಿ ಹೊತ್ತುತಂದು ತುಳಸಿ ಮುಂದೆ, ನಂತರ ದೇವರ ಕೋಣೆಯ ದೇವರ ಮುಂದೆ ಇಟ್ಟು ಪೂಜಿಸುತ್ತಾರೆ. ಈಗಲೂ ಯಥಾಪ್ರಕಾರ ಮುಂದುವರಿದಿದೆ.

ತಿರುಪತಿ ಯಾತ್ರೆಗೆ ಹೋಗಿ ಬಂದವರು ಅಲ್ಲಿಂದ ತಂದ ತೀರ್ಥಪ್ರಸಾದಾದಿಗಳನ್ನು ಬಂಧು ಬಾಂಧವರಿಗೆ ಹಂಚುವುದಕ್ಕೆ 'ಹರಿಸೇವೆ' ಎನ್ನುತ್ತಾರೆ. ತಿರುಪತಿಗೆ ಯಾತ್ರೆ ಹೋಗಿ ಬರುವುದೆಂದರೆ ಬಹಳ ಸಾಹಸದ ಕೆಲಸ, ನಡೆದು ಹೋಗುತ್ತಿದ್ದರು. ಯಾತ್ರೆ ಹೋದರೆ ಪುಣ್ಯ ಬರುತ್ತದೆ ಎಂಬ

ನಂಬಿಕೆ. ಯಾತ್ರಿಗಳು ಎಷ್ಟೋ ದಿನಗಳಿಂದ ಶುದ್ಧವಾಗಿದ್ದು, ಹಿರಿಕರಿಯರ ಸಮ್ಮುಖದಲ್ಲಿ ದೇವರ ಪೂಜೆ ನೆರವೇರಿಸಿ ಯಾತ್ರೆ ಹೊರಡುತ್ತಿದ್ದರು. ಯಾತ್ರ ಹೋದವರ ಕುಟುಂಬದಲ್ಲಿ ಮದ್ಯ ಮಾಂಸಾದಿಗಳನ್ನು ಮಾಡುವಂತಿರಲಿಲ್ಲ. ದೇವರ ಮುಂದೆ ಹಚ್ಚಿದ ದೀಪ ಉರಿಯುತ್ತಲೇ ಇರಬೇಕಿತ್ತು. ದೀಪ ಆರಿದರೆ ಯಾತ್ರ ಹೋದವನಿಗೆ ಅನಾಹುತಗಳು ಉಂಟಾಗುತ್ತದೆ ಎಂಬ ನಂಬಿಕೆ. ಯಾತ್ರ ಹೋದವರು ಬರುವಾಗ ತಿಂಗಳುಗಟ್ಟಲೆ ಆಗುತ್ತಿತ್ತು. ಬಂದವರು ನೇರವಾಗಿ ಮನೆಗೆ ಬರದೆ ದೇವಾಲಯದಲ್ಲಿರುತ್ತಿದ್ದರು. ಅಲ್ಲಿ ಅವರು ತಂದ ಪ್ರಸಾದ ವಿತರಣೆ ಊರವರೆಲ್ಲರಿಗೆ ನಡೆದು ದಾಸಯ್ಯಗಳು ಬಂದು ತುಳಸಿ ಪೂಜೆ ಮಾಡಿ ಮನೆಯನ್ನು ಶುದ್ಧ ಮಾಡುತ್ತಾರೆ. ಆ ದಿನ ರಾತ್ರಿ ಊರವರೆಲ್ಲರಿಗೂ ಸಿಹಿ ಊಟದ ವ್ಯವಸ್ಥೆ ಇರುತ್ತಿತ್ತು. ನಂತರದ ದಿನದಲ್ಲಿ ಮಾಂಸದ ಊಟದ ವ್ಯವಸ್ಥೆ ಮಾಡಿಸುತ್ತಿದ್ದರು. ಈಗ ತೀರ್ಥಯಾತ್ರೆ ಹೋದರೂ ವಾಹನಗಳಲ್ಲಿ ಹೋಗಿ ಬೇಗ ಬರುತ್ತಾರೆ. ಅಷ್ಟಾಗಿ ನಿಯಮ ನಿಷ್ಠೆಗಳಿಲ್ಲದೆ ಆಚರಿಸುವುದು, ದಾಸಯ್ಯಗಳು ಇಲ್ಲದಿರುವುದು, ಹೀಗೆ ಅನೇಕ ಮಾರ್ಪಾಡುಗಳಾಗಿವೆ. ಯಾತ್ರೆಯ ಮಹತ್ವ ಕಳೆದು ಶೋಕಿಯಾಗಿದೆ. ದೇವರು, ಧರ್ಮದ ಮೇಲಿನ ಭಯಭಕ್ತಿ ನಂಬಿಕೆಗಳನ್ನು ಹಿರಿಯರಲ್ಲಿ ಕೆಲವಷ್ಟನ್ನು ಕಾಣಬಹುದಾಗಿದೆ. ಯುವಕರಲ್ಲಿ ತೀರಾ ಕಡಿಮೆಯಿದೆ, ಕೆಲವರಲ್ಲಿ ಏನೂ ಇಲ್ಲ.

ಒಕ್ಕಲಿಗರು ಕಣದ ಹಬ್ಬವನ್ನು ಮಾಡುತ್ತಿದ್ದರು. ಕೆವಿಯನ್ನು ಕುತ್ರೆ ಮಾಡುವುದು, ನಂತರ ಒಕ್ಲಾಟ ತರುವಾಯ ಭತ್ತವನ್ನು ಪಣತ ಅಥವಾ ತಟ್ಟಿಯಲ್ಲಿ ತುಂಬಿಡುವುದು. ಹುಲ್ಲನ್ನು ಗೊಣಬೆ ಹಾಕುವುದು. ಈ ಎಲ್ಲಾ ಕೆಲಸ ಕಾರ್ಯಗಳಾದ ಮೇಲೆ ಒಂದು ದಿನ ಒಕ್ಕಣೆ ಮಾಡಿದ ಕಣದಲ್ಲಿ ಒಂದು ಕೋಳಿಯನ್ನು ಕೊಯ್ಯುತ್ತಾರೆ. ಹೊಸಭತ್ತವನ್ನು ಕುಟ್ಟಿ ಅಕ್ಕಿಮಾಡಿ ಆ ಅಕ್ಕಿಯಿಂದ ಅನ್ನ, ಹುಗ್ಗಿ, ಕಡಬನ್ನು ಮಾಡುತ್ತಾರೆ. ಭತ್ತ ಹುರಿದು ಅರಳನ್ನು ಮಾಡಿಡುತ್ತಾರೆ. ಅರಳನ್ನು ಎಡೆಗಳ ಮೇಲೂ ಕಣದ ತುಂಬೆಲ್ಲಾ ಚೆಲ್ಲುತ್ತಾರೆ. ನಂತರ ಮನೆಗೆ ತೆಗೆದುಕೊಂಡು ಹೋಗಿ ಊಟ ಮಾಡುತ್ತಾರೆ. ಇದನ್ನು ಕಣದಹಬ್ಬವಾಗಿ ಆಚರಿಸುತ್ತಾರೆ. ಈ ಕಣದ ಹಬ್ಬ ಕೆಲವು ಕಡೆಗಳಲ್ಲಿ ಮಾತ್ರ ಇದೆ. ಆಚರಣೆಗಳಲ್ಲಿ ಬದಲಾವಣೆಯಾಗಿದೆ. ಇತ್ತೀಚೆಗೆ ಕೆಲವರು ಯಾಂತ್ರಿಕವಾಗಿ ಆಚರಿಸುತ್ತಾರೆ.

ಹಬ್ಬಾಚರಣೆ:

ದೀಪಾವಳಿಯಂದು ಕರಿಕೋಲು, ಗೋಪೂಜೆ, ತಣ್ಣೀರುಸ್ನಾನ, ವರ್ಷತೊಡಕಿನಹಬ್ಬಕ್ಕೆ ಕೋಳಿ ಸಾಂಬಾರು, ಅಕ್ಕಿ ಹೆಂಡ, ಕೆಸುವಿನಗೆಡ್ಡೆ ಪಲ್ಯ, ಮೇಳದೇವರಿಗೆ ಸುಟ್ಟರೊಟ್ಟಿ, ತುಪ್ಪ, ಬೆಲ್ಲ, ಬೆಣ್ಣೆಯ ನೈವೇದ್ಯ ಮಾಡುತ್ತಾರೆ. ಗೌರಿ ಹಬ್ಬದಂದು ಬಾಗಿನ ಕೊಡುವುದು ಚಕ್ಕುಲಿ, ಶ್ಯಾವಿಗೆ, ಕಾಯಿಕಡಬು ಮಾಡುವುದು. ಹೊಸದಾಗಿ ಮದುವೆಯಾದ ಮದುಮಕ್ಕಳನ್ನು ಕರೆಸಿ ಉಪಚಾರ ಶಾಸ್ತ್ರಗಳನ್ನು ಮಾಡುತ್ತಿದ್ದರು. ಇಲಿವಾರದಂದು ಮಾಂಸಾಹಾರ, ಮದ್ಯಪಾನವನ್ನು ಮಾಡಿ ವಿಜೃಂಭಣೆಯಿಂದ

ಆಚರಿಸಲಾಗುತ್ತಿತ್ತು. ಗಣಪತಿಯನ್ನು ಮನೆಯಲ್ಲಿಡುವ ಪದ್ಧತಿಯಿಲ್ಲ. ಇತ್ತೀಚೆಗೆ ಶಾಲೆಗಳಲ್ಲಿ ಇಟ್ಟು ಆಚರಿಸುವುದಿದೆ. ಹಬ್ಬಾಚರಣೆ ಮಾಡಲಾಗುತ್ತಿತ್ತು. ಶಿವರಾತ್ರಿಯಂದು ಉಪವಾಸ ಮಾಡುತ್ತಿದ್ದರು. ರಾತ್ರಿ ಜಾಗರಣೆ ಮಾಡುತ್ತಿದ್ದರು. ಮಾರನೆಯ ದಿನ ಮಾಂಸಾಹಾರದ ನೈವೇದ್ಯ ಮಾಡುವುದು. ನೆಂಟರಿಷ್ಟರನ್ನು ಕರೆದು ಭೋಜನವನ್ನು ಮಾಡುವುದು. ನವರಾತ್ರಿ ಆಚರಣೆಯಿರಲಿಲ್ಲ ವಿಜಯದಶಮಿಯನ್ನು ಕೆಲವರು ಆಚರಿಸುತ್ತಿದ್ದರು. ಕೊಡೆ ಅಮವಾಸ್ಯೆಯನ್ನು ವಿಜೃಂಭಣೆಯಿಂದ ನಡೆಸುತ್ತಿದ್ದರು. ಮಾಂಸಾಹಾರ, ಮದ್ಯಪಾನವಿತ್ತು. ಈಚಲು ಗೆಡ್ಡೆಯ ಪಲ್ಯ ಮಾಡುತ್ತಿದ್ದರು. ಮೀನು ಮತ್ತು ಕಾರೇಡಿಯ ಸಾಂಬಾರು ಮಾಡುತ್ತಿದ್ದರು.

ಬಸವನ ಅಮಾವಾಸ್ಯೆಯಂದು ಬಸವನನ್ನು ಕೃಷಿ ಕಾಯಕದಲ್ಲಿ ಬಳಸುತ್ತಿರಲಿಲ್ಲ. ಆ ದಿನ ಅವುಗಳಿಗೆ ವಿಶ್ರಾಂತಿ ನೀಡುತ್ತಿದ್ದರು. ಕೆಲವರು ಮಾತ್ರ ಕೃಷಿ ಭೂಮಿಯನ್ನು ಹೊಂದಿದ್ದರು, ಅವರು ಮಾತ್ರ ಆಚರಿಸುತ್ತಿದ್ದರು. ಆ ದಿನ ಧರ್ಮಸ್ಥಳಕ್ಕೆ ತಿರುಪತಿಗೆ ಹಾಗೂ ತಮ್ಮ ಕುಲದೇವರಿಗೆ ನಂಬಿದ ದೇವರುಗಳಿಗೆ ಕಾಣಿಕೆ ಕಟ್ಟುತ್ತಿದ್ದರು. ಮನೆದೇವರಿಗೆ ಪೂಜೆ ದೀಪಾರಾಧನೆ ಮಾಡುತ್ತಿದ್ದರು. ನಾಗರ ಪೂಜೆ, ದೀಪ ಹಾಗೂ ಆರಾಧನೆಯನ್ನು ಇವರು ಮಾಡಿಸುತ್ತಿದ್ದರು. ಎಲ್ಲಾ ಜಾತಿ, ಜನಾಂಗದವರೂ ಈ ಆಚರಣೆಯನ್ನು ಮಾಡುತ್ತಿದ್ದರು. ನೆಂಟರಿಷ್ಟರನ್ನು ಕರೆಸುತ್ತಿದ್ದರು. ಭೂತಾರಾಧನೆಯು ಪ್ರಮುಖವಾದುದಾಗಿದ್ದು ಕುರಿ, ಕೋಳಿ, ಹಂದಿಗಳನ್ನು ಬಲಿಕೊಡುವುದು, ಎಡೆಯಿಡುವುದು, ನೆಂಟರಿಷ್ಟರನ್ನು ಕರೆದು ಭೋಜನ ಮಾಡಿಸುತ್ತಿದ್ದರು. ಇದರ ಜೊತೆಯಲ್ಲಿ ಪಂಜುರ್ಲಿ, ಕಲ್ಲುಟ್ಟ, ರಣ, ಚೌಡಿ ಮೊದಲಾದ ದೈವಗಳಿಗೂ ಹರಕೆಯನ್ನು ಕೊಡುತ್ತಿದ್ದರು. ಕೆಲವು ಕುಟುಂಬದಲ್ಲಿ ಪ್ರತಿವರ್ಷ, ಇನ್ನೂ ಕೆಲವು ಕುಟುಂಬದಲ್ಲಿ ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ವಿಜೃಂಭಣೆಯಿಂದ ಮಾಡುತ್ತಿದ್ದರು. ಮೊದಲು ನರಬಲಿ ಕೊಡುವುದು, ನಂತರದ ದಿನಗಳಲ್ಲಿ ಕೋಣಗಳನ್ನು ಬಲಿಕೊಡುವುದು[47] ರೂಢಿಯಲ್ಲಿತ್ತು.

ಈಗ ಕುರಿ, ಕೋಳಿ, ಹಂದಿ ಬಲಿಯನ್ನು ಕೊಡುತ್ತಿದ್ದಾರೆ. ಕುಟುಂಬದ ಯಾರಿಗಾದರೂ ಗಣ(ಮೈಮೇಲೆ ದೇವರು)ಬರುವುದಿತ್ತು. ಸಮಸ್ಯೆಗೆ ಪರಿಹಾರ, ಹೇಳಿಕೆ ಕೊಡುವುದಿದೆ. ದೇವರ ಪ್ರತಿರೂಪವೆಂದೇ ನಂಬಿ ಅದು ಹೇಳಿದಂತೆ ನಡೆಯುತ್ತಿದ್ದರು.

ಮಾಟ, ಮಂತ್ರ, ತಂತ್ರಗಾರಿಕೆಯ ಬಗ್ಗೆ ನಂಬಿಕೆಯಿತ್ತು. ಕೆಲವರ ಮನೆಯನ್ನು ಹಾಳು ಮಾಡಲು ಮಾಟ ಮಾಡಿಸುತ್ತಿದ್ದರು. ಮಾಟ ಮಂತ್ರದಿಂದ ದೂರವಿರಲು ಕಾಯಿ ಮಂತ್ರಿಸಿ ಕಟ್ಟುವುದು, ಲಿಂಬೆಹಣ್ಣು ಇಟ್ಟುಕೊಳ್ಳುವುದು. ಕಪ್ಪುದಾರ ಕಟ್ಟುವುದು, ತಾಯಿತ ಕಟ್ಟುವುದು, ಭಸ್ಮ ಧರಿಸುವುದು ಮೊದಲಾದವುಗಳಿರುತ್ತಿದ್ದವು. ಈಗ ಕಡಿಮೆಯಾಗಿದೆ. ಹಿಂದೆ ಮೂಢನಂಬಿಕಸ್ತರು ತುಂಬಾ ಜನರಿದ್ದರು. ಈಗ ಶಿಕ್ಷಣ ಪಡೆದು ವಿಚಾರವಂತರಾಗಿದ್ದಾರೆ ಮಾಧ್ಯಮದ ಮೂಲಕ ಅರಿವನ್ನುಂಟುಮಾಡಿಕೊಂಡಿದ್ದಾರೆ.

ಕಟ್ಟಿಗೆ ರಾಶಿಮಾಡಿ ಇತರೆ ಜನಾಂಗದವರು ಶವಸಂಸ್ಕಾರ ಮಾಡುವಂತೆ ಮಾಡುತ್ತಾರೆ. ಸೂತಕ, ಆಚರಣೆ ನೇಮ ಮೊದಲಾದವುಗಳು ಇತರರಂತೆಯೆ ಇತ್ತು. ಶವಸಂಸ್ಕಾರವನ್ನು ಸ್ಮಶಾನ (ಸೂಡಿ)ದಲ್ಲಿ ಮಾಡುತ್ತಿದ್ದರು. ಪಿಂಡಹಾಕಲು ಗೋಕರ್ಣ, ವಡಭಾಂಡೇಶ್ವರ ಮೊದಲಾದ ಸ್ಥಳಗಳಿಗೆ ಹೋಗುತ್ತಿದ್ದರು. ಈಗ ಸ್ಮಶಾನದ ಬದಲಿಗೆ ಅವರ ಜಮೀನಿನಲ್ಲಿ ಶವಸಂಸ್ಕಾರಮಾಡುವುದು, ಕ್ರಿಯೆಯನ್ನು ಇಲ್ಲಿಯೆ ಮಾಡುವುದು ನಡೆಯುತ್ತಿದೆ.

ಅಡುಗೆಗೆ ತರಕಾರಿ, ಸೊಪ್ಪು, ಗೆಡ್ಡೆಗೆಣಸು, ಮಾಂಸಗಳನ್ನು ಬಳಸುತ್ತಿದ್ದರು. ದೋಸೆ, ಕಡುಬು, ರೊಟ್ಟಿ, ಅನ್ನ, ಹೋಳಿಗೆ, ಕಜ್ಜಾಯ, ಪಾಯಸ, ಬೋಂಡ ಎಲ್ಲರಿಗೂ ಬಡಿಸುತ್ತಿದ್ದರು. ಎಲ್ಲರು ನೆಲದ ಮೇಲೆ ಮಣೆ ಅಥವಾ ಚಾಪೆಯ ಮೇಲೆ ಕೂರುತ್ತಿದ್ದರು. ನೆಂಟರು ಬಂದರೆ ಅವರಿಗೆ ಮತ್ತು ಮನೆಯ ಹಿರಿಯರಿಗೆ ಮೊದಲು ಭೋಜನ ನಂತರ ಉಳಿದವರಿಗೆ ಬಡಿಸುತ್ತಿದ್ದರು. ಮನುಷ್ಯರಿಗೆ ಬಡಿಸುವ ಮೊದಲು ಗೋವಿಗೆ, ಕಾಗೆಗೆ ಕೊಡುವ ಪದ್ಧತಿಯಿತ್ತು. ಈಗ ಸಹಭೋಜನ ಕಡಿಮೆಯಾಗಿದೆ. ಕಾಗೆ, ಗೋವಿಗೆ ಕೊಡುವುದು ಕಡಿಮೆಯಾಗಿದೆ.

ಸತ್ತ ಆತ್ಮಗಳಿಗೆ ಶಾಂತಿ ಸಿಗಲೆಂದು ಕೊಲ್ಲೆಗಿಡುತ್ತಾರೆ. ಪ್ರತಿಯೊಬ್ಬರ ಮನೆಯಲ್ಲೂ ಮಾಡುತ್ತಾರೆ. ಮದ್ಯ ಹಾಗೂ ಮಾಂಸಾಹಾರವನ್ನು ಮಾಡುತ್ತಾರೆ. ಕಳ್ಳು, ಹೆಂಡ, ಬೆಳೆಗಳನ್ನು ಮೊದಲು ಕುಡಿಯುತ್ತಿದ್ದರು. ಈಗ ಇವುಗಳು ಕಡಿಮೆಯಾಗಿವೆ. ಬದಲಾಗಿ ಬ್ರಾಂಡಿ, ವಿಸ್ಕಿ, ಬಿಯರ್ ಮೊದಲಾದವುಗಳು ಬಳಕೆಯಲ್ಲಿವೆ.[48]

ಹಳ್ಳಿಗಳಿಗೆ ಗಾಡಿರಸ್ತೆ, ಕಾಲುರಸ್ತೆ, ಬಹಳಷ್ಟು ದೂರ ನಡೆದು ಮನೆ ಸೇರಬೇಕಿತ್ತು. ಪ್ರಕೃತಿ ಸಹಜವಾದ ಒರತೆ ನೀರನ್ನು ಉಪಯೋಗಿಸುತ್ತಿದ್ದರು. ಈಗ ಡಾಂಬರು ರಸ್ತೆ, ವಿದ್ಯುತ್ ದೀಪ, ಹಂಚಿನ ಮನೆ ಹಾಗೂ ಆಧುನಿಕ ಸೌಲಭ್ಯಗಳು ದೊರೆತಿವೆ. ಮರದ ಪೈಪನ್ನು ಬಳಸುತ್ತಿದ್ದರು. ಮರದ ಸಂಕವನ್ನು ಹಾಕಿ ದಾಟುತ್ತಿದ್ದರು.

ಹಿಂದೆ ಭಿಕ್ಷುಕರ ಸಂಖ್ಯೆ ಅಧಿಕವಾಗಿತ್ತು, ಭಿಕ್ಷೆ ಕೇಳುವುದು ಮತ್ತು ನೀಡುವುದು ಎರಡೂ ಪವಿತ್ರ ಕೆಲಸವೆಂದು ಜನ ನಂಬಿದ್ದರು. ಸನ್ಯಾಸಿಗಳು, ಯತಿಗಳು, ಗುರುಗಳು, ಮಾಂತ್ರಿಕರು, ಅನಾಥರು, ಅಂಗವಿಕಲರು, ಜೋಗಿಗಳು, ಹಾಲಕ್ಕಿಗಳು, ಗಿಳಿ ಶಕುನ, ಹರಿಕಥೆ, ಕೋಲಾಟ ಮೊದಲಾದವರು ಹಣ ಸಂಪಾದನೆಗಾಗಿ ಬರುತ್ತಿದ್ದರು. ಇತ್ತೀಚೆಗೆ ಇವುಗಳು ಕಡಿಮೆಯಾಗಿವೆ. ಭಿಕ್ಷುಕರು ಸಿಗುವುದಿಲ್ಲ. ಅಷ್ಟರಮಟ್ಟಿಗೆ ಪರಿವರ್ತನೆಯಾಗಿದೆ. ಈಗ ಭಿಕ್ಷೆ ನೀಡಿದರೆ ಹಾಗೂ ಪಡೆದರೆ ಅಪರಾಧವಾಗುತ್ತದೆ. ಅನಾಥರನ್ನು ಅನಾಥಾಶ್ರಮಗಳಿಗೆ, ಭಿಕ್ಷುಕರನ್ನು ನಿರ್ಗತಿಕರ ತಾಣಗಳಿಗೆ ಕಳುಹಿಸಿ ಉಪಚರಿಸಲಾಗುತ್ತದೆ. ಧಾರ್ಮಿಕ ಮಹತ್ವ ಹಿಂದಿನಷ್ಟಿಲ್ಲದಿರುವುದರಿಂದ ಧರ್ಮೀಯ ಭಿಕ್ಷುಕರು ಬರುತ್ತಿಲ್ಲ.

ಸಮಯ, ಸಂದರ್ಭ, ಸನ್ನಿವೇಶಗಳಿಗೆ ಅನುಗುಣವಾದ ಜನಪದ ಗೀತೆ, ಕುಣಿತ, ಕಥೆಗಳಿರುತ್ತಿದ್ದವು. ನಾಟಿ ಮಾಡುವಾಗ ಸೋಬಾನೆ ಹಾಡು, ಲಾಲಿಹಾಡು, ಲಾವಣಿ, ಅಂಟಿಕೆ ಪಿಂಟಿಕೆಗಳು ಇರುತ್ತಿತ್ತು.

ಈಗ ಇವುಗಳೆಲ್ಲ ರೇಡಿಯೋ, ಟಿ.ವಿ., ಫೋನ್ ಮೊದಲಾದ ಆಧುನಿಕಯಂತ್ರ, ಮಾಧ್ಯಮಗಳು ಪ್ರವೇಶಿಸಿ ಜನಪದ ಸಂಸ್ಕೃತಿ ಮರೆಯಾಗಿದೆ. ಹಿಂದಿನಂತೆ ಕೃಷಿ ಉದ್ಯೋಗ ಹಾಗೂ ಇತರ ಉದ್ಯೋಗ ಮಾಡುವಾಗ ಮಾನವ ಶ್ರಮದ ಜೊತೆಗೆ ಜನಪದ ಸಂಸ್ಕೃತಿ ಮೇಳೈಸುತ್ತಿತ್ತು. ಈಗ ಆಗಿನಂತಿಲ್ಲ ಯಂತ್ರೋಪಕರಣಗಳು ಮಾನವನ ಬದಲಿ ಕೆಲಸವನ್ನು ಮಾಡುತ್ತಿವೆ.

ಸಜಾತಿಯ ವಿವಾಹ ನಡೆಯುತ್ತಿತ್ತು, ವಧುದಕ್ಷಿಣೆಯಿತ್ತು ನಂತರ ವರದಕ್ಷಿಣೆ ಕೊಡುವುದಾಯಿತು. ಅಂತರ್ಜಾತೀಯ ವಿವಾಹ ನಡೆಯುತ್ತಿರಲಿಲ್ಲ. ಹಾಗೇನಾದರೂ ನಡೆದುದೇ ಆದರೆ ಅವರನ್ನು ಜಾತಿಯಿಂದ ಬಹಿಷ್ಕರಿಸಿ ಹೊರಹಾಕಲಾಗುತ್ತಿತ್ತು. ಮೊದಲು ರಕ್ತ ಸಂಬಂಧಗಳ ನಡುವೆ ಮದುವೆ ನಡೆಯುತ್ತಿತ್ತು. ಹೊಸ ಸಂಬಂಧ ಕಡಿಮೆ, ಈಗ ರಕ್ತಸಂಬಂಧಿಕರು ಹಾಗೂ ಹೊಸ ಸಂಬಂಧ ಎರಡೂ ನಡೆಯುತ್ತಿದೆ.

ತವರು ಮನೆಯಲ್ಲಿ ಮಗುವಿಗೆ ತೊಟ್ಟಿಲು ಶಾಸ್ತ್ರಮಾಡಿ ಗಂಡನಮನೆಗೆ ಕರೆತರುತ್ತಿದ್ದರು. ಬಾಲೆ ಹಾಗೂ ಬಾಣಂತಿಯ ಆರೈಕೆ ತವರು ಮನೆಯಲ್ಲಿ ನಡೆಯುತ್ತಿತ್ತು. ಮೊದಲ ಮಗುವಿನ ಆರೈಕೆ ತಾಯಿ ಮನೆಯಲ್ಲಿ ನಡೆಯುತ್ತಿತ್ತು. ಆಕೆ ಅನೇಕ ಮಕ್ಕಳ ಮಹಾತಾಯಿಯಾಗಿರುತ್ತಿದ್ದಳು. ಮಗುವಿಗೆ ಎರಡು ವರ್ಷವಾದ ನಂತರ ಅಕ್ಕಸಾಲಿಗರನ್ನು ಕರೆಸಿ ಕಿವಿಚುಚ್ಚಿ ಚಿನ್ನದ ಆಭರಣಗಳನ್ನು ತೊಡಿಸುತ್ತಿದ್ದರು. ಗಂಡು ಅಥವಾ ಹೆಣ್ಣು ಮಗು ಇಬ್ಬರಿಗೂ ಕಿವಿ ಚುಚ್ಚುತ್ತಿದ್ದರು. ಚಿಕ್ಕಮಗುವಿಗೆ ಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಿದ್ದರು. ಚಿಟಿಕೆ ಹಾಕುವುದು, ದೃಷ್ಟಿ ತೆಗೆಯುವುದು, ಗಿಡಮೂಲಿಕೆ ಔಷಧಿಗಳನ್ನು ಕುಡಿಸುತ್ತಿದ್ದರು.

ಗ್ರಾಮೀಣ ಔಷಧಿಯನ್ನು ಬಳಸುತ್ತಿದ್ದರು. ಬಾಣಂತಿಯರಿಗೆ ನೀರಟ್ಟಿಬೇರು, ಲಿಂಬೆಹುಳಿ ಬೆರೆಸಿ ತೇದು ತಿನ್ನಿಸುತ್ತಿದ್ದರು. ಸೀತ, ಕೆಮ್ಮು, ಕಫ ಹೋಗುತ್ತಿತ್ತು. ಮೆಣಸಿನಕಾಯಿಯ ಕಷಾಯ ಕೊಡುತ್ತಿದ್ದರು. ಖಾರವನ್ನು ತಿನ್ನಿಸುತ್ತಿದ್ದರು. ಬಾಣಂತಿಯ ಆರೈಕೆಯು ಬಹಳ ಕಠಿಣವಾಗಿ ನಡೆಯುತ್ತಿತ್ತು. ಆಕೆಯ ದೇಹ ಸಣ್ಣದಾಗಿ ಮಗು ಹಾಗೂ ತಾಯಿ ಆರೋಗ್ಯದಿಂದಿರಲು ತಪ್ಪದೆ ಇವುಗಳನ್ನು ಸೇವಿಸುತ್ತಿದ್ದರು. ಗರ್ಭನಿರೋಧಕ ಔಷಧಿಗಳಿರಲಿಲ್ಲ.

ಪ್ರಾಣಿಪಕ್ಷಿಗಳನ್ನು ಶಿಕಾರಿ ಮಾಡುತ್ತಿದ್ದರು. ಮರೆಯಲ್ಲಿ ಕುಳಿತು ನಾಡಬಂದೂಕಿನಿಂದ ಪ್ರಾಣಿಗಳನ್ನು ಹೊಡೆಯುತ್ತಿದ್ದರು. ರಾತ್ರಿ ಸಮಯ ಲಾಟೀನ್ ಹಿಡಿದುಕೊಂಡು ಹಬ್ಬ ಜಾತ್ರೆಗಳಂದು ಊರವರೆಲ್ಲ ಸೇರಿ ಹಳುನುಗ್ಗಿ ಪ್ರಾಣಿಗಳನ್ನು ಓಡಿಸಿ ಬೇಟೆಯಾಡುತ್ತಿದ್ದರು. ಹಂದಿ, ಕಡು, ಮೊಲ, ಬರಕ, ಕುರಿ ಮೊದಲಾದವುಗಳನ್ನು ಬೇಟೆಯಾಡುತ್ತಿದ್ದರು. ಚಾಟಿ ಬಿಲ್ಲು, ಬಿಲ್ಲು ಬಾಣ, ಬಲೆ, ಬೆಸೆ, ಉಳ್ಳ, ಕೊಳೆ, ಮಂಕರಿ, ಕತ್ತರಿ ಮೊದಲಾದವುಗಳು ಗ್ರಾಮೀಣ ಸಾಧನಗಳಾಗಿದ್ದವು. ಮೀನು, ಏಡಿಗಳನ್ನು ಶಿಕಾರಿ ಮಾಡುತ್ತಿದ್ದರು. ಬಲೆ, ಕೊಳೆ, ಗಾಳ, ದೋಚುವುದರಿಂದ ಮೀನನ್ನು ಹಿಡಿಯುತ್ತಿದ್ದರು.

ಪುರುಷರ ಜನಪದ ಆಟಗಳಾಗಿ ಲಗೋರಿ, ಚಿನ್ನಿದಾಂಡು, ಮರಕೋತಿ, ಬುಗುರಿ, ಗೋಲಿ

ಕಟ್ಟಡಿಗಳಿದ್ದವು. ಮಹಿಳೆಯರು ಕುಂಟಾಟಿಲ್ಲೆ, ಚನ್ನೆಮಣೆ, ಚೌಕಾಬಾರಾ, ಕಲ್ಲಾಟ, ಹಗ್ಗದಾಟ, ಪಟದಾಟ ಮೊದಲಾದವುಗಳನ್ನು ಆಡುತ್ತಿದ್ದರು. ಈಗ ಕ್ರಿಕೆಟ್ ಆಟದ ಪ್ರಭಾವದಿಂದ ಯಾರೂ ಗ್ರಾಮೀಣ ಆಟಗಳನ್ನು ಆಡುತ್ತಿಲ್ಲ. ಮಕ್ಕಳ ಮಣ್ಣಾಟ, ಗೋಲಿ ಆಟ, ಮನೆ ಕಟ್ಟುವ ಆಟ, ಮಡಿಕೆ ಕುಡಿಕೆ ಮಾಡುವ ಆಟಗಳೆಲ್ಲ ಇಲ್ಲವಾಗಿವೆ. ಹಳ್ಳಿಗಳಲ್ಲಿ ಎಲ್ಲೋ ಒಂದೊಂದು ಕಡೆ ಕಾಣಿಸಿಕೊಳ್ಳುತ್ತವೆ. ಆದರೆ ನಗರ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಆಟಗಳು ಇಲ್ಲವಾಗಿವೆ. ಗ್ರಾಮೀಣ ಆಟಗಳು ಸಮಯದ ಸದ್ಬಳಕೆಗೆ, ಮನರಂಜನೆಗೆ, ಶಕ್ತಿ ಸಾಮರ್ಥ್ಯ ವೃದ್ಧಿಗೆ, ದೇಹಾರೋಗ್ಯಕ್ಕೆ ಬುದ್ಧಿವಂತಿಕೆಗೆಯ ಪ್ರದರ್ಶನಕ್ಕಾಗಿ ನಡೆಯುತ್ತಿತ್ತು.

ಗಿರಿಜನ ಪುರುಷರು ಕಚ್ಚೆ ಪಂಚೆ, ಕೋಟು, ಶಲ್ಯ, ತಲೆಗೆ ಪೇಟ, ಉದ್ದ ಅಂಗಿ ಧರಿಸುತ್ತಿದ್ದರು. ಮಹಿಳೆಯರು ಸೀರೆ, ಲಂಗ–ದಾವಣಿ ಹಾಕಿಕೊಳ್ಳುತ್ತಿದ್ದರು. ಗಂಡು ಮಕ್ಕಳು ಚಡ್ಡಿ, ಬನಿಯನ್ ಅಂಗಿ, ಹಾಕಿಕೊಳ್ಳುತ್ತಿದ್ದರು. ಈಗ ಆಧುನಿಕ ಶೈಲಿಯ ಉಡುಗೆ ತೊಡುಗೆಗಳನ್ನು ಬಳಸುತ್ತಿದ್ದಾರೆ.[49]

ಎಲ್ಲಾ ಜಾತಿ ಜನಾಂಗದವರು ಸಾಕಿ ಸಲುಹುತ್ತಿರುವಂತೆ ಇವರೂ ಸಹ ಪ್ರಾಣಿಪಕ್ಷಿಗಳನ್ನು ಸಾಕುತ್ತಿದ್ದರು. ಕೃಷಿಗೆ ಸಂಬಂಧಿಸಿದಂತೆ, ಆಹಾರ ಸಂಬಂಧಿ, ಆನಂದ ಹಾಗೂ ಅಗತ್ಯಕ್ಕಾಗಿ ಸಾಕುತ್ತಿದ್ದರು. ಪ್ರತಿಷ್ಠೆಯ ಸಂಕೇತವಾಗಿಯೂ ಸಾಕುತ್ತಿದ್ದರು. ಈಗ ಆಹಾರದ ಸಮಸ್ಯೆಯಿಂದಾಗಿ ಪ್ರಾಣಿ ಪಕ್ಷಿಗಳನ್ನು ಸಾಕುವವರ ಸಂಖ್ಯೆ ಕಡಿಮೆಯಾಗಿದೆ. ಪ್ರತಿಷ್ಠೆಯ ಸಂಕೇತವಾಗಿ ಮುದ್ದುಪ್ರಾಣಿಗಳನ್ನು ಶ್ರೀಮಂತರು ಸಾಕುತ್ತಾರೆ.

ಗಿರಿಜನರು ಚರಿಗೆ, ಮಡಿಕೆ, ಕುಡಿಕೆ, ಹಿಟ್ಟುಂಡೆ ಹಿಡಿ, ಕೆತಲ ಹಿಡಿ, ಮರಬಟ್ಟಲು, ಹಿಟ್ಟಿನ ಮರಿಗೆ, ಬಿದಿರಿನ ಮೊರ, ಬಿದಿರಿನ ಸಾರಣಿ, ಮರಚಿಟ್ಟೆ, ಬಾಗದಮರಿಗೆ, ಅಡಿಗಾರ, ಮರದ ಸೌಟು, ಚಿಪ್ಪಿನಿಂದ ಮಾಡಿದ ಕೌಲು, ಕುಡಿಯಲು ಕರಟದ ಚಿಪ್ಪುಗಳನ್ನು ಬಳಸುತ್ತಿದ್ದರು.ಕೃಷಿಗೆ ಸಂಬಂಧಿಸಿದ ನೇಗಿಲು, ನೊಳ್ಳಿ, ಗಾಡಿ ಬಾಯಿಕುಕ್ಕೆ, ಜತಕ ಮಿಣಿ, ಹೆಡಿಗೆ, ಬುಟ್ಟಿ ಮೊದಲಾದವುಗಳು ಇರುತ್ತಿದ್ದವು. ಹೆಡಿಗೆ, ಬುಟ್ಟಿ, ಜಲ್ಲೆ, ತಟ್ಟಿ, ಗೊರಬಲು, ಮಂಡಾಳೆ, ತಟ್ಟಿ ಶಿಬ್ಲು ಮೊದಲಾದವುಗಳನ್ನು ಮಾಡುತ್ತಿದ್ದರು.

ಗಿರಿಜನರು ಮೊದಲು ಹುಲ್ಲು, ಸೋಗೆಯ ಮನೆಗಳಲ್ಲಿ ವಾಸವಿದ್ದರು. ನಂತರ ಹಂಚಿನಮನೆಗಳಿಗೆ ಕೆಲವರು ಬದಲಾದರು. ಕೆಲವರು ಉತ್ತಮ ಗುಣಮಟ್ಟದ ಮನೆನಿರ್ಮಾಣ ಮಾಡಿಕೊಂಡಿದ್ದಾರೆ. ಹೆಚ್ಚಿನವರು ಈಗಲೂ ಸಹ ಸೋಗೆ, ಹುಲ್ಲು ಮನೆ, ಗೋಡೆಯಾಗಿ ಬಿದಿರು ತಡಿಕೆ, ಅದಕ್ಕೆ ಮಣ್ಣನ್ನು ಹೊಡೆದಿರುತ್ತಾರೆ. ಬಡವರ ಮನೆಯನ್ನು ಈಗಲೂ ಕಾಣಬಹುದಾಗಿದೆ.

ಮಹಿಳೆಯರು ಹಣೆಗೆ ಅಗಲವಾಗಿ ಕುಂಕುಮವಿಡುತ್ತಿದ್ದರು. ಕೆನ್ನೆಗೆ ಅರಶಿನ, ತುರುಬಿಗೆ ಹೂವು, ಕಿವಿಗೆ ಬುಗುಡಿ ಸರ, ಗೆಜ್ಜೆಗಳನ್ನು ತೊಡುತ್ತಿದ್ದರು. ಯುವತಿಯರು ಜಡೆಗೆ ಗೊಂಡೆ, ಕಾಲಿಗೆ ಕಡಗಗಳನ್ನು ಹಾಕುತ್ತಿದ್ದರು. ಕಣ್ಣಿಗೆ, ಹುಬ್ಬಿಗೆ ಕಾಡಿಗೆ ಹಚ್ಚುತ್ತಿದ್ದರು. ಚಿಕ್ಕಮಕ್ಕಳಿಗೆ ಹಣೆಗೆ, ಕೆನ್ನೆಗೆ, ಕಾಲಿಗೆ ಕಪ್ಪನ್ನು ಹಚ್ಚುತ್ತಿದ್ದರು.

ಉಳಿದಂತೆ ಕುಟುಂಬ ವ್ಯವಸ್ಥೆ, ಸಾಮಾಜಿಕ ಜೀವನವಿಧಾನ, ಆರ್ಥಿಕ ಸ್ಥಾನಮಾನ, ಭಾಷೆ, ಕಲೆ, ಆಹಾರ ಬೆಳೆಗಳು, ರೋಗ, ರೋಗ ನಿರೋಧಕ ಪದ್ಧತಿ, ವಿದ್ಯಾಭ್ಯಾಸ ಕ್ರಮ, ಆಡಳಿತ ವ್ಯವಸ್ಥೆ ಮೊದಲಾದವುಗಳು ಶೃಂಗೇರಿ ಸುತ್ತಮುತ್ತಲ ಇತರೆ ಜಾತಿ ಜನಾಂಗದವರಲ್ಲಿರುವಂತೆಯೆ ಇವೆ. ನಾಗರಿಕ ಸಂಪರ್ಕದಿಂದ ದೂರವಿರುವುದರಿಂದ ತನ್ನದೇ ಆದ ಅನನ್ಯತೆಯನ್ನು ಈ ಜನಾಂಗ ಹೊಂದಿದೆ. ಈಗಲೂ ಹೆಡಿಗೆ, ಬುಟ್ಟಿ ಮಾಡುತ್ತಾರೆ. ಜೇನುತುಪ್ಪವನ್ನು ಮಾರಾಟಮಾಡುತ್ತಾರೆ. ಹಿಡಿ, ಚಾಪೆ, ತಟ್ಟಿ, ಬುಟ್ಟಿಗಳನ್ನು ಮಾಡಿ ಮಾರಾಟ ಮಾಡುತ್ತಾರೆ. ಓಟೆ ಹುಳಿ, ಮುರುಗನ ಹುಳಿ, ರಾಮಡಿಕೆ ವನಸ್ಪತಿ, ದಾಲ್ಚಿನ್ನಿ ತೆಪ್ಪೆ, ಹೂವು ಎಲೆ ಮೊದಲಾದವುಗಳನ್ನು ಮಾರಾಟ ಮಾಡಿ ಜೀವನ ನಿರ್ವಹಿಸುತ್ತಿದ್ದಾರೆ. ಲ್ಯಾಂಪ್ ಸೊಸೈಟಿಯ ಮೂಲಕ ಮಾರಾಟ ಮಾಡುತ್ತಾರೆ.[50]

2.4 ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು :

ಶೃಂಗೇರಿ ತಾಲ್ಲೂಕಿನಲ್ಲಿ ಬುಡಕಟ್ಟಿಗೆ ಸೇರಿದ ಗೌಡ್ಲು, ಮಲೆಕುಡಿಯ ಮತ್ತು ಹಸಲರು ಈ ಜನಾಂಗದವರಿದ್ದಾರೆ. ದಟ್ಟ ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶವಿರುವುದರಿಂದ ನಿರಾತಂಕವಾಗಿ ಅನೇಕ ವರ್ಷಗಳಿಂದ ಜೀವನ ನಿರ್ವಹಣೆಮಾಡಿಕೊಂಡು ಬಂದಿದ್ದಾರೆ. ಗಿರಿಜನರು ಮೂಲತಃ ಇಲ್ಲಿಯ ಮೂಲನಿವಾಸಿಗಳಾಗಿದ್ದಾರೆ. ಶೃಂಗೇರಿ ಸಂಸ್ಕೃತಿಯ ಅನನ್ಯತೆಯನ್ನು ಗುರುತಿಸುವಾಗ ಪ್ರಧಾನವಾಗಿ ಗಿರಿಜನರ ಸಂಸ್ಕೃತಿಯ ಆಧಾರವನ್ನೇ ಇಟ್ಟುಕೊಳ್ಳಬೇಕಾಗುತ್ತದೆ. ನಾಗರಿಕವರ್ಗದವರ ಪ್ರಭಾವಕ್ಕೆ ಒಳಗಾಗದೆ ತಮ್ಮ ತನವನ್ನು ಉಳಿಸಿ ಬೆಳಸಿಕೊಂಡು ಬಂದ ಕೀರ್ತಿಗೆ ಕಾರಣರಾಗಿದ್ದಾರೆ. ಗುಡ್ಡಗಾಡು ಜನಾಂಗದವರ ಸಂಸ್ಕೃತಿಯು ಒಕ್ಕಲಿಗರ ಆಚರಣೆ ನಂಬಿಕೆಯಂತೆ ಬಹುತೇಕ ಇದೆ.

ಬುಡಕಟ್ಟು ಜನರ ಸಮಸ್ಯೆ ಹಾಗೂ ಸವಾಲುಗಳು:

ಇತ್ತೀಚಿನವರೆಗೆ ಗಿರಿಜನರು ತಮ್ಮದೇ ಆದ ವೃತ್ತಿಜೀವನ ಆಚಾರ ವಿಚಾರಗಳಿಂದ ನೆಮ್ಮದಿಯ ದಿನಗಳನ್ನು ಕಳೆಯುತ್ತಿದ್ದರು ಕುದುರೆಮುಖ ರಾಷ್ಟ್ರೀಯ ಉದ್ಯಾನ ಘೋಷಣೆಯಿಂದ ಅವರ ಬದುಕಿನಲ್ಲಿ ಅಲ್ಲೋಲ ಕಲ್ಲೋಲವಾಯಿತು. ಅಸ್ಥಿರತೆ ಕಾಡತೊಡಗಿತು. ಬಹುತೇಕ ಕುಟುಂಬ ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗೆ ಬರುತ್ತದೆ. ವನಸಂಪತ್ತನ್ನು ಬಳಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದ ಇವರಿಗೆ ನಿರ್ಬಂಧ ಹೇರಲಾಯಿತು. ಅರಣ್ಯದೊಳಗೆ ಪ್ರವೇಶಿಸದಂತೆ ಹಾಗೂ ಅದನ್ನು ಬಳಸದಂತೆ ತಡೆಯಲಾಯಿತು. ಇದು ಅವರ ಬದುಕಿನ ಪ್ರಶ್ನೆಯಾಗಿ ಕಾಡತೊಡಗಿತು. ಅನ್ಯಮಾರ್ಗವಿಲ್ಲದೆ ಆಡಳಿತ ವ್ಯವಸ್ಥೆಯ ವಿರುದ್ಧ ಸೆಟೆದು ನಿಂತು ಪ್ರತಿರೋಧವನ್ನು ಒಡ್ಡಬೇಕಾದ ಸ್ಥಿತಿ ನಿರ್ಮಾಣವಾಯಿತು. ಈಗಲೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಾಗೂ ಬದುಕಲು ಅನಿವಾರ್ಯವಾಗಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಇದು ಅವರು ಎದುರಿಸಿದ

ಮೊದಲನೆಯ ಸಮಸ್ಯೆ. ಕುದುರೆಮುಖ ಗಣಿಗಾರಿಕೆಯಿಂದ ಆಗಬಹುದಾದ ತೊಂದರೆ ಅನಾಹುತ, ತುಂಗಾನದಿ ಬತ್ತುವ ಸಾಧ್ಯತೆ ಮೊದಲಾದವುಗಳನ್ನು ಅವಲೋಕಿಸಿ ಕುದುರೆಮುಖ ಕಬ್ಬಿಣ ಅದಿರು ಕೈಗಾರಿಕಾ ಸಂಸ್ಥೆಯ ವಿರುದ್ಧ ಹೋರಾಡುವ ಅನಿವಾರ್ಯತೆ ಎದುರಾಯಿತು. ಪ್ರಸ್ತುತ ಸ್ಥಳದಲ್ಲಿ ಅದಿರು ಕಡಿಮೆ ಪ್ರಮಾಣದಲ್ಲಿ ಇದ್ದುದರಿಂದ ಬದಲಿಯಾಗಿ ಗಂಗಡಿಕಲ್ಲು ಗುಡ್ಡದಲ್ಲಿ ಗಣಿಗಾರಿಕೆಗೆ ಕಂಪನಿ ಮುಂದಾದಾಗ ಅನಿವಾರ್ಯ ಹೋರಾಟಗಳು, ಪ್ರತಿಭಟನೆಗಳು ನಡೆದವು. ಈ ಎಲ್ಲಾ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದವರು ಮತ್ತು ಸಕ್ರಿಯವಾಗಿ ತೊಡಗಿದವರು ಗಿರಿಜನರು. ಅದರ ಸಾಧಕ–ಬಾಧಕಕ್ಕೆ ಇವರು ನೇರಹೊಣೆಗಾರರಾಗಿದ್ದಾರೆ. ಇದು ಅವರ ಮುಂದಿರುವ ಎರಡನೆಯ ಸಮಸ್ಯೆಯಾಗಿದೆ.

ಮೂರನೆಯದಾಗಿ ನಕ್ಸಲ್ ಸಮಸ್ಯೆಯು ಭೀಕರವಾಗಿರುವುದು. ಗಿರಿಜನರು ನಕ್ಸಲ್ ಪ್ರವೇಶದಿಂದಾಗಿ ಪ್ರಧಾನವಾಗಿ ಮೂರು ಮುಖ್ಯ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಒಂದು ನಕ್ಸಲ್‌ರಿಂದ ತೊಂದರೆ, ಭಯ, ನಕ್ಸಲ್ ಚಟುವಟಿಕೆಗೆ ಯುವ ಜನಾಂಗದವರನ್ನು ಪರಿವರ್ತಿಸುವುದು. ಎರಡನೆಯದಾಗಿ ನಕ್ಸಲ್ ನಿಗ್ರಹಪಡೆಯವರು ಮಾಡಿರುವ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ, ಅಶಾಂತಿ. ಮೂರನೆಯದಾಗಿ ತಮ್ಮ ಸ್ವಾರ್ಥ ಹಿತಚಿಂತನೆಗಾಗಿ ಸಮಾಜದಲ್ಲಿ ನಾನೊಬ್ಬ ಹೋರಾಟಗಾರ, ಜನಪರಕಾಳಜಿ ಇರುವ ಚಳುವಳಿಗಾರನೆಂದು ಗುರುತಿಸಿಕೊಳ್ಳಲು ಕಾಣಿಸಿಕೊಂಡ ಸ್ವಯಂಘೋಷಿತ ಪರಿಸರವಾದಿ ಮುಖಂಡರ ಸ್ವಾರ್ಥಹಿತಚಿಂತನೆಯ ದುರ್ಮಾರ್ಗಗಳು. ಇವು ಇಲ್ಲಿಯ ಸಂಸ್ಕೃತಿಯ ಪಲ್ಲಟಕ್ಕೆ ಪ್ರಧಾನ ಪಾತ್ರವಹಿಸಿವೆ. ಈ ಮೇಲಿನ ಸಮಸ್ಯೆಗಳಿಲ್ಲದಿದ್ದರೆ ಆಧುನಿಕತೆಯ ನೇರ ಪರಿಣಾಮ ಈ ಭಾಗದವರ ಮೇಲಾಗದೆ ಬಹುತೇಕ ಮೂಲ ಸಂಸ್ಕೃತಿಯ ಅಂಶಗಳನ್ನು ಈ ಜನಾಂಗದವರಲ್ಲಿ ಕಾಣಬಹುದಿತ್ತು.

ಸ್ಥಳೀಯ ಮುಗ್ಧಜನರನ್ನು ದುರುಪಯೋಗ ಪಡಿಸಿಕೊಂಡು ಸ್ವಯಂ ಘೋಷಿತ ಬುದ್ಧಿಜೀವಿ ಹೋರಾಟಗಾರರೆನಿಸಿಕೊಂಡ ಕೆಲವರು ಪ್ರಚಾರಾಸಕ್ತಿಯಿಂದ ಹಣಗಳಿಸುವ ದುಷ್ಟಮಾರ್ಗದಿಂದ ತಮ್ಮ ಹಾಗೂ ಬಂಧುಗಳ ಸ್ನೇಹಿತರ ಜಮೀನನ್ನು ಉಳಿಸುವ ಸಲುವಾಗಿ ರಾಷ್ಟ್ರೀಯ ಉದ್ಯಾನ ವ್ಯಾಪ್ತಿ ಪ್ರದೇಶವನ್ನು ಬಿಟ್ಟು ಹೊರಹೋಗುವುದಿಲ್ಲವೆಂದು ಪ್ರತಿಭಟಿಸುವಂತೆ ಜನರಿಗೆ ವಿಷಬೀಜವನ್ನು ಬಿತ್ತಿದ್ದಾರೆ. ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯೊಳಗೆ ಗಿರಿಜನರಲ್ಲದ ಅನೇಕ ಜನರು ಅಕ್ರಮವಾಗಿ ಕೃಷಿಭೂಮಿ ಒತ್ತುವರಿ ಮಾಡಿಕೊಂಡಿದ್ದಾರೆ. ಉದ್ಯಾನ ವ್ಯಾಪ್ತಿಯ ಒಳಗಿರುವವರಿಗೆ ಪರಿಹಾರ ಕೊಟ್ಟು ಹೊರಕಳಿಸುವ ಆಲೋಚನೆ ಸರ್ಕಾರದಲ್ಲಿದ್ದಾಗ, ಪರಿಹಾರ ಹಣ ಸಿಗುವುದು ಕೇವಲ ಅಧಿಕೃತ ಭೂಮಿಗೆ ಮಾತ್ರಾ ಅಕ್ರಮ ಒತ್ತುವರಿಗೆ ಸಿಗುವುದಿಲ್ಲ. ಈ ಅಕ್ರಮ ಜಮೀನು ಉಳಿಸುವ ಸಲುವಾಗಿ ಗಿರಿಜನರನ್ನು ಮುಂದಿಟ್ಟು ಹೋರಾಟ ಮಾಡಿದರು. ಈ ಹೋರಾಟದ ಫಲವಾಗಿ ನಕ್ಸಲ್ ಸೃಷ್ಟಿಯಾಯಿತು. ಗಿರಿಜನರಲ್ಲಿ ಅನೇಕರು ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಕೊಂಡರು.

ಇನ್ನೂ ಬೇರೆ ಬೇರೆ ಭಾಗದಿಂದ ಬಂದು ಸೇರಿ ಹೋರಾಟದ ಮಾರ್ಗವನ್ನು ರಕ್ತಮಯಮಾಡಿದರು. ದಾರಿ ತಪ್ಪಿಸಿ ಕಾಡಿಗಟ್ಟಿದ ಹೋರಾಟಗಾರರು ಈಗ ಅವರ ಚಂದ ನೋಡುತ್ತಿದ್ದಾರೆ. ಸಾವು ಬದುಕಿನ ಹೋರಾಟದಲ್ಲಿ ನಕ್ಸಲರು ಕಾಡಿನಲ್ಲಿ ಜೀವಿಸುತ್ತಿದ್ದಾರೆ.

ಮುಗ್ಧ ಬಡವರು ನಕ್ಸಲ್ ಚಟುವಟಿಕೆಯಲ್ಲಿದ್ದಾರೆಯೇ ವಿನಾ ಶ್ರೀಮಂತರಾರೂ ತಮ್ಮ ಮಕ್ಕಳನ್ನು ಇದಕ್ಕೆ ತೊಡಗಿಸದೆ ಬೇರೆಯವರ ಮಕ್ಕಳನ್ನು ತಳ್ಳುತ್ತಿದ್ದಾರೆ. ಪರಿಸರಪ್ರೇಮಿ, ಜನಪರ ಚಳುವಳಿಗಾರರು, ಪರಿಸರವಾದಿ ಎಂಬ ಹಣೆಪಟ್ಟಿ ಹೊತ್ತ ಅನೇಕರು ತಮ್ಮ ಅಸ್ತಿತ್ವವನ್ನು ಗುರುತಿಸಿ ಸಮಾಜದಲ್ಲಿ ನಾವು ಒಂದು ಜನವೆಂದು, ಹೋರಾಟಗಾರರೆಂದು ತೋರಿಸಿಕೊಡಲು ಪತ್ರಿಕೆ, ದೂರದರ್ಶನ ಹಾಗೂ ಇತರೆ ಮಾಧ್ಯಮದಲ್ಲಿ ಬಿಂಬಿಸಿಕೊಂಡರು. ಬಿಸಿಲಿನ ಧಗೆಗೆ ಹೆದರದೆ ಪೋಲೀಸರ ಲಾಠಿಗೆ ಜಗ್ಗದೆ ಹಸಿವಿನಲ್ಲೂ ಬೀದಿ ಬೀದಿಯಲ್ಲಿ ಪ್ರತಿಭಟನೆ ಮಾಡಿದವರು ಈ ಮುಗ್ಧ ಜನರು. ಹೋರಾಟಗಾರರೆಂದು ಬಿಂಬಿತರಾದವರು ಬೇರೆಯವರೆ.

ಇದೊಂದು ಪ್ರಮುಖ ಸಾಮಾಜಿಕ ವಿಷಯವಾಗಿದ್ದರೂ ಗಿರಿಜನರ ಸಾಂಸ್ಕೃತಿಕ ಪಲ್ಲಟದಲ್ಲಿ ಪ್ರಮುಖ ಪಾತ್ರವಹಿಸಿದೆ. ಅವರ ಬದುಕಿನ ಸ್ವರೂಪವನ್ನೇ ಬದಲಿಸಿದೆ. ಸಾಂಸ್ಕೃತಿಕ ಅನನ್ಯತೆ ಮರೆಯಾಗಿ ಆಧುನಿಕ ಜೀವನವಿಧಾನಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಯುವ ಪೀಳಿಗೆಯವರು ಸಂಪೂರ್ಣ ಬದಲಾವಣೆ ಹೊಂದಿದ್ದಾರೆ. ಕುಟುಂಬದ ಹಿರಿಯರು ಹಳೆಯ ಆಚಾರ, ಪದ್ಧತಿಗಳನ್ನು ಅನಿಸರಿಸಿದರೂ ಕೇವಲ ಆತ್ಮ ಸಮಾಧಾನಕ್ಕೆ ವಿನಾ ಕುಟುಂಬದ ಯುವಸದಸ್ಯರುಗಳ ಪ್ರೋತ್ಸಾಹ ಬೆಂಬಲ ಸಿಗುತ್ತಿಲ್ಲ. ಈ ದೆಸೆಯಲ್ಲಿ ಬಹುತೇಕ ಕುಟುಂಬದಲ್ಲಿ ಬಹಳಷ್ಟು ಆಚರಣೆಗಳು ಯಾಂತ್ರಿಕವಾಗಿ ನಡೆದರೆ, ಇನ್ನೆಷ್ಟೋ ಕುಟುಂಬದಲ್ಲಿ ಆಚರಣೆಗಳೇ ಮಾಯವಾಗಿವೆ.

ಗುಡ್ಡಗಾಡುಜನರು ಕನ್ನಡ ಮಣ್ಣಿನ ಸದ್ಗುಣಗಳನ್ನೆಲ್ಲಾ ಮೈಗೂಡಿಸಿಕೊಂಡವರು. ಶಾಂತಿಪ್ರಿಯ ಸಹನಾಶೀಲ ಶ್ರಮಜೀವಿಗಳು. ಅಲ್ಪ ಸ್ವಲ್ಪ ಕೃಷಿಭೂಮಿ ಹಾಗೂ ಇತರೆ ಗೃಹಕೈಗಾರಿಕೆಯಿಂದ ಬರುವ ಆದಾಯದಲ್ಲಿ ಜೀವನ ನಿರ್ವಹಣೆ ಮಾಡುತ್ತಾರೆ. ಕೆಲವು ಕುಟುಂಬಗಳು ಜಮೀನುದಾರರ ಕೂಲಿ ಆಳುಗಳಾಗಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಈ ಪ್ರದೇಶದಲ್ಲಿ ಕೇವಲ ಪರಿಶಿಷ್ಟಜಾತಿಯವರು ಮಾತ್ರ ಸೀಮಿತವಾಗಿರದೆ ಇತರೆ ಜಾತಿ, ಧರ್ಮ, ಮತದವರು ವಾಸವಿದ್ದು, ಅವರೊಂದಿಗೆ ಸಮಷ್ಟಿ ಪ್ರಜ್ಞೆ, ಸಹಬಾಳ್ವೆ, ಭಾವೈಕ್ಯತೆಯಿಂದ ಜೀವನ ನಡೆಸುವುದು ಇವರ ಗುಣಸ್ವಭಾವವಾಗಿದೆ. ಊರಿಗೆ ಸಂಬಂಧಿಸಿದ ಕೆಲಸಕಾರ್ಯಗಳಾಗಬೇಕಾದರೆ, ಹಬ್ಬಹರಿದಿನಗಳು ಬಂದರೆ, ಚುನಾವಣೆ ಹಾಗೂ ಇತರೆ ಕಾರ್ಯಕ್ರಮಗಳು ನಡೆದರೆ ಜನರು ಒಗ್ಗಟ್ಟಿನಿಂದ ಭಾಗವಹಿಸುತ್ತಾರೆ. ಬಹಳ ಪ್ರೀತಿ ಆದರದಿಂದ ಅದನ್ನು ಸ್ವೀಕರಿಸಿ ಆನಂದಿಸುತ್ತಾರೆ.

'ನಾಡಿನ ಪರಂಪರೆ ಹಳ್ಳಿಗಳಲ್ಲಿ ಕಾಣಸಿಗುತ್ತದೆ' ಎಂಬ ಮಾತಿನಂತೆ ನಗರದ ಸದ್ದು ಗದ್ದಲದಿಂದ ಬಹಳಷ್ಟು ದೂರವಿರುವ ಈ ಜನರಿಗೆ ನಾಗರಿಕ ಬದುಕಿನ ಸಂಪರ್ಕವು ಬಹಳ ದೂರವಾಗಿತ್ತು.

ಹಳ್ಳಿಗಳ ಮೂಲೆ ಮೂಲೆಯಲ್ಲಿ ಒಂದೊಂದು ಮನೆಗಳಿರುತ್ತಿದ್ದವು. ಹೋಗಿ ಬರಲು ದುಸ್ತರವಾದ ದಾರಿ, ಕಾಡು ಹಾಗೂ ಗುಡ್ಡದ ಮಗ್ಗುಲಿನ ಕಾಲುದಾರಿಯಲ್ಲಿ ಸಂಚಾರ, ಸೋಗೆ ಹುಲ್ಲಿನ ಹೊದಿಕೆಯಿರುವ ಮನೆಗಳು ಇವೆ. ಇತ್ತೀಚೆಗೆ ಶೃಂಗೇರಿ ತಾಲ್ಲೂಕು ಕೇಂದ್ರದಲ್ಲಿ ವಿದ್ಯುತ್, ರಸ್ತೆ, ಆಧುನಿಕ ವಸ್ತು ಉಪಕರಣಗಳು, ಟಿ.ವಿ. ರೇಡಿಯೋ ಮೊದಲಾದವುಗಳು ಬಳಕೆಗೆ ಬಂದರೂ ಗಿರಿಜನರು ವಾಸವಿರುವ ಆ ಪ್ರದೇಶಕ್ಕೆ ಇದರ ಸೋಂಕೇ ತಗಲುತ್ತಿರಲಿಲ್ಲ.

ಇತ್ತೀಚೆಗಿನ ಸಂದರ್ಭದಲ್ಲಿ ಆಂದೋಲನ, ಚಳುವಳಿಗಳೆಂದರೆ ಅದು ರಾಜಕೀಯ ಪ್ರೇರಿತ, ಪಕ್ಷಗಳ ಆಧಾರಿತ ಹೋರಾಟಗಳಾಗಿವೆ. ಆಯಾಯ ರಾಜಕೀಯ ಪಕ್ಷಗಳ, ಗುಂಪುಗಳ ಮತಗಳಿಕೆಯ ಹಿತಾಸಕ್ತಿಯೇ ಹೆಚ್ಚಾಗಿದ್ದು, ಮಲೆನಾಡಿಗರ ಕಲ್ಯಾಣಕ್ಕಾಗಿ ಆಂದೋಲನ ನಡೆದಿಲ್ಲ. ಅಂತಹ ನಾಯಕತ್ವ ಬೆಳೆಯಲಿಲ್ಲ. ಇದಕ್ಕೆ ಶೃಂಗೇರಿಯ ಜಹಗೀರಿನ ವ್ಯವಸ್ಥೆ ಕಾರಣವಿರಬಹುದು ಅಥವಾ ತೀರಾವಿರಳ ಸಂಖ್ಯೆಯ ಜನರನ್ನು ಹೊಂದಿರುವುದರಿಂದ ನಾಯಕತ್ವ ಬೆಳೆಯದಿರಬಹುದು.

ಸರ್ಕಾರ ಹಾಗೂ ನಕ್ಸಲರ ನಡುವಿನ ರಣರಂಗದಲ್ಲಿ ಮೂಕಪ್ರೇಕ್ಷಕರಂತೆಯಿದ್ದು, ಅಮಾಯಕರಾಗಿ ಬಲಿಯಾಗುತ್ತಿರುವುದು ಈ ಭಾಗದ ಮುಗ್ಧಜನರು. ಈ ಮುಖಾಮುಖಿಯ ನಡುವೆ ಮುಗ್ಧ ಜನರ ಭಾವನೆಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹಾಗೂ ವ್ಯವಧಾನ ಯಾರಲ್ಲೂ ಕಂಡುಬರುತ್ತಿಲ್ಲ. ಇದರಲ್ಲಿ ಹೆಣ್ಣುಮಕ್ಕಳು ಶೋಷಣೆಗೆ ಬಲಿಯಾಗುತ್ತಿರುವುದು ಸಮಾಜದ ಭ್ರಷ್ಟವ್ಯವಸ್ಥೆಯ ಕೈಗನ್ನಡಿಯಾಗಿದೆ. ಮಾನವೀಯ ಸಂಬಂಧಗಳು ವ್ಯಾವಹಾರಿಕವಾಗಿ ಒಬ್ಬರು ಮತ್ತೊಬ್ಬರನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ತೋರಿದ ಮೃಗೀಯ ವರ್ತನೆ, ಮೂಢನಂಬಿಕೆ, ಅಂಧ ಆಚಾರಗಳಲ್ಲಿ ಸ್ತ್ರೀಯರನ್ನು ಅಮಾನವೀಯವಾಗಿ ನಡೆಸಿಕೊಂಡ ಬಗ್ಗೆ ಸ್ತ್ರೀ ತನ್ನ ಜೈವಿಕ ರಚನೆಯಿಂದಾಗಿ ಎದುರಿಸಬೇಕಾದ ಪ್ರಸಂಗಗಳು, ಅನುಭವಿಸಬೇಕಾದ ಯಾತನೆಗಳು ಈ ಎಲ್ಲಾ ವ್ಯವಸ್ಥೆಗಳು ಭ್ರಷ್ಟವ್ಯವಸ್ಥೆಯ ಪ್ರತಿರೂಪಗಳು.ಅನಾದಿಕಾಲದಿಂದಲೂ ಸೂಕ್ಷ್ಮ ಸಂವೇದಿಯಾದ ಸ್ತ್ರೀಯು ಈ ಎಲ್ಲಾ ನೋವುಗಳನ್ನು ಮೂರ್ತರೂಪದಲ್ಲಿ ಸಹಿಸುತ್ತಾ ಬಂದಿದ್ದಾಳೆ. ನಕ್ಸಲ್ ಚಟುವಟಿಕೆಯ ಆರಂಭ ಹಾಗೂ ಮಧ್ಯಮ ಅವಧಿಯಲ್ಲಿ ಪ್ರಮುಖವಾಗಿ ಬಲಿಪಶುಗಳಾದವರು ಅಲ್ಲಿಯ ಹರೆಯದ ಹೆಣ್ಣುಮಕ್ಕಳು. ನಕ್ಸಲರು ಇವರಿಗೆ ಇಲ್ಲ ಸಲ್ಲದ ಆಮಿಷಗಳನ್ನು ಒಡ್ಡಿ ಅವರನ್ನು ಸ್ವಯಂ ಪ್ರೇರಿತವಾಗಿ ಅಥವಾ ಒತ್ತಾಯ ಪೂರ್ವಕವಾಗಿ ನಕ್ಸಲ್ ಚಟುವಟಿಕೆಗೆ ತೊಡಗುವಂತೆ ಮಾಡುತ್ತಿದ್ದರು. ತಿರಸ್ಕರಿಸಿದವರನ್ನು ಬಲವಂತವಾಗಿ ಅನೈತಿಕ ಚಟುವಟಿಕೆಗಳಲ್ಲಿ ಬಳಸಿಕೊಳ್ಳುತ್ತಿದ್ದರು. ಹೀಗೆ ನಕ್ಸಲರ ಶೋಷಣೆ, ಪೋಲೀಸರ ಶೋಷಣೆ, ಆಡಳಿತವರ್ಗದವರ ಶೋಷಣೆ ನಿರಂತರವಾಗಿ ನಡೆದಿದೆ, ನಡೆಯುತ್ತಾಯಿದೆ. ಇದು ಪ್ರಮುಖವಾಗಿ ಮಲೆನಾಡ ಸಂಸ್ಕೃತಿಯ ಕೇಂದ್ರ ಸ್ಥಳವೆಂದು ಗುರುತಿಸಲು ಯೋಗ್ಯವಾದ ಭೂಭಾಗದಲ್ಲಿ ಕಂಡುಬಂದಿರುವುದರಿಂದ ತೀವ್ರಗತಿಯಲ್ಲಿ ಮೂಲಸಂಸ್ಕೃತಿ ನಾಶವಾಗಿಯೋ, ಪರಿವರ್ತನೆಯಾಗಿಯೋ, ಬೇರೆರೂಪವನ್ನು ಪಡೆದೋ ಪಲ್ಲಟಗಳಾಗಿವೆ.

ಗಿರಿಜನರ ಹಬ್ಬಾಚಾರಣೆ, ನಡೆನುಡಿ, ವೇಷಭೂಷಣ, ಕೃಷಿ ಮೊದಲಾದವುಗಳು ಸಂಪ್ರದಾಯಬದ್ಧವಾಗಿ ನಡೆಯುತ್ತಿತ್ತು. ಪ್ರತಿಯೊಂದರಲ್ಲೂ ಶ್ರದ್ಧಾಭಕ್ತಿಯಿರುತಿತ್ತು. ಊರದೇವರ ಜಾತ್ರೆ, ಹರಕೆ, ಮದುವೆ ಮೊದಲಾದ ಕಾರ್ಯಕ್ರಮಗಳು ಊರವರ ನೆರವಿನಿಂದ ಸಾಂಗವಾಗಿ ನಡೆಯುತ್ತಿತ್ತು. ಇತ್ತೀಚಿನ ಗೊಂದಲದಿಂದ ಬದುಕೆ ಕಷ್ಟಕರವಾಗಿ ಸಾಂಸ್ಕೃತಿಕ ಪರಂಪರೆ ಮರೆಯಾಗಿದೆ. ವಯಸ್ಕರಲ್ಲಿ ನೋವಿನ ಧ್ವನಿ ಪ್ರತಿಧ್ವನಿಸುತ್ತಿದೆ. ಆಧುನಿಕ ವರ್ತನೆಯ ಯುವಪೀಳಿಗೆಯವರನ್ನು ಕಂಡು ಮನ ನೊಂದುಕೊಳ್ಳುತ್ತಿದೆ.

ರಾಷ್ಟ್ರೀಯ ಉದ್ಯಾನ ಘೋಷಣೆಯಿಂದ ಈ ಭೂಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗುತ್ತಿಲ್ಲ. ಹೊಸ ಕಾಮಗಾರಿಗಳು, ನೂತನ ಯೋಜನೆಗಳು ಈ ಭಾಗದಲ್ಲಿ ನಡೆಯುತ್ತಿಲ್ಲ. ಮೊದಲೆ ಇವರು ತೀರಾ ಒಳ ಪ್ರದೇಶಗಳಲ್ಲಿ ವಾಸವಾಗಿರುವವರು. ಅಭಿವೃದ್ಧಿ ಕಾಣದೆ ನಾಗರಿಕ ಸಂಪರ್ಕದಿಂದ ದೂರವಿರುವುದರಿಂದ ಬದುಕು ಕಷ್ಟಕರವಾಗಿದೆ. ಯುವ ಪೀಳಿಗೆಯವರು ನಕ್ಸಲ್ ಚಟುವಟಿಕೆಯಲ್ಲಿ ತೊಡಗುತ್ತಾರೆ. ಹೆಚ್ಚಿನವರು ತಮ್ಮ ಕೃಷಿಭೂಮಿಯನ್ನು ಮಾರಾಟಮಾಡುತ್ತಿದ್ದಾರೆ. ಕೃಷಿ ಬೆಳೆಯ ಬದಲಿಗೆ ಅಕೇಶಿಯಾ, ರಬ್ಬರ್ ಮೊದಲಾದ ಪ್ಲಾಂಟೇಷನ್ ಬೆಳೆಯನ್ನು ಬೆಳೆಯುತ್ತಿದ್ದಾರೆ.

ಕೂಲಿಕಾರ್ಮಿಕರ ಕೂಲಿ ಸಂಬಳ ಅಧಿಕವಾಗಿದೆ. ಕೆಲಸಗಾರರ ಕೊರತೆಯಿದೆ. ಬಂದ ಬೆಳೆಗೆ ಸಮರ್ಪಕ ಬೆಲೆಸಿಗುತ್ತಿಲ್ಲ. ಮಾರುಕಟ್ಟೆಯ ಸೌಲಭ್ಯವಿಲ್ಲ. ಬಂದಷ್ಟು ಹಣಕ್ಕೆ ಮೂರನೇ ವ್ಯಕ್ತಿಗಳಿಗೆ ಮಾರುವವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಬೆಳೆ ಬೆಳೆಯಲು ಮೊದಲೇ ಸಾಲ ತಂದಿರುತ್ತಾರೆ. ಆ ಸಾಲದ ವಜಾಕ್ಕಾಗಿ ತಾವು ಬೆಳೆದ ಪದಾರ್ಥಗಳನ್ನು ಅವರಿಗೆ ಕೊಡುತ್ತಾರೆ. ಈ ಭಾಗದ ಲೇವಾದೇವಿದಾರರು ನೆಮ್ಮದಿಯ ದಿನಗಳನ್ನು ಕಳೆಯುತ್ತಿದ್ದಾರೆ. ಯಾವುದೇ ಶ್ರಮವಿಲ್ಲದೆ ಲಾಭಗಳಿಸುತ್ತಾರೆ. ಬೆಳೆಗಳಿಗೆ ರೋಗಬಾಧೆಯಿರುವುದರಿಂದ ಅವುಗಳನ್ನು ಉಳಿಸಿಕೊಳ್ಳುವುದೇ ಕಷ್ಟಕರವಾಗಿದೆ. ಈ ಪ್ರದೇಶದಲ್ಲಿ ಪ್ರಮುಖವಾಗಿ ಅಡಿಕೆ, ಕಾಫಿ, ಮೆಣಸು ಮೊದಲಾದವುಗಳನ್ನು ಬೆಳೆಯುತ್ತಾರೆ. ಅಡಿಕೆಗೆ ಹಳದಿ ಎಲೆ ರೋಗ, ಬೇರುಹುಳು ರೋಗ ಮಾರಕ ರೋಗಗಳಾಗಿದ್ದು ಒಮ್ಮೆ ಈ ರೋಗದ ಲಕ್ಷಣ ಕಂಡು ಬಂದರೆ ಅದರ ಸರ್ವನಾಶ ಖಂಡಿತ. ಕೃಷಿ ಪರಿಕರ, ಸರಕು ಸಾಗಣಿಕೆಗೆ ತೀರಾ ತೊಂದರೆಗಳಿದ್ದು ಅಭಿವೃದ್ಧಿ ಕಾರ್ಯ ಕ್ಷೀಣಿಸುತ್ತಿದೆ.

ದಟ್ಟ ಅರಣ್ಯ ಪ್ರದೇಶವಾಗಿರುವುದರಿಂದ ಪ್ರಾಣಿ ಪಕ್ಷಿಗಳು ಹೇರಳವಾಗಿವೆ. ಹಿಂದಿನಂತೆ ಬೇಟೆಯಾಡುವುದು ಪ್ರಾಣಿಗಳನ್ನು ಗಾಬರಿಪಡಿಸಿ ಓಡಿಸುವುದಾಗಲಿ ಮಾಡುವಂತಿಲ್ಲ. ಪ್ರಾಣಿ ಪಕ್ಷಿಗಳಿಗೆ ರಕ್ಷಣೆ ದೊರೆತಿರುವುದರಿಂದ ಅವುಗಳು ಸಭ್ಯವಾಗಿವೆ, ಕಂಗಾಲಾಗಿ ಓಡುವುದಿಲ್ಲ. ಇಂತಹ ಅನೇಕ ಪ್ರಾಣಿ ಪಕ್ಷಿಗಳು ರೈತರು ಬೆಳೆದ ಬೆಳೆಯನ್ನು ಹಾಳುಮಾಡುತ್ತವೆ. ಇವುಗಳ ರಕ್ಷಣೆ ಮಾಡುವುದು ತೀರಾ ಕಷ್ಟಕರವಾಗಿದೆ. ಸರ್ಕಾರವು ಸಮರ್ಪಕ ಪರಿಹಾರ ಧನವನ್ನು ನೀಡುತ್ತಿಲ್ಲ. ಈ ಎಲ್ಲಾ ಸಮಸ್ಯೆಗಳು ಗಿರಿಜನರ ಸಾಂಸ್ಕೃತಿಕ ಪಲ್ಲಟಕ್ಕೆ ಮಾತ್ರವಲ್ಲದೆ ಸ್ಥಾನಪಲ್ಲಟಕ್ಕೂ ಕಾರಣವಾಗಿದೆ. ಬಹುತೇಕ

ಶ್ರೀಮಂತರು ನಗರ ಪ್ರದೇಶವನ್ನು ಸೇರಿ ವ್ಯಾಪಾರ, ಉದ್ಯೋಗಗಳನ್ನು ಯಶಸ್ವಿಯಾಗಿ ಮಾಡಿ ಪ್ರಗತಿ ಹೊಂದಿದ್ದಾರೆ.

ಇತ್ತೀಚೆಗೆ ಇತರ ಜಾತಿ ಜನಾಂಗದವರೊಂದಿಗೆ ವೈವಾಹಿಕ ಸಂಬಂಧಗಳು ನಡೆಯುತ್ತಿರುವುದರಿಂದ ಕುಟುಂಬ ವ್ಯವಸ್ಥೆಯಲ್ಲಿ ಪರಿವರ್ತನೆಗಳು ನಡೆಯುತ್ತಿವೆ. ಗುಡ್ಡಗಾಡಿನಲ್ಲಿ ವಾಸವಿರುವವರೊಂದಿಗೆ ಹೊರಭಾಗದವರು ಬಂದು ವೈವಾಹಿಕ ಸಂಬಂಧ ಬೆಳೆಸುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಕಷ್ಟಕರವಾಗಿದೆ. ಯುವಜನಾಂಗದವರು ನಗರ ಪ್ರದೇಶದ ಸಂಪರ್ಕದಲ್ಲಿದ್ದು ಬದಲಾವಣೆಯ ಹಂತದಲ್ಲಿದ್ದಾರೆ. ಯಾರು ಈ ಭಾಗವನ್ನು ಬಿಟ್ಟು ಹೊರಬಂದಿದ್ದಾರೋ ಅವರು ಸ್ಪರ್ಧಾತ್ಮಕ ಜಗತ್ತಿಗೆ ತೆರೆದುಕೊಳ್ಳುತ್ತಿದ್ದಾರೆ.

ಶೃಂಗೇರಿ ಸುತ್ತಮುತ್ತಲ ಇತರೆ ಜನಾಂಗದವರು ನಡೆಸುತ್ತಿರುವಂತೆ ಆಚರಣೆಗಳು ಗಿರಿಜನಪ್ರದೇಶದಲ್ಲಿ ಆಚರಿಸಲ್ಪಡುತ್ತಿದೆ. ಪ್ರಯಾಣಯೋಗ್ಯ ವಾತಾವರಣದಲ್ಲಿರುವ ಕುಟುಂಬವರ್ಗದವರ ನೂತನಮನೆ, ವೇಷ ಭೂಷಣ ಮೊದಲಾದವುಗಳಲ್ಲಿ ಆಧುನಿಕತೆಯ ಬದಲಾವಣೆಗಳು ಕಂಡುಬರುತ್ತಿವೆ. ಉದ್ಯೋಗ, ಹವ್ಯಾಸ, ಮನರಂಜನೆ, ಊಟ, ತಿಂಡಿ, ಕ್ರೀಡೆ, ಅಧ್ಯಯನ, ಶಿಕ್ಷಣ ಮೊದಲಾದವುಗಳಲ್ಲಿ ಬದಲಾವಣೆಗಳಾಗಿವೆ. ಗಿರಿಯ ಮೂಲೆ ಮೂಲೆಯಲ್ಲಿ ವಾಸವಿರುವ ಕುಟುಂಬದವರಲ್ಲಿ ತೀರಾ ಬದಲಾವಣೆಗಳಾಗದಿದ್ದರೂ ಇತರೆ ಭಾಗದಲ್ಲಿಯ ಕುಟುಂಬಗಳು ಬದಲಾವಣೆಯ ಹಂತದಲ್ಲಿವೆ. ಯುವ ಪೀಳಿಗೆಯವರಿಗೆ ಆಸಕ್ತಿಯಿಲ್ಲದಿರುವುದರಿಂದ ಸಾಂಸ್ಕೃತಿಕ ಅಂಶಗಳು ಮರೆಯಾಗುತ್ತಿವೆ.

ರಾಷ್ಟ್ರೀಯ ಉದ್ಯಾನದ ಈ ಭಾಗವು ನಕ್ಸಲ್ ಬಾಧಿತ ಪ್ರದೇಶವಾಗಿರುವುದರಿಂದ ಈಗ ರಾಜ್ಯ ಹಾಗೂ ಭಾರತ ಸರ್ಕಾರವು ಇಲ್ಲಿಯ ನಿವಾಸಿಗಳಿಗೆ ಪರಿಹಾರ ನೀಡಿ ಸ್ಥಳಾಂತರ ಮಾಡುತ್ತಿದ್ದಾರೆ. ಕೆಲವರು ಸೂಕ್ತ ಪರಿಹಾರ ಪಡೆದು ಹೊರಬಂದು ಹೊಂದಿಕೊಳ್ಳುತ್ತಿದ್ದಾರೆ. ವನಸಂಪನ್ಮೂಲವಾದ ಜೇನು, ಮುರಗನಹುಳಿ, ವಾಟೆಹುಳಿ, ದಾಲ್ಚಿನ್ನಿ, ರಾಮಡಿಕೆ ಮೊದಲಾದವುಗಳು ಸಂಪನ್ಮೂಲದ ಭಾಗವಾಗಿವೆ. ಕೃಷಿ ಪ್ರಧಾನವಾಗಿದ್ದರೂ ಇಳುವರಿ ತೀರಾಕಡಿಮೆಯಿದ್ದು ಹೆಚ್ಚು ಖರ್ಚಾಗುತ್ತಿದೆ. ಜಮೀನು ಸಾಗುವಳಿಗೆ ಯಂತ್ರೋಪಕರಣಗಳನ್ನು ಬಳಸಲು ಸಾಧ್ಯವಾಗುತ್ತಿಲ್ಲ. ಎಲ್ಲಾ ಕೃಷಿಕಾರ್ಮಿಕರಿಂದಲೇ ಆಗಬೇಕಾದುದರಿಂದ ನಿರ್ವಹಣಾ ವೆಚ್ಚ ಅಧಿಕವಾಗಿದೆ. ಪ್ರಸ್ತುತ ಸ್ಥಳಾಂತರವಾಗುವ ಆಲೋಚನೆಯಲ್ಲಿ ಹೆಚ್ಚಿನವರಿದ್ದು, ಕೆಲವರು ಈಗಾಗಲೇ ನಗರ ಸೇರಿದ್ದಾರೆ.ಇದು ಕೇವಲ ಬದಲಾವಣೆಯಾಗಿರದೆ ಸಾಂಸ್ಕೃತಿಕ ಪಲ್ಲಟ ಹಾಗೂ ಪ್ರಮುಖ ಮೂಲ ಸಂಸ್ಕೃತಿಯ ಅಳಿವಿಗೂ ಕಾರಣವಾಗಿದೆ.

ಬುಡಕಟ್ಟು ಸಮಸ್ಯೆಯ ಪರಿಹಾರೋಪಾಯಗಳು :

ಬುಡಕಟ್ಟು ಜನರು ಪ್ರಕೃತಿಯ ಒಂದುಭಾಗವಾಗಿ ಗಿಡಮರ ಪ್ರಾಣಿ ಪಕ್ಷಿಗಳ ಸಮೂಹದಲ್ಲಿ ಬದುಕುತ್ತಿದ್ದವರು. ಅವರಿಗೆ ಪ್ರಾಣಿಪಕ್ಷಿ ಹಾಗೂ ಪರಿಸರದ ಮೇಲೆ ಅಪಾರವಾದ ಕಳಕಳಿಹೊಂದಿ

ಬಹಳ ಜತನದಿಂದ ನೋಡಿಕೊಂಡವರು. ಪ್ರಾಣಿಪಕ್ಷಿಗಳನ್ನು ಬೇಟೆಯಾಡುವುದು ಗಿಡಗಳನ್ನು, ವನಸಂಪತ್ತನ್ನು ಅಗತ್ಯಕ್ಕೆ ಬೇಕಾದಷ್ಟನ್ನು ಮಾತ್ರಾ ಬಳಸುತ್ತಿದ್ದರು.

ಎಷ್ಟುಬೇಕಾದರೂ ಒತ್ತುವರಿ ಜಮೀನನ್ನು ಮಾಡುವ ಅವಕಾಶವಿದ್ದರೂ ಅವರು ಅತಿಯಾಸೆಯನ್ನು ತೋರಿಲ್ಲ. ಇಂತಹವರನ್ನು ಅಭಿವೃದ್ಧಿಕಾರ್ಯದ ಹಿನ್ನೆಲೆಯಲ್ಲಿ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಆ ಪರಿಸರದಿಂದ ಇವರನ್ನು ಹೊರಕಳುಹಿಸಿದರೆ ನೀರಿನಿಂದ ತೆಗೆದ ಮೀನಿನಂತಾಗುತ್ತಾರೆ. ನಗರ ಸಂಸ್ಕೃತಿಯವರೊಂದಿಗೆ ಬೆರೆತು ಬದುಕಲು ಅವರಿಂದಾಗುವುದಿಲ್ಲ. ಮಾನಸಿಕ ನೆಮ್ಮದಿ ಸಿಗದೆ ಉತ್ತಮ ಆರೋಗ್ಯವೂ ದೊರೆಯದಂತಾಗುತ್ತದೆ. ಅವರಿಗೆ ಕಪಟತನ, ಮೋಸ, ದರೋಡೆ ಮೊದಲಾದವುಗಳು ಗೊತ್ತಿಲ್ಲದಿರುವುದಿಂದ ಬದುಕಲು ಕಷ್ಟಸಾಧ್ಯವಾಗುತ್ತದೆ. ಅವರಲ್ಲಿರುವ ಬುಡಕಟ್ಟು ಸಂಸ್ಕೃತಿ ನಾಶವಾಗಿ ಕೌಟುಂಬಿಕ ಅವಿನಾಭಾವ ಸಂಬಂಧ ದೂರವಾಗುವುದರಲ್ಲಿ ಅನುಮಾನವೇ ಇಲ್ಲ. ಕ್ಷೇತ್ರಕಾರ್ಯದ ಸಮಯ ದೊರಕಿದ ಮಾಹಿತಿಯಂತೆ ಈ ಕೆಳಗಿನ ಪರಿಹಾರೋಪಾಯಕ್ರಮ ಸೂಕ್ತವೆನಿಸಿದೆ.

ಅ. ಬುಡಕಟ್ಟು ಜನಾಂಗದರನ್ನು ಸ್ಥಳಾಂತರಿಸದೆ ಮೂಲಭೂತ ಸೌಕರ್ಯಗಳನ್ನು, ಸೌಲಭ್ಯಗಳನ್ನು ಒದಗಿಸಿಕೊಡಬೇಕು.

ಆ. ಆರ್ಥಿಕ ಸದೃಢತೆ ಹಾಗೂ ಉದ್ಯೋಗ ಭದ್ರತೆಯನ್ನು ಒದಗಿಸಿಕೊಡಬೇಕು.

ಇ. ಶಿಕ್ಷಣ, ಆರೋಗ್ಯ ಮೊದಲಾದವುಗಳು ಅಲ್ಲಿಯೇ ದೊರೆಯುವಂತಾಗಬೇಕು.

ಈ. ಆಧುನಿಕತೆಯಲ್ಲಾದ ಬದಲಾವಣೆಗೆ ಹೊಂದಿಕೆಯಾಗುವಂತೆ ತರಬೇತಿ, ಕಾರ್ಯಾಗಾರ, ಮಾಹಿತಿ ಸೇವೆಗಳೂ ದೊರಕಬೇಕು.

ಉ. ಬುಡಕಟ್ಟು ಸಂಸ್ಕೃತಿ, ಕಲೆ, ಆಚಾರ, ನಂಬಿಕೆ ಮೊದಲಾದವುಗಳಿಗೆ ಪುರಸ್ಕಾರ, ಪ್ರೋತ್ಸಾಹ ದೊರಕಿಸಿಕೊಡಬೇಕು.

ಊ. ವನಸಂಪತ್ತನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು

ಋ. ಯಾವುದೇ ಹೇರಿಕೆಯನ್ನುಂಟುಮಾಡದೆ ಅವರನ್ನು ಮುಕ್ತವಾಗಿ ಬಿಡಬೇಕು.

ಎ. ನಕ್ಸಲ್ ನಿಗ್ರಹಪಡೆಯನ್ನು ಹಿಂಪಡೆಯಬೇಕು.

ಏ. ಜನವಿರೋಧಿ ಪರಿಸರಮಾರಕ ಯೋಜನೆಗಳನ್ನು ನಿಲ್ಲಿಸಬೇಕು.

ಐ. ಅವರ ಮನೆ ಜಮೀನಿಗೆ ಅಧಿಕೃತ ಪರವಾನಗಿ ಪತ್ರ ಒದಗಿಸಿಕೊಡಬೇಕು.

ಒ. ಮುಗ್ಧಜನರ ಭಾವನೆಗೆ ವಿಷಬೀಜ ಬಿತ್ತುವವರನ್ನು ದೂರ ಸರಿಸಬೇಕು.

ಓ. ಮಧ್ಯಸ್ತಿಕೆಗೆ ಮೂರನೇ ವ್ಯಕ್ತಿಗೆ ಅವಕಾಶ ಕೊಡಬಾರದು.

೮. ಸ್ಥಳೀಯ ಕ್ರೀಡೆಗೆ ಪ್ರೋತ್ಸಾಹ ನೀಡಿ ಅವಕಾಶ ದೊರಕಿಸಿಕೊಡಬೇಕು.

೧೦. ಆರೋಗ್ಯ ಶಿಬಿರ, ಎನ್.ಎಸ್.ಎಸ್. ಶಿಬಿರ, ಸಾಮೂಹಿಕ ಕಾರ್ಯಕ್ರಮಗಳು ಆ ಪ್ರದೇಶದಲ್ಲಿ ನಿರಂತರ ನಡೆಯುತ್ತಿರಬೇಕು.

೧೧. ಅವರ ಸಮಸ್ಯೆಗೆ ಸ್ಪಂದಿಸಿ ಅಗತ್ಯ ನೆರವನ್ನು ಒದಗಿಸಿಕೊಡಬೇಕು.

೮. ಅರ್ಹ ಪರಿಹಾರ ನೀಡಿ ಬುಡಕಟ್ಟು ಜನಾಂಗದವರಿಗೆ ಮೀಸಲಾದ ಪುನರ್ವಸತಿಕೇಂದ್ರ ನಿರ್ಮಿಸಿ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಒದಗಿಸಿಕೊಡಬೇಕು.

2.5 ಇತರೆ ಜನಾಂಗದವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಹಾಗೂ ಪಲ್ಲಟಗಳು :

ಹರಿಜನರು : ಹರಿಜನರು ಶೃಂಗೇರಿಯ ಮೂಲನಿವಾಸಿಗಳಾಗಿದ್ದು, ಒಡೆಯರ ಮನೆಯ ಆಳುಗಳಾಗಿ, ಕೆಲವರು ಜೀತದಾಳುಗಳಾಗಿ ಜೀವನ ಸಾಗಿಸುತ್ತಾ ಬಂದಿದ್ದಾರೆ. ನಾಡಿನ ಉಳಿದ ಭಾಗದಲ್ಲಿರುವ ಹರಿಜನರ ಸ್ಥಿತಿಗತಿಯಂತೆಯೇ ಇಲ್ಲಿಯವರದ್ದಾಗಿದ್ದುದರಿಂದ ಹೆಚ್ಚಿನ ವಿವರಣೆಯ ಅಗತ್ಯವಿಲ್ಲ. ಯಾವುದೇ ಆಸ್ತಿ, ಒಡವೆ, ಹಣ, ಅಧಿಕಾರವಿಲ್ಲದೇ ಅನಕ್ಷರಸ್ಥರಾಗಿಯೇ ಉಳಿದು, ಸೋಗೆ ಹುಲ್ಲಿನಿಂದ ನಿರ್ಮಿಸಿದ ದಲಿತಕೇರಿಯ ಗುಡಿಸಲಿನಲ್ಲಿ ಹಂದಿ, ನಾಯಿ, ಬೆಕ್ಕು, ಕೋಳಿ ಮೊದಲಾದವುಗಳೊಂದಿಗೆ ಒಟ್ಟಿಗೆ ಬದುಕು ಸಾಗಿಸುತ್ತಾ ಬಂದವರಾಗಿದ್ದಾರೆ. ಮಾದಾರ ವೃತ್ತಿಯನ್ನು ಮಾಡುತ್ತಿದ್ದರು. ನಾಗರೀಕ ಸಮಾಜದವರಿಂದ ತೀರಾ ನಿಕೃಷ್ಟವಾಗಿ ಕಂಡವರಾಗಿದ್ದಾರೆ. ಇತ್ತೀಚೆಗೆ ಸರ್ಕಾರಿ ಸೌಲಭ್ಯಗಳು ದೊರೆತು ಉನ್ನತ ಶಿಕ್ಷಣ, ಉದ್ಯೋಗದಿಂದಾಗಿ ಜೀವನ ಸುಧಾರಣೆಯಾಗುತ್ತಾ ಬಂದಿರುವುದು ಕಂಡುಬರುತ್ತಿದೆ.

ಸಾಂಸ್ಕೃತಿಕ ಬದುಕು :

ಹರಿಜನರ ಯುಗಾದಿ ಆಚರಣೆ ಪ್ರಾದೇಶಿಕವಾದ, ಜಾನಪದೀಯ ವೈಶಿಷ್ಟ್ಯಗಳನ್ನು ಒಳಗೊಂಡಿರುವಂಥದು. ಯುಗಾದಿ ದಿನ ಮನೆಯಲ್ಲಿದ್ದ ದೇವರ ಪಟಗಳಿಗೆ ಪೂಜೆ ಮಾಡಿ ದೋಸೆ, ಸಾರು, ಸಿಹಿ ಅಡಿಗೆ ಮಾಡುತ್ತಾರೆ. ರಾತ್ರಿಯಲ್ಲಿ ಕಡಿ ಊಟ ಮಾಡುತ್ತಾರೆ. ಇದಕ್ಕೆ ನೆಂಟರಿಷ್ಟರು ಬರುತ್ತಾರೆ. ರಾತ್ರಿ ಹನ್ನೊಂದು ಎಡೆಯಿಟ್ಟು ಅದಕ್ಕೆ ಸಸ್ಯಾಹಾರಗಳನ್ನು ಬಡಿಸುತ್ತಾರೆ. ಹನ್ನೊಂದು ಎಡೆಯಲ್ಲಿ ಐದು ಕುಡಿಬಾಲೆ ಎಲೆ. ಆರು ಕುಡಿ ಸೀಳು ಎಲೆಯನ್ನು ದಕ್ಷಿಣ ದಿಕ್ಕಿಗೆ ಹಾಸಲಾಗುವುದು. ಎಲ್ಲ ಬಾಳೆಯ ಕೆಳಗೆ ಮಣೆಹಾಕುತ್ತಾರೆ. ಎಲೆಯ ಮೇಲೆ ಕಳಸವನ್ನು ಸ್ಥಾಪಿಸಿ ಅದಕ್ಕೆ ಹಲಸು, ಮಾವು ಎಲೆಗಳೊಡನೆ ತೆಂಗಿನ ಕಾಯನ್ನು ಇಡುತ್ತಾರೆ. ಧೂಪಾರ್ತಿಯ ಮೂಲಕ ಧೂಪ ಬೆಳಗಿಸುತ್ತಾರೆ. ಧೂಪದ ಜೊತೆಗೆ ಗಂಧದ ಚಕ್ಕೆಯನ್ನು ಸೇರಿಸುತ್ತಾರೆ. ನಂತರ ಸರ್ವರೂ ಪ್ರಾರ್ಥನೆ ಮಾಡುತ್ತಾರೆ. ಎಲ್ಲ ಎಲೆಯಿಂದಲೂ ಸ್ವಲ್ಪಸ್ವಲ್ಪ ಪ್ರಸಾದವನ್ನು ತೆಗೆಯುತ್ತಾರೆ. ಬೆಳಿಗ್ಗೆ ಬೇವು ಬೆಲ್ಲ, ಸಂಜೆ ಕಹಿ ಊಟ ಮಾಡುತ್ತಾರೆ. ಈ ಹಬ್ಬಕ್ಕೆ ಗೇರು ಇಡುವ ಶಾಸ್ತ್ರದ ಆಚರಣೆಯಿದೆ.

ದೀಪಾವಳಿ ದಿನ ಹೊಸ್ತಿಲಿಗೆ ಎರಕಲು ಹೂಡುತ್ತಾರೆ. ಸಗಣಿ ಉಂಡೆಗೆ ಅಡಿಕೆ ಕಾಯಿ, ಕರ್ಕಿಕುಡಿ ಇಟ್ಟು ಅರಿಶಿನ, ಕುಂಕುಮದಿಂದ ಪೂಜಿಸುತ್ತಾರೆ. ಆ ದಿನ ಪಕ್ಕದ ಮನೆಯ ದನಗಳ ಕೊರಳಿನ ಮಾಲೆಯನ್ನು ಬಾಗಿಲಿಗೆ ಕಟ್ಟಬೇಕು. ಬೆಳಗ್ಗೆಯೇ ಗೋಪೂಜೆ ನಡೆಸುತ್ತಾರೆ. ಮನೆಗೆ ಕಟ್ಟುವ ಮಾಲೆಯಲ್ಲಿ ಬಾಳೆಹಣ್ಣು. ವೀಳ್ಯದೆಲೆ, ಪಚ್ಚೆತೆನೆ, ಹಸಿ ಅಡಿಕೆ, ಹಿಂಗಾರ, ಏಲಕ್ಕಿ ಗರಿ ಮುಂತಾದ ಒಂಬತ್ತು ಬಗೆಯನ್ನು ಸೇರಿಸಿರುತ್ತಾರೆ. ರಾತ್ರಿ ಊಟಕ್ಕೆ ಕಡುಬನ್ನು ತುಂಡು ಮಾಡಿ ಬಡಿಸುತ್ತಾರೆ. ಮಾರನೇ ದಿನ ಇದರ ಅಂಗವಾಗಿ ಬಲೀಂದ್ರ ಪೂಜೆ. ಆ ದಿನ ದೇವಸ್ಥಾನಕ್ಕೆ ಹಣ್ಣುಕಾಯಿ ಕೊಡುವುದಲ್ಲದೆ, ತೆಂಗಿನ ಮರಗಳಿಗೆ ಮೂರು ಪಟ್ಟಿ ಬಳಿಯುತ್ತಾರೆ. ಇದರಲ್ಲಿ ಕೆಮ್ಮಣ್ಣು ಮತ್ತು ಜೇಡಿಮಣ್ಣಿನ ಪಟ್ಟಿ ಸೇರಿರುತ್ತದೆ. ಹೊಸ್ತೊಡಕಿನ ದಿನ ಕೋಳಿಮಾಂಸ, ಕಡುಬು ಮಾಡುತ್ತಾರೆ.

ಮೂರನೆಯ ದಿನ ಹೊಸ್ತೊಡಿಕೆ. ಇದು ಕಹಿಯೂಟದ ಹಬ್ಬ. ಇಂದು ಕೋಳಿಮಾಂಸ ಮತ್ತು ಕಡುಬು ಮಾಡುತ್ತಾರೆ. ಏಡಿಗಳನ್ನು ಹಳ್ಳಗಳಿಂದ ಹಿಡಿದುಕೊಂಡು ಬರುತ್ತಾರೆ. ಐದು ಎಡೆಗಳನ್ನು ಇಡುತ್ತಾರೆ. ಕಾಗೆಗೆ ಒಂದು ಎಡೆ, ದೇವರಿಗೆ ಮತ್ತೊಂದು ಎಡೆ. ಉಳಿದದ್ದನ್ನು ಹಿರಿಯರು ತಿನ್ನುತ್ತಾರೆ. ಎಡೆಯ ಜೊತೆ ಕುಡಿಯಲು ದೊನ್ನೆಯಲ್ಲಿ ಶರಾಬು ಇಡುತ್ತಾರೆ. ಪ್ರಾರ್ಥನೆ ಮಾಡಿದ ನಂತರ ಕುಡಿಯುವ ಮುನ್ನ ಎಲ್ಲಾ ಎಡೆಗಳಿಗೆ ಶರಾಬು ಚಿಮುಕಿಸಿ ಹಿರಿಯರು ಎತ್ತಿ ಕುಡಿಯುತ್ತಾರೆ.[51] ಇಲ್ಲಿಗೆ ದೀಪಾವಳಿ ಮುಕ್ತಾಯವಾಗುತ್ತದೆ.

'ಮಹಾಲಯವು' ಹರಿಜನರ ದೊಡ್ಡ ಹಬ್ಬಗಳಲ್ಲಿ ಒಂದು. ಬೆಳಿಗ್ಗೆ ತೀರ್ಥ ಪ್ರಸಾದದ ನಂತರ ಸಿಹಿ ಊಟಮಾಡುತ್ತಾರೆ. ರಾತ್ರಿ ಹಂದಿ, ಕೋಳಿ ಮಾಂಸದ ಊಟ ಮಾಡುತ್ತಾರೆ. ತಮ್ಮ ಮಕ್ಕಳು ಮರಿಗಳನ್ನು ಕಾಪಾಡುವಂತೆ ಪ್ರಾರ್ಥನೆ ಸಲ್ಲಿಸುತ್ತಾರೆ. ಮಹಾಲಯ ಹಬ್ಬದಲ್ಲಿ ಕಾಯಿ ಗುದ್ದುವುದು ಒಂದು ಆಚರಣೆಯಾಗಿದೆ. ಇದು ಆ ದಿನದ ಕ್ರೀಡೆಯೂ ಆಗಿದೆ. ಹೊಸದಾಗಿ ಮದುವೆಯಾದ ಮನೆಗಳಲ್ಲಿ ಗಂಡಿನ ಕಡೆಯವರು ಹೆಣ್ಣಿನ ಕಡೆಯವರು ಕಾಯಿಗುದ್ದಲು ಮುಂದಾಗುತ್ತಾರೆ. ಕಾಯಿ ಗುದ್ದುವಾಗ ಬಟ್ಟೆಮುರಿ ಮಾಡಿಕೊಳ್ಳುತ್ತಾರೆ. ಕಾಯಿಯನ್ನು ಅಡ್ಡವಾಗಿ ಇಡಲು ಉಪ್ಪಿನ ಹರಳು ಅಥವಾ ಕೆಸಿನದಡಿ ಉಪಯೋಗಿಸುತ್ತಾರೆ. ಈ ಕಾಯಿಗುದ್ದುವ ಸಂಪ್ರದಾಯದಲ್ಲಿ ಗುಂಪುಗಳಿಗೆ ಸ್ಪರ್ಧೆಯನ್ನು ಇಡುತ್ತಾರೆ. ಕಲ್ಲಿನಿಂದ ಗುದ್ದಿ ಒಡೆಯಲು ಸ್ಪರ್ಧೆ ಕಟ್ಟಿ ಸೋತರೆ, ಸೋತವನನ್ನು ಮೆರವಣಿಗೆ ಮಾಡಿ ಛೇಡಿಸುತ್ತಾರೆ. ಕಲ್ಲಿನಿಂದ ಹೊಡೆದು ಕಾಯಿ ಒಡೆಯುವ ಸ್ಪರ್ಧೆಯೂ ಇದೆ. ಕಾಯಿ ಇಟ್ಟ ಅರವತ್ತು ಹೆಜ್ಜೆ ದೂರದಿಂದ ಕಲ್ಲಿನಿಂದ ಹೊಡೆದು ಕಾಯಿ ಒಡೆಯಬೇಕು. ಒಂದು ಕಲ್ಲಿಗೆ ಇಪ್ಪತ್ತೈದು ಪೈಸೆಯಂತೆ ಹಣಕೊಟ್ಟು ಕಲ್ಲು ಪಡೆಯುತ್ತಾರೆ. ಐದು ಕಲ್ಲುಗಳನ್ನು ಮಾತ್ರ ನೀಡುತ್ತಾರೆ. ನಂತರ ದೂರವನ್ನು ಕಡಿಮೆ ಮಾಡಿ ಹೊಡೆಯುವಂತೆ ಪ್ರೇರಿಸುತ್ತಾರೆ. ಆದರೂ ಆಗದಿದ್ದರೆ ಸ್ಪರ್ಧೆಯಲ್ಲಿ ಸೋತಂತೆ.

ಇದಲ್ಲದೆ ದೈವದ ಹರಕೆಯ ಆಚರಣೆಯಿದೆ. ವರ್ಷದಲ್ಲಿ ಒಮ್ಮೆ ಆರಾಧಿಸುವ ಪದ್ಧತಿಯಿದೆ ಪಂಜುರ್ಲಿ, ಚೌಡಿ ಮುಂತಾದ ದೈವಗಳು ಗ್ರಾಮೀಣರ ಬದುಕಿನಲ್ಲಿ ಶಾಶ್ವತವಾಗಿ ಬೇರೂರಿವೆ. ಇದಕ್ಕೆ ಭಟ್ಟರಿಂದ ನಿಮಿತ್ಯ ಕೇಳಿಸಿ ದಿನಗೊತ್ತು ಮಾಡುತ್ತಾರೆ. ನಂತರ ಬಂಧು-ಬಾಂಧವರನ್ನು ಕರೆಸುತ್ತಾರೆ. ಹರಕೆಯ ದಿನ ಪಂಜುರ್ಲಿ ಬನವನ್ನು ಸ್ವಚ್ಛಗೊಳಿಸಿ ಪೂಜೆಗೆ ಸಿದ್ಧಗೊಳಿಸುತ್ತಾರೆ. ಪ್ರಾರ್ಥನೆ, ದೀಪ ಹಚ್ಚುವುದು, ಗಣಪತಿ ಪೂಜೆ ಮಾಡುವುದು, ತೆಂಗಿನ ಕಾಯಿಗಳನ್ನು ಒಂದೇ ಏಟಿಗೆ ಒಡೆಯುತ್ತಾರೆ. ಆಗ ಕಾಯಿಭಾಗ ಕವುಚಿ ಬೀಳಬಾರದು. ಹಾಗೆ ಬಿದ್ದರೆ ತಪ್ಪು ಕಾಣಿಕೆ ಕಟ್ಟಬೇಕಾಗುತ್ತದೆ. ಮಂಗಳಾರತಿಯ ನಂತರ, ಎಡೆಯಿಟ್ಟದ್ದನ್ನು ತೆಗೆದು ಪ್ರತ್ಯೇಕವಾಗಿ ಕೋಳಿಬಲಿ ಕೊಡುತ್ತಾರೆ. ಆಗ ಗಣಪತಿಗೆ ಬಿಳಿಬಟ್ಟೆ ತೆರೆಹಿಡಿದಿರುತ್ತಾರೆ. ಕೋಳಿಯ ರಕ್ತವನ್ನು ಕಾಯಿಗೆ ಬೀಳುವಂತೆ ಮಾಡುತ್ತಾರೆ. ಹರಕೆ ಕೋಳಿಗಳ ಬಲಿಯ ನಂತರ ಹೆಂಡದ ಸೇವನೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಗಣ ಮೈಮೇಲೆ ಬರುತ್ತದೆ. ತಪ್ಪಿದ್ದನ್ನು ತಿಳಿಸಿ ತಿದ್ದಿ ನಡೆಯುವಂತೆ ಸೂಚಿಸುತ್ತದೆ.

ಹರಿಜನರಲ್ಲಿ ಗಣಮಕ್ಕಳು ಪ್ರತ್ಯೇಕವಾಗಿ ಇರುತ್ತಾರೆ. ಈ ಗಣಗಳು ಆವಾಹನೆ ಮಾಡಿ ಕರೆದಾಗ ಬರುತ್ತವೆ. ಮಕ್ಕಳಿಗೆ, ಜಾನುವಾರುಗಳಿಗೆ, ಹಿರಿಯರಿಗೆ ಕಾಯಿಲೆ ಬಂದಾಗ ಪರಿಹಾರ ಕೇಳಲು ಗಣವನ್ನು ಆಹ್ವಾನಿಸುತ್ತಾರೆ. ಗಣವನ್ನು ಆಹ್ವಾನಿಸಲು ದೂರದಲ್ಲಿ ಅಕ್ಕಿ, ಅದರ ಮೇಲೆ ಲೋಟ ಇಟ್ಟು ಪೂಜಿಸುತ್ತಾರೆ. ಮೊರದ ಅಡಿ ಕಂಬಳಿಯನ್ನು ಹಾಸಿರುತ್ತಾರೆ. ಪೂಜೆಯಾದ ತಕ್ಷಣ ಗಣ ಮಗನ ಮೇಲೆ ದೈವ ಆವಾಹನೆಯಾಗುತ್ತದೆ. ಸೋಂಕು, ಹೆದರಿಕೆ, ರಣ-ದೆವ್ವ ಹಿಡಿದದ್ದು, ಮೊದಲಾದವಕ್ಕೆ ಪ್ರಸಾದ ಮಾಡಿ ಕೊಡುತ್ತದೆ. ಹೀಗೆ ಹರಿಜನರಲ್ಲಿನ ಕೆಲವು ನಂಬಿಕೆ, ಆಚರಣೆಗಳು ಹಬ್ಬದ ಸಂದರ್ಭಗಳಲ್ಲಿ ಅನುಚಾನವಾಗಿ ನಡೆದುಕೊಂಡು ಬಂದಿದೆ.

ಹಿರಿಯರಿಗೆ ಎಡೆ ಇಡುವ ವರ್ಷಾಚರಣೆಯ ಸಂಪ್ರದಾಯವೂ ನಮಗೆ ಹಬ್ಬವೆಂದು ಈ ವರ್ಗದ ಹಿರಿಯರು ಹೇಳುತ್ತಾರೆ. ಈ ರೀತಿ ಹಿರಿಯರಿಗೆ ಎಡೆ ಇಡಲು ಕಾರಣ ಜಕ್ಕಣಿಗಳು ಕುಟುಂಬದ ಮೇಲೆ ಕೆಟ್ಟ ಪರಿಣಾಮಬೀರಬಾರದೆಂಬ ಅಭಿಪ್ರಾಯ. ಎಡೆಯಿಟ್ಟು ಪ್ರಾರ್ಥನೆ ಸಲ್ಲಿಸುವುದರಿಂದ ಕುಟುಂಬಕ್ಕೆ ಯಾವ ಹಾನಿಯೂ ಇಲ್ಲ. ಸದ್ದುಗದ್ದಲ ಮಾಡದೆ ಎಡೆಯಿಡುತ್ತಾರೆ. ಅದನ್ನು ಹಿರಿಯರು ಬಂದು ಸ್ವೀಕರಿಸುತ್ತಾರೆಂಬ ನಂಬಿಕೆ ಇವರದು. ಇದನ್ನು ಹಿರಿಯರ ಹಬ್ಬವೆಂದೇ ಕರೆಯುತ್ತಾರೆ.

ಜೈನರು :

ಜೈನ ಮತೀಯರು ಶೃಂಗೇರಿ ತಾಲ್ಲೂಕಿನಲ್ಲಿ ತೀರಾ ವಿರಳ ಸಂಖ್ಯೆಯಲ್ಲಿದ್ದಾರೆ. ಇಲ್ಲಿ ನೆಲಸಿರುವ ಜೈನ ಮತೀಯರು ನಾಡಿನ ಇತರ ಭಾಗದಲ್ಲಿರುವ ಜೈನ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿರುವುದರಿಂದ ಇಲ್ಲಿ ಅಂತಹ ಬದಲಾವಣೆಗಳು ಆಗಿಲ್ಲ. ಆಧುನಿಕ

ಕಾಲಘಟ್ಟದ ಬದಲಾವಣೆಗನುಗುಣವಾಗಿ ಇತರ ಜಾತಿ, ಜನಾಂಗದವರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ವೈದಿಕ ಧರ್ಮದ ಪ್ರಭಾವಕ್ಕೆ ಸಿಲುಕದೆ ತಮ್ಮ ಜೈನ ಧರ್ಮದ ಹಬ್ಬದ ಆಚರಣೆಗಳಲ್ಲಿ ಅಸ್ತಿತ್ವವನ್ನು ಉಳಿಸಿ, ಬೆಳಸಿಕೊಂಡು ಬಂದ ಹೆಮ್ಮೆ ಅಲ್ಪ ಸಂಖ್ಯಾತರಾದ ಜೈನ ಧರ್ಮೀಯರದ್ದಾಗಿದೆ. ಎಲ್ಲ ಧರ್ಮಿಯರಂತೆಯೇ ಇವರ ಆಚರಣೆಯಲ್ಲಿಯೂ ಸಾಕಷ್ಟು ಧರ್ಮನಿಷ್ಠವಾದ ಹಿನ್ನೆಲೆಗಳಿವೆ. ಆಚರಣೆಯಲ್ಲಿ ತಮ್ಮದೇ ಆದ ವಿಧಿಗಳೂ ಇವೆ. ಇವರು ಹಬ್ಬಗಳನ್ನು ಪರ್ವ, ನೋಂಪಿ, ವ್ರತವೆಂದು ವಿಭಾಗಿಸಿಕೊಳ್ಳುತ್ತಾರೆ. ಪರ್ವದ ದಿನ ಪೂಜೆ. ಅಭಿಷೇಕ, ಉಪವಾಸ, ಬ್ರಹ್ಮಚರ್ಯ, ಮಂತ್ರಪಠಣ, ದಾನ, ಧರ್ಮ ಮುಂತಾದ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿರುತ್ತಾರೆ. ಇವರ ಹಬ್ಬಗಳಲ್ಲಿ ನಿತ್ಯಪರ್ವಾಚರಣೆಗಳಾಗಿ ಶುಕ್ಲ ಹಾಗೂ ಕೃಷ್ಣಪಕ್ಷಗಳಲ್ಲಿ ಬರುವ ಬಿದಿಗೆ, ಪಂಚಮಿ, ಅಷ್ಟಮಿ, ಏಕಾದಶಿ, ಚತುರ್ದಶಿಯ ದಿನಗಳಲ್ಲಿ ಅರ್ಹಂತನಿಗೆ ಬಸದಿಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ.

ನೈಮಿತ್ತಕ ಪರ್ವಗಳಲ್ಲಿ 'ಯುಗಾದಿ' ಜೈನರಿಗೆ ಮುಖ್ಯವಾದ ಹಬ್ಬಗಳಲ್ಲಿ ಒಂದು. ಇವರಿಗೆ ಈ ಹಬ್ಬವೇ ವರ್ಷಾರಂಭದ ಶುಭ ದಿನವಾಗಿದೆ. ಆ ದಿನ ಜಿನನಿಗೆ ವಿಶೇಷ ಆರಾಧನೆ ಮತ್ತು ಅಭಿಷೇಕ ವಿಧಿವತ್ತಾಗಿ ನಡೆಸುತ್ತಾರೆ. ಇದಲ್ಲದೆ ಮಹಾವೀರ ಜಯಂತಿ ಇವರ ಗುರು ಜಯಂತಿಯಾಗಿ ವಿಜೃಂಭಣೆಯಿಂದ ಆಚರಿಸಿ, ಮಹಾವೀರನ ಸಂದೇಶಗಳನ್ನು ಸಭೆ–ಸಮಾರಂಭಗಳ ಮೂಲಕ ಸರ್ವರಿಗೂ ತಲುಪಿಸುವ ಕೈಂಕರ್ಯವನ್ನು ನಡೆಸುತ್ತಾರೆ. ಈ ವರ್ಗದವರ ಮತ್ತೆ ಕೆಲವು ಆಚರಣೆಗಳೆಂದರೆ ಶ್ರುತಪಂಚಮಿ, ಮುಕುಟ ಸಪ್ತಮಿ, ದಶಲಕ್ಷಣ, ಅಷ್ಟಾಹ್ನಿಕ, ಅನಂತ ನೋಂಪಿ, ಜೀವದಯಾಷ್ಟಮಿ, ಜಿನರಾತ್ರಿ, ಉಪಾಕರ್ಮ, ದೀಪಾವಳಿ ಮುಂತಾದವು. ಆಶ್ವಯುಜ ಬಹುಳ ಚತುರ್ದಶಿಯಂದು (ಬೆಳಿಗ್ಗೆ ಅಮಾವಾಸ್ಯೆಯಂದು) ಭಗವಾನ್ ಮಹಾವೀರರು ಪಾರ್ವಪುರಿಯ ಕೆರೆಯ ಮಧ್ಯದ ಬಂಡೆಕಲ್ಲಿನ ಮೇಲೆ ಯೋಗ ನಿರೋಧದಿಂದ ಕರ್ಮಗಳನ್ನು ಕಳೆದು ಮುಕ್ತರಾದ ಪರ್ವ ದಿನವಿದು. ಈ ಕಾರಣ ಮಹಾವೀರರು ಸಕಲ ಜೀವಿಗಳಿಗೆ ಧರ್ಮೋಪದೇಶ ಮಾಡಿ ಅಜ್ಞಾನವನ್ನು ಕಳೆದು ಸುಜ್ಞಾನವನ್ನು ನೀಡಿದ ಬೆಳಕಿನ ಈ ದಿನವೇ ಇವರಿಗೆ ದೀಪಾವಳಿ. ಇದರ ಸಂಕೇತವಾಗಿ ಜೈನಗೃಹಸ್ಥರು ಮನೆಗಳ ಮುಂದೆ ಸಾಲುದೀಪಗಳನ್ನು ಹಚ್ಚಿ ಇಡುತ್ತಾರೆ. ಈ ದಿನ ಬೆಳಿಗ್ಗೆ ಮಹಾವೀರನಿಗೆ ವಿಶೇಷ ಅಭಿಷೇಕವನ್ನು ನೆರವೇರಿಸಲಾಗುವುದು. ನಂತರ ದೀಪಗಳನ್ನು ಬೆಳಗಿಸಿ ಕತ್ತಲೆಯನ್ನು ದೂರಮಾಡಲಾಗುವುದು. ಮಹಾವೀರನಿಗೆ ನಿರ್ವಾಣ ಲಾಡನ್ನು ಅರ್ಪಿಸಿ ನಿರ್ವಾಣ ಕಲ್ಯಾಣವನ್ನು ನೆರವೇರಿಸುತ್ತಾರೆ. ಅಂದಿನಿಂದ ಮಹಾವೀರ ಶಕಾರಂಭವಾಗುತ್ತದೆ. ಇವರ ಪೂಜೆಯಲ್ಲಿ ಗೌರವ. ಸತ್ಕಾರ. ಸನ್ಮಾನ. ಭಕ್ತಿ. ವಿನಯ ಶ್ರದ್ಧೆಗಳು ಅತಿಮುಖ್ಯ. ಅರ್ಚನೆಯ ಅಂಗವಾಗಿ ವಂದನೆ. ಸ್ತುತಿ. ಜಿನವಾಣಿಯನ್ನು ಪಠಿಸುವುದು ದಿನನಿತ್ಯದ ಪದ್ಧತಿ. ಜೈನ ಶ್ರಾವಕರು ದ್ರವ್ಯಪೂಜೆಯನ್ನು ಆಚರಿಸಿದರೆ. ಮುನಿಗಳು ಭಾವಪೂಜೆಯನ್ನು ಸಲ್ಲಿಸುತ್ತಾರೆ.

ಜೈನರಲ್ಲಿ 8 ವರ್ಷ ತುಂಬಿದ ಬಾಲಕರಿಗೆ ಉಪನಯನ ಕರ್ಮವನ್ನು ನೆರವೇರಿಸುತ್ತಾರೆ. ಇದಕ್ಕಾಗಿ ವ್ರತೋಪನಯನ ಎಂಬ ಧಾರ್ಮಿಕ ವಿಧಿಯನ್ನು ನಡೆಸುತ್ತಾರೆ. ಗುರುಗಳಿಂದ ರತ್ನತ್ರಯ ಸೂತ್ರ(ಜಿನದಾರ) ಧರಿಸುವ ಆಚರಣೆಯಿದೆ. ಈ ಜಿನದಾರದಲ್ಲಿನ ಮೂರು ಸೂತ್ರಗಳೆಂದರೆ. ಸಮ್ಯಕ್ ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ್ಯ ಈ ಮೂರು ದರ್ಶನದ ಪ್ರತೀಕವಾಗಿ ಇಪ್ಪತ್ನಾಲ್ಕು ಎಳೆಗಳು ಜಿನದಾರದಲ್ಲಿರುತ್ತವೆ. ಇದನ್ನು ಧರಿಸಿದವ ಸಮ್ಯಕ್‌ದೃಷ್ಟಿ ಹೊಂದಿದವನೆಂಬ ಭಾವನೆ ಉಂಟಾಗುತ್ತದೆ. ಮುಂದಿನ ಮೋಕ್ಷದಾಯಿತ್ವಕ್ಕೆ ಈ ಎಳೆಗಳೇ ಸಂಕೇತವಾಗುತ್ತವೆ. ಬಾಲಕಿಯರು ಇದೇ ಸಂದರ್ಭದಲ್ಲಿ ವ್ರತ ಸ್ವೀಕಾರ ಮಾಡುತ್ತಾರೆ. ಮುಂದೆ ಜೈನ ಧರ್ಮದ ಆಚರಣೆಗಳಲ್ಲಿ ಇವರು ಪಾಲ್ಗೊಳ್ಳಬಹುದು. ವ್ರತ ಸ್ವೀಕಾರದ ನಂತರ ಧರ್ಮ ಕೈಂಕರ್ಯಗಳಲ್ಲೂ ಸಕ್ರಿಯವಾಗಿ ಕಾರ್ಯನಿರ್ವಹಿಸಬಹುದು. ಇದಲ್ಲದೆ ವಿಶೇಷ ಆರಾಧನೆಯಾಗಿ ಶೋಡಷ ಭಾವನೆ ನೋಂಪಿ ಎಂಬ ವ್ರತ ಪೂಜೆ ಆಚರಿಸಲಾಗುತ್ತದೆ.

ದಿನನಿತ್ಯದ ಆರಾಧನೆಗಳೆಂದರೆ ಪಂಚಪರಮೇಷ್ಟಿ ಆರಾಧನೆ ಹಾಗೂ ಭಕ್ತರ ಆರಾಧನೆಗಳು ಮುಖ್ಯವಾದವು. ಈ ದಿನಗಳಲ್ಲಿ ಫಲಪುಷ್ಪ ಅಭಿಷೇಕಗಳು ಮಂತ್ರ ಪುರಸ್ಸರವಾಗಿ ನಡೆಯಬೇಕು.

ದೇವಾಲಯದ ಜೀರ್ಣೋದ್ಧಾರ ಸಂದರ್ಭಗಳಲ್ಲಿ ಮಾತ್ರ ವಿಶೇಷವಾಗಿ ಪಂಚ ಪರಮೇಷ್ಟಿಗಳ ಆರಾಧನೆಯಲ್ಲದೆ, ಲಿಕುಂಡಲ ಆರಾಧನೆಯನ್ನು ವಿಧಿವತ್ತಾಗಿ ನಡೆಸುತ್ತಾರೆ. ಮನೆಯ ಗೃಹಪ್ರವೇಶದ ಸಂದರ್ಭದಲ್ಲಿ ವಜ್ರಪಂಜರ ಆರಾಧನೆ ಗೃಹಕ್ಕೆ ಶಾಂತಿ ನೆಮ್ಮದಿಗಳನ್ನು ತರಲು ನಡೆಸುತ್ತಾರೆ. ಅವತ್ತು ಅನ್ನಶಾಂತಿಯೂ ನಡೆಯುತ್ತದೆ.[52]

ಶೃಂಗೇರಿಯಲ್ಲಿ ಇವರ ಸಂಖ್ಯೆ ಈಗ ಕಡಿಮೆಯಿದೆ. ಪಾರ್ಶ್ವನಾಥ ಮಂದಿರವಿದೆ. ವಿಧಿವಿಧಾನದಂತೆ ಪೂಜಾಕೈಂಕರ್ಯ ನಡೆಯುತ್ತಿದೆ. ಇತ್ತೀಚೆಗೆ ಜೀರ್ಣೋದ್ಧಾರ ಕಾರ್ಯಮಾಡಲಾಗಿದೆ.

ಕ್ರೈಸ್ತರು :

ಶೃಂಗೇರಿಯಲ್ಲಿ ಕ್ರೈಸ್ತ ಮತೀಯರು ತೀರಾ ಕಡಿಮೆ ಸಂಖ್ಯೆಯಲ್ಲಿದ್ದಾರೆ. ನಾಡಿನ ಉಳಿದ ಭಾಗದಲ್ಲಿ ಅನುಸರಿಸುತ್ತಿರುವಂತೆಯೇ ಇಲ್ಲಿಯೂ ಅನುಸರಿಸಲಾಗುತ್ತಿದೆ. ಕ್ರೈಸ್ತ ಧರ್ಮಿಯರಲ್ಲಿನ ಪ್ರಮುಖ ಹಬ್ಬಗಳೆಂದರೆ ಕ್ರಿಸ್‌ಮಸ್ ಮತ್ತು ಗುಡ್‌ಫ್ರೈಡೆ. ಕ್ರಿಸ್‌ಮಸ್ ಸಂತೋಷ ಹಾಗೂ ಸಡಗರದ ಹಬ್ಬ. ಏಸು ಜನಿಸಿದ ದ್ಯೋತಕವಾಗಿ ಈ ಹಬ್ಬದ ಆಚರಣೆ ನಡೆಯುತ್ತದೆ. ಹಬ್ಬಕ್ಕೆ ಪೂರ್ವಭಾವಿಯಾಗಿ ಇಪ್ಪತ್ತೈದು ದಿನಗಳ ವ್ರತಾಚರಣೆಯನ್ನು ಕೆಲವರು ಆಚರಿಸುತ್ತಾರೆ. ಡಿ. 24ನೇ ತಾರೀಖಿನ ರಾತ್ರಿ ಹನ್ನೆರಡು ಗಂಟೆಗೆ ಚರ್ಚಿನಲ್ಲಿ ವಿಶೇಷ ಪೂಜೆಗಳಿರುತ್ತವೆ. ಚರ್ಚನ್ನು ಸಿಂಗರಿಸಿ ಸುತ್ತಮುತ್ತ ಕ್ರಿಸ್ತನ ಜನನ ಕಾಲದ ಹಲವು ಘಟನೆಗಳನ್ನು ದೃಶ್ಯೀಕರಿಸುವ ಸನ್ನಿವೇಶಗಳನ್ನು ನಿರ್ಮಿಸಿರುತ್ತಾರೆ. ಪೂಜೆಯ ನಂತರ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳೊಂದಿಗೆ ಕೇಕ್ ತುಂಡುಗಳನ್ನು ಸಾರ್ವತ್ರಿಕವಾಗಿ

ವಿತರಿಸುತ್ತಾರೆ. ಹಬ್ಬದ ದಿನ ವಿಶೇಷ ತಿಂಡಿ, ತಿನಿಸುಗಳನ್ನು ಮಾಡಿ ಬಂದವರಿಗೆ ಹಂಚುತ್ತಾರೆ. ಈ ದಿನದ ವಿಶೇಷವೆಂದರೆ ಕೇಕ್ ಕಟ್ ಮಾಡಿ, ಶುಭಾಶಯುಗಳನ್ನು ವಿನಿಮಯ ಮಾಡಿಕೊಂಡು ಹಂಚುವುದು. ಆ ದಿನ ಸಡಗರದ ದಿನವಾಗಿ ಶ್ರದ್ಧೆಯಿಂದ ಹಬ್ಬವನ್ನು ಆಚರಿಸುತ್ತಾರೆ.

ದುಃಖದ ಸಂಕೇತವಾಗಿ ಆಚರಿಸುವ ಧಾರ್ಮಿಕ ಕಾರ್ಯಕ್ರಮವೆಂದರೆ 'ಗುಡ್‌ಫ್ರೈಡೆ' ಏಸುವನ್ನು ಶಿಲುಬೆಗೆ ಏರಿಸಿದ ಈ ದಿನ ಅತ್ಯಂತ ಕರಾಳವೂ, ದುಃಖದಾಯಕವೂ ಆದ ದಿನ. ಎಲ್ಲರೂ ಮೌನದಿಂದಿದ್ದು ಪ್ರಾರ್ಥನೆ ಸಲ್ಲಿಸುವ ಮತ್ತು ಶಾಂತಿಯನ್ನು ಕೋರುವ ದಿನವಿದು. ಅವನ ಸಾವಿನ ದಿನದ ಸಂದೇಶವನ್ನು ಸಾರಿ ಏಸು ಎಂಥ ಶಾಂತಿದೂತನೆಂಬುದನ್ನು ಪ್ರಪಂಚಕ್ಕೆ ಸಾರುವುದು ಈ ದಿನದ ಉದ್ದೇಶ.

ಕ್ರಿಶ್ಚಿಯನ್ನರಿಗೆ ಜನವರಿ ಒಂದನೇ ತಾರೀಕು ಹೊಸ ವರ್ಷದ ಪ್ರಾರಂಭ. ಈ ದಿನವನ್ನೇ ಈಗ ಎಲ್ಲರೂ ತಮ್ಮ ವ್ಯವಹಾರದ ಉದ್ದೇಶಕ್ಕಾಗಿ ಬಳಸುತ್ತಾರೆ. ಇವರಲ್ಲಿ ಹಬ್ಬ ಆಚರಿಸಬೇಕೆಂದ ತಕ್ಷಣ ಹೊಸ ಬಟ್ಟೆ ಧರಿಸುವುದು ಅವರ ಇಚ್ಛೆಗೆ ಸಂಬಂಧಿಸಿದ್ದು. ಹೊಸ ಬಟ್ಟೆಗಳನ್ನು ಹಬ್ಬಗಳಲ್ಲಿ ಧರಿಸಬೇಕೆಂಬ ಕಡ್ಡಾಯವಿಲ್ಲ. ಮೂರ್ತಿ ಪೂಜೆಯ ವಿಷಯದಲ್ಲಿ ಕ್ಯಾಥೋಲಿಕ್ ಹಾಗೂ ಪ್ರೊಟೆಸ್ಟೆಂಟ್ ಪಂಗಡಗಳ ನಡುವೆ ಭಿನ್ನಾಭಿಪ್ರಾಯವಿದೆ. ಪ್ರೊಟೆಸ್ಟೆಂಟ್ ಅವರಿಗೆ ಮೂರ್ತಿ ಪೂಜೆಯಲ್ಲಿ ನಂಬಿಕೆಯಿಲ್ಲ. ಆದರೆ ಕ್ಯಾಥೋಲಿಕ್ ಪಂಗಡದವರಿಗೆ ಮೂರ್ತಿ ಪೂಜೆಯ ಬಗ್ಗೆ ನಂಬಿಕೆಯಿದ್ದು ಅವರಲ್ಲಿ ಈ ಮೂರ್ತಿ ಪೂಜಾಪದ್ಧತಿ ರೂಢಿಯಲ್ಲಿದೆ.

ಏಸುಕ್ರಿಸ್ತನ ಬಗ್ಗೆ ಅವರ ನಂಬಿಕೆ ದೃಢವಾಗಿದೆ. ಆತನು ನಿಜವಾಗಿಯೂ ಸರ್ವಶಕ್ತ. ಸರ್ವರ ಪಾಪಗಳನ್ನು ತೊಡೆದುಹಾಕಿ ಉದ್ಧರಿಸಲೋಸುಗವೇ ಶಿಲುಬೆಗೇರಿ ಮರಣಕ್ಕೊಳಪಟ್ಟವನು. ಮರಣ ಹೊಂದಿದ ಮೂರನೇ ದಿನದಂದು 'ಪುನರುತ್ಥಾನ' ಹೊಂದಿದ್ದಾರೆಂದು ನಂಬಿದ್ದಾರೆ. ಕ್ರಿಸ್ಚಿಯನ್ ಧರ್ಮದಲ್ಲಿ ಪ್ರಾರ್ಥನೆ ಮಾಡುವ ಅವಕಾಶ ಹಾಗೂ ಚರ್ಚಿಗೆ ಹೋಗುವ ಅವಕಾಶ ಮಹಿಳೆಯರಿಗೂ ಇದೆ. ಯಾವುದೇ ಜಾತಿ–ಮತಗಳವರಿಗೂ ಚರ್ಚಿಗೆ ಬರುವ ಹಾಗೂ ಪ್ರಾರ್ಥನೆ ಸಲ್ಲಿಸುವ ಅವಕಾಶವೂ ಇದೆ.

ಜೀವನ ಚಕ್ರದ ಯಾವುದೇ ಕಾರ್ಯಕ್ರಮಗಳಿಗೂ ಚರ್ಚ್ ಅಗತ್ಯ. ಹುಟ್ಟಿದ ಮಗುವಿಗೆ ಹೆಸರಿಡಲೂ ಚರ್ಚಿನಲ್ಲೇ ವಿಧಿವಿಧಾನಗಳು ನಡೆಯುತ್ತವೆ. ನಾಮಕರಣದ ಸಂದರ್ಭದ ಆಚರಣೆಯನ್ನು 'ಜ್ಞಾನ ಸ್ನಾನ'ವೆಂದು ಕರೆಯುತ್ತಾರೆ. ಕ್ಯಾಥೋಲಿಕರಲ್ಲಿ ಪರಮ ಪ್ರಸಾದವನ್ನು ಸ್ವೀಕರಿಸುವ ಪದ್ಧತಿ ಇದೆ. ಆ ಪ್ರಸಾದವನ್ನು ತಿಂದ ನಂತರವೇ ಆತ ಕ್ರಿಶ್ಚಿಯನ್ ಎನಿಸಿಕೊಳ್ಳುತ್ತಾನೆ. ನಂತರವೇ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಆತ ಪಾಲ್ಗೊಳ್ಳಬಹುದು. ಹಿಂದೂ ಧರ್ಮದ ಉಪನಯನದಂತೆ ಇವರು ಭಾನುವಾರದಂದು ನಡೆಸುವ 'ಪರಮ ಪ್ರಸಾದ' ಕಾರ್ಯಕ್ರಮ ಬಹಳ ಮುಖ್ಯವಾದುದು ಹೆಣ್ಣು ಮಕ್ಕಳಿಗೆ 'ಪವಿತ್ರಸ್ನಾನ' ವೆಂಬ ಕಾರ್ಯಕ್ರಮವನ್ನು ಆಚರಿಸುತ್ತಾರೆ. ಈ ಧಾರ್ಮಿಕ ವಿಧಿ ಏಳು

ಅಥವಾ ಎಂಟು ವರ್ಷದ ಮಕ್ಕಳಿಗೆ ಅನ್ವಯಿಸುತ್ತದೆ.'' ಶೃಂಗೇರಿಯಲ್ಲಿ ಇವರು ತೀರಾ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇಲ್ಲಿ ಚರ್ಚ್ ಸಹ ಇರಲಿಲ್ಲ. ಹೊರಭಾಗದಲ್ಲಿರುವ ಚರ್ಚಿಗೆ ಹೋಗಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಇತ್ತೀಚೆಗೆ ಒಂದು ಚಿಕ್ಕದಾದ ಚರ್ಚ್‌ನ್ನು ನಿರ್ಮಿಸಿದ್ದಾರೆ.

ಮುಸಲ್ಮಾನರು

ಶೃಂಗೇರಿಯಲ್ಲಿ ಅಲ್ಪಸಂಖ್ಯಾತರಲ್ಲಿ ಮುಸಲ್ಮಾನರು ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಟಿಪ್ಪು ಸುಲ್ತಾನನ ಆಡಳಿತಕಾಲದಲ್ಲಿ ಶೃಂಗೇರಿಗೆ ಬಂದಿದ್ದಾರೆ. ಇವರು ಉರ್ದುಭಾಷೆಯನ್ನು ಆಡುತ್ತಾರೆ. ಇನ್ನು ಕೆಲವರು ಕೇರಳ ಕಡೆಯಿಂದ ಬಂದಿದ್ದಾರೆ ಅವರು ಮಮಾಪಿಳ್ಳೆಭಾಷೆಯಾಡುತ್ತಾರೆ. ಇದರಲ್ಲಿ ಮಲಯಾಳಂ ಭಾಷೆ ಸೇರ್ಪಡೆಯಾಗಿದೆ. ಆಚಾರ, ವಿಚಾರ, ಧಾರ್ಮಿಕ ವಿಧಿ ವಿಧಾನಗಳಲ್ಲಿ ಈ ಎರಡೂ ಪಂಗಡಗಳಲ್ಲಿ ಭಿನ್ನತೆಯಿದೆ. ಪ್ರತ್ಯೇಕವಾದ ಎರಡು ಮಸೀದಿಗಳಿವೆ. ಮುಸ್ಲಿಂ ಜನಾಂಗದವರು ಹಬ್ಬಾಚರಣೆ, ಉಪವಾಸ, ಉರುಸು, ಮುಬಾರಕ್ ಮೊದಲಾದವುಗಳನ್ನು ಶ್ರದ್ಧಾ ಭಕ್ತಿಯಿಂದ ನಡೆಸುತ್ತಾರೆ. ಪ್ರತಿಯೊಬ್ಬ ಮುಸ್ಲೀಮನು ಶುಕ್ರವಾರ ಮಸೀದಿಗೆ ಹೋಗಿ ಪ್ರಾರ್ಥನೆಮಾಡುತ್ತಾನೆ. ಈ ಜನಾಂಗದಲ್ಲಿ ಅಪನಂಬಿಕೆ ಕಡಿಮೆ. ಶಿಕ್ಷಿತ ಹಾಗೂ ಅಶಿಕ್ಷಿತರೆಲ್ಲ ಒಂದೇ ರೀತಿಯ ಭಯಭಕ್ತಿಯನ್ನು ತೋರಿಸುತ್ತಾರೆ.

ಶೃಂಗೇರಿಯಲ್ಲಿರುವ ಮುಸ್ಲಿಮರಲ್ಲಿ ಕೆಲವಷ್ಟು ಬದಲಾವಣೆಯನ್ನು ಗುರುತಿಸಬಹುದಾಗಿದೆ. ಇಲ್ಲಿಯ ಪರಿಸರ ಜನರೊಂದಿಗೆ ಬೆರೆತು ಬಾಳಬೇಕಾಗಿರುವುದರಿಂದ ಕೆಲವಷ್ಟು ಮಾರ್ಪಾಟುಗಳಾಗಿವೆ. ಹಿಂದುಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಹಿಂದುಗಳ ಮನೆಯಲ್ಲಿ ನಡೆಯುವ ಶುಭ ಅಶುಭ ಕಾರ್ಯಕ್ರಮಗಳಿಗೆ ಭಾಗವಹಿಸುತ್ತಾರೆ. ಹಿಂದೂ ದೇವಾಲಯಗಳಿಗೆ ಭಯಭಕ್ತಿಯಿಂದ ಭೇಟಿಕೊಟ್ಟು ದೇವರಲ್ಲಿ ಪ್ರಾರ್ಥಿಸುವವರಿದ್ದಾರೆ. ಸಮಾನತೆ, ಸಹೋದರತೆ ಹಾಗೂ ಮತ ಸಹಿಷ್ಣತೆಯನ್ನು ಕಾಣಬಹುದಾಗಿದೆ. ಹಾಗೆಯೆ ಮುಸ್ಲಿಮರ ಮನೆಗೆ ಹಿಂದೂಗಳು ಹಾಗೂ ಇತರೆ ಜನಾಂಗದವರು ಹೋಗಿ ಬರುವ ಒಡನಾಟವನ್ನು ಇಟ್ಟುಕೊಂಡಿದ್ದಾರೆ. ಆದರೆ ಮುಸ್ಲಿಮರ ಮಸೀದಿಗೆ ಹೋಗುವುದಕ್ಕೆ ನಿಷೇಧವಿದೆ. ಧಾರ್ಮಿಕ ಆಚರಣೆ ವೇಳೆ ಮುಸ್ಲಿಮರ ಪ್ರೋತ್ಸಾಹ ಸಹಕಾರವಿದೆ. ಇದುವರೆಗೆ ಎಲ್ಲೂ ಗಲಾಟೆ ಘರ್ಷಣೆಗಳು ನಡೆದಿಲ್ಲ.[54]

ಮುಸ್ಲಿಮರು ವ್ಯಾಪಾರವನ್ನು ಪ್ರಧಾನ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಮೀನು ವ್ಯಾಪಾರ ಪ್ರಮುಖವಾದುದು. ಅದು ಅಲ್ಲದೆ ಮಲೆನಾಡಿನಲ್ಲಿ ಬೆಳೆಯುತ್ತಿರುವ ಬೆಳೆಗಳನ್ನು ಕೊಂಡು ವ್ಯಾಪಾರ ವಿನಿಮಯ ಮಾಡುತ್ತಾರೆ. ಅವರಲ್ಲಿ ಯಾವುದೇ ಬಗೆಯ ಉದ್ಯೋಗ ತಾರತಮ್ಯ ಇಲ್ಲದೆ ಯಾವುದೇ ಬಗೆಯ ಕೆಲಸವನ್ನಾದರೂ ಮಾಡುತ್ತಾರೆ. ಮುಸ್ಲಿಂ ಮಹಿಳೆಯರಿಗೂ ಸಮಾನಸ್ಥಾನಮಾನಗಳು ಇದ್ದು ಕೆಲವು ಆಚಾರ ವಿಚಾರಗಳಲ್ಲಿ ಮೊದಲಿನಂತೆ ಕಟ್ಟುಪಾಡುಗಳು ಇಲ್ಲದೆ ಸಡಿಲವಾಗಿವೆ. ಮಹಿಳೆಯರು ವಿದ್ಯಾಭ್ಯಾಸ ಪಡೆದು ಸರ್ಕಾರಿ, ಖಾಸಗಿ ಹಾಗೂ ಇತರೆ ಉದ್ಯೋಗದಲ್ಲಿ ನಿರತರಾಗಿದ್ದಾರೆ.

ಮನೆಯಿಂದ ಹೊರಬಂದು ಇತರೆ ಸ್ತ್ರೀಯರೊಂದಿಗೆ ವ್ಯವಹಾರಗಳನ್ನು ಮಾಡುತ್ತಾರೆ. ಇದು ಇತ್ತೀಚಿನ ಪರಿವರ್ತನೆಯಾಗಿದ್ದು ಪ್ರಮುಖ ಅಂಶಗಳಲ್ಲೊಂದಾಗಿದೆ. ಶೃಂಗೇರಿ ಶ್ರೀಮಠದೊಂದಿಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ.

ವೇಷ ಭೂಷಣಗಳಲ್ಲಿ ಬದಲಾವಣೆಗಳಾಗಿರುವುದನ್ನು ಗಮನಿಸಬಹುದು. ಅಪ್ಪಟ ಮುಸ್ಲಿಂ ತತ್ವಸಿದ್ಧಾಂತವಾದಿ ಧರ್ಮೀಯರು ಆಯಾ ಜಾತಿಧರ್ಮಾನುಸಾರ ಉಡುಗೆ-ತೊಡುಗೆ ಧರಿಸುತ್ತಿದ್ದಾರೆ. ಉಳಿದ ಅನೇಕರು ಹೊಸಪರಿವರ್ತನೆಗೆ ಅನುಗುಣವಾಗಿ ಇದ್ದಾರೆ. ಮುಸ್ಲಿಂ ಮುಖಂಡರು ಇವರ ಮೇಲೆ ಯಾವುದೇ ಬಗೆಯ ಹೇರಿಕೆಯನ್ನು ಹೇರಿಲ್ಲ.

ಸಾರಸ್ವತರು:

ಮೂರು ದಶಕಗಳ ಹಿಂದೆ ಪೋರ್ಚುಗೀಸರು ಬಲತ್ಕಾರದಿಂದ ಮತಾಂತರಕ್ಕೆ ಪ್ರಯತ್ನಿಸಿದಾಗ ಕೊಂಕಣ ಗೋವಾದಿಂದ ವಲಸೆ ಬಂದವರು. ಮೂಲತಃ ಪಂಜಾಬಿನ ಸರಸ್ವತೀ ನದೀ ತೀರದಿಂದ ಬಂದಿರುವುದರಿಂದ ಸಾರಸ್ವತರೆಂದು, ಚಿತ್ರಾಪುರ (ಶೀರಾಲಿ)ಮಠದ ಶಿಷ್ಯರಾದ್ದರಿಂದ ಚಿತ್ರಾಪುರ ಸಾರಸ್ವತರೆಂಬ ಹೆಸರಿದೆ. ಋಗ್ವೇದಿಗಳು, ಅತ್ರಿ, ಭಾರದ್ವಾಜ, ಕಂಶ, ಕೌಶಿಕ, ಕಾಂಡಿನ್ಯ ಮತ್ತು ವತ್ಸ ಗೋತ್ರ ಹೊಂದಿದ್ದಾರೆ. ಚಿತ್ರಾಪುರ ಗುರುಮಠವಾಗಿದೆ. ಕೊಂಕಣಿ ಮಾತನ್ನಾಡುತ್ತಾರೆ. ರಾವ್, ಭಟ್, ಶರ್ಮ ಮೊದಲಾದವುಗಳು ಕುಲನಾಮವಾಗಿವೆ. ಶೃಂಗೇರಿಯಲ್ಲಿ ಇವರ ಸಂಖ್ಯೆ ಕಡಿಮೆಯಿದೆ. ವ್ಯಾಪಾರೋದ್ಯಮದಲ್ಲಿ ಹೆಚ್ಚಿನ ಯಶಸ್ಸನ್ನು ಕಂಡು ಅದನ್ನೇ ಮುಂದುವರಿಸುತ್ತಿದ್ದಾರೆ. ಯುವಪೀಳಿಗೆಯವರು ಬೇರೆ ಬೇರೆ ಉದ್ಯೋಗ, ವಾತಾವರಣವನ್ನು ಅಪೇಕ್ಷಿಸಿ ಹೊರ ಊರುಗಳಲ್ಲಿ ನಗರಗಳಲ್ಲಿ ಬದುಕುವ ಹಂಬಲದಲ್ಲಿದ್ದಾರೆ.[55]

ಗೌಡಸಾರಸ್ವತರು:

ಗೌಡದೇಶ(ಬಂಗಾಲ)ದಲ್ಲಿ ಬಂದ ಬರಗಾಲದ ಕಾರಣ ಗೋವೆಗೆ ವಲಸೆಬಂದು ಅಲ್ಲಿಯ ಮತಾಂತರವನ್ನು ಪ್ರತಿಭಟಿಸಿ ಕರ್ನಾಟಕದ ಕರಾವಳಿಗೆ ಬಂದವರು. ದಕ್ಷಿಣ ಕನ್ನಡದಲ್ಲಿ ಇವರು ಅಧಿಕ ಸಂಖ್ಯೆಯಲ್ಲಿ ಇದ್ದು ಶೃಂಗೇರಿಯಲ್ಲಿ ಈ ಜನಾಂಗದವರು ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಇವರಲ್ಲಿ ಋಗ್ವೇದಿಗಳು, ಸ್ಮಾರ್ತ-ಮಾಧ್ವ ಸಂಪ್ರದಾಯದವರು ಇದ್ದಾರೆ. ಕಮತಿ (ಕಾಮತ್), ನಾಯಕ್, ಪರ್ಬು(ಪ್ರಭು), ಹೆಗಡೆ, ಬಾಳಿಗ, ಪೈ, ಶೆಣೈ, ಮಲ್ಯ, ಕುಡ್ವ ಮೊದಲಾದ ಕುಲನಾಮವನ್ನು ಹೊಂದಿದ್ದಾರೆ. ಶೃಂಗೇರಿಯಲ್ಲಿ ಈಗ ವ್ಯಾಪಾರ ಉದ್ಯೋಗವನ್ನು ಮಾಡುತ್ತಿದ್ದಾರೆ. ಕೆಲವರು ಕೃಷಿಯನ್ನೂ ಮಾಡುತ್ತಿದ್ದಾರೆ. ಯುವ ಪೀಳಿಗೆಯವರು ಬೇರೆ ಬೇರೆ ವೃತ್ತಿಯನ್ನು ಮಾಡುವಲ್ಲಿ ಹಾಗೂ ನಗರ ಜೀವನ ನಡೆಸುವಲ್ಲಿ ಆಸಕ್ತರಾಗಿದ್ದಾರೆ.[56]

ವಿಶ್ವಕರ್ಮ ಬ್ರಾಹ್ಮಣರು(ವಿಶ್ವ ಬ್ರಾಹ್ಮಣರು) (ಪಾಂಚಾಲ)

ಮೂಲತಃ ಪಾಂಚಾಲ ದೇಶದವರು. ಕಾಲಘಟ್ಟದ ಪರಿಸ್ಥಿತಿಯಿಂದ ಬೇರೆ ಬೇರೆ ಕಡೆಗಳಲ್ಲಿ ನೆಲೆಸಿದ್ದಾರೆ. ಶೃಂಗೇರಿಯಲ್ಲೂ ಇದ್ದಾರೆ. ಸುಪರ್ಣ, ಅತ್ರಿ, ವಿಶ್ವಾಮಿತ್ರ, ಪ್ರತನಂಶ್ಯ, ಅಹಭುನ, ಸನಾತನ, ಸಾನಂಗ ಗೋತ್ರದವರು ಇದ್ದಾರೆ. ಋಗ್ವೇದ, ಸಾಮವೇದ, ಅಥರ್ವಣ ವೇದದವರು ಇದ್ದಾರೆ. ಇದರಲ್ಲಿ ಪ್ರಮುಖ ಐದು ಉಪ ವರ್ಗಗಳಿವೆ. ಬಡಿಗ, ಕಮ್ಮಾರ, ಕಂಚುಗಾರ, ಸ್ವರ್ಣಕಾರ, ಶಿಲ್ಪಿ. ಶೃಂಗೇರಿಗೆ ಸಂಬಂಧಿಸಿದಂತೆ ಘಟ್ಟದ ಮೇಲಿನವರು ಹಾಗೂ ಘಟ್ಟದ ಕೆಳಗಿನವರು ಎಂಬ ಎರಡು ವರ್ಗಗಳು ಇವೆ. ಘಟ್ಟದ ಕೆಳಗಿನವರು, ಮದ್ಯಮಾಂಸಾದಿಗಳನ್ನು ಸೇವಿಸುತ್ತಾರೆ, ಮೇಲಿನವರು ಸಸ್ಯಹಾರಿಗಳಾಗಿದ್ದಾರೆ. ಇತ್ತೀಚಿಗಿನ ಪರಿವರ್ತನೆಯಿಂದಾಗಿ ಗೌಪ್ಯವಾಗಿ ಸೇವಿಸಿ ತಮ್ಮ ನೇಮ ನಿಷ್ಠೆಯಲ್ಲಿ ಪರಿವರ್ತನೆ ಆಗಿದೆ. ಹಿಂದೆ ಈ ಎರಡು ವರ್ಗಗಳ ನಡುವೆ ವೈವಾಹಿಕ ಸಂಬಂಧವಾಗಲಿ ಹೋಗಿಬರುವ ಸಂಬಂಧವಾಗಲಿ ಇರಲಿಲ್ಲ. ಈಗ ಬದಲಾಗಿ ನೆಂಟಸ್ತಿಕೆ ನಡೆಯುತ್ತಿದೆ. ಆಚಾರ ವ್ಯವಹಾರಗಳಲ್ಲಿ ಬದಲಾವಣೆಗಳು ಇವೆ. 'ದೊಡ್ಡಮನೆ', 'ಚಿಕ್ಕಮನೆ' ಯವರೆಂದು ಎರಡು ಪಂಗಡ. ದೊಡ್ಡಮನೆಯವರು ಮಾಂಸಾಹಾರಿಗಳು, ಚಿಕ್ಕಮನೆಯವರು ಶುದ್ಧಸಸ್ಯಹಾರಿಗಳು.[57] ಜಾತಿಕೆಟ್ಟು ಜಾತಿಯಿಂದ ಹೊರಹಾಕಿದವರನ್ನು ದೊಡ್ಡ ಮನೆಯವರೆಂದು ಕರೆಯುತ್ತಾರೆ. ಬ್ರಾಹ್ಮಣ ಜಾತಿಯವರ ಆಚಾರ ಸಂಪ್ರದಾಯಾದಿಗಳಂತೆಯೆ ಇವರೂ ಸಹ ಹೊಂದಿದವರಾಗಿದ್ದಾರೆ. ಇತ್ತೀಚೆಗೆ ಅವರಂತೆಯೆ ಕೆಲವು ಬದಲಾವಣೆಗಳಾಗಿದ್ದು ನವರೂಪವನ್ನು ಪಡೆದಿವೆ.

ಕುಂಬಾರಜಾತಿ:

ಕುಂಬಾರ ಜಾತಿಯವರು ಶೃಂಗೇರಿಯ ಸುತ್ತಮುತ್ತಲು ಬಹಳ ವಿರಳವಾಗಿದ್ದಾರೆ. ಹೆಚ್ಚಿನವರು ಘಟ್ಟದ ಕೆಳಗಿನವರು, ಇಲ್ಲಿಗೆ ಬಂದು ನೆಲೆಸಿದವರು. ಕನ್ನಡ, ತುಳು ಭಾಷೆಯನ್ನಾಡುತ್ತಾರೆ. ಯುವಪೀಳಿಗೆಯವರು ತುಳುವನ್ನು ಅಷ್ಟಾಗಿ ಬಳಸುತ್ತಿಲ್ಲ. ಆಚಾರ ವಿಚಾರಗಳಲ್ಲಿ ಘಟ್ಟದ ಮೇಲಿನ ಇತರ ಜಾತಿ ಜನಾಂಗದವರಂತೆ ನಡೆಸುತ್ತಾರೆ.ದೇವರ ಪೂಜೆ ಆರಾಧನೆ ಮೊದಲಾದವುಗಳು ಮೂಲ ನಾಡಲ್ಲಿ ನಡೆಯುವ ಸಂದರ್ಭದಲ್ಲಿ ಸೇರಿ ದೇವರ ಹಾಗೂ ದೈವದ ಕೃಪೆಗೆ ಪಾತ್ರರಾಗುತ್ತಾರೆ. ಘಟ್ಟದ ಮೇಲಿನ ಎಲ್ಲಾ ವಿಧದ ಹಬ್ಬಾಚರಣೆಗಳನ್ನು ಮಾಡುತ್ತಾರೆ. ಮಾಂಸಾಹಾರ ಮತ್ತು ಮದ್ಯಸೇವನೆ ಮಾಡುತ್ತಾರೆ. ಬಹುತೇಕ ಒಕ್ಕಲಿಗ ಜನಾಂಗದಲ್ಲಿರುವಂತೆ ಆಚರಣೆ ಶಾಸ್ತ್ರಗಳನ್ನು ಮಾಡುತ್ತಾರೆ. ವೃತ್ತಿಯಾಗಿ ಮಣ್ಣಿನ ಮಡಿಕೆ, ಕುಡಿಕೆಗಳನ್ನು ತಯಾರಿಸಿ ಮಾರಾಟಮಾಡಿ ಜೀವನ ನಿರ್ವಹಿಸುತ್ತಾರೆ. ಕೃಷಿ ಭೂಮಿಯಾಗಲಿ ಇತರೆ ಉದ್ಯೋಗ ಮಾಡುವುದಾಗಲಿ ಕಡಿಮೆಯಿತ್ತು. ಜಾತಿ ಕಸುಬನ್ನು ಎಲ್ಲಾ ಕುಟುಂಬದವರು ಮಾಡುತ್ತಿದ್ದರು.[58]

ಕಾಲದ ಬದಲಾವಣೆಯಂತೆ ಆಚಾರ-ವಿಚಾರ ನಡೆನುಡಿ ಮೊದಲಾದ ಸಾಂಸ್ಕೃತಿಕ ಪರಂಪರೆಯು

ಬದಲಾವಣೆಯಾಗಿದೆ. ಆಧುನಿಕತೆಯು ಇದಕ್ಕೆ ಕಾರಣವಾಗಿದ್ದು ಅನಿವಾರ್ಯತೆಯ ಒತ್ತಡ ಎದುರಾಗಿದೆ. ಆಚಾರ ವ್ಯವಹಾರಗಳಲ್ಲಿ ಮಾರ್ಪಾಡುಗಳಾಗಿದ್ದು ಉದ್ಯೋಗ, ಪದ್ಧತಿ, ಪರಂಪರೆಗಳಲ್ಲಿಯೂ ಬದಲಾವಣೆಗಳಾಗಿವೆ. ಜಾತಿ ವ್ಯವಸ್ಥೆಯ ತಾರತಮ್ಯವು ಕಡಿಮೆಯಾಗಿದ್ದು, ಇತರೆ ಜಾತಿ ಜನಾಂಗದವರ ಮನೆಯಲ್ಲಿ ಊಟ ವ್ಯವಹಾರ, ಹಾಗೆಯೆ ಇತರೆ ಜಾತಿಯವರು ಸಹ ಇವರ ಮನೆಗೆ ಹೋಗುವುದುಂಟು. ಒಂದು ಜಾತಿಯಿಂದ ಇನ್ನೊಂದು ಜಾತಿಗೂ ಇರುವ ಅಂತರ ಕಡಿಮೆಯಾಗಿದೆ.

ಭೋವಿ ಜನಾಂಗ:

ಭೋವಿ ಜನಾಂಗದವರು 'ನಗರ'ದವರು. ರಾಜರ ಆಸ್ಥಾನದಲ್ಲಿ ಸೇವಕರಾಗಿ ಇದ್ದರು. ಮೂರ್‍ನಾಲ್ಕು ಶತಮಾನದ ಹಿಂದೆ ಶೃಂಗೇರಿಗೆ ಬಂದವರು. ಶೃಂಗೇರಿಯ ಶ್ರೀಮಠದ ಸೇವೆಯಲ್ಲಿ ನಿರತರಾಗಿ ಮಠದ ರಕ್ಷಣೆ, ಗುರುಗಳ ಸೇವೆ, ಛತ್ರಿ ಚಾಮರ ಹಿಡಿಯುವುದು ಇವರ ಕಾಯಕವಾಗಿತ್ತು. ಕೃಷಿ ಭೂಮಿಯಾಗಲಿ, ಇತರೆ ಬೇರೆ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ. ಇತ್ತೀಚೆಗೆ ಕೃಷಿ ಭೂಮಿಯನ್ನು, ಇತರೆ ಉದ್ಯೋಗವನ್ನು ಮಾಡುತ್ತಿದ್ದಾರೆ. ಉತ್ತಮ ಶಿಕ್ಷಣ ಪಡೆದು ಸರ್ಕಾರದ ಉನ್ನತ ಹುದ್ದೆಯಲ್ಲಿದ್ದಾರೆ. ದೇವರು, ಧರ್ಮ, ಆಚಾರಗಳಲ್ಲಿ ಬಹಳ ಶ್ರದ್ಧೆ, ಭಕ್ತಿಯನ್ನು ಇಟ್ಟುಕೊಂಡಿದ್ದವರು ಶ್ರೀ ಮಠದ ವೃತ್ತಿ ಮಾಡುತ್ತಿದ್ದಾಗ ಮಾಂಸಾಹಾರವಾಗಲಿ ಮದ್ಯಪಾನವಾಗಲಿ ಮಾಡುತ್ತಿರಲಿಲ್ಲ. ಹಿರಿಯರು ಶ್ರೀಮಠದ ಉದ್ಯೋಗದಲ್ಲಿದ್ದವರು. ಈಗಲೂ ಸಹ ನೇಮನಿಷ್ಠೆಯಲ್ಲಿ ಇದ್ದಾರೆ.[59]

ಹಬ್ಬಾಚರಣೆ ದೇವರ ಹಾಗೂ ದೈವಗಳ ನಂಬಿಕೆಯು ಇತರ ಶೂದ್ರ ವರ್ಗದಲ್ಲಿರುವಂತೆಯೇ ಜಾತ್ರೆ, ಹರಕೆ, ಬಲಿ ಕೊಡುವುದು, ನಂಬಿಕೆ, ಆಚರಣೆಗಳು ಇವೆ. ಶನಿವಾರ, ಸೋಮವಾರದಂದು ವಿಶೇಷವಾಗಿ ವಾರಾಚರಣೆಯನ್ನು ಆಚರಿಸುತ್ತಾರೆ. ಉಪವಾಸ ವ್ರತ ಮಾಡುವವರಿದ್ದಾರೆ. ಅಂತ್ಯಕರ್ಮವಿಧಿಗಳನ್ನು ಶೂದ್ರವರ್ಗದವರು ನಡೆಸುವಂತೆಯೇ ನಡೆಸುತ್ತಾರೆ. ಇವರಲ್ಲಿ ಅಂತರ್ಜಾತಿ ವಿವಾಹ ನಡೆಯುತ್ತಿರಲಿಲ್ಲ. ಒಂದು ವೇಳೆ ಹಾಗೇನಾದರೂ ನಡೆದರೆ ಅವರನ್ನು ಜಾತಿಯಿಂದ ಹೊರಹಾಕುತ್ತಿದ್ದರು ಮತ್ತು ಮನೆಯಿಂದಲೂ ಹೊರಹಾಕುತ್ತಿದ್ದರು. ಇತರೆ ಜಾತಿಯವರ ಮನೆಯಲ್ಲಿ ಊಟ ತಿಂಡಿ ಮಾಡುತ್ತಿರಲಿಲ್ಲ. ಬ್ರಾಹ್ಮಣ ಜಾತಿಯವರ ಮನೆಯಲ್ಲಿ ಮಾತ್ರ ಮಾಡುತ್ತಿದ್ದರು. ಬ್ರಾಹ್ಮಣ ಜಾತಿಯಲ್ಲಿಯೂ ಜಾತಿ ಕೆಟ್ಟವರಿರುತ್ತಿದ್ದರು. ಅವರನ್ನು 'ಮಾಲೇರು' ಎಂದು ಕರೆಯತ್ತಾರೆ. ಅವರ ಮನೆಯಲ್ಲೂ ಊಟ ಮಾಡುತ್ತಿರಲಿಲ್ಲ. ಹಿಂದೆ ಮೂರುದಿನ ಮದುವೆ ನಡೆಯುತ್ತಿತ್ತು. ಯಾವುದೇ ಕೆಲಸ ಕಾರ್ಯ ಮಾಡುವುದಿದ್ದರೂ ಬ್ರಾಹ್ಮಣರಲ್ಲಿ ಕೇಳಿ ಅವರು ಹೇಳಿದಂತೆ ಮಾಡುತ್ತಿದ್ದರು. ಬ್ರಾಹ್ಮಣರನ್ನು ಕರೆಸುತ್ತಿದ್ದರು ಪಿತೃಗಳಿಗೆ, ಗೋವಿಗೆ, ಗೂಳಿಗೆ ಎಡೆಯಿಡುವುದು ಹಿಂದೆಯೂ ಇತ್ತು ಈಗಲೂ ಇದೆ. ಕುಲದೇವತಾ ಗಿಂಡಿಯಿರುತಿತ್ತು. ಶುದ್ಧವಾಗಿದ್ದು ಗಿಂಡಿಪೂಜೆಮಾಡುತ್ತಿದ್ದರು ಅವಲಕ್ಕಿ ನೈವೇದ್ಯ ಮಾಡುತ್ತಿದ್ದರು.

ದನಕರುಗಳನ್ನು ಮಾತ್ರ ಸಾಕುತ್ತಿದ್ದರು. ಇತರೆ ಯಾವುದೇ ಪ್ರಾಣಿಪಕ್ಷಿಗಳನ್ನು ಸಾಕುತ್ತಿರಲಿಲ್ಲ. ಈಗ ಕೆಲವರು ಕೋಳಿ ಹಾಗೂ ಇತರ ಪ್ರಾಣಿಳನ್ನು ಸಾಕುತ್ತಿದ್ದಾರೆ. ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಾರೆ. ಕನ್ನಡ, ತಮಿಳು, ತುಳು, ತೆಲುಗು ಮೊದಲಾದ ಭಾಷೆಗಳನ್ನು ಆಡುವವರಿದ್ದಾರೆ.

ಈಡಿಗ ಜನಾಂಗ:

ಶೃಂಗೇರಿ ಸುತ್ತಮುತ್ತ ಈಡಿಗರ ಸಂಖ್ಯೆ ತೀರಾ ಕಡಿಮೆ ಇದೆ. ಇವರು ಬೇರೆ ಬೇರೆ ಭಾಗದಿಂದ ಇಲ್ಲಿಗೆ ಬಂದು ನೆಲೆಸಿದವರಾಗಿದ್ದಾರೆ. ಕೂಲಿ, ಕೃಷಿ, ವ್ಯಾಪಾರಗಳನ್ನು ಮಾಡುತ್ತಿದ್ದರು. ಈಗಲೂ ಅದೇ ವೃತ್ತಿಯನ್ನು ಮುಂದುವರಿಸುತ್ತಿದ್ದಾರೆ. ಇತರೆ ಹಿಂದುಳಿದ ಜಾತಿಯವರ ಆಚರಣೆ, ಕ್ರಮದಂತೆಯೆ ಇವರಲ್ಲೂ ಇದೆ. ಮಾಂಸಾಹಾರಿಗಳಾಗಿದ್ದಾರೆ. ಇವರ ಆರಾಧ್ಯ ದೈವ ಶೃಂಗೇರಿ ಸಮೀಪದ ಗುಬ್ಬುಗೋಡುವಿನಲ್ಲಿದೆ. ಅಲ್ಲಿಗೆ ಪೂಜೆ ಹರಕೆಗಳನ್ನು ಒಪ್ಪಿಸುತ್ತಾರೆ. ಭೂತಾರಾಧನೆ, ದೆವ್ವಗಳ ಪೂಜೆ, ಆರಾಧನೆ ಎಲ್ಲರಂತೆಯೇ ಇವರಲ್ಲೂ ಇದೆ. ನಂಬಿಕೆ, ಮೂಢನಂಬಿಕೆ ಎರಡನ್ನೂ ನಂಬಿದವರು. ದೇವರನ್ನು ಕೇಳುವುದು, ಅದರಂತೆ ನಡೆಯುವುದು, ಎಲ್ಲರ ಕ್ರಮವಾಗಿದೆ. ಸತ್ತ ಕೂಡಲೆ ಶವಸ್ನಾನ ಮಾಡಿಸಿ ನಂತರ ವಿಧಿವಿಧಾನದಂತೆ ಸುಡುವುದು. ಸೂತಕ ತೆಗೆದಕೂಡಲೇ ವೈಕುಂಠಸಮಾರಾಧನೆಯನ್ನು ಮಾಡುತ್ತಾರೆ. ನೆಲದ ಮೇಲೆ ಕುಳಿತು ಸಹಭೋಜನ ಮಾಡುತ್ತಾರೆ.[60] ಈಗಲೂ ಕೆಲವು ಮನೆಗಳಲ್ಲಿ ಇದೇ ಪದ್ಧತಿ ಮುಂದುವರಿಯುತ್ತಿದೆ. ಕೆಲವರು ಟೇಬಲ್ ವ್ಯವಸ್ಥೆಯಲ್ಲಿ ಊಟ ತಿಂಡಿ ಮಾಡುತ್ತಾರೆ. ಎಲ್ಲರಲ್ಲೂ ಬದಲಾವಣೆಯಾದಂತೆ ಇವರಲ್ಲೂ ಬದಲಾವಣೆಯಾಗಿದೆ. ಕಾಲದ ಪರಿವರ್ತನೆ ಹಾಗೂ ಅನಿವಾರ್ಯತೆಯಿಂದ ಈ ಬಗೆಯ ಪಲ್ಲಟವಾಗಿದೆ,

ಮಡಿವಾಳ:

ಶೃಂಗೇರಿಯ ಸುತ್ತಮುತ್ತಲು ಮಡಿವಾಳರ ಸಂಖ್ಯೆ ತೀರಾ ಕಡಿಮೆಯಿದೆ. ಬಟ್ಟೆ ತೊಳೆದು ಇಸ್ತ್ರಿ ಮಾಡಿಕೊಡುವುದು ಇವರ ಕಾಯಕ. ಕೆಲವರು ದೋಣಿ ದಾಟಿಸುವ ವೃತ್ತಿಯನ್ನು ಮಾಡುತ್ತಿದ್ದರು. ಇತ್ತೀಚೆಗೆ ಕೃಷಿ, ಹೈನುಗಾರಿಕೆ, ವ್ಯಾಪಾರ, ವಾಹನಸಾರಿಗೆ ಇತರೆ ಉದ್ಯೋಗದಲ್ಲಿ ತೊಡಗಿದ್ದಾರೆ. ಕೆಲವರು ಸಸ್ಯಾಹಾರಿ ಮತ್ತು ಕೆಲವರು ಮಾಂಸಾಹಾರಿಗಳು ಇದ್ದಾರೆ. ನೇಮ ನಿಷ್ಠೆ, ಆಚರಣೆಯಲ್ಲಿ ಹೆಚ್ಚಿನ ಶ್ರದ್ಧೆಯನ್ನು ಇವರಲ್ಲಿ ಕಾಣಬಹುದು, ಮನೆಯಲ್ಲಿ ದೇವರ ವಿಗ್ರಹ ಕೋಣೆ, ಗದ್ದುಗೆ, ತುಳಸಿಕಟ್ಟೆ, ನಾಗ, ಚೌಡಿ ಇತ್ಯಾದಿ ದೇವರ, ದೆವ್ವಗಳ ಪೂಜೆ, ಆಚರಣೆ ಮಾಡುತ್ತಾರೆ.[61] ದೇವಾಲಯಗಳಿಗೆ ಹೋಗಿ ಪೂಜೆ, ಪ್ರಾರ್ಥನೆ ಸಲ್ಲಿಸುತ್ತಾರೆ. ಇವರಲ್ಲಿ ಹೆಚ್ಚಿನವರು ನಂಬಿಕೆ ಹಾಗೂ ಮೂಢನಂಬಿಕೆ ಎರಡನ್ನು ಹೊಂದಿದ್ದಾರೆ. ಗಣ, (ಮೈಮೇಲೆ ದೇವರು) ಬರುವುದು,

ಅದರ ಹೇಳಿಕೆ ಕೇಳಿ ನಡೆಯುವುದು ರೂಢಿಯಲ್ಲಿದೆ. ದುರ್ಗಾಂಬಾ ದೇವಾಲಯದ ಜಾತ್ರೆಯಂದು ವಿಶೇಷ ಆಚರಣೆ ಮಾಡುತ್ತಿದ್ದಾರೆ. ಅಲ್ಲಿಯ ಮಾರಿ ಜಾತ್ರೆಯಂದು ಎಲ್ಲರೂ ಸೇರಿ ಜಾತ್ರೆ ಮಾಡಿ ತಮ್ಮ ಹರಕೆಯನ್ನು ಒಪ್ಪಿಸುತ್ತಾರೆ. ಈಗಲೂ ಈ ಪದ್ಧತಿ ಮುಂದುವರಿದುಕೊಂಡು ಬಂದಿದೆ. ಆಧುನಿಕತೆಯ ಜ್ಞಾನಾರ್ಜನೆಯಿಂದಾಗಿ ಮೂಢನಂಬಿಕೆ ಕಡಿಮೆಯಾಗಿದೆ. ಮೈಮೇಲೆ ದೇವರು ಬರುವುದಾಗಲಿ, ಅದನ್ನು ಕೇಳಿ ಅದರಂತೆ ನಡೆದುಕೊಳ್ಳುವವರಾಗಲಿ ತೀರಾ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇದು ಬಹಳ ಮುಖ್ಯವಾದ ಪಲ್ಲಟವಾಗಿದೆ. ಮಣ್ಣಿನ ಪಾತ್ರೆ, ಕಂಚಿನ ತಟ್ಟೆ ಲೋಟಗಳನ್ನು ಬಳಸುತ್ತಿದ್ದರು. ಮರದ ವಸ್ತು, ಉಪಕರಣಗಳನ್ನು ಅಳತೆಯ ಸಾಧನಗಳನ್ನು ಬಳಸುತ್ತಿದ್ದರು. ಈಗ ಕಬ್ಬಿಣ, ಸ್ಟೀಲ್, ಪ್ಲಾಸ್ಟಿಕ್ ಮೊದಲಾದವುಗಳು ಬಳಕೆಯಲ್ಲಿವೆ. ವಿಧವೆಯರಿಗೆ ಮರುಮದುವೆಯ ಅವಕಾಶ ಕಡಿಮೆ ಪ್ರಮಾಣದಲ್ಲಿ ನಡೆಯುತ್ತಿತ್ತು. ಅಂತಹ ವಧುವನ್ನು 'ಶೀಲುಡ್ಕಿ' ಎಂದು ಕರೆಯುತ್ತಿದ್ದರು. ಮೊದಲು ಅವಿಭಕ್ತ ಕುಟುಂಬ ಪದ್ಧತಿ ಎಲ್ಲಾ ಜಾತಿಯಲ್ಲಿರುವಂತೆಯೆ ಈ ಜನಾಂಗದವರಲ್ಲೂ ಇತ್ತು. ಈಗ ಬದಲಾವಣೆಯಾಗಿ ಹೆಚ್ಚಿನವು ವಿಭಕ್ತಕುಟುಂಬವಾಗಿವೆ.

ದೇವಾಡಿಗ:

ಶೃಂಗೇರಿಯ ಭಾಗದಲ್ಲಿ ದೇವಾಡಿಗರ ಸಂಖ್ಯೆ ತುಂಬಾ ಕಡಿಮೆ. ಇತ್ತೀಚೆಗೆ ಕೆಲವು ಮನೆಗಳು ನೆಲೆಸಿವೆ. ಹೆಚ್ಚಿನವರು ಸಸ್ಯಹಾರಿಗಳಾಗಿದ್ದರು. ಇತರೆ ಜಾತಿ ಜನಾಂಗದವರ ಆಚರಣೆಯಂತೆ ಇವರಲ್ಲೂ ದೇವತೆಗಳಿಗೆ, ದೈವ್ವಗಳಿಗೆ ಎಡೆಯಿಡುವುದು, ಭಕ್ಷ್ಯದ ನೈವೇದ್ಯ ನಡೆಯುತ್ತಿತ್ತು. ಹೆಚ್ಚಿನವರು ಕೂಲಿ ಕೆಲಸ, ಜೀತದಲ್ಲಿರುತ್ತಿದ್ದರು.[62] ಈಗ ಕೆಲವರು ಕೃಷಿ ಭೂಮಿಯನ್ನು ಹೊಂದಿದ್ದಾರೆ. ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಅಲ್ಲಿಯ ಆಚಾರ ಸಂಪ್ರದಾಯದಂತೆ ಇವರ ಕುಟುಂಬದಲ್ಲಿಯೂ ನಡೆಯುತ್ತಿತ್ತು. ಬೀಡಿಕಟ್ಟುವುದು, ಹತ್ತಿಯ ಕೆಲವು ವಸ್ತುಗಳನ್ನು ಮಾಡುತ್ತಿದ್ದರು. ಇವರು ಕನ್ನಡದೊಂದಿಗೆ ತುಳು ಭಾಷೆಯನ್ನು ಆಡುತ್ತಿದ್ದರು. ಇತರೆ ಶೂದ್ರ ಜಾತಿಜನಾಂಗದವರಂತೆ ಇವರ ಜಾತಿಯವರಲ್ಲೂ ಸಾಂಸ್ಕೃತಿಕ ಅಂಶಗಳನ್ನು ಕಾಣಬಹುದಾಗಿದೆ.

ಬಿಲ್ಲವ (ಪೂಜಾರಿ):

ಬಿಲ್ಲವ ಜನಾಂಗದವರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಮೂಲತಃ ದಕ್ಷಿಣ ಕನ್ನಡದಿಂದ ಬಂದವರು. ಬೈನೆಕಳ್ಳು (ಶೇಂದಿ) ಕಟ್ಟಿ ಮಾರಾಟ ಮಾಡಿ ಜೀವನ ನಡೆಸುತ್ತಿದ್ದರು. ಉಳಿದವರು ಕೂಲಿ ಆಳುಗಳಾಗಿ ಕೆಲಸ ಮಾಡುತ್ತಿದ್ದರು. ದಕ್ಷಿಣ ಕನ್ನಡದ ಮೂಲದವರಾದುದರಿಂದ ಅಲ್ಲಿಯ ದೇವರು, ದೈವ್ವಗಳನ್ನು ನಂಬಿದವರಾಗಿದ್ದಾರೆ. ಪ್ರತಿವರ್ಷ ಅಲ್ಲಿಗೆ ಹೋಗಿ ತಮ್ಮ ಪೂಜೆ, ಹರಕೆಯನ್ನು ಸಲ್ಲಿಸುತ್ತಿದ್ದಾರೆ. ಅವರ ಬಂಧು ಬಳಗದವರು ಹೆಚ್ಚಿನವರು ಅಲ್ಲಿಯೇ ಇರುತ್ತಿದ್ದರು. ಶಿಕ್ಷಣದಿಂದ ದೂರ ಉಳಿದ

ವರ್ಗ ಇದಾಗಿತ್ತು. ಮಾಂಸಾಹಾರಿಗಳಾಗಿದ್ದರು. ಮೇಲ್ಜಾತಿಯ ಜನ ಇವರನ್ನು ಮುಟ್ಟುತ್ತಿರಲಿಲ್ಲ. ಸಮಾಜದ ಮುಖ್ಯವಾಹಿನಿಗೆ ಬಾರದಂತೆ ದೂರವಿಟ್ಟು, ಅಸ್ಪೃಶ್ಯರಂತೆ ನೋಡಿಕೊಳ್ಳುತ್ತಿದ್ದರು. ಕೆಲವರು ಜೀತದಾಳುಗಳಾಗಿ ಶ್ರೀಮಂತರ ಮನೆಯಲ್ಲಿ ಇರುತ್ತಿದ್ದರು. ದಕ್ಷಿಣ ಕನ್ನಡದ ಕೋಲ, ನಾಗರಪೂಜೆ, ಕೋಳಿ ಅಂಕ, ಕೋಟಿ ಚೆನ್ನಯ್ಯ ಪಾಡ್ದನ, ಯಕ್ಷಗಾನ, ಇಲ್ಲಿಗೆ ಬರಲು ಕಾರಣೀಭೂತರಾದವರು. ಈಗಲೂ ಅನೇಕ ಕುಟುಂಬ ಈ ಆಚರಣೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈಗ ಬದಲಾವಣೆಗಳಾಗಿದ್ದು ಉದ್ಯೋಗ ಹವ್ಯಾಸ ಕೆಲಸಗಳಲ್ಲಿ ಸುಧಾರಣೆಯಾಗಿದೆ. ಸಮಾಜದಲ್ಲಿ ಗೌರವಾದರಗಳಿಗೆ ಭಾಜನರಾಗಿದ್ದಾರೆ.[63] ಮಲೆನಾಡಿನ ಇತರೆ ಶೂದ್ರ ಜನಾಂಗದವರು ಆಚರಿಸುತ್ತಿರುವ ಹಬ್ಬಾಚರಣೆ, ನೇಮ, ವ್ರತ ಜಾತ್ರೆಗಳನ್ನು ಇವರೂ ಆಚರಿಸುತ್ತಿದ್ದಾರೆ. ಬಿಲ್ಲವ ಜನಾಂಗದ ಕೆಲವರು ಕವಲೆದುರ್ಗದ ಕೆರೆಯ ಹತ್ತಿರ ಬಲಿ ಸಮರ್ಪಿಸಿ ಜಾತ್ರೆ ನಡೆಸುತ್ತಿದ್ದರು. ಶೃಂಗೇರಿಯ ಶ್ರೀಮಠದಲ್ಲಿ ನಡೆಯುತ್ತಿದ್ದ ಜಾತ್ರೆ, ಉತ್ಸವಗಳಿಗೆ ಬರುತ್ತಿದ್ದರು. ಕಿಗ್ಗಾ ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸುತ್ತಿದ್ದರು. ಒಂಭತ್ತು ಬಾಳೆಎಲೆಯನ್ನು ಇಟ್ಟು ಕೊಲ್ಲೆ ಗಿಡುತ್ತಿದ್ದರು. ಸಹ ಭೋಜನ ಮಾಡುತ್ತಿದ್ದರು.ಸಜಾತಿ ವಿವಾಹ ಮಾಡುತ್ತಿದ್ದರು. ಅಂತರಜಾತಿಯ ವಿವಾಹ ನಡೆಯುತ್ತಿರಲಿಲ್ಲ. ಅಂತವರನ್ನು ಜಾತಿಯಿಂದ ಹೊರಹಾಕುತ್ತಿದ್ದರು. ತುಳು ಇವರ ಮಾತೃಭಾಷೆ, ಕನ್ನಡವನ್ನು ಕಲಿತು ಅಸ್ಪಷ್ಟವಾಗಿ ಮಾತನಾಡುತ್ತಾರೆ. ಕೆಲವರು ಕೊಂಕಣಿ ಮಾತನ್ನಾಡುತ್ತಾರೆ.

ಬಂಟರು (ಆರ್ಯ ವೈಶ್ಯ) :

ಶೃಂಗೇರಿಯಲ್ಲಿ ಬಂಟರ ಸಂಖ್ಯೆ ಕಡಿಮೆಯಿದೆ. ಮೂಲತಃ ದಕ್ಷಿಣ ಕನ್ನಡದಿಂದ ಬಂದು ನೆಲೆಯಾದವರು. ಈಗ ಹೋಟೆಲ್ ಉದ್ಯಮ, ದಲ್ಲಾಳಿ, ಕೃಷಿ, ವ್ಯಾಪಾರ ಹಾಗೂ ಇತರೆ ಕೆಲಸಗಳಲ್ಲಿ ನಿರತರಾಗಿದ್ದಾರೆ. ಹಿಂದುಳಿದ ಜಾತಿಯವರ ಹಬ್ಬಾಚರಣೆ, ಶಾಸ್ತ್ರ, ನಿಯಮ, ನಿಷ್ಠೆಗಳಂತೆ ಇವರೂ ಇಟ್ಟುಕೊಂಡಿದ್ದಾರೆ. ಗೌರಿಹಬ್ಬದಂದು ಕಂಕಣ ಕಟ್ಟುವುದು, ಬಾಗಿನ ಕೊಡುವುದಿದೆ. ಶಿವರಾತ್ರಿಯಂದು ಸಂಪೂರ್ಣ ಉಪವಾಸ ಇದ್ದು ಶಿವನಿಗೆ ತುಂಬೆಹೂವಿನಹಾರ ಸಮರ್ಪಿಸುತ್ತಿದ್ದರು. ಕೊಡೆ ಅಮವಾಸ್ಯೆಯಂದು ಬ್ರಾಹ್ಮಣರಿಗೆ ತಾಂಬೂಲ ದಾನ ಮಾಡುವಾಗ ಕೊಡೆಯನ್ನು ಈ ಜನಾಂಗದವರು ದಾನ ಮಾಡುತ್ತಿದ್ದರು. ಈಗ ಇಲ್ಲ. ಬಸವನ ಅಮವಾಸ್ಯೆಯಂದು ಮಣ್ಣಿನ ಬಸವನನ್ನು ಮಾಡಿ ಪೂಜಿಸಿ ಸಂಜೆ ವಿಸರ್ಜಿಸುತ್ತಿದ್ದರು. ತುಳಸಿ ದೀಪದಂದು ನೆಲ್ಲಿಕಾಯಲ್ಲಿ ತುಪ್ಪದ ದೀಪ ತಯಾರಿಸಿ ಕೃಷ್ಣನನ್ನು ಇಟ್ಟು ಸಣ್ಣ ಸಣ್ಣ ದೋಸೆಗಳನ್ನು ಮಾಡಿ ನೈವೇದ್ಯ ಮಾಡುತ್ತಿದ್ದರು. ಗೋಕುಲಾಷ್ಟಮಿಯಂದು ಗೋಧಿ ಮತ್ತು ಕಡಲೆಯನ್ನು ನೀರಲ್ಲಿ ನೆನಸಿ ಹಾರಮಾಡಿ ದೇವರಿಗೆ ಏರಿಸಿ, ಸಂಜೆ ಪೂಜೆ ಮಾಡಿ ನೈವೇದ್ಯ ಮಾಡುತ್ತಿದ್ದರು. ಇತ್ತೀಚಿನವರೆಗೂ ಈ ಆಚರಣೆ ರೂಢಿಯಲ್ಲಿತ್ತು. ಈಗ ಇಲ್ಲ. ಆರ್ಯವೈಶ್ಯರು ತೆಲುಗು ಮಾತೃಭಾಷೆಯ ಜನಾಂಗ ಬಹಳ ಹಿಂದೆಯೇ

ವ್ಯಾಪಾರಕ್ಕಾಗಿ ಶೃಂಗೇರಿಗೆ ಬಂದು ನೆಲೆಸಿದವರು. ಕೃಷಿ, ವ್ಯಾಪಾರಗಳೇ ಪ್ರಧಾನ ಉದ್ಯಮ. ವಾಸವಿ ಜಯಂತಿಯನ್ನು ವಿಜೃಂಭಣೆಯಿಂದ ಮಾಡುತ್ತಿದ್ದರು. ಕನ್ನಿಕಾಪರಮೇಶ್ವರಿ ದೇವಾಲಯದಲ್ಲಿ ಈಗಲೂ ವಿಶೇಷ ಪೂಜೆ ನಡೆಯುತ್ತಿರುತ್ತದೆ. ಇವರ ಮನೆದೇವರು ಮೈಲಾರೇಶ್ವರ ಸ್ವಾಮಿ. ವರಮಹಾಲಕ್ಷ್ಮಿ ವ್ರತದಂದು ಎರಡು ಕಲಶಗಳನ್ನು ಇಟ್ಟು ಪೂಜಿಸಲಾಗುತ್ತದೆ. ಒಂದಕ್ಕೆ ಹಾಲು-ನೀರು-ದುಡ್ಡು ಹಾಕುತ್ತಾರೆ ಇದನ್ನು ಗಂಗೆ ಕಲಶ ಎಂದು, ಇನ್ನೊಂದರಲ್ಲಿ ಒಣಗಿದ ಹಣ್ಣನ್ನು, ದುಡ್ಡು ಹಾಕುತ್ತಾರೆ, ಇದನ್ನು ನಾರಾಯಣ ಕಲಶವೆನ್ನುತ್ತಾರೆ. ಸಹಭೋಜನ ಮಾಡುತ್ತಿದ್ದರು. ಎಲೆಯ ಸುತ್ತಾ ನೀರು ಹಾಕಿ, ಆಪೋಷಣೆಮಾಡಿ ಊಟಮಾಡುತ್ತಿದ್ದರು. ಲಿಂಬೆಗಿಡದ ಮುಳ್ಳಿನಿಂದ ಕಿವಿಚುಚ್ಚುತ್ತಿದ್ದರು. ಬ್ರಾಹ್ಮಣರಿಗೆ ಕೊಬ್ಬರಿ, ಬೆಲ್ಲ, ಅಕ್ಕಿ, ದಾನ ಮಾಡುತ್ತಿದ್ದರು.[64] ಈ ಶಾಸ್ತ್ರದ ಸಮಯದಲ್ಲಿ ಸೋದರಮಾವನ ಸಹಕಾರ ಪಡೆಯುತ್ತಿದ್ದರು. ಉಳಿದಂತೆ ಇತರೆ ಶೂದ್ರವರ್ಗದವರು ಆಚರಿಸುವ ಆಚಾರ, ಸಂಪ್ರದಾಯ ಮೊದಲಾದವುಗಳನ್ನು ಇವರೂ ಅನುಸರಿಸುತ್ತಿದ್ದರು. ಈಗ ಎಲ್ಲಾ ಜಾತಿಯವರಲ್ಲಾದ ಮಾರ್ಪಾಟನಂತೆ ಇವರಲ್ಲೂ ಆಗಿದೆ.

ಮೊಗವೀರ

ಶೃಂಗೇರಿ ತಾಲ್ಲೂಕಿನಲ್ಲಿ ಮೊಗವೀರರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇವರು ದಕ್ಷಿಣ ಕನ್ನಡದಿಂದ ಘಟ್ಟದ ಮೇಲೆ ಬಂದವರು. ತುಳು ಮಾತೃಭಾಷೆಯಾಗಿದೆ. ಕುಂದಾಪುರದ ಕಡೆಯಿಂದ ಬಂದವರೂ ಇದ್ದಾರೆ. ಅಲ್ಲಿಯ ಭಾಷೆಯ ಸೊಗಡು ಕಾಣುತ್ತದೆ. ಇವರ ವೃತ್ತಿ ಮೀನು ಹಿಡಿಯುವುದಾದರೂ ಶೃಂಗೇರಿಯ ಸುತ್ತಮುತ್ತಲಿನವರು ಕೂಲಿ ಕೆಲಸಮಾಡಿ, ಶ್ರೀಮಠದಲ್ಲಿ ಸೇವೆ ಸಲ್ಲಿಸಿ, ತಮ್ಮ ಜೀವನ ನಡೆಸುತ್ತಿದ್ದರು. ಬರಬರುತ್ತಾ ಕೃಷಿ ಭೂಮಿಯನ್ನು ಕೆಲವರು ಹೊಂದಿ, ಕೃಷಿ, ವ್ಯಾಪಾರ, ಪಶುಪಾಲನೆ, ವಾಹನ ವೃತ್ತಿಯನ್ನು ಮಾಡುತ್ತಿದ್ದಾರೆ. ದೇವತಾರಾಧನೆ, ದೆವ್ವಗಳ ಆರಾಧನೆಯನ್ನು ಮೂಲ ಊರಿನಲ್ಲಿ ನಡೆಯುವಾಗ ಅಲ್ಲಿಗೆ ಹೋಗಿ ನೆರವೇರಿಸುತ್ತಾರೆ. ಹಿಂದಿನ ತಲೆಮಾರಿನಿಂದಲೂ ಇದೇ ರೀತಿ ಮುಂದುವರಿದುಕೊಂಡು ಬಂದಿದೆ. ಹಿಂದಿನ ತಲೆಮಾರಿನವರು ತಪ್ಪದೆ ತಮ್ಮ ಮೂಲಸ್ಥಾನದ ಆರಾಧನೆಯಲ್ಲಿ ಭಾಗವಹಿಸುತ್ತಿದ್ದರು. ಈಗ ಕೆಲವು ಕುಟುಂಬದವರು ಹೋಗುತ್ತಾರೆ. ಉಳಿದವರು ಸಂಪರ್ಕವನ್ನೇ ಬಿಟ್ಟಿದ್ದಾರೆ. ಆಚಾರ ವ್ಯವಹಾರಗಳಲ್ಲಿ ದಕ್ಷಿಣ ಕನ್ನಡದ ಕ್ರಮ ಸ್ವರೂಪವನ್ನು ಕಾಣಬಹುದಾದರೂ ಮಲೆನಾಡಿನ ಇತರೆ ಜಾತಿ ಜನಾಂಗದವರು ಆಚರಿಸುವಂತೆಯೇ ಇವರು ಸಹ ಆಚರಿಸುತ್ತಿದ್ದಾರೆ.

ಈ ಜನಾಂಗದವರು ಮಾಂಸಾಹಾರಿಗಳು. ಹಬ್ಬಾಚರಣೆ ನಡೆಯುವಾಗ ಭಕ್ಷ್ಯ ಭೋಜನದ ಊಟದ ನಂತರ ಮಾಂಸಹಾರಿ ಭೋಜನ ಮಾಡುತ್ತಾರೆ. ಪಿತೃಗಳಿಗೆ ಎಡೆಯಿಡುತ್ತಾರೆ. ಪ್ರತಿಯೊಂದು ವಿಶೇಷ ಸಂದರ್ಭದಲ್ಲಿ ಕೊಲ್ಲೆಗಿಡದೆ ಆಹಾರ ಸೇವಿಸುವುದಿಲ್ಲ. ಹೆಚ್ಚಿನವರು ಶೃಂಗೇರಿಯ ಶ್ರೀಮಠವನ್ನು

ಸಂಬಂಧಪಟ್ಟವರಾಗಿದ್ದರಿಂದ ಮಠದ ಧಾರ್ಮಿಕ ವ್ಯವಹಾರದಂತೆಯೆ ತಮ್ಮ ಮನೆಗಳಲ್ಲೂ ಅನುಸರಿಸಿ ಆಚರಿಸುತ್ತಾರೆ.

ಕೊಡೆ ಅಮವಾಸ್ಯೆಯಂದು ಗ್ರಾಮ ದೇವತೆಯನ್ನು ಪೂಜಿಸುತ್ತಾರೆ. ಭೂತಾರಾಧನೆ ಹರಕೆಯನ್ನು ತಪ್ಪದೆ ಮಾಡುತ್ತಾರೆ. ನೆಂಟರಿಷ್ಟರನ್ನು ಆ ದಿನ ಕರೆದು ಭೋಜನ ಮಾಡಿಸುತ್ತಾರೆ. ಪ್ರತಿ ಕುಟುಂಬದವರು ಮಾರಿ, ಪಂಜುರ್ಲಿ, ಭೂತ, ಕಲ್ಲುಕುಟ್ಟಿಗ, ಚೌಡಿ, ಒಂಟೆ, ರಣ ಮೊದಲಾದ ದೇವತೆಗಳಿಗೆ ಹರಕೆ ಕೊಡುತ್ತಾರೆ.

ಹೆಣವನ್ನು ಉತ್ತರಕ್ಕೆ ತಲೆ ಮಾಡಿ ಮಲಗಿಸಿ ತಲೆಯ ಮೇಲ್ಭಾಗಕ್ಕೆ ಅಕ್ಕಿ, ಭತ್ತ, ಕಾಯಿಗಳನ್ನು ಇಟ್ಟು ದೀಪ ಹಚ್ಚುತ್ತಾರೆ. ಊದು ಬತ್ತಿ ಹಚ್ಚಿಡುತ್ತಾರೆ. ನಂತರ ನೀರು ಕಾಯಿಸಿ ಅರಿಶಿನ, ಸೀಗೆಪುಡಿ ಸೇರಿಸಿ ಹೆಣಕ್ಕೆ ಸ್ನಾನ ಮಾಡಿಸುತ್ತಾರೆ. ನಂತರ ಬಿಳಿಬಟ್ಟೆ ಹೊದಿಸಿ ಹೂವಿನಹಾರ, ಗಂಧದ ಹಾರ ಹಾಕುತ್ತಾರೆ. ಬಿದಿರಿನಿಂದ ಮಾಡಿದ ಚಟ್ಟದಲ್ಲಿ ಇಟ್ಟು ಮುಂದಲೆ ಮಾಡಿ ಸ್ಮಶಾನಕ್ಕೆ ಹೊತ್ತು ಒಯ್ದು, ಅಲ್ಲಿ ಹಿರಿಯ ಮಗನು ನೀರು ಇರುವ ಮಡಿಕೆಗೆ ತೂತು ಮಾಡಿ ಮೂರು ಪ್ರದಕ್ಷಿಣೆ ಬಂದು ಆ ಮಡಿಕೆಯನ್ನು ಒಡೆದು, ಚಿತೆಗೆ ಬೆಂಕಿ ಹಚ್ಚುತ್ತಾರೆ. ನಂತರ ಪುರೋಹಿತರ ಸೂಚನೆಯಂತೆ ಬೂದಿ ಮುಟ್ಟುವುದು, ಅಂತ್ಯವಿಧಿ ಆಚರಿಸುವುದು ಇದೆ.[65]

ಹೆಣ್ಣು ಮಕ್ಕಳು ಋತುಮತಿ ಆದಾಗ ತೆಂಗಿನಮರ ಅಥವಾ ಅಡಿಕೆ ಮರದ ಕೆಳಗೆ ಕೂರಿಸುತ್ತಾರೆ. ಐದು ದಿನದ ನಂತರ ಸ್ನಾನ ಮಾಡಿಸುತ್ತಾರೆ. ಹನ್ನೊಂದನೆ ದಿನಕ್ಕೆ ನೀರು ಎರೆಸುವಮನೆ ಶಾಸ್ತ್ರ ಮಾಡುತ್ತಾರೆ. ಆಕೆಗೆ ಎಲ್ಲರೂ ನೀರು ಹಾಕಿ, ತಿಂಡಿ ತಿನ್ನಿಸಿ, ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ತೀರ್ಥಸ್ನಾನ ಮಾಡಿಸುತ್ತಾರೆ.

ಈಗ ಮೊದಲಿನಂತೆ ಹಬ್ಬಾಚರಣೆಗಳು ಶಾಸ್ತ್ರೋಕ್ತವಾಗಿ, ಭಯಭಕ್ತಿಯಿಂದ ನಡೆಯುತ್ತಿಲ್ಲ. ಆಸಕ್ತಿ ಕಡಿಮೆಯಾಗಿದೆ. ಹಬ್ಬಗಳು ಮಹತ್ವ ಕಳೆದುಕೊಂಡಿವೆ. ಮದ್ಯಮಾಂಸವು ಯಾವಾಗ ಬೇಕಾದರೂ ಸೇವಿಸುತ್ತಿರುವುದರಿಂದ ಹಬ್ಬದ ವಿಶೇಷತೆಯ ಮಹತ್ವ ಇಲ್ಲ. ಶಿಕ್ಷಣ ಮಟ್ಟದಲ್ಲೂ ಗಣನೀಯವಾದ ಸುಧಾರಣೆ ಆಗಿಲ್ಲ. ವೃತ್ತಿ ಬದಲಾವಣೆಯಾಗಿದೆ ವಿನಾ ಆರ್ಥಿಕ ಸ್ಥಿತಿಗತಿ ಉತ್ತಮವಾಗಿಲ್ಲ. ಕೆಲವರು ಮಾತ್ರ ಸಾಧಾರಣ ಸ್ಥಿತಿಗತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ.

2.6 ಜೀವನ ವಿಧಾನ ಹಾಗೂ ಪಲ್ಲಟಗಳು :

ಮನುಕುಲದ ಒಳಿತಿನಲ್ಲಿ ಸಮಾಜದ್ದು ಮಹತ್ವದ ಪಾತ್ರ ಸಮಾಜವೆಂಬುದು ಒಂದು ವ್ಯವಸ್ಥೆ. ಬದುಕಿನ ಬಂಧುರತೆಗಾಗಿ ಸಮುದಾಯವೊಂದು ನಿರ್ಮಿಸಿಕೊಂಡ ಜೀವನ ಕ್ರಮವನ್ನು ರೂಪಿಸಿಕೊಟ್ಟ ಒಂದು ವಿಶಿಷ್ಟ ವ್ಯವಸ್ಥೆ. ಮಾನವನ ಜೀವನದ ಒಳಿತಿಗಾಗಿ, ಅವನ ಶ್ರೇಯಸ್ಸಿಗಾಗಿ ಕೆಲವು ಕಟ್ಟುಪಾಡುಗಳನ್ನು ನಿರ್ಮಿಸಿಕೊಂಡು ಅದರ ಚೌಕಟ್ಟಿನಲ್ಲಿಯೇ ಬದುಕು ಮಾಡಬೇಕು ಎಂಬುದಾಗಿ

ನಿಯಂತ್ರಿಸುವ ಕಾವಲುಗಾರ. ತನ್ನದೇ ಆದ ತಾತ್ವಿಕಾಂಶಗಳ ತಳಹದಿಯ ಮೇಲೆ ನಿರ್ಮಾಣಗೊಂಡ ಒಂದು ಜೀವನ ವಿಧಾನ. ಸಮುದಾಯದ ಶ್ರೇಯಸ್ಸಿಗಾಗಿ ಸಂಹಿತೆಯನ್ನು ಸೃಷ್ಟಿಸಿಕೊಟ್ಟು ಸದಾ ಅದರ ಪಾವಿತ್ರ್ಯತೆಯನ್ನು ಕಾಪಾಡುವ, ನಿತ್ಯಾನುಷ್ಠಾನವನ್ನು ಆಜ್ಞಾಪಿಸುವ ಪ್ರಭು. ಮಾನವತೆಯೆಂಬ ಮಹಾಮೌಲ್ಯವನ್ನು ಗರ್ಭೀಕರಿಸಿಕೊಂಡ ಮಹಾಸಮುದ್ರ, ಇದು ಒಳಿತಿಗೆ ಸುದರ್ಶನಚಕ್ರ, ದೌಷ್ಟ್ಯಕ್ಕೆ ಯುಗಾಂತಾಗ್ನಿ. ಮೂರ್ಖತೆಗೆ ಮರುಗುವುದು ಮುಖ್ಯವಲ್ಲ ಅದನ್ನು ನಿವಾರಿಸುವುದು ಘನ. ಈ ಧೋರಣೆಯನ್ನು ಮುಂದುವರಿಸಿಕೊಂಡು ಮಾನವೋನ್ನತಿಗಾಗಿ ತನ್ನನ್ನು ತಾನೇ ತೊಡಗಿಸಿಕೊಂಡ ಮಹಾಶಕ್ತಿ ಎಂದರೆ ಸಮಾಜ.

ಸಮಾಜವೆಂಬ ಶಿಷ್ಟವ್ಯವಸ್ಥೆ ತನ್ನದಾದ ಕಾನೂನು, ಕಟ್ಟಲೆ, ನಿಯಮ, ಸಂಹಿತೆಗಳಿಗೆ ಬದ್ಧವಾದ ಒಂದು ಸಮುದಾಯವನ್ನು ಧರ್ಮಧ್ವಜದ ಅಡಿಯಲ್ಲಿ ತಂದು ನಿಲ್ಲಿಸುತ್ತದೆ. ಇಲ್ಲವೆ ಸಮಾಜವೆಂಬುದು ಧರ್ಮಬಂದಸೆರಗಿನಲ್ಲಿಯೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತದೆ. ಅಲ್ಲಿ ಅದು ಅರಳುತ್ತದೆ. ತನ್ನ ರಕ್ಷಣೆಗೆ ಬಂದವರನ್ನೆಲ್ಲಾ ಅದು ರಕ್ಷಿಸುತ್ತಾ ಹೋಗುತ್ತದೆ. ಧರ್ಮದ ಅರ್ಥ, ಜಾತಿಯರೂಪಧರಿಸಿ ನಿಂತಿರುವಂತೆ ಧರ್ಮದ ಮತ್ತೊಂದು ಪರ್ಯಾಯ ಪದವೋ ಎನ್ನುವಷ್ಟು ಪ್ರಾಚುರ್ಯ ಪಡೆದು ನಿಂತಿದೆ. ಇಂದು ಸಮಾಜವೆಂದು ಕರೆಯುತ್ತಿರುವ ಶಬ್ದವು ಧರ್ಮದಿಂದ ಬೇರೆಯಾಗಿ ನಿಂತಿಲ್ಲ. ಧರ್ಮವನ್ನು ಹೊರತುಪಡಿಸಿ ಸಮಾಜವನ್ನು ಗುರುತಿಸುವುದು ಸಾಧ್ಯವಿಲ್ಲ. ಈ ಅವಿಭಾಜ್ಯ ಅಂಶಗಳ ಸುಂದರ ಸಂಯೋಜನೆಯಿಂದ ಮಾನವ ಕುಲಕೋಟಿ ತನ್ನ ಪ್ರಗತಿಯನ್ನು ಸಾಧಿಸಿಕೊಳ್ಳಬೇಕಾಗಿದೆ.

ವಿಶ್ವದಲ್ಲಿ ಅನೇಕ ಮತಧರ್ಮಗಳಿವೆ ಆ ಮತಧರ್ಮದ ಧೋರಣೆ ಪ್ರೇರಣೆಗಳ ಅಡಿಯಲ್ಲಿ ದುಡಿಯುತ್ತಿರುವ ಸಮಾಜವಿದೆ. ದಯೆ-ಧರ್ಮ-ದಾನ-ತಪ-ಶೀಲಗಳನ್ನು ಧರ್ಮ ಬೋಧಿಸಿದರೆ ಛಲ-ಬಲ-ತ್ಯಾಗ-ಭೋಗ ಅತ್ಯುನ್ನತಿ ಇವೇ ಮೊದಲಾದವುಗಳನ್ನು ಸಮಾಜ ನಿರ್ದೇಶಿಸುತ್ತದೆ. ಸತ್ಯದ ಪರಿಪಾಲನೆಯಲ್ಲಿ ಅದಕ್ಕೆ ದಾಕ್ಷಿಣ್ಯ ತಿಳಿದಿಲ್ಲ. ಅನೀತಿವಂತನನ್ನು ದಂಡಿಸುವಲ್ಲಿ ದಯೆ ಅದಕ್ಕೆ ಗೊತ್ತಿಲ್ಲ. ಹೇಡಿಗೆ ದಾರಿ ಕೊಡುವ ಹುಂಬತನ ಅದಕ್ಕಿಲ್ಲ ಅದು ಸದಾ ಖಂಡಿತವಾದಿ. ಅಹಿತಕ್ಕೆ ಆಸ್ಪದಕೊಡದೆ ಹಿತವನ್ನು ಮರೆಯದೆ ಬದುಕುಮಾಡಲು ಬೋಧಿಸುತ್ತದೆ, ಇಲ್ಲವೇ ಪ್ರೇರೇಪಿಸುತ್ತದೆ.

ಮಾನವ ಜೀವಿಗಳು ಈ ಲೋಕಕ್ಕೆ ಬರುವಾಗಲೂ, ಇಹಲೋಕ ತ್ಯಜಿಸುವಾಗಲೂ ಏಕಾಂಗಿಯಾಗಿರ ಬಹುದು. ಇಲ್ಲಿರುವಷ್ಟು ಕಾಲ ಒಬ್ಬಂಟಿಯಾಗಿ ಬಾಳಲಾರರು. ಕುಟುಂಬವನ್ನಾಗಲೀ ಅಥವಾ ಒಂದು ಗುಂಪನ್ನಾಗಲೀ ಏರ್ಪಡಿಸಿಕೊಂಡು ಸಹಬಾಳ್ವೆ ನಡೆಸುವುದು ಅವರ ಸ್ವಭಾವ ಮತ್ತು ಅನಿವಾರ್ಯವೂ ಆಗಿದೆ. ಗುಂಪುಗುಂಪಾಗಿ ವಾಸಿಸುವ ಅವರ ಪ್ರವೃತಿಯಿಂದಾಗಿ, ಆ ಗುಂಪು ಮಿತಿಮೀರಿ ಬೆಳೆದಾಗ ವಿಭಜನೆಯಾಗುವುದು ಅನಿವಾರ್ಯವಾಗುತ್ತದೆ. ಈ ವಿಭಜನೆಗೆ ನಾನಾ ಅಂಶಗಳು ನೆರವಾಗುತ್ತವೆ. ವೃತ್ತಿಗಳು, ಜನಾಂಗದ ಸ್ವಭಾವ, ನಂಬಿಕೆಗಳು, ಕಲೆ ಕಾಲಾಂತರದಿಂದ

ಬೆಳೆದು ಬಂದ ಪದ್ಧತಿ, ಆಚರಣೆಗಳು, ಆರ್ಥಿಕ ಅನುಕೂಲತೆಯಿಂದ ಅಥವಾ ಶಿಕ್ಷಣ ಮತ್ತು ಸಂಸ್ಕೃತಿಯಿಂದ ಉಂಟಾಗುವ ಅಂತಸ್ತಿನ ಪ್ರಜ್ಞೆ ಮೊದಲಾದವುಗಳು.

ವರ್ಣ ವ್ಯವಸ್ಥೆಯು ಜಾತಿವ್ಯವಸ್ಥೆಯ ತಳಹದಿಯಾಗಿದೆ. ಹಿಂದೂ ಸಮಾಜವು ವರ್ಣವೆಂದು ಕರೆಯಲಾಗುವ ನಾಲ್ಕು ಸ್ಪಷ್ಟವಾದ ಸಮುದಾಯಗಳಾಗಿ ವಿಭಜನೆಯಾಗಿರುವುದು ಈಗ ಮಾನ್ಯತೆ ಪಡೆದಿದೆ. ನಾಲ್ಕು ಸ್ತರದ ವರ್ಣ ಪದ್ಧತಿಯು ಋಗ್ವೇದ ಸಂಹಿತೆಯ ಕಾಲಕ್ಕೆ ಕಂಡುಬಂದಿತ್ತು. ಎಲ್ಲಾ ನಾಗರಿಕ ಸಮಾಜಗಳಲ್ಲೂ ತನ್ನ ಇಚ್ಛೆಗೆ ಮತ್ತು ಸಾಮರ್ಥ್ಯಕ್ಕೆ ಅನುಗುಣವಾದ ವೃತ್ತಿಯನ್ನು ಆರಿಸಿಕೊಳ್ಳುವ ಪರಿಪಾಠವಿದೆ. ತನ್ನ ಸದಸ್ಯರಿಗೆ ಅದರ ಸ್ವಭಾವಕ್ಕೆ ಹೊಂದುವ, ಸಮ್ಮತವಾಗುವಂತಹ ವೃತಿಯನ್ನು ಆರಿಸಿಕೊಳ್ಳಲು ಯೋಗ್ಯ ಅವಕಾಶಗಳನ್ನು ಒದಗಿಸುವುದು ಸಮಾಜದ ಕರ್ತವ್ಯ. ಇದೇ ವರ್ಣವ್ಯವಸ್ಥೆಯ ತಿರುಳು. ವೇದಗಳಾಗಲೀ, ಪುರುಷಸೂಕ್ತವೇ ಆಗಲಿ ವರ್ಣವ್ಯವಸ್ಥೆ ಜಾರಿಯಲ್ಲಿರುವುದನ್ನು ಪರಿಗಣನೆಗೆ ತೆಗೆದುಕೊಂಡಿವೆಯೇ ಹೊರತು ತಾವೇ ಆ ವ್ಯವಸ್ಥೆಯನ್ನು ಸೃಷ್ಟಿಸಿಲ್ಲ.

ಭಾರತೀಯ ಸಮಾಜವು ಶತಶತಮಾನಗಳಿಂದಲೂ ರಾಜಕೀಯ ಹಾಗೂ ಪ್ರಕೃತಿಯ ವಿಪ್ಲವಗಳ ಹೊಡೆತವನ್ನು ಎದುರಿಸಿ ತನ್ನತನವನ್ನು ಉಳಿಸಿಕೊಂಡಿದೆಯೆಂದರೆ ಅದರ ಮೂಲಭೂತ ಸ್ಥಿರತೆ ಮತ್ತು ತೃಪ್ತಿಗಳಿಗೆ ಈ ವ್ಯವಸ್ಥೆಯೇ ಕಾರಣ ಎಂಬುದರಲ್ಲಿ ಏನೂ ಸಂಶಯವಿಲ್ಲ. ಅದು ಪ್ರತಿಯೊಬ್ಬ ಮನುಷ್ಯನಿಗೂ ಅವನವನ ಸ್ಥಾನ, ಜೀವನೋಪಾಯ ಹಾಗೂ ವೃತ್ತಿಯನ್ನು ಒದಗಿಸುತ್ತದೆ. ಅವನನ್ನು ಸಮುದಾಯದ ಒಬ್ಬ ಸದಸ್ಯನನ್ನಾಗಿ ಮಾಡುತ್ತದೆ.

ಬ್ರಾಹ್ಮಣರು ಸಾಮಾನ್ಯ ಶ್ರಮದ ಕೆಲಸಗಳನ್ನು ಸ್ವತಃ ಮಾಡಿದರೂ ಹೆಚ್ಚಿನ ಶ್ರಮದ ಕೆಲಸಕ್ಕಾಗಿ ಶೂದ್ರರನ್ನು ಆಶ್ರಯಿಸಬೇಕಾಗಿತ್ತು. ದಕ್ಷಿಣ ಕನ್ನಡದಿಂದ ಶೆಟ್ಟರು, ಪೂಜಾರಿ, ಮರಾಠೆ, ಮೊಗವೀರ, ಕುಂಬಾರ ಹಸಲ, ಕರಾಜಿ ಇತ್ಯಾದಿ ಮತಸ್ಥರು ತಂಡತಂಡವಾಗಿ ಬರುತ್ತಿದ್ದರು. ತೋಟದ ಬೇಸಾಯ, ಕೊನೆತೆಗೆಯುವುದು, ಗದ್ದೆ ಹೂಟೆ, ನಾಟಿ, ಕೊಯ್ಲು, ಒಕ್ಕಲಾಟ ಇತ್ಯಾದಿ ಕೆಲಸಗಳು ಅವರಿಂದ ನಡೆಯುತ್ತಿತ್ತು. ಆಗ ಒಡೆಯ ಕೊಟ್ಟರೆ ಉಂಟು ಇಲ್ಲದಿದ್ದರೆ ಇಲ್ಲ ಎಂಬ ಭಾವನೆಯಿಂದ ಶ್ರದ್ಧೆ-ಪ್ರಾಮಾಣಿಕತೆಯಿಂದ ಮತ್ತು ನಿಷ್ಠೆಯಿಂದ ದಿನದಲ್ಲಿ ಎಂಟು-ಒಂಭತ್ತು ಗಂಟೆ ಶ್ರಮವಹಿಸಿ ದುಡಿಯುತ್ತಿದ್ದರು. ಈಗ ಅಲ್ಲಿಯೂ ಶಿಕ್ಷಣ, ಆರ್ಥಿಕ ಚಟುವಟಿಕೆ ಹೆಚ್ಚಾಗಿದ್ದು ಯಾರು ಬರುತ್ತಿಲ್ಲ. ಹಿಂದೆ ಬಂದು ಇಲ್ಲಿ ಶಾಶ್ವತವಾಗಿ ನೆಲಸಿದವರ ಮಕ್ಕಳು ವಿದ್ಯಾವಂತರಾಗಿ ನಗರ ಸೇರುತ್ತಿದ್ದಾರೆ 45-50ರ ವಯಸ್ಸಿನವರು ಮಾತ್ರ ಕೆಲಸಕ್ಕೆ ಬರುವರು ಅವರ ಸಂಖ್ಯೆಯೂ ಕಡಿಮೆಯಾಗುತ್ತಿದೆ ಹಾಗೂ ಮನೋಭಾವವೂ ಬದಲಾಗಿದೆ. ಈಗ ನಾವು ದುಡಿಯುವುದರಿಂದ ಅವರ (ಭೂಮಾಲಿಕ)ಜೀವನ ಎಂಬ ಭಾವನೆ. ದಿನಕ್ಕೆ 4-5 ಗಂಟೆ ಕೆಲಸವೂ ಇಲ್ಲ, ಹಾಗಲ್ಲ-ಹೀಗೆ ಎಂದರೆ ನಾಳೆ ಅವರೂ ಬರುವುದಿಲ್ಲ. ಅವರನ್ನನುಸರಿಸಿ ಕೆಲಸ ನಡೆಯಬೇಕಿದೆ.

ಹಿಂದೆ ಅವಿಭಕ್ತಕುಟುಂಬವಾಗಿದ್ದು, ಒಂದು ಮನೆಯಲ್ಲಿ 50–60 ಜನರವರೆಪಿಗೂ ಇದ್ದಿತು. ಈಗ ಒಂದು ಕುಟುಂಬವೆಂದರೆ ಗಂಡ, ಹೆಂಡತಿ, ಒಂದು ಮಗು. ಮಕ್ಕಳು ವಿದ್ಯಾವಂತರಾಗಿ ನಗರ ಸೇರಿದ್ದಾರೆ. ಮನೆಯಲ್ಲಿ ವೃದ್ಧ ತಂದೆ–ತಾಯಿ, ಕೃಷಿಕಾರ್ಮಿಕರ ಅಭಾವ, ಬೆಳೆದ ಬೆಳೆಗೆ ಲಾಭದಾಯಕ ಬೆಲೆ ಇಲ್ಲ ನಿಶ್ಚಿತ ವರಮಾನದ ಭರವಸೆ ಇಲ್ಲ, ವಿವಿಧ ರೋಗ–ರುಜಿನಗಳು. ಆಧುನಿಕ ಸೌಲಭ್ಯಗಳಿದ್ದರೂ ಕೃಷಿಕರಿಗೆ ಹೆಣ್ಣು ಸಿಗುತ್ತಿಲ್ಲ. ಹಳ್ಳಿಯಲ್ಲಿರುವ ಯುವಕರು ಅವಿವಾಹಿತರಾಗೇ ಇದ್ದು ಹತಾಶ ಮನೋಭಾವಕ್ಕೆ ಬರುತ್ತಿದ್ದಾರೆ. ಮನೆಯಲ್ಲಿ ವಿದ್ಯುತ್, ದೂರವಾಣಿ, ರೇಡಿಯೋ, ಫ್ರಿಜ್, ವಾಷಿಂಗ್ ಮೆಷಿನ್, ಗ್ರೈಂಡರ್, ಮಿಕ್ಸರ್, ಬೈಕ್, ಕಾರು ಇತ್ಯಾದಿ ಸೌಲಭ್ಯಗಳು ಇದ್ದರೂ ಹೆಣ್ಣು ಮಕ್ಕಳು ಹಳ್ಳಿಗೆ ಬರಲು ಒಪ್ಪುತ್ತಿಲ್ಲ. ನಗರದಲ್ಲಿ ಯಾವ ಕ್ಷಣದಲ್ಲಿ ಏನು ಆಗುತ್ತದೆಂಬುದು ಗೊತ್ತಿಲ್ಲ. ನೀರು, ವಿದ್ಯುತ್, ಗ್ಯಾಸ್ ನಿಂತರೆ ಊಟವೇ ಇಲ್ಲ. ನಾಲ್ಕು ಗೋಡೆಯಮಧ್ಯೆ ಹಕ್ಕಿ ಗೂಡಿನಂತಹ ಮನೆಯಿರುವ ಪೇಟೆಯನ್ನು ಇಷ್ಟಪಡುತ್ತಾರೆ. ಪ್ರತಿ ಕ್ಷಣವು ಹಣಕ್ಕಾಗಿ ದುಡಿಮೆ, ಕಣಕ್ಕಾಗಿ ಹಪಹಪಿಸುತ್ತಿರಬೇಕು. ಹಳ್ಳಿಯಲ್ಲಾದರೆ ಕೈಯಲ್ಲಿ ಕಾಸಿಲ್ಲದಿದ್ದರೂ ಒಂದೆರಡುವಾರ ಬದುಕಬಹುದು. ನೆಮ್ಮದಿಯ ಜೀವನ, ಶಾಂತ ವಾತಾವರಣ, ಪೇಟೆಯ ಗೌಜುಗದ್ದಲವಿಲ್ಲ. ಆದರೂ ಹಳ್ಳಿಬೇಡವಾಗಿದೆ. ಜನಸಂಖ್ಯೆ ಕಡಿಮೆಯಿದ್ದಾಗ ಹಳ್ಳಿಗಳಲ್ಲಿ ಒಂದು ಮನೆಯಿಂದ ಮತ್ತೊಂದಕ್ಕೆ 1 ರಿಂದ 2–3 ಕಿ.ಮೀ. ದೂರ, ಈಗಲೂ ಕನಿಷ್ಠ 1/2 ಕಿ.ಮೀ. ಇರುತ್ತದೆ. ಜಗಳ ರಗಳೆಗೆ ಅವಕಾಶ ಕಡಿಮೆ ಪೇಟೆಯಂತೆ ಮೋಸ ವಂಚನೆ ಕಳ್ಳತನ ಧೂರ್ತತನ ಕಡಿಮೆ. ಇನ್ನು ಆತ್ಮೀಯತೆ ಪರೋಪಕಾರ ಮಾನವೀಯತೆ ಇದೆ.

ಮನುಷ್ಯನು ಉತ್ತಮ ಜೀವನಕ್ಕಾಗಿ ಸೌಲಭ್ಯವಿರುವ ಸ್ಥಳಗಳನ್ನರಸಿ ವಲಸೆ ನಡೆಯುತ್ತಿದ್ದುದು ಹಿಂದಿನಿಂದಲೂ ಕಂಡು ಬರುತ್ತದೆ. ಕ್ಷಾಮ, ಯುದ್ಧ, ರಾಜಕೀಯ ಅಸ್ಥಿರತೆಗಳು ಕಾರಣವಿರಬಹುದು. ಹಿಂದೆ 50–100 ಕುಟುಂಬಗಳು ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಹೋಗಿ ಅಲ್ಲೂ ಗುಂಪು ಗುಂಪಾಗಿ ನೆಲಸುತ್ತಿದ್ದರು. ಬ್ರಾಹ್ಮಣರಿಗೆ ವೇದಾಧ್ಯಯನ, ಜ್ಞಾನಾರ್ಜನೆ–ಪೌರೋಹಿತ್ಯ, ಅರ್ಚಕ ವೃತ್ತಿಗಳನ್ನು ಹೊರತು ಪಡಿಸಿದರೆ ಕೃಷಿಯೇ ಜೀವನಾಧಾರ. ಹೀಗೆ ಗುಂಪುಗಳಾಗಿ ನೆಲಸಿದವರು ತಮ್ಮದೆ ಆದ ವಿಶಿಷ್ಟ ಸಂಪ್ರದಾಯಗಳನ್ನು ಆಚರಿಸಿ ತಮ್ಮನ್ನು ಒಂದು ಒಳ ಪಂಗಡವಾಗಿ ಗುರುತಿಸಿಕೊಂಡರು. ಸಂಚಾರ ಸೌಲಭ್ಯಗಳಿಲ್ಲದ್ದರಿಂದ ಸೀಮಿತ ದೂರದೊಳಗೇ ತಮ್ಮ ತಮ್ಮಲ್ಲೆ ನೆಂಟಸ್ಥಿಕೆ, ಬಾಂಧವ್ಯ ನಡೆಸುತ್ತಿದ್ದರು. ಇದರಿಂದ ಅನುಕೂಲವೂ ಇದ್ದಿತು ಕೃಷಿಕರ ಮನೆ ಹೆಣ್ಣು ಕೃಷಿಕರ ಮನೆಗೇ ತರುವುದರಿಂದ ಕೃಷಿ, ಪಶುಪಾಲನೆ ಅನುಭವವಿರುತ್ತಿತ್ತು. ಪುರೋಹಿತರ ಮನೆಯ ಹೆಣ್ಣು ಪುರೋಹಿತರ ಮನೆಗೆ. ಆ ಹುಡುಗಿಗೆ ಮಡಿ, ಮೈಲಿಗೆ, ಆಚಾರ, ಸಂಪ್ರದಾಯದ ಅನುಭವವಿರುತ್ತಿತ್ತು. ಪರಿಚಿತರಾದುದರಿಂದ ಅವರೆಗೆ ಆ ಕುಟುಂಬದ ಹಿನ್ನೆಲೆ, ನಡೆ, ನುಡಿ ಹುಡುಗಿಯ ಬಗ್ಗೆ ಮಾಹಿತಿ ಇರುತ್ತಿತ್ತು. ರಕ್ತ ಸಂಬಂಧದಿಂದ ಆತ್ಮೀಯತೆ ಇತ್ತು.

ಉದ್ಯೋಗವನ್ನರಸಿ ಒಂಟಿಯಾಗಿ ಪರಸ್ಥಳಕ್ಕೆ ಹೋಗುವುದು, ತನ್ನವರು ಎಂದು ಯಾರು ಇರುವುದಿಲ್ಲ. ಕೇವಲ ಸ್ನೇಹಿತರು ಅಪರಿಚಿತ ಕನ್ಯೆಯೊಂದಿಗೆ ವಿವಾಹ, ಮಾನಸಿಕ ಹೊಂದಿಕೆ ಬರಬಹುದು ಇಲ್ಲವೆ ಬರದೇ ಇರಬಹುದು. ಈಗಿನ ಹುಡುಗಿಯರಿಗೆ ಯಾವ ಬಂಧವೂಬೇಡ. ತಾನು ತನ್ನಗಂಡ, ತನ್ನ ಮಕ್ಕಳಿಗೆ ಸೀಮಿತ ಪ್ರಪಂಚ. ಅತ್ತೆ, ಮಾವ, ಭಾವ, ಮೈದುನ, ಅತ್ತಿಗೆ, ನಾದಿನಿ ಯಾರು ಇರಬಾರದು 'ಹಣ್ಣೆಲೆ ಉದುರುತ್ತಿದ್ದಾಗ ಚಿಗುರೆಲೆ ನಗುತ್ತಿತ್ತಂತೆ' ಎಂಬ ನಡವಳಿಕೆ. ತಾವೂ ವೃದ್ಧರಾದಾಗ ಹೇಗೆ ಎಂಬ ಮುಂದಾಲೋಚನೆ ಇಲ್ಲ ಹಿರಿಯರ ಬಗ್ಗೆ ಗೌರವ, ಆದರ, ಪ್ರೀತಿ, ವಿಶ್ವಾಸವಿಲ್ಲ. ಜೊತೆಯಲ್ಲಿ ಇದ್ದರೂ ಅನಾದರ, ತಾತ್ಸಾರ. ಇದರಿಂದ ವೃದ್ಧರು ವೃದ್ಧಾಶ್ರಮ ಸೇರಬೇಕಾದ ಅನಿವಾರ್ಯತೆ ಉಂಟಾಗಿದೆ. ಆರ್ಥಿಕವಾಗಿ ಆರೋಗ್ಯವಾಗಿದ್ದಾಗ ಯಾರೂ ಬೇಡ, ಕಷ್ಟಕ್ಕೆ ಸಿಕ್ಕಿದಾಗ ಮಾತ್ರ ಹಳ್ಳಿಯಲ್ಲಿರುವ ಬಂಧುಗಳ ನೆನಪಾಗುತ್ತಾರೆ.

ವೃತ್ತಿಪರತೆ ಹಿಂದೆ ವಂಶಪಾರಂಪರ್ಯವಾಗಿ ನಡೆಯುತ್ತಿತ್ತು, ಅವರ ಸಹಕಾರಬೇಕಾದವರು ಪ್ರತಿ ವರ್ಷ ನಿಗದಿತ ಪ್ರಮಾಣದಲ್ಲಿ ಬೆಳೆದ ಬೆಳೆಯನ್ನು ಕೊಡುತ್ತಿದ್ದರು. ಅವರಿಗೂ ನಿಶ್ಚಿತ ಆದಾಯದ ಭರವಸೆ ಇದ್ದಿತು. ಮಗನು ವೃತ್ತಿ ಕುಶಲತೆಯನ್ನು ತಂದೆಯಿಂದ ಕಲಿಯುತ್ತಿದ್ದ. ಗ್ರಾಹಕರೂ ನಿಗದಿತವಾಗಿದ್ದರು. ಬಂಡವಾಳ, ಸ್ಥಳದ ಅವಶ್ಯಕತೆ ಇರಲಿಲ್ಲ, ಸಮಾಜದಲ್ಲಿ ಪರಸ್ಪರ ಅವಲಂಬಿತವಾಗಿದ್ದರು. ಈಗ ತಂದೆ ಮಾಡಿದ ಉದ್ಯೋಗ ಮಗನಿಗೆ ಬೇಡ, 18–20 ವರ್ಷದವರೆಗೆ ಓದಿ ಕಾಲೇಜು ಮೆಟ್ಟಿಲು ಹತ್ತಿದವರಿಗೆ ಕೃಷಿ–ದೈಹಿಕ ಶ್ರಮದ ಕೆಲಸ ಬೇಡ, ಯಾವ ವೃತ್ತಿಯ ಅನುಭವ ಇರುವುದಿಲ್ಲ. ಐ.ಟಿ.ಐ ನಲ್ಲಿ ಶಿಕ್ಷಣ ಪಡೆದವರಿಗೆ ಮೂಲ ಬಂಡವಾಳ, ಬಾಡಿಗೆ, ಮುಂಗಡ ನೀಡಿ ಯಂತ್ರೋಪಕರಣಗಳಿಗೆ ಹಣ ಹೊಂದಿಸುವುದೇ ಕಷ್ಟ. ಹೊಸಗಿರಾಕಿಗಳು, ವೃತ್ತಿಕೌಶಲ್ಯತೆ, ಲಾಭ, ನಷ್ಟ ತಾಂತ್ರಿಕ ತೊಂದರೆಗಳ ಅನುಭವವಾಗುವಾಗ ಅರ್ಧ ಆಯಸ್ಸು ಕಳೆದಿರುತ್ತದೆ, ಸರ್ಕಾರಕ್ಕೂ ವೃಥಾ ಖರ್ಚು.

ಇಂತಹ ವಿಶ್ವಮಾನ್ಯ ಸಮಾಜ ಸಂಪುಟದಲ್ಲಿ ಜನರು ಧರ್ಮಾವಲಂಬಿಗಳಾಗಿ ದಟ್ಟ ಮಲೆನಾಡ ಭಾಗವಾದ ಶೃಂಗೇರಿಯ ಸುತ್ತಮುತ್ತಲು ವಾಸವಿದ್ದಾರೆ. ಚತುರ್ವರ್ಣ ವ್ಯವಸ್ಥೆಯಲ್ಲಿ ವೃತ್ತಿ ಜೀವನ ನಡೆಸಿಕೊಂಡು ಬರುತ್ತಿರುವವರಿದ್ದಾರೆ. ಬೇರೆಬೇರೆ ಮತಾವಲಂಬಿಗಳಿದ್ದು ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದ ಧರ್ಮಾಚರಣೆ ಸಮಾಜದ ಕಟ್ಟುಕಟ್ಟಳೆಗಳನ್ನು ಹೊಂದಿ ಆಚರಣೆಯಲ್ಲಿರುವವರಿದ್ದಾರೆ. ಕಾಲಬದಲಾದಂತೆ ಮನುಷ್ಯನ ಜೀವನಶೈಲಿ, ಉದ್ಯೋಗ, ಆಚಾರ, ವಿಚಾರ, ಸಂಪ್ರದಾಯ ಮೊದಲಾದವುಗಳು ಬದಲಾವಣೆಗಳಾಗಿವೆ. 'ಕಾಲಕ್ಕೆ ತಕ್ಕಂತೆ ಕೋಲ ಕಟ್ಟು' ಎಂಬ ಗಾದೆ ಮಾತಿನಂತೆ, ಆಯಾ ಕಾಲಘಟ್ಟಕ್ಕೆ ಹೊಂದಿಕೊಳ್ಳುವುದು ಅನಿವಾರ್ಯವೂ ಹೌದು.

ಒಂದು ಜಾತಿ ಇನ್ನೊಂದು ಜಾತಿಯವರ ನಡುವೆ ನಿಕಟ, ಅನ್ಯೋನ್ಯ ಸಂಬಂಧವಿತ್ತು. ಪ್ರತಿಯೊಂದು ಕೆಲಸ ಕಾರ್ಯಗಳು ನಡೆಯಬೇಕಿದ್ದರೂ ಇನ್ನೊಂದು ಜಾತಿಯವರನ್ನು ಅವಲಂಬಿಸುವ ವ್ಯವಸ್ಥೆ ಇತ್ತು. ಸುಮಾರು ಐವತ್ತು ಕುಟುಂಬಗಳಿಗೆ ಓರ್ವ ಪುರೋಹಿತರಿರುತ್ತಿದ್ದರು. ಅವರು ಆ ಮನೆಯಲ್ಲಿ ಶುಭಾಶುಭ ಕಾರ್ಯಗಳನ್ನು ನಡೆಸುವ ಜವಾಬ್ದಾರಿ ಹೊಂದಿದ್ದರು. ಪುರೋಹಿತರ ಮಾರ್ಗದರ್ಶನದಂತೆ ಕಾರ್ಯಕ್ರಮಗಳು ನಡೆಯುತ್ತಿದ್ದವು. ಪ್ರತಿಯೊಬ್ಬರು ಅವರ ಆದೇಶವನ್ನು ಪಾಲಿಸಿ ನಡೆದುಕೊಳ್ಳುತ್ತಿದ್ದರು. ಪುರೋಹಿತರನ್ನು ಗೌರವಾದರದಿಂದ ನೋಡಿಕೊಂಡು ಅವರಿಗೆ ದಾನ ಧರ್ಮಾದಿಗಳನ್ನು ನೀಡಿ ಗೌರವ ಸಮರ್ಪಿಸುತ್ತಿದ್ದರು, ಅವರಿಗೆ ಸಮಾಜದಲ್ಲಿ ಪೂಜ್ಯ ಸ್ಥಾನವಿತ್ತು.

ಶುಭಕಾರ್ಯದ ಸಮಯ ನವಗ್ರಹ ಪೂಜೆ ಮಾಡಿಸುವುದು, ಮುಹೂರ್ತ ನಿಶ್ಚಯಮಾಡಿಸುವುದು. ದೀಪಾವಳಿ, ಗೌರಿ ಹಬ್ಬಗಳು ಇಂತಹ ದಿನವೆಂದು ಹೇಳುವುದು. ಶುಭದಿನಗಳನ್ನು ಹೇಳುವುದು ಜಾತಕ ಬರೆಯುವುದು,ರಾಶಿ ಫಲನೋಡುವುದು. ಫಲಾಫಲಕ್ಕೆ ಅನುಗುಣವಾಗಿ ಕಾರ್ಯಕ್ರಮ ಕೈಗೊಳ್ಳುವ ಸೂಕ್ತ ಕ್ರಮ ತಿಳಿಸುವುದು ಮೊದಲಾದವುಗಳು ಜೋಯಿಸರ ಕರ್ತವ್ಯವಾಗಿತ್ತು.

ಕ್ಷೌರಿಕರು ಅಥವಾ ಭಂಡಾರಿಗಳು ಕ್ಷೌರಿಕ ವೃತ್ತಿಯನ್ನು ಮಾಡುತ್ತಿದ್ದರು. ವೃತ್ತಿ ಧರ್ಮಕ್ಕನುಗುಣವಾಗಿ ಮನೆ ಮನೆಗೆ ಹೋಗಿ ಕ್ಷೌರಮಾಡುವುದು, ಕಟ್ಟೆಯಲ್ಲಿ ಕುಳಿತು ಕ್ಷೌರಮಾಡುವುದು, ಅಂಗಡಿ(ಶಾಲೆ)ಗಳಲ್ಲಿ ಕ್ಷೌರಮಾಡುವುದು ಬಳಕೆಯಲ್ಲಿತ್ತು. ಶುಭ ಹಾಗೂ ಅಶುಭ ಸಮಾರಂಭಗಳಿಗೂ ಕ್ಷೌರಿಕರನ್ನು ಕರೆಸಿ ಕ್ಷೌರ ಮಾಡಿಸುತ್ತಿದ್ದರು. ಶೃಂಗೇರಿ ಭಾಗದಲ್ಲಿ ಇವರ ಸಂಖ್ಯೆ ಕಡಿಮೆಯಿದೆ. ಇತ್ತೀಚೆಗೆ ಭಂಡಾರಿ ಜಾತಿಯವರಲ್ಲದೆ ಇತರೆಯವರು ಕ್ಷೌರಿಕ ವೃತ್ತಿಯನ್ನು ಮಾಡುತ್ತಾರೆ. ಮಹಿಳೆಯರು ಮಹಿಳೆಯರಿಗಾಗಿ ಬ್ಯೂಟಿ ಪಾರ್ಲರ್‌ಗಳನ್ನು ಮಾಡಿಕೊಂಡು ಹಣಗಳಿಸುತ್ತಿದ್ದಾರೆ. ಭಂಡಾರಿಗಳು ಈಗ ಬೇರೆ ಬೇರೆ ವೃತ್ತಿಗಳಾದ ಕೃಷಿ, ವ್ಯಾಪಾರಗಳನ್ನು ಮಾಡಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಸ್ಥಾನಮಾನ, ಗೌರವಗಳಲ್ಲಿ ಬದಲಾಗಿದ್ದು ಹಿಂದಿನಂತಿಲ್ಲವಾಗಿದೆ.

ಮಡಿವಾಳರು ಬಟ್ಟೆ ತೊಳೆದು ಜೀವನಡೆಸುವ ಕಾಯಕದವರು. ಸಮಾಜ ವ್ಯವಸ್ಥೆಯಲ್ಲಿ ಅವರ ಸೇವೆಯನ್ನು ಬಳಸಿಕೊಂಡು ಬಂದ ಸಂಪ್ರದಾಯವಿದೆ. ಕನ್ಯೆ ಪ್ರಥಮ ಋತುಮತಿಯಾದಾಗ, ಮೃತಾಶೌಚನಿವೃತ್ತಿ, ಬಾಣಂತಿಯರ ಬಟ್ಟೆ ಒಗೆಯುವುದು. ತಂದೆಯ ಮನೆಯಿಂದ ಮಗಳು ಮತ್ತು ಶಿಶು ಗಂಡನ ಮನೆಗೆ ಹೋಗುವಾಗ ತೊಟ್ಟಿಲು ಹೊರುವುದು. ಮದುವೆ ಹಾಗೂ ಇತರ ಶುಭ ಸಮಾರಂಭಗಳಲ್ಲಿ ನೆಲಶುದ್ಧಿ ಮಾಡಿ ಆ ಭಾಗದ ಮೇಲಿನ ಮಾಡಿಗೆ ಬಿಳಿ ಬಟ್ಟೆಯನ್ನು ಕಟ್ಟುವುದು ಇವರ ಕಾರ್ಯವಾಗಿತ್ತು.

ಕಮ್ಮಾರರು ಕಬ್ಬಿಣದ ಕೆಲಸವನ್ನು ಮಾಡುವವರು ಕತ್ತಿ, ಕೊಡಲಿ ಮೊದಲಾದ ವಸ್ತುಗಳ ತಯಾರಿ ಹಾಗೂ ಸಿದ್ಧಪಡಿಸುವುದು . ಮಲೆನಾಡ ಭಾಗದಲ್ಲಿ ಎತ್ತಿನಗಾಡಿಗಳನ್ನು ಬಳಸುತ್ತಿದ್ದುದರಿಂದ ಗಾಡಿಗೆ ಸಂಬಂಧಿಸಿದ ಕಬ್ಬಿಣದ ಕೆಲಸಗಳನ್ನು ಮಾಡುತ್ತಿದ್ದರು

ಅಂಬಿಗರು ದೋಣಿ ದಾಟಿಸುವುದು ಇವರ ಕಾಯಕವಾಗಿತ್ತು. ಮೂಲತಃ ದಕ್ಷಿಣ ಕನ್ನಡದಿಂದ ಬಂದವರಾಗಿದ್ದುದರಿಂದ ಮೀನನ್ನು ಹಿಡಿಯುವುದು ಹಾಗೂ ಮಾರಾಟ ಮಾಡುವುದು ನಡೆಯುತ್ತಿತ್ತು. ಅಂಬಿಗರನ್ನು ಬೆಸ್ತರೆಂದೂ ಕರೆಯುತ್ತಿದ್ದರು.

ಬಡಗಿಗಳು ಮರದ ಕೆಲಸಮಾಡುವವರು, ಮನೆನಿರ್ಮಾಣ, ಪೀಠೋಪಕರಣಗಳ ತಯಾರಿ ಕೃಷಿ ಸಂಬಂಧಿ ವಸ್ತುಗಳ ತಯಾರಿಯನ್ನು ಮಾಡುತ್ತಿದ್ದರು. ಮನೆ ನಿರ್ಮಾಣ ಮಾಡಿ ಯಜಮಾನನಿಗೆ ಬಿಟ್ಟು ಕೊಡುವ ಸಂಪ್ರದಾಯವಿದ್ದು, ಪ್ರಧಾನ ಆಚಾರಿಯವರಿಗೆ ಹಣ, ವಸ್ತ್ರ, ಹಣ್ಣುಕಾಯಿ, ಬಟ್ಟೆ ಮೊದಲಾದವುಗಳನ್ನು ಮರ್ಯಾದೆಯಾಗಿ ಕೊಟ್ಟು ಮನೆಯನ್ನು ಬಿಟ್ಟು ಕೊಡುವಂತೆ ಕೇಳಿ ಗೃಹಪ್ರವೇಶ ಮಾಡಲಾಗುತ್ತಿತ್ತು.

ಅಸ್ಪೃಶ್ಯರಲ್ಲಿ ಯಾವುದಾದರೂ ಒಂದು ಕುಟುಂಬ ಖಾಯಂ ಮಾದಾರವೃತ್ತಿಯನ್ನು ಮಾಡಿಕೊಂಡು ಬರುತ್ತಿದ್ದರು. ಮಾದಾರರಿಗೆ ಅವರದೇ ಆದ ಗಡಿ ಹಾಗೂ ಸರಹದ್ದು ಇದ್ದು, ಆ ಭಾಗದ ಸಂಪೂರ್ಣ ಹೊಣೆಗಾರಿಕೆ ಅವರದ್ದೇ ಆಗಿರುತ್ತಿತ್ತು . ಹಬ್ಬಗಳಿಗೆ ಅಗತ್ಯವಾದ ಮಾವಿನ ಸೊಪ್ಪಿನ ತೋರಣ ಕಟ್ಟುವುದು, ಪಚ್ಚೆತೆನೆ, ಸಿಂಗಾರ ಮೊದಲಾದ ವಸ್ತುಗಳನ್ನು ಮನೆಗೆ ತರವುದು. ಶುಭ ಹಾಗೂ ಅಶುಭ ಕಾರ್ಯಗಳಲ್ಲಿ ಹಲಗೆ (ತಮಟೆ), ಕೊಂಬು (ಕಹಳೆ) ವಾದ್ಯ ನುಡಿಸುವುದು. ದೀಪಾವಳಿಯ ಚತುರ್ದಶಿಯಂದು ಮುಂಡಗನ ಹೂ, ವಾಟೆಸೊಪ್ಪು, ಪಚ್ಚೆತೆನೆ ತಂದು ಹೂ ಹಾಕುವುದು. ಬಲಿಪಾಡ್ಯಮಿಯ ದಿನ ದನದ ಕೊಟ್ಟಿಗೆಯಲ್ಲಿದ್ದ ಗೊಬ್ಬರ ತೆಗೆದು ಹೊಸಮಣ್ಣು ಬೀರುವುದು, ಗೋಮಾಲೆಗೆ ಅಗತ್ಯವಾದ ವಸ್ತುಗಳನ್ನು ತರುವುದು, ಜಾನುವಾರುಗಳು ಮರಣ ಹೊಂದಿದರೆ ಸಾಗಿಸಿ ಮಣ್ಣು ಮಾಡುವುದು, ಮರಣದ ಸುದ್ದಿ ತಿಳಿಸುವುದು, ಚಿತೆ ನಿರ್ಮಾಣ, ಮಂಗಳ ಕಾರ್ಯದಲ್ಲಿ ತೋರಣ ನಿರ್ಮಿಸುವುದು, ಅಂಗಳ ಗುಡಿಸುವುದು ಮೊದಲಾದವುಗಳು ಮಾದಾರರ ಕರ್ತವ್ಯವಾಗಿತ್ತು.

ಮಾದಾರರಿಗೆ ಪ್ರತಿಕೆಲಸಕ್ಕೂ ನಿಗದಿತ ಪ್ರಮಾಣದಲ್ಲಿ ಭತ್ತ ಹಾಗೂ ಗದ್ದೆಕೊಯಲಿನಲ್ಲಿ ಒಂದು ಹೊರೆ ಭತ್ತ (ಕೆವಿಹೊರೆ) ಕೊಡಲಾಗುತ್ತಿತ್ತು. ಪುರೋಹಿತರ ವಿನಾ ಉಳಿದವರೆಲ್ಲರಿಗೂ ಗೌರಿಹಬ್ಬದಲ್ಲಿ ಗೌರವಾರ್ಥವಾಗಿ ಒಂದು ತೆಂಗಿನಕಾಯಿ ಕೊಡಲಾಗುತ್ತಿತ್ತು. ಮಾದಾರರಿಗೂ ಸಿಗುತ್ತಿತ್ತು. ರೈತರು ಬೆಳೆದ ವಸ್ತುಗಳನ್ನು ಹಂಚುತ್ತಿರುವುದರಿಂದ ಹಾಗೂ ಮಾದಾರನಿಗೆ ಕೊಡಬೇಕಾದ ವಸ್ತುಗಳನ್ನು ಕೊಡಲೇಬೇಕಾದುದರಿಂದ ಆ ಊರಿನ ಎಲ್ಲರ ಮನೆಯಿಂದಲೂ ಅವನಿಗೆ ಅಕ್ಕಿ, ಅಡಿಕೆ, ಬಳಸುವ ಇತರೆ ವಸ್ತುಗಳು ಸಿಗುತ್ತಿತ್ತು. ಪ್ರತಿಯೊಂದು ಹಬ್ಬದಲ್ಲೂ ಅವನಿಗೆ ಎಡೆಕೊಡುವ ಪದ್ಧತಿಯುಂಟು. ಈಗ ಗೌರಿ ಹಬ್ಬ ಮತ್ತು ದೀಪಾವಳಿ ಹಬ್ಬಗಳಿಗೆ ಎಡೆಪಡೆಯಲು ಬರುತ್ತಾರೆ. ಕೆಲವರ ಮನೆಯಲ್ಲಿ ಎಡೆಯ ಬದಲು ಅಕ್ಕಿಯನ್ನು ಹಣವನ್ನು ಕೊಡುವುದುಂಟು. ವಂಶಪಾರಂಪರ್ಯವಾಗಿ ತಮ್ಮ ವೃತ್ತಿ ಮಾಡುತ್ತಿದ್ದುದರಿಂದ ಇವರ ಜೀವನ ನಿರ್ವಹಣೆ ಸಮಾಜಕ್ಕೆ. ಸರ್ಕಾರಕ್ಕೆ ಯಾವ ಖರ್ಚು ಆಗುತ್ತಿರಲಿಲ್ಲ ಮುಂದಿನ ಪೀಳಿಗೆಯವರು ಅದೇ ವೃತ್ತಿಯನ್ನು ಮುಂದುವರಿಸುತ್ತಿದ್ದರು. ಈಗ ಈ ಪದ್ಧತಿ ಕೆಲವೇ

ಕೆಲವು ಭಾಗಗಳಲ್ಲಿ ಕಾಣಸಿಗುತ್ತವೆ. ಉಳಿದಂತೆ ಬದಲಾವಣೆಗಳಾಗಿವೆ. ಎಷ್ಟೋ ಕಡೆ ಮಾದಾರ ವೃತ್ತಿಯನ್ನು ಮಾಡುವವರೇ ಇಲ್ಲದೇ ಪದ್ಧತಿ ಬದಲಾವಣೆ ಹೊಂದಿದೆ.

ಶೃಂಗೇರಿ ಸುತ್ತಮುತ್ತಲ ನಂಬಿಕೆಗಳು:

1. ದೀಪವನ್ನು ಬಾಯಲ್ಲಿ ಊದಿ ನಂದಿಸಬಾರದು.
2. ಉರಿಯುತ್ತಿರುವ ಸೌದೆಯನ್ನು ಕಾಲಿನಿಂದ ಮುಂದೆ ದೂಡಬಾರದು.
3. ನಿಂತುಕೊಂಡು ಊಟ-ತಿಂಡಿ ಮಾಡಬಾರದು.
4. ನಿಂತುಕೊಂಡು ಕುಡಿಯಬಾರದು.
5. ನಿಂತುಕೊಂಡು ಮೂತ್ರವಿಸರ್ಜನೆ ಮಾಡಬಾರದು.
6. ಪ್ರಯಾಣ ಹೊರಟವರನ್ನು 'ಎಲ್ಲಿಗೆ' ಎಂದು ಕೇಳಬಾರದು.
7. ಪ್ರಯಾಣಕ್ಕೆ ಹೊರಟಾಗ ಮೊದಲಿಗೆ 'ಒಂಟಿಬ್ರಾಹ್ಮಣ', 'ಬೆಕ್ಕು' ಅಡ್ಡಬಂದರೆ ಹೊರಟಕೆಲಸವಾಗುವುದಿಲ್ಲ.
8. ನರಿ, ಒಂಟಿಶೂದ್ರ ಎದುರಾದರೆ ಶುಭಸೂಚನೆ.
9. ಕಾಗೆ ವಿಚಿತ್ರವಾಗಿ ಕೂಗಿದರೆ ನೆಂಟರು ಬರುವರು.
10. ದೇವರಿಗೆ ಆರತಿ ಎತ್ತುವಾಗ ನಂದಿಹೋದರೆ ಅಶುಭಸೂಚನೆ.
11. ಶ್ರಾದ್ಧದಲ್ಲಿ ಮಧ್ಯೆ ಬೆಕ್ಕು ಬಂದರೆ ಅಶುಭಸೂಚನೆ.
12. ಮನೆಯ ಮಾಡಿನ ಮೇಲೆ ಗೂಬೆ ಕುಳಿತು ಕೂಗಿದರೆ ಅಶುಭ.
13. ಮನೆಗೆ ಕಾಳಿಂಗ ಸರ್ಪ, ಉಡ ಬಂದರೆ ಅಶುಭ.
14. ಶುಭಕಾರ್ಯಕ್ಕೆ ಹೊರಟಾಗ ಕಸಪೊರಕೆ ಎದುರು ತರಬಾರದು.
15. ಇಬ್ಬರ ಮಧ್ಯೆ ಬೆಂಕಿಯನ್ನು ತರಬಾರದು.
16. ಭರಣಿ-ಕೃತ್ತಿಕೆಯಲ್ಲಿ ಹೊಸಕೆಲಸ ಪ್ರಾರಂಭಿಸಬಾರದು.
17. ಮನೆಯಲ್ಲಿ ಅಡಿಕೆ ಇದ್ದಾಗ, 'ನೆಲ್ಲಿಕಾಯ್' ಎಂದು ಹೇಳುತ್ತಿರಲಿಲ್ಲ 'ಕಾಡುಕಾಯ್' ಎಂದು ಹೇಳುತ್ತಿದ್ದರು.
18. ಸಿದ್ದೆ, ಸೇರು, ಕೊಳಗ, ತಲೆಕೆಳಗೆ (ಕವಚಿ) ಇಡಬಾರದು.
19. ಅಡಿಕೆ ಮುಟ್ಟಿ ಕೈ ಕೊಡವಬಾರದು.
20. ಹೊಳೆಗೆ ಹಾಕುವುದಾದರೂ ಅಳತೆಮಾಡಿ ಹಾಕಬೇಕು.
21. ಖಾಲಿ ಎಲೆಗೆ ಅನ್ನ, ಉಪ್ಪು ಮೊದಲು ಬಡಿಸಬಾರದು.
22. ತೂಕದ ತಕ್ಕಡಿಯನ್ನು ಅಡ್ಡ ದಾಟಬಾರದು.

23. ಬೆಣ್ಣೆ ಕಾಯಿಸಿ ತುಪ್ಪ ಇಳಿಸುವಾಗ ತುಳಸಿ, ಉಪ್ಪು ಹಾಕಿ ಇಳಿಸಬೇಕು.
24. ಕುದಿಯುವ ನೀರಿಗೆ ಅಕ್ಕಿ ಹಾಕುವುದಾದರೆ ಪಾತ್ರೆಗೆ ಸ್ವಲ್ಪ ತಣ್ಣೀರು ಹಾಕಿ ಒಲೆಗೆ ಮತ್ತು ಪಾತ್ರೆಗೆ ಎರಡುಕಾಳು ಅಕ್ಕಿ ಹಾಕಿ ನಮಸ್ಕರಿಸಿ ಅನಂತರ ಅಕ್ಕಿ ಹಾಕಬೇಕು
25. ಕರಿಬೆಕ್ಕನ್ನು ಸಾಕಬಹುದು, ಅದಾಗೇ ಬಂದು ಮನೆಗೆ ಸೇರಬಾರದು.
26. ಮೊರ–ಹರಿವಾಣಗಳನ್ನು ಮನೆಯ ಮುಂಭಾಗದಲ್ಲಿ ಮಲಗಿಸಿ ಇಡಬಾರದು.
27. ಪಣತ–ಕಲಬಿ (ಅಕ್ಕಿ–ಭತ್ತದ)ಯನ್ನು ಹಿಡಿಯಿಂದ ಗುಡಿಸಬಾರದು.
28. ತಿರುವುಕಲ್ಲು (ಕಡೆಕಲ್ಲು) ಕವಚಿಹಾಕಿದರೆ, ನಂತರ ಅದರಲ್ಲಿ ಏನೂ ಮಾಡಬಾರದು.
29. ಅಂಗಾಲನ್ನು ಬೆಂಕಿಯಲ್ಲಿ ಕಾಯಿಸಬಾರದು.
30. ಎರಡು ಕೈಗಳಿಂದ ತಲೆ ಕೆರೆದರೆ ದರಿದ್ರ ಬರುತ್ತದೆ.
31. ಒಲೆಗೆ ಸೌದೆಯನ್ನು ತಲೆಭಾಗ ಮುಂದೆ ಮಾಡಿ ಹಾಕಬಾರದು.
32. ಮುಸ್ಸಂಜೆ ನಂತರ ಹಣ, ಸುಣ್ಣ, ಉಪ್ಪು, ಬೆಂಕಿಯನ್ನು ಕೊಡುವುದಿಲ್ಲ.
33. ಹೊಸ್ತಿಲ ಆಚೆ ನಿಂತವರಿಗೆ ಈ ಕಡೆಯಿಂದ ಕೊಡಬಾರದು.
34. ಶ್ರಾದ್ಧವಾಗುವವರೆಗೆ ಬೇರೆಯವರಿಗೆ ಏನನ್ನೂ ಕೊಡಬಾರದು.
35. ಹರಿಜನರು ಊಟಮಾಡುವುದನ್ನು ನೋಡಬಾರದು, ನೋಡಿದರೆ ಬೆಳುದಿಂಗಳ ಊಟ ಮಾಡಿದರೆ ಪರಿಹಾರವಾಗುತ್ತದೆ.
36. ಶೂದ್ರರಿಗೆ ಬಡಿಸಿ ಉಳಿದ ಪದಾರ್ಥ (ಅನ್ನ ಸಾಂಬಾರು) ಬಳಸಬಾರದು.
37. ಶ್ರಾದ್ಧದ ದಿನ ಮಹಿಳೆಯರು ತಲೆ ಬಾಚುತ್ತಿರಲಿಲ್ಲ, ಜಡೆಹೆಣೆಯುತ್ತಿರಲಿಲ್ಲ, ತುದಿಗಾಲಿನಲ್ಲಿ ಕೂರುತ್ತಿದ್ದರು.
38. ಬಡಿಸುವಾಗ ಪ್ರದಕ್ಷಿಣಾಕಾರವಾಗಿ ಬಡಿಸಬೇಕು.
39 ಬೆಂಕಿ ಕಿಡಿಯಿಂದ ಸುಟ್ಟ ಬಟ್ಟೆಯನ್ನು ಧರಿಸಬಾರದು.
40. ಕಾಗೆ ಸ್ನಾನಮಾಡುವುದನ್ನು ನೋಡಬಾರದು.
41. ಕಾಗೆ, ನಾಯಿ, ಅಸ್ಪೃಶ್ಯರನ್ನು ಮುಟ್ಟಿದರೆ ಸ್ನಾನಮಾಡಬೇಕು.
42. ದೇವರಿಗೆ ಅನ್ನ ನೈವೇದ್ಯ ಮಾಡಿದ ಸ್ಥಳವನ್ನು ಗೋಮಯ ಹಾಕಿ ಸಾರಿಸಬಾರದು ಎಂಜಲಿಲ್ಲ ಎಂಬ ಭಾವನೆ.
43. ಬಲಿಹರಣ ನೆಲದ ಮೇಲೆ ಹಾಕಬಾರದು, ಬಾಳೆ ಎಲೆ ಚೂರು ಹಾಕಿ ಅದರ ಮೇಲೆ ಹಾಕಬೇಕು.
44. ಕಲಶದನೀರಿಗೆ ಉಗುರು ತಾಗಿಸಬಾರದು. ಬಲಿಹರಣವನ್ನು ಉದ್ಧರಣೆಯಿಂದ ತೆಗೆಯಬೇಕು.
45. ಅಪರ ಕರ್ಮದಲ್ಲಿ ಸಪಿಂಡಿವರೆಗೆ, ಬಂದವರಿಗೆ ಸ್ವಾಗತ ಕೋರುವುದಿಲ್ಲ ಹೊರಡುವವರು

'ಹೋಗಿ ಬರುತ್ತೇನೆ' ಎಂದು ಹೇಳುವುದಿಲ್ಲ, ವೈಕುಂಠ ಸಮಾರಾಧನೆ ದಿನದಿಂದ ಆರಂಭ.

46. ದೇವರ ದೀಪ ಮುಟ್ಟಿದ ಕೈಯನ್ನು ತಲೆಗೆ ಸವರಿದರೆ ದರಿದ್ರ.
47. ಎಲ್ಲಾ ಕಾರ್ಯಗಳನ್ನು ಪ್ರದಕ್ಷಿಣಾಕಾರ (ಎಡದಿಂದ ಬಲಕ್ಕೆ) ಮಾಡಬೇಕು.
48. ಕಣದಲ್ಲಿ 'ಕೆಯಿ' ಇರುವಾಗ ಚಪ್ಪಲಿಹಾಕಿಕೊಂಡು ಕಣಕ್ಕೆ ಹೋಗಬಾರದು.
49. ಊಟಕ್ಕೆ ಕುಳಿತಾಗ ದೀಪನಂದಿದರೆ ಊಟವನ್ನು ಮುಂದುವರಿಸಬಾರದು.
50. ಅಳೆಯುವಾಗ ಆರಂಭದ ಲೆಕ್ಕದ ಬದಲಿಗೆ 'ಲಾಭ' ಎಂದೂ ಏಳನೆಯ ಸಂಖ್ಯೆಯನ್ನು ಹೇಳದೆ 'ಮತ್ತೊಂದು ಎಂದು ಹೇಳಿ ನಂತರ ಎಂಟನೆಯ ಸಂಖ್ಯೆಯಿಂದ ಮುಂದುವರಿಸಬೇಕು.

ಮಲೆನಾಡ ಭಾಗದವರ ಸ್ವಭಾವ– ಹಾಗೂ ಗುಣಧರ್ಮ:

1. ಶ್ರೀಮಂತ–ಬಡವರ ಮಧ್ಯೆ ವರ್ಗಭೇದವಿಲ್ಲ, ಎಲ್ಲರನ್ನೂ ಸಮಾನವಾಗಿ ನೋಡುವ ಮನೋಭಾವ, ಕಷ್ಟಬಂದಾಗ ಪರಸ್ಪರ ಸಹಕಾರ.
2. ದೇಹಿ ಎಂದು ಬಂದವರನ್ನು ಬರಿಗೈಯಲ್ಲಿ ಕಳುಹಿಸುವುದಿಲ್ಲ.
3. ಅತಿಥಿ–ಅಭ್ಯಾಗತರಾಗಿರಲಿ, ಭಿಕ್ಷುಕನಾಗಿರಲಿ ಗೌರವಾದರದಿಂದ ನೋಡುವುದು.
4. ಬಂದವರಿಗೆ ಪಾನೀಯ, ಊಟದ ಸಮಯವಾದರೆ ಊಟನೀಡುವುದು.
5. ದಕ್ಷಿಣ ಕನ್ನಡದಿಂದ ನವರಾತ್ರಿಯ ಸಮಯ ಬರುವಂತಹ ಮುತ್ತೈದೆಯರಿಗೆ ಕಾಳುಮೆಣಸು, ಏಲಕ್ಕಿ, ಅಡಿಕೆ, ಊಟ ಉಪಚಾರ.
6. ಮಾರ್ಗಶಿರ ಶುಕ್ಲ ಆರರಿಂದ ಶಿವರಾತ್ರಿಯವರೆಗೆ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡದಿಂದ ಅಡಿಕೆ ಸಂಭಾವನೆಗೆ ತಂಡ ತಂಡವಾಗಿ ನೂರಾರುಜನರು ಬರುತ್ತಿದ್ದರು. ಅವರಿಗೆ ಊಟ, ವಸತಿ, ವ್ಯವಸ್ಥೆ ಮಾಡುತ್ತಿದ್ದರು.
7. ಅಡಿಕೆರಾಶಿಯ ಪೂಜೆಯಾದೊಡನೆ ದೇವಾಲಯಗಳು, ಪುರೋಹಿತರು, ಊರ ಜೋಯಿಸರು, ಅಂಬಿಗ, ಕ್ಷೌರಿಕರಿಗೆ ನಿಗದಿತ ಪ್ರಮಾಣದಲ್ಲಿ ಅಡಿಕೆ ತೆಗೆದಿರಿಸಿ ಅನಂತರ ಮಾರಾಟಮಾಡುತ್ತಿದ್ದರು. ಭತ್ತ ಬೆಳೆಯುವವರು ಹೀಗೆಯೆ ತೆಗೆದಿರಿಸುವುದಿದೆ.
8. ವಿವಾಹ ಮೊದಲಾದ ಮಂಗಳ ಕಾರ್ಯದಲ್ಲಿ ಹಾಗೂ ಇತರೆ ಕಾರ್ಯಗಳಲ್ಲಿ ಪರಸ್ಪರ ಸಹಕಾರದಿಂದ ಚಪ್ಪರ ಚಾವಡಿ ಮಾಡುವುದು, ಊಟೋಪಚಾರ ಮಾಡುವುದು.
9. ವಿವಾಹದಲ್ಲಿ ಅವರವರ ಖರ್ಚನ್ನು ಅವರವರೇ ನೋಡಿಕೊಳ್ಳುತ್ತಿದ್ದರು. ವರೋಪಚಾರದ ಬೇಡಿಕೆಯಿರಲಿಲ್ಲ. ವಧುವಿನ ಕೊರೆತೆಯಿಂದಲೇನೋ ಇತರ ಜಾತಿಯವರಲ್ಲಿ ವಧುವಿಗೆ ಹಣನೀಡಿ ಮದುವೆಯಾಗುತ್ತಿದ್ದರು. ಅಸ್ಪೃಶ್ಯ ಜಾತಿಯವರಲ್ಲಿ ಇತ್ತೀಚಿನವರೆಗೂ ವಧುದಕ್ಷಿಣೆಯಿದ್ದುದನ್ನು ಕಾಣಬಹುದಾಗಿದೆ.

10. ಸೋದರ ಮಾವನ ಮಗಳನ್ನು ವಿವಾಹವಾಗುವುದು ಸಾಮಾನ್ಯವಾಗಿತ್ತು.
11. ಇನ್ನೊಬ್ಬರ ಏಳಿಗೆಯನ್ನು ನೋಡಿ ಕರುಬುವುದಿಲ್ಲ, ಖುಷಿ ಪಡುತ್ತಿದ್ದರು. ತಾವೂ ಸಹ ಹಾಗೆ ಆಗಬೇಕೆಂದು ಪ್ರಯತ್ನಿಸುತ್ತಿದ್ದರು.
12. ಪ್ರತಿಯೊಬ್ಬರೂ ತಮಗೆ ಲಭ್ಯವಾದಷ್ಟಕ್ಕೆ ತೃಪ್ತಿಪಡುತ್ತಿದ್ದರು. ಆ ಮಟ್ಟದಲ್ಲಿಯೆ ಜೀವನ ನಿರ್ವಹಣೆ ಮಾಡಿತ್ತಿದ್ದರು.
13. ಜಗಳ, ರಗಳೆ, ಅಸೂಯೆ, ಧಾರ್ಷ್ಟ್ಯ ಕಡಿಮೆಯಿತ್ತು. ಭಿನ್ನಾಭಿಪ್ರಾಯ ಬಂದರೆ ನಾಲ್ಕು ಜನರಿಂದ ಬಗೆಹರಿಸಿಕೊಳ್ಳುವುದು. ಕೋರ್ಟ್, ಕಛೇರಿ, ಪೋಲೀಸ್ ಸ್ಟೇಷನ್ನಿಗೆ ಹೋಗುವುದು ಕಡಿಮೆ. ಸುತ್ತಮುತ್ತಲಿನವರೊಂದಿಗೆ ಹೊಂದಿಕೊಂಡು ಹೋಗುವ ಸ್ವಭಾವ. ಆಪತ್ತಿನಲ್ಲಿರುವವರಿಗೆ ಸಾಧ್ಯವಾದಷ್ಟು ನೆರವು ಸಹಕಾರ ನೀಡುವುದು. ಇಲ್ಲವಾದರೆ, ತಮ್ಮಷ್ಟಕ್ಕೇ ತಾವು ಇರುವುದು. ಬಡವ ಬಲ್ಲಿದರರೊಳಗೆ ಸಮಾನತೆ ಸಾಮರಸ್ಯವಿತ್ತು.
14. ಪಾಪ-ಪುಣ್ಯದ ಭೀತಿ ಹೆಚ್ಚಾಗಿತ್ತು. ಪುಣ್ಯಪ್ರದ ಕಾರ್ಯಗಳನ್ನು ಹೆಚ್ಚಾಗಿ ಮಾಡುತ್ತಿದ್ದರು.
15. ಅನ್ನ ವಿಕ್ರಯವಿರಲಿಲ್ಲ (ಹೋಟೆಲ್) ಅನ್ನ ಮಾರಾಟಮಾಡಿದರೆ ಮಹಾಪಾಪ ಎಂಬ ಭಾವನೆಯಿತ್ತು. ಹೊರಭಾಗದವರೆ ಹೆಚ್ಚಾಗಿ ಶೃಂಗೇರಿಯಲ್ಲಿ ಹೋಟೆಲ್ ಉದ್ಯಮವನ್ನು ಮಾಡಿದ್ದಾರೆ.

ಆಚರಣೆ:

ಶೃಂಗೇರಿ ತಾಲ್ಲೂಕಿನಾದ್ಯಂತ ಬೇರೆ ಬೇರೆ ಜಾತಿ ಜನಾಂಗದವರಿದ್ದು ಅವರದೇ ಆದ ಆಚರಣೆಗಳನ್ನು ಕಾಣಬಹುದಾಗಿದೆ. ಶೂದ್ರರು ಬ್ರಾಹ್ಮಣೇತರರು ಹೆಚ್ಚಾಗಿ ಮಾಂಸಾಹಾರವನ್ನು ಮಾಡುತ್ತಿದ್ದುದರಿಂದ ಹಬ್ಬಾಚರಣೆಯ ಸಂದರ್ಭದಲ್ಲಿ ಸಿಹಿ-ಕಹಿ ಭೋಜನದ ವ್ಯವಸ್ಥೆಯಿರುತ್ತಿತ್ತು. ಉಳಿದಂತೆ ಒಕ್ಕಲಿಗ ಮತ್ತು ಬ್ರಾಹ್ಮಣ ಜಾತಿಯವರ ಆಚರಣೆಯ ಸಂದರ್ಭದಲ್ಲಿ ಬರೆಯಲಾಗಿದೆ.

1. ಭೂಮಿ ಹುಣ್ಣಿಮೆ ದಿನ ಐದು ತರಹಸೊಪ್ಪನ್ನು ಸೇರಿಸಿದ ಬೆರಕೆಪಲ್ಯ, ಪಾಯಸ, ಚಿತ್ರಾನ್ನ ಭಕ್ಷ್ಯ ಮಾಡಿ ಭೂಪೂಜೆ-ನೈವೇದ್ಯವಾದುದನ್ನು ಗದ್ದೆ ತೋಟಗಳಿಗೆ ಬೀರುವುದಿದೆ.
2. ಅನಂತ ವ್ರತದಲ್ಲಿ ಕಳಶಕ್ಕೆ ಇಟ್ಟ ಕಾಯಿಯನ್ನು ಒಡೆದು ನೈವೇದ್ಯ ಮಾಡುವುದು.
3. ಗೌರಿ ಹಬ್ಬದಲ್ಲಿ ಮೂರು-ಐದನೇ ದಿನ ಗೌರಿ ಸಮಾರಾಧನೆ, ಗೌರಮ್ಮನನ್ನು ಕಳುಹಿಸಿ ಕೊಡುವುದು.
4. ಶ್ರಾವಣ ಶನಿವಾರ ವೆಂಕಟೇಶ ಕಲ್ಪಪೂಜೆ - ಸಂತರ್ಪಣೆ.
5. ಅನಂತ, ಉಮಾಮಹೇಶ್ವರಿ, ಕೇದಾರ ವ್ರತಗಳಂದು ಸಂತರ್ಪಣೆ.
6. ನವರಾತ್ರಿಯಲ್ಲಿ ಚಂಡಿಕಾ ಪಾರಾಯಣ, ಕಲ್ಪೋಕ್ತ ಪೂಜೆ, ಸಂತರ್ಪಣೆ.

7. ಅಡಿಕೆ ಕೊನೆ ತೆಗೆಯಲು ತಾರಾನುಕೂಲ ನೋಡಿ ಮರಕ್ಕೆ ಪೂಜೆಮಾಡಿ ಐದು ಕೊನೆ ತೆಗೆಯುವುದು.

8. ಮೊದಲನೆಯ ಹಂಡೆ ಬೇಯಿಸುವ ಮೊದಲು ಹಂಡೆ ಒಲೆಗೆ ಪೂಜೆ ಮಾಡುವುದು.

9. ಅಡಿಕೆ ಆರಿಸಿದ ನಂತರ ರಾಶಿ ಪೂಜೆ ಮಾಡಿ, ತಕ್ಕಡಿ, ತೂಕದಕಲ್ಲಿಗೆ ಪೂಜೆ ಮಾಡಿ ನಾಲ್ಕು ತಕ್ಕಡಿ ತೂಗಿ, ನಂತರ ದೇವಾಲಯ, ಪುರೋಹಿತರು , ಜೋಯಿಸರುಗಳಿಗೆ ಶ್ಯಾನುಭೋಗರಿಗೆ, ಪಟೇಲರಿಗೆ ನಿಗದಿತ ಪ್ರಮಾಣದಂತೆ ತೆಗೆದಿರಿಸಿ, ಅನಂತರ ಮಾರಾಟ ಮಾಡುವುದು.

10. ಮಾರ್ಗಶಿರ ಶುಕ್ಲ 5ರಂದು ಗದ್ದೆಗೆಹೋಗಿ ಭತ್ತಕ್ಕೆ ಪೂಜೆ ಮಾಡಿ ಕದಿರನ್ನು ಆಯ್ದು ಶಂಖ, ಜಾಗಟೆ, ಘಂಟಾನಾದದೊಂದಿಗೆ ಮನೆಗೆ ತರುವುದು. ಮುತ್ತೈದೆಯರು ಪಾದತೊಳೆಸಿ, ಕದಿರಿಗೆ ಕದರಾರತಿ ಎತ್ತುವುದು, ಅನಂತರ ತುಳಸಿ ಹತ್ತಿರ ಇರಿಸಿ ಪೂಜೆ, ಅನಂತರ ವಾಸ್ತುಬಾಗಿಲು, ದೇವರ ಮನೆ, ದೇವರ ಬನ, ಅಶ್ವತ್ಥ, ಪಣತಕ್ಕೆ ಕದಿರು ಕಟ್ಟುವುದು.

11. ಹೊಸಭತ್ತದ ಅಕ್ಕಿ ಮಾಡಿ ಪಾಯಸ, ಹುಗ್ಗಿ ಮಾಡಿ ದೇವರಿಗೆ ನೈವೇದ್ಯ ಮಾಡುವುದು.

12. ದೀಪಾವಳಿಯ ತ್ರಯೋದಶಿಯದಿನ ರಾತ್ರಿ ಹಂಡೆ ಪೂಜೆ, ಹಂಡೆಗೆ ಕಹಿ ಹಿಂಡಲೆಕಾಯಿ ಬಳ್ಳಿ ಸುತ್ತುವುದು, ಚತುರ್ದಶಿ ಬೆಳಿಗ್ಗೆ ಅಭ್ಯಂಜನ, ಅಮವಾಸ್ಯೆ ದಿನ ಧನಲಕ್ಷ್ಮೀಪೂಜೆ.

1. ಬೆಳಿಗ್ಗೆ ಎದ್ದೊಡನೆ ನಿತ್ಯವಿಧಿ ಮುಗಿಸಿ ಗೋವಿನ ಪಾದ ತೊಳೆದು ಅರಶಿನ ಕುಂಕುಮ ಹಚ್ಚಿ ಅಕ್ಕಿಕೊಟ್ಟು ಸಮಸ್ಕರಿಸುವುದು.

2. ಹಾಲು ಕರೆದು, ದನಗಳಿಗೆ ಮೇವು (ಹುಲ್ಲು– ಅಕ್ಕಚ್ಚು) ನೀಡುವುದು.

3. ಮನೆಗುಡಿಸಿ ಸಾರಿಸುವುದು, ದೇವರ ಪೂಜೆಗೆ ಅಣಿ ಮಾಡಿಕೊಡುವುದು, ಹೂ ಕೊಯ್ಯುವುದು.

4. ಸ್ನಾನ ಮಾಡಿ, ಹೊಸ್ತಿಲು ಪೂಜೆ, ತುಳಸಿ ಪೂಜೆ.

5. ಬೆಳಗಿನ ಉಪಾಹಾರ ತಯಾರಿ.

6. ಕೃಷಿಗೆ ಪೂರಕ ಕೆಲಸಗಳು– ಅಡಿಕೆ ಆರಿಸುವುದು, ಕಾಫಿ, ಏಲಕ್ಕಿ ಹಣ್ಣು ಕೊಯ್ಯುವುದು ಇತ್ಯಾದಿ ತರಕಾರಿ ಸಂಗ್ರಹ, ತರಕಾರಿ ಹಿತ್ತಿಲು ಕೆಲಸ, ಅರಳು, ಅವಲಕ್ಕಿ, ಹಪ್ಪಳ ಸಂಡಿಗೆ ಉಪ್ಪಿನಕಾಯಿ, ತಯಾರಿ.

7. ಮಧ್ಯಾಹ್ನ ಮಡಿಯಲ್ಲಿ ಅಡುಗೆ.

8. ಅಪರಾಹ್ನ ಕೃಷಿಕೆಲಸಗಳು ಬತ್ತಿ ಗೆಜ್ಜೆವಸ್ತ್ರ ತಯಾರಿ.

9. ಶರನ್ನವರಾತ್ರಿ ಗೋಕುಲಾಷ್ಟಮಿ–ನಾನಾ ವಿಧದ ಉಂಡೆಗಳು.

10 ಗೌರಿಹಬ್ಬ–ಚಕ್ಕುಲಿ, ಕಡಬು, ಮೋದಕ, ಅತ್ರಾಸ, ಶಾವಿಗೆ.

11. ಅನಂತವ್ರತ – ಒಬ್ಬಟ್ಟು.

12. ಭೂಮಿ ಹುಣ್ಣಿಮೆ– ವಿಶೇಷ ಅಡುಗೆ ತಯಾರಿಸಿ ಭೂಪೂಜೆ ಮಾಡಿ ನೈವೇದ್ಯವಾದ ಅನ್ನವನ್ನು ಜಮೀನಿಗೆ ಬೀರುವುದು, ಸ್ವಲ್ಪ ಭಾಗ ಹೂಳುವುದು.

13. ದೀಪಾವಳಿ, ನರಕಚತುರ್ದಶಿ ದಿನ ಬೆಳಗ್ಗೆ ಚೀನಿ ಕಾಯಿ ಕಡಬು, ಅಭ್ಯಂಜನ.

14. ಅಮಾವಾಸ್ಯೆ–ಧನಲಕ್ಷ್ಮೀಪೂಜೆ.

15. ಬಲಿಪಾಡ್ಯಮಿ– ಗೋಪೂಜೆ, ಮೇಳದೇವರ ಪೂಜೆ (ವ್ಯವಸಾಯದ ಉಪಕರಣಗಳು ಅಂದರೆ ನೇಗಿಲು, ನೊಗ, ಮೊರ, ನೊಳ್ಳಿ, ಸಾರಣೆ (ಜರಡಿ) ಸೇರು, ಕೊಳಗ, ಸಿದ್ದೆ, ಕತ್ತಿ, ಕೊಡಲಿ, ಹಾರೆ, ಪಿಕಾಸಿ ಇತ್ಯಾದಿ ಅದಕ್ಕೆ ಪೂಜೆ).

16. ಸಂಜೆ ದೀಪದ ಕೋಲು (ವಾಟೆ ಅಥವಾ ಅಡಿಕೆದಬ್ಬೆ ಕೋಲಿಗೆ ಎಣ್ಣೆಯಲ್ಲಿ ಅದ್ದಿದ ಬಟ್ಟೆ ಸುತ್ತಿ ಬೆಂಕಿ ಹಚ್ಚಿ ಗದ್ದೆ ತೋಟಕ್ಕೆ 'ಹಾಲು ಹಳ್ಳವಾಗಲಿ, ಬೆಣ್ಣೆ ಬೆಟ್ಟವಾಗಲಿ, ಆಳುದ್ದ ಕೆಯಿ ಆಗಲಿ, ಮೊಳ ಉದ್ದತೆನೆಯಾಗಲಿ, ಪಣತಕ್ಕೆ ಭತ್ತವಾಗಲಿ, ಭಂಡಾರಕ್ಕೆ ಹೂವಾಗಲಿ ಎದ್ದು ನೋಡೋ ಬಲೀಂದ್ರ ರಾಜ, ತನ್ನ ರಾಜ್ಯಕ್ಕೆ ತಾನೇಬಂದಾ, ದೀಪೋಳಿಗೆ ಎಂದು ಕೂಗುತ್ತಾ ಕೋಲು ಹಚ್ಚುವುದು) ರಾತ್ರಿ ತುಳಸಿ ಹತ್ತಿರ ಮಣ್ಣಿನಲ್ಲಿ ಬಲೀಂದ್ರನ ಮೂರ್ತಿ ಮಾಡಿ ಪೂಜಿಸುವುದು.

17. ನಾಗರ ಪಂಚಮಿ, ಭ್ರಾತೃ ಬಿದಿಗೆ ದಿನ ಅಕ್ಕ ತಂಗಿಯರ ಮನೆಗೆ ಊಟಕ್ಕೆ ಹೋಗುವುದು.

18. ಉತ್ಥಾನದ್ವಾದಶಿ– ಹಗಲು ಊಟ ಇಲ್ಲ– ರಾತ್ರಿ ತುಳಸಿ ಬುಡಕ್ಕೆ ನೆಲ್ಲಿ ಗೊನೆ ಇರಿಸಿ, ಪೂಜೆಮಾಡಿ, ನೆಲ್ಲಿಕಾಯಿ ತುಪ್ಪ ಹಾಕಿ ದೀಪ ಹಚ್ಚುವುದು.

19. ಸುಬ್ರಹ್ಮಣ್ಯ ಷಷ್ಠಿ– ಗದ್ದೆಗೆ ಹೋಗಿ ಭತ್ತದ ಕೆಯಿಗೆ ಪೂಜೆ ಮಾಡಿ ಕೆಲವು ಭತ್ತದ ತೆನೆ ಕತ್ತರಿಸಿ ಶಂಖ, ಜಾಗಟೆ, ಘಂಟೆನಾದದೊಂದಿಗೆ ಮನೆಗೆ ತರುವುದು ಮುತ್ತೈದೆಯರು ಪಾದ ತೊಳಸಿ ಕದರಿಗೆ ಆರತಿ ಎತ್ತುವುದು, ಪುನಃ ತುಳಸಿ ಹತ್ತಿರ ಇಟ್ಟು ಪೂಜೆ ಮಾಡಿ, ಮನೆಯ ದ್ವಾರಬಾಗಿಲು, ದೇವರ ಮನೆ, ನಡುಮನೆ, ಪಣತ, ಅಶ್ವತ್ಥ, ತುಳಸಿಕಟ್ಟೆಗೆ ಭತ್ತದ ತೆನೆ ಕಟ್ಟುವುದು.

20. ಸಾಧ್ಯವಾದರೆ ಅದೇದಿನ ಅಥವಾ ಬೇರೆ ದಿನ ಹೊಸ ಅಕ್ಕಿಯಲ್ಲಿ ಪಾಯಸ, ವಿಶೇಷ ಅಡುಗೆ 5 ತರಹ ಪಲ್ಯಗಳು. ಸೊಪ್ಪು ಸೇರಿಸಿ ಪಲ್ಯ ಮಾಡಿ ದೇವರಿಗೆ ನೈವೇದ್ಯ ಮಾಡಿ ಊಟ (ನವಾನ್ನ ಭೋಜನ)

21. ಗೌರಿ ಮೂರು– ಐದುದಿನ ಇಡುವುದು. ಮಣ್ಣಿನ ಗಣಪತಿ ತಂದು ಪೂಜೆ, ನೀರಿನಲ್ಲಿ ವಿಸರ್ಜನೆ.

22. ಗೋಕುಲಾಷ್ಟಮಿ, ಉತ್ಥಾನ ದ್ವಾದಶಿ, ಶಿವರಾತ್ರಿ ಹಬ್ಬಗಳಂದು ರಾತ್ರಿಪೂಜೆ.

23. ರಥ ಸಪ್ತಮಿ– ತುಳಸಿ ಸುತ್ತ ಬೇಳೆಕಾಳು ಇರಿಸಿ ಪೂಜೆ ಮಾಡುವುದು.

24. ಯುಗಾದಿಯ ದಿನ ಬೆಳಿಗ್ಗೆ ಗೋಪೂಜೆ ಮಾಡುವುದು. ಬೇವು-ಬೆಲ್ಲ ತಿನ್ನುವುದು, ಗೇರು ಹಚ್ಚಿಕೊಳ್ಳುವುದು, ಮಧ್ಯಾಹ್ನ ಪಂಚಾಂಗ ಶ್ರವಣ ಹೊಸ ಬಟ್ಟೆಧರಿಸಿ ಹಿರಿಯರಿಗೆ ನಮಸ್ಕರಿಸುವುದು.

25. ಜ್ಯೇಷ್ಠ ಮಾಸದಲ್ಲಿ ಗ್ರಾಮದೇವತೆಗಳಿಗೆ (ರಣ, ಚೌಡಿ, ಪಂಜುರ್ಲಿ, ಜಟಿಗ, ನಾಗ, ಬ್ರಹ್ಮ) ಹಣ್ಣು ಹಾಕುವುದು. ಅವಲಕ್ಕಿ ಮೊಸರನ್ನು ನೈವೇದ್ಯ. ಶೂದ್ರಾವರ್ಗದವರು ನಾಗ, ಬ್ರಹ್ಮ ದೇವರನ್ನು ಹೊರತುಪಡಿಸಿ ಉಳಿದ ಗ್ರಾಮ ದೇವತೆಗಳಿಗೆ ಪ್ರಾಣಿ ಪಕ್ಷಿಗಳ ಬಲಿ ಕೊಡುವುದಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಈ ಭಾಗದ ಹೆಚ್ಚಿನ ಮಹಿಳೆಯರು ಅನಕ್ಷರಸ್ಥರೇ ಆಗಿದ್ದರು. ನಿತ್ಯಕರ್ಮದಂತೆ ಬೆಳಿಗ್ಗೆ ಎದ್ದು ಮುಖ ತೊಳೆದು ಶೌಚವಿಧಿಮುಗಿಸಿ, ಮೊದಲು ಗೋವಿನ ಪಾದ ತೊಳೆದು, ಹೂ ಅರಶಿಣ ಕುಂಕುಮವಿಡಿಸಿ, ತಿನ್ನಲು ಸ್ವಲ್ಪ ಅಕ್ಕಿ ಕೊಡುತ್ತಿದ್ದರು. ಹೊಸ್ತಿಲು ಸಾರಿಸಿ, ರಂಗವಲ್ಲಿ ಹಾಕಿ, ದೇವರಿಗೆ ದೀಪಹಚ್ಚಿ, ಗಂಡಸರು ದೇವರ ಪೂಜೆಗೆ ಹೂ ಕೊಯ್ದು ಅಣಿ ಮಾಡುವುದು, ಅನಂತರ ಬೆಳಗಿನ ಉಪಾಹಾರ ಸಿದ್ಧತೆ, ಗಂಜಿ ಮಾಡುವುದು. ಎಲ್ಲರ ಉಪಾಹಾರ ಮುಗಿದ ನಂತರ ಪಾತ್ರೆತೊಳೆದು, ದನಗಳಿಗೆ ಆಹಾರ ನೀಡಿ ಹಾಲು ಕರೆಯುವುದು. ಇದಾದ ನಂತರ ಕೃಷಿ ಕೆಲಸದಲ್ಲಿ ಪಾಲ್ಗೊಳ್ಳುವುದು, ಅಡಿಕೆ ಸುಲಿಯುವುದು, ಆರಿಸುವುದು, ಏಲಕ್ಕಿ, ಕಾಫಿ ಕೊಯ್ಯುವುದು, ದನಕರುಗಳಿಗೆ ಹಸಿಹುಲ್ಲನ್ನು ತರುವುದು ಇತ್ಯಾದಿ. ಮಧ್ಯಾಹ್ನ ಸ್ನಾನಮಾಡಿ ಮಡಿಯಲ್ಲಿ ಅಡುಗೆ ತಯಾರಿಸಿ, ಎಲ್ಲರಿಗೂ ಬಡಿಸಿ ಅನಂತರ ಗೃಹಿಣಿಯು ಪತಿ ಊಟ ಮಾಡಿದ ಎಲೆಯಲ್ಲೇ ಊಟಮಾಡುವುದು. ಪಾತ್ರೆತೊಳೆದಾದ ಮೇಲೆ ಸ್ವಲ್ಪವಿಶ್ರಾಂತಿ ಪಡೆಯುವರು. ಪುನಃ ಕೃಷಿ ಕೆಲಸಗಳು, ಅಕ್ಕಿ ಶುಚಿಗೊಳಿಸುವುದು, ದೋಸೆಗೆ ಹಿಟ್ಟು ರುಬ್ಬುವುದು ಇತ್ಯಾದಿ. ಸಂಜೆ ದೇವರಿಗೆ, ತುಳಸಿಗೆ ದೀಪಹಚ್ಚುವುದು. ಸಂಜೆ ಅಡುಗೆ, ದೇವರನಾಮ, ಸಾಂಪ್ರದಾಯಿಕ ಹಾಡುಗಳನ್ನು ಹಾಡುತ್ತಿದ್ದರು. ಹಿಂದೆ ಮಹಿಳೆಯರಿಗೆ ಓದುಬರಹವಿರಲಿಲ್ಲ. ಅಡುಗೆ ಸಿದ್ಧತೆ, ಗೃಹಕೃತ್ಯ, ಮಕ್ಕಳ ಲಾಲನೆ ಪಾಲನೆ, ಮೊದಲಾದವುಗಳನ್ನು ಆಕೆ ಮಾಡಬೇಕಾಗಿತ್ತು. ಮಹಿಳಾ ಕಲ್ಯಾಣದ ಸಲುವಾಗಿ ಅನೇಕ ಜನಪರ ಕಾರ್ಯಕ್ರಮಗಳು ಹಾಗೂ ಸ್ತ್ರೀ ಮೀಸಲಾತಿ ಸೌಲಭ್ಯಗಳ ಜೊತೆಗೆ ಕಾನೂನಿನ ರಕ್ಷಣೆಯು ಈಗ ದೊರಕಿರುವುದರಿಂದ ಪುರುಷರಿಗೆ ಸರಿಸಾಟಿಯಾಗಿ ಮಹಿಳೆಯರು ಬದುಕುವಂತಾಗಿದ್ದಾರೆ. ಉದ್ಯೋಗ, ಶಿಕ್ಷಣ, ರಾಜಕೀಯ ಮೊದಲಾದ ಕ್ಷೇತ್ರದಲ್ಲಿ ಸ್ತ್ರೀಯರು ಪುರುಷರಿಗಿಂತ ಮುಂಚೂಣಿಯಲ್ಲಿರುವುದು ಅವರ ಸಾಮಾಜಿಕ ಪ್ರಗತಿಯ ಸೂಚಕವಾತಿ ಗೋಚರಿಸುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿ ಶೇ ಐದರಷ್ಟುಮಂದಿ ಇನ್ನೂರು ಮೂನ್ನೂರು ಎಕರೆ ಜಮೀನು ಹೊಂದಿದ ಶ್ರೀಮಂತರು. ಶೇ ತೊಂಬತ್ತರಷ್ಟು ಮಧ್ಯಮವರ್ಗದ ರೈತರು ಹತ್ತು-ಹದಿನೈದು ಎಕರೆ ಜಮೀನು

ಹೊಂದಿದವರು ಮತ್ತು ಶೇ ಐದರಷ್ಟು ಸಣ್ಣ ರೈತರು ಇದ್ದರು. ಶ್ರೀಮಂತರು ಹೆಚ್ಚಿನ ಭೂಮಿಯನ್ನು ಗಡಿ ಗುತ್ತಿಗೆಯ ಮೇಲೆ ಒಕ್ಕಲು ನಡೆಸುವವರಿಗೆ ಕೊಡುತ್ತಿದ್ದರು. ಲೇವಾದೇವಿ, ಅಡಿಕೆ ವ್ಯಾಪಾರಗಳನ್ನು ಮಾಡುತ್ತಿದ್ದರು. ಶ್ರೀಮಂತರು ಮಂಗಳೂರು ಹಂಚಿನಿಂದ ನಿರ್ಮಿಸಿದ ಮನೆ, ಸಾಮಾನ್ಯವರ್ಗದವರು ಕೈಹೆಂಚಿನಿಂದ ನಿರ್ಮಿಸಿದ ಮನೆ ಹಾಗೂ ಬಡವರು ಸೋಗೆ, ಹುಲ್ಲಿನ ಮನೆಗಳಲ್ಲಿ ವಾಸಿಸುತ್ತಿದ್ದರು.

ಶ್ರೀಮಂತರು ಎತ್ತಿನಗಾಡಿಯನ್ನು ಸ್ವಂತಕ್ಕಾಗಿ. ಮಧ್ಯಮವರ್ಗದವರು ಎತ್ತಿನಗಾಡಿಯನ್ನು ಸ್ವಂತಕ್ಕಾಗಿ ಹಾಗೂ ಬಾಡಿಗೆಗಾಗಿ ಮತ್ತು ಬಡವರು ಬಾಡಿಗೆಗಾಗಿ ಬಳಸುತ್ತಿದ್ದರು. ಮದುವೆಯ ದಿಬ್ಬಣದ ಗಾಡಿಗಳನ್ನು ಶೃಂಗಾರ ಮಾಡಿಕೊಂಡು ಸಾಲಾಗಿ ಹೋಗುತ್ತಿದ್ದರು. ಯಂತ್ರಗಳ ಬಳಕೆಗಿಂತ ಮೊದಲು ಪ್ರಾಣಿಗಳನ್ನು ಬಳಸುತ್ತಿದ್ದರು.

ತಾಮ್ರ, ಹಿತ್ತಾಳೆ, ಕಂಚಿನ ಪಾತ್ರೆಗಳನ್ನು ಮೊದಲು ಬಳಸುತ್ತಿದ್ದರು. ಬರಬರುತ್ತಾ ಅಲ್ಯುಮಿನಿಯಂ, ಸ್ಟೀಲ್, ಪ್ಲಾಸ್ಟಿಕ್ ವಸ್ತುಗಳನ್ನು ಬಳಸುತ್ತಿದ್ದಾರೆ. ಬಡವರು ಹೆಚ್ಚಾಗಿ ಮಣ್ಣಿನ ಪಾತ್ರೆ ಹಾಗೂ ಮಣ್ಣಿನ ವಸ್ತುಗಳನ್ನು ಬಳಸುತ್ತಿದ್ದರು. ಬೆತ್ತ, ಬೀಳು, ವಾಟೆ, ಬಿದಿರು,ಮರ, ಮೊದಲಾದವುಗಳಿಂದ ತಯಾರಿಸಿದ ವಸ್ತುಗಳನ್ನು ಬಳಸುತ್ತಿದ್ದರು.

ಶ್ರೀಮಂತರು ಕೃಷಿ ಕಾರ್ಮಿಕರಾಗಿ, ಖಾಯಂ ಜೀತದಾಳುಗಳನ್ನು ಕೆಲಸಕ್ಕೆ ಇಟ್ಟುಕೊಂಡಿರುತ್ತಿದ್ದರು. ಸಾಮಾನ್ಯ ವರ್ಗದ ರೈತರು ಕೃಷಿಕಾರ್ಮಿಕರನ್ನು ಕರೆಯಿಸಿ ಕೆಲಸಮಾಡಿಸುವುದರ ಜೊತೆಗೆ ತಾವೂ ಸೇರಿಕೊಳ್ಳುತ್ತಿದ್ದರು. ಸಣ್ಣ ರೈತರು ಅವರೇ ಕೃಷಿಕಾರ್ಯ ಮಾಡುತ್ತಿದ್ದರು. ಅಕ್ಕಪಕ್ಕದ ಮನೆಯವರೊಂದಿಗೆ ಮೈಯಾಳುಗಳನ್ನು ಮಾಡಿಕೊಂಡು ಕೆಲಸ ಮಾಡುತ್ತಿದ್ದರು.

ಬಾಲಗೇಣಿ ಪದ್ಧತಿಯು ರೂಢಿಯಲ್ಲಿತ್ತು. ಬಾಲಗೇಣಿ ಎಂದರೆ ಒಂದು ಫಸಲಿಗೆ ಮಾತ್ರ ಗೇಣಿ ನಿರ್ಧಾರವಾಗುತ್ತಿತ್ತು. ನಂತರದ ಬೆಳೆಗೆ ಮತ್ತೆ ಗೇಣಿಯನ್ನು ನಿರ್ಧರಿಸುತ್ತಿದ್ದರು. ವರ್ಷಕ್ಕೆ ಇಂತಿಷ್ಟು ಪ್ರಮಾಣದಲ್ಲಿ ಗೇಣಿಯನ್ನು ಕೊಡಬೇಕೆಂದು ನಿಗದಿ ಮಾಡಿಕೊಡುವ ಪದ್ಧತಿಯನ್ನು 'ಮೂಲಗೇಣಿ' ಎಂದು ಕರೆಯಲಾಗುತ್ತದೆ. ಒಂದು ಎಕರೆ ಅಡಿಕೆ ತೋಟಕ್ಕೆ 10 ರಿಂದ 12 ಮಣ (1 ಮಣವೆಂದರೆ 10 ಕೆ.ಜಿ) ಅಡಿಕೆ ಕೊಡಬೇಕಿತ್ತು. 1 ಎಕರೆ ಭತ್ತದಗದ್ದೆಗೆ 8 ರಿಂದ 16 ಖಂಡುಗ ಭತ್ತವನ್ನು ನೀಡಬೇಕಿತ್ತು. ಭೂಮಿಯ ಫಲವತ್ತತೆಯ ಆಧಾರದಿಂದ ಗೇಣಿಯನ್ನು ಕೊಡಲಾಗುತ್ತಿತ್ತು (50ಸೇರು ಭತ್ತಕ್ಕೆ ಒಂದು ಖಂಡುಗವೆಂದು ಕರೆಯಲಾಗುತ್ತದೆ). ಲೇವಾದೇವಿ ವ್ಯವಹಾರವಿದ್ದಿತ್ತು. ಚಕ್ರಬಡ್ಡಿ ಪದ್ಧತಿಯಂತೆ ವಸೂಲಿಮಾಡುತ್ತಿದ್ದರು. ಹುಲಿಭತ್ತ ಎಂಬುದು ಬಳಕೆಯಲ್ಲಿದ್ದು ಶ್ರೀಮಂತರು ಬಡ ರೈತನಿಗೆ ಗೌರಿ ಹಬ್ಬದ ವೇಳೆ ಭತ್ತವನ್ನು ಕೊಟ್ಟು ಆ ರೈತ ಸಂಪಾದಿಸಿದ ಭತ್ತವನ್ನು ಪುನಃ ಪಡೆಯುವಾಗ ತಾವು ಕೊಟ್ಟ ಭತ್ತದ 1½ ಅಥವಾ ಎರಡು ಪಟ್ಟು ಪಡೆಯುವುದು.

ಸ್ವಂತ ಕೃಷಿಭೂಮಿ, ಬಂಗಾರ, ಬೆಳ್ಳಿ, ಬೆಲೆಬಾಳುವ ಪಾತ್ರೆ ಮೊದಲಾದವುಗಳನ್ನು ದೀಡಿಟ್ಟು ಸಾಲವನ್ನು ಪಡೆಯುತ್ತಿದ್ದರು. ಸಾಲವನ್ನು ತೀರಿಸಲಾಗದೆ ಎಷ್ಟೋ ಆಸ್ತಿ ಶ್ರೀಮಂತರ ಪಾಲಾಗುತ್ತಿತ್ತು.

ಹಿಂದೆ ಬ್ಯಾಂಕುಗಳಿರಲಿಲ್ಲ. ಖಾಸಗಿ ವ್ಯಕ್ತಿಗಳಿಂದ ಸಾಲ ಪಡೆಯಬೇಕಾಗಿತ್ತು. ಜಾನುವಾರುಗಳಲ್ಲಿ ಮಲೆನಾಡಗಿಡ್ಡ ತಳಿ ವಿಶೇಷ ಜಾತಿಯದಾಗಿದ್ದು ದನಕರು, ಎಮ್ಮೆ, ಕೋಣ, ಗಾಡಿಎತ್ತುಗಳನ್ನು ಸಾಕುತಿದ್ದರು. ಹಾಲು, ಗೊಬ್ಬರ, ಕೃಷಿ ಹಾಗೂ ಇತರೆ ಕೆಲಸಕಾರ್ಯಗಳಿಗಾಗಿ ಜಾನುವಾರುಗಳನ್ನು ಸಾಕುತ್ತಿದ್ದರು. ಹಳ್ಳಿಯ ನಾಟಿ ವೈದ್ಯ ಪದ್ಧತಿ (ಗಿಡಮೂಲಿಕೆ) ರೂಢಿಯಲ್ಲಿತ್ತು. ಸ್ಥಳೀಯವಾಗಿ ದೊರಕುತ್ತಿದ್ದ ಸಸ್ಯಮೂಲ ಔಷಧಿಗಳನ್ನು ಎಲ್ಲಾ ಖಾಯಿಲೆಗಳಿಗೂ ಇಲ್ಲಿ ನಾಟಿವೈದ್ಯರು ನೀಡುತ್ತಿದ್ದರು. ಒಬ್ಬೊಬ್ಬರು ಒಂದೊಂದು ಕ್ಷೇತ್ರದಲ್ಲಿ ಅಥವಾ ಎಲ್ಲಾ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುತ್ತಿದ್ದರು. ಬೆಳಕಿಗಾಗಿ ಹರಳೆಣ್ಣೆ ದೀಪ, ಸೀಮೆಎಣ್ಣೆ ಲಾಟೀನು, ಶ್ರೀಮಂತರು ಪೆಟ್ರೋಮ್ಯಾಕ್ಸ್, ಕರೆಂಟ್ ಬಳಸುತ್ತಿದ್ದರು. ರಾತ್ರಿ ಪ್ರಯಾಣಕ್ಕೆ ಅಡಿಕೆ ದಬ್ಬೆ ಸೀಳಿ ಮಾಡಿದ ದೊಂದಿಯನ್ನು, ಲಾಟೀನನ್ನು ಬಳಸುತ್ತಿದ್ದರು. ಬೆಳಕಿನ ತೊಡಕಿನಿಂದಾಗಿಯೇ ಸಾಮಾನ್ಯವಾಗಿ ಹಳ್ಳಿಯ ಜನರು ರಾತ್ರಿ ಊಟವನ್ನು ಬೇಗ ಮಾಡಿ ಬೇಗ ಮಲಗುತ್ತಿದ್ದರು. ಶುಚಿತ್ವಕ್ಕೆ ಸೀಗೆಪುಡಿ, ಅಂಟವಾಳ, ಕಡಲೆ ಹಿಟ್ಟುಗಳನ್ನು ಬಳಸುತ್ತಿದ್ದರು. ಹೆಂಗಸರು ತಲೆತೊಳೆದುಕೊಳ್ಳಲು ಬೆಳ್ಳಟ್ಟೆಸೊಪ್ಪಿನ ಗುಳ, ಮತ್ತಿಮರದ ತೆಪ್ಪೆಯ ಗುಳ ಹಾಗೂ ಕೆಲವು ಬಳ್ಳಿಗಳ ಬೇರಿನ ಗುಳಗಳನ್ನು ಹಾಕಿಕೊಂಡು ಸ್ನಾನ ಮಾಡುತ್ತಿದ್ದರು. ಈಗ ಸೋಪ್, ಶ್ಯಾಂಪೂ, ಡಿಟರ್ಜಂಟ್ ಮೊದಲಾದವುಗಳನ್ನು ಬಳಸುತ್ತಾರೆ. ಉರುವಲಿಗಾಗಿ ಕಟ್ಟಿಗೆಯ ಒಲೆ, ಇದ್ದಿಲ ಒಲೆಗಳನ್ನು ಬಳಸುತ್ತಿದ್ದರು. ಉಮಿ ಒಲೆ, ಸಿಪ್ಪೆ ಒಲೆಗಳು ನಂತರ ಬಂದವು. ಈಗ ಕಟ್ಟಿಗೆಯೊಂದಿಗೆ ಸೀಮೆಎಣ್ಣೆ ಸ್ಟೌವ್, ಗ್ಯಾಸ್‌ಸ್ಟೌವ್, ಸೋಲಾರ್ ಒಲೆಗಳು ಬಳಕೆಯಲ್ಲಿವೆ.

ನಡೆದು, ಎತ್ತಿನಗಾಡಿಗಳಲ್ಲಿ ಪ್ರಯಾಣಮಾಡುತ್ತಿದ್ದರು. ಈಗ ಬಸ್ಸು, ಬೈಕ್, ಕಾರು, ಜೀಪು ಮೊದಲಾದ ವಾಹನಗಳನ್ನು ಬಳಸಲಾಗುತ್ತದೆ. ಸಾಗಾಣಿಕೆಗಾಗಿ ಎತ್ತಿನಗಾಡಿಗಳನ್ನು ಬಳಸುತ್ತಿದ್ದರು. ಗುಡ್ಡಗಾಡಿನಲ್ಲಿ ಎತ್ತಿನ ಬೆನ್ನಿನ ಮೇಲೆ ಅಥವಾ ಹೆಗಲೆ ಮೇಲೆ ಹೊರೆ ಬೀಳುವಂತೆ ತೂಕವನ್ನು ಸಮಮಾಡಿ ಓಡಿಸುತ್ತಿದ್ದರು. ಈಗ ಗೂಡ್ಸ್, ರಿಕ್ಷಾ, ಟ್ರ್ಯಾಕ್ಟರ್, ಟಿಲ್ಲರ್, ವ್ಯಾನು, ಲಾರಿ ಮೊದಲಾದ ತರಹೆವಾರು ವಾಹನಗಳನ್ನು ಕಾಣಬಹುದಾಗಿದೆ.

ಗದ್ದೆ ಹೂಟಿಮಾಡಲು ಮರದ ನೇಗಿಲು, ನೊಗ, ನೊಳ್ಳಿಗಳನ್ನು ಬಳಸುತ್ತಿದ್ದರು. ನಂತರ ಕಬ್ಬಿಣದ ನೇಗಿಲುಗಳನ್ನು ಬಳಸಿ ಎತ್ತು ಕೋಣಗಳಿಂದ ಹೂಟಿ ಮಾಡುತ್ತಿದ್ದರು. ಈಗ ಟ್ರ್ಯಾಕ್ಟರ್, ಟಿಲ್ಲರ್ ಯಂತ್ರಗಳು, ಕೊಯಲು, ಒಕ್ಲಾಟ ಮೊದಲಾದ ಕೃಷಿ ಚಟುವಟಿಕೆ ಮಾಡಲು ಅದಕ್ಕನುಗುಣವಾದ ಯಂತ್ರಗಳನ್ನು ಬಳಸಲಾಗುತ್ತಿದೆ.

ಭತ್ತದ ಕಾಳನ್ನು ಬೇರ್ಪಡಿಸಲು ಒಕ್ಲಾಟ ಮಾಡುತ್ತಿದ್ದು ಭೇಟಿ ಕಂಬಕ್ಕೆ ದಾವಣಿ ಹಾಕಿ ಎತ್ತುಗಳು ಕೋಣಗಳನ್ನು ಸಾಲಾಗಿ ಕಟ್ಟಿ ಕೆವಿ ರಾಶಿಯ ಮೇಲೆ ಸುತ್ತಾಡಿಸುತ್ತಿದ್ದರು. ಅದರ ನಂತರದಲ್ಲಿ ರೌಂಡ್‌ಕಲ್ಲನ್ನು ಎತ್ತುಗಳಿಗೆ ಕಟ್ಟಿ ಉರುಡಿಸಿ ಒಕ್ಲಾಟ ಮಾಡುತ್ತಿದ್ದರು. ಈಗ ಟ್ರ್ಯಾಕ್ಟರ್, ಟಿಲ್ಲರ್‌ಗಳು, ಯಂತ್ರಗಳು ಈ ಕೆಲಸವನ್ನು ಮಾಡುತ್ತವೆ.

ಅಡಿಕೆಗೆ ಬರುತ್ತಿದ್ದ ಕೊಳೆ ರೋಗವನ್ನು ತಡೆಯಲು ಅಡಿಕೆ ಹಾಳೆಯಿಂದ ಮಾಡಿದ ಕೊಪ್ಪೆಯನ್ನು ಪ್ರತಿಯೊಂದು ಮರದ ಪ್ರತಿಯೊಂದು ಕೊನೆಯು ಮುಚ್ಚುವಂತೆ ಕಟ್ಟುತ್ತಿದ್ದರು. ನಂತರದಲ್ಲಿ ಮೈಲುತುತ್ತು, ರಾಳ–ಸುಣ್ಣದಿಂದ ಮಿಶ್ರಣ ಮಾಡಿದ ಬೋರ್ಡೋ ಔಷಧಿಯನ್ನು ಸಿಂಪಡಿಸಲಾಗುತ್ತದೆ. ತೀರ ಈಚೆಗೆ ಬಯೋಫೈಟ್ ಹಾಗೂ ಇತರೆ ಜೈವಿಕ ಔಷಧಿಗಳನ್ನು ಸಿಂಪಡಿಸುತ್ತಿದ್ದಾರೆ. ಭತ್ತದ ರೋಗಕ್ಕೆ ಮುಷ್ಪಮಾಡುವ ಪದ್ಧತಿ ರೂಡಿಯಲ್ಲಿತ್ತು. ವಾಟೆಸೊಪ್ಪು, ಹೆದ್ದುಂಬೆ ಸೊಪ್ಪು, ಮುಕ್ಕುಟಗನ ಸೊಪ್ಪನ್ನು ಮುಷ್ಪಕ್ಕಾಗಿ ಬಳಸುತ್ತಿದ್ದರು. ಬೆಳೆಯ ಮೇಲ್ಭಾಗ ಈ ಸೊಪ್ಪಿನಿಂದ ನಿಧಾನವಾಗಿ ಸವರಿ ಮುಷ್ಪ ಮಾಡುತ್ತಿದ್ದರು. ಬೈನೆ ಹೆಡ್ಲು, ಹೆದ್ದುಂಬೆಗಿಡವನ್ನು ಬೀಸಿ ರೋಗಕಾರಕ ಹುಳ ಹುಪ್ಪಟೆಗಳನ್ನು ಕೆಳಗೆ ಬೀಳಿಸಿ ಬೆಳೆಯನ್ನು ರಕ್ಷಿಸುತ್ತಿದ್ದರು. ಈಗ ಬೇರೆ ಬೇರೆ ಕ್ರಿಮಿ ಕೀಟಗಳಿಗೆ ಹಾಗೂ ಬೇರೆ ಬೇರೆ ಫಸಲಿಗೆ ಅನುಗುಣವಾಗಿ ರೋಗ ನಿರೋಧಕ ಔಷಧಿಗಳನ್ನು ಯಂತ್ರಗಳಿಂದ ಸಿಂಪಡಿಸಲಾಗುತ್ತದೆ.

ಗದ್ದೆ ತೋಟಗಳಿಗೆ ಪ್ರಾಣಿಗಳಿಂದ ತಯಾರಾದ ಸಾವಯವ ಗೊಬ್ಬರವನ್ನು ಬಳಸುತ್ತಿದ್ದರು. ಪ್ರತಿಯೊಬ್ಬ ರೈತನ ಮನೆಯಲ್ಲೂ ದನಕರುಗಳಿದ್ದವು. ಕೊಟ್ಟಿಗೆಗೆ ಸೊಪ್ಪು, ದರಗು ಮೊದಲಾದವುಗಳನ್ನು ಹಾಕಿ ಗೊಬ್ಬರ ಮಾಡಿ ಭೂಮಿಗೆ ಹಾಕುತ್ತಿದ್ದರು. ಸಾಮಾನ್ಯವಾಗಿ ಒಂದು ಎಕರೆ ಭತ್ತದ ಜಮೀನಿಗೆ 8 ರಿಂದ 10 ಟನ್ ಸಾವಯವ ಗೊಬ್ಬರ ಹಾಕುತ್ತಿದ್ದರು. ಅಡಿಕೆ ತೋಟಕ್ಕೆ ಮೂರುಮಡಿಪದ್ಧತಿಯಂತೆ ಮೂರು ವರ್ಷಕೊಮ್ಮೆ ಒಂದು ಭಾಗ ಅಡಿಕೆ ತೋಟಕ್ಕೆ ಬೇಸಾಯ ಮಾಡುತ್ತಿದ್ದರು. ತೋಟವನ್ನು ಕೊಚ್ಚಿ, ಅಡಿಕೆ ಮರದ ಬುಡವನ್ನು ಬಿಡಿಸಿ, ಬುಡಕ್ಕೆ ಎರಡು ಮೂರು ಬುಟ್ಟಿ ಸಾವಯವ ಗೊಬ್ಬರವನ್ನು ಹಾಕಿ ಮಣ್ಣಿನಿಂದ ಮುಚ್ಚುತ್ತಿದ್ದರು. ಮೇಲೆ ಹಸಿಸೊಪ್ಪನ್ನು ಹಾಕಿ ಮತ್ತೆ ಅದರ ಮೇಲೆ ಮಣ್ಣನ್ನು ಹಾಕುತ್ತಿದ್ದರು. ಈಗ ಮಲೆನಾಡ ಭಾಗದಲ್ಲಿ ತುಂಡೆರೋಗ, ಬೇರುಹುಳು ರೋಗ, ಹಳದಿ ಎಲೆರೋಗ ಮೊದಲಾದ ಬಾಧೆಗಳಿರುವುದರಿಂದ ಸಾವಯವ ಕೃಷಿ ಪದ್ಧತಿಯನ್ನು ಕೈಬಿಟ್ಟು, ಕೃತಕ ರಸಗೊಬ್ಬರವನ್ನು ಬಳಸುತ್ತಿದ್ದಾರೆ. ಕಾಲಕಾಲಕ್ಕೆ ಸರಿಯಾಗಿ ಗಿಡಮರಗಳಿಗೆ ಬೇಕಾದ ಗೊಬ್ಬರವನ್ನು ವರ್ಷಕ್ಕೆ ಎರಡು ಮೂರು ಬಾರಿ ಹಾಕಿ ಅಧಿಕ ಇಳುವರಿ ಪಡೆಯುವ ನಿಟ್ಟಿನಲ್ಲಿ ರೈತ ನಿರತನಾಗಿದ್ದಾನೆ.

ದಕ್ಷಿಣ ಕನ್ನಡದಿಂದ ಬರುತ್ತಿದ್ದ 'ಐಗಳು' ಎಂಬುವವರು ಊರಿನ ಶ್ರೀಮಂತರ ಮನೆಯಲ್ಲಿದ್ದು ಸುತ್ತ ಮುತ್ತಲ ಮಕ್ಕಳಿಗೆ ಸುಮಾರು ನಾಲ್ಕು ರಿಂದ ಐದನೇ ತರಗತಿಯವರೆಗೆ ಪಾಠವನ್ನು ಹೇಳಿಕೊಡುತ್ತಿದ್ದರು. ಆಗ ವಂಶಪಾರಂಪರಿಕ ವೃತ್ತಿಯನ್ನು ಮುಂದುವರಿಸುತ್ತಿದ್ದುದರಿಂದ ಹೆಚ್ಚಿನ ವ್ಯಾಸಂಗಮಾಡಲು ಆಸಕ್ತಿಯಿರುತ್ತಿರಲಿಲ್ಲ. ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆಯಿರುತ್ತಿರಲಿಲ್ಲ ಮಹಿಳೆಯರು ವಿದ್ಯಾಭ್ಯಾಸ ಮಾಡುವುದು ತೀರ ಕಡಿಮೆ ಪ್ರಮಾಣದ್ದಾಗಿತ್ತು. ಮಲೆನಾಡ ಭಾಗದಲ್ಲಿ ಶಾಲಾ–ಕಾಲೇಜುಗಳು ಇರಲಿಲ್ಲ. ಈಗ ಹಳ್ಳಿಯ ಮೂಲೆ ಮೂಲೆಯಲ್ಲೂ ಶಾಲೆ, ಅಂಗನವಾಡಿ ಕೇಂದ್ರ, ಕಾಲೇಜುಗಳು ಆರಂಭವಾಗಿವೆ. ಮಹಿಳೆಯರು ಸಹ ಹೆಚ್ಚಿನ ಆಸಕ್ತಿಯಿಂದ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಹೊರ ಭಾಗಗಳಿಗೆ ಹೋಗಿ ಉನ್ನತ ವ್ಯಾಸಂಗವನ್ನು ಮಾಡುತ್ತಿದ್ದಾರೆ.

ಸ್ಥಳೀಯವಾಗಿ ಸಿಗುವ ಹಾಗೂ ಬೆಳೆಯುವ ತರಕಾರಿಗಳನ್ನು ಬಳಸುತ್ತಿದ್ದರು. ಹೆಚ್ಚಾಗಿ ಸೊಪ್ಪನ್ನು ಬಳಸುತ್ತಿದ್ದರು. ಬೇಸಿಗೆಕಾಲದಲ್ಲಿ ಗದ್ದೆಯಲ್ಲಿ ಹಿತ್ತಲನ್ನು ಮಾಡುತ್ತಿದ್ದರು. ಮಳೆಗಾಲದಲ್ಲಿ ಕಣದಲ್ಲಿ ತರಕಾರಿ ಬೆಳೆಯುತ್ತಿದ್ದರು. ಹೆಚ್ಚಾಗಿ ಚೀನಿ, ಕುಂಬಳ, ಗದ್ದೆಸೌತೆ, ಮುಳ್ಳು ಸೌತೆ, ಹರಿವೆ, ಬೆಂಡೆ, ತೊಂಡೆ, ಅವರೆ, ಹೀರ ಮೊದಲಾದವುಗಳನ್ನು ಅಗತ್ಯವಾಗಿ ಬೇಕಾದಷ್ಟು ತರಕಾರಿಗಳನ್ನು ಬೆಳೆಯುತ್ತಿದ್ದರು. ಈಗ ತರಕಾರಿ ಬೆಳೆಯುವವರ ಸಂಖ್ಯೆ ಕಡಿಮೆಯಿದ್ದು, ಬೇರೆ ಕಡೆಯಿಂದ ಬಂದ ತರಕಾರಿಗಳನ್ನು ಕೊಂಡು ತಿನ್ನುತ್ತಾರೆ.

ಅಡಿಕೆ, ಭತ್ತ ಉಪಬೆಳೆಗಳಾದ ಏಲಕ್ಕಿ, ಕಾಳುಮೆಣಸು, ಬಾಳೆಕಾಯಿ, ಕಾಫಿ, ವೀಳ್ಯದೆಲೆ ಇತ್ಯಾದಿ ವಸ್ತುಗಳನ್ನು ಮಾರಾಟಮಾಡುತ್ತಿದ್ದರು. ಕಾಡಿನ ಉತ್ಪನ್ನಗಳಾದ ಜೇನುತುಪ್ಪ, ಸೀಗೆಕಾಯಿ, ಅಂಟವಾಳ, ಮುರುಗನ ಹುಳಿ, ದಾಲ್ಚಿನ್ನಿ, ಧೂಪ, ರಾಮಡಿಕೆ ಮೊದಲಾದವುಗಳನ್ನು ಮಾರಾಟ ಮಾಡುತ್ತಿದ್ದರು.

ದಿನಸಿ ಸಾಮಾನುಗಳು, ಕಾಳು, ಬೇಳೆ, ಎಣ್ಣೆ, ಬೆಲ್ಲ, ಬಟ್ಟೆಬರೆ, ಔಷಧ ಮೊದಲಾದವುಗಳನ್ನು ಖರೀದಿಸುತ್ತಿದ್ದರು. ರಸ್ತೆ ಸೌಲಭ್ಯವಿಲ್ಲದ್ದರಿಂದ ಏಪ್ರಿಲ್-ಮೇ ತಿಂಗಳಲ್ಲಿ ಒಮ್ಮೆ ಒಂದು ವರ್ಷಕ್ಕೆ ಬೇಕಾದಷ್ಟು ಅಗತ್ಯ ಸಾಮಾನುಗಳನ್ನು ತಂದು ಸಂಗ್ರಹಿಸಿಡುತ್ತಿದ್ದರು. ಈಗ ಎಲ್ಲಾ ಅನುಕೂಲತೆಗಳಿರುವುದರಿಂದ ಅಗತ್ಯಕ್ಕೆ ಬೇಕಾದಷ್ಟು ಮಾತ್ರ ಸಾಮಾನುಗಳನ್ನು ಅಂದೇ ಕೊಳ್ಳಲಾಗುತ್ತದೆ.

ಯುಗಾದಿ ಹಬ್ಬದ ದಿನ ಹೊಸ ಬಟ್ಟೆತರುವ ಪದ್ಧತಿಯಿರುತ್ತಿತ್ತು. ಮನೆಯ ಎಲ್ಲಾ ಸದಸ್ಯರಿಗೂ ಹೊಸಬಟ್ಟೆ ತರಲಾಗುತ್ತಿತ್ತು. ಗಂಡಸರು ಬಾರಾಪರ್ದಿ ಪಂಚೆ, ಒಂದು ಒಳಬನಿಯನ್, ಹೆಗಲ ಮೇಲೆ ಒಂದು ಅಂಗವಸ್ತ್ರ, ಹೆಂಗಸರಿಗೆ ಸೀರೆ, ಕುಪ್ಪಸ ಹೆಣ್ಣುಮಕ್ಕಳು ಎಂಟು-ಹತ್ತು ವರ್ಷದವರಿಗೆ ಲಂಗ, ಅನಂತರ ಚಿಕ್ಕ ಸೀರೆ, ಗಂಡು ಮಕ್ಕಳಿಗೆ ಉಪನಯನವಾಗುವವರೆಗೆ ಲಂಗೋಟಿ, ಮೊಣಕಾಲಿನವರೆಗೆ ಬರುವ ಅಂಗಿ, ಉಪನಯನವಾದರೆ ಚಿಕ್ಕ ಪಂಚೆ, ಅಂಗಿ ತೊಡಿಸುತ್ತಿದ್ದರು. ಗಂಡಸರು ಪ್ರಯಾಣ ಹೊರಡುವಾಗ ಎಂಟು ಮೊಳದ ಕಚ್ಚೆ ಪಂಚೆ, ಅಂಗಿ ಶಲ್ಯ, ಮುಂಡಾಸು, ಅಥವಾ ಪೇಟ, ಮದುವೆಯ ವೇಳೆ ಕೋಟು ಹಾಕುತ್ತಿದ್ದರು. ಈಗ ಮಹಿಳೆಯರು ಲಂಗ, ನೈಟಿ, ಸೀರೆಗಳನ್ನು, ಪುರುಷರು ಪ್ಯಾಂಟ್, ಶರ್ಟ್ ಮೊದಲಾದವುಗಳನ್ನು ಧರಿಸುತ್ತಾರೆ. ಹಿರಿಯರು ಕೆಲವರು ಮಾತ್ರ ಸಂಪ್ರದಾಯದ ಉಡುಗೆ ತೊಡುಗೆಗಳನ್ನು ಧರಿಸುತ್ತಿದ್ದಾರೆ.

ಮನೆಯ ಯಜಮಾನ ಮಾತ್ರ ಚರ್ಮದಿಂದ ಹೊಲಿಸಿದ ಪಾದರಕ್ಷೆಯನ್ನು ಧರಿಸುತ್ತಿದ್ದನು. ಈಗ ಮನೆಯವರೆಲ್ಲರೂ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪಾದರಕ್ಷೆಯನ್ನು ಬಳಸುತ್ತಿದ್ದಾರೆ. ಹಿಂದೆ ಹರಿಕಥೆ, ನಾಟಕ, ಯಕ್ಷಗಾನ, ತಾಳಮದ್ದಲೆ, ಬಯಲಾಟ, ಅಂಟಿಕೆ-ಪಿಂಟಿಕೆ, ಕೋಲಾಟ, ಮೊದಲಾದವುಗಳು ನಡೆಯುತ್ತಿದ್ದವು. ತೇರು, ಜಾತ್ರೆಯ ದಿನಗಳಲ್ಲಿ ಇಂತಹ ಮನರಂಜನಾ ಕಾರ್ಯಕ್ರಮಗಳು ಏರ್ಪಡುತ್ತಿತ್ತು. ಈಗ ರೇಡಿಯೋ, ಟಿ.ವಿ. ಮಾಧ್ಯಮಗಳು, ಸಿನೆಮಾ, ನಾಟಕ, ಸರ್ಕಸ್ ಮೊದಲಾದವುಗಳಿವೆ.

ಎಲೆ ಅಡಿಕೆ, ತಂಬಾಕು, ನಶ್ಯೆ, ಬೀಡಿ, ಸಿಗರೇಟು ಸೇದುತ್ತಿದ್ದರು. ಮೇಲ್ಜಾತಿಯವರು ಬೀಡಿ ಸಿಗರೇಟು ಸೇದುವುದು ಕಡಿಮೆಯಿತ್ತು. ಮದ್ಯಪಾನವದಲ್ಲಿ ಸಮಾಜದ ಕೆಳಸ್ತರದವರು ಸ್ವತಃ ತಾವೇ ತಯಾರಿಸಿದ ಹೆಂಡ, ಕಳ್ಳು, ಭಟ್ಟಿ ಸಾರಾಯಿ, ಬೆಳೆ ಮೊದಲಾದವುಗಳನ್ನು ಉಪಯೋಗಿಸುತ್ತಿದ್ದರು. ಈಗ ಮದ್ಯಪಾನವು ಪ್ರತಿಷ್ಠೆಯ ಸಂಕೇತವಾಗಿದ್ದು, ಎಲ್ಲಾ ಜಾತಿಯವರು ಕುಡಿಯುತ್ತಾರೆ. ಇತ್ತೀಚಿಗೆ ಮಹಿಳೆಯರೂ ಕುಡಿಯುವುದುಂಟು, ಆಧುನಿಕ ಮದ್ಯಗಳಾದ ಬ್ರಾಂಡಿ, ವಿಸ್ಕಿ, ರಮ್, ಬಿಯರ್, ವೈನ್ ಮೊದಲಾದವುಗಳನ್ನು ಉಪಯೋಗಿಸುತ್ತಿದ್ದಾರೆ.

ಕಷಾಯ, ರಾಗಿ ಹಿಟ್ಟಿನ ಬಿಸಿನೀರು, ಶುಂಠಿ ಕಷಾಯ, ಮೆಣಸಿನ ಕಷಾಯ, ಬೆರಸು ಮಜ್ಜಿಗೆ, ಅಕ್ಕಿ ತೊಳೆದ ನೀರಿಗೆ ಬೆಲ್ಲ ಹಾಕಿ ಕುಡಿಯುವುದು, ಲಿಂಬೆ ಪಾನಕ ಮೊದಲಾದ ಪಾನೀಯಗಳನ್ನು ಬಳಸುತ್ತಿದ್ದರು. ಇತ್ತೀಚೆಗೆ ಕಾಫಿಯನ್ನು ಬಹಳ ಪ್ರಮಾಣದಲ್ಲಿ ಬಳಸುತ್ತಿದ್ದು, ಟೀ, ಹಾರ್ಲಿಕ್ಸ್, ಬೋರ್ನ್‌ವೀಟಾ ಇತ್ಯಾದಿಗಳಿಂದ ತಯಾರಿಸಿದ ಪಾನೀಯಗಳನ್ನು ಸಿದ್ಧಪಡಿಸಿ ಉಪಯೋಗಿಸುತ್ತಿದ್ದಾರೆ. ತೀರಾ ಇತ್ತೀಚೆಗೆ ಕೋ ಕೋ ಕೋಲ, ಥಮ್ಸಪ್, ಸ್ಪ್ರೈಟ್ ಇತ್ಯಾದಿ. ಪಾನೀಯಗಳನ್ನು ಕುಡಿಯುತ್ತಾರೆ. ಕಷಾಯ, ಪಾನಕ ಮೊದಲಾದವುಗಳನ್ನು ಕುಡಿಯುವವರು ತೀರಾ ಕಡಿಮೆ ಇದ್ದಾರೆ.

ಬೆಳಗಿನ ತಿಂಡಿ ಆಹಾರ ವಿಧಾನವು ಮಲೆನಾಡ ಭಾಗದಲ್ಲಿ ವಿಶಿಷ್ಟವಾಗಿತ್ತು. ಬಹುತೇಕರು ಬೆಳಿಗ್ಗೆ ಗಂಜಿ ಊಟವನ್ನು ಹೊಟ್ಟೆ ತುಂಬ ಮಾಡುತ್ತಿದ್ದರು. ಅಪರೂಪಕ್ಕೆ ಹಬ್ಬ ಹರಿದಿನಗಳಂದು ನೆಂಟರಿಷ್ಟರು ಮನಗೆ ಬಂದಾಗ ಮಾತ್ರ ಬೆಳಿಗ್ಗೆ ಕಡಬು, ದೋಸೆ, ಉಪ್ಪಿಟ್ಟು, ಚಿತ್ರಾನ್ನ, ಇಡ್ಲಿ ಮೊದಲಾದ ತಿಂಡಿಗಳನ್ನು ಮಾಡುತ್ತಿದ್ದರು. ಚಿಕ್ಕ ಮಕ್ಕಳಿಗೆ ಹಿಂದಿನ ದಿನ ಉಳಿದ ತಂಗಳನ್ನಕ್ಕೆ ಮಜ್ಜಿಗೆ ಹಾಕಿ ಕಲಸಿ ಕಲ್ಲನ್ನು ಕೆಂಪಗೆ ಕಾಯಿಸಿ ಅನ್ನದೊಳಗೆ ಹೂತಿಟ್ಟು ಬಿಸಿಯಾದ ನಂತರ ಬಡಿಸುತ್ತಿದ್ದರು. ವಿಧವೆಯರು ಬೆಳಿಗ್ಗೆ ಮತ್ತು ಸಂಜೆ ಉಪಾಹಾರ ಮಾಡಬೇಕಾಗಿತ್ತು ಮಧ್ಯಾಹ್ನ ಮಾತ್ರ ಒಂದು ಹೊತ್ತು ಊಟ ಮಾಡಬೇಕಾಗಿತ್ತು.

ಪಶುಗಳಿಗೆ ಆಹಾರವಾಗಿ ಭತ್ತದ ಹುಲ್ಲು, ಅಗಚಪ್ಪಿನ ಸೊಪ್ಪು, ಸಳ್ಳೆ ಸೊಪ್ಪು, ಬೆಳ್ಳಾಟೆ ಸೊಪ್ಪು, ಹಸಿಹುಲ್ಲು ಹಾಗೂ ತಿನ್ನುವ ಇತರ ಸೊಪ್ಪನ್ನು ಹಾಕುತ್ತಿದ್ದರು. ಹಾಲು ಕೊಡುತ್ತಿರುವ ಹಸು, ಎಮ್ಮೆಗಳಿಗೆ ಮಾತ್ರ ಹಿಂಡಿಯನ್ನು ಹಾಕುತ್ತಿದ್ದರು. ಗಾಡಿ ಎತ್ತುಗಳಿಗೆ ಹಾಗೂ ಹೂಟಿ ಎತ್ತುಗಳಿಗೆ ಹುರಳಿಯನ್ನು ಬೇಯಿಸಿ ಕೊಡುತ್ತಿದ್ದರು. ಕಾಡಿನಿಂದ ತಂದ ಹಲಸಿನ ಹಣ್ಣು ಅಥವಾ ಕಾಯಿಯನ್ನು ಸಣ್ಣ ಸಣ್ಣ ಚೂರುಗಳನ್ನಾಗಿ ಕತ್ತರಿಸಿ ಹುಲ್ಲಿನೊಂದಿಗೆ ಬೆರೆಸಿ ಬೇಯಿಸಿ ಎತ್ತು, ದನಕರುಗಳಿಗೆ, ಬೆಳಿಗ್ಗೆ ಮುರ ಕೊಡುತ್ತಿದ್ದರು. ಈಗ ಕ್ಯಾಟಲ್ ಫುಡ್, ಮಿನರಲ್ಸ್ ಮೊದಲಾದ ಆಧುನಿಕ ಆಹಾರ ಪದಾರ್ಥಗಳು ದೊರೆಯುತ್ತವೆ. ಬಿಸಿನೀರಿಗೆ ಅಕ್ಕಿ ತೌಡನ್ನು ಹಾಕಿ ದನ ಕರುಗಳಿಗೆ ಕುಡಿಯಲು ಕೊಡುತ್ತಿದ್ದರು. ಕೆಲವರು ಅಕ್ಕಿ ಗಂಜಿ ಮಾಡಿ ಹಾಕುತ್ತಿದ್ದರು.

ಮಲೆನಾಡ ಭಾಗದಲ್ಲಿ ಸಿಗುವ ಪೇರಲೆ (ಸೀಬೆ), ಹಲಸು, ಮಾವು, ದಾಳಿಂಬೆ,ಮೂಸುಂಬೆ,

ಚಕ್ಕೋತ, ಕಿತ್ತಳೆ, ಅನಾನಸ್, ನೇರಳೆ, ಕರ್ಜಿಗೆ ಮೊದಲಾದ ಹಣ್ಣು-ಹಂಪಲುಗಳನ್ನು ತಿನ್ನುತ್ತಿದ್ದರು. ಈ ಹಣ್ಣುಗಳು ಈ ಪರಿಸರದಲ್ಲಿ ಬೆಳೆಯಲು ಸಾಧ್ಯವಿತ್ತು. ಈಗ ಮಾರುಕಟ್ಟೆಯಿಂದ ಕಿತ್ತಳೆ, ಮೂಸಂಬಿ, ದ್ರಾಕ್ಷಿ, ದಾಳಿಂಬೆ ಮೊದಲಾದ ಹಣ್ಣುಗಳನ್ನು ತರಲಾಗುತ್ತದೆ.

ಏಪ್ರಿಲ್ ಮೇ ತಿಂಗಳಿನಲ್ಲಿ ಮಳೆಗಾಲಕ್ಕೆ ಕಟ್ಟಿಗೆ ಸಂಗ್ರಹ ಮಾಡುವುದು. ಸೋಗೆ ಕಡಿದು ಮಾಡಿಗೆ ಹೊದಿಸುವುದು, ಗದ್ದೆಗೆ ಗೊಬ್ಬರ ಹೊರುವುದು ಸಸಿಮಡಿ (ಅಗಡಿ) ತಯಾರಿಮಾಡುವುದು. ಜೂನ್ ಜುಲೈನಲ್ಲಿ ಅಡಿಕೆ ಗೊನೆಗೆ ಕೊಳೆರೋಗ ತಡೆಯಲು ಹಾಳೆಕೊಟ್ಟೆತಯಾರಿ(1930ರವರೆಗೆ) ಅನಂತರ ಬೋರ್ಡೋ ದ್ರಾವಣ, ಬಯೋಫೈಟ್ ಸಿಂಪಡಿಸುವುದು ರೂಢಿಗೆ ಬಂದಿತು. ಗದ್ದೆ ಸಾಗುವಳಿಯು ಜೂನ್ ತಿಂಗಳಿನಲ್ಲಿ ನಡೆಯುತ್ತಿತ್ತು. ಆಗಸ್ಟ್-ಸೆಪ್ಟೆಂಬರಲ್ಲಿ ಹೆಡಿಗೆ ಬುಟ್ಟಿ , ತಟ್ಟಿ (ಅಡಿಕೆ ಹರಡಲು, ಭತ್ತದುಟ್ಟುವುದು ಇತ್ಯಾದಿ) ತಯಾರಿಸುವುದು, ಅಕ್ಟೋಬರ್‌ನಿಂದ ಡಿಸೆಂಬರದೊಳಗೆ ಅಡಿಕೆ ಕೊಯಲು, ತೋಟದ ಬೇಸಾಯ, ಗದ್ದೆಕೊಯಲು ಜನವರಿ ಫೆಬ್ರವರಿಯಲ್ಲಿ ಅಡಿಕೆ ಆರಿಸುವುದು, ಒಕ್ಲಾಟ ಮಾಡುವುದು. ಫೆಬ್ರವರಿಯಿಂದ ಮೇನವರೆಗೆ ಲಗ್ನಮುಹೂರ್ತಗಳು, ಊಟದ ಮನೆ. ಹೀಗೆ ವರ್ಷವಿಡೀ ಇಲ್ಲಿಯ ಜನರ ಜೀವನ ಚಟುವಟಿಕೆಯಿಂದ ಕೂಡಿರುತ್ತಿತ್ತು. ಈಗ ಆಧುನಿಕ ವಸ್ತು ಉಪಕರಣಗಳು ಸಿಗುತ್ತಿರುವುದರಿಂದ ಸಾಂಪ್ರದಾಯಿಕ ಗುಡಿಕೈಗಾರಿಕೆಗಳು ಕಡಿಮೆಯಾಗಿವೆ. ತೀರಾ ಗ್ರಾಮೀಣ ಭಾಗದ ಮನೆಗಳಲ್ಲಿ ಮಾತ್ರಾ ಇವುಗಳು ಕಾಣಸಿಗುತ್ತವೆ. ಮುಂದಿನ ತಲೆಮಾರಿನ ವೇಳೆಗೆ ಸಾಂಪ್ರದಾಯಿಕ ಪದ್ಧತಿಗಳು ಮರೆಯಾಗಿ ವಿನೂತನ ಶೈಲಿಯ ಪದ್ಧತಿಗಳು ಬಳಕೆಗೆ ಬರುವ ಸಾಧ್ಯತೆಗಳು ಕಂಡುಬರುತ್ತಿವೆ.

ಕೊನೆ ಟಿಪ್ಪಣಿ

1. ತಿಪ್ಪೇರುದ್ರಸ್ವಾಮಿ ಹೆಚ್. ಕರ್ನಾಟಕ ಸಂಸ್ಕೃತಿ ಸಮೀಕ್ಷೆ; ಪುಟ:6
2. ಅದೇ; ಪುಟ: 4
3. ಅದೇ ; ಪುಟ: 8
4. ಅದೇ; ಪುಟ: 11
5. ಶಿವಮೂರ್ತಿ ಶಾಸ್ತ್ರಿಗಳು. ಸಂಸ್ಕೃತಿ ಮತ್ತು ಸಮಾಜ ಜೀವನ ; ಪುಟ :21
6. ನರಸಿಂಹಮೂರ್ತಿ ಎ.ವಿ., ಶೃಂಗೇರಿ ದಕ್ಷಿಣ ಭಾರತದ ಶಾಂಕರ ಪೀಠದ ಇತಿಹಾಸ; ಪುಟ: 9
7. ಅದೇ; ಪುಟ: 10
8. ರಾಮಚಂದ್ರ ಜಿ.ಎಸ್., ಶೃಂಗೇರಿ ವಿದ್ಯಾರಣ್ಯಪುರ; ಪುಟ:2
9. ಅದೇ; ಪುಟ:16
10. ಸರೋಜಮ್ಮ ಕೆ., ಕಿಗ್ಗಾ, ದೇವಾಡಿಗ
11. ಚಂದ್ರಶೇಖರ ಹೆಬ್ಬಿಗೆ, ಬ್ರಾಹ್ಮಣ ಪಂಗಡ ಸಂಕ್ಷಿಪ್ತ ಪರಿಚಯ; ಪುಟ:6
12. ಅದೇ; ಪುಟ:6
13. ಅದೇ; ಪುಟ:2
14. ಚಂದ್ರಶೇಖರ, ಹೆಬ್ಬಿಗೆ, ಬ್ರಾಹ್ಮಣ

15. ಅದೇ
16. ವೆಂಕಟರಮಣ ಭಟ್, ವೈಕುಂಠಪುರ, ಬ್ರಾಹ್ಮಣ
17. ಗೋವಿಂದ ಭಟ್, ತನಿಕೋಡು, ಬ್ರಾಹ್ಮಣ
18. ಅದೇ
19. ಚಂದ್ರಶೇಖರ ಹೆಬ್ಬಿಗೆ, ಬ್ರಾಹ್ಮಣ
20. ಚಂದ್ರಶೇಖರ ಹೆಬ್ಬಗೆ, ಮಲೆನಾಡ ಹೆಬ್ಬಾರ ಸಮಾಜದಲ್ಲಿನ ಸಂಪ್ರದಾಯಗಳು; ಪುಟ:28
21. ರಾಮಪ್ಪಗೌಡ ಎಸ್, ಮಲೆನಾಡು ಶ್ರೀ ವೈಷ್ಣವ ನಾಮಧಾರಿ ಗೌಡ ಸಂಸ್ಕೃತಿ; ಪುಟ:3
22. ಅದೇ; ಪುಟ:5
23. ಅದೇ; ಪುಟ:6
24. ಗುಂಡಣ್ಣ, ತಿಪ್ಪನಕೊಪ್ಪ, ಮೊಗವೀರ
25. ಅಣ್ಣಯ್ಯ ಹೆಗ್ಗಡೆ, ನೆಮ್ಮಾರು, ಒಕ್ಕಲಿಗ
26. ರಾಮಪ್ಪ ಗೌಡ ಎಸ್., ಮಲೆನಾಡು ಶ್ರೀ ವೈಷ್ಣವ ನಾಮಧಾರಿ ಗೌಡ ಸಂಸ್ಕೃತಿ; ಪುಟ:35
27. ಅದೇ; ಪುಟ:38
28. ಅದೇ; ಪುಟ:40
29. ಅದೇ; ಪುಟ:41
30. ಅದೇ; ಪುಟ:42
31. ಅದೇ; ಪುಟ:45
32. ಅದೇ; ಪುಟ:47
33. ಅದೇ; ಪುಟ:78
34. ಅಣ್ಣಯ್ಯ ಹೆಗ್ಗಡೆ, ನೆಮ್ಮಾರು, ಒಕ್ಕಲಿಗ
35. ಸುಬ್ಬಣ್ಣ ಹೆಗ್ಗಡೆ, ಕಲ್ಲುಳಿ, ಒಕ್ಕಲಿಗ
36. ಅದೇ
37. ಅದೇ
38. ಅದೇ
39. ಅದೇ
40. ಗುಂಡಣ್ಣ ಗೌಡ, ಹುಲುಗಾರುಮನೆ, ಒಕ್ಕಲಿಗ
41. ಶಾಮಾಚಾರಿ ಕೆ., ತನಿಕೋಡು, ವಿಶ್ವಕರ್ಮ
42. ಚಿನ್ನಯ್ಯ ಹೆಗ್ಗಡೆ, ಕಲ್ಲುಳಿ, ಒಕ್ಕಲಿಗ
43. ಗಿರಿಯಪ್ಪ ಗೌಡ, ಗಂಡಘಟ್ಟ, ಒಕ್ಕಲಿಗ
44. ರಾಮಪ್ಪ ಗೌಡ ಎನ್., ಮಲೆನಾಡ ಶ್ರೀ ವೈಷ್ಣವ ನಾಮಧಾರಿ ಗೌಡ ಸಂಸ್ಕೃತಿ; ಪುಟ:35
45. ಶಂಕರಪ್ಪ ಗೌಡ ಕೆ.ಎನ್., ಹೆಬ್ಬುಗ್ಗುಂದ, ಒಕ್ಕಲಿಗ
46. ಮರಿಯಪ್ಪ ಗೌಡ, ಕೆರೆಕಟ್ಟೆ, ಗಿರಿಜನ
47. ಅದೇ
48. ಕೆಂಪಮ್ಮ, ಶೀರ್ಲು, ಗಿರಿಜನ
49. ಹೊನ್ನೇಗೌಡ, ಶೀರ್ಲು, ಗಿರಿಜನ
50. ಕೆಂಪಣ್ಣ, ಶೀರ್ಲು, ಗಿರಿಜನ (ಅಧ್ಯಕ್ಷರು ಲ್ಯಾಂಪ್ ಸೊಸೈಟಿ ಕೊಪ್ಪ)

51. ಅಣ್ಣಪ್ಪ, ಬುಂಡಿಹಕ್ಲು, ಹರಿಜನ
52. ನಿರಂಜನ ಕುಮಾರ್ ಎಸ್.ಆರ್., ಶೃಂಗೇರಿ, ಜೈನ
53. ವರ್ಗೀಸ್, ಶೃಂಗೇರಿ, ಕ್ರಿಶ್ಚಿಯನ್
54. ಗುಲಂ ಮುಸ್ತಫ್, ಕುರುಬಕೇರಿ, ಮುಸ್ಲಿಂ
55. ಚಂದ್ರಶೇಖರ, ಹೆಬ್ಬಿಗೆ, ಬ್ರಾಹ್ಮಣ
56. ಸುರೇಂದ್ರ ಕಾಮತ್, ಶೃಂಗೇರಿ, ಕೊಂಕಣಿ
57. ಚಿನ್ನಮ್ಮ, ಕುಂತೂರು, ವಿಶ್ವಕರ್ಮ
58. ಕಾಡುಮೂಲ್ಯ, ವೈಕುಂಠಪುರ, ಕುಂಬಾರ
59. ವೆಂಕಟರಮಣ, ಕೆರೋಡಿ, ಭೋವಿ
60. ಕಾಮನಾಯ್ಕ, ನೀಲಂದೂರು, ಈಡಿಗ
61. ಸುಬ್ಬಣ್ಣ, ಕೆರೆಮನೆ, ಮಡಿವಾಳ
62. ಸರೋಜಮ್ಮ, ಕಿಗ್ಗಾ, ದೇವಾಡಿಗ
63. ರಾಮಪ್ಪ ಪೂಜಾರಿ, ಕೆರೆಕಟ್ಟೆ, ಬಿಲ್ಲವ
64. ನಾಗೇಂದ್ರ ಶ್ರೇಷ್ಠಿ, ಶೃಂಗೇರಿ, ಆರ್ಯವೈಶ್ಯ
65. ಗುಂಡಣ್ಣ, ತಿಪ್ಪನಕೊಪ್ಪ, ಮೊಗವೀರ

ಅಧ್ಯಾಯ – 3

ಶೃಂಗೇರಿಯ ಪಾರಂಪರಿಕತೆ ಹಾಗೂ ಪಲ್ಲಟಗಳು

3.1 ಜನಪದ ವೈದ್ಯ

3.2 ಜನಪದ ಕ್ರೀಡೆ

3.3 ಧಾರ್ಮಿಕ ಪರಂಪರೆ

3.4 ಸಾಹಿತ್ಯ, ಕಲೆ, ಸಂಗೀತ, ಭಾಷಾಪರಂಪರೆ

ಶೃಂಗೇರಿಯ ಪಾರಂಪರಿಕತೆ ಹಾಗೂ ಪಲ್ಲಟಗಳು

3.1 ಜನಪದ ವೈದ್ಯ

ಇಂದು ನಾವು ವೈಜ್ಞಾನಿಕವಾಗಿ ಬಹಳ ಮುಂದುವರಿದ ಯುಗದಲ್ಲಿದ್ದೇವೆ. ಹಲವಾರು ಅತ್ಯಾಧುನಿಕ ಸಲಕರಣೆಗಳಿಂದ ಮನುಷ್ಯನ ದೇಹದೊಳಗೆ ನಡೆಯುವ ಕ್ರಿಯೆಗಳನ್ನು ತಿಳಿಯಬಲ್ಲೆವು, ರೋಗಗಳ ತಪಾಸಣೆಯನ್ನು ಮಾಡಬಲ್ಲೆವು. ರೋಗಗಳನ್ನು ತಡೆಗಟ್ಟುವ ವಿಧಾನಗಳೊಂದಿಗೆ ಗುಣಪಡಿಸುವ ಔಷಧಗಳನ್ನು ಸಂಶೋಧಿಸಿ ಅಭಿವೃದ್ಧಿ ಪಡಿಸುತ್ತಲೇ ಇದ್ದೇವೆ. ಇಷ್ಟು ಮುಂದುವರೆದಿದ್ದರೂ ಪಾರ್ಶ್ವವಾಯು ಹಾಗೂ ನರರೋಗಗಳನ್ನು ಗುಣಪಡಿಸಬಲ್ಲ ಅಂಕೋಲದ ಶಂಭುಶಿವೇಗೌಡರನ್ನು, ವಾತರೋಗಗಳನ್ನು ಪರಿಹರಿಸುವ ನರಸೀಪುರದ ನಾರಾಯಣಮೂರ್ತಿಯವರನ್ನು, ಮೂಳೆಮುರಿತವನ್ನು ಸರಿಪಡಿಸಬಲ್ಲ ಎಂಟಗಾನ ಹಳ್ಳಿಯ ಗಂಗಯ್ಯನವರನ್ನು ಹೀಗೆ ಹಲವಾರು ರೋಗಗಳಿಗೆ ಹಳ್ಳಿ ಹಳ್ಳಿಗಳಲ್ಲಿರುವ ನಾಟಿವೈದ್ಯರುಗಳನ್ನು ಅರಸುತ್ತಾ ಹೋಗುವ ಸಂಖ್ಯೆ ಹೆಚ್ಚಾಗುತ್ತಾ ಇದೆ. ಇದು ನಮ್ಮ ಜಾನಪದ ವೈದ್ಯದಲ್ಲಿರುವ ಅದ್ಭುತ ಶಕ್ತಿಯನ್ನು ತೋರಿಸುತ್ತದೆ. ನಾಗರೀಕತೆಯಿಂದ ಹಳೆಯದನ್ನು ಮರೆಯುತ್ತಿರುವ ನಮ್ಮ ಸಮಾಜದಲ್ಲಿಯೂ ಜಾನಪದ ಕಲೆ, ಹಾಡು, ನೃತ್ಯ, ಕರಕುಶಲಕಲೆ, ವೈದ್ಯ ಇತ್ಯಾದಿಗಳ ಸಂಗ್ರಹಣೆ, ಅಧ್ಯಯನ ಮತ್ತು ಆ ದಿಶೆಯಲ್ಲಿ ನಡೆಯುವ ಸಂಶೋಧನೆಗಳಿಗೆ ಇಂದಿಗೂ ಬೆಲೆ ಕೊಡುವವರಿದ್ದಾರೆ.

ಜಾನಪದ ವೈದ್ಯಕ್ಕೆ ಮಲೆನಾಡಿನ ಈ ಪ್ರದೇಶದಲ್ಲಿ ವಿಶಿಷ್ಟ ಸ್ಥಾನವಿದೆ. ತೀರ ಇತ್ತೀಚಿನವರೆಗೂ ಆಧುನಿಕ ವೈದ್ಯಕೀಯ ಸೌಲಭ್ಯಗಳು ದುರ್ಲಭವಾಗಿದ್ದವು. ಈಗಲೂ ಕಠಿಣ ಪರಿಸ್ಥಿತಿಗಳಲ್ಲಿ ಮಣಿಪಾಲ, ಶಿವಮೊಗ್ಗ, ಬೆಂಗಳೂರುಗಳನ್ನೇ ಆಶ್ರಯಿಸಬೇಕು. ರಸ್ತೆ ಮೊದಲಾದ ಸಂಪರ್ಕ ವ್ಯವಸ್ಥೆಯೂ ಬಹುಮಟ್ಟಿಗೆ ಇಲ್ಲದೇ ಇದ್ದ ಸ್ಥಿತಿಯಲ್ಲಂತೂ ಜನರು ಜಾನಪದ ವೈದ್ಯದ ಮೊರೆಹೋಗುತ್ತಿದ್ದರು. ಇದರಿಂದಾಗಿಯೂ, ಇಲ್ಲಿಯ ಸಸ್ಯಸಮೃದ್ಧಿಯಿಂದಾಗಿಯೂ ಜಾನಪದ ವೈದ್ಯ ಪರಂಪರೆ ಬೆಳೆದು ಉಳಿದು ಬಂದಿದೆ.[1] ಸಂಗ್ರಹಿಸಿದ ಮಾಹಿತಿಯಂತೆ ಶೃಂಗೇರಿ ತಾಲ್ಲೂಕುಗಳಲ್ಲಿ ಸುಮಾರು 70–75 ನಾಟಿವೈದ್ಯರು ಇಂದಿಗೂ ಚಿಕಿತ್ಸೆ ನಡೆಸುತ್ತಾ ಇದ್ದಾರೆ. ಏಕಮೂಲಿಕಾ ಕ್ರಮವನ್ನು ಕೆಲವರು ಬಳಸಿಕೊಂಡರೆ, ಬಹುಮೂಲಿಕಾಕ್ರಮ ಅನೇಕರದ್ದು. ಇವರಲ್ಲಿ ಹೆಚ್ಚಿನವರು ವಂಶ ಪಾರಂಪರ್ಯದಿಂದ ಈ ವಿದ್ಯೆಯನ್ನು ಕಲಿತಿದ್ದರೆ, ಕೆಲವರು ಅನುಭವಸ್ಥರಿಂದ ಕೇಳಿ ತಿಳಿದು ತಮ್ಮ ಚಿಕಿತ್ಸಾ ಪ್ರಯೋಗಗಳಲ್ಲಿ ಅಳವಡಿಸಿಕೊಂಡಿದ್ದಾರೆ. ತಮ್ಮ ಜ್ಞಾನವನ್ನು ಇತರರಲ್ಲಿ ಹಂಚಿಕೊಂಡರೆ ರೋಗಗುಣಪಡಿಸಬಲ್ಲ ಶಕ್ತಿ ಕಡಿಮೆಯಾಗುವುದೆಂಬ ಮೂಢನಂಬಿಕೆಯಿಂದ, ತಾವು ಕಲಿಸಿದ್ದು ದುರುಪಯೋಗವಾಗಬಹುದೆಂಬ ಸಂಶಯದಿಂದ, ಕಲಿತವರು ತಪ್ಪು ಮಾಡಿದರೆ ತೊಂದರೆಯಾಗಬಹುದೆಂಬ ಭೀತಿಯಿಂದ ಮತ್ತು ತಮ್ಮ ಪರಿಸರದಲ್ಲಿ ತಾವು ಉಪಯೋಗಿಸುತ್ತಿದ್ದ ಮೂಲಿಕೆಗಳು ದೊರೆಯದೆ ಮರೆತಿದ್ದರಿಂದ ಈ ವೈದ್ಯಪದ್ಧತಿಯಲ್ಲಿ ಅನೇಕ ಅಮೂಲ್ಯ ಮಾಹಿತಿಗಳು ನಷ್ಟವಾಗಿವೆ.

ಪಿತ್ತಕಾಮಾಲೆ: (Jaundice)

1. ಮದರಂಗಿ ಸೊಪ್ಪಿನ ರಸವನ್ನು ಕಲ್ಲಕ್ರೆ, ಜೀರಿಗೆ, ತಂಬಾಲು ಜೊತೆಗೆ ಸೇರಿಸಿ ಬೆಳಗ್ಗೆ ಕುಡಿಯುವುದು.
2. ಲೋಳೆರಸ ಒಂದು ವಾರದ ತನಕ ಕುಡಿಯುವುದು.
3. ಉತ್ತರಣೆ ಕಷಾಯ
4. ನೆಲನೆಲ್ಲಿ ಕಷಾಯ
5. ಅಳಲೆಕಾಯಿ, ತಾರೆಕಾಯಿ, ನೆಲ್ಲಿಕಾಯಿ, ರೇಶ್ಮೆಗೆಡ್ಡೆ ಹಾಗೂ ಕನ್ನಡಿ ಬೀಳು ಇವುಗಳ ರಸ 1–2 ಚಮಚ ಕುಡಿಯುವುದು.
6. ಕೊಡಸಿನ ಬೇರಿನ ಕಷಾಯ
7. ಅಕ್ಕಿಮಡ್ಲೆ ಎಲೆ ಕಷಾಯ

ಸರ್ಪಸುತ್ತು (Herpes):

1. ಭವಿಗಿಡ, ಒಳ್ಳೆಕುಡಿ, ಮದರಂಗಿಸೊಪ್ಪು, ಪಾರಿಜಾತ ಕುಡಿಗಳ ಕಷಾಯ.
2. ಕೇದಗೆ ಕಾಂಡ, ಸದಾಪು, ಗೋಮೂತ್ರದಲ್ಲಿ ಅರೆದು ಕುಡಿಸುವುದು ಹಾಗೂ ಹಚ್ಚುವುದು.
3. ಒಳ್ಳೆ ಕುಡಿಯನ್ನು ಗೋಮೂತ್ರ ಅಥವಾ ಹಾಲಿನಲ್ಲಿ ಅರೆದು ಕುಡಿಸುವುದು ಜೊತೆಗೆ ಒಳ್ಳೆಕುಡಿ ಮತ್ತು ಸದಾಪು ಅರೆದು ಕೊಬ್ಬರಿ ಎಣ್ಣೆಯಲ್ಲಿ ಕುದಿಸಿ ಹಚ್ಚುವುದು.
4. ನಾಚಿಕೆ ಮುಳ್ಳು ಮತ್ತು ಜೀರಿಗೆ ದನದ ಹಾಲಿನಲ್ಲಿ ಅರೆದು ಒಂದು ತಿಂಗಳು ಕುಡಿಯುವುದು.
5. ಅಕ್ಕಿಮಡ್ಲೆ ಎಲೆಕಷಾಯ ಕುಡಿಸಿ, ತುಂಬೆಎಲೆ ಸುಣ್ಣದ ಜೊತೆಗೆ ಅರೆದು ಹಚ್ಚುವುದು.
6. ಆಡುಸೋಗೆ ಸೊಪ್ಪು, ಒಳ್ಳೆಕುಡಿ, ಅಗಳ ಶುಂಠಿ ಬೇರುಗಳನ್ನು ಅರೆದು ಹಾಲಿನಲ್ಲಿ ಬೆರೆಸಿ ಹಚ್ಚುವುದು.

ವಾತ(Rheumatism, Arthritis):

1. ವಾಯುವಿಳಂಗದ ಸೊಪ್ಪನ್ನು ಬೇಯಿಸಿ ತಂಬುಳಿ ಸೇವಿಸುವುದು.
2. ಬಿಲ್ಲುಂಬೆ ಚಿಗುರು, ಜೀರಿಗೆ, ಓಮ, ಸಾಸಿವೆ, ಕೊಬ್ಬರಿ ಎಣ್ಣೆಯಲ್ಲಿ ಕುದಿಸಿ ಹಚ್ಚುವುದು.
3. ನಾಯಿಹಲಸಿನ ತೊಗಟೆ, ಜೀರಿಗೆ, ಸಕ್ಕರೆ, ಬೆರೆಸಿ ಕಷಾಯ.
4. ಮದ್ದರಸ ತೊಗಟೆ ಕಷಾಯ.
5. ವಾಯುವಿಳಂಗ ಬೇರು, ಕಡ್ಲಂಕಡ್ಲೆ ಬೇರು, ಹರಳು ಬೇರುಗಳ ಕಷಾಯ.

ಸಿಹಿ ಮೂತ್ರ ರೋಗ: (Diabetes)

1. ನಿತ್ಯಪುಷ್ಪಗಿಡ ಬೇರು ಸಹಿತ ಅರೆದು ಕುಡಿಯುವುದು.
2. ಹಾಗಲ ಕಾಯಿ ರಸ ಸೇವಿಸುವುದು.

ಮೂಲವ್ಯಾಧಿ (Piles) :

1. ಅಗಳ ಶುಂಠಿ ಒಂದು ಹಿಡಿಸೊಪ್ಪನ್ನು ಕೊಯಿದ ತಕ್ಷಣವೇ ರಸ ತೆಗೆದು 5 ದಿನಗಳವರೆಗೆ ಕುಡಿಯುವುದು.
2. ಮೂರು ಚಮಚ ಹಾಗಲಕಾಯಿ ಎಲೆ ರಸ ಒಂದು ಲೋಟ ಮಜ್ಜಿಗೆಯಲ್ಲಿ ಬೆಳಿಗ್ಗೆ ಖಾಲಿ ಹೊಟ್ಟೆಗೆ.
3. ಎರಡು ಚಮಚ ಮೂಲಂಗಿ ಬೇರಿನ ರಸ ದಿನಕ್ಕೆ ಎರಡುಬಾರಿ ಖಾಲಿ ಹೊಟ್ಟೆಗೆ.
4. ಹುಲ್ಕವರಿ ಬೇರಿನ ಕಷಾಯ ಹಾಲು, ಸಕ್ಕರೆ ಜೊತೆಗೆ.
5. ಲೋಳೆಸರ ಎಲೆ ಸುಟ್ಟು ಕಲ್ಸಕ್ರೆ ಜೊತೆಗೆ ಸೇವಿಸುವುದು.
6. ನಾಚಿಗೆಮುಳ್ಳಿನ ಕಷಾಯ.

ಉರಿಮೂತ್ರ (Burning urination):

1. ಗಣಿಕೆಸೊಪ್ಪಿನ (ಕಾಕಿಸೊಪ್ಪು) ತಂಬುಳಿ ಉಪಯೋಗಿಸುವುದು.
2. ಮುಳ್ಳುಹರಿವೆ, ಮೆಣಸಿನಕಾಳು, ಜೀರಿಗೆ ಕಷಾಯ.
3. ಕಾಮಕಸ್ತೂರಿ ಬೀಜ, ಜೀರಿಗೆ ಕಷಾಯ ಹಾಲಿನಲ್ಲಿ.
4. ನೆಲ್ಲಿ ತೊಪ್ಪೆ ಜೀರಿಗೆ ಕಷಾಯ ಹಾಲಿನಲ್ಲಿ.
5. ಸುಗಂಧಿ ಬೇರು, ನೆಗ್ಗಿನ ಮುಳ್ಳು, ಜೀರಿಗೆ, ಕೊತ್ತಂಬರಿ ಕಷಾಯ.

ಮೂತ್ರಾಶ್ಮರಿ (Renal Calculi):

1. ಮೂಲಂಗಿ ಎಲೆರಸ ಒಂದು ಲೋಟ ಖಾಲಿ ಹೊಟ್ಟೆಗೆ 15 ರಿಂದ 21 ದಿವಸ ಸೇವಿಸುವುದು.
2. ಬಾಳೆದಿಂಡಿನ ರಸ ಕುಡಿಯುವುದು.
3. ಮೂತ್ರ ವಿಸರ್ಜನೆ ಸರಿಯಾಗಿ ಆಗಲು ಅಕ್ಕಿಮಡ್ಲೆ ತೊಪ್ಪೆ ಕಷಾಯ.

ಹಾವು ಕಡಿತ (Snake bite):

1. ಸರ್ಪ ಹೊರತು ಪಡಿಸಿ ಉಳಿದ ಹಾವುಕಡಿತಕ್ಕೆ ಅಗಳ ಶುಂಠಿ ಬೇರು, ಆಡುಸೋಗೆ ಬೇರುಗಳನ್ನು

ಲಿಂಬೆರಸದಲ್ಲಿ ಅರೆದು ಹಚ್ಚಿ ಒಳ್ಳೆ ಕುಡಿ ರಸ ಮೂರು ಹೊತ್ತು ಒಂದೊಂದು ಚಮಚದಂತೆ ಕುಡಿಯುವುದು.

2. ಗರುಡಪಾತಾಳ ಮತ್ತು ಈಶ್ವರಿ ಬೇರುಗಳನ್ನು ಲಿಂಬೆರಸದಲ್ಲಿ ಅರೆದು ಸೇವಿಸುವುದು ಹಾಗೂ ಹಾವು ಕಡಿದ ಭಾಗಕ್ಕೆ ಹಚ್ಚುವುದು.
3. ನಿರ್ವಿಷ ಎಲೆ ಮತ್ತು ಬೇರು, ಗಣಪೆಕಾಯಿ, ಗಜ್ಜಗ, ಅರಸಿನ ಇವುಗಳನ್ನು ಅರೆದು ಕಡಿತದ ಭಾಗಕ್ಕೆ ಹಚ್ಚುವುದು.
4. ಗದ್ದೆ ತುಂಬೆ ಸೊಪ್ಪು, ಅಗಳ ಶುಂಠಿ ಬೇರು ನೀರಲ್ಲಿ ಅರೆದು ಅರ್ಧಲೋಟ ಕುಡಿಸುವುದು.

ಚೇಳು ಕಡಿತ (Scropion Sting) :

ತುಳಸಿ ರಸಕ್ಕೆ ಉಪ್ಪು ಸೇರಿಸಿ ಕಡಿತಭಾಗಕ್ಕೆ ಹಚ್ಚುವುದು.

ಕರುಳು ಹುಣ್ಣು (Peptic ulcer)

1. ಬೂದುಕುಂಬಳಕಾಯಿ ರಸ ಅರ್ಧಲೋಟಕ್ಕೆ ಸಮ ಪ್ರಮಾಣ ನೀರು ಸೇರಿಸಿ ಬೆಳಗ್ಗೆ ಖಾಲಿ ಹೊಟ್ಟೆಗೆ ಸೇವಿಸುವುದು.
2. ಎಲೆಕೋಸು ಮತ್ತು ಕ್ಯಾರೇಟಿನ ರಸ ದೀರ್ಘಕಾಲ ಸೇವಿಸುವುದು.
3. ಕೊಡಸಿನ ಬೇರು, ಕಕ್ಕೆ, ಒಳ್ಳೆಕುಡಿ, ವಾಯುವಿಳಂಗಗಳ ಕಷಾಯ.

ಬಾಲಗ್ರಹ (Seizure):

ಆಡುಮುಟ್ಟದ ಬಳ್ಳಿ ಬೇರನ್ನು ನೀರಲ್ಲಿ ಜಜ್ಜಿ, ನೀರನ್ನು ತೊಗಟೆಯೊಂದಿಗೆ ಕೈ ಕಾಲಿನ ಸಂದು, ಅಂಗಾಲು, ಅಂಗೈಗಳಿಗೆ ವಾರಕ್ಕೊಮ್ಮೆ ತಿಕ್ಕುವುದು.

ಗಂಟಲು ಬೇನೆ (Tonsils) :

1. ಮದ್ದರಸ ಮರದ ತೆಪ್ಪೆ, ಬೆಳ್ಳುಳ್ಳಿಗಳನ್ನು ಲಿಂಬೆರಸದಲ್ಲಿ ಅರೆದು ಗಂಟಲಿಗೆ ಹಚ್ಚುವುದು.
2. ಹೆದ್ದುಂಬೆ ಬೇರನ್ನು ಲಿಂಬೆರಸದಲ್ಲಿ ತೇದು ನಾಲಿಗೆಗೆ ಹಚ್ಚುವುದು.
3. ಸುಣ್ಣ ಮತ್ತು ಬೆಲ್ಲವನ್ನು ಸೇರಿಸಿ ಗಂಟಲಿಗೆ ಹಚ್ಚುವುದು.
4. ರಂಜದ ಬೀಜವನ್ನು ತೇದು, ನಾಲಿಗೆಗೆ ಹಚ್ಚುವುದು
5. ಚಿತ್ರಮೂಲ ಕಷಾಯ ಸೇವಿಸುವುದು.

ಕೆಮ್ಮು (Cough) :

1. ಒಂದು ಲೋಟ ಅಕ್ಕಚ್ಚಿಗೆ, ಅರ್ಧ ಚಮಚ ಜೀರಿಗೆ, ಸ್ವಲ್ಪ ಜಜ್ಜಿದ ಶುಂಠಿ, ಬೆಲ್ಲದ ಜೊತೆಗೆ ಕುದಿಸಿ ಬಿಸಿಯಾಗಿರುವಾಗಲೇ ಒಂದು ಚಮಚ ತುಪ್ಪ ಹಾಕಿ ಕುಡಿಯುವುದು.
2. ತುಂಬೆ ಸೊಪ್ಪನ್ನು ಚೆನ್ನಾಗಿ ಅರೆದು, ಅದರ ರಸಕ್ಕೆ ಸುಣ್ಣ ಬೆರೆಸಿ ಗಂಟಲಿಗೆ ಹಚ್ಚಿ ರಸ ಕುಡಿಯುವುದು.
3. ತುಳಸಿ ಎಲೆ ಮತ್ತು ಟೀ ಸೊಪ್ಪಿನ ಕಷಾಯ.
4. ಜ್ಯೇಷ್ಠಮಧು ಮತ್ತು ಜೀರಿಗೆ ಕಷಾಯ ಕುಡಿಯುವುದು.
5. ಬಿಲ್ವ ಪತ್ರೆ ಎಲೆ ತಂಬುಳಿ.
6. ಈರುಳ್ಳಿ, ಶುಂಠಿ, ಕೊತ್ತಂಬರಿ ಬೀಜ, ಜೀರಿಗೆ, ಕಾಳುಮೆಣಸುಗಳ ಕಷಾಯ ಹಾಲು ಕಲ್ಲುಸಕ್ಕರೆಗಳೊಂದಿಗೆ.
7. ಚಕ್ರಾಣಿಕೆ ಬೇರನ್ನು ತೇದು, ಗಂಧವನ್ನು ಸೇವಿಸುವುದು
8. ಕುನ್ನೇರಳೆ ಕುಡಿಯ ಕಷಾಯ ಒಣಕೆಮ್ಮಿಗೆ.
9. ಹಾಲಿಗೆ, ಅರಿಸಿನ ಪುಡಿ ಹಾಕಿ ಕುಡಿಯುವುದು.
10 ಜುಮ್ಮನ ತೆಪ್ಪೆಯನ್ನು ಲಿಂಬೆರಸದಲ್ಲಿ ತೇದು ಮುಂಜಾನೆ ಸೇವಿಸುವುದು.
11. ಅರಿಸಿನ ಪುಡಿಯನ್ನು ಬಾಣಲೆಯಲ್ಲಿ ಕಪ್ಪಗೆ ಹುರಿದು ಜೇನುತುಪ್ಪದಲ್ಲಿ ಸೇವಿಸುವುದು.
12. ಒಂದು ಹಿಡಿ ತುಳಸಿ ಸೊಪ್ಪು, 3–4 ಲವಂಗಗಳನ್ನು ಅರೆದು ರಸವನ್ನು ಮೂರು ಬಾರಿ ಸೇವಿಸುವುದು.

ಕಫ (Congestion):

1. ಸಾಂಬಾರಬಳ್ಳಿ ಎಲೆ ರಸ, ಜೇನುತುಪ್ಪ ಅಥವಾ ಕಲ್ಸಕ್ರೆಯೊಂದಿಗೆ ಸೇವಿಸುವುದು.
2. ಕುಂಬಳಕಾಯಿ ರಸ ದಿನಕ್ಕೆ ಮೂರು ಹೊತ್ತು ಸೇವಿಸುವುದು.
3. ಮಕ್ಕಳ ಕಫಕ್ಕೆ ಆಡುಸೋಗೆ ಸೊಪ್ಪಿನರಸ, ತುಂಬೆ ಎಲೆ ರಸ, ಶುಂಠಿ ರಸಗಳನ್ನು ಎರಡೆರಡು ಹನಿಗಳಂತೆ ಒಂದು ಚಮಚ ಜೇನಿನೊಂದಿಗೆ ಕುಡಿಸುವುದು.
4. ಸಾಂಬಾರ ಬಳ್ಳಿ, ಶುಂಠಿ, ಈರುಳ್ಳಿಗಳನ್ನು ಅರೆದು ಬಿಸಿಮಾಡಿ ಜೇನುತುಪ್ಪ ಸೇರಿಸಿ ಮಕ್ಕಳ ಕಫ ಮತ್ತು ಶೀತ ನಿವಾರಣೆಗೆ ಉಪಯೋಗಿಸುವುದು.

ಶೀತ, ಜ್ವರ, ಮೈಕೈನೋವು: (Flu) :

1. ಮೆಣಸಿನಕಾಳು, ಶುಂಠಿ, ಈರುಳ್ಳಿ, ಜೀರಿಗೆಗಳನ್ನು ಅಕ್ಕಚ್ಚಿನಲ್ಲಿ ಕುದಿಸಿ ಸೋಸಿ ಹಾಲು,

ತುಪ್ಪಗಳೊಂದಿಗೆ ಕುಡಿಯುವುದು.

2. ಜ್ವರಾಂಕುಶದ ಕಷಾಯ ಜೀರಿಗೆ ಕಾಳುಮೆಣಸಿನೊಂದಿಗೆ.
3. ಹೊಂಗೆತೊಪ್ಪ ಜೀರಿಗೆಯೊಂದಿಗಿನ ಕಷಾಯ ಸಾಮಾನ್ಯ ಜ್ವರ ನಿವಾರಣೆಗೆ.
4. ಪೂರ್ವಮುಖವಾಗಿ ಬೆಳೆದಿರುವ ಬೈನೆಬೇರನ್ನು ಪಶ್ಚಿಮಾಭಿಮುಖವಾಗಿ ಬೆಳೆದಿರುವ ತೆಂಗಿನ ಬೇರಿನೊಂದಿಗೆ ಅರೆದು ಮಾತ್ರೆ ತಯಾರಿಸಿ ಟೈಫಾಯಿಡ್ ಜ್ವರಕ್ಕೆ ಕೊಡುತ್ತಾರೆ.

ಉಬ್ಬಸ (Asthma):

1. ಎಕ್ಕದ ಹಾಲು, ಲವಂಗ ಬೆರೆಸಿ ನೆರಳಲ್ಲಿ ಒಣಗಿಸಿ, ಸ್ವಲ್ಪ ಹುರಿದು ಮಾಡಿದ ಪುಡಿಯನ್ನು ದಿನಕ್ಕೆ ಎರಡು ಬಾರಿ ಜೇನುತುಪ್ಪದಲ್ಲಿ ಸೇವಿಸುವುದು.
2. ನುಗ್ಗೆ ತೆಪ್ಪೆ ಮತ್ತು ಜೀರಿಗೆ ಪುಡಿಗೆ ಮೊಟ್ಟೆಹಾಕಿ ಒಂದು ಚಮಚ ತುಪ್ಪದಲ್ಲಿ ಹುರಿದು ಖಾಲಿ ಹೊಟ್ಟೆಗೆ ಸೇವಿಸುವುದು.
3. ನೆಲ್ಲಿಕಾಯಿಗೆ ಉಪ್ಪು, ಸಕ್ಕರೆ ಸೇರಿಸಿ ಮಡಕೆಗೆ ಹಾಕಿ, ಗಟ್ಟಿಯಾಗಿ ಮುಚ್ಚಿ ನೆಲದಲ್ಲಿ 48 ದಿನ ಹೂತಿಡಬೇಕು ನಂತರ ಅದನ್ನು ಸೇವಿಸುತ್ತಾ ಬಂದರೆ ಉಬ್ಬಸ ಕಡಿಮೆಯಾಗುವುದು.

ವಾಂತಿ (Vomiting):

1. ಶ್ರೀಗಂಧವನ್ನು ತೇದು ಜೀರಿಗೆ ಕಲ್ಸಕ್ಕರೆಯೊಂದಿಗೆ ಹಾಲಿನಲ್ಲಿ ಬಿಸಿಮಾಡಿ ಕುಡಿಯುವುದು.
2. ಏಲಕ್ಕಿಗೆಡ್ಡೆ ಜಜ್ಜಿ ನೀರಿನಲ್ಲಿ ಬೇಯಿಸಿ ಕುಡಿಯುವುದು ಮತ್ತು ಒಂದೆರಡು ಏಲಕ್ಕಿಬೀಜ ಜೇನುತುಪ್ಪದೊಂದಿಗೆ ಉಪಯೋಗಿಸುವುದು.
3. ಏಲಕ್ಕಿ ಸಿಪ್ಪೆ ಕಷಾಯ ಹಾಲಿನಲ್ಲಿ ಸೇವಿಸುವುದು.
4. ಬೂದಿಯನ್ನು ನೀರಲ್ಲಿ ಬೆರೆಸಿ ಲಿಂಬೆರಸ, ಉಪ್ಪುಗಳೊಂದಿಗೆ ಕುಡಿಯುವುದು.

ಆಮಶಂಕೆ (Decentery):

1. ಆಡುಸೋಗೆ ಚಿಗುರು ಮತ್ತು ಲಕ್ಕಿಸೊಪ್ಪುಗಳನ್ನು ಅರೆದು ಮಾತ್ರೆರೂಪದಲ್ಲಿ ಸೇವಿಸುವುದು.
2. ನೇರಳೆ ತೆಪ್ಪೆ ಕಷಾಯ.
3. ಅಗ್ಗಪ್ಪು ಎಲೆ ಕಷಾಯ.
4. ವಾಯುವಿಳಂಗ ಬೇರನ್ನು ತೇದು ಕುಡಿಸುವುದು.
5. ಬಿಲ್ಲುಂಬೆ ಮತ್ತು ಪೇರಳೆ ತೆಪ್ಪೆಗಳನ್ನು ಅಕ್ಕಿಯೊಂದಿಗೆ ಗಂಜಿಮಾಡಿ ಉಪಯೋಗಿಸುವುದು.
6. ಬೆಮ್ಮರಳು ಚಿಗುರುಕಾಂಡವನ್ನು ನೀರಲ್ಲಿ ಜಜ್ಜಿ ಸೇವಿಸುವುದು.

7. ದಾಳಿಂಬೆ ಸಿಪ್ಪೆ ಕಷಾಯ.
8. ದಾಳಿಂಬೆ ಸೊಪ್ಪು ಜೀರಿಗೆ ಕಲ್ಕಕ್ಕೆ ಕಷಾಯ.
9. ಪೇರಳೆತೆಪ್ಪೆ ಹಾಲಿನಲ್ಲಿ ಅರೆದು ದಿನಕ್ಕೆ ಒಂದು ಬಾರಿ ಒಂದೆರಡು ದಿವಸ ಕುಡಿಯುವುದು.
10. ಒಂದು ಇಂಚು ಅಗಲ, ಎರಡು ಇಂಚು ಉದ್ದದ ಕಳ್ಳಿಯ ತೆಪ್ಪೆಗಳೆರಡನ್ನು ತೆಗೆದುಕೊಂಡು, ಒಂದನ್ನು ಕೆಂಡದಲ್ಲಿ ಸ್ವಲ್ಪ ಬಿಸಿಮಾಡಿ ಅವುಗಳನ್ನು ಹದಿನೈದುಕಾಳು ಮೆಣಸು, ನಾಲ್ಕೈದು ಬೆಳ್ಳುಳ್ಳಿ ಹಿಳುಕುಗಳೊಂದಿಗೆ ಅರೆದು, ಗುಳಿಗೆಮಾಡಿ ಅಥವಾ ನೀರು ಸೇರಿಸಿ ತೆಳ್ಳಗೆ ಮಾಡಿ ಒಮ್ಮೆ ಮಾತ್ರ ಸೇವಿಸುವುದು.

ವಾಂತಿಭೇದಿ (Gastro-enteritis):

1. ಪುದಿನ ಸೊಪ್ಪಿನ ರಸ ಏಲಕ್ಕಿ ಪುಡಿ ಜೊತೆಗೆ ಸೇವಿಸುವುದು.
2. ಕೌಲುಮರದ ತೆಪ್ಪೆ ಕಷಾಯ.
3. ಉತ್ತರಣಿ ಕಾಂಡವನ್ನು ಓಮದ ಜೊತೆಗೆ ಜಜ್ಜಿ ಸೇವಿಸುವುದು.
4. ಕೊಡಸಿನ ಬೇರು ಲಿಂಬೆರಸದಲ್ಲಿ ತೇದು ತಿನ್ನುವುದು.
5. ಚಕ್ರಾಣಿಬೇರನ್ನು ತೇದು ಸೇವಿಸುವುದು.
6. ಅಗ್ಚಪ್ಪು ಎಲೆ ರಸ ಉಪಯೋಗಿಸುವುದು.

ಹೊಟ್ಟೆನೋವು (Stomachache):

1. ಹರಳು ಬೇರನ್ನು ನೀರಲ್ಲಿ ಕುದಿಸಿ ಕುಡಿಯುವುದು.
2. ಮೆಂತ್ಯ ಅರೆದು ಕುಡಿದು ನಂತರ ಮಜ್ಜಿಗೆ ಕುಡಿಯುವುದು.
3. ಲೋಳೆಸರದ ಲೋಳೆಗೆ ಹಾಲು ಸಕ್ಕರೆ ಸೇರಿಸಿ ಕುಡಿಯುವುದು.
4. ಜೀರಿಗೆ ಕಷಾಯ ಉಪಯೋಗ ಪರಿಣಾಮಕಾರಿ.
5. ಹೊಟ್ಟೆಹುಳುವಿನಿಂದ ಬರುವ ನೋವಿಗೆ ಹಾಗಲಎಲೆರಸ ಉಪಯುಕ್ತ.
6. ಪುದಿನ ಸೊಪ್ಪಿನ ರಸವನ್ನು ಸಕ್ಕರೆಯೊಂದಿಗೆ ಸೇವಿಸುವುದು.

ಕರುಳು ಹುಣ್ಣು (Ulcer):

1. ಕೊಡಸಿನಬೇರು, ಕಕ್ಕೆ, ಒಳ್ಳೆಕುಡಿ, ವಾಯುವಿಳಂಗಗಳನ್ನು ಸೇರಿಸಿ ಕಷಾಯ ಮಾಡಿ ಕುಡಿಯುವುದು.
2. ಅರ್ಧಲೋಟ ಬೂದು ಕುಂಬಳಕಾಯಿ ರಸವನ್ನು ಸರಿಪ್ರಮಾಣ ನೀರಿನೊಂದಿಗೆ ಖಾಲಿ ಹೊಟ್ಟೆಯಲ್ಲಿ ಸೇವಿಸುವುದು.

3. ಕೋಸು ಮತ್ತು ಕ್ಯಾರೆಟ್‌ಗಳ ರಸ ದೀರ್ಘ ಕಾಲ ಸೇವಿಸುವುದು.

ಬಾಯಿಹುಣ್ಣು (Mouth Ulcer, Aphthous):

1. ಬೀಳು ಬಸಳೆ ಎಲೆ ಜಗಿಯುವುದು.

ಬೆನ್ನು ಮತ್ತು ಸೊಂಟನೋವು (Back pain and Lumbago)

1. ಹರಳುಬೇರು, ಜೀರಿಗೆ ಕಷಾಯ, ಹಾಲು, ಸಕ್ಕರೆ ಜೊತೆಗೆ ಮೂರು ದಿವಸ ಸೇವಿಸುವುದು.
2. ಹರಳು ಕಡ್ಲಂಕಡ್ಲೆಗಳ ಬೇರು, ಜೀರಿಗೆ ಕಷಾಯ ಅರ್ಧಲೋಟ ಹಾಲು ಸಕ್ಕರೆಗಳೊಂದಿಗೆ ಉಪಯೋಗ.

ಹಲ್ಲುನೋವು (Toothache):

1. ನಾಚಿಕೆಮುಳ್ಳಿನಬೇರು ಜಜ್ಜಿ ಕುದಿಸಿ ಉಪ್ಪು ಹಾಕಿ ಬಾಯಿಮುಕ್ಕಳಿಸುವುದು.
2. ಪೇರಳೆ ಸೊಪ್ಪನ್ನು ನೀರಿನಲ್ಲಿ ಕುದಿಸಿ ಅರ್ಧದಷ್ಟು ಇಂಗಿಸಿ ಬಾಯಿಮುಕ್ಕಳಿಸುವುದು.
3. ಬೆಣ್ಣೆಯನ್ನು ಹತ್ತಿಯಲ್ಲಿ ಸುತ್ತಿ ನೋವಿನ ಹಲ್ಲಿಗೆ ಇಡುವುದು.
4. ತುಳಸಿ ಉಪ್ಪು ಮತ್ತು ಲವಂಗಗಳನ್ನು ಚೆನ್ನಾಗಿ ಜಜ್ಜಿ ನೋವಿದ್ದ ಜಾಗಕ್ಕೆ ಇಡುವುದು.
5. ಪಪ್ಪಾಯಿ ಸೊನೆ ಹುಳುಕು ಜಾಗಕ್ಕೆ ಇಡುವುದು.
6. ದೂರ್ವೆ(ಗರಿಕೆ ಹುಲ್ಲು)ಯನ್ನು ಜಗಿದು ರಸವನ್ನು ನೋವಿರುವ ಹಲ್ಲಿನ ಬಳಿ ಇಟ್ಟುಕೊಂಡು ಸ್ವಲ್ಪ ಸಮಯದ ನಂತರ ಉಗಿಯುವುದು.

ಕೆಪ್ಪಟರಾಯ (Mumps):

1. ಉಮ್ಮತ್ತಿಸೊಪ್ಪನ್ನು ಕಂಚಿಕಾಯಿ ರಸದಲ್ಲಿ ಅರೆದು ಹಚ್ಚುವುದು
2. ಹೆದ್ದುಂಬೆ ಬೇರನ್ನು ನಿಂಬೆರಸದಲ್ಲಿ ತೇದು ಬಿಸಿಮಾಡಿ ಹಚ್ಚುವುದು.

ಚರ್ಮದ ಖಾಯಿಲೆಗಳು. (Skin Diseases)

a. ಹುಳುಕಡ್ಡಿ (Ringworm):

1. ತುಳಸಿಯನ್ನು ಉಪ್ಪಿನೊಂದಿಗೆ ಜಜ್ಜಿ ತೆಗೆದ ರಸವನ್ನು ಹುಳುಕಡ್ಡಿಯ ಹೊರಭಾಗದಿಂದ ಆರಂಭಿಸಿ ಹಚ್ಚುವುದು. ಮಧ್ಯದಿಂದ ಆರಂಭಿಸಿದರೆ ಹರಡುವ ಸಾಧ್ಯತೆ ಹೆಚ್ಚು.
2. ಹರಿವೆ ಸೊಪ್ಪಿನರಸಕ್ಕೆ ಉಪ್ಪು ಸೇರಿಸಿ ಹಚ್ಚುವುದು.

b. ಹುಳು ಹರಿಯುವುದು (Eczema):

1. ಅಗಳಶುಂಠಿಬೇರು, ಒಳ್ಳೆಕುಡಿಸೊಪ್ಪು, ಆಡುಸೋಗೆ ಸೊಪ್ಪುಗಳನ್ನು ಲಿಂಬೆರಸದೊಂದಿಗೆ ಅರೆದು ದಿನಕ್ಕೆ ಎರಡು ಬಾರಿ ಹಚ್ಚುವುದು.

c. ಕಜ್ಜಿ (Scabies) :

1. ಕಾಡು ಜೀರಿಗೆ, ಲಕ್ಕಿ ಕುಡಿ, ಅಗಳ ಶುಂಠಿ ಬೇರು, ಆಡುಸೋಗೆ ಸೊಪ್ಪು, ಜಾಯಿಕಾಯಿ, ಹಿಪ್ಪಲಿ, ಲವಂಗ ಮತ್ತು ಪತ್ರೆಗಳನ್ನು ಅರೆದು ಕೊಬ್ಬರಿಎಣ್ಣೆಯಲ್ಲಿ ಕುದಿಸಿ ಹಚ್ಚುವುದು.
2. ಕಾಡು ಜೀರಿಗೆ, ಅರಸಿಣಗಳನ್ನು ಎಣ್ಣೆಯಲ್ಲಿ ಬಿಸಿಮಾಡಿ ಹಚ್ಚುವುದು.
3. ಹಣ್ಣಡಿಕೆ ಸಿಪ್ಪೆಯ ರಸವನ್ನು ಉಪ್ಪಿನೊಂದಿಗೆ ಹಚ್ಚುವುದು–ಕ್ರಿಮಿಗಳಿಂದಾಗುವ ಕಜ್ಜಿಗೆ.
4. ಬೀಳು ಜಾಜಿಸೊಪ್ಪು, ಮಲ್ಲಿಗೆಕುಡಿ, ಗಾಂಧಾರಿ ಸೊಪ್ಪುಗಳನ್ನು ಎಣ್ಣೆಯಲ್ಲಿ ಕುದಿಸಿ ಹಚ್ಚುವುದು ಮೊಡವೆ, ಕೆಂಪನೆಕಜ್ಜಿಗಳಿಗೆ ಉಪಯುಕ್ತ.
5. ತೊಂಡೆಸೊಪ್ಪನ್ನು ಅರೆದು ಹಚ್ಚುವುದು.
6. ಒಳ್ಳೆಕುಡಿ ಕಷಾಯ ಕುಡಿಯುವುದು ಮತ್ತು ಅದರ ಚಿಗುರನ್ನು ಅರಸಿನದೊಂದಿಗೆ ಅರೆದು ಹಚ್ಚುವುದು.

d. ಮೊಡವೆ (Pimples) / ಚರ್ಮದ ಕಾಂತಿವರ್ಧನೆಗೆ:

1. ಅರಸಿನ, ಹಾಲಿನ ಕೆನೆಗಳನ್ನು ಲಿಂಬೆರಸದೊಂದಿಗೆ ಮಿಶ್ರಣ ಮಾಡಿ ಲೇಪಿಸುವುದು.
2. ಪುದಿನಾ ಸೊಪ್ಪನ್ನು ಅರೆದು ಅರಸಿನದೊಂದಿಗೆ ಹಚ್ಚುವುದು.
3. ಅರಿಸಿನ, ಲಿಂಬೆರಸ, ಜೇನುತುಪ್ಪಗಳನ್ನು ಮಿಶ್ರಣಮಾಡಿ ಹಚ್ಚಿ ಸ್ವಲ್ಪ ಸಮಯದ ನಂತರ ಮುಖ ತೊಳೆಯುವುದು.
4. ಲಿಂಬೆರಸ, ಅರಸಿನ, ಸಾಸಿವೆಗಳನ್ನು ಕೊಬ್ಬರಿ ಎಣ್ಣೆಯೊಂದಿಗೆ ಕುದಿಸಿ ದಿನವೂ ಅಭ್ಯಂಜನಕ್ಕೆ ಬಳಸುವುದು.

ತುರಿಕೆ (Pruritis)

1. ಜಡ್ಡುರಾಗಿರಸ ಹಚ್ಚುವುದು.
2. ಕಾಕಿಸೊಪ್ಪಿನರಸ ಹಚ್ಚುವುದು.

ಉಗುರುಸುತ್ತು (Whitlow):

1. ನೆಲಪ್ಪಾಳೆ ಬೀಳಿನ ಹಾಲನ್ನು ಬಿಡುವುದು.

2. ಶತಾವರಿ ಸೊಪ್ಪನ್ನು ಅರೆದು ಹಚ್ಚಿ ಬಟ್ಟೆ ಕಟ್ಟುವುದು.
3. ಚೆಂಡು ಹೂವನ್ನು ಅರೆದು ಹಚ್ಚುವುದು.

ಸುಟ್ಟಗಾಯ (Burns):

1. ತೆಂಗಿನಕಾಯಿಯನ್ನು ಸುಟ್ಟು ಬರುವ ಎಣ್ಣೆಯನ್ನು ಹಚ್ಚುವುದು.
2. ಸಾಲ್ದೂಪ ಅಂಟನ್ನು ನೀರಿನಲ್ಲಿ ಕರಗಿಸಿ ಕೊಬ್ಬರಿ ಎಣ್ಣೆಯೊಂದಿಗೆ ಹಚ್ಚುವುದು.
3. ಸಾಗುವಾನಿ ಕುಡಿ ಕೊಬ್ಬರಿ ಎಣ್ಣೆಯೊಂದಿಗೆ ಕುದಿಸಿ ಹಚ್ಚುವುದು.

ಕಾಲು ಒಡೆಯುವುದು (Cracks in soles, heels):

1. ಲಿಂಬೆ ಸಿಪ್ಪೆಯಿಂದ ಪಾದವನ್ನು ತಿಕ್ಕಿ ಸೀಗೆಪುಡಿ ಹಾಕಿ ಕಾಲುತೊಳೆಯುವುದು.
2. ಸೂರಳಿಗಿಡದ ಕಷಾಯವನ್ನು ಜೀರಿಗೆ, ಸಕ್ಕರೆ ಅಥವಾ ಬೆಲ್ಲದೊಂದಿಗೆ ಕುಡಿಯುವುದು.

ತಲೆನೋವು (Headache):

1. ನುಗ್ಗೆಸೊಪ್ಪನ್ನು ಅರೆದು ತಲೆಗೆ ಹಚ್ಚುವುದು.
2. ಕಂಚಿಹಣ್ಣನ್ನು ಸುಟ್ಟು ಭಾಗಮಾಡಿ ತಲೆಯ ಮಧ್ಯ ಭಾಗದಲ್ಲಿಟ್ಟು ಕಟ್ಟುವುದು (ಪಿತ್ತದ ತಲೆ ನೋವು)
3. ಅಗಳ ಶುಂಠಿ ಸೊಪ್ಪಿನ ಗುಳವನ್ನು ತಲೆಗೆ ಹಚ್ಚುವುದು. (ಪಿತ್ತದ ತಲೆನೋವು).
4. ತುಂಬೆ ಸೊಪ್ಪನ್ನು ಅರೆದು ಬಿಸಿಮಾಡಿ ಹಣೆಗೆ ಹಚ್ಚುವುದು.
5. ಚಂದನವನ್ನು ತೇಯ್ದು ಹಣೆಗೆ ಹಚ್ಚುವುದು.
6. ಮೊಸರಲ್ಲಿ ಕಲ್ಲುಸಕ್ಕರೆ ನೆನಸಿಟ್ಟು ಕುಡಿಯುವುದು. (ಅರೆತಲೆನೋವು).
7. ನೆಲಗಣಿಗ ಬೇರನ್ನು ನೋವಿನ ಎದುರು ಭಾಗದ ಕಿವಿಗೆ ಕಟ್ಟುವುದು. (ಅರೆತಲೆನೋವು).

ಕೂದಲು (Hair)

1. ಗರ್ಗ– ದೂರ್ವೆ (ಗರಿಕೆ), ಒಂದೆಲಗ, ಹೊನಗೊನೆ ಸೊಪ್ಪು– ಇವುಗಳನ್ನು ಕೊಬ್ಬರಿ ಎಣ್ಣೆಯಲ್ಲಿ ಕುದಿಸಿ ತೈಲವನ್ನು ಹಚ್ಚಿದರೆ ಕೂದಲು ಕಪ್ಪಾಗುವುದು.
2. ಹೊನಗೊನೆಸೊಪ್ಪು, ಗರ್ಗ, ಒಂದೆಲಗ, ಲೋಳೆಸರ, ನೆಲ್ಲಿಕಾಯಿ, ಬಿಳಿ ದಾಸವಾಳದ ಹೂ, ಜಟ್ಟಪ್ಪನ ಹೂ, ಮದರಂಗಿ ಸೊಪ್ಪುಗಳನ್ನು ಅರೆದು ಶೋಧಿಸಿ ರಸವನ್ನು ಕುದಿಸಿ ನೀರನ್ನು ಆರಿಸಿ ಮತ್ತೆ ಕೊಬ್ಬರಿ ಎಣ್ಣೆಯೊಂದಿಗೆ ಕುದಿಸಿ ಕೇಶತೈಲವಾಗಿ ಉಪಯೋಗಿಸುವುದು..

3. ಮೆಂತ್ಯ ಅರೆದು ಹಚ್ಚಿದರೆ ತಲೆ ಹೊಟ್ಟು ನಿವಾರಣೆಯಾಗುತ್ತದೆ.

ದೇಹಕ್ಕೆ ತಂಪು ನೀಡಲು:

1. ಮುಟ್ಟಿದರೆ ಮುನಿ ಬೇರಿನ ಕಷಾಯ.
2. ಹರಳು ಬೇರಿನ ಕಷಾಯ.
3. ಸೂರಳೆ ಕುಡಿಯ ತಂಬುಳಿ.
4. ಸುಗಂಧಿ ಬೇರಿನ ಕಷಾಯ.

ಇತರೆ:

1. ಗೋರಾ (measles) ನಿವಾರಣೆಗೆ ಕಹಿಬೇವಿನ ಕಷಾಯ.
2. ನಂಜಿನ ನಿವಾರಣೆಗೆ ಬೀಳುಜಾಜಿ, ಮಲ್ಲಿಗೆ, ಒಳ್ಳೆಕುಡಿಗಳ ಚಿಗುರು ಕಷಾಯ.
3. ಇಂಗನ್ನು ಇಟ್ಟು ಕಟ್ಟುವುದರಿಂದ ಕುರದ ನಿವಾರಣೆ.
4. ಕಣ್ಣು ನೋವಿನ ನಿವಾರಣೆಗೆ ಕೊತ್ತಂಬರಿ ನೀರನ್ನು ಕಣ್ಣಿಗೆ ಬಿಡುವುದು.
5. ಮಕ್ಕಳ ಮಲಬದ್ಧತೆಗೆ ಒಂದು ಹಿಳುಕು ಬೆಳ್ಳುಳ್ಳಿ, 7 ಸೊಪ್ಪು ಕೊಜೊಂಬೆ–ಎರಡನ್ನು ಜಜ್ಜಿ ರಸವನ್ನು 3 ದಿನಗಳ ಕಾಲ ಬೆಳಗ್ಗೆ ಒಂದು ಹೊತ್ತು ಕೊಡುವುದು.
6. ಸ್ತ್ರೀಯರಿಗೆ ಗರ್ಭನಿಲ್ಲಲು ಇಪ್ಪೆ ಮರದ ತೆಪ್ಪೆ, ಜೀರಿಗೆ ಕಷಾಯಕ್ಕೆ ಹಾಲುಸೇರಿಸಿ ಮೂರು ತಿಂಗಳು ಕುಡಿಯುವುದು.
7. ರಕ್ತಹೀನತೆಗೆ ನುಗ್ಗೆಸೊಪ್ಪು ಹೂಗಳ ಉಪಯೋಗ.
8. ಸ್ತ್ರೀಯರ ಬಿಳಿಸೆರಗಿಗೆ.
   ಅ. ಗೋಳಿಮರದ ಎಳೆಬೇರಿನ ತುದಿ, ಜೀರಿಗೆ ಕಷಾಯ ಹಾಲಿನಲ್ಲಿ.
   ಆ. ರಕ್ತಹೊನ್ನೆತೊಪ್ಪೆ ಜೀರಿಗೆ ಕಷಾಯ ಹಾಲಿನಲ್ಲಿ.
   ಇ. ಬಿಳಿಹಾಲುವಾಣದ ತೊಪ್ಪೆ ಜೀರಿಗೆ ಕಷಾಯ.
   ಈ. ಅತ್ತಿ ತೊಪ್ಪೆ ಜೀರಿಗೆ ಕಷಾಯ.
   ಉ. ನಾಚಿಕೆಮುಳ್ಳಿನ ಕಷಾಯ.
9. ಕಾಲುನೋವಿಗೆ– ಕೊಬ್ಬರಿಎಣ್ಣೆ, ಉಪ್ಪು, ಬೆಳ್ಳುಳ್ಳಿಗಳ ಮಿಶ್ರಣ ಚೆನ್ನಾಗಿ ತಿಕ್ಕುವುದು.
10. ಒಂದೆಲಗ, ಕಾಳು ಮೆಣಸುಗಳನ್ನು ಸೇರಿಸಿ ತಿನ್ನುವುದರಿಂದ ಉಗ್ಗು ನಿವಾರಣೆ, ಉಚ್ಚಾರಣೆ ಸ್ಪಷ್ಟವಾಗುತ್ತದೆ.
11. ಮೂಗು ಅಥವಾ ಕಿವಿಚುಚ್ಚಿದಾಗ ಬೆಳೆಯುವ ದುರ್ಮಾಂಸಕ್ಕೆ (ಆರಿ) ಅರ್ಧ ಕಾಳುಮೆಣಸನ್ನು

ಹಾಲಿನಲ್ಲಿ ತೇಯ್ದು ಹಚ್ಚಬೇಕು.

12. ಕಾಲಿನಲ್ಲಿ ಆಗುವ ಕೆಸರು ಹುಣ್ಣಿಗೆ.

ಅ. ಹಳದಿ ಗೊರಟೆ (ಸ್ಫಟಿಕ)ಯ ಸೊಪ್ಪನ್ನು ಜಜ್ಜಿ ಶೇಂಗಾ ಎಣ್ಣೆಯ ಜೊತೆಗೆ ಕುದಿಸಿ ಹಚ್ಚುವುದು.

ಆ. ಬಾಳೆದಂಟನ್ನು ಒಲೆಗೆ ಹಾಕಿ ಬಿಸಿ ಇರುವಾಗ ಬೆರಳಿನ ಸಂದಿಯಲ್ಲಿಡಬೇಕು.[2]

ಪಶುವೈದ್ಯ:

1. ಕೆಚ್ಚಲು ಬಾವಿಗೆ ಹಲಸಿನ ಅಣಬೆಯನ್ನು ಕಂಚಿ ರಸದಲ್ಲಿ ತೇಯ್ದು ಬಿಸಿಮಾಡಿ ದಿನಕ್ಕೆ ನಾಲ್ಕು ಬಾರಿ ಹಚ್ಚುವುದು.

2. ಹಾಲು ಕುಡಿಯುವ ಎಮ್ಮೆ ಕರುಗಳಿಗೆ ಹೊಟ್ಟೆ ಹುಳುವಾದಾಗ.

ಅ. ತಗ್ಗೀಸೊಪ್ಪನ್ನು ಅರೆದು ಕುಡಿಸುವುದು.

ಆ. ಹಾಗಲ ಸೊಪ್ಪಿನರಸ 20 ದಿನಗಳಿಗೊಮ್ಮೆ ಹಾಲು ಕುಡಿಯುವ ಮೊದಲು ಕುಡಿಸುವುದು.

3. ದನ, ಎಮ್ಮೆಗಳಿಗೆ ಹಾವು ಕಚ್ಚಿದಾಗ ಕಚ್ಚಿದ ಒಂದು ಘಂಟೆಯೊಳಗೆ ಮದ್ದರಸದ ತೆಪ್ಪೆಯನ್ನು ಬಾಯಲ್ಲಿ ಜಗಿದು ರಸವನ್ನು ಅವುಗಳ ಕಣ್ಣುಮೂಗುಗಳಿಗೆ ಉಗಿಯುವುದು. ಚರಟವನ್ನು ಬೆನ್ನಿಗೆ ಮೈಗೆ ತಿಕ್ಕುವುದು.

4. ಮನುಷ್ಯರು ಕಡಿದ ಕಳಲೆಯನ್ನು ತಿಂದ ದನಕರುಗಳಿಗೆ ಚಗಚೆ ಸೊಪ್ಪನ್ನು ಹುಳಿ ಮಜ್ಜಿಗೆಯೊಂದಿಗೆ ಅರೆದು ಕುಡಿಸುವುದು.

ಕಾಯಿಲೆ ಮತ್ತು ಔಷಧಗಳ ಮೇಲ್ಕಂಡ ವಿವರಗಳ ಸಮೀಕ್ಷೆಯಿಂದ ಹಲವು ಅಂಶಗಳು ಪ್ರಮುಖವಾಗಿ ಕಾಣುತ್ತವೆ.

ಲಭ್ಯಮಾಹಿತಿಯಂತೆ ಹೆಚ್ಚಿನ ಔಷಧಗಳನ್ನು ಬಹುತೇಕ ವೈದ್ಯರು ಸಮಾನವಾಗಿಯೇ ಸೂಚಿಸಿರುವುದರಿಂದ ಈ ಚಿಕಿತ್ಸೆಗಳು ವಿಶ್ವಾಸಾರ್ಹ ಮತ್ತು ಪರಿಣಾಮಕಾರಿ ಎನ್ನುವುದು ಸ್ಪಷ್ಟವಾಗುತ್ತದೆ. ಒಂದೇ ಮೂಲಿಕೆಯನ್ನು ಹಲವು ಚಿಕಿತ್ಸೆಗಳಿಗೆ ಉಪಯೋಗಿಸಿಕೊಂಡು ಬಂದಿರುವುದರಿಂದ ಅವುಗಳು ಬಹುಬೇಗನೆ ನಾಶವಾಗುವ ಸಾಧ್ಯತೆ ಹೆಚ್ಚು.[3] ಚಿಕಿತ್ಸೆಗೆ ಉಪಯೋಗಿಸುವ ದ್ರವ್ಯಗಳೆಲ್ಲವೂ ಸುಲಭವಾಗಿ ಮನೆಯಲ್ಲಿ ಹಾಗೂ ಸುತ್ತಮುತ್ತ ದೊರೆಯುವಂತಹವು. ಔಷಧಿ ತಯಾರಿಕೆಯೂ ವಿಶೇಷ ಶ್ರಮದ್ದಲ್ಲ. ಆದ್ದರಿಂದ ಬಳಕೆಯೂ ಸುಲಭ, ವೆಚ್ಚವೂ ಅಲ್ಪ. ಔಷಧಗಳಿಂದ ದುಷ್ಪರಿಣಾಮಗಳು ಇಲ್ಲ.

3.2 ಜನಪದ ಕ್ರೀಡೆ:

ಶೃಂಗೇರಿ ಸುತ್ತಮುತ್ತಲ ಜನಪದ ಕ್ರೀಡೆಗಳು

ಶೃಂಗೇರಿ ಸುತ್ತಮುತ್ತಲ ಮಲೆನಾಡಿನ ಪರಿಸರಕ್ಕೆ ಹೊಂದಿಕೆಯಾಗುವ ಕೆಲವಷ್ಟು ಆಟಗಳನ್ನು ಪರಂಪರಾಗತವಾಗಿ ನಡೆಸಿಕೊಂಡು ಬಂದಿದ್ದಾರೆ. ಅವುಗಳಲ್ಲಿ ಪುರುಷರ ಕ್ರೀಡೆ ಮತ್ತು ಮಹಿಳೆಯರ ಕ್ರೀಡೆಗಳಿದ್ದು ಉತ್ಸಾಹ ಹಾಗೂ ಕ್ರೀಡಾಮನೋಭಾವದಿಂದ ಆಡುತ್ತಾರೆ. ಹಬ್ಬ ಹರಿದಿನಗಳಂದು ಮನರಂಜನೆಗಾಗಿ ಆಡುತ್ತಾರೆ. ಮಕ್ಕಳ ಆಟಗಳೂ ಇವೆ.

ಪುರುಷರ ಆಟಗಳು:

ಗೋಲಿ, ಚಿನ್ನಿದಾಂಡು, ಲಗೋರಿ, ಮರಕೋತಿ, ಕಬಡ್ಡಿ, ಕಾಯಿಜೂಜು, ಬುಗುರಿ,

ಮಹಿಳೆಯರ ಆಟಗಳು:

ಕುಂಟಾಪಿಲ್ಲೆ, ಕಣ್ಣಾಮುಚ್ಚಾಲೆ, ಹಗ್ಗದಾಟ, ಕಲ್ಲಾಟ, ಚನ್ನೆಮಣೆ, ಚೌಕಾಬಾರ, ಪರಮಪದ ಸೋಪಾನ, ಹಾವು-ಏಣಿ

ವಯೋಧರ್ಮಕ್ಕೆ ಅನುಗುಣವಾಗಿ ಮಲೆನಾಡಿನ ಪರಿಸರಕ್ಕೆ ಹೊಂದಿಕೆಯಾಗುವ ಮಕ್ಕಳ ಆಟಗಳಾದ ಮಣ್ಣಾಟ, ಕಲ್ಲಾಟ, ಮನೆಕಟ್ಟುವುದು, ಜೋಕಾಲಿ, ಕುಸ್ತಿ, ಓಟ, ಹಾರುವುದು ಇತ್ಯಾದಿ ಆಟಗಳನ್ನು ಆಡುತ್ತಾರೆ.

ಗೋಲಿ:

ಇಬ್ಬರಿಗಿಂತ ಹೆಚ್ಚು ಮಂದಿ ಏಕಕಾಲದಲ್ಲಿ ಆಡಬಹುದು. ಎರಡು ಇಂಚು ಆಳ ಹಾಗೂ ವ್ಯಾಸವಿರುವ ಒಂದು ಹೊಂಡವನ್ನು ನೆಲದಲ್ಲಿ ತೆಗೆದಿರುತ್ತಾರೆ. ಕನಿಷ್ಠ ಮೂರು ಮೀಟರ್ ದೂರದಿಂದ ಎಲ್ಲರೂ ಸಾಲಾಗಿ ನಿಂತು ತಮ್ಮ ಗೋಲಿಗಳನ್ನು ಆ ಹೊಂಡಕ್ಕೆ ಹಾಕುತ್ತಾರೆ. ಹೊಂಡಕ್ಕೆ ಯಾರ ಗೋಲಿ ಬೀಳುತ್ತದೆಯೋ ಆತ ಮೊದಲಿಗೆ ಇತರೆಯವರ ಗೋಲಿಗೆ ಹೊಡೆಯುತ್ತಾನೆ. ನಂತರ ಯಾರ ಗೋಲಿ ಆ ಹೊಂಡದ ಸಮೀಪವಿರುತ್ತದೆಯೋ ಆತ ಪ್ರಾರಂಭಿಸುತ್ತಾನೆ. ಹೊಂಡಕ್ಕೆ ಗೋಲಿ ಬಿದ್ದಾಗ ಎಂಟು ಅಂಕಗಳು ಹೊಂಡದಿಂದ ಇನ್ನೊಬ್ಬರ ಗೋಲಿಗೆ ತನ್ನ ಮಧ್ಯಬೆರಳಿಗೆ ಗೋಲಿಯನ್ನು ಇಟ್ಟು ಗುರಿಯಿಂದ ಹೊಡೆಯುತ್ತಾನೆ. ಅವನ ಗೋಲಿಗೆ ತಾಗಿದರೆ ಒಂಬತ್ತು ಅಂಕವಾಗುತ್ತದೆ. ನಂತರ ಆತ ಆ ಗೋಲಿಯನ್ನು ಮತ್ತೆ ಹೊಂಡಕ್ಕೆ ಹಾಕಬೇಕು. ಹೊಂಡಕ್ಕೆ ಬಿದ್ದರೆ ಹತ್ತು ಅಂಕಗಳು. ಬಿದ್ದವನು ಆಟ ಆರಂಭಿಸುತ್ತಾನೆ. ಹೀಗೆ ಗರಿಷ್ಠ ಹನ್ನೆರಡು ಅಂಕಗಳು ಬಂದಾಗ ಆತ ಗೆದ್ದನೆಂದು ತೀರ್ಮಾನಿಸುತ್ತಾರೆ.

ಗೋಲಿ ಆಟವಾಡುವಾಗ ಮೊದಲನೆಯದಾಗಿ ಇನ್ನೊಬ್ಬರ ಗೋಲಿಯನ್ನು ಹೊಡೆದು ಪುಡಿಮಾಡಿದರೆ ದೊಡ್ಡ ಸಾಧನೆ ಮಾಡಿದಂತೆ.ಆ ಕಾರಣದಿಂದಾಗಿ ಪ್ರತಿಯೊಬ್ಬರೂ ಬಹಳ ಬಿರುಸಿನಿಂದ ಗೋಲಿಯನ್ನು ಹೊಡೆಯುತ್ತಾರೆ. ಎರಡನೆಯದಾಗಿ ಗುರಿಯಿಟ್ಟು ಹೊಡೆಯುವುದು, ಯಾರು ಹೊಡೆಯುತ್ತಾರೆಯೋ ಅಂತವರು ಗುರಿಕಾರನೆಂಬ ಕೀರ್ತಿಗೆ ಭಾಜನರಾಗುತ್ತಾರೆ. ಮೂರನೆಯದಾಗಿ ಗೋಲಿ ಆಡುವಾಗ ಹೊಂಡದ ಜಾಗಕ್ಕೆ ಬಿದ್ದು ಬೆರಳಿನಿಂದ ಹೊಡೆಯಲು ಸಾಧ್ಯವಾಗದಿದ್ದಾಗ 'ಕುದುರೆ' ಎಂದು ಕೇಳಿ ತನ್ನ ಕಾಲು ಮಂಡಿಯ ಮೇಲೆ ಕೈಯನ್ನಿಟ್ಟು ಅಲ್ಲಿಂದ ಹೊಡೆಯುತ್ತಾರೆ. ಹಾಗೇನಾದರೂ ಬಡಿದರೆ ಇನ್ನೂ ಹೆಚ್ಚಿನ ಗೌರವಕ್ಕೆ ಆತ ಪಾತ್ರನಾಗುತ್ತಾನೆ.[4]

ಹಿಂದೆ ಗೋಲಿಯ ಬದಲಿಗೆ ಕಾಡಿನಲ್ಲಿ ಸಿಗುತ್ತಿದ್ದ 'ಗಜಗ' ವನ್ನು ಉಪಯೋಗಿಸುತ್ತಿದ್ದರು. ಕೆಲವರು ವೃತ್ತಾಕಾರದ ಕಲ್ಲನ್ನು ಬಳಸುತ್ತಿದ್ದರು. ಈಗ ಗಾಜಿನ ವಿವಿಧಾಕಾರದ ಗೋಲಿಗಳು ಸಿಗುತ್ತವೆ. ಅದರಲ್ಲಿ ಆಡುತ್ತಾರೆ. ಚಿಕ್ಕಮಕ್ಕಳಿಂದ ಯುವಕರು ಸಹ ಈ ಆಟವನ್ನು ಆಡುತ್ತಾರೆ. ಆಧುನಿಕ ಕ್ರೀಡೆಗಳು ಬಂದಿರುವುದರಿಂದ ಗೋಲಿ ಆಟ ಕಡಿಮೆಯಾಗಿದೆ.

ಚಿನ್ನಿದಾಂಡು:

ಚಿನ್ನಿದಾಂಡು ಅಥವಾ ಚಿಣ್ಣಿದಾಂಡು ಆಟವೆಂದು ಕರೆಯಲಾಗುತ್ತದೆ. ಒಂದು ಅಂಗುಲ ವ್ಯಾಸ ಒಂದು ಅಡಿ ಉದ್ದದ ಮರದ ಒಂದು ತುಂಡು ಅದನ್ನು 'ದಾಂಡು' ಎಂದು ಕರೆಯುತ್ತಾರೆ. ಅರ್ಧಅಂಗುಲ ವ್ಯಾಸ ನಾಲ್ಕು ಅಂಗುಲ ಉದ್ದವಿದ್ದು ಅದರ ಎರಡೂ ತುದಿಗಳನ್ನು ಚೂಪಮಾಡಿರುತ್ತಾರೆ. ಒಂದಕ್ಕಿಂದ ಹೆಚ್ಚು ಜನ ಸೇರಿ ಆಡುವ ಆಟವಾಗಿದೆ. ಎರಡು ರೀತಿಯಲ್ಲಿ ಈ ಆಟವನ್ನು ಇಲ್ಲಿ ಆಡುತ್ತಾರೆ. ಒಂದನೇ ಕ್ರಮವೆಂದರೆ ಒಂದು ಅಡಿ ಚೌಕಾಕಾರದ ಗೆರೆಯನ್ನು ನೆಲದಲ್ಲಿ ಎಳದಿರುತ್ತಾರೆ. ಅದರೊಳಗೆ ಚಿನ್ನಿಯನ್ನು ಇಟ್ಟು ದಾಂಡಿನಿಂದ ಚಿಣ್ಣಿಯ ತುದಿಗೆ ಹೊಡೆದು ಅದನ್ನು ನೆಲದ ಮೇಲೆ ಬರುವಂತೆ ಮಾಡಿ ಆ ಕೂಡಲೆ ಅದಕ್ಕೆ ದಾಂಡಿನಿಂದ ಮತ್ತೆ ಹೊಡೆಯುತ್ತಾರೆ. ಇನ್ನೊಂದು ಕ್ರಮದ ಆಟವೆಂದರೆ ಒಂದಡಿ ಚೌಕಾಕಾರದ ಗೆರೆಯೊಳಗೆ ಒಂದು ಅಂಗುಲ ಅಗಲ ಆರು ಅಂಗುಲ ಉದ್ದವಿರುವ ಓಣಿಯನ್ನು ತೆಗೆದು ಅದರ ಮೇಲೆ ಚಿಣ್ಣಿಯನ್ನು ಅಡ್ಡಲಾಗಿಟ್ಟು ದಾಂಡಿನಿಂದ ಅದನ್ನು ಎತ್ತಿ ಎಸೆಯುತ್ತಾರೆ. ಉಳಿದ ಆಟಗಾರರು ಮುಂದೆ ನಿಂತು ಅವನ ಚಿಣ್ಣಿಯನ್ನು ಕ್ಯಾಚ್ ಹಿಡಿಯಲು ನಿಂತಿರುತ್ತಾರೆ. ಕ್ಯಾಚ್ ಹಿಡಿದರೆ ಆತ ಸೋತಂತೆ ನಂತರ ಇನ್ನೊಬ್ಬರು ಆಟವನ್ನು ಪ್ರಾರಂಭಿಸುತ್ತಾರೆ.

ಚಿಣ್ಣಿಯನ್ನು ಒಬ್ಬ ಮೂರು ಬಾರಿ ಹೊಡೆದು ಮುಂದೆ ಕಳುಹಿಸಬಹುದು. ಕ್ಯಾಚ್ ಹಿಡಿದರೆ ಆತ ಔಟ್ ಆಗುತ್ತಾನೆ. ಮೂರನೆಯ ಹೊಡೆತದ ಸಮಯ ಆ ಚಿಣ್ಣಿಯು ಪ್ರಾರಂಭಿಸಿದ ದೂರದಿಂದ ಈಗಿನ ದೂರದವರೆಗೆ ಇರುವ ದೂರವನ್ನು ದಾಂಡಿನ ಲೆಕ್ಕದಂತೆ ಅಂದಾಜಿನ ಮೇಲೆ ಆತ ಐವತ್ತು

ನೂರು ನೂರಐವತ್ತು ಹೀಗೆ ಹೇಳುತ್ತಾನೆ. ಆ ಅಂತರ ಅಷ್ಟಿದ್ದರೆ ಪ್ರತಿಸ್ಪರ್ಧಿಗಳು ಒಪ್ಪಿಗೆ ಸೂಚಿಸುತ್ತಾರೆ. ಇಲ್ಲವಾದರೆ ಅಳೆಯುತ್ತಾರೆ. ಅಳೆದಾಗ ಅವನು ಹೇಳಿದ ದೂರದಷ್ಟು ಅದಿಲ್ಲದಿದ್ದರೆ ಅವನು ಸೋತಂತೆ. ಈ ಮಧ್ಯೆ ಆತ ಕೊನೆಯ ಅಳತೆಯ ಲೆಕ್ಕವನ್ನು ಹೇಳುವ ಮೊದಲು 'ಜಂಪ್' ಎಂದು ಕೇಳಬೇಕು. ಚಿಣ್ಣಿ ಬಿದ್ದ ಸ್ಥಳದಿಂದ ಪ್ರಾರಂಭಿಸಿದ ಸ್ಥಳದ ವರೆಗೆ ಹಾರಿದರೆ ಆಗಲೂ ಆತ ಸೋತಂತೆ. ಚಿಣ್ಣಿಗೆ ಹೊಡೆಯುವಾಗ ಕೆಲವೊಮ್ಮೆ ನೆಲಕ್ಕೆ ದಾಂಡು ಬಡಿಯುವುದಿರುತ್ತದೆ. ಆ ಕೂಡಲೆ 'ಉಫೀಟ್' ಹೇಳಿದರೆ ಪರಿಹಾರವಾದಂತೆ ಅವನು ಉಫೀಟ್ ಹೇಳದಿದ್ದರೆ ಪ್ರತಿಸ್ಪರ್ಧಿಗಳು 'ತುರ್ಚಿಪ್' ಎಂದು ಹೇಳಿ ಅವನನ್ನು ಔಟ್ ಮಾಡುತ್ತಾರೆ.[5]

ಈಗ ಚಿನ್ನಿದಾಂಡು ಆಡುವವರೂ ಇಲ್ಲ. ಆಸಕ್ತಿಯೂ ಇಲ್ಲ. ಅದಕ್ಕೆ ಬೇಕಾದ ಸ್ಥಳ, ಸಂದರ್ಭಗಳು ಸಿಗುತ್ತಿಲ್ಲ. ಈ ಎಲ್ಲಾ ಕಾರಣಗಳಿಗೆ ಅನುಗುಣವಾಗಿ ಮಾಧ್ಯಮಗಳು, ಬೇರೆ ಬೇರೆ ಸೌಲಭ್ಯಗಳು, ಹೊಸ ಹೊಸ ಆಟಗಳು ಬಂದಿರುವುದರಿಂದ ಈ ಆಟವನ್ನು ಆಡುವವರಿಲ್ಲ.

ಲಗೋರಿ:

ಕಾಯಿ ಚಿಪ್ಪುಗಳು ಹಂಚಿನ ಚೂರುಗಳು ಅಥವಾ ಚಪ್ಪಟೆ ಕಲ್ಲುಗಳನ್ನು ಒಂದರ ಮೇಲೊಂದರಂತೆ ಕಟ್ಟುತ್ತಾರೆ. ಬಟ್ಟೆಯನ್ನು ಸುತ್ತಿ ಮಾಡಿದ ಚೆಂಡನ್ನು ಅದಕ್ಕೆ ಹೊಡೆಯುತ್ತಾರೆ. ಲಗೋರಿ ಕಟ್ಟಿದ ಹಿಂಬದಿಯಲ್ಲಿ ಉಳಿದ ಆಟಗಾರರಿದ್ದು ಚೆಂಡನ್ನು ಹಿಡಿಯಲು ನಿಂತಿರುತ್ತಾರೆ. ಚೆಂಡು ಲಗೋರಿ ಕಲ್ಲುಗಳಿಗೆ ತಾಗದೆ ಪಿಚ್ ಎದ್ದು ನೇರವಾಗಿ ಹಿಂದಿನವರ ಕೈಗೆ ಸಿಕ್ಕರೆ ಆತ ಔಟ್ ಆಗುತ್ತಾನೆ. ಲಗೋರಿ ಕಲ್ಲಿಗೆ ತಾಗಿದರೆ ಎದುರು ಪಕ್ಷದವರು ಆ ಚೆಂಡನ್ನು ಹಿಡಿದು ಲಗೋರಿ ಬೀಳಿಸಿದ ತಂಡದವರಿಗೆ ಹೊಡೆಯುತ್ತಾರೆ. ಲಗೋರಿ ಬೀಳಿಸಿದವರು ಚೆಂಡಿನ ಹೊಡೆತವನ್ನು ತಿನ್ನದೆ ಲಗೋರಿ ಕಲ್ಲುಗಳನ್ನು ಮೊದಲಿನಂತೆ ಕಟ್ಟಿ ಜೋರಾಗಿ 'ಲಗೋರಿ' ಎಂದು ಕೂಗಿದರೆ ಗೆದ್ದಂತೆ. ಚೆಂಡೇಟು ಬಿದ್ದರೆ ಔಟಾಗುತ್ತಾರೆ.[6] ಇದು ತುಂಬಾ ಸ್ವಾರಸ್ಯಕರ ಮನರಂಜನೆಯ ಆಟವಾಗಿದೆ. ಗುಂಪು ಆಟವಾಗಿರುವುದರಿಂದ ಹೆಚ್ಚಿನ ಸಮೂಹ ಸ್ಫೂರ್ತಿಗೆ ಅವಕಾಶವಿದೆ. ಮಲೆನಾಡಭಾಗದಲ್ಲಿ ಹೆಚ್ಚು ಜನಪ್ರಿಯಗೊಂಡ ಆಟವಾಗಿತ್ತು. ಹಬ್ಬಾಚರಣೆ, ಶುಭ ಸಮಾರಂಭಗಳಂದು ನೆಂಟರಿಷ್ಟರು ಬಂದವರು ಸೇರಿ ಆಡುತ್ತಿದ್ದರು. ಈಗ ಆಟ ಆಡುವವರಿಲ್ಲ. ಪ್ರೋತ್ಸಾಹವಿಲ್ಲವಾಗಿದೆ.

ಮರಕೋತಿ:

ಗಟ್ಟಿ ಜಾತಿಯ ಮರವಾಗಿದ್ದು, ತುಂಬ ರೆಂಬೆಗಳಿದ್ದು, ಆ ರೆಂಬೆಗಳು ನೆಲಕ್ಕೆ ಸಮೀಪವಾಗಿ ಚಾಚಿದ್ದರೆ ಅಂತಹ ಮರವನ್ನು ಮರಕೋತಿ ಆಟಕ್ಕೆ ಬಳಸುತ್ತಿದ್ದರು. ತುಂಬ ಜನ ಸೇರಿ ಆಡುವ ಆಟವಾಗಿದೆ. ಒಂದು ಕಟ್ಟಿಗೆ ತುಂಡನ್ನು ಕಾಲಡಿಯಿಂದ ದೂರ ಎಸೆಯುತ್ತಾರೆ. ಒಬ್ಬ ಓಡಿ ಹೋಗಿ

ಆ ಕಟ್ಟಿಗೆ ತುಂಡನ್ನು ತಂದು ಮರದ ಕೆಳಗೆ ಇಡುತ್ತಾನೆ. ಅಷ್ಟರೊಳಗೆ ಉಳಿದವರೆಲ್ಲರು ಆ ಮರಹತ್ತಿ ಮೇಲೆ ಹೋಗಿರುತ್ತಾರೆ. ಕಟ್ಟಿಗೆ ತುಂಡನ್ನು ಮುಟ್ಟಿದರೆ ಮುಟ್ಟಿದವನು ಗೆದ್ದಂತೆಯೆ. ಆತ ಆ ಕಟ್ಟಿಗೆ ತುಂಡನ್ನು ಮುಟ್ಟುವುದರೊಳಗೆ ಅವರಲ್ಲಿ ಯಾರನ್ನಾದರೂ ಮುಟ್ಟಿದರೆ ಅವರು ಸೋತಂತೆ. ಆಗ ಆತ ಇನ್ನೊಬ್ಬ ಎಸೆದ ಕಟ್ಟಿಗೆ ತುಂಡನ್ನು ತಂದು ಮರದ ಕೆಳಗಿಟ್ಟು ಉಳಿದವರನ್ನು ಹಿಡಿಯಲು ಪ್ರಯತ್ನಿಸಬೇಕು.[7] ತುಂಬಾ ರೋಚಕ ಮನರಂಜನಾತ್ಮಕ ಆಟವಾಗಿದೆ. ಮಲೆನಾಡಭಾಗದಲ್ಲಿ ಪ್ರಶಸ್ತವಾದ ಮರವಿದ್ದರೆ ಅಲ್ಲಿ ಆಡುತ್ತಿದ್ದರು. ಶಾಲೆಯಲ್ಲಿ ಕಾರ್ಯಕ್ರಮಗಳೇನಾದರೂ ನಡೆದರೆ ಆ ಪರಿಸರದಲ್ಲಿ ಇಂತಹ ಆಟಗಳು ನಡೆಯುತ್ತಿದ್ದವು. ಈಗ ಅನುಕೂಲವಾದ ಮರವೂ ಸಿಗುವುದಿಲ್ಲ ಆಟ ಆಡುವವರೂ ಇಲ್ಲ. ಆಟದ ನಿಯಮ ಕ್ರಮಗಳು ಈಗಿನ ಪೀಳಿಗೆಯವರಿಗೆ ಗೊತ್ತಿಲ್ಲ.

ಕಬಡ್ಡಿ:

ಗುಂಪು ಆಟವಾಗಿದ್ದು ಎರಡು ತಂಡಗಳ ನಡುವೆ ನಡೆಯುತ್ತದೆ. ಅಂಕಗಳ ಆಧಾರದ ಮೇಲೆ ಸೋಲು ಗೆಲುವು ನಿರ್ಧಾರವಾಗುತ್ತದೆ. ಮಲೆನಾಡ ಭಾಗದಲ್ಲಿ ತನ್ನದೇ ಆದ ರೀತಿ ನಿಯಮವನ್ನು ಹೊಂದಿದ ಕಬಡ್ಡಿ ಆಟ ಚಾಲನೆಯಲ್ಲಿತ್ತು. ದೃಢಕಾಯರಾದ ಆಟಗಾರರು ಆಡುತ್ತಿದ್ದರು. ಕಬಡ್ಡಿ ಕೋರ್ಟನ್ನು ಬಿಟ್ಟು ಎಲ್ಲಿಂದಲಾದರೂ ಓಡಿ ಬಂದರೂ ರೈಡ್‌ಮಾಡುವವನು ಔಟಲ್ಲ. ಕಬಡ್ಡಿ ಎನ್ನುವಾಗ ಉಸಿರನ್ನು ತೆಗೆದುಕೊಂಡರೂ ಔಟಲ್ಲ.[8] ಈಗ ಬಹಳಷ್ಟು ಮಾರ್ಪಾಟಿನೊಂದಿಗೆ ಆಡುತ್ತಿದ್ದಾರೆ. ಸಾಮಾನ್ಯವಾಗಿ ಎಲ್ಲಿಯೇ ಕಬಡ್ಡಿ ಆಟನಡೆದರೂ ಅಲ್ಲಿ ಜಗಳ, ಗಲಾಟೆ, ಹೊಡೆದಾಟ, ನಡೆಯದ ಉದಾಹರಣೆಯೇ ಇಲ್ಲ. ಯಾರು ಯಾರೊಬ್ಬರು ಹೇಳಿದ ಮಾತನ್ನು ಕೇಳುವುದಿಲ್ಲ. ಸಾಮಾನ್ಯ ಹಬ್ಬಹರಿದಿನಗಳಂದು ಸಭೆ ಸಮಾರಂಭಗಳಂದು ಶಾಲೆಗಳಲ್ಲಿ ನಡೆಯುವ ಕಾರ್ಯಕ್ರಮಗಳಂದು ಕಬಡ್ಡಿ ಆಟ ನಡೆಯುತ್ತಿತ್ತು. ಈಗ ಕಡಿಮೆಯಾಗಿದೆ. ಶಾಲಾಮಕ್ಕಳಿಗೆ ಯುವ ಜನರ ಕ್ರೀಡಾಸ್ಪರ್ಧೆಯಂದು ಮಾತ್ರಾ ನಡೆಸುತ್ತಾರೆ. ಈಗ ಇಚ್ಚೆಯಿಂದ ಕಬಡ್ಡಿ ಆಟ ಆಡುತ್ತಿಲ್ಲ. ಸ್ಪರ್ಧೆಯ ಕಾರಣದಿಂದ ಮಾರ್ಗದರ್ಶಕರ ನಿರ್ದೇಶನದಂತೆ ಆಟಗಳನ್ನು ನಡೆಸಲಾಗುತ್ತದೆ.

ಕಾಯಿಜೂಜು:

ಗೌರಿ ಹಬ್ಬದಂದು ಬ್ರಾಹ್ಮಣೇತರ ವರ್ಗದವರು ನಡೆಸುವ ಸಂಪ್ರದಾಯದ ಆಟವಾಗಿದೆ. ಅಳಿಯ ಮಗಳು ಹಬ್ಬಕ್ಕೆ ಮನೆಗೆ ಬಂದಾಗ ಕಾಯಿ ಗುದ್ದಿ ಒಡೆಯುವುದು, ಕಾಯನ್ನು ದೂರದಲ್ಲಿಟ್ಟು ಕಲ್ಲಿನಿಂದ ಗುರಿಯಿಟ್ಟು ಹೊಡೆದು ಒಡೆಯುವುದು, ಕಾಯಿಗೆ ಕಾಯನ್ನು ಹೊಡೆದು ಒಡೆಯುವುದು, ಸ್ಪರ್ಧೆಯಾಗಿದೆ. ಊರವರು ಸೇರಿ ಹಣವನ್ನು ಪಣವಾಗಿಟ್ಟುಕೊಂಡು ಆಡುತ್ತಾರೆ.[9]

ಪ್ರತ್ಯೇಕವಾಗಿ ಕಾಯನ್ನು ತಂದು ಒಂದುಕಾಯನ್ನು ಮತ್ತೊಂದು ಕಾಯಿಗೆ ನಿಧಾನವಾಗಿ ಗುದ್ದಿಸುತ್ತಾರೆ.

ಯಾರ ಕಾಯಿ ಒಡೆಯುತ್ತದೆಯೋ ಅದನ್ನು ಕಾಯಿ ಒಡೆಯದೆ ಇರುವವನಿಗೆ ಕೊಡಬೇಕು. ನಿಗದಿತ ದೂರದಲ್ಲಿ ಕಾಯನ್ನು ಇಟ್ಟು ಕಲ್ಲಿನಿಂದ ಹೊಡೆಯುತ್ತಾರೆ. ಒಂದು ಕಲ್ಲಿಗೆ ಇಂತಿಷ್ಟು ಬೆಲೆಯೆಂದು ನಿಗದಿಪಡಿಸಿ ಆ ಹಣವನ್ನು ಕಾಯಿಯ ಯಜಮಾನನಿಗೆ ಕೊಟ್ಟು ಕಲ್ಲನ್ನು ಹೊಡೆಯಬೇಕು. ಕಾಯಿ ಒಡೆದರೆ ಅದು ಅವನಿಗೆ ಕಾಯಿಗೆ ಕಲ್ಲುತಾಗಿಯೂ ಒಡೆಯದಿದ್ದರೆ ಉಚಿತವಾಗಿ ಇನ್ನೊಂದು ಕಲ್ಲನ್ನು ಹೊಡೆಯಲು ಕೊಡುತ್ತಾರೆ. ಕಾಯನ್ನು ಹೊಸಿಲು ಅಥವಾ ನೆಲದ ಮೇಲೆ ಉಪ್ಪಿನ ಹರಳು ಅಥವಾ ಕೆಸುವಿನ ದಡಿಯ ಮೇಲಿಟ್ಟು ಕೈಯಿಂದ ಗುದ್ದಿ ಒಡೆಯುತ್ತಾರೆ. ಒಂದೇ ಏಟಿಗೆ ಒಡೆದರೆ ಪೌರುಷವಂತನೆಂಬ ಕೀರ್ತಿಗೆ ಪಾತ್ರನಾಗುತ್ತಾನೆ.

ಬುಗುರಿ:

ಮರದ ತುಂಡನ್ನು ಕೆತ್ತಿ ತ್ರಿಕೋನಾಕೃತಿಯ ವೃತ್ತವನ್ನು ಮಾಡಿ ಅದರ ತುದಿಗೆ ಮೊಳೆಯನ್ನು ಹೊಡೆದು ದಾರವನ್ನು ಸುತ್ತಿ ತಿರುಗಿಸಿ ಬಿಡುವುದು. ಗುಂಪಾಗಿ ಸೇರಿ ಆಡುವ ಆಟವಾಗಿದೆ. ನೆಲದಲ್ಲಿ ವೃತ್ತಾಕಾರವಾಗಿ ಗುರುತನ್ನು ಹಾಕಿ ಅಂಕಣವನ್ನು ಮಾಡಿಕೊಂಡಿರುತ್ತಾರೆ. ಪ್ರತಿಯೊಬ್ಬರು ಒಂದೇ ಸಾರಿ ಬುಗುರಿಯನ್ನು ನೆಲಕ್ಕೆ ಬಿಟ್ಟು ಹಗ್ಗದ ಸಹಾಯದಿಂದ ಮೇಲೆತ್ತಿ ಕೈಗೆ ತೆಗೆದುಕೊಳ್ಳಬೇಕು. ಯಾರಿಗೆ ಹೀಗೆ ಮಾಡಲು ಸಾಧ್ಯವಾಗುವುದಿಲ್ಲವೋ ಆ ಬುಗುರಿಯನ್ನು ಅಂಕಣದೊಳಗೆ ಇಡಬೇಕು. ಉಳಿದವರು ತಮ್ಮ ಬುಗುರಿಯಿಂದ ಅವನ ಬುಗುರಿಗೆ ಹೊಡೆದು ಆ ಜಾಗದಿಂದ ಹೊರಹಾಕುತ್ತಾರೆ. ಹೀಗೆ ಹೊಡೆದಾಗ ಬುಗುರಿಯ ಮೇಲಾಗುವ ಗಾಯಕ್ಕೆ 'ಗುನ್ನ' ಎಂದು ಕರೆಯುತ್ತಾರೆ. ಎಷ್ಟೋ ಬುಗುರಿಗಳು ಗುನ್ನಾ ಬಿದ್ದು ಚೂರಾಗುವ ಸಾಧ್ಯತೆಯಿದೆ. ನಿಗದಿ ಪಡಿಸಿದ ಅಂಕಣದೊಳಗೆ ಬೀಳದೆ ಬಲಭಾಗಕ್ಕೆ ಬಿದ್ದರೆ ಆತನೂ ತನ್ನ ಬುಗುರಿಯನ್ನು ಅಂಕಣದೊಳಗೆ ಇಡಬೇಕು.[10]

ಮಲೆನಾಡಿನಲ್ಲಿ ಬುಗುರಿ ಆಟವು ಹೆಚ್ಚು ಮೆಚ್ಚುಗೆಗೆ ಪಾತ್ರವಾಗಿತ್ತು. ಪ್ರತಿಯೊಬ್ಬರೂ ಬುಗುರಿ ಆಡುತ್ತಿದ್ದರು. ಬುಗುರಿ ಕೆತ್ತುವುದಾಗಲಿ ಅದಕ್ಕೆ ಮೊಳೆ ಹೊಡೆಯುವುದಾಗಲಿ, ದಾರ ಹೊಸೆಯುವುದಾಗಲಿ ವಿಶೇಷ ಖುಷಿಯನ್ನು ನೀಡುತ್ತಿತ್ತು. ಈಗ ಆಡುವವರೇ ಇಲ್ಲ. ಆಟದ ನಿಯಮಗಳೂ ಗೊತ್ತಿಲ್ಲದೆ ಮಲೆನಾಡ ಕ್ರೀಡಾ ಚಟುವಟಿಕೆಗಳು ನಶಿಸಿಹೋಗಿವೆ.

ಚೆಂಡಾಟ:

ಬಟ್ಟೆಯನ್ನು ಉಂಡೆಯಾಗಿ ಸುತ್ತಿ ಒಬ್ಬರಿಗೊಬ್ಬರು ಹೊಡೆದುಕೊಳ್ಳುವುದು, ಒಬ್ಬರಿಗೊಬ್ಬರು ಚೆಂಡನ್ನು ಹಾರಿಸಿ ಹಿಡಿಯುವುದು, ನೆಲದಲ್ಲಿ ಚೆಂಡನ್ನು ಉರುಳಿಸುವುದು. ಹೀಗೆ ವೈವಿಧ್ಯಮಯವಾಗಿ ಚೆಂಡನ್ನು ಬಳಸುತ್ತಿದ್ದರು. ಚಿಕ್ಕಮಕ್ಕಳು ಇಂತಹ ಚೆಂಡುಗಳನ್ನು ಆಟದ ವಸ್ತುವಾಗಿ ಬಳಸುತ್ತಿದ್ದರು. ಈಗ ಪ್ಲಾಸ್ಟಿಕ್, ರಬ್ಬರ್ ಹಾಗೂ ಬೇರೆ ಬೇರೆ ವಸ್ತುಗಳನ್ನು ವಿವಿಧ ಆಕಾರಗಳಲ್ಲಿ ಮಾಡಿ ಆಡಲು ಬಳಸುತ್ತಿದ್ದಾರೆ.

ಇಸ್ಪೀಟು:

ಆಧುನಿಕ ಶೈಲಿಯ ಆಟವಾಗಿದೆ. ಇದರಲ್ಲಿ ವೈವಿಧ್ಯಮಯ ಆಟಗಳಿವೆ ಹಣವನ್ನು ಹಾಕಿ ಆಟವಾಡುತ್ತಾರೆ. ಇಸ್ಪೀಟು ಆಟದಿಂದ ಹಣ, ನೆಮ್ಮದಿ ಕಳೆದುಕೊಂಡಿದ್ದಾರೆ. ಕುಟುಂಬ ಹಾಳಾಗಿದೆ. ಆರೋಗ್ಯ ಹದಗೆಟ್ಟಿದೆ. ಶೃಂಗೇರಿ ಸುತ್ತಮುತ್ತ ಇಸ್ಪೀಟು ಆಟಗಾರರ ಸಂಖ್ಯೆ ಕಡಿಮೆಯಿದೆ. ಕೆಲವರು ಸಮಾರಂಭಗಳಂದು ಹವ್ಯಾಸಕ್ಕಾಗಿ ಸ್ವಲ್ಪ ಹಣ ತೊಡಗಿಸಿ ಆಡುತ್ತಾರೆ.[11]

ಮಹಿಳೆಯರ ಆಟ:

ಕುಂಟಾಪಿಲ್ಲೆ:

ಮಲೆನಾಡಭಾಗದಲ್ಲಿ ಕುಂಟಾಪಿಲ್ಲೆ ಮಹಿಳೆಯರ ಪ್ರಸಿದ್ಧವಾದ ಆಟವಾಗಿತ್ತು. ಪ್ರತಿಯೊಬ್ಬರ ಮನೆಯ ಮುಂದೆಯು ನೆಲದಲ್ಲಿ ಮನೆಗಳನ್ನು ಹಾಕಿ ಆಟವಾಡುತ್ತಿದ್ದರು. ನಾಲ್ಕಾರು ಮಂದಿ ಸೇರಿ ಆಡುತ್ತಿದ್ದರು. ಕಲ್ಲನ್ನು ಮನೆ ಮನೆಗೆ ಹಾಕಿ ಕಾಲಿನಿಂದ ಮುಂದಿನ ಮನೆಗೆ ತಳ್ಳುತ್ತಾ ಸಾಗುವುದು. ಎಲ್ಲೂ ತಪ್ಪಾಗದೆ ಮುಂದೆ ಸಾಗಿದರೆ ಕಲ್ಲನ್ನು ಹಣೆ ಅಥವಾ ತಲೆಮೇಲೆ ಇಟ್ಟುಕೊಂಡು ಮನೆಯಿಂದ ಮನೆಗೆ ಹಾರಬೇಕು. ಆ ಎಲ್ಲಾ ಸುತ್ತುಗಳನ್ನು ಯಶಸ್ವಿಯಾಗಿ ನಡೆಸಿದರೆ ಗೆದ್ದಂತೆಯೆ ಬೌದ್ಧಿಕ ಶಕ್ತಿ ಸಾಮರ್ಥ್ಯದ ಹಾಗೂ ಜಾಣ್ಮೆಯ ಆಟವಾಗಿದೆ.

ಈಗ ಮಹಿಳೆಯರಿಗೆ ಗ್ರಾಮೀಣ ಆಟಗಳ ಬಗ್ಗೆ ಆಸಕ್ತಿಯಿಲ್ಲ. ಗೃಹಕೃತ್ಯದ ಜೊತೆಗೆ ಟಿ.ವಿ.ಧಾರಾವಾಹಿಯ ವೀಕ್ಷಣೆ, ಅಕ್ಕಪಕ್ಕದವರೊಂದಿಗೆ ಮಾತು, ಸಂಭಾಷಣೆ, ಓಡಾಟ ಹೀಗೆ ಇತರೆ ಚಟುವಟಿಕೆಯಲ್ಲಿ ತೊಡಗಿರುವುದರಿಂದ ಆಟವಾಡಲು ಸಮಯವಿಲ್ಲ. ಆಸಕ್ತಿಯೂ ಇಲ್ಲ.

ಕಣ್ಣಾಮುಚ್ಚಾಲೆ:

ಅಜ್ಜಿಯನ್ನು ಕಣ ಅಥವಾ ಅಂಗಳದ ಮಧ್ಯದಲ್ಲಿ ಕೂರಿಸಿ ಯಾರನ್ನಾದರೂ ಆ ಅಜ್ಜಿ ಕಣ್ಣುಮುಚ್ಚಿಟ್ಟು "ಕಣ್ಣಾಮುಚ್ಚೆ ಕಾಡೆ ಗೂಡೆ ಉದ್ದಿನ ಮೂಟೆ ಉರುಳೆ ಹೋಯ್ತು ನಮ್ಮಯ ಹಕ್ಕಿ ಬಿಟ್ಟೆ ಬಿಟ್ಟೇ ನಿಮ್ಮಯ ಹಕ್ಕಿ ಅಡಗಿಸಿಕೊಳ್ಳಿ" ಎಂದು ಹೇಳುತ್ತಾಳೆ. ಉಳಿದವರೆಲ್ಲರೂ ಮರೆಯಲ್ಲಿ ಅಡಗಿಕುಳಿತಿರುತ್ತಾರೆ. ಅಡಗಿ ಕುಳಿತವರು ಓಡಿ ಬಂದು ಅಜ್ಜಿಯನ್ನು ಮುಟ್ಟಿದರೆ ಗೆದ್ದಂತೆ. ಅಜ್ಜಿಯನ್ನು ಮುಟ್ಟುವ ಮೊದಲೆ ಕಣ್ಣುಮುಚ್ಚಿಸಿಕೊಂಡವರು ಬೇರೆಯಾರನ್ನಾದೂ ಹಿಡಿದರೆ ಸೋತಂತೆ. ನಂತರ ಅವರು ಬೇರೆಯವರನ್ನು ಹಿಡಿಯಬೇಕು[12] ಈ ರೀತಿಯ ಸಾಂಪ್ರದಾಯಿಕ ಕಣ್ಣಾಮುಚ್ಚಾಲೆ ಮರೆಯಾಗಿ ಹೋಗಿದೆ. ಬದಲಾಗಿ ಕಣ್ಣಿಗೆ ಬಟ್ಟೆಕಟ್ಟಿ ಸುತ್ತು ಬರಸಿ ಬಿಡುವುದು, ಅವರು ಒಂದು ದೊಣ್ಣೆ ಅಥವಾ ಕೋಲನ್ನು ಬೀಸುತ್ತಾ ಹೋಗಿ ಅಲ್ಲಿ ಇಟ್ಟಿರುವ ವಸ್ತುವಿಗೆ ತಾಗಿಸಿದರೆ ಗೆದ್ದಂತೆಯೆ ಈ ಬಗೆಯ ಕಣ್ಣಾಮುಚ್ಚಾಲೆ ಚಾಲನೆಯಲ್ಲಿದೆ. ನೆಲದಲ್ಲಿ ವೃತ್ತಾಕಾರವಾಗಿ ದೊಡ್ಡಗೆರೆಯನ್ನು ಎಳೆದು ಅದರ

ಸುತ್ತಾ ಮಹಿಳೆಯರು ಇರುತ್ತಾರೆ. ಕಣ್ಣಿಗೆ ಬಟ್ಟೆಕಟ್ಟಿ ಬಿಟ್ಟಿರುವ ಹೆಂಗಸು ಅವರನ್ನು ಒಂದು ನಿಮಿಷದೊಳಗೆ ಮುಟ್ಟಬೇಕು. ಮುಟ್ಟದಿದ್ದರೆ ಸೋತಂತೆ.

ಹಗ್ಗದಾಟ:

ಕಿರುಬೆರಳುಗಾತ್ರದ ಹಗ್ಗವನ್ನು ಹಿಡಿದುಕೊಂಡು ತನ್ನದೇಹದ ತಲೆ ಪಾದಗಳಿಗೆ ತಾಗದಂತೆ ನೆಗೆಯುತ್ತಾ ಹಗ್ಗವನ್ನು ತೂರಿಸುತ್ತಾ ಆಡುವ ಆಟವಾಗಿದೆ. ಆಧುನಿಕ ಪರಿಭಾಷೆಯಲ್ಲಿ ಇದನ್ನು 'ಸ್ಕಿಪಿಂಗ್' ಎಂದು ಕರೆಯುತ್ತಾರೆ. ಹಿಂದೆ ಹಗ್ಗದಾಟವನ್ನು ಆಡುತ್ತಿದ್ದರು. ಈಗ ಯಾರೂ ಆಡುತ್ತಿಲ್ಲ. ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾದ ಆಟ ಇದಾಗಿತ್ತು. ಮಕ್ಕಳು, ಯುವತಿಯರು, ಮಹಿಳೆಯರು ಹೆಚ್ಚಾಗಿ ಆಡುತ್ತಿದ್ದರು.

ಕಲ್ಲಾಟ:

ಕಲ್ಲಾಟಗಳಲ್ಲಿ ಅನೇಕ ವಿಧಗಳಿದ್ದು ಆಯಾಯ ಪ್ರಾಂತ್ಯಕ್ಕೆ ಅನುಗುಣವಾಗಿ ಆಟವನ್ನು ಆಡುತ್ತಿದ್ದರು. ಆಯಾ ಆಟವನ್ನು ಎಲ್ಲರೂ ಒಪ್ಪಿಕೊಂಡು ಆಡುತ್ತಿದ್ದರು.ಸಾಮಾನ್ಯವಾಗಿ ಮೂರು ಕಲ್ಲುಗಳನ್ನು ಇಟ್ಟುಕೊಂಡು ಮೂರನ್ನು ಮೇಲೆ ಹಾರಿಸಿ ಮೇಗೈನಲ್ಲಿ ಹಿಡಿಯಬೇಕು. ನಂತರ ಮೇಗೈಯಲ್ಲಿದ್ದ ಕಲ್ಲನ್ನು ಮತ್ತೆ ಮೇಲೆ ಹಾರಿಸಿ ನಂತರ ಹಿಡಿಯ ಬೇಕು. ಹಿಡಿಯುವಾಗ ಕಲ್ಲು ಕೆಳಗೆ ಬೀಳಬಾರದು ಎಲ್ಲವನ್ನೂ ಕ್ರಮವಾಗಿ ಹಿಡಿದು ಆಡುತ್ತಾ ಮುಂದೆ ಮುಂದೆ ಸಾಗುವುದು ಇದರ ಲಕ್ಷಣವಾಗಿದೆ. ಈಗ ಕಲ್ಲಾಟ ಆಡುವವರೇ ಇಲ್ಲ.

ಚನ್ನೆಮಣೆ:

ಮದುವೆ ವಿಶೇಷ ಸಮಾರಂಭಗಳಲ್ಲಿ ಮಹಿಳೆಯರು ಚನ್ನೆಮಣೆ ಆಟ ಆಡುತ್ತಿದ್ದರು. ವಿರಾಮದ ವೇಳೆಯ ಸದುಪಯೋಗಕ್ಕೆ ಈ ಆಟವನ್ನು ಆಡುತ್ತಿದ್ದರು. ಇಬ್ಬರು ಏಕಕಾಲದಲ್ಲಿ ಆಡಬಹುದಾದ ಆಟವಾಗಿದೆ. ಮಣೆಯಲ್ಲಿ ಒಂದು ಸಾಲಿನಲ್ಲಿ ಏಳು ಇನ್ನೊಂದು ಸಾಲಿನಲ್ಲಿ ಏಳು ಹೊಂಡ(ಗುಣಿ)ಗಳನ್ನು ಮಾಡಿರುತ್ತಾರೆ. ಮಣೆಯ ತುದಿಯಲ್ಲಿ ಎರಡು ದೊಡ್ಡ ಗಾತ್ರದ ಹೊಂಡಗಳನ್ನು ಮಾಡಿರುತ್ತಾರೆ. ಪ್ರತಿಯೊಂದು ಹೊಂಡಕ್ಕೂ ತಲಾ ನಾಲ್ಕು ಚನ್ನೆಬೀಜ ಹಾಕಲಾಗುತ್ತದೆ. ಆಟವಾಡುವಾಗ ನಾಲ್ಕು ಬೀಜಗಳು ತುಂಬಿದರೆ ಕರು ಹಾಕಿತೆಂದು, ಮೂರು ಬೀಜವಾದರೆ ಗಬ್ಬವೆಂದು ಇದರ ಪರಿಭಾಷೆಯಲ್ಲಿ ಕರೆಯಲಾಗುತ್ತದೆ. ಬೀಜಹಾಕಿ ಮುಕ್ತಾಯವಾದ ಹೊಂಡದ ನಂತರದ ಹೊಂಡ ಖಾಲಿ ಇದ್ದು ಅದರ ಪಕ್ಕದಲ್ಲಿ ಇದ್ದ ಹೊಂಡದ ಚನ್ನೆಬೀಜಗಳು ಅವರಿಗೆ ಸೇರುತ್ತದೆ. ಆಟ ಮುಕ್ತಾಯವಾದ ನಂತರ ತಮಗೆ ಬಂದ ಚನ್ನೆಬೀಜಗಳನ್ನು ತಮ್ಮ ಮಣೆಯ ಹೊಂಡಗಳಿಗೆ ಹಾಕಿ ಹೊಂಡ ಖಾಲಿ

ಉಳಿದರೆ ಅವನ್ನು ಮುಚ್ಚಿಕೊಳ್ಳಬೇಕು. ಅದಕ್ಕೆ ಮುಚ್ಚುವ ವಸ್ತುವಿಗೆ ಹೇಲುತುಂಬುವುದು ಎಂದು ಕರೆಯುತ್ತಾರೆ.[13]

ಇಲ್ಲಿಯ ವಾತಾವರಣ ಹಾಗೂ ಪರಿಸರಕ್ಕೆ ಹೊಂದಿಕೆಯಾದ ಜನಪದ ಕ್ರೀಡೆಗಳು ಪರಂಪರಾಗತವಾಗಿ ರೂಢಿಯಲ್ಲಿದ್ದವು. ಸ್ವಾತಂತ್ರ್ಯೋತ್ತರದ ಮೂರ್‍ನಾಲ್ಕು ದಶಕದವರೆಗೂ ಈ ಕ್ರೀಡೆಗಳು ಬಳಕೆಯಲ್ಲಿದ್ದವು. ಆಧುನಿಕ ಶೈಲಿಯ ಕ್ರೀಡೆಗಳು ಹಾಗೂ ಯಾಂತ್ರಿಕ ಹೊಸ ಆವಿಷ್ಕಾರದಿಂದಾಗಿ ಜನಪದ ಕ್ರೀಡೆಗಳನ್ನು ನಿರ್ಲಕ್ಷಿಸಲಾಯಿತು. ಈಗ ಇಂತಹ ಕ್ರೀಡೆಗಳನ್ನು ಆಡುವವರೇ ಇಲ್ಲವಾಗಿದ್ದಾರೆ. ತನ್ನದೇ ಆದ ಮಹತ್ವ ಹಿನ್ನೆಲೆಯನ್ನೊಳಗೊಂಡು ಆರಂಭಗೊಂಡ ಜನಪದ ಕ್ರೀಡೆಯ ಪ್ರತಿಯೊಂದರಲ್ಲೂ ವಿಶೇಷತೆಯಿರುತ್ತಿತ್ತು. ಆಡುಗರಿಗೆ ಹಾಗೂ ನೋಡುಗರಿಗೆ ಆನಂದ, ಮೋಜು, ಉಲ್ಲಾಸವನ್ನುಂಟುಮಾಡುವುದಲ್ಲದೇ ಸಂಘಟನೆ, ವಿರಾಮ ಸಮಯದ ಸದುಪಯೋಗ, ಸ್ಪರ್ಧಾಮನೋಭಾವ ಹಾಗೂ ದೈಹಿಕ ಮತ್ತು ಬೌದ್ಧಿಕ ಅಭಿವೃದ್ಧಿ ಮೊದಲಾದವುಗಳಿಗೆ ಪೂರಕವಾಗಿದ್ದವು. ಪ್ರತಿಯೊಬ್ಬರ ವಯೋಧರ್ಮಕ್ಕನುಗುಣವಾದ ಕ್ರೀಡೆಗಳಿದ್ದವು. ಈಗ ಬೇರೆಲ್ಲಾ ಆಧುನಿಕ ಕ್ರೀಡೆಗಳನ್ನು ಹಿಂದೆ ಸರಿಸಿ, ಜನಪದ ಕ್ರೀಡೆಯನ್ನು ಸಂಪೂರ್ಣವಾಗಿ ನಿರ್ನಾಮಮಾಡಿ ಹೆಚ್ಚು ಜನಪ್ರಿಯವಾದ ಕ್ರಿಕೆಟ್ 'ಆಟಗಳ ರಾಜ' ಎಂದೆನಿಸಿಕೊಂಡಿದೆ.

3.3 ಧಾರ್ಮಿಕ ಪರಂಪರೆ :

ಅಗ್ರಹಾರಗಳು:

ಸುಮಾರು ಕ್ರಿ.ಶ.5ನೇ ಶತಮಾನದಿಂದ 19ನೇ ಶತಮಾನದವರೆಗೂ ಕರ್ನಾಟಕದ ಸಂಸ್ಕೃತಿಯ ಬೆಳವಣಿಗೆಯಲ್ಲಿ ಅಗ್ರಹಾರಗಳು ಪ್ರಮುಖ ಪಾತ್ರವಹಿಸಿದ್ದವು.

ಅಗ್ರಹಾರವೆಂದರೆ ಬ್ರಾಹ್ಮಣರಿಗೆ ದಾನವಾಗಿ ಕೊಡಲಾದ ಹಳ್ಳಿ ಅಥವಾ ಹಳ್ಳಿಯ ಭಾಗ. ಅಲ್ಲಿಯ ಸಕಲ ಸಾಮ್ರಾಜ್ಯವು ಬ್ರಾಹ್ಮಣರಿಗೇ ಸೇರಿದ್ದು. ಅಗ್ರಹಾರದಲ್ಲಿ ಬ್ರಾಹ್ಮಣೇತರರು ಇರುತ್ತಿದ್ದರೆಂದು ಕೆಲ ವಿದ್ವಾಂಸರ ಅಭಿಪ್ರಾಯ. ಅಗ್ರಹಾರದಲ್ಲಿ ವಾಸ ಮಾಡುವ ಜನರು ಮಹಾಜನಗಳು ಎಂದು ಉಲ್ಲೇಖದಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಅಗ್ರಹಾರದ ಮಹಾಜನರೆಲ್ಲರ ಒಟ್ಟುಗೂಡುವಿಕೆಯನ್ನು 'ಮಹಾಜನಸಭೆ' ಎಂದು ಕರೆಯಲಾಗುತ್ತಿತ್ತು. ಈ ಮಹಾಜನ ಸಭೆಯೇ ಆಡಳಿತ ಸೂತ್ರವಹಿಸುತ್ತಿತ್ತು. ಅಂದರೆ ಈ ಅಗ್ರಹಾರವು ಮಹಾಜನ ಆಡಳಿತದ ಒಂದು ಅಂಗವಾಗಿಯೇ ಇತ್ತು. ಮಹಾಜನರೆಲ್ಲರೂ ಅಗ್ರಹಾರದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಒಂದು ಅರ್ಥದಲ್ಲಿ ಅಗ್ರಹಾರಗಳು ವಿದ್ಯಾಕೇಂದ್ರಗಳಾಗಿ ವಿದ್ಯಾರ್ಜನೆಯು ಇಲ್ಲಿ ನಿರಂತರವಾಗಿ ನಡೆಯುತ್ತಿತ್ತು. ಆಗಿನ ವಿದ್ವಾಂಸರು ನಾಲ್ಕು ವೇದಗಳು, ವೈಶೇಷಿಕ, ನ್ಯಾಯ, ಸಾಂಖ್ಯ, ಲೋಕಾಯತ, ಮೀಮಾಂಸಗಳನ್ನು ಬಲ್ಲವರಾಗಿಯೂ, ತರ್ಕ, ವ್ಯಾಕರಣ, ಇತಿಹಾಸ, ಮಹಾಭಾರತ, ಕಾಮಶಾಸ್ತ್ರ, ನಾಟಕ, ಗಣಿತ ಮುಂತಾದ ವಿಷಯಗಳಲ್ಲಿ

ಪರಿಣಿತರಾಗಿಯೂ ಇದ್ದರೆಂದು ತಿಳಿಯುತ್ತದೆ. ಒಟ್ಟಾರೆ ಹೇಳುವುದಾದರೆ ಅಗ್ರಹಾರಗಳು ಧಾರ್ಮಿಕ ಮತ್ತು ಲೌಕಿಕ ಅಧ್ಯಯನದ ಕೇಂದ್ರಗಳೇ ಆಗಿದ್ದವು. ಮಹಾಜನ ಸಭೆಯು ಧಾರ್ಮಿಕ ಮತ್ತು ಜನೋಪಯೋಗಿ ಕಾಯಕಗಳಲ್ಲೂ ಸಾಕಷ್ಟು ಆಸಕ್ತಿಯನ್ನು ವಹಿಸುತಿತ್ತು ಎಂಬುದನ್ನು ಉಲ್ಲೇಖಗಳು ತಿಳಿಸುತ್ತವೆ. ಇದರಲ್ಲಿ ಮುಖ್ಯವಾಗಿ ದೇವಾಲಯಗಳ ಆಡಳಿತ, ಕೆರೆಕಟ್ಟೆಗಳ ನಿರ್ಮಾಣ, ವಿಶೇಷ ಸಂದರ್ಭಗಳಲ್ಲಿ ನ್ಯಾಯ ನಿರ್ಣಯ ಇತ್ಯಾದಿ.

ಕ್ರಿ.ಶ.1386ಕ್ಕೆ ಅಂದರೆ ವಿದ್ಯಾರಣ್ಯಪುರ ಅಗ್ರಹಾರ ಸ್ಥಾಪನೆಗೂ ಮುಂಚೆ ಇದರ ಸುತ್ತಮುತ್ತಲಲ್ಲಿ ಕೆಲವು ಅಗ್ರಹಾರಗಳಿದ್ದುವೆಂಬುದಕ್ಕೆ ಶಾಸನಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಉದಾ:- ಸಿಂಹಗಿರಿ, ಬೆಳ್ಳೂರು, ಹರಾವರಿ ಇತ್ಯಾದಿ. ಮುಂದೆ ಕೂಡ ಈ ಅಗ್ರಹಾರಗಳು ಅಸ್ತಿತ್ವದಲ್ಲಿದ್ದವು. ಆದರೆ ಕ್ರಿ.ಶ.1386ರ ನಂತರ ವಿದ್ಯಾರಣ್ಯಪುರ ಅಗ್ರಹಾರಕ್ಕೆ ವಿಶೇಷವಾದ ಸ್ಥಾನ ದೊರೆಯಿತು. ಇದಕ್ಕೆ ಮುಖ್ಯಕಾರಣವೆಂದರೆ ಇದು ವಿದ್ಯಾ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದುದು. ವಿದ್ಯಾಕೇಂದ್ರವಾಗಿದ್ದುದರಿಂದ ಪಂಡಿತರು ಬೇರೆ ಬೇರೆ ಕಡೆಗಳಿಂದ ಇಲ್ಲಿಗೆ ಬಂದು "ವೃತ್ತಿ" ಯನ್ನು ಗಳಿಸಿಕೊಂಡರು, ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ವಿವಿಧ ಗೋತ್ರ ಮತ್ತು ಸೂತ್ರದ ಬ್ರಾಹ್ಮಣರು ಇಲ್ಲಿಗೆ ಖಂಡಿತವಾಗಿಯೂ ಒಂದೇ ಕಡೆಯಿಂದ ಬಂದಿರಲಿಕ್ಕಿಲ್ಲ. ಸಾಂಸ್ಕೃತಿಕ ಕೇಂದ್ರವಾಗಿ, ವಿದ್ಯಾಕೇಂದ್ರವಾಗಿ ಅದರ ಪ್ರಾಮುಖ್ಯತೆಯು ಹೆಚ್ಚಾಯಿತು. ಹರಿಹರನ ಕಾಲದಲ್ಲಿ ಇದ್ದ 100 ವೃತ್ತಿಗಳು ಮುಂದೆ ಶಿವಪ್ಪ ನಾಯಕನ ಕಾಲದಲ್ಲಿ 350 ವೃತ್ತಿಗಳಾಗಿ ಬೆಳೆದವು.[14]

ಶೃಂಗೇರಿ ತಾಲ್ಲೂಕಿನಲ್ಲಿರುವ ಪ್ರಮುಖ ಅಗ್ರಹಾರಗಳು

ವೈಕುಂಠಪುರ ಅಗ್ರಹಾರ: ಈ ಅಗ್ರಹಾರವು ಶೃಂಗೇರಿಯಿಂದ ತೆಕ್ಕೂರು ಮಾರ್ಗದಲ್ಲಿ ರಸ್ತೆಯ ಅಂಚಿನಲ್ಲಿ ಕಾಣಸಿಗುತ್ತದೆ. ಪಾಂಡುರಂಗವಿಠಲ ದೇವರು ಪ್ರಧಾನವಾಗಿದ್ದು ಜೊತೆಯಲ್ಲಿ ವಿರೂಪಾಕ್ಷ, ವಿಶ್ವೇಶ್ವರ ದೇವರ ಮೂರ್ತಿಗಳಿವೆ. ಮಾಘ ಶುದ್ಧ ಚೌತಿ ಮತ್ತು ಪಂಚಮಿಯಂದು ರಥೋತ್ಸವವು ವಿಜೃಂಭಣೆಯಿಂದ ನಡೆಯುತ್ತದೆ. ರಾಮೋತ್ಸವ ಇಲ್ಲಿನ ಇನ್ನೊಂದು ವಿಶೇಷ ಉತ್ಸವವಾಗಿದ್ದು, ಪ್ರತಿದಿನ ಇಲ್ಲಿ ಬೆಳಗ್ಗೆ 8 ರಿಂದ 9-30ರವರೆಗೆ ಪೂಜೆ ನಡೆಯುತ್ತದೆ.

ನೆಮ್ಮಾರು ಅಗ್ರಹಾರ: ಶೃಂಗೇರಿಯಿಂದ ಕಾರ್ಕಳ ಹೋಗುವ ದಾರಿಯ ಮಧ್ಯದಲ್ಲಿ ಸುಮಾರು 8 ಕಿ.ಮೀ ದೂರದಲ್ಲಿ ನೆಮ್ಮಾರು ಅಗ್ರಹಾರ ಸಿಗುತ್ತದೆ. ತುಂಗಾನದಿಯ ದಂಡೆಯ ಮೇಲಿರುವ ಈ ದೇವಾಲಯ ಒಂದೇ ಗರ್ಭಗುಡಿಯ ಒಳಗಡೆ ಎರಡು ದೇವರ ವಿಗ್ರಹಗಳಿಂದಾಗಿ ಕುತೂಹಲ ಮೂಡಿಸುತ್ತದೆ. ಶ್ರೀ ಲಕ್ಷ್ಮೀವೆಂಕಟರಮಣ ಮತ್ತು ಶ್ರೀ ರಾಮೇಶ್ವರ ಎರಡು ವಿಗ್ರಹಗಳು ಒಂದರ ಹಿಂದೆ ಒಂದು ಸ್ಥಾಪಿಸಲಾಗಿದ್ದು ಇಲ್ಲಿ ರಾಮೋತ್ಸವ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಪ್ರತಿ ಶನಿವಾರ ವಿಶೇಷ ಪೂಜೆಯಿದ್ದು, ಪ್ರತಿದಿನ 7 ರಿಂದ 8-30ರ ವರೆಗೆ ಪೂಜೆ ನಡೆಯುತ್ತದೆ.

ವಿದ್ಯಾರಣ್ಯಪುರ ಅಗ್ರಹಾರ: ಶೃಂಗೇರಿಯಿಂದ ಅರ್ಧ ಕಿ.ಮೀ ದೂರದಲ್ಲಿರುವ ವಿದ್ಯಾರಣ್ಯಪುರ ಅಗ್ರಹಾರವು ಅನೇಕ ದೇವರುಗಳ ದೇವಾಲಯಗಳಿಂದ ಕೂಡಿದ್ದು, ನದಿಯ ಆಚೆದಡದಲ್ಲಿರುವ ಈ ಊರಿನಲ್ಲಿ ವಿದ್ಯಾಶಂಕರ ವಡ್ಡಾಮಲ್ಲೇಶ್ವರ, ದತ್ತಾತ್ರೇಯ, ಪರಶುರಾಮ, ಶ್ರೀರಾಮ, ವಿದ್ಯಾರಣ್ಯರು ಹೀಗೆ ಹಲವಾರು ದೇವಾಲಯಗಳಿವೆ.

ಅಕ್ಷಯ ತೃತಿಯದಂದು ಪರಶುರಾಮಜಯಂತಿ, ಮಾರ್ಗಶಿರ ಶುದ್ಧ ಹುಣ್ಣಿಮೆಯಂದು ದತ್ತಾತ್ರೇಯ ಜಯಂತಿ ವೈಶಾಖ ಶುದ್ಧ ಹುಣ್ಣಿಮೆಯಂದು ವಿದ್ಯಾಶಂಕರ ವಡ್ಡಮಲ್ಲೇಶ್ವರ, ವೈಶಾಖ ಶುದ್ಧ ಚತುರ್ದಶಿಯಂದು ಪ್ರತಿಷ್ಠಾನ ವರ್ಧಂತಿ ಮತ್ತು ಕಾರ್ತಿಕ ದೀಪೋತ್ಸವಗಳು ಶ್ರೀ ದತ್ತಾತ್ರೇಯ, ಪರಶುರಾಮ, ವಡ್ಡಾಮಲ್ಲೇಶ್ವರ ದೇವಸ್ಥಾನದ ವಿಶೇಷ ಪೂಜೆಗಳಾಗಿರುತ್ತವೆ. ವಿದ್ಯಾರಣ್ಯ ದೇವಾಲಯದಲ್ಲಿ ಶಂಕರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಶ್ರೀ ರಾಮ ದೇವಸ್ಥಾನದಲ್ಲಿ ಶ್ರೀ ರಾಮೋತ್ಸವವನ್ನು ಮತ್ತು ಕಾರ್ತಿಕ ಮಾಸ ದೀಪೋತ್ಸವವನ್ನು ವೈಭವದಿಂದ ಆಚರಿಸಲಾಗುತ್ತದೆ. ಒಂದೇ ಕಲ್ಲಿನಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಮೂರ್ತಿಗಳಿರುವ ಈ ವಿದ್ಯಾಶಂಕರ ದೇವರ ಮೂರ್ತಿಯು ಸುಂದರ ಕೆತ್ತನೆಗಳಿಂದ ಕೂಡಿದ್ದು ತುಂಬಾ ಆಕರ್ಷಣೀಯವಾಗಿದೆ. ಹಳೆ ಶೃಂಗೇರಿ ಎಂದೇ ಗುರುತಿಸಲ್ಪಡುವ ಇಲ್ಲಿ ಶ್ರೀ ಮಠದ ವಿಶೇಷ ಪೂಜಾ ದಿನದಂದು ಇಲ್ಲಿಯೂ ಸಹ ವಿಶೇಷ ಪೂಜೆ ನಡೆಯುತ್ತದೆ.

ಸಚ್ಚಿದಾನಂದಪುರ ಅಗ್ರಹಾರ : ಶೃಂಗೇರಿಯ ಸಮೀಪದ ಸಚ್ಚಿದಾನಂದಪುರ ಅಗ್ರಹಾರವು ಪ್ರಮುಖ ಅಗ್ರಹಾರಗಳಲ್ಲಿ ಒಂದಾಗಿತ್ತು. ಅಗ್ರಹಾರದಲ್ಲಿದ್ದ ಬ್ರಾಹ್ಮಣರು ಇತ್ತೀಚೆಗೆ ಇತರೆಯವರಿಗೆ ಮನೆ, ನಿವೇಶನಗಳನ್ನು ಮಾರಾಟಮಾಡಿ ಹೊರ ಊರಿನಲ್ಲಿದ್ದಾರೆ. ನಗರದ ಕಡೆಗೆ ವಲಸೆ ಮತ್ತು ಪಟ್ಟಣದ ಸನಿಹ ಮನೆ ನಿರ್ಮಾಣ ಮಾಡಬೇಕೆಂಬ ಹಂಬಲದಿಂದ ಅನೇಕರು ಇಲ್ಲಿ ಮನೆ ನಿರ್ಮಾಣ ಮಾಡಿಕೊಂಡಿದ್ದಾರೆ. ಅಗ್ರಹಾರವಾಗಿತ್ತೆಂಬ ಸುಳುಹು ಈಗ ಕಾಣದಾಗಿದೆ.

ಆನೆಗುಂದ ಅಗ್ರಹಾರ: ಶೃಂಗೇರಿಯಿಂದ ಕೊಪ್ಪ ಮಾರ್ಗದಲ್ಲಿ ಒಂದು ಕಿ.ಮೀ ದೂರದಲ್ಲಿ ತುಂಗಾ ನದಿಯ ದಂಡೆಯ ಮೇಲೆ ರಸ್ತೆಯ ಅಂಚಿನಲ್ಲಿರುವ ಈ ಅಗ್ರಹಾರವು ಶ್ರೀ ವೇಣುಗೋಪಾಲಕೃಷ್ಣ ಮತ್ತು ಶ್ರೀ ಗಂಗಾಧರೇಶ್ವರ ದೇವರ ದೇವಾಲಯವಾಗಿದ್ದು ಇಲ್ಲಿ ಶ್ರೀ ವೇಣುಗೋಪಾಲ ಕೃಷ್ಣಸ್ವಾಮಿ ಪ್ರಧಾನವಾಗಿದ್ದು ಪ್ರತಿವರ್ಷ ಜನವರಿ 16 ರಂದು ದಿಂಡಿದೀಪೋತ್ಸವ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಮಾಘ ಶುದ್ಧ ಪಾಡ್ಯ ಬಿದಿಗೆಯಂದು ವಿಶೇಷ ಪೂಜೆಗಳು ಮತ್ತು ಗೋಕುಲಾಷ್ಟಮಿಯಂದು ವಿಶೇಷ ಪೂಜೆ ನಡೆಯುತ್ತದೆ. ನವೀಕರಣಗೊಂಡಿರುವ ಈ ದೇವಾಲಯದ ಪ್ರಾಕಾರವು ಶುಭಸಮಾರಂಭಗಳಿಗೆ ಉಪಯೋಗಿಸಲ್ಪಡುತ್ತಿದೆ.

ಕಾವಡಿ ಅಗ್ರಹಾರ: ಶೃಂಗೇರಿಯಿಂದ ಕೊಪ್ಪ ಮಾರ್ಗದಲ್ಲಿ ನಾಲ್ಕು ಕಿ.ಮೀ ಚಲಿಸಿದರೆ ಕಾವಡಿ ಅಗ್ರಹಾರವು ರಸ್ತೆಯ ಅಂಚಿನಲ್ಲಿಯೇ ಕಾಣಸಿಗುತ್ತದೆ. ಶ್ರೀ ಉಮಾಮಹೇಶ್ವರ ದೇವರ

ದೇವಾಲಯವಿದಾಗಿದ್ದು. ಇಲ್ಲಿ ಪ್ರಥಮ ಏಕಾದಶಿಯಂದು ಸಾಮೂಹಿಕ ಸತ್ಯನಾರಾಯಣ ಪೂಜೆ ಮತ್ತು ಫಾಲ್ಗುಣ ಬಹುಳ ಅಮವಾಸ್ಯೆಯಂದು ರುದ್ರಹೋಮ ಪ್ರತಿವರ್ಷವೂ ನಡೆಯುತ್ತದೆ. ಜೊತೆಗೆ ಕಾರ್ತಿಕ ಹುಣ್ಣಿಮೆಯಂದು ದೀಪೋತ್ಸವ ಮತ್ತು ಉಪಾಕರ್ಮವೂ ಸಹ ಇಲ್ಲಿ ನಡೆಯುತ್ತದೆ. ಪ್ರತಿ ಸೋಮವಾರ ವಿಶೇಷ ಪೂಜೆಯಿದ್ದು, ಬೆಳಗ್ಗೆ 7–30 ರಿಂದ 9–00 ಪೂಜಾ ಸಮಯವಾಗಿದೆ.[15]

ಶೃಂಗೇರಿಯ ಪ್ರೇಕ್ಷಣೀಯ ಸ್ಥಳಗಳು:

ಶೃಂಗೇರಿಯು ಧಾರ್ಮಿಕ ಮಹತ್ವವನ್ನು ಹೊಂದಿದಂತೆಯೇ ಗುಡ್ಡಗಾಡು ಪ್ರದೇಶದ ಕೆಲವು ದಟ್ಟ ಅರಣ್ಯದ ಶೋಲಾ ಪ್ರದೇಶ, ನಡುವಿನ ಜಲಪಾತ, ಪಕ್ಷಿಧಾಮ, ಶಿಖರ ಶ್ರೇಣಿ ಮೊದಲಾದವುಗಳು ಆಕರ್ಷಣೀಯ ಕೇಂದ್ರವಾಗಿ ಪ್ರಕೃತಿಪ್ರಿಯರ ಪ್ರೇಕ್ಷಣೀಯ ಸ್ಥಳವಾಗಿದೆ. ಹಿಂದೆ ವಿಭಾಂಡಕರು, ಋಷ್ಯಶೃಂಗರು, ಆದಿಶಂಕರಾಚಾರ್ಯರು ಮೊದಲಾದ ಪ್ರಮುಖರು ಇಲ್ಲಿಯ ಪರಿಸರ ಹಾಗೂ ವಾತಾವರಣದ ಆಕರ್ಷಣೆಗೆ ಒಳಗಾಗಿರುವುದರಿಂದ ಈಗಲೂ ಈ ಸ್ಥಳದ ಐತಿಹಾಸಿಕ, ಧಾರ್ಮಿಕ ಶ್ರೇಷ್ಠತೆಯು ಅವ್ಯಾಹತವಾಗಿ ಹರಿದುಬರಲು ಹಾಗೂ ಸ್ಥಳ ಮಹಿಮೆಗೆ ಕಾರಣೀಭೂತರಾಗಿದ್ದಾರೆ. ಈಗಲೂ ಸಹ ನಾಡಿನ ಇತರ ಭಾಗದ ಪ್ರೇಕ್ಷಕರನ್ನು ಕೈಬೀಸಿ ಕರೆಯುತ್ತಿದೆ. ಅಂತಹ ಪ್ರಮುಖ ಪ್ರೇಕ್ಷಣೀಯ ಸ್ಥಳಗಳ ಮಹತ್ವ, ಭೌಗೋಳಿಕ ಹಿನ್ನೆಲೆಯನ್ನು ಅಧ್ಯಯನದ ದೃಷ್ಟಿಯಿಂದ ದಾಖಲಿಸಲಾಗಿದೆ.

ಉಳುವೆ ಪಕ್ಷಿಧಾಮ: ಶೃಂಗೇರಿಯಿಂದ ಕೊಪ್ಪ ಮಾರ್ಗಮಧ್ಯ 3 ಕಿ.ಮೀ. ದೂರದಲ್ಲಿ ಸರಕಾರಿ ರಸ್ತೆಯಿಂದ ಕೇವಲ ಒಂದು ಫರ್ಲಾಂಗ್ ದೂರದಲ್ಲಿ ಈ ಸುಂದರ ಪಕ್ಷಿಧಾಮ ಕಾಣಸಿಗುತ್ತದೆ. ದಟ್ಟ ಹಸಿರು ಕಾನನದ ನಡುವೆ ನಿತ್ಯ ನೂತನವಾಗಿ ಕಾಣುವ ಈ ಪಕ್ಷಿಧಾಮವು ಆಕರ್ಷಕವಾಗಿದೆ. ಮಳೆಗಾಲದ ದಿನಗಳಲ್ಲಿ ವಲಸೆ ಪಕ್ಷಿಗಳು ಮರಿಮಾಡುವ ಸಲುವಾಗಿ ಇಲ್ಲಿಗೆ ಬರುತ್ತವೆ. ಇತರೆ ಪಕ್ಷಿಗಳು ಸೂರ್ಯಾಸ್ತ ಸಮಯಕ್ಕೆ ಸರಿಯಾಗಿ ಬಂದು ಗೂಡು ಸೇರಿ ವೀಕ್ಷಕರ ಮನಸ್ಸಿಗೆ ಆನಂದ ಉಂಟುಮಾಡುತ್ತವೆ.

ಸಿರಿಮನೆ ಜಲಪಾತ: ಕಿಗ್ಗದಿಂದ ಸುಮಾರು 5ಕಿ.ಮೀ ದೂರದಲ್ಲಿ ಇರುವ ಈ ಜಲಪಾತ ಸುಮಾರು 53 ಅಡಿಗಳಷ್ಟು ಎತ್ತರದಿಂದ ಧುಮುಕುತ್ತಿದ್ದು ಹಾಲಿನ ನೊರೆಯಂತೆ ಗೋಚರಿಸುತ್ತದೆ. ಮಳೆಗಾಲದಲ್ಲಿ ಮೈತುಂಬುವ ಈ ಜಲಪಾತ ಒಂದಿಷ್ಟು ಸಾಹಸ ಪ್ರವೃತ್ತಿಯವರಿಗೆ ತುಂಬಾ ಆನಂದವನ್ನುಂಟು ಮಾಡುತ್ತದೆ. ಇಲ್ಲಿ ನೈಸರ್ಗಿಕ ಜಲವಿದ್ಯುತ್ ಉತ್ಪಾದಿಸಿ ಈ ಗ್ರಾಮದ ಜನರ ಬಳಕೆಗೆ ಬಳಸಲಾಗುತ್ತಿದೆ.

ಗಂಗಾಮೂಲ: ಶೃಂಗೇರಿಯಿಂದ ಸುಮಾರು 20ಕಿ.ಮೀ. ದೂರದಲ್ಲಿರುವ ಈ ಪ್ರದೇಶವು ಕುದುರೇಮುಖದ ಸನಿಹದಲ್ಲಿದ್ದು ತುಂಗಾನದಿಯ ಉಗಮಸ್ಥಾನವೆಂದು ಗುರುತಿಸಲ್ಪಟ್ಟಿದೆ. ಪ್ರವಾಸಿಗರಿಗೆ ಇದು ತುಂಬಾ ಆಕರ್ಷಣೀಯ ಕೇಂದ್ರವಾಗಿದ್ದು, ಮಳೆಗಾಲ ಹೊರತು ಉಳಿದ ದಿನಗಳಲ್ಲಿ ಇಲ್ಲಿನ ಸೊಬಗು ಸವಿಯಬಹುದು.

ಮಘೇಬೈಲು ಜಲಪಾತ: ಕಿಗ್ಗದಿಂದ 5ಕಿ.ಮೀ. ದೂರದಲ್ಲಿ ಸಿಗುವ ಈ ಜಲಪಾತವು ಸುಮಾರು 60 ಅಡಿಗಳ ಎತ್ತರದಿಂದ ಧುಮುಕುತ್ತಿದೆ. ಇತ್ತೀಚಿನ ದಿನಗಳಲ್ಲಿ ಗ್ರಾಮಸ್ಥರು ಇಲ್ಲಿ ಸ್ವಂತ ವಿದ್ಯುತ್ ತಯಾರಿಸುತ್ತಿದ್ದು ಈ ಊರಿನ ಎಲ್ಲಾ ಜನರ ಮನೆ ಬೆಳಗಲು ಸಹಕಾರಿಯಾಗಿದೆ.

ನರಸಿಂಹಪರ್ವತ:

ಕಿಗ್ಗದ ದೇವಸ್ಥಾನಕ್ಕೆ ಪಶ್ಚಿಮದಿಕ್ಕಿನಲ್ಲಿ ಎತ್ತರವಾದ ನರಸಿಂಹಪರ್ವತವಿದೆ. ದಕ್ಷಿಣಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಗಡಿಯೆಂಬಂತೆ ತಲೆ ಎತ್ತಿ ನಿಂತಿದೆ. ಈ ಪರ್ವತ ಪ್ರವಾಸಿಗರ ಹಾಗೂ ಸಾಹಸಿಗಳ ಆಕರ್ಷಣೆಯಾಗಿದೆ. ಈ ಪರ್ವತ ಯಾತ್ರಾಸ್ಥಳವೆಂಬ ಮನ್ನಣೆಯನ್ನೂ ಪಡೆದಿದೆ. ಪರ್ವತದ ತುದಿಯಲ್ಲಿರುವ ಬಯಲಿನಲ್ಲಿ ಕೊಳವೊಂದಿದೆ (25'x10'). ನಂದಿನಿ ಮತ್ತು ಸೀತಾನದಿಗಳು ಇಲ್ಲಿಂದಲೇ ಹುಟ್ಟುವುದೆಂಬ ಪ್ರತೀತಿ ಇದೆ.[16] ಇನ್ನು ಕೆಲವರ ಅಭಿಪ್ರಾಯದಂತೆ ನಂದಿನೀ. ನಳಿನೀ, ಸೀತಾ ಮಾಲತೀ ಮತ್ತು ಮಲಾಪಹಾ ಎಂಬ ಐದು ನದಿಗಳಿಗೆ ಈ ಕೊಳ ಉಗಮಸ್ಥಾನ. ಪರ್ವತದ ನೈಋತ್ಯ ಮೂಲೆಯಲ್ಲಿ ಆರು ಅಡಿ ಎತ್ತರದ ಕಗ್ಗಲ್ಲೊಂದಿದೆ. ಕಲ್ಲಿನ ಮೇಲ್ಭಾಗದಲ್ಲಿ ಅಸ್ಪಷ್ಟವಾಗಿ ತೋರುವ ಅನೇಕ ರೇಖೆಗಳು, ತಗ್ಗುಗಳು ಕಾಣಿಸುತ್ತವೆ. ಇವು ಹಿರಣ್ಯಕಶಿಪುವನ್ನು ಸಂಹರಿಸುತ್ತಿರುವ ಉಗ್ರನರಸಿಂಹನಂತೆ ತೋರುವುದರಿಂದ ಈ ಕಲ್ಲನ್ನು ನರಸಿಂಹ ಅಥವಾ ಉಗ್ರನರಸಿಂಹನೆಂದು ಕರೆಯುತ್ತಾರೆ. ಇಲ್ಲಿಯೇ ರುದ್ರಪಾದವೂ ಇದೆ. ದಟ್ಟವಾದ ವನರಾಜಿಯಿಂದ ಕಂಗೊಳಿಸುವ ಜನದೂರವಾದ ಈ ಸ್ಥಳ ಮಲೆನಾಡಿನ ಮೂಲಸ್ವರೂಪವನ್ನುಳಿಸಿಕೊಂಡಿದೆ. ಪರ್ವತದ ತುದಿಯಿಂದ ಕಾಣುವ ಸೂರ್ಯೋದಯ ಸೂರ್ಯಾಸ್ತದ ವೀಕ್ಷಣೆ ಒಂದು ರಮಣೀಯ, ಅವಿಸ್ಮರಣೀಯ ಅನುಭವ. ಯಾವುದೇ ವಾಹನ ಸಂಚಾರಕ್ಕೆ ಅವಕಾಶವಿಲ್ಲದ ಈ ಪರ್ವತವನ್ನೇರಲು ನಾಲ್ಕು ಮೈಲುಗಳಷ್ಟು ದೂರವನ್ನು ಕಾಲ್ನಡಿಗೆಯಿಂದಲೇ ಕ್ರಮಿಸುವುದು ಅನಿವಾರ್ಯ. ಪರ್ವತದ ಬಳಿ ಮಣಿಪುರದ ದೊರೆ ಬಭ್ರುವಾಹನದೆಂದು ಹೇಳಲಾಗುವ ಕೋಟೆಯ ಅವಶೇಷಗಳನ್ನು ಇಂದಿಗೂ ಕಾಣಬಹುದಾಗಿದೆ.

ಹಿಂದಿನ ಕಾಲದಲ್ಲಿ ದೇವಿದರ್ಶನ ಪಡೆದು, ಸ್ವಾಮೀಜಿಯವರ ಆಶೀರ್ವಾದ ಪಡೆದು, ಸುಂದರ ಪರಿಸರದಲ್ಲಿ ವಿಹರಿಸಿ ಮನಃಶ್ಯಾಂತಿ, ನೆಮ್ಮದಿ, ಆರೋಗ್ಯ ಸುಧಾರಣೆ ಇತ್ಯಾದಿ ಸಲುವಾಗಿ

ಯಾತ್ರಾರ್ಥಿಗಳು, ಪ್ರಕೃತಿ ಪ್ರೇಮಿಗಳು ಆಗಮಿಸಿ ಪುನೀತಭಾವದಿಂದ ತೆರಳುತ್ತಿದ್ದರು. ಆಧುನಿಕತೆಯ ಪರಿವರ್ತನೆಯಿಂದಾಗಿ ಆಲೋಚನೆ, ಅಭಿಪ್ರಾಯ ಭಿನ್ನತೆಯಿಂದಾಗಿ ಇಂತಹ ಪ್ರೇಕ್ಷಣೀಯ ಸ್ಥಳಗಳು ಪ್ರೇಮಿಗಳ ವಿಹಾರ ತಾಣವಾಗಿ, ಮದ್ಯವ್ಯಸನಿಗಳ ಕಾರ್ಯಕ್ಷೇತ್ರವಾಗಿ, ಕುಯುಕ್ತಿ ಕೇಂದ್ರಗಳಾಗಿ ಪರಿವರ್ತನೆ ಹೊಂದಿವೆ. ದುಷ್ಟ ಚಟಗಳಿಗೆ ಬಳಸಿದ ವಸ್ತು ಉಪಕರಣಗಳು ಇಂತಹ ಪರಿಸರದ ಸುತ್ತಮುತ್ತಲು ಸಿಗುತ್ತಿರುವುದು ಅನಾದಿಕಾಲದಿಂದ ಬಂದ ಸಂಸ್ಕೃತಿಯ ಅಧಃಪತನವನ್ನು ಸೂಚಿಸಿ, ಈಗಿನವರ ಮನೋವೈಕಲ್ಯವನ್ನು ಬಿಂಬಿಸುವಂತಿದೆ. ಸ್ಥಳ ಮಹಿಮೆ, ಮಹತ್ವವು ಕಡೆಗಣಿಸಲ್ಪಟ್ಟು ಮೂಲಸ್ಥಿತಿಗಿಂತ ಭಿನ್ನವಾಗಿರುವುದು ಕಂಡುಬಂದಿದೆ. ನಿವಾರಣೋಪಾಯಗಳೂ ಪರಿಣಾಮಕಾರಿಯಾಗಿಲ್ಲ. ಶೃಂಗೇರಿ ಸಾಂಸ್ಕೃತಿಕ ಪಲ್ಲಟವಾಗಲು ಪ್ರೇಕ್ಷಣೀಯ ಸ್ಥಳದ ವೀಕ್ಷಕರ ಕೊಡುಗೆಯನ್ನು ಅಲ್ಲಗಳೆಯುವಂತಿಲ್ಲ.

ಶೃಂಗೇರಿ ಸುತ್ತಮುತ್ತಲ ಪ್ರಮುಖ ದೇವಾಲಯಗಳು

ಶೃಂಗೇರಿಯು ಅದ್ವೈತಮತ ಕೇಂದ್ರವಾಗಿದ್ದು, ಋಷಿಮುನಿಗಳ ತಪೋಭೂಮಿಯಾದ ಹಿನ್ನೆಲೆಯಿರುವುದರಿಂದ ಹಾಗೂ ಸುಂದರ ಪ್ರಶಾಂತ ಪರಿಸರದಲ್ಲಿವುದರಿಂದ ಜನರಲ್ಲಿ ಧಾರ್ಮಿಕ ವಾತಾವರಣ ನಿರ್ಮಾಣವಾಗಿರುವುದು ಸಹಜವಾದುದು. ಪ್ರತಿಯೊಂದು ಗ್ರಾಮ, ಹಳ್ಳಿಗಳಲ್ಲೂ ದೇವಾಲಯಗಳ ನಿರ್ಮಾಣ ಮಾಡಿ ಪೂಜೆ, ಆರಾಧನೆ, ರಥೋತ್ಸವಾದಿಗಳನ್ನು ನಡೆಸಿ ದೇವರ ಕೃಪೆಗೆ ಪಾತ್ರರಾಗಿ ಭಯ ಭಕ್ತಿಯಿಂದ ಜೀವಿಸುತ್ತಾ ಬಂದಿದ್ದಾರೆ. ಪ್ರತಿಯೊಂದು ಮನೆಯಲ್ಲೂ ಸಹ ದೇವರ ಮನೆ, ದೇವರ ವಿಗ್ರಹಗಳಿರುವುದು ಕಂಡುಬರುತ್ತಿವೆ. ಶೃಂಗೇರಿ ತಾಲ್ಲೂಕಿನ ಸುತ್ತಮುತ್ತಲ ಪ್ರದೇಶದಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬರುತ್ತಿರುವ ಆಯ್ದ ಪ್ರಮುಖ ದೇವಾಲಯಗಳ ಪೂಜಾವಿಧಾನ, ಆಚರಣೆಗಳ ಮಹತ್ವದ ಕುರಿತು ಮಾಹಿತಿಗಳನ್ನು ಅಧ್ಯಯನದ ದೃಷ್ಟಿಯಿಂದ ನೀಡಲಾಗಿದೆ.

ಜಾಮಿಯ ಮಸ್ಜಿದ್ ಶೃಂಗೇರಿ: ಶೃಂಗೇರಿಯ ಪುರದ್ವಾರದಲ್ಲಿರುವ ಈ ಮಸೀದಿಯು ಈಚೆಗಷ್ಟೇ ನವೀಕರಣಗೊಂಡಿದೆ. ಪ್ರತಿ ಶುಕ್ರವಾರ ಇಲ್ಲಿ ಸಮಾಜ ಬಾಂಧವರೆಲ್ಲ ಸೇರಿ ಸಾಮೂಹಿಕ ನಮಾಜು ಸಲ್ಲಿಸುತ್ತಿದ್ದು ವರ್ಷದಲ್ಲಿ ಈದ್‌ಮಿಲಾದ್, ರಂಜಾನ್, ಮುಬಾರಕ್, ಬಕ್ರೀದ್, ಈದುದುಹಾ ಹಾಗೂ ಪ್ರತಿವರ್ಷಕ್ಕೊಮ್ಮೆ ಉರುಸ್ ಮುಬಾರಕ್ ಹಜರತ್ ಮಹಬೂಬ್ ಝುಹುರ್ ಶಾಹ ಖಾದ್ರಿ ಹಜರತ್ ದಿಲಾವರ್ ಶಾಹ(ರ) ಹಜರತ್ ಇಶಾಖ್ ಶಾಹವಲಿ ಅಲ್ಲಾ(ರ) ದರ್ಗಾಗಳ ಸಹಯೋಗದಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ.

ಬೆಟ್ಟದ ಮಾರಿಯಮ್ಮ ದೇವಸ್ಥಾನ, ಮಾರುತಿಬೆಟ್ಟ ರಸ್ತೆ: ಪ್ರತಿ ಮಂಗಳವಾರ, ಶುಕ್ರವಾರದಂದು ಪೂಜೆ ನಡೆಯುವ ಇಲ್ಲಿ ಕಾರ್ತಿಕ ದೀಪ ನಡೆಯುತ್ತದೆ. ಹಬ್ಬಗಳಂದು ವಿಶೇಷ ಪೂಜೆ ನಡೆಯುವ ಇಲ್ಲಿ ವರ್ಷಕ್ಕೊಮ್ಮೆ ಹರಕೆ ನೆರವೇರುತ್ತದೆ.

ಶ್ರೀ ವೇಣುಗೋಪಾಲಕೃಷ್ಣ ದೇವಸ್ಥಾನ, ಪಶ್ಚಿಮವಾಹಿನಿ: ಪ್ರತಿದಿನ ಪೂಜೆ, ಪ್ರತಿ ಹುಣ್ಣಿಮೆಯಂದು, ಪ್ರತಿ ಷಷ್ಠಿಯಂದು ವಿಶೇಷ ಪೂಜೆ ನಡೆಯುತ್ತಿದ್ದು, ಕಾರ್ತಿಕಮಾಸ ದೀಪ ನಡೆಯುತ್ತದೆ. ಶೃಂಗೇರಿಯಿಂದ ಮೂರು ಕಿ.ಮೀ. ದೂರದಲ್ಲಿರುವ ಈ ದೇವಾಲಯದಲ್ಲಿ ವಿಗ್ರಹದ ಮೇಲಿರುವ ಎಪ್ಪತ್ತೇಳು ಹೆಡೆಯ ಸರ್ಪ ವಿಶೇಷವಾಗಿದ್ದು ಈ ಭಾಗದಲ್ಲೆಲ್ಲೂ ಕಾಣಸಿಗದು. ಸುಂದರ ಮೂರ್ತಿಯಿರುವ ಈ ದೇವಾಲಯ ಸುಂದರ ಪರಿಸರದಲ್ಲಿದೆ.

ಶ್ರೀರಾಮದೇವಸ್ಥಾನ ಹೊಳೆಕೊಪ್ಪ: ಶೃಂಗೇರಿಯಿಂದ ಬೇಗಾರು ಮಾರ್ಗವಾಗಿ ಚಲಿಸುವಾಗ ಸಿಗುವ ಈ ದೇವಾಲಯದಲ್ಲಿ ಪ್ರತಿ ಕಾರ್ತಿಕ ಸೋಮವಾರ ವಿಶೇಷ ಪೂಜೆಯಿದ್ದು, ಪ್ರತಿ ಶ್ರಾವಣ ಶನಿವಾರ, ರಾಮನವಮಿಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಶ್ರೀ ರಕ್ತೇಶ್ವರೀ ದೇವಸ್ಥಾನ, ಮೆಣಸೆ ಸೇತುವೆ: ಪ್ರತಿ ಮಂಗಳವಾರ, ಶುಕ್ರವಾರದಂದು ಪೂಜೆ,ಕಾರ್ತಿಕ ದೀಪ ನಡೆಯುತ್ತದೆ. ಹಬ್ಬಗಳಂದು ವಿಶೇಷ ಪೂಜೆ ನಡೆಯುತ್ತದೆ.

ಮಲ್ಲಿಕಾರ್ಜುನ ದೇವಸ್ಥಾನ ಹಗಡೂರು: ಪ್ರತಿದಿನ ಪೂಜೆ ನಡೆಯುವ ಇಲ್ಲಿ ಸೋಮವಾರದಂದು ವಿಶೇಷ ಪೂಜೆ ನಡೆಯುತ್ತದೆ. ಕಾರ್ತಿಕ ದೀಪ, ಶಿವರಾತ್ರಿ ವಿಶೇಷ ಪೂಜೆ, ಸಾಮೂಹಿಕ ಸತ್ಯನಾರಾಯಣ ವ್ರತ ಹಾಗೂ ರುದ್ರಾಭಿಷೇಕಗಳು ನಡೆಯುತ್ತವೆ. ಇದು ತುಂಬಾ ಪುರಾತನವಾದ ದೇವಾಲಯವಾಗಿದ್ದು, ಸುಂದರ ಪರಿಸರದಲ್ಲಿದೆ.

ಮಹಾಗಣಪತಿ ದೇವಸ್ಥಾನ, ಮಾದಲಕೊಡಿಗೆ: ಪ್ರತಿದಿನ ಪೂಜೆ ನಡೆಯುವ ಇಲ್ಲಿ ಚೌತಿಯಂದು ವಿಶೇಷ ಪೂಜೆ ನಡೆಯುತ್ತದೆ. ಕಾರ್ತಿಕ ಮಾಸದಲ್ಲಿ ದೀಪೋತ್ಸವ, ಹಬ್ಬಗಳಂದು ವಿಶೇಷ ಪೂಜೆ ನಡೆಯುತ್ತದೆ.

ಸಚ್ಚಿದಾನಂದೇಶ್ವರ ದೇವಸ್ಥಾನ, ಸಚ್ಚಿದಾನಂದಪುರ: ಪ್ರತಿದಿನ ಪೂಜೆ ನಡೆಯುವ ಇಲ್ಲಿ, ಕಾರ್ತಿಕಮಾಸದಲ್ಲಿ ದೀಪೋತ್ಸವ ನಡೆಯುತ್ತದೆ. ಶಿವರಾತ್ರಿ ಹಾಗೂ ಇತರೆ ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಹರಾವರಿ ಮಲ್ಲಿಕಾರ್ಜುನ ದೇವಸ್ಥಾನ: ಪ್ರತಿದಿನ ಪೂಜೆ, ಸೋಮವಾರ ವಿಶೇಷ ಪೂಜೆ ಕಾರ್ತಿಕ ಮಾಸದಲ್ಲಿ ದೀಪೋತ್ಸವ, ಶಿವರಾತ್ರಿಯಂದು ವಿಶೇಷ ಪೂಜೆ, ಚೈತ್ರಮಾಸದಲ್ಲಿ ಸತ್ಯನಾರಾಯಣ ವ್ರತ, ರುದ್ರಹೋಮ, ದುರ್ಗಾಹೋಮ ನಡೆಯುವ ಈ ದೇವಾಲಯವು ಸುಂದರ ಪರಿಸರದಲ್ಲಿದ್ದು ಈ ಭಾಗದ ಜನರ ಶ್ರದ್ಧಾಕೇಂದ್ರವಾಗಿದೆ.

ವಿದ್ಯಾರಣ್ಯಪುರ ಶ್ರೀ ವಿನಾಯಕ ದೇವಸ್ಥಾನ: ಪ್ರತಿದಿನ ಪೂಜೆ ನಡೆಯುವ ಈ ದೇವಸ್ಥಾನದಲ್ಲಿ ಚೌತಿಯಂದು ವಿಶೇಷ ಪೂಜೆ, ಕಾರ್ತಿಕ ಮಾಸದಲ್ಲಿ ದೀಪೋತ್ಸವ, ಫಾಲ್ಗುಣ ಶುದ್ಧ ಪಂಚಮಿಯಂದು ದೇವರ ವರ್ಧಂತಿ, ವೈಶಾಖ ಶುದ್ಧ ಚೌತಿಯಂದು ವಸಂತ ಪೂಜೆ ನಡೆಯುತ್ತದೆ. ಸುಮಾರು 150 ವರ್ಷಗಳಿಗೂ ಹಳೆಯದಾದ ಈ ದೇವಾಲಯವನ್ನು 3–5–2002ರ ಚೈತ್ರ ಬಹುಳ ಸಪ್ತಮಿಯಂದು ಜೀರ್ಣೋದ್ಧಾರ ಹಾಗೂ ಪುನಃ ಪ್ರತಿಷ್ಠಾ ಕಾರ್ಯವನ್ನು ಶೃಂಗೇರಿ ಶ್ರೀ ಶ್ರೀಗಳವರು ತಮ್ಮ ಅಮೃತಹಸ್ತದಿಂದ ನೆರವೇರಿಸಿಕೊಟ್ಟಿರುತ್ತಾರೆ.

ಸುಬ್ರಹ್ಮಣ್ಯ ದೇವಸ್ಥಾನ ಸಚ್ಚಿದಾನಂದಪುರ: ಪ್ರತಿದಿನ ಪೂಜೆ ನಡೆಯುವ ಇಲ್ಲಿ ಷಷ್ಠಿಯಂದು ವಿಶೇಷ ಪೂಜೆ ನಡೆಯುತ್ತದೆ. ಕಾರ್ತಿಕ ದೀಪ, ಶಿವರಾತ್ರಿ ಹಾಗೂ ಹಬ್ಬಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಕೋದಂಡರಾಮ ದೇವಸ್ಥಾನ ಭಟ್ಟರ ಕೊಡಿಗೆ: ಪ್ರತಿದಿನ ಪೂಜೆ ನಡೆಯುವ ಇಲ್ಲಿ ಕಾರ್ತಿಕ ದೀಪೋತ್ಸವ ನಡೆಯುತ್ತದೆ. ರಾಮನವಮಿ ವಿಶೇಷ ಪೂಜೆ, ಶಿವರಾತ್ರಿ ಹಾಗೂ ಇನ್ನಿತರ ಹಬ್ಬಗಳಂದು ವಿಶೇಷ ಪೂಜೆ ನಡೆಯುತ್ತದೆ.

ಶ್ರೀ ಮಹಾಗಣಪತಿ ದೇವಸ್ಥಾನ, ವಿದ್ಯಾನಗರ: ಪ್ರತಿದಿನ ಪೂಜೆ ನಡೆಯುವ ಈ ದೇವಾಲಯದಲ್ಲಿ ಚೌತಿಯಂದು ವಿಶೇಷ ಪೂಜೆ ನಡೆಯುತ್ತದೆ. ಕಾರ್ತಿಕ ಮಾಸದಲ್ಲಿ ದೀಪೋತ್ಸವ ಮತ್ತು ಹಬ್ಬಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಸುಂದರ ವಿನಾಯಕನ ಮೂರ್ತಿ ಇರುವ ಈ ದೇವಾಲಯವು ಆದಿಚುಂಚನಗಿರಿ ಸಮುದಾಯಭವನದ ಹತ್ತಿರವಿದ್ದು, ಸುಂದರ ಪರಿಸರದಲ್ಲಿದೆ.

ಕೊರೋಡಿಯ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ , ಪಡುಬೈಲು: ಪ್ರತಿದಿನ ಪೂಜೆ ನಡೆಯುವ ಇಲ್ಲಿ ಸೋಮವಾರದಂದು ವಿಶೇಷ ಪೂಜೆ ನಡೆಯುತ್ತದೆ. ಕಾರ್ತಿಕ ಮಾಸದಲ್ಲಿ ದೀಪೋತ್ಸವ, ಶಿವರಾತ್ರಿಯಂದು ವಿಶೇಷ ಪೂಜೆ ನಡೆಯುತ್ತದೆ. ತುಂಬಾ ಪುರಾತನ ಇತಿಹಾಸವಿರುವ ಈ

ದೇವಾಲಯ ಈಚೆಗೆ ನವೀಕರಣಗೊಂಡಿದೆ.

ಕೊಚ್ಚಾರು ಲಕ್ಷ್ಮೀನರಸಿಂಹ ದೇವಸ್ಥಾನ: ನಂದಿನಿ ನದಿ ದಡದಲ್ಲಿರುವ ಈ ದೇವಸ್ಥಾನದಲ್ಲಿ ಪ್ರತಿದಿನ ಪೂಜೆ ನಡೆಯುತ್ತಿದ್ದು, ನರಸಿಂಹ ಜಯಂತಿಯಂದು ವಿಶೇಷ ಪೂಜೆ ನೆರವೇರುತ್ತದೆ. ಕಾರ್ತಿಕಮಾಸದಲ್ಲಿ ದೀಪೋತ್ಸವ ಹಾಗೂ ಉಪಾಕರ್ಮ ಇನ್ನಿತರ ಹಬ್ಬಗಳಂದು ವಿಶೇಷ ಪೂಜೆ ನಡೆಯುವ ಈ ದೇವಾಲಯವು ಕಿಗ್ಗದಿಂದ ಸಿರಿಮನೆ ಮಾರ್ಗದಲ್ಲಿ ಮೂರು ಕಿ.ಮೀ. ದೂರದಲ್ಲಿದೆ. ಇತ್ತೀಚೆಗೆ ಶೃಂಗೇರಿ ಶ್ರೀ ಶ್ರೀಗಳವರಿಂದ ಪುನರ್‌ಪ್ರತಿಷ್ಠೆಗೊಂಡ ಈ ದೇವಾಲಯ ತುಂಬಾ ಸುಂದರ ಪರಿಸರದಲ್ಲಿದ್ದು ಕಾರಣಿಕವಾಗಿದೆ.

ವಾರಾಹಿ ಅಮ್ಮನವರು ದೊಡ್ಡಹೊನ್ನೆ: ಪ್ರತಿದಿನ ಪೂಜೆ ನಡೆಯುವ ಇಲ್ಲಿ ಪ್ರತಿ ಸಂಕ್ರಮಣದಂದು ವಿಶೇಷ ಪೂಜೆ ನಡೆಯುತ್ತದೆ. ಹೋಳಿ ಹುಣ್ಣಿಮೆ ಐದುದಿನಗಳ ಪರ್ಯಂತ ವಿಶೇಷ ಪೂಜೆ ನಡೆಸುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಹೆಗ್ಗರ್ಸು ಶ್ರೀಮಲ್ಲಿಕಾರ್ಜುನ ಚೌಡೇಶ್ವರಿ ದೇವಸ್ಥಾನ, ಹುಲುಗಾರು: ಪ್ರತಿದಿನ ಪೂಜೆಯಿರುವ ಈ ದೇವಾಲಯದಲ್ಲಿ ಕಾರ್ತಿಕ ಮಾಸ ದೀಪೋತ್ಸವ ವೈಭವದಿಂದ ನೆರವೇರುತ್ತದೆ. ನವರಾತ್ರಿ ಉತ್ಸವ, ಶಿವರಾತ್ರಿ ಜಾಗರಣೆಗಳು ನಡೆಯುವ ಈ ದೇವಾಲಯವು ಮರಿಗೆಬೈಲಿನಿಂದ ಹೆಗ್ಗರ್ಸು ಮಾರ್ಗದಲ್ಲಿ ಎರಡು ಕಿ.ಮಿ ಚಲಿಸಿದರೆ ಸುಂದರ ಪರಿಸರದಲ್ಲಿದೆ. ಪ್ರತಿ ಏಕಾದಶಿಯಂದು ರುದ್ರಾಭಿಷೇಕ ನಡೆಯುತ್ತದೆ.

ವೆಂಕಟರಮಣ ಸ್ವಾಮಿ ಆಂಜನೇಯ ದೇವಸ್ಥಾನ ಹಳಕ: ಪ್ರತಿ ಶನಿವಾರ ಪೂಜೆ ನಡೆಯುವ ಇಲ್ಲಿ ಕಾರ್ತಿಕ ಮಾಸದಲ್ಲಿ ದೀಪೋತ್ಸವ ವಿಶೇಷವಾಗಿ ನೆರವೇರುತ್ತದೆ. ವರ್ಷಕ್ಕೊಮ್ಮೆ ಸತ್ಯನಾರಾಯಣ ಪೂಜೆ ನಡೆಯುವ ಈ ದೇವಾಲಯವು ಕಲ್ಕಟ್ಟೆ ಕುಟುಂಬದವರ ಶ್ರದ್ಧಾಕೇಂದ್ರವಾಗಿದೆ.

ಮಲ್ಲಿಕಾರ್ಜುನ ದೇವಸ್ಥಾನ ಹಾಲಂದೂರು: ಪ್ರತಿದಿನ ಪೂಜೆ ನಡೆಯುವ ಇಲ್ಲಿ ಸೋಮವಾರದಂದು ವಿಶೇಷ ಪೂಜೆ, ಕಾರ್ತಿಕ ಮಾಸದಲ್ಲಿ ದೀಪೋತ್ಸವ, ಶಿವರಾತ್ರಿ ರುದ್ರಹೋಮ ಅಲ್ಲದೇ ಮಾಘ ಬಹುಳ ಪಂಚಮಿಯಂದು ಅಷ್ಟಬಂಧ ದಿನವಾಗಿ ರುದ್ರಹೋಮ ನಡೆಯುತ್ತದೆ. ಊರಿನ ಮೇಲ್ಭಾಗದಲ್ಲಿರುವ ಈ ದೇವಾಲಯವು ಸುಂದರ ಪರಿಸರದಲ್ಲಿದೆ.

ಗಣಪತಿ ದೇವಸ್ಥಾನ ವಿನಾಯಕನಮಕ್ಕಿ: ಪ್ರತಿದಿನ ಪೂಜೆ ನಡೆಯುವ ಇಲ್ಲಿ ಚೌತಿಯಂದು

ವಿಶೇಷ ಪೂಜೆ ನಡೆಯುತ್ತದೆ. ಕಾರ್ತಿಕ ದೀಪೋತ್ಸವ ನಡೆಯುವುದಲ್ಲದೆ, ಹಬ್ಬಗಳಂದು ವಿಶೇಷ ಪೂಜೆ ನಡೆಯುತ್ತದೆ.

ಅಗಸ್ತ್ಯ ಶಂಕರೇಶ್ವರ ದೇವಸ್ಥಾನ ಬೆಣ್ಣೆಗುಡ್ಡೆ: ಶೃಂಗೇರಿಯಿಂದ ಸುಮಾರು 12 ಕಿ.ಮಿ ದೂರದಲ್ಲಿರುವ ಮಾಗಲು ರಸ್ತೆಯಿಂದ 1ಕಿ.ಮಿ ಒಳಗಡೆ ಈ ದೇವಸ್ಥಾನವಿದ್ದು, ಪ್ರತಿದಿನ ಪೂಜೆ, ಸೋಮವಾರ ವಿಶೇಷ ಪೂಜೆ ನಡೆಯುತ್ತದೆ, ಕಾರ್ತಿಕಮಾಸದಲ್ಲಿ ದೀಪೋತ್ಸವ, ಶ್ರಾವಣ ಸೋಮವಾರ ವಿಶೇಷ ಪೂಜೆ ಹಾಗೂ ಶಿವರಾತ್ರಿಯಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಮಾಘ ಶುದ್ಧದಲ್ಲಿ ರುದ್ರಹೋಮ, ಗಣಪತಿಹೋಮ, ಚಂಡಿಕಾ ಹೋಮ ನಡೆಯುತ್ತದೆ. ಅಗಸ್ತ್ಯ ಮುನಿಗಳ ಕ್ಷೇತ್ರವಾದ ಇಲ್ಲಿ ಉದ್ಭವಲಿಂಗವಿದ್ದು ತುಂಗಾನದಿಯ ದಂಡೆಯ ಮೇಲ್ಭಾಗದಲ್ಲಿದ್ದು ಸುಂದರ ಪರಿಸರದಲ್ಲಿದೆ.

ತಿರುಮಲ ದೇವರ ದೇವಾಲಯ, ಕಿರಕೋಡು: ಪ್ರತಿದಿನ ಪೂಜೆಯಿರುವ ಇಲ್ಲಿ ಶನಿವಾರ ವಿಶೇಷ ಪೂಜೆ ನಡೆಯುತ್ತದೆ. ಕಾರ್ತಿಕ ದೀಪೋತ್ಸವ ನಡೆಯುವ ಇಲ್ಲಿ ಫಾಲ್ಗುಣ ಕೃಷ್ಣ ಸಪ್ತಮಿಯಂದು ಅಷ್ಟಬಂಧ ಪ್ರಯುಕ್ತ ಹೋಮ ನಡೆಯುತ್ತದೆ.

ತಿರುಮಲ ವೆಂಕಟರಮಣ ದೇವಸ್ಥಾನ ಕೊಡೂರು ಅಗ್ರಹಾರ: ಶೃಂಗೇರಿಯಿಂದ ಸುಮಾರು 5ಕಿ.ಮೀ ದೂರದಲ್ಲಿರುವ ಈ ದೇವಾಲಯದಲ್ಲಿ ಶ್ರಾವಣಮಾಸ ಮತ್ತು ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆಯಿದ್ದು ಫಾಲ್ಗುಣ ಬಹುಳ ದಶಮಿಯಂದು ವರ್ಧಂತ್ಯುತ್ಸವ ನಡೆಯುತ್ತದೆ.

ಮಹಾಗಣಪತಿ ದೇವಸ್ಥಾನ ಹೊಸಕೊಪ್ಪ: ಶೃಂಗೇರಿಯಿಂದ ಸುಮಾರು 5 .ಕಿ.ಮೀ ದೂರ ಬೇಗಾನೆ ಸಮೀಪವಿರುವ ಈ ದೇವಸ್ಥಾನದಲ್ಲಿ ಸಂಕಷ್ಟಹರ ಚೌತಿಯಂದು ವಿಶೇಷ ಪೂಜೆಯಿದ್ದು, ಎಳ್ಳಮಾವಾಸ್ಯೆ, ಮಾರ್ಗಶಿರ ಮಾಸದಲ್ಲಿ ದೀಪೋತ್ಸವ ನಡೆಯುತ್ತದೆ.

ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಹೆಚ್ಚುಂದ: ಶೃಂಗೇರಿಗೆ ಸುಮಾರು 8.ಕಿ.ಮೀ ದೂರದಲ್ಲಿರುವ ಈ ದೇವಾಲಯದಲ್ಲಿ ಪ್ರತಿ ಸೋಮವಾರ ವಿಶೇಷ ಪೂಜೆಯಿದ್ದು ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆಯಿರುತ್ತದೆ. ಜ್ಯೇಷ್ಠ ಬಹುಳ ನವಮಿಯಂದು ವರ್ಧಂತ್ಯುತ್ಸವದ ರುದ್ರಹೋಮ ನಡೆಯುತ್ತದೆ.

ಮೀಗ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ನಡುತೋಟ: ಶೃಂಗೇರಿಯಿಂದ ಬೋಳೂರು, ಮೀಗ, ಕಿಗ್ಗ ರಸ್ತೆಯಂಚಿನಲ್ಲಿ ಸಿಗುವ ಈ ದೇವಾಲಯದಲ್ಲಿ ಪ್ರತಿ ಸೋಮವಾರ ವಿಶೇಷಪೂಜೆಯಿದ್ದು ಕಾರ್ತಿಕಮಾಸದಲ್ಲಿ ದೀಪೋತ್ಸವ ನಡೆಯುತ್ತದೆ. ಶಿವರಾತ್ರಿ, ರಾಮನವಮಿ ನವರಾತ್ರಿಗಳಲ್ಲಿ ವಿಶೇಷ ಪೂಜೆಯಿದ್ದು, ಈ ಭಾಗದ ಜನರ ಶ್ರದ್ಧಾ ಕೇಂದ್ರವಾಗಿದೆ.

ಲಕ್ಷ್ಮೀ ವಿನಾಯಕ ದೇವಸ್ಥಾನ ಅಳಲೆಗುಡ್ಡೆ: ಶೃಂಗೇರಿಯಿಂದ ಸುಮಾರು ೪ಕಿ.ಮೀ ದೂರದಲ್ಲಿ ನೆಮ್ಮಾರು ಬುಕ್ಕಡಿಬಯಲು ಮಾರ್ಗದಲ್ಲಿ ಸಿಗುವ ಈ ದೇವಾಲಯವು ತುಂಬಾ ಸುಂದರವಾಗಿದ್ದು ಪ್ರತಿದಿನ ಇಲ್ಲಿ ಪೂಜೆಯಿದ್ದು ಚೌತಿ ಹಾಗೂ ಮಾರ್ಗಶಿರ ಮಾಸಗಳಲ್ಲಿ ವಿಶೇಷ ಪೂಜೆಯಿರುತ್ತದೆ. ಪ್ರತಿವರ್ಷ ಗಣಹೋಮ ನಡೆಯುತ್ತಿದ್ದು, ಈ ಭಾಗದ ಜನರ ಶ್ರದ್ಧಾಕೇಂದ್ರವಾಗಿದೆ.

ರಕ್ತೇಶ್ವರಿ ಅಮ್ಮನವರ ದೇವಸ್ಥಾನ ರಾಜಾನಗರ: ಶೃಂಗೇರಿಯಿಂದ ಕಿಗ್ಗರಸ್ತೆಯಲ್ಲಿ ಸಂಚರಿಸುವಾಗ ಸಿಗುವ ಈ ದೇವಾಲಯವು ತುಂಬಾ ಕಾರಣಿಕವೆಂದು ಪ್ರತೀತಿಯಿದೆ. ಪ್ರತಿ ಮಂಗಳವಾರ, ಶುಕ್ರವಾರಗಳಲ್ಲಿ ವಿಶೇಷ ಪೂಜೆಯಿದ್ದು, ಪ್ರತಿವರ್ಷ ಹರಕೆ, ಇನ್ನಿತರ ವಿಶೇಷ ಪೂಜೆಗಳು ನಡೆಯುತ್ತವೆ. ಕಾರ್ತಿಕ ಮಾಸದಲ್ಲಿ ದೀಪೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ.

ಸಿದ್ಧಿವಿನಾಯಕ ದೇವಸ್ಥಾನ ಹರಡಗೋಡು: ಶೃಂಗೇರಿಯಿಂದ ಕಿಗ್ಗ ರಸ್ತೆಯಲ್ಲಿ ಸಂಚರಿಸುವಾಗ ಸಿಗುವ ಈ ದೇವಾಲಯದಲ್ಲಿ ವರಚೌತಿ, ಸಂಕಷ್ಟಹರ ಚೌತಿಯಂದು ವಿಶೇಷ ಪೂಜೆಯಿದ್ದು ಭಾದ್ರಪದ ಚೌತಿ, ಪಂಚಮಿಯಂದು ಗಣಹೋಮ, ವೈಶಾಖ ಬಹುಳ ಚೌತಿಯಂದು ಪ್ರತಿಷ್ಠಾದಿನ ಗಣಹೋಮ ನಡೆಯುತ್ತದೆ.

ಈ ದೇವಾಲಯದ ಸಮೀಪದಲ್ಲಿ ಹೊಸದಾಗಿ ದೇವಾಲಯವನ್ನು ನಿರ್ಮಾಣಮಾಡಿ ಅಲ್ಲಿ ದೇವರ ಪ್ರತಿಷ್ಠೆ ಮಾಡಲಾಗಿದೆ.

ಹೇರೂರು ವಿನಾಯಕ ದೇವಸ್ಥಾನ: ಶೃಂಗೇರಿಯಿಂದ ಜಯಪುರ ಮಾರ್ಗದಲ್ಲಿ ಸಿಗುವ ಈ ದೇವಾಲಯದಲ್ಲಿ ಪ್ರತಿದಿನ ಪೂಜೆಯಿದ್ದು, ಮಾರ್ಗಶಿರ ಚೌತಿಯಂದು ವಿಶೇಷ ಅಭಿಷೇಕ, ಪ್ರತಿಚೌತಿಯಲ್ಲಿ ವಿಶೇಷ ಪೂಜೆಯಿರುತ್ತದೆ. ಪ್ರತಿವರ್ಷ ಮಾರ್ಗಶಿರಮಾಸದಲ್ಲಿ ರಾತ್ರಿ ದೀಪೋತ್ಸವ ನಡೆಯುತ್ತದೆ.

ಶ್ರೀ ರಾಮದೇವಸ್ಥಾನ ಹೊಳೆಕೊಪ್ಪ: ಶೃಂಗೇರಿಯಿಂದ ಬೇಗಾರು ಮಾರ್ಗದಲ್ಲಿ ಸಿಗುವ ಈ ದೇವಾಲಯದಲ್ಲಿ ಪ್ರತಿಕಾರ್ತಿಕ ಸೋಮವಾರ ವಿಶೇಷ ಪೂಜೆಯಿದ್ದು, ಪ್ರತಿ ಶ್ರಾವಣ ಶನಿವಾರ, ರಾಮನವಮಿಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಶ್ರೀಪ್ರಸನ್ನ ಗಣಪತಿ ದೇವಸ್ಥಾನ, ಉಳುವೇಬೈಲು: ಶೃಂಗೇರಿಯಿಂದ ಶಿವಮೊಗ್ಗ ಮಾರ್ಗದಲ್ಲಿ ಮೂರು ಕಿ.ಮೀ ಸಂಚರಿಸಿದಾಗ ಸಿಗುವ ಉಳುವೆಯಿಂದ ಅರ್ಧ ಕಿ.ಮೀ ಒಳಗೆ ಈ ದೇವಸ್ಥಾನ

ಸಿಗುತ್ತದೆ. ಪ್ರತೀ ಮಾರ್ಗಶಿರ ಚೌತಿಯಂದು ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ದೀಪೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಪ್ರತಿ ಸಂಕಷ್ಟ ಚತುರ್ಥಿಯಂದು ವಿಶೇಷ ಪೂಜೆ ಇರುತ್ತದೆ.

ಶ್ರೀ ಸೂರ್ಯನಾರಾಯಣ ದೇವಸ್ಥಾನ ಎಳ್ಮಗೆ: ಶೃಂಗೇರಿಯ ತುಂಗಾನದಿಯ ದಡದಲ್ಲಿರುವ ಈ ದೇವಾಲಯವು ಈ ತಾಲ್ಲೂಕಿನ ಏಕೈಕ ಸೂರ್ಯ ದೇವರ ದೇವಾಲಯವಾಗಿದ್ದು, ಈಚೆಗಷ್ಟೇ ನವೀಕರಣಗೊಂಡು ಸುಂದರವಾಗಿ ನಿರ್ಮಾಣಗೊಂಡಿದೆ.

ಶ್ರೀಹೊಂಬಾಗಿ ಬ್ರಹ್ಮಲಿಂಗೇಶ್ವರ ದೇವಸ್ಥಾನ, ಹೊನ್ನವಳ್ಳಿ-ಬೆಳಂದೂರು: ಶೃಂಗೇರಿಯಿಂದ 3 ಕಿ.ಮೀ. ದೂರದಲ್ಲಿರುವ ಈ ದೇವಾಲಯವು ಕಮ್ಮರಡಿ ರಸ್ತೆಯಲ್ಲಿದೆ. ಈ ಭಾಗದ ಜನರು ಈ ದೇವಾಲಯಕ್ಕೆ ಭಕ್ತರಾಗಿದ್ದು ತುಂಬಾ ಕಾರಣೀಕ ಬ್ರಹ್ಮನೆಂದು ಪ್ರತೀತಿಯಿದೆ. ಯಕ್ಷಗಾನ ಸೇವೆಯಾಟ ಇಲ್ಲಿ ಅತ್ಯಧಿಕವಾಗಿ ನಡೆಯುತ್ತಿದ್ದು, ದೀಪೋತ್ಸವ, ಪ್ರತಿಷ್ಠಾಮಹೋತ್ಸವ ಬಹು ವಿಜೃಂಭಣೆಯಿಂದ ನಡೆಯುತ್ತವೆ.

ಶ್ರೀ ಸರ್ವೇಶ್ವರ ದೇವಸ್ಥಾನ ನೆಮ್ಮಾರು: ಶೃಂಗೇರಿ ಕೆರೆಕಟ್ಟೆ ರಸ್ತೆಯಲ್ಲಿ ಸಂಚರಿಸುವಾಗ ನೆಮ್ಮಾರಿನ ತೂಗು ಸೇತುವೆಯ ಎದಿರು ಭಾಗದಲ್ಲಿ ಗದ್ದೆಯ ಒಳಗಡೆ ನಡೆದರೆ ಈ ಈಶ್ವರ ದೇವಸ್ಥಾನ ಕಾಣಸಿಗುತ್ತದೆ ಸುಂದರವಾದ ಈ ದೇವಾಲಯವು ಈ ಭಾಗದ ಜನರ ಶ್ರದ್ಧಾಕೇಂದ್ರವಾಗಿದೆ. ಪ್ರತಿ ಸೋಮವಾರ ವಿಶೇಷ ಪೂಜೆಯಿದ್ದು, ಕಾರ್ತಿಕ ಮಾಸಗಳಲ್ಲಿ ದೀಪೋತ್ಸವ ಇನ್ನಿತರೆ ಸಮಾರಂಭಗಳು ನಡೆಯುತ್ತವೆ.

ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ ಆನೆಗುಂದ: ತುಂಗಾನದಿಯ ದಂಡೆಯ ಮೇಲಿರುವ ಈ ದೇವಾಲಯವು ಆನೆಗುಂದ ಆಗ್ರಹಾರದ ಸಮೀಪದಲ್ಲೇ ಇದೆ. ಸುಂದರಮೂರ್ತಿ ಇರುವ ಇಲ್ಲಿ ಶನಿವಾರ ವಿಶೇಷ ಪೂಜೆಯಿದ್ದು ಕಾರ್ತೀಕಮಾಸದಲ್ಲಿ ದೀಪೋತ್ಸವ ಅದ್ದೂರಿಯಾಗಿ ನಡೆಯುತ್ತದೆ.

ಶ್ರೀ ಹರಿಹರಾತ್ಮಕ ಸೋಮೇಶ್ವರ ದೇವಸ್ಥಾನ ಚಿತ್ರವಳ್ಳಿ: ಶೃಂಗೇರಿಯಿಂದ ಸುಮಾರು 6 ಕಿ.ಮಿ ದೂರದಲ್ಲಿರುವ ಈ ದೇವಾಲಯವು ಅಡ್ಡಗದ್ದೆಯಿಂದ ಒಳಭಾಗದಲ್ಲಿ ಅಣ್ಣುಕೊಡಿಗೆ, ನೇತ್ರವಳ್ಳಿ ಮಾರ್ಗದಲ್ಲಿ ಚಲಿಸುವಾಗ ಸಿಗುತ್ತದೆ. ಕಾರ್ತೀಕ ಮಾಸದ ಪ್ರತಿ ಸೋಮವಾರ ವಿಶೇಷ ಪೂಜೆಯಿದ್ದು, ಫಾಲ್ಗುಣ ಬಹುಳ ಸಪ್ತಮಿಯಂದು ಪ್ರತಿವರ್ಷ ರುದ್ರಹೋಮ ಹಾಗೂ ಉಪಾಕರ್ಮವನ್ನು ಸಹ ಇಲ್ಲಿ ಆಚರಿಸಲಾಗುತ್ತದೆ.

ಶ್ರೀ ಬೆಳಂದೂರು ಮಹಾ ಗಣಪತಿ ದೇವಸ್ಥಾನ: ಶೃಂಗೇರಿ–ಆಗುಂಬೆ ರಸ್ತೆಯಲ್ಲಿ ಮೂರು ಕಿ.ಮೀ ದೂರದಲ್ಲಿರುವ ಈ ದೇವಾಲಯವು ರಸ್ತೆಯ ಅಂಚಿನಲ್ಲಿದೆ ಪ್ರತಿ ಚೌತಿಯಂದು ವಿಶೇಷ ಪೂಜೆಯಿದ್ದು ಈ ಭಾಗದ ಜನರೆಲ್ಲಾ ಇಲ್ಲಿಗೆ ಹೆಚ್ಚಿನ ರೀತಿಯಲ್ಲಿ ನಡೆದುಕೊಳ್ಳುವರು.

ಶ್ರೀ ಕನ್ಯಾಕುಮಾರಿ ಅಮ್ಮನವರು, ಹೊಸತೋಟ: ಶೃಂಗೇರಿ–ಜಯಪುರ ರಸ್ತೆಯಲ್ಲಿ ಮೆಣಸೆಯಿಂದ ಒಂದು ಕಿ.ಮೀ ಒಳಗಡೆ ಸಂಚರಿಸಿದರೆ ಈ ದೇವಾಲಯವು ಸಿಗುತ್ತದೆ. ತುಂಬಾ ಪುರಾತನವಾದ ಈ ದೇವಾಲಯವು ಈಚೆಗಷ್ಟೇ ನವೀಕರಣಗೊಂಡಿದೆ.

ಶ್ರೀ ಬಬ್ಬಿಯ ಮಲ್ಲಿಕಾರ್ಜುನ ದೇವಸ್ಥಾನ: ಶೃಂಗೇರಿಯಿಂದ ಕಮ್ಮರಡಿ ಮಾರ್ಗದಲ್ಲಿ ಸಂಚರಿಸುವಾಗ ಹೊಳೆಕೊಪ್ಪ ಕಲ್ಕಟ್ಟೆ ಮಾರ್ಗದ ರಸ್ತೆಯ ಅಂಚಿನಲ್ಲಿ ಈ ದೇವಾಲಯವು ಕಾಣಸಿಗುತ್ತದೆ. ಶ್ರೀಮಠದ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ಈ ದೇವಾಲಯವು ಸುಂದರ ಪರಿಸರದಲ್ಲಿದೆ. ಪ್ರತಿ ಸೋಮವಾರದಂದು ವಿಶೇಷ ಪೂಜೆಯಿದ್ದು ಈ ಭಾಗದ ಜನರ ನಂಬಿಕೆಯ ದೇವಾಲಯವಾಗಿದೆ.

ಶ್ರೀ ಮಹಿಷಮರ್ದಿನಿ ಅಮ್ಮನವರು ಮಲ್ಲಿಕಾರ್ಜುನ ದೇವಸ್ಥಾನ ಹುಲ್ಸಗಾರು: ಪ್ರತಿದಿನ ಪೂಜೆಯಿರುವ ಇಲ್ಲಿ ಗೌರೀಹಬ್ಬದಂದು, ನವರಾತ್ರಿಯಂದು ಹಾಗೂ ಕಾರ್ತಿಕ ಮಾಸಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಶ್ರಾವಣ ಶುದ್ಧದಶಮಿಯಂದು ಪ್ರತಿಷ್ಠಾದಿನ ಪ್ರಯುಕ್ತ ವಿಶೇಷ ಕಾರ್ಯಕ್ರಮ ನಡೆಯುತ್ತದೆ.

ಶ್ರೀ ಮಹಾಗಣಪತಿ ದೇವಸ್ಥಾನ, ದೊಡ್ಡಹೊನ್ನೆ: ಶೃಂಗೇರಿಯಿಂದ ಜಯಪುರ ಮಾರ್ಗದಲ್ಲಿ ಸಿಗುವ ಈ ದೇವಾಲಯವು ತುಂಬಾ ಸುಂದರವಾಗಿ ನಿರ್ಮಾಣಗೊಂಡಿದ್ದು, ಈ ಭಾಗದ ಜನರ ಶ್ರದ್ಧಾಕೇಂದ್ರವಾಗಿದೆ. ಪ್ರತಿ ಚೌತಿಯಂದು ವಿಶೇಷ ಪೂಜೆಯಿದ್ದು, ದೀಪೋತ್ಸವ, ಗಣಹೋಮಗಳು ಇಲ್ಲಿ ಜರುಗುತ್ತವೆ.

ಶ್ರೀ ಗಣಪತಿ ದೇವಸ್ಥಾನ ಶಿಡ್ಲೆ: ಶೃಂಗೇರಿ ಜಯಪುರ ಮಾರ್ಗ ಮಧ್ಯದಲ್ಲಿ ಸಿಗುವ ಈ ದೇವಾಲಯವು ಹೊನ್ನೆಮರದ ಗಣಪತಿ ಎಂದೇ ಪ್ರಚಾರದಲ್ಲಿದ್ದು ಈ ಭಾಗದ ಜನರು ಈ ದೇವಾಲಯದ ಭಕ್ತರಾಗಿದ್ದಾರೆ.

ಶ್ರೀ ಅನಂತ ಪದ್ಮನಾಭ ದೇವಸ್ಥಾನ ಹೆಗ್ಗದ್ದೆ: ಶೃಂಗೇರಿ ತಾಲ್ಲೂಕಿನಲ್ಲಿರುವ ಅನಂತ ಪದ್ಮನಾಭ ದೇವಾಲಯ ಇದಾಗಿದ್ದು. ಶೃಂಗೇರಿಯಿಂದ ಸುಮಾರು 3 ಕಿ.ಮೀ ದೂರದಲ್ಲಿದೆ. ಪ್ರತಿವರ್ಷ

ಮಾಘಶುದ್ಧ ತ್ರಯೋದಶಿಯಂದು ಹೋಮಹವನಾದಿಗಳು ನಡೆಯುತ್ತಿದ್ದು, ಪ್ರತಿದಿನ ಬೆಳಗ್ಗೆ 9 ರಿಂದ 10.30ರ ತನಕ ಪೂಜೆ ನಡೆಯುತ್ತದೆ.

ಶ್ರೀ ಕನ್ನಿಕಾ ಪರಮೇಶ್ವರಿ ಅಮ್ಮನವರು ಶೃಂಗೇರಿ: ಶೃಂಗೇರಿ ಮುಖ್ಯರಸ್ತೆಯಲ್ಲಿರುವ ಈ ದೇವಾಲಯವು ತುಂಬಾ ಪುರಾತನವಾದದ್ದಾಗಿದೆ. ಇಲ್ಲಿ ಈಶ್ವರ ಮತ್ತು ಕನ್ನಿಕಾ ಪರಮೇಶ್ವರಿ ದೇವರು ಪ್ರಮುಖವಾಗಿದ್ದು, ವಾಸವಿ ಜಯಂತಿ ಹಾಗೂ ವಾಸವಿ ಅಗ್ನಿ ಪ್ರವೇಶ ಬಹು ಮುಖ್ಯ ಉತ್ಸವಗಳಾಗಿವೆ.

ಶ್ರೀ ವರಸಿದ್ಧಿವಿನಾಯಕ ದೇವಸ್ಥಾನ ನಲ್ಲೂರು: ಶೃಂಗೇರಿಯಿಂದ ಕಮ್ಮರಡಿ ಮಾರ್ಗದಲ್ಲಿ ಸುಮಾರು 10 ಕಿ.ಮೀ ಚಲಿಸಿದರೆ ರಸ್ತೆಯ ಅಂಚಿನಲ್ಲಿ ಈ ದೇವಾಲಯ ಕಾಣಸಿಗುತ್ತದೆ. ಇತ್ತೀಚೆಗೆ ನವೀಕರಣಗೊಂಡ ಈ ದೇವಾಲಯವು ತುಂಬಾ ಕಾರಣಿಕ ದೇವರೆಂದು ಈ ಭಾಗದ ಜನರಲ್ಲಿ ಪ್ರತೀತಿ ಇದೆ.

ಬೋಳೂರು ಮಲ್ಲಿಕಾರ್ಜುನ ದೇವಸ್ಥಾನ: ಶೃಂಗೇರಿಯಿಂದ ಸುಮಾರು 12 ಕಿ.ಮೀ ದೂರದಲ್ಲಿ ಕುಂಚೇಬಯಲಿನಿಂದ ಒಳಗಡೆ ಕೂತಗೋಡು ಸಮೀಪವಿರುವ ಈ ದೇವಾಲಯವು ಆರು ಅಡಿ ಎತ್ತರದ ಪ್ರಭಾವಳಿಯಿಂದಾಗಿ ತುಂಬಾ ಆಕರ್ಷಣೀಯವಾಗಿದೆ ಪ್ರತಿ ಸೋಮವಾರ ವಿಶೇಷ ಪೂಜೆಯಿದ್ದು, ಶಿವರಾತ್ರಿ ವೇಳೆ ಅಷ್ಟಮಿ ಹಾಗೂ ಕಾರ್ತಿಕಮಾಸದಲ್ಲಿ ರುದ್ರಹೋಮ ಇಲ್ಲಿನ ವಿಶೇಷತೆಯಾಗಿದ್ದು ಈ ಭಾಗದ ಜನರ ಶ್ರದ್ಧಾ ಕೇಂದ್ರವಾಗಿದೆ.

ಕಮಡಿಯ ಶ್ರೀ ಮಲ್ಲಿಕಾರ್ಜುನ ದೇವಾಲಯ ಗುಂಡ್ರೆ: ಶೃಂಗೇರಿಯಿಂದ ಸುಮಾರು 12 ಕಿ.ಮೀ ದೂರದಲ್ಲಿರುವ ಈ ದೇವಾಲಯದಲ್ಲಿ ಪ್ರತಿ ಸೋಮವಾರ ವಿಶೇಷ ಪೂಜೆಯಿದ್ದು ಎಳ್ಳಮಾವಾಸ್ಯೆಯ ಸ್ನಾನ ವಿಶೇಷವಾಗಿರುತ್ತದೆ. ಮಕ್ಕಳ ಕೆಲವು ಕಾಯಿಲೆಗಳಿಗೆ ಇಲ್ಲಿನ ಪುಷ್ಕರಣಿಯಲ್ಲಿ ತೀರ್ಥಸ್ನಾನ ಮಾಡಿಸುವ ಪರಿಪಾಠವಿದೆ.

ಗಣಪತಿ-ಆಂಜನೇಯ ದೇವಸ್ಥಾನ ಬೇಗಾರು: ಒಂದು ಕಾಲದಲ್ಲಿ ಕಿಗ್ಗ ದೇವಸ್ಥಾನ ಹೊರತಾಗಿ ಅತಿ ಹೆಚ್ಚು ಆಸ್ತಿ ಹೊಂದಿದ್ದ ಈ ದೇವಾಲಯವು ಇಂದು ಶಿಥಿಲಾವಸ್ಥೆಯಲ್ಲಿದ್ದು, ಊರಿನವರ ಸಹಕಾರದಿಂದ ಸರ್ಕಾರದ ಸಹಾಯದಿಂದ ಜೀರ್ಣೋದ್ಧಾರವಾಗಬೇಕಿದೆ.

ಪ್ರತಿ ಸಂಕಷ್ಟಹರ ಚೌತಿಯಂದು ಇಲ್ಲಿ ವಿಶೇಷ ಪೂಜೆಯಿದ್ದು, ಮಾಘ ಚೌತಿಯಂದು ಗಣಹೋಮ ನಡೆಯುತ್ತದೆ. ಪ್ರತಿದಿನ ವಿಶೇಷ ಪೂಜೆಯಿದ್ದು, ಈ ಭಾಗದ ಜನರ ಶ್ರದ್ಧಾಕೇಂದ್ರವಾಗಿದೆ.

ಮಹಾಗಣಪತಿ ದೇವಸ್ಥಾನ ಗುಬ್ಬಿಗೋಡು: ಶೃಂಗೇರಿಯಿಂದ 4 ಕಿ.ಮೀ ದೂರವಿರುವ ಈ ದೇವಾಲಯದಲ್ಲಿ ಸಂಕಷ್ಟಹರ ಚೌತಿಯಂದು ವಿಶೇಷ ಪೂಜೆಯಿದ್ದು, ಹುಣ್ಣಿಮೆಯಂದು ಸತ್ಯನಾರಾಯಣ ವ್ರತ ಭಾದ್ರಪದ ಶುದ್ಧ ಪಂಚಮಿಯಂದು ಗಣಹೋಮ ನಡೆಯುತ್ತದೆ.

ದುರ್ಗಾಂಬಾ ದೇವಸ್ಥಾನ: ಶೃಂಗೇರಿಯಿಂದ ನೆಮ್ಮಾರು ರಸ್ತೆಯಲ್ಲಿ 3 ಕಿ.ಮೀ ಚಲಿಸಿ ಒಂದು ಫರ್ಲಾಂಗ್ ಒಳ ಚಲಿಸಿದಾಗ ಈ ದೇವಸ್ಥಾನವು ಸಿಗುತ್ತದೆ. ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಶಕ್ತಿದೇವತೆಗಳಲ್ಲಿ ಈ ದುರ್ಗಾದೇವಿಯ ದೇವಸ್ಥಾನವು ಒಂದು. ಜಾನುವಾರುಗಳಿಗೆ ಮಕ್ಕಳ ಕಾಯಿಲೆಗಳಿಗೆಲ್ಲ ಇಲ್ಲಿ ಹರಕೆ ಹೇಳಿಕೊಳ್ಳುತ್ತಿದ್ದು, ಈ ಸ್ಥಳದ ಜನರ ನಂಬಿಕೆಯಾಗಿದೆ. ಪ್ರತಿ ಮಂಗಳವಾರ, ಶುಕ್ರವಾರ ವಿಶೇಷ ಪೂಜೆಯಿದ್ದು ಇಲ್ಲಿ ಫೆಬ್ರವರಿ ತಿಂಗಳಲ್ಲಿ ರಥೋತ್ಸವ ನಡೆಯುತ್ತದೆ.

ಕಾಳಿಕಾಂಬಾ ದೇವಸ್ಥಾನ: ಶೃಂಗೇರಿಯ ಹೊರವಲಯದಲ್ಲಿ ಗುಡ್ಡದ ಮೇಲಿರುವ ಈ ಕಾಳಿಕಾಂಬಾ ದೇವಸ್ಥಾನವು ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ 4 ಶಕ್ತಿ ದೇವತೆಗಳಲ್ಲೊಂದಾಗಿದೆ. ಪ್ರತಿ ಶುಕ್ರವಾರ, ಮಂಗಳವಾರದಂದು ಇಲ್ಲಿ ವಿಶೇಷ ಪೂಜೆಯಿದ್ದು, ಕಾರ್ತಿಕ ಮಾಸವಿಡೀ ದೀಪೋತ್ಸವ ನಡೆಯುತ್ತದೆ.

ಆಂಜನೇಯ ದೇವಸ್ಥಾನ: ಕೆರೆ ಆಂಜನೇಯ ಸ್ವಾಮಿ ದೇವರೆಂದು ಗುರುತಿಸಲ್ಪಡುವ ಈ ದೇವಾಲಯವು ಶೃಂಗೇರಿಯ ಶಾರದಾಂಬೆಗೆ ಪಶ್ಚಿಮ ದಿಕ್ಕಿನಲ್ಲಿ ಸ್ಥಾಪಿಸಲಾಗಿದೆ. ಪ್ರತಿ ವರ್ಷ ರಾಮೋತ್ಸವ, ಹನುಮ ಜಯಂತಿ, ಸಾಮೂಹಿಕ ಸತ್ಯನಾರಾಯಣ ಪೂಜೆ ಇಲ್ಲಿ ವಿಶೇಷವಾಗಿದೆ.

ಕಾಲಭೈರವ ದೇವಸ್ಥಾನ: ಶೃಂಗೇರಿ ಶಾರದಾಂಬೆಯ ಪೂರ್ವ ದಿಕ್ಕಿನಲ್ಲಿರುವ ಈ ಶಕ್ತಿ ದೇವತೆಯು ಶಂಕರರಿಂದ ಸ್ಥಾಪಿಸಲ್ಪಟ್ಟಿದ್ದು, ಇಲ್ಲಿ ಕಾಲು ನೋವಿಗೆ, ಜಾನುವಾರುಗಳಿಗೆ ಕಾಯಿಲೆಗಳ ಪರಿಹಾರಕ್ಕಾಗಿ ಹರಕೆ ಹೊತ್ತುಕೊಳ್ಳುತ್ತಾರೆ, ಶ್ರೀಮಠದ ನರಸಿಂಹವನದ ಸಮೀಪದಲ್ಲಿರುವ ಈ ದೇವಾಲಯ ಕಾರಣಿಕವಾಗಿದೆ.

ಶಕ್ತಿ ಗಣಪತಿ ದೇವಸ್ಥಾನ: ಶ್ರೀ ಶಾರದಾಂಬಾ ದೇವಾಲಯದ ಒಳ ಪ್ರಾಕಾರದಲ್ಲಿ ಇರುವ ಶ್ರೀ ಶಕ್ತಿ ಗಣಪತಿಯು ತುಂಬಾ ಸುಂದರವಾಗಿದ್ದು, ಮಹಾ ಪ್ರದೋಷದಂದು ದೀಪೋತ್ಸವ ಹಾಗೂ ಚೌತಿ ಪ್ರದೋಷಗಳಂದು ವಿಶೇಷ ಪೂಜೆ ನಡೆಯುತ್ತದೆ.

ಹರಿಹರೇಶ್ವರ ದೇವಸ್ಥಾನ: ಶೃಂಗೇರಿಯ ಹಳೇಬಸ್‌ನಿಲ್ದಾಣದ ಸಮೀಪವಿರುವ ಈ ದೇವಾಲಯವು ತುಂಬಾ ಪುರಾತನವಾಗಿದ್ದು, ಈ ರಸ್ತೆಗೆ ಈ ದೇವಾಲಯದಿಂದಾಗಿ ಹರಿಹರಬೀದಿ ಎಂದೇ ಹೆಸರಿಸಲಾಗಿದೆ. ಪ್ರತಿದಿನ ಬೆಳಗ್ಗೆ ಪೂಜೆ ನಡೆಯುತ್ತದೆ.

ತೋರಣ ಗಣಪತಿ ದೇವಸ್ಥಾನ: ಶ್ರೀಮಠದ ಪ್ರವಚನ ಮಂದಿರದ ಒಳಗಡೆಯಿಂದ ಪ್ರವೇಶಿಸಿದಾಗ ಶಂಕರಾಚಾರ್ಯರ ದೇವಸ್ಥಾನದ ಪಕ್ಕದಲ್ಲೆ ಬಾಗಿಲಿನ ತೋರಣದಲ್ಲಿ ಮೂಡಿರುವ ಗಣಪತಿಯ ಸುಂದರ ವಿಗ್ರಹವಿದೆ. ತುಂಬಾ ಪ್ರಸಿದ್ಧಿಯಾಗಿರುವ ಈ ದೇವರಿಗೆ ಶೃಂಗೇರಿಗೆ ಬರುವ ಎಲ್ಲಾ ಭಕ್ತರು ಹರಕೆ ಹೇಳಿಕೊಳ್ಳುತ್ತಾರೆ. ಪ್ರತಿ ಚೌತಿಯಂದು, ಮಂಗಳವಾರಗಳಂದು ವಿಶೇಷ ಪೂಜೆಯಿದ್ದು ಸಂಕಲ್ಪ ಸಿದ್ಧಿಸುವುದೆಂಬ ನಂಬಿಕೆಯಿದೆ.

ಮಲಹಾನಿಕರೇಶ್ವರ ದೇವಸ್ಥಾನ: ಶೃಂಗೇರಿಯ ಮಧ್ಯಭಾಗದಲ್ಲಿರುವ ಈ ದೇವಾಲಯವು ಬೆಟ್ಟದ ಮೇಲಿದ್ದು ಸುಮಾರು ನೂರ ಎಪ್ಪತ್ತು ಮೆಟ್ಟಿಲುಗಳನ್ನು ಏರಿಹೋಗಬೇಕಾಗಿದೆ. ಭವಾನಿ ಅಮ್ಮನವರು, ಸ್ಥಂಭ ಗಣಪತಿ ಇರುವ ಇಲ್ಲಿ ಈಶ್ವರ ಪ್ರಧಾನವಾಗಿದ್ದು ಪ್ರತಿ ಸೋಮವಾರದಂದು ವಿಶೇಷ ಪೂಜೆಯಿರುತ್ತದೆ. ಕಾರ್ತಿಕ ಮಾಸ, ಶಿವರಾತ್ರಿಗಳಂದು ವಿಶೇಷ ಪೂಜೆ ನಡೆಯುತ್ತಿದ್ದು ಪ್ರತಿದಿನ ಎರಡು ಬಾರಿ ಪೂಜೆ ನಡೆಯುತ್ತದೆ.

ವೆಂಕಟರಮಣ ದೇವಸ್ಥಾನ: ಹೆಬ್ಬಾಗಿಲು ವೆಂಕಟರಮಣ ಎಂದು ಕರೆಯಲ್ಪಡುವ ಈ ದೇವಸ್ಥಾನವು ಶೃಂಗೇರಿಯ ಪ್ರವೇಶದಲ್ಲೆ ಸಿಗುತ್ತದೆ. ಪ್ರತಿ ಶನಿವಾರದಂದು ವಿಶೇಷ ಪೂಜೆಯಿದ್ದು ಪ್ರತಿದಿನ ಬೆಳಗ್ಗೆ 9 ರಿಂದ 11 ತನಕ ಪೂಜೆ ನಡೆಯುತ್ತದೆ. ಇತ್ತೀಚೆಗೆ ಈ ದೇವಾಲಯವು ನೂತನವಾಗಿ ನಿರ್ಮಾಣಗೊಂಡಿದೆ.

ಚಪ್ಪರದಾಂಜನೇಯ ಸ್ವಾಮಿ ದೇವಸ್ಥಾನ: ಶೃಂಗೇರಿಯ ಮುಖ್ಯ ರಸ್ತೆಯಲ್ಲಿರುವ ಈ ದೇವಾಲಯವು ತುಂಬಾ ಸುಂದರ ಮೂರ್ತಿ ಮತ್ತು ಪ್ರಾಂಗಣದಿಂದ ಕೂಡಿದೆ. ಚೈತ್ರ ಶುದ್ಧ ಏಕಾದಶಿಯಂದು ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯುತ್ತಿದ್ದು ಹನುಮಾನ್ ಜಯಂತಿ ಚೈತ್ರ ಶುದ್ಧ ಪೌರ್ಣಮಿಯಂದು ನಡೆಯುತ್ತದೆ. ಶೃಂಗೇರಿ ತಾಲ್ಲೂಕಿನ ಎಲ್ಲ ಮಾತೆಯರು ಸೇರಿ ಸತ್ಸಂಗ, ಸತ್ಯನಾರಾಯಣ ಪೂಜೆ ನಡೆಸುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಶ್ರೀ ರಾಜಗೋಪಾಲ ದೇವಸ್ಥಾನ ಶೃಂಗೇರಿ: ಶೃಂಗೇರಿಯ ಮಧ್ಯಭಾಗದಲ್ಲಿರುವ ಈ ದೇವಾಲಯವು ಶ್ರೀಮಠದ ಸಹಕಾರದಿಂದ ಪೂಜಿಸಲ್ಪಡುತ್ತಿದ್ದು, ಗೋಕುಲಾಷ್ಟಮಿ, ಶ್ರೀಕೃಷ್ಣ ಜಯಂತಿಯಂದು ಇಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಶ್ರೀ ಪಾರ್ಶ್ವನಾಥ ಜಿನಮಂದಿರ: ಶೃಂಗೇರಿಯಲ್ಲಿರುವ ಏಕೈಕ ಜೈನ ಮಂದಿರ ಇದಾಗಿದ್ದು ತುಂಬಾ ಸುಂದರವಾದ ಮಹಾವೀರ ಪಾರ್ಶ್ವನಾಥನ ವಿಗ್ರಹವಿದೆ. ತುಂಬಾ ಪುರಾತನವಾದ ಈ ದೇವಾಲಯವು ಈಚೆಗಷ್ಟೆ ನವೀಕರಣಗೊಂಡಿದ್ದು ಸುಂದರವು ವಿಶಾಲವು ಆಗಿದ್ದು ಶೃಂಗೇರಿಯ ಜೈನ ಸಮುದಾಯದವರ ಶ್ರಮಕ್ಕೆ ಕೈಗನ್ನಡಿಯಾಗಿದೆ.

ಶ್ರೀ ಹರಿಹರೇಶ್ವರ ದೇವಸ್ಥಾನ ಕೆಲವಳ್ಳಿ: ಶೃಂಗೇರಿಯಿಂದ ನಾಲ್ಕು ಕಿ.ಮೀ ದೂರದಲ್ಲಿ ಕಾವಡಿಯ ಸಮೀಪವಿರುವ ಈ ದೇವಸ್ಥಾನವು ಶ್ರೀ ಮಠದ ವ್ಯಾಪ್ತಿಗೆ ಒಳಪಟ್ಟಿದ್ದು, ಇಲ್ಲಿ ಹರಿಹರೇಶ್ವರ ದೇವರ ವಿಗ್ರಹವಿದೆ. ಪ್ರತಿ ಸೋಮವಾರ ವಿಶೇಷ ಪೂಜೆಯಿದ್ದು ಕಾರ್ತಿಕ ಮಾಸದಲ್ಲಿ ದೀಪೋತ್ಸವ ಬಲು ವಿಜೃಂಭಣೆಯಿಂದ ನಡೆಯುತ್ತದೆ. ಫಾಲ್ಗುಣ ಬಹುಳ ಷಷ್ಠಿಯಂದು ರುದ್ರಹೋಮ ನಡೆಯುತ್ತದೆ.

ಶ್ರೀ ಸಿದ್ಧಿವಿನಾಯಕ ದೇವಸ್ಥಾನ ಹಿಂಬರವಳ್ಳಿ: ಶೃಂಗೇರಿ–ಕೊಪ್ಪ ತಾಲ್ಲೂಕಿನ ಅಂಚಿನಲ್ಲಿರುವ ಈ ದೇವಾಲಯವು ತುಂಬಾ ಕಾರಣೀಕವೆಂದು ಪ್ರಸಿದ್ಧಿ ಪಡೆದಿದೆ. ಉದ್ಭವಮೂರ್ತಿಯಿರುವ ಇಲ್ಲಿ ದೇವಾಲಯವು ಈಚೆಗಷ್ಟೇ ತುಂಬಾ ಸುಂದರವಾಗಿ ಕಟ್ಟಲ್ಪಟ್ಟಿದೆ. ಚೌತಿಗಳಂದು ವಿಶೇಷ ಪೂಜೆಯಿದ್ದು ವಾಹನ ಪೂಜೆ, ಪ್ರತಿಷ್ಠಾನ ಮಹೋತ್ಸವಗಳು ಬಲು ವಿಜೃಂಭಣೆಯಿಂದ ನಡೆಯುತ್ತವೆ. ಇದು ಶೃಂಗೇರಿಯಿಂದ ಬೇಗಾನೆ –ಬಿಲಗದ್ದೆ ಮಾರ್ಗದಲ್ಲಿ ಚಲಿಸಿದಾಗ ಶೃಂಗೇರಿಯಿಂದ ಸುಮಾರು ಎಂಟು.ಕಿ.ಮೀ ದೂರದಲ್ಲಿ ಸಿಗುತ್ತದೆ.

ಉಮಾಮಹೇಶ್ವರ ದೇವಸ್ಥಾನ ಗುಲಗಂಜಿ ಮನೆ: ಶೃಂಗೇರಿಯಿಂದ ಕಾರ್ಕಳ ಮಾರ್ಗದಲ್ಲಿ ಚಲಿಸುವಾಗ ಕೆರೆಕಟ್ಟೆಯ ಸಮೀಪ ಸಿಗುವ ಈ ದೇವಸ್ಥಾನವು ತುಂಬಾ ಪುರಾತನವಾದದ್ದು, ಶಿಥಿಲಾವಸ್ಥೆಯಲ್ಲಿದ್ದ ಈ ದೇವಾಲಯವು ಈಗ ನವೀಕರಣಗೊಂಡಿದ್ದು, ತುಂಬಾ ಸುಂದರವಾಗಿದೆ. ತ್ರಿವೇಣಿ ಸಂಗಮ ನದಿಗಳಿರುವ ಇಲ್ಲಿ ಸುಂದರ ಪರಿಸರ, ಜೊತೆಗೆ ತುಂಬಾ ಕಾರಣೀಕ ದೇವರೆಂಬ ನಂಬಿಕೆ ಈ ಭಾಗದ ಜನರಲ್ಲಿದೆ.

ಶ್ರೀ ದುರ್ಗಾಂಬಾ ದೇವಸ್ಥಾನ ನೇತ್ರವಳ್ಳಿ: ಈ ದೇವಾಲಯವು ಶೃಂಗೇರಿಯಿಂದ 6 ಕಿ.ಮೀ ದೂರದಲ್ಲಿದ್ದು ಅಡ್ಡಗದ್ದೆಯಿಂದ ಎರಡು ಕಿ.ಮೀ ಒಳಗಡೆ ಹೋಗಬೇಕು. ಕಾಡಿನ ಮಧ್ಯದಲ್ಲಿ ಸುಂದರ ಪರಿಸರದಲ್ಲಿರುವ ಈ ದೇವಸ್ಥಾನವು ಈ ಭಾಗದ ಜನರ ನಂಬಿಕೆಯ ಕೇಂದ್ರವಾಗಿದ್ದು ಪ್ರತಿವರ್ಷ ಮಾಘಮಾಸದಲ್ಲಿ ದುರ್ಗಾಂಬಾ ಸಮಾರಾಧನೆ ನಡೆಯುತ್ತದೆ. ಹರಕೆ, ವಿಶೇಷ ಪೂಜೆಗಳು ನಡೆಯುತ್ತವೆ.

ಶ್ರೀಗಣಪತಿ ದೇವಸ್ಥಾನ ಉಳುವೆ: ಶೃಂಗೇರಿಯಿಂದ ಕೊಪ್ಪ ಮಾರ್ಗದಲ್ಲಿ ಉಳುವೆ ಊರು ಸಿಗುತ್ತದೆ. ಇಲ್ಲಿಂದ ಒಂದು ಫರ್ಲಾಂಗ್ ಒಳಗಡೆ ಈ ದೇವಾಲಯವು ಸಿಗುತ್ತದೆ. ತುಂಬಾ ಸುಂದರ ಮೂರ್ತಿಯಿರುವ ಈ ದೇವಾಲಯವು ಬಲು ಆಕರ್ಷಣೀಯವಾಗಿದೆ.

ಬನಶಂಕರಿ ಅಮ್ಮನವರ ದೇವಸ್ಥಾನ ಮಕ್ಕಿಮನೆ: ಶೃಂಗೇರಿ–ಆಗುಂಬೆ ರಸ್ತೆಯಲ್ಲಿ 3ಕಿ.ಮೀ ದೂರದಲ್ಲಿ ಮಕ್ಕಿಮನೆ ಸಿಗುತ್ತದೆ. 1/2 ಕಿ.ಮೀ ಒಳಗಡೆಯಲ್ಲಿ ಈ ದೇವಾಲಯವಿದೆ. ಪ್ರತಿದಿನ 12 ರಿಂದ 1ರ ತನಕ ಪೂಜೆ ನಡೆಯುತ್ತಿದ್ದು ಬನದ ಹುಣ್ಣಿಮೆ ಹಾಗೂ ನವರಾತ್ರಿಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಮಳವಳ್ಳಿಯ ಗಂಗಾಧರೇಶ್ವರ: ಶೃಂಗೇರಿಯಿಂದ ಕೊಪ್ಪ ಮಾರ್ಗದಲ್ಲಿ ಎಂಟು ಕಿ.ಮೀ ದೂರದಲ್ಲಿ ಎರಡು ತಾಲ್ಲೂಕಿನ ಅಂಚಿನಲ್ಲಿರುವ ಈ ದೇವಾಲಯವು ತುಂಗಾನದಿಯ ದಂಡೆಯ ಮೇಲಿದೆ. ಕೇದಾರವ್ರತ, ಅನಂತನ ವ್ರತ ಮುಖ್ಯವಾಗಿದ್ದು, ಇಲ್ಲಿ ರುದ್ರಹೋಮ, ಗಣಹೋಮಗಳು ನಡೆಯುತ್ತವೆ.[17]

ಶ್ರೀ ಶಾರದಾ ದೇವಿಯು ಅಗ್ರಮಾನ್ಯಳಾಗಿ ನಾಡಿನ ಹಾಗೂ ಹೊರನಾಡಿನ ಭಕ್ತರ ಆರಾಧ್ಯ ದೈವವಾಗಿ ಪೂಜಿತಳಾಗಿದ್ದರೂ, ಶೃಂಗೇರಿಯ ಸುತ್ತಮುತ್ತಲು ಅನೇಕ ಶಿವದೇವಾಲಯಗಳಿರುವುದು ಹಾಗೂ ಹೊಳೆ, ಕೊಳ್ಳಗಳ ಪಕ್ಕದ ಕಲ್ಲುಬಂಡೆಯ ಮೇಲೆ ಈಶ್ವರಲಿಂಗ ಮತ್ತು ಬಸವನ ವಿಗ್ರಹಗಳು ಕಂಡುಬರುತ್ತಿರುವುದರಿಂದ, ಈ ಭಾಗದ ಜನರು ಹೆಚ್ಚಾಗಿ ಈಶ್ವರ ಭಕ್ತರಾಗಿದ್ದರೆಂದು ತಿಳಿದು ಬರುತ್ತದೆ. ಪ್ರತಿಯೋದು ಗ್ರಾಮ, ಊರುಗಳಲ್ಲೂ ಗ್ರಾಮದೇವತೆಯ ಗುಡಿಯನ್ನು ನಿರ್ಮಿಸಿ ನಿತ್ಯಕರ್ಮಗಳನ್ನು ನಡೆಸಿಕೊಂಡು ಬರುತ್ತಿದ್ದರೆಂಬುದು ತಿಳಿದುಬರುತ್ತದೆ. ಪ್ರತಿಯೊಬ್ಬರ ಮನೆಯಲ್ಲೂ ದೇವರ ವಿಗ್ರಹ, ಗುಡಿಗಳನ್ನು ಕಾಣಬಹುದಾಗಿದೆ. ತೀರಾ ಇತ್ತೀಚೆಗೆ ಶ್ರೀಮಠದ ಹಾಗೂ ಇತರೆ ದಾನಿಗಳ ಸಹಕಾರದಿಂದ ದೇವಾಲಯಗಳು ಪುನರ್ ನಿರ್ಮಾಣಗೊಳ್ಳುತ್ತಿವೆ. ಶೃಂಗೇರಿಯ ಸುತ್ತಮುತ್ತಲು ಮತ್ತೊಮ್ಮೆ ಭಕ್ತಿ ಶ್ರದ್ಧೆಯ ವಾತಾವರಣ ನಿರ್ಮಾಣವಾಗುತ್ತಿರುವುದು ತಿಳಿದು ಬಂದಿದೆ. ಶೃಂಗೇರಿಯ ಶ್ರೀ ವಿದ್ಯಾಶಂಕರ ದೇವಾಲಯ, ಶನೈಶ್ಚರ ದೇವಾಲಯ, ಶ್ರೀ ವೃದ್ಧನರಸಿಂಹ ಭಾರತೀ ಸ್ವಾಮಿಗಳವರ ಸಮಾಧಿ, ಸುಬ್ರಹ್ಮಣ್ಯ ದೇವಾಲಯ, ಶಕ್ತಿಗಣಪತಿ, ತೋರಣ ಗಣಪತಿ ಮೊದಲಾದ ಪ್ರಮುಖ

ದೇವರ ದರ್ಶನಕ್ಕೆ ಅಧಿಕ ಸಂಖ್ಯೆಯ ಭಕ್ತಾದಿಗಳು ಬಂದು ಸೇವೆ ಸಲ್ಲಿಸುತ್ತಿದ್ದಾರೆ.

ಹಿಂದೆ ಕಲ್ಲಿನಿಂದ ಮಾಡಿದ ಅಥವಾ ಲೋಹದಿಂದ ಮಾಡಿದ ದೇವರ ವಿಗ್ರಹಗಳನ್ನು ಕಲ್ಲಿನ ಗುಡಿಗಳಲ್ಲಿ ಪ್ರತಿಷ್ಠಾಪಿಸಿ ಸೇವೆ ಸಲ್ಲಿಸಿದ್ದರು. ಗ್ರಾಮ, ಹಳ್ಳಿಯ ದೇವಾಲಯಗಳಾಗಿದ್ದರೆ ಹಾಗೂ ಕಾರಣಿಕ ದೇವರಾಗಿದ್ದರೆ ದೊಡ್ಡದಾದ ಬಲಿಷ್ಠ ದೇವಾಲಯಗಳನ್ನು ನಿರ್ಮಿಸುತ್ತಿದ್ದರು. ಉಳಿದಂತೆ ಯಥಾಶಕ್ತಿ ದೇವಾಲಯಗಳನ್ನು ನಿರ್ಮಾಣ ಮಾಡಿ ತಮ್ಮ ಸೇವೆಯನ್ನು ನಿರಂತರವಾಗಿ ಸಲ್ಲಿಸುತ್ತಾ ಬರುತ್ತಿದ್ದರು. ಇತ್ತೀಚೆಗೆ ದೇವಾಲಯಗಳ ನಿರ್ಮಾಣದಲ್ಲಿ ಸ್ಪರ್ಧೆಯೇರ್ಪಟ್ಟು ಭವ್ಯವಾಗಿ ಪುನರ್‌ನಿರ್ಮಾಣಮಾಡಿ ಪುನಃಪ್ರತಿಷ್ಠಾಪನೆ ನೆರವೇರಿಸುತ್ತಿದ್ದಾರೆ. ಊರಿನ ದಾನಿಗಳು, ಪರವೂರಿನ ದಾನಿಗಳ ಸಹಾಯ, ಸಹಕಾರ ಪಡೆದು ನಿರ್ಮಾಣ ಮಾಡುತ್ತಿದ್ದಾರೆ.

ಇತ್ತೀಚೆಗೆ ದೇವರ ಆರಾಧನೆ, ಜಾತ್ರೆ, ಹರಕೆ ಮೊದಲಾದವುಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಕೆಲವಷ್ಟು ಸ್ವಪ್ರತಿಷ್ಠೆಯಾಗಿದ್ದು ಹಿಂದಿನಂತಿದ್ದ ಭಯ, ಭಕ್ತಿ, ಶ್ರದ್ಧೆ, ನಿಷ್ಠೆಗಳು ಕಾಣಸಿಗುವುದಿಲ್ಲ. ಆದರೂ ಸ್ಥಾವರಗಳ ನಿರ್ಮಾಣ ಮಾತ್ರ ಅಧಿಕಗೊಳ್ಳುತ್ತಿವೆ. ಧರ್ಮ, ದೇವರು, ದೈವ, ಆರಾಧನೆ ಮೊದಲಾದವುಗಳು ಯಾವುದೋ ಹಿನ್ನೆಲೆ, ಮಹತ್ವದಿಂದ ಆರಂಭಗೊಂಡಿದ್ದು ಬರಬರುತ್ತಾ ಅದರ ವಾಸ್ತವಾಂಶದ ಮಹತ್ವವು ಮುಂದಿನ ಪೀಳಿಗೆಯವರಿಗೆ ಪ್ರವಹಿಸಿದೆ ಡಾಂಭಿಕ, ಮೌಢ್ಯ, ಅಂಧಾನುಕರಣೆಯ ಪ್ರತೀಕವಾಗಿದೆ. ಕೆಲವು ಹಿರಿಯರ ಒತ್ತಾಯದಿಂದ ಅನಿವಾರ್ಯವಾಗಿ, ಯಾಂತ್ರಿಕವಾಗಿ ಮುಂದುವರಿಯುತ್ತಿವೆ. ಅವುಗಳ ಮಹತ್ವವು ಹಿರಿಯರಿಗೂ ಗೊತ್ತಿಲ್ಲ ಕಿರಿಯರೂ ಕೇಳಿ ತಿಳಿದುಕೊಳ್ಳುವ ಗೊಡವೆಗೆ ಹೋಗುತ್ತಿಲ್ಲ. ಹೀಗೆ ತಲತಲಾಂತರದಿಂದ ಹರಿದು ಬಂದಿದ್ದು ಶೃಂಗೇರಿಯ ಸುತ್ತಮುತ್ತಲೂ ಇವುಗಳನ್ನು ಕಾಣಬಹುದಾಗಿದೆ. ಆದರೆ ಜಾತ್ರೆ, ಹರಕೆ, ಸೇವೆ, ಮೊದಲಾದ ಸಂದರ್ಭದಲ್ಲಿ ಅಯಾ ಊರಿನವರು ಒಂದಾಗಿ ಸೇರಿ ಸೇವೆ ಸಲ್ಲಿಸುವುದು ಪರಸ್ಪರರ ಒಗ್ಗಟ್ಟಿಗೆ ಕಾರಣವಾಗಿದೆ. ಭಿನ್ನಾಭಿಪ್ರಾಯಗಳಿದ್ದರೂ ದೇವತಾಕಾರ್ಯದ ಸಂದರ್ಭದಲ್ಲಿ ಎಲ್ಲರೂ ಒಟ್ಟಾಗಿ ಸೇರುತ್ತಿರುವುದು ಪ್ರಸ್ತುತ ಸನ್ನಿವೇಶಕ್ಕೆ ಅನಿವಾರ್ಯವೆಂದೆನಿಸುತ್ತಿದೆ.

ಇತಿಹಾಸ ಪ್ರಸಿದ್ಧ ಕಿಗ್ಗಾ

ಸಹ್ಯಾದ್ರಿಯ ಪರ್ವತಶ್ರೇಣಿಗಳ ಮಡಿಲಲ್ಲಿ ಕಿಗ್ಗಾ ಇದೆ. ಶೃಂಗೇರಿ ತಾಲ್ಲೂಕಿನ ವ್ಯಾಪ್ತಿಗೆ ಸೇರಿದ ಹೋಬಳಿ ಕೇಂದ್ರವಾದ ಕಿಗ್ಗಾ ಶ್ರೀಋಷ್ಯಶೃಂಗೇಶ್ವರ ದೇವಾಲಯದಿಂದ ಜಗದ್ವಿಖ್ಯಾತವಾಗಿದೆ. ವಿಭಾಂಡಕ ಮಹರ್ಷಿಗಳ ಸುಪುತ್ರರಾದ ಶ್ರೀ ಋಷ್ಯಶೃಂಗರಲ್ಲಿ ಐಕ್ಯವಾದ ಪವಿತ್ರಸ್ಥಳವೆಂಬ ಪ್ರತೀತಿ ಇರುವುದರಿಂದ ಈ ಊರನ್ನು ಋಷ್ಯಶೃಂಗಪುರವೆಂದೂ ಕರೆಯುತ್ತಾರೆ. ಈ ಊರಿಗೆ ಅತ್ಯಂತ ಪ್ರಾಚೀನವಾದ ಇತಿಹಾಸವಿದೆ. ತುಂಗಾನದಿಯ ಉಪನದಿಯಾದ ನಂದಿನಿ ನದಿಯ ತೀರದಲ್ಲಿರುವ ಈ ಊರಿಗೆ

ಮರಕಲು ಎಂಬ ಹೆಸರೂ ಇದ್ದು ಇದು ಶೃಂಗೇರಿಯಿಂದ ಪಶ್ಚಿಮಕ್ಕೆ ಎಂಟು ಕಿಲೋಮೀಟರ್ ದೂರದಲ್ಲಿದೆ. ಋಷ್ಯಶೃಂಗರಿಂದಲೇ ಶೃಂಗಗಿರಿ ಅಥವಾ ಶೃಂಗೇರಿ ಎಂಬ ಹೆಸರು ಬಂದಿರಬಹುದೆಂದೂ ಒಂದು ಊಹೆಯಿದೆ.

ಕಿಗ್ಗಾ ಹೆಸರಿನ ನಿಷ್ಪತ್ತಿ: ಕಿಗ್ಗಾ ಎಂಬ ಹೆಸರು ಈ ಊರಿಗೆ ಬಂದುದೇಕೆ, ಈ ಶಬ್ದದ ನಿಷ್ಪತ್ತಿ ಹೇಗೆ ಎಂಬುದನ್ನು ವಿವರಿಸುವುದು ಸುಲಭವಲ್ಲ. ದಂತಕಥೆಯಂತೆ ತೋರುವ ಸ್ಥಳೀಯರು ನೀಡುವ ವಿವರಣೆಯಂತೆ 'ಪೆಳ್ಗ' ಎಂಬುದು ಮುಂದೆ ಕಿಗ್ಗಾ ಎಂದಾಯಿತು. ಭಾಷಾ ವಿಜ್ಞಾನ ದೃಷ್ಟಿಯಿಂದ ವಿವರಿಸಲಾಗದ ನಿಷ್ಪತ್ತಿ ಇದು. 'ಕಗ್ಗ' ಎಂಬುದು 'ಕಿಗ್ಗ' ಆಯಿತು ಎಂಬುದು ಮತ್ತೊಂದು ವಿವರಣೆ. ಭಾಷಾ ದೃಷ್ಟಿಯಿಂದ ಇದೂ ಸಮರ್ಥನೀಯವಾಗಿಲ್ಲ. ಆದರೆ ಶಾಸನದ ಆಧಾರದಿಂದ ಕಿಗ್ಗಾ ಸ್ಥಳನಾಮದ ಮೂಲವನ್ನು ಐತಿಹಾಸಿಕವಾಗಿ ಸಮರ್ಥಿಸಬಹುದು. ಕ್ರಿಶ 7ನೇ ಶತಮಾನದ ಶಾಸನವೊಂದರಲ್ಲಿ 'ಕಿಳ್ಗಾ' ಎಂಬ ರೂಪ ದೊರೆಯುತ್ತದೆ. ಇದಕ್ಕೆ ಕಿಟ್ಟಲ್ ಕೋಶದಲ್ಲಿ 'ಕೆಳಗಣ' ಎಂಬ ಅರ್ಥ ದೊರೆಯುತ್ತದೆ. ಹೀಗಾಗಿ 'ಕಿಳ್ಗ' ಎಂಬುದು 'ಕಿಗ್ಗಾ' ಎಂದು ರೂಪಾಂತರಗೊಂಡಿರುವ ಸಾಧ್ಯತೆಗಳಿವೆ. ಇದಕ್ಕೆ ಸಮರ್ಥನೆ ನೀಡಬಹುದಾದ ಅರ್ಥ ವಿವರಣೆಯೂ ಇದೆ. ಕಿಗ್ಗಾ ದೇವಾಲಯದ ಪಶ್ಚಿಮಕ್ಕೆ ಬೆಟ್ಟವಿದೆ. ದಟ್ಟವಾದ ಕಾಡುಗಳಿಂದ ರಂಜಿಸುವ ಈ ಬೆಟ್ಟವನ್ನು 'ಮೇಲ್ಗಾಡ್' ಎಂದೂ ತಪ್ಪಲಲ್ಲಿರುವ ಕಾಡನ್ನು 'ಕಿಳ್ಗಾಡ್' ಎಂದೂ ಕರೆದುದು ಸಮಂಜಸವಾಗಿದೆ. ಬೆಟ್ಟದ ತಪ್ಪಲಲ್ಲಿರುವ ದೇವನನ್ನು 'ಕಿಳ್ಗಣದೇವ' ಎಂದು ಕರೆಯಲಾಗಿದೆ. ಇಲ್ಲಿ ದೊರೆಯುವ ಮೊದಲ ಶಾಸನದಲ್ಲಿ 'ಕಿಳ್ಗದೇವ' ಅಥವಾ 'ಕಿಳ್ಗೇಶ್ವರ' ಎಂಬ ಉಲ್ಲೇಖವಿದೆ. ಹೀಗಾಗಿ 'ಕಿಳ್ಗ'ವೇ ಕಿಗ್ಗಾ ಆಗಿದೆಯೆಂಬ ತೀರ್ಮಾನಕ್ಕೆ ಬರಬಹುದಾಗಿದೆ.[18]

ಐತಿಹಾಸಿಕ ಅಂಶಗಳು: ಕಿಗ್ಗಾದ ದೇವಾಲಯವು ಕರ್ನಾಟಕದ ಅತಿ ಪ್ರಾಚೀನ ದೇವಾಲಯಗಳಲ್ಲೊಂದು. ಆದರೆ ಈಗ ನಾವು ಕಾಣುವ ಕಟ್ಟಡದ ಬಹುಭಾಗ ವಿಜಯನಗರ ಕಾಲದ್ದೆಂದು ಹೇಳಲಾಗಿದೆ. ಈ ಗ್ರಾಮದ ಪ್ರಾಚೀನತೆಗೆ ಇಲ್ಲಿ ದೊರೆಯುವ ಶಿಲಾಶಾಸನಗಳು ಹಾಗೂ ಹಳೆಯ ಕೋಟೆಯ ಅವಶೇಷಗಳು ಸಾಕ್ಷಿಯಾಗಿವೆ. ಕ್ರಿಶ 7ನೇ ಶತಮಾನಕ್ಕೆ ಸೇರಿದ್ದೆಂದು ಹೇಳಲಾದ ನಾಲ್ಕು ಶಾಸನಗಳು ಹಾಗೂ ಸುಮಾರು 11ನೇ ಶತಮಾನಕ್ಕೆ ಸೇರಿದ ಶಾಸನವೂ ಇಲ್ಲಿ ದೊರೆತಿವೆ. ದೇವಾಲಯಕ್ಕೆ ದಾನ ದತ್ತಿಗಳನ್ನು ನೀಡಿದ ಸಂಗತಿ ಈ ಶಾಸನಗಳಲ್ಲಿ ನಿರೂಪಿತವಾಗಿದೆ. ಇಲ್ಲಿನ ಶಾಸನವೊಂದು ಇಲ್ಲಿ ಕಿಗ್ಗಣದೇವನ ದೇವಾಲಯದ ಜೊತೆಗೆ ಭಟ್ಟಾರ ಅಗ್ರಹಾರವಿದ್ದುದನ್ನು ಸೂಚಿಸುತ್ತದೆ. ಅಗ್ರಹಾರವೆಂದರೆ ಆಗಮ ಮತ್ತು ವೇದಗಳಲ್ಲಿ ಪಾಂಡಿತ್ಯ ಹೊಂದಿದ್ದ ವಿದ್ವಾಂಸರು ವಿದ್ಯಾದಾನ ಮಾಡುವ ಕೇಂದ್ರವೆಂದು ಅರ್ಥ. ಹೀಗಾಗಿ ಕಿಗ್ಗಾ ಪ್ರಾಚೀನ ಕಾಲದ ವಿದ್ಯಾಕೇಂದ್ರಗಳಲ್ಲಿ ಒಂದಾಗಿತ್ತೆಂದು ಹೇಳಬಹುದು.[19] ಹೊಂಬುಜ (ಹುಂಚ) ಅರಸರು ಹಾಗೂ ಅಳುಪ ವಂಶದ

ಅರಸರು ದತ್ತಿ, ದಾನಗಳನ್ನು ಕಿಗ್ಗದ ದೇವಸ್ಥಾನಕ್ಕೆ ನೀಡಿರುವುದು ತಿಳಿದುಬರುತ್ತದೆ. ಕಿಗ್ಗಾಕ್ಕೆ 'ಮರ್ಕಲ್' ಎಂಬ ಇನ್ನೊಂದು ಹೆಸರಿರುವುದನ್ನು ಈ ಹಿಂದೆ ಪ್ರಸ್ತಾಪಿಸಲಾಗಿದೆ. ಈ ಪದದ ನಿಷ್ಪತ್ತಿ ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದರೆ ಇಲ್ಲಿ ಪ್ರಚಲಿತವಾಗಿರುವ ದಂತಕತೆಯಂತೆ ಮರ್ಕಲ್ ನಾಯಕನೆಂಬುವವನು ಈ ಪ್ರದೇಶವನ್ನು ಆಳುತ್ತಿದ್ದನಂತೆ. ದೇವಾಲಯಕ್ಕೆ ಸುಮಾರು ಒಂದು ಕಿ.ಮೀ ದೂರದಲ್ಲಿ ಮರ್ಕಲ್ ನಾಯಕನ ಕೋಟೆಯಿದ್ದಿತೆಂಬ ಸ್ಥಳವನ್ನು ಸ್ಥಳೀಯರು ತೋರಿಸುತ್ತಾರೆ. ಚೌಕಾಕೃತಿಯ ಎತ್ತರವಾದ ದಂಡೆಗಳು, ನಡುವೆ ಅರಮನೆಯಿದ್ದ ಸ್ಥಳವೆಂದು ಪ್ರತೀತಿ ಇರುವಲ್ಲಿ ನೆಲಗಟ್ಟುಗಳ ಕುರುಹುಗಳು ಈ ಹೇಳಿಕೆಯನ್ನು ಸಮರ್ಥಿಸುವಂತಿವೆ. ದೇವಾಲಯದ ಹೊರಾಂಗಣದಲ್ಲಿರುವ ವಿಸ್ತಾರವಾದ ಚಾವಡಿಯನ್ನು ಮರ್ಕಲ್ ನಾಯಕನ ಚಾವಡಿಯೆಂದು ಹೇಳಲಾಗುತ್ತಿದೆ. ಮರ್ಕಲ್ ನಾಯಕ ಒಬ್ಬ ಸಾಮಾನ್ಯ ಪಾಳೆಯಗಾರನಾಗಿದ್ದಿರಬಹುದು. ಆದರೆ ಇತಿಹಾಸದಲ್ಲಿ ಮರ್ಕಲ್ ಸಂತತಿಯ ಪ್ರಸ್ತಾಪವಿಲ್ಲ. ಕೆಳದಿಯ ರಾಜವಂಶದವರು ಕಿಗ್ಗಾ ದೇವರಲ್ಲಿ ನಿಷ್ಠೆಯುಳ್ಳವರಾಗಿದ್ದರೆಂಬುದಕ್ಕೆ ಆಧಾರಗಳು ದೊರೆಯುತ್ತವೆ. ಋಷ್ಯಶೃಂಗೇಶ್ವರ ದೇವಾಲಯದ ಉತ್ಸವಮೂರ್ತಿಯ ಪೀಠದ ಮೇಲಿನ ಬರಹದಿಂದ ಕೆಳದಿರಾಣಿ ಚೆನ್ನಮಾಜಿಯ (ಕ್ರಿ.ಶ 1671–1691) ಕೈಕೆಳಗೆ ಅಧಿಕಾರಿಯಾಗಿದ್ದ ಗುರುಬಸಪ್ಪ ಈ ವಿಗ್ರಹವನ್ನು ಮಾಡಿಸಿ ದೇವಾಲಯಕ್ಕೆ ಅರ್ಪಿಸಿದ ಸಂಗತಿ ತಿಳಿದುಬರುತ್ತದೆ. 18ನೆಯ ಶತಮಾನಕ್ಕೆ ಸೇರಿದ ಲಿಂಗಣ್ಣ ಕವಿ ತನ್ನ 'ಕೆಳದಿನೃಪ ವಿಜಯಂ'ನಲ್ಲಿ ಭದ್ರಪ್ಪನಾಯಕ ಕಿಗ್ಗಾಕ್ಕೆ ಹೋಗಿ ಋಷ್ಯಶೃಂಗೇಶ್ವರ ದೇವರ ದರ್ಶನ ಪಡೆದ ಸಂಗತಿಯನ್ನು ಉಲ್ಲೇಖಿಸಿದ್ದಾನೆ.

ಋಷ್ಯಶೃಂಗೇಶ್ವರ ದೇವಾಲಯ:

ನಿತ್ಯ ಹರಿದ್ವರ್ಣದ ದಟ್ಟಕಾಡಿನ ರಮ್ಯ ಹಿನ್ನೆಲೆಯಲ್ಲಿ ನೆಲಮಟ್ಟದಿಂದ ಸುಮಾರು 20 ಅಡಿ ಎತ್ತರದಲ್ಲಿ ನಿಂತಿರುವ ಋಷ್ಯಶೃಂಗೇಶ್ವರ ದೇವಾಲಯವು ಕಗ್ಗಲ್ಲಿನ ದೊಡ್ಡ ಕಟ್ಟಡವಾಗಿದ್ದು, ಚತುರಸ್ರಾಕಾರದ ಗರ್ಭಗೃಹ (12'x12'), ಶುಕನಾಸಿ (10'x8'), ಪ್ರದಕ್ಷಿಣಾಪಥ, ನವರಂಗ (30'x30'), ಮುಖಮಂಟಪ, ನಂದಿಮಂಟಪವನ್ನೊಳಗೊಂಡಂತೆ ಒಳ ಪ್ರಾಕಾರ ಮತ್ತು ಹೊರಪ್ರಾಕಾರಗಳಿಂದ ಕೂಡಿದೆ. ಈ ಎಲ್ಲ ಭಾಗಗಳೂ ಏಕಕಾಲದಲ್ಲಿ ನಿರ್ಮಾಣಗೊಂಡಂತೆ ಭಾಸವಾಗುವುದಿಲ್ಲ. ಗರ್ಭಗೃಹವು ಅತ್ಯಂತ ಪ್ರಾಚೀನ ವಾಸ್ತುವಾಗಿದೆ. ಎರಡನೆಯ ಹಂತದಲ್ಲಿ ಶುಕನಾಸಿ ಮತ್ತು ಪ್ರದಕ್ಷಿಣಾಪಥಗಳು ನಿರ್ಮಾಣಗೊಂಡಂತೆ ತೋರುತ್ತವೆ. ಗರ್ಭಗೃಹದ ಮೂಲವಾಸ್ತುವಿನ ಮೇಲೆ ಬೋದಿಗೆಗಳನ್ನಿರಿಸಿ ವಿಮಾನವನ್ನು ನಿರ್ಮಿಸಿ ಶುಕನಾಸಿ, ಪ್ರದಕ್ಷಿಣಾಪಥಗಳನ್ನು ಜೋಡಿಸಿರುವಂತೆ ಕಾಣುತ್ತದೆ. ನವರಂಗವು ಮೂರನೆಯ ಹಂತದಲ್ಲಿ ನಿರ್ಮಾಣ ಗೊಂಡಿರಬೇಕು. ಅಲ್ಲಿಯ ಸ್ತಂಭಗಳಲ್ಲಿ ಶಿಲ್ಪಚಾತುರ್ಯದ ನಯ, ನಾಜೂಕುಗಳು ಇವೆ. ಒಂದು ಕಂಬದಲ್ಲಿ ಋಷ್ಯಶೃಂಗರನ್ನು ಸ್ತ್ರೀಯರು ಪಲ್ಲಕ್ಕಿಯೊಂದರಲ್ಲಿ

ಅಂಗದೇಶಕ್ಕೆ ಕರೆದೊಯ್ಯುತ್ತಿರುವ ಚಿತ್ರವಿದೆ. ಕಾಳಿಂಗಮರ್ದನ, ಹಂಸಜೋಡಿ, ಉಗ್ರನರಸಿಂಹ, ಗೋಪಿಕೃಷ್ಣ, ಸೀತಾಲಕ್ಷ್ಮಣ ಸಹಿತ ಶ್ರೀ ರಾಮಚಂದ್ರ, ಆನೆ, ಹನುಮಂತ, ಕೇಶಸಿಂಗಾರದಲ್ಲಿ ತೊಡಗಿರುವ ರಮಣಿ ಮುಂತಾದ ತೆಳು ಉಬ್ಬು ಶಿಲ್ಪಗಳನ್ನು ಈ ಕಂಬಗಳಲ್ಲಿ ಕಾಣಬಹುದು. ನವಗ್ರಹಗಳ ಕೆತ್ತನೆಯನ್ನು ನವರಂಗದ ವಿಮಾನದ ಒಳಪ್ರಕಾರದಲ್ಲಿ ಕಾಣಬಹುದು. ಇಲ್ಲಿಯ ಶಿಲ್ಪಗಳು ಚಾಳುಕ್ಯ ಶಿಲ್ಪ ಶೈಲಿಯನ್ನು ಹೋಲುತ್ತವೆ. ಮುಖಮಂಟಪವು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಂತೆ ಕಾಣುತ್ತದೆ. ಆನೆಯ ಮೇಲೆ ಎರಗಿ ಎರಡು ಕಾಲುಗಳಿಂದ ನಿಂತಿರುವ ಸಿಂಹವನ್ನೇರಿರುವ ಮನುಷ್ಯರ ಕೆತ್ತನೆಯನ್ನೊಳಗೊಂಡ ಮುಂಗಡೆಯ ಎರಡು ಕಂಬಗಳು ವಿಜಯನಗರ ಶಿಲ್ಪದ ಪ್ರತ್ಯಕ್ಷ ಸಾಕ್ಷಿಗಳಂತಿವೆ.

ಗರ್ಭಗೃಹದಲ್ಲಿರುವ ಸ್ತಂಭಾಕೃತಿಯ ಲಿಂಗವು ಮುಂಭಾಗದಲ್ಲಿ ಚಪ್ಪಟೆಯಾಗಿದ್ದು ಉಳಿದ ಭಾಗ ಗೋಲಾಕಾರವಾಗಿದೆ. ಚಂದ್ರಭಾರ ಪೀಠವನ್ನು ಬಿಟ್ಟು ಲಿಂಗವೇ ನಾಲ್ಕು ಅಡಿ ಎತ್ತರವಾಗಿದೆ. ಲಿಂಗವು ರುದ್ರಾಕ್ಷಾಕಾರವಾಗಿರುವುದು ಒಂದು ಅಪರೂಪದ ವೈಶಿಷ್ಟ್ಯ. ಲಿಂಗದ ಮೇಲೆ ಮೂರು ಕೋಡುಗಳನ್ನು ಬಿಡಿಸಲಾಗಿದೆ. ಇವುಗಳಲ್ಲಿ ಮೇಲಿನದು ಋಷ್ಯಶೃಂಗರನ್ನೂ, ಎಡಭಾಗದ ಕೋಡು ಶಾಂತಾದೇವಿಯನ್ನೂ, ಮೂರನೆಯದು ನಂದಿಯನ್ನೂ ಪ್ರತಿನಿಧಿಸುತ್ತದೆಂದು ಹೇಳುವುದುಂಟು. ಗರ್ಭಗೃಹದ ಪ್ರವೇಶದ್ವಾರದ ಎಡ ಬಲಗಳಲ್ಲಿ ಕ್ರಮವಾಗಿ ದುರ್ಗಾ ಮತ್ತು ಗಣಪತಿ ಗುಡಿಗಳಿವೆ. ಸೊಂಡಿಲು ಬಲಗಡೆಗೆ ತಿರುಗಿರುವ ದ್ವಿಭುಜ ಗಣಪತಿಯ ವಿಗ್ರಹವು ಒಂದು ವಿರಳ, ಗಮನಾರ್ಹ ಶಿಲ್ಪ. ದಕ್ಷಿಣ ಕನ್ನಡದ ಇಡುಗುಂಜಿ ಮತ್ತು ಕಿಗ್ಗಾಗಳೆರಡರಲ್ಲಿ ಮಾತ್ರ ಬಲಗಡೆ ಚಾಚಿರುವ ಸೊಂಡಿಲ ಗಣಪತಿ ಇರುವುದಾಗಿ ಪ್ರತೀತಿ.[20] ನವರಂಗಕ್ಕೆ ಮೂರು ಪ್ರವೇಶದ್ವಾರಗಳಿವೆ. ಇವುಗಳಲ್ಲಿ ಒಂದು ಶಾಂತಾದೇವಿಯ ಗುಡಿಗೆ ಸಂಪರ್ಕ ಕಲ್ಪಿಸುತ್ತದೆ. ದೇವಿಯ ಮೂರ್ತಿಯನ್ನು ಆಧುನಿಕ ಶಿಲ್ಪವೆನ್ನಲಾಗಿದೆ. ನವರಂಗದ ಕಂಬಗಳು ತಳಭಾಗದಲ್ಲಿ ಚೌಕಾಕಾರವಾಗಿದ್ದು ಮೇಲ್ಭಾಗದಲ್ಲಿ ಗುಂಡಾಗಿವೆ. ದೇವಾಲಯದ ಎದುರಿನಲ್ಲಿ ಕಲ್ಲು ಮಂಟಪವೊಂದರಲ್ಲಿ ಅತ್ಯಂತ ರಮಣೀಯವಾದ ಕಪ್ಪುಶಿಲೆಯ ಬಸವನ ವಿಗ್ರಹವಿದೆ. ಇದರ ಶಿಲ್ಪಶೈಲಿ ಹೊಯ್ಸಳರ ಮಾದರಿಯನ್ನು ಹೋಲುತ್ತದೆ. ಈ ವಿಗ್ರಹದ ಬಗ್ಗೆ ಸ್ಥಳೀಯರಲ್ಲಿ ನಾನಾ ಬಗೆಯ ದಂತಕತೆಗಳು ಪ್ರಚಲಿತವಾಗಿವೆ.

ದೇವಸ್ಥಾನದ ಕಾರಣಿಕ ಮಹತ್ವ:

ಕಿಗ್ಗದ ಮುಖ್ಯ ದೇವರು ಋಷ್ಯಶೃಂಗೇಶ್ವರ. ಮಹಾತಪಸ್ವಿಗಳಾದ ವಿಭಾಂಡಕರ ಸುಪುತ್ರರಾದ ಋಷ್ಯಶೃಂಗೇಶ್ವರರು ದೈವಾಂಶ ಸಂಭೂತರೆಂದೂ, ಅವರಿದ್ದ ನಾಡಿನಲ್ಲಿ ಸುವೃಷ್ಟಿಯಾಗುತ್ತಿತ್ತೆಂದೂ ಪುರಾಣ ಪ್ರಸಿದ್ಧವಾದ ಕಥೆ ಚಿರಪರಿಚಿತವಾದುದು. ಇಂದಿಗೂ 'ಮಳೆದೇವರು' ಎಂದು ಮಾನ್ಯತೆ ಪಡೆದಿರುವ ಋಷ್ಯಶೃಂಗರ ದೇವಾಲಯಕ್ಕೆ ನಾಡಿನೆಲ್ಲೆಡೆಯಿಂದ ಜನ ಬಂದು ಪ್ರಾರ್ಥನೆ ಸಲ್ಲಿಸುವ

ವಾಡಿಕೆ ಇದೆ. 'ಅತಿವೃಷ್ಟಿ' 'ಅನಾವೃಷ್ಟಿ'ಗಳೆರಡಕ್ಕೂ ಪರಿಹಾರ ದೊರೆಯುವುದೆಂಬ ನಂಬಿಕೆ ಜನರಲ್ಲಿದೆ. ಋಷ್ಯಶೃಂಗೇಶ್ವರನಲ್ಲಿ ರುದ್ರಹೋಮ, ಪರ್ಜನ್ಯ ಜಪಾದಿ ಸೇವೆಗಳನ್ನು ಸಲ್ಲಿಸುವ ಸಂಪ್ರದಾಯ ಉಳಿದುಕೊಂಡು ಬಂದಿದೆ.[21] ವೈಜ್ಞಾನಿಕ ಅಭಿಪ್ರಾಯಗಳೇನೇ ಇರಲಿ, ಸಾಮೂಹಿಕ ಪ್ರಾರ್ಥನೆಗೆ ಬರುವ ಭಕ್ತವೃಂದ ಮಾತ್ರ ತಮ್ಮ ಪ್ರಾರ್ಥನೆ ಎಂದೂ ವಿಫಲವಾಗಿಲ್ಲ ಎಂದು ಶ್ರದ್ಧಾಪೂರ್ವಕವಾಗಿ ನುಡಿಯುತ್ತಾರೆ. ಕಿಗ್ಗಾ ಸೀಮೆ, ನೆಮ್ಮಾರು ಸೀಮೆ ಹೀಗೆ ಒಂದೊಂದು ಪ್ರದೇಶದ ಜನರು ಸಾಮೂಹಿಕವಾಗಿ ಬಂದು ಪ್ರಾರ್ಥನೆ ಸಲ್ಲಿಸುವುದು ಇಲ್ಲಿಯ ರೂಢಿ.

ಸ್ಥಳ ಪುರಾಣ, ಪೌರಾಣಿಕ ಹಿನ್ನೆಲೆ:

ಪೌರಾಣಿಕ ಕಥೆಯ ಪ್ರಕಾರ ವಿಭಾಂಡಕ ಮಹರ್ಷಿಗಳು ಬ್ರಹ್ಮಚರ್ಯ ವ್ರತನಿಷ್ಠರು 'ಮಲಹಾನಿಕರೇಶ್ವರ'ನ ಅರ್ಚನೆಯಲ್ಲಿ ನಿರತರಾಗಿದ್ದವರು. ತಪೋನಿರತರಾದ ಅವರು ಒಮ್ಮೆ ನದಿಯಲ್ಲಿ ಸ್ನಾನಮಾಡುತ್ತಿದ್ದಾಗ ದಿವ್ಯಾಂಗನೆ ಊರ್ವಶಿಯನ್ನು ಕಂಡರು. ಮೋಹಕ್ಕೊಳಗಾದ ಋಷಿಗಳ ಶರೀರದಿಂದ ರೇತಸ್ಸು ನೀರಿನಲ್ಲಿ ಬಿದ್ದಿತು. ಶಾಪದಿಂದ ಜಿಂಕೆಯ ರೂಪವನ್ನು ತಳೆದಿದ್ದ ದೇವಾಂಗನೆಯೊಬ್ಬಳು ಜಲದೊಂದಿಗೆ ಆ ರೇತಸ್ಸನ್ನು ಪಾನ ಮಾಡಿದಳು. ಇದರಿಂದ ಗರ್ಭಧಾರಣೆ ಮಾಡಿದ ಆ ಜಿಂಕೆಯು ಕಾಲಕ್ರಮದಲ್ಲಿ ಒಂದು ಗಂಡುಮಗುವಿಗೆ ಜನ್ಮ ನೀಡಿದಳು. ಶಿಶು ಹುಟ್ಟುವಾಗಲೇ ತಲೆಯಲ್ಲಿ ಕೋಡು ಮೂಡಿತ್ತು. ದಯಾಮಯರಾದ ವಿಭಾಂಡಕರು ಔರಸಪುತ್ರನಂತೆಯೇ ಮಗುವನ್ನು ಸಾಕಿ ಋಷ್ಯಶೃಂಗ ಎಂದು ನಾಮಕರಣ ಮಾಡಿದರು. ತಾವೇ ತಂದೆ ತಾಯಿಯಾಗಿ ಮಗುವನ್ನು ಪೋಷಿಸಿದರು. ಅವರು ಮಗನನ್ನು ಸಕಲ ವಿದ್ಯಾಪಾರಂಗತನ್ನಾಗಿ ಮಾಡಿದರು ಸ್ತ್ರೀಯರ ಮುಖವನ್ನೇ ಕಾಣದಿದ್ದ ಋಷ್ಯಶೃಂಗರಿಗೆ ಬಂಧುಬಳಗ ಎಲ್ಲವೂ ತಂದೆಯವರೇ. ಪರಮ ವೈರಾಗ್ಯಶಾಲಿಯಾಗಿ, ತಪೋನಿರತರಾಗಿ ಅವರು ಆಧ್ಯಾತ್ಮ ವಿದ್ಯೆಯ ಪ್ರಾಯೋಗಿಕ ಅನುಭವ ಪಡೆಯುತ್ತಿದ್ದರು. ಯಾವುದೇ ಬಗೆಯ ಭೋಗದ ಆಸೆಯೂ ಅವರಲ್ಲಿರಲಿಲ್ಲ.

ಇದೇ ಕಾಲದಲ್ಲಿ ಅಂಗದೇಶವನ್ನು ರೋಮಪಾದನೆಂಬ ರಾಜ ಆಳುತ್ತಿದ್ದ. ಆತ ರಾಜಧರ್ಮಕ್ಕೆ ಸ್ವಲ್ಪ ವ್ಯತಿರಿಕ್ತವಾಗಿ ನಡೆದುಕೊಂಡುದರ ಫಲವಾಗಿ ಅಂಗದೇಶದಲ್ಲಿ ಭೀಕರ ಕ್ಷಾಮ ತಲೆದೋರಿತು. ಜನರು, ಪಶುಗಳು, ಸಸ್ಯಗಳು ಅತ್ಯಂತ ಬಾಧೆಗೀಡಾದವು. ಪ್ರಜಾವತ್ಸಲನಾದ ರಾಜನು ಜ್ಞಾನಿಗಳಾದ ವಿಪ್ರವರೇಣ್ಯರನ್ನು ಕರೆಸಿ ಅವರ ಸಲಹೆ ಕೇಳಿದನು. ಅವರೆಲ್ಲರೂ ಮಹರ್ಷಿ ಋಷ್ಯಶೃಂಗರನ್ನು ಹೇಗಾದರೂ ರಾಜ್ಯಕ್ಕೆ ಬರಮಾಡಿಕೊಂಡು ಮಗಳಾದ ಶಾಂತಾದೇವಿಯನ್ನು ಅವರಿಗೆ ವಿವಾಹ ಮಾಡಿಕೊಡಬೇಕೆಂದೂ ಇದರಿಂದ ಸುವೃಷ್ಟಿಯೂ, ಸುಭಿಕ್ಷವೂ ಉಂಟಾಗುವುದೆಂದೂ ಸಲಹೆ ನೀಡಿದರು ರಾಜನು ಸ್ತ್ರೀ ಪರಿಚಯವೇ ಇಲ್ಲದ ಆತನನ್ನು ಹೇಗಾದರೂ ಮಾಡಿ ಕರೆತರುವಂತೆ ರಾಜ್ಯದ ವೇಶ್ಯಾಂಗನೆಯರಿಗೆ ಆದೇಶ ನೀಡಿದನು. ಸಕಲ ಭೋಗವಸ್ತುಗಳೊಡನೆ ಅವರು ನಾವೆಯಲ್ಲಿ

ಹೊರಟು ವಿಭಾಂಡಕರ ಆಶ್ರಮಕ್ಕೆ ಮೂರು ಯೋಜನದೂರದಲ್ಲಿ ಬೀಡುಬಿಟ್ಟರು. ವಿಭಾಂಡಕರು ಆಶ್ರಮದಲ್ಲಿಲ್ಲದ ಸಮಯದಲ್ಲಿ ಅಲ್ಲಿಗೆ ತೆರಳಿ ಋಷ್ಯಶೃಂಗನಿಂದ ಸತ್ಕಾರ ಪಡೆದರು. ತಮ್ಮ ಹಾವ-ಭಾವ-ವಿಲಾಸ, ಆಲಿಂಗನಗಳಿಂದ ಆತನನ್ನು ಮೋಹಪರವಶಗೊಳಿಸಿದರು. ಹೀಗೆ ಸಂಜೆಯವರೆಗೂ ಆತನೊಡನಿದ್ದು ಹೋಗುವಾಗ ಅನೇಕ ಭಕ್ಷ್ಯಗಳನ್ನು ಆತನಿಗೆ ನೀಡಿದರು. ಹೂವಿನರಾಶಿಯನ್ನೇ ಆತನ ಆಶ್ರಮದಲ್ಲಿ ಚೆಲ್ಲಿಹೋದರು. ಇವೆಲ್ಲವುಗಳಿಂದ ಋಷ್ಯಶೃಂಗರ ಮನಸ್ಸು ವಿಹ್ವಲಗೊಂಡಿತು. ಸಂಜೆಯ ಬಳಿಕ ಆಶ್ರಮಕ್ಕೆ ಹಿಂದುರುಗಿದ ವಿಭಾಂಡಕರು ಉದಾಸೀನನಂತೆ ಕಂಡು ಬಂದ ಮಗನನ್ನು ಕಾರಣವೇನೆಂದು ಪ್ರಶ್ನಿಸಿದರು. ಋಷ್ಯಶೃಂಗರು ನಡೆದ ಘಟನೆಗಳನ್ನೆಲ್ಲ ಹೇಳಿದರು. ಆಗ ಅವರು ' ಮಗು ಇವೆಲ್ಲ ರಾಕ್ಷಸರ ಮಾಯೆ ನೀನು ಇವುಗಳಿಗೆ ಒಳಗಾಗದೆ ಎಲ್ಲವನ್ನೂ ಮರೆತು ತಪೋನಿರತನಾಗು'[22] ಎಂದು ಉಪದೇಶಿಸಿದರು. ತಾವು ಹತ್ತಿರದಲ್ಲೆಲ್ಲ ಸುತ್ತಿ ಯಾರ ಸುಳಿವೂ ಕಾಣದಿದ್ದುದರಿಂದ ವಿಷಯವನ್ನು ಮರೆತು ಸುಮ್ಮನಿದ್ದುಬಿಟ್ಟರು.

ಕೆಲವು ಕಾಲದ ಬಳಿಕ ವಿಭಾಂಡಕರು ಆಶ್ರಮದಲ್ಲಿಲ್ಲದ ಮತ್ತೊಂದು ದಿನ ವೇಶ್ಯೆಯರು ಬಂದು ಋಷ್ಯಶೃಂಗರನ್ನು ತಮ್ಮ ವಿಲಾಸದಿಂದಲೇ ಮೋಹಗೊಳಿಸಿ ತಮ್ಮ ಆಶ್ರಮಕ್ಕೆ ಬರುವಂತೆ ಆಹ್ವಾನಿಸಿ, ನೌಕೆಯಲ್ಲಿ ಕುಳ್ಳಿರಿಸಿಕೊಂಡು ಅಂಗದೇಶಕ್ಕೆ ತರೆತಂದರು. ಅವರು ಅಂಗದೇಶವನ್ನು ಪ್ರವೇಶ ಮಾಡುತ್ತಿದ್ದಂತೆಯೇ ಸುವೃಷ್ಟಿ ಕರೆಯಿತು ಎಲ್ಲೆಡೆಯಲ್ಲಿಯೂ ಜಲಸಮೃದ್ಧಿಯುಂಟಾಗಿ ಜನರ ಆನಂದ ಮುಗಿಲು ಮುಟ್ಟಿತು. ಪೈರು ಪಚ್ಚೆಗಳು ಹಸಿರಿನಿಂದ ನಳನಳಿಸಿದವು. ರೋಮಪಾದರಾಜನು ಋಷ್ಯಶೃಂಗರನ್ನು ಗೌರವಾದರಗಳಿಂದ ಬರಮಾಡಿಕೊಂಡು ಸತ್ಕರಿಸಿದನು. ತನ್ನ ಮಗಳಾದ ಶಾಂತಳನ್ನು ಶುಭಮುಹೂರ್ತದಲ್ಲಿ ವಿವಾಹ ಮಾಡಿಕೊಟ್ಟನು. ದಿವ್ಯದೃಷ್ಟಿಯಿಂದ ನಡೆದುದೆಲ್ಲವನ್ನೂ ಅರಿತು ಕುಪಿತಗೊಂಡಿದ್ದ ವಿಭಾಂಡಕರನ್ನು ದೊರೆ ಸಾಂತ್ವನಗೊಳಿಸಿದನು. ಮಗನು ರಾಜನ ಮಗಳನ್ನು ವಿವಾಹವಾಗಿರುವುದನ್ನು ಕಂಡು ಆತ ಶಾಂತನಾಗಿ ಎಲ್ಲರನ್ನೂ ಅನುಗ್ರಹಿಸಿದನು. ಆತನ ಆದೇಶದಂತೆ ಶಾಂತಾಸಮೇತರಾದ ಋಷ್ಯಶೃಂಗರು ಕೆಲವು ಕಾಲ ಅರಮನೆಯಲ್ಲಿದ್ದು ತಮ್ಮ ಅಶ್ರಮಕ್ಕೆ ಹಿಂದಿರುಗಿ ತಂದೆಯವರ ಸೇವೆಯಲ್ಲಿ ನಿರತರಾದರು. ಋಷ್ಯಶೃಂಗರ ಅದ್ಭುತ ತಪಸ್ಸಿನಿಂದ ಸುಪ್ರೀತನಾದ ಪರಮೇಶ್ವರನು ಪ್ರತ್ಯಕ್ಷನಾಗಿ ಅವರಲ್ಲಿಯೇ ಐಕ್ಯನಾದನು. ಈಗಲೂ ಸಹ ಶಾಂತಾಸಮೇತ ಋಷ್ಯಶೃಂಗರಲ್ಲಿ ಪ್ರಾರ್ಥನೆ ಸಲ್ಲಿಸುವುದರ ಮೂಲಕ ಜನರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುತ್ತಿದ್ದಾರೆ. ಮೇಲ್ಕಂಡ ಪೌರಾಣಿಕ ವೃತ್ತಾಂತ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಸ್ಕಾಂದಪುರಾಣದ ತುಂಗಭದ್ರಾ ಕಾಂಡ, ಶ್ರೀಮದ್ರಾಮಾಯಣದ ಬಾಲಕಾಂಡ ಹಾಗೂ ಶ್ರೀಮನ್ಮಹಾಭಾರತದ ಅರಣ್ಯಪರ್ವಗಳಲ್ಲಿ ಕಂಡುಬರುತ್ತದೆ.

ದೇವಸ್ಥಾನದ ಪೂಜಾವಿಧಿಗಳು:

ಕಿಗ್ಗಾ ದೇವಸ್ಥಾನದ ಪೂಜಾವಿಧಿಗಳು ವಾತುಲಾಗಮರೀತ್ಯಾ ಜರುಗುತ್ತವೆ. ನಿತ್ಯ, ನೈಮಿತ್ತಿಕ, ಕಾಮ್ಯ ಎಂಬ ಮೂರು ಬಗೆಯ ಪೂಜಾ ವಿಧಿ-ವಿಧಾನಗಳು, ಉತ್ಸವಗಳು, ಧಾರ್ಮಿಕ ಪರಂಪರೆಯಂತೆ ನಿರಂತರವಾಗಿ ನಡೆಯುತ್ತಿವೆ. ನಾಲ್ಕು ಯಾಮಗಳಲ್ಲಿ ಪರಂಪರಾಗತವಾದ ವಾತುಲತಂತ್ರ ನಿಯಮದಂತೆ ಶಾಂತಾಸಮೇತ ಋಷ್ಯಶೃಂಗಸ್ವಾಮಿಗೆ ಪೂಜಾದಿಗಳು ಜರುಗುತ್ತಿವೆ. ಗುರು, ಗಣೇಶ, ಪರಿವಾರದೇವತೆಗಳು ಮೊದಲುಗೊಂಡು ಎಲ್ಲ ದೇವತೆಗಳಿಗೂ ಅಭಿಷೇಕಾದಿ ಪೂಜೆಗಳು ಜರುಗುತ್ತಿವೆ. ಚೈತ್ರಶುಕ್ಲದ ಆರ್ದ್ರಾ ನಕ್ಷತ್ರದಲ್ಲಿ ಜರುಗುವ ಶ್ರೀಮನ್ಮಹಾರಥೋತ್ಸವವು ಸೇರಿದಂತೆ ಚಂದ್ರ, ಸೂರ್ಯರ ಗತಿಯನ್ನನುಸರಿಸಿ, ಆಗಮಶಾಸ್ತ್ರ ವಿಹಿತವಾದ ವಿಧಿ ವಿಧಾನಗಳಿಂದ ಪ್ರತಿತಿಂಗಳಲ್ಲೂ ವಿಶೇಷವಾದ ನೈಮಿತ್ತಿಕ ಪೂಜೆಗಳು ನಡೆಯುತ್ತಿವೆ. ಶ್ರೀ ರಾಮನವಮಿ, ದಮನಾರೋಪಣ, ನೃಸಿಂಹಜಯಂತಿ , ಸ್ವರ್ಣಗೌರೀವ್ರತ, ವಿನಾಯಕವ್ರತ, ಗಣಪತಿ ಹವನ, ಶರನ್ನವರಾತ್ರಿ, ಪ್ರತಿ ತಿಂಗಳ ಶುಕ್ಲ ಕೃಷ್ಣಪಕ್ಷದ ತ್ರಯೋದಶಿಯ ಪ್ರದೋಷಕಾಲದಲ್ಲಿ ವಿಶೇಷ ಪೂಜೆ ವಿಶೇಷ ನೈಮಿತ್ತಿಕ ಪೂಜಾ ವಿಧಿಗಳು ನಡೆಯುತ್ತಿವೆ.

ಭಕ್ತಾದಿಗಳು ತಮ್ಮ ಇಷ್ಟಸಿದ್ಧಿಗಾಗಿ ಯಥೇಷ್ಟವಾಗಿ ನಡೆಸುವ ಪೂಜಾದಿಗಳೇ ಕಾಮ್ಯಪೂಜೆ. ಅತಿವೃಷ್ಟಿಯಿಂದ ಕಂಗೆಟ್ಟ ಜನರ ಹಿತಕ್ಕಾಗಿ ಶೃಂಗೇರಿ ಜಗದ್ಗುರುಗಳು ಶ್ರೀಮುಖ ಸಹಿತ ಕಳಿಸಿದ ಗಂಧವಿಶೇಷವನ್ನು ಶ್ರೀ ಶಾಂತಾಸಮೇತ ಸ್ವಾಮಿಗೆ ಸಮರ್ಪಿಸಿ ಅತಿವೃಷ್ಟಿಯನ್ನು ನಿವಾರಿಸುವ ಪೂಜಾವಿಧಾನ ಪರಂಪರಾಗತವಾಗಿ ಸಾಗಿಬರುತ್ತಲಿದೆ. ಅನಾವೃಷ್ಟಿ ನಿವಾರಣೆ ಹಾಗೂ ಸುವೃಷ್ಟಿಗಾಗಿ ರುದ್ರಹೋಮ ಮತ್ತು ಪರ್ಜನ್ಯ ಜಪಾದಿಗಳು ವೈಯಕ್ತಿಕವಾಗಿ ನಡೆಸಲ್ಪಡುತ್ತಿವೆ. ಇಷ್ಟೇ ಅಲ್ಲದೆ ಸತ್ಪುತ್ರಕಾಮನೆಯ ಪ್ರಾಪ್ತಿಗಾಗಿ ತುಲಾರೋಪಣ ಧನಧಾನ್ಯ ಮತ್ತು ಪಶು ಸಂಪತ್ತುಗಳಲ್ಲಿ ಉಂಟಾಗುವ ಈ ಬಾಧೆಯ ನಿವಾರಣೆಗಾಗಿ ರಂಗಪೂಜೆ, ಬಿರುಗಾಳಿಯಿಂದುಂಟಾಗುವ ತೊಂದರೆಗಳ ನಿವಾರಣೆಗಾಗಿ ಆಂಜನೇಯನಿಗೆ ಎಲೆಸೇವೆ, ಬಸವಣ್ಣನಿಗೆ ಒಡೆಸರ ಸಮರ್ಪಣೆ ಇತ್ಯಾದಿ ಧಾರ್ಮಿಕ ಕಾರ್ಯಗಳು ಜರುಗುತ್ತವೆ. ಈತಿಬಾಧೆ, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ತೊಂದರೆಗಳ ನಿವಾರಣೆ ಹಾಗೂ ರಾಷ್ಟ್ರದ ಕ್ಷೇಮಕ್ಕಾಗಿ ಶ್ರೀ ಸ್ವಾಮಿಯ ಸನ್ನಿಧಿಯಲ್ಲಿ ಶ್ರೀ ಗಣಪತಿ ಹವನ, ನವಗ್ರಹ ಹೋಮ, ಲಕ್ಷಾರ್ಚನೆ, ಲಲಿತಾ ಹೋಮ, ಚಂಡಿಕಾಹೋಮ, ಮಹಾರುದ್ರ ಹೋಮ ಮುಂತಾದ ಸತ್ಕರ್ಮಾನುಷ್ಠಾನಗಳು ಅವಿಚ್ಛಿನ್ನವಾಗಿ ಜರುಗುತ್ತಿವೆ.

1993 ರಲ್ಲಿ ಶ್ರೀ ಋಷ್ಯಶೃಂಗೇಶ್ವರ ದೇವಸ್ಥಾನದ ಕುಂಬಾಭಿಷೇಕ ಹಾಗೂ ಜೀರ್ಣೋದ್ಧಾರ ಕಾರ್ಯ ಅತ್ಯಂತ ವಿಚಕ್ಷಣೆಯಿಂದ ಜರುಗಿತು. ಶ್ರದ್ಧಾಳುಗಳಾದ ಭಕ್ತರ ತನು, ಮನ, ಧನದ ಕೊಡುಗೆಯಿಂದ , ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳ ಅವಿರತ ಶ್ರಮ, ಕಿಗ್ಗಾ ನಗರವಾಸಿಗಳ ನಿರಂತರ ಉತ್ಸಾಹ, ಸರ್ಕಾರದ ಅಧಿಕಾರಿಗಳ ತುಂಬು ಹೃದಯದ ನೆರವು ಈ ಮಹತ್ಕಾರ್ಯ

ಯಶಸ್ವಿಯಾಗಿ ಜರುಗಲು ನೆರವಾಯಿತು. ಶಿಥಿಲಗೊಂಡಿದ್ದ ದೇವಾಲಯದ ಸ್ವರೂಪ ಹೊಸ ಜೀವವನ್ನೇ ಪಡೆದುಕೊಂಡಿತು. ಇತ್ತೀಚೆಗೆ ದೇವಾಲಯದ ಮಾಡಿನ ದುರಸ್ತಿ ಕಾರ್ಯವೂ ಜರುಗಿದ್ದು, ಭೇಟಿ ನೀಡುವ ಪ್ರವಾಸಿಗರಿಗೆ, ಭಕ್ತಾದಿಗಳಿಗೆ ಸಂತಸ ನೀಡಿದೆ. 1993 ರಲ್ಲಿಯೇ ಕಲ್ಯಾಣ ಮಂಟಪವೂ ನಿರ್ಮಾಣಗೊಂಡಿದ್ದು ಉಪನಯನ, ವಿವಾಹಾದಿ ಕಾರ್ಯಗಳನ್ನು ನೆರವೇರಿಸಬಯಸುವ ಕಿಗ್ಗಾ ಹಾಗೂ ಸುತ್ತಮುತ್ತಲ ಊರುಗಳವರ ಜನರಿಗೆ ಉಪಯುಕ್ತವಾಗಿ ಪರಿಣಮಿಸಿದೆ.

ದೇಶದ ಇತರ ನಗರ ಗ್ರಾಮಗಳ ಜನರಂತೆ ಕಿಗ್ಗಾ ಗ್ರಾಮದ ಜನರೂ ಉದರಂಭರಣಕ್ಕಾಗಿ ಹಲವಾರು ಉದ್ಯೋಗಗಳಲ್ಲಿ ತೊಡಗಿದ್ದರೂ ಇಲ್ಲಿನ ಹೆಚ್ಚಿನ ಜನ ಜೀವನಕ್ಕಾಗಿ ಅವಲಂಬಿಸಿರುವುದು ಕೃಷಿಯನ್ನೇ. ಇಲ್ಲಿನ ಪ್ರಮುಖ ಬೆಳೆಗಳು ಅಡಿಕೆ ಮತ್ತು ಭತ್ತ. ಕಾಳುಮೆಣಸು ಸಾಕಷ್ಟು ಪ್ರಧಾನ ಬೆಳೆಯೇ ಆಗಿದೆ. ಇತ್ತೀಚಿನ ದಿನಗಳಲ್ಲಿ ವೆನಿಲ್ಲಾ ಕೃಷಿ ಜನಪ್ರಿಯತೆಯನ್ನು ಪಡೆದಿದ್ದು ಅನೇಕರು ವೆನಿಲ್ಲಾ ಬೆಳೆಯತೊಡಗಿದ್ದಾರೆ.

ಒಂದೊಮ್ಮೆ ಯಾವುದೇ ಆಧುನಿಕ ಸೌಲಭ್ಯಗಳಿಲ್ಲದೆ ಕುಗ್ರಾಮವೆನಿಸಿದ್ದ ಕಿಗ್ಗಾ ಇಂದು ಆಧುನಿಕತೆಗೆ ತನ್ನನ್ನು ತೆರೆದುಕೊಂಡಿದೆ. ಬ್ಯಾಂಕ್, ದೂರವಾಣಿ, ವೈದ್ಯಕೀಯ ಮತ್ತಿತರ ಸೌಲಭ್ಯಗಳು ಗ್ರಾಮಕ್ಕೆ ಹೊಸತನದ ಮೆರುಗು ನೀಡಿವೆ. ಪ್ರಾಥಮಿಕ ಹಂತದಿಂದ ಪ್ರೌಢಶಾಲೆಯವರೆಗೆ ಶಿಕ್ಷಣ ನೀಡುವ ಸುಸಜ್ಜಿತ ಶಾಲೆಗಳು, ಸುಶಿಕ್ಷಿತ ಅಧ್ಯಾಪಕರು ಗ್ರಾಮೀಣ ಮಕ್ಕಳಲ್ಲಿ ಶಿಕ್ಷಣದ ಜ್ಯೋತಿಯನ್ನು ಬೆಳಗುತ್ತಿದ್ದಾರೆ. ಸರಕಾರ ಒದಗಿಸಿರುವ ಹಲವಾರು ಯೋಜನೆಗಳ ಫಲ ಕಿಗ್ಗಾದಂತಹ ಗ್ರಾಮೀಣ ಪ್ರದೇಶದಲ್ಲಿಯೂ ಪರಿಣಾಮ ಬೀರತೊಡಗಿದೆ. ಇಲ್ಲಿನ ಸ್ತ್ರೀಯರೂ ಜಾಗರೂಕರಾಗತೊಡಗಿದ್ದಾರೆ. ಸಾಂಸ್ಕೃತಿಕವಾಗಿ ಜಿಲ್ಲಾಮಟ್ಟದವರೆಗೆ ಪ್ರಭಾವ ಬೀರುವ ಮಟ್ಟಿಗೆ ಕ್ರಿಯಾಶೀಲವಾಗತೊಡಗಿದೆ. ಈ ಗ್ರಾಮದ ಸಾರಿಗೆ ವ್ಯವಸ್ಥೆ ಉತ್ತಮಗೊಂಡಿದ್ದು, ಕಿಗ್ಗಾಕ್ಕೆ ತೆರಳಲು ಅಲ್ಲಿಂದ ವಿವಿಧೆಡೆಗಳಿಗೆ ತೆರಳಲು ಪರದಾಡಬೇಕಾದ ಸ್ಥಿತಿ ಈಗ ಇಲ್ಲ. ಇಷ್ಟೆಲ್ಲ ಆಧುನಿಕತೆಯ ನಡುವೆಯೂ ಪ್ರಕೃತಿಯ ಐಸಿರಿಯನ್ನು ಇಂದಿಗೂ ತಕ್ಕಮಟ್ಟಿಗೆ ಉಳಿಸಿಕೊಂಡಿರುವುದು ಮಾತ್ರ ಕಿಗ್ಗಾದ ಪಾಲಿಗಷ್ಟೇ ಅಲ್ಲ, ಇಡೀ ನಾಡಿನ ಪಾಲಿಗೆ ಒಂದು ಹರ್ಷದಾಯಕ ಸಂಗತಿಯಾಗಿದೆ.

3.4 ಸಾಹಿತ್ಯ, ಕಲೆ, ಸಂಗೀತ, ಭಾಷಾ ಪರಂಪರೆ

ಸಾಹಿತ್ಯಕವಾಗಿ ಶೃಂಗೇರಿ

ಸಾಹಿತ್ಯ ರಂಗದಲ್ಲಿ ಶೃಂಗೇರಿ ತಾಲ್ಲೂಕು ಅಂತಹ ಪ್ರಮುಖ ಸ್ಥಾನದಲ್ಲಿ ಕಾಣಿಸುವುದಿಲ್ಲ. ಶೃಂಗೇರಿ ಶ್ರೀಮಠದ ಗುರುಪರಂಪರೆಯಲ್ಲಿ ಕೆಲ ಯತಿಗಳು ಸಾಹಿತ್ಯ ನಿರ್ಮಾಣ ಮಾಡಿದ್ದಾರೆ. ಸಂಸ್ಕೃತದಲ್ಲಿ ಕೃತಿಗಳು ನಿರ್ಮಾಣ ಮಾಡಿದ್ದು, ಆಸ್ಥಾನವಿದ್ವಾಂಸರು ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಆದಿ ಶಂಕರಾಚಾರ್ಯರು ಭಾಷ್ಯಗಳನ್ನು, ಸ್ತೋತ್ರಗಳನ್ನು ಮತ್ತು ಪ್ರಕರಣ ಗ್ರಂಥಗಳನ್ನು ರಚಿಸಿದ್ದಾರೆ.

ಬ್ರಹ್ಮಸೂತ್ರ ಭಾಷ್ಯ, ಗೀತಾ ಭಾಷ್ಯ, ಉಪನಿಷದ್ಭಾಷ್ಯ, ವಿಷ್ಣುಸಹಸ್ರನಾಮ ಭಾಷ್ಯ, ಸನಸ್ಸುಜಾತೀಯ ಭಾಷ್ಯ, ಲಲಿತಾ ತ್ರಿಶತಿ ಭಾಷ್ಯ, ಮಾಂಡೂಕ್ಯ ಕಾರಿಕಾ ಭಾಷ್ಯ ಮೊದಲಾದವುಗಳು, ಗಣೇಶ ಸ್ತೋತ್ರ, ಶಿವಸ್ತೋತ್ರ, ದೇವೀಸ್ತೋತ್ರ, ವಿಷ್ಣುಸ್ತೋತ್ರ ಮೊದಲಾದ ಸ್ತೋತ್ರಗಳನ್ನೂ ರಚಿಸಿದ್ದಾರೆ.[23]

ಶ್ರೀ ಸುರೇಶ್ವರಾಚಾರ್ಯರು ನೈಷ್ಕರ್ಮ್ಯಸಿದ್ಧಿ, ತೈತ್ತರೀಯೋಪನಿಷದ್‌ಭಾಷ್ಯವಾರ್ತಿಕ, ಬೃಹದಾರಣ್ಯಕ ಭಾಷ್ಯವಾರ್ತಿಕ ಮೊದಲಾದವುಗಳನ್ನು ರಚಿಸಿದ್ದಾರೆ. ಶ್ರೀ ಪದ್ಮಪಾದರು ರಚಿಸಿದ 'ವಿಜಯಡಿಂಡಿಮ' ಕೃತಿಯು ಶ್ರೀ ಶಂಕರಭಗವತ್ಪಾದಾಚಾರ್ಯರ ದಿಗ್ವಿಜಯವನ್ನು ವರ್ಣಿಸುವ 'ಶಂಕರ ದಿಗ್ವಿಜಯ' ಎಂದು ಪ್ರಸಿದ್ಧಿಯಾಗಿದೆ. ಜ್ಞಾನಘನಾಚಾರ್ಯರ 'ತತ್ವಸಿದ್ಧಿ', ಜ್ಞಾನೋತ್ತಮಾಚಾರ್ಯರ 'ಶಿಷ್ಯ ಚಿತ್ಸುಖ', ಈಶ್ವರ ತೀರ್ಥರ 'ಶತಶ್ಲೋಕಿ', ವಿದ್ಯಾತೀರ್ಥರ 'ತ್ರೈತ್ತರೀಯೋಪನಿಷದ್ದೀಪಿಕಾ', ಭಾರತೀತೀರ್ಥರ 'ಅಧಿಕರಣ ರತ್ನಮಾಲಾ', ವಿದ್ಯಾರಣ್ಯರ 'ಪಂಚದಶೀ' 'ಅನುಭೂತಿ ಪ್ರಕಾಶಿಕಾ' ಮೊದಲಾದ ಹತ್ತು ಕೃತಿಗಳು, ಪುರುಷೋತ್ತಮ ಭಾರತೀಯವರ 'ಪತಂಜಲಿಯ ಮಹಾಭಾಷ್ಯದ ಮೇಲೆ ವ್ಯಾಖ್ಯಾನ', ಶಂಕರಾನಂದ ಭಾರತೀಯವರ 'ಖಚರ ದರ್ಪಣ', ಐದನೇ ನರಸಿಂಹ ಭಾರತೀಯರ 'ವೈದಿಕ ನಿರ್ಣಯ' ಅಭಿನವ ನರಸಿಂಹಭಾರತೀಯವರ 'ಶಿವಗೀತಾ ಭಾಷ್ಯಂ' ಮೊದಲನೇ ಸಚ್ಚಿದಾನಂದ ಭಾರತೀಯವರ 'ಗುರುಶತಕ' 'ಮೀನಾಕ್ಷಿ ಶತಕ' 'ರಾಮಚಂದ್ರ ಮಹೋದಯ' 'ರಾಮಭುಜಂಗಸ್ತೋತ್ರ' ಎರಡನೇ ಸಚ್ಚಿದಾನಂದ ಭಾರತಿಗಳ 'ಮೂಕಾಂಬಿಕಾ ಸ್ತೋತ್ರ', 'ಶಾರದಾ ಸ್ತೋತ್ರ', 'ಎಂಟನೇ ಉಗ್ರನರಸಿಂಹ ಭಾರತಿಗಳ' 'ವೆಂಕಟೇಶಕರಾವಲಂಬನಾಸ್ತೋತ್ರ' 'ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತಿಗಳ ಭಕ್ತಿಸುಧಾತರಂಗಿಣಿ' 'ಪುರುಷಾರ್ಥನಿರ್ಣಯ', ನಾಲ್ಕನೇ ಚಂದ್ರಶೇಖರ ಭಾರತಿಗಳ 'ವಿವೇಕ ಚೂಡಾಮಣಿ ಸ್ತೋತ್ರ ಟೀಕೆ' 'ಗುರುಸ್ತುತಿ' ಮೊದಲಾದ ಒಂಬತ್ತು ಕೃತಿಗಳು, ಈಗಿನ ಶ್ರೀ ಭಾರತೀತಿರ್ಥ ಸ್ವಾಮಿಗಳ 'ಶ್ರೀ ಅಭಿನವ ವಿದ್ಯಾತೀರ್ಥ ಸ್ತೋತ್ರ', 'ಶ್ರೀ ಗುರುಧ್ಯಾನಂ'ಮೊದಲಾದ ಎಂಟು ಕೃತಿಗಳು ಹಾಗೂ ಕೆಲವು ಸಂಗೀತ ರಚನೆಗಳು ಪ್ರಸಿದ್ಧವಾಗಿವೆ.[24]

ಕ್ರಿ.ಶ.1593ರಲ್ಲಿದ್ದ ಜೈನಕವಿ 'ಬಾಹುಬಲಿ'ಯು 'ನಾಗಕುಮಾರಚರಿತ'ವೆಂಬ ಸಾಂಗತ್ಯ ಕೃತಿ ರಚಿಸಿದ್ದಾನೆ. ಇಪ್ಪತ್ತೆರಡನೆಯ ತೀರ್ಥಂಕರನಾದ ಶ್ರೀ ನೇಮಿಶ್ವರ ಸ್ವಾಮಿಯ ಮುಕ್ತಿಗಮನಾಂತರ ಈ ಭಾರತ ವರ್ಷದಲ್ಲಿ ಪ್ರಾಖ್ಯಾತನಾದ ವೀರ'ನಾಗಕುಮಾರ'ನೆಂಬ ಪುರಾಣ ಪ್ರಸಿದ್ಧ ಪುರುಷನ ಕಥೆಯಿದೆ. ಕುಂದಾದ್ರಿ, ಕುಂದಕುಂದಾಚಾರ್ಯರು, ಕಾರ್ಕಳದ ಭೈರವರಸು, ಮೊದಲಾದ ವಿಷಯಗಳ ಬಗ್ಗೆ ಪ್ರಸ್ತಾಪವಿದೆ.[25]

ಎಸ್.ವಿ.ಪರಮೇಶ್ವರ ಭಟ್ಟರು ಶೃಂಗೇರಿ ತಾಲ್ಲೂಕಿನ ವಿದ್ಯಾರಣ್ಯಪುರ ಮೂಲದವರು. ಈ ಕುಟುಂಬದ ಆರಾಧ್ಯದೈವ 'ಸದಾಶಿವ'. ಈ ದೇವಾಲಯ ವಿದ್ಯಾರಣ್ಯಪುರದಲ್ಲಿದೆ. ತಮ್ಮ ವಚನವನ್ನು 'ಸದಾಶಿವ ಗುರು' ಎಂಬ ಅಂಕಿತದಲ್ಲಿ ರಚಿಸಿದ್ದಾರೆ. ಬಹಳಷ್ಟು ಸಾಹಿತ್ಯ ಕೃತಿ ರಚಿಸಿದ್ದಾರೆ. ಕವಿತೆ, ವಿಮರ್ಶೆ, ಗಾದೆ, ಒಗಟು, ನುಡಿಮುತ್ತು, ಚುಟುಕುಗಳು, ಅನುವಾದ, ಸಂಪಾದನೆ, ಸಂಶೋಧನೆ,

ಛಂದಸ್ಸಿನ ಹೊಸಪ್ರಯೋಗ, ಆಧುನಿಕವಚನ ಮೊದಲಾದ ಸಾಹಿತ್ಯದ ವಿವಿಧ ರಂಗಗಳಲ್ಲಿ ತಮ್ಮ ಲೇಖನಿಯನ್ನು ತೊಡಗಿಸಿದ್ದಾರೆ. 'ಇಂದ್ರಚಾಪ' 'ಉಪ್ಪುಕಡಲು' ಸುರಗಿ ಸುರಹೊನ್ನೆ' 'ತುಂಬೆಹೂವು' 'ಚಂದ್ರವೀಥಿ' ಮೊದಲಾದ ಶ್ರೇಷ್ಠಕೃತಿಗಳನ್ನು ರಚಿಸಿದ್ದಾರೆ. 'ಕಾಳಿದಾಸ' ಸಂಪುಟ ಪ್ರಕಟಿಸಿದ್ದಾರೆ. 'ಅಭಿನವ ಕಾಳಿದಾಸ' ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಶ್ರೀ ಗಣೇಶಶಾಸ್ತ್ರೀ ಸಾಮಗರು 'ಸಂಧ್ಯಾವಂದನೆ' 'ದೇವರಪೂಜೆ' 'ಅಪರ ಕರ್ಮ' ಕೃತಿಗಳನ್ನು ರಚಿಸಿದ್ದಾರೆ. ಶೃಂಗಗಿರಿ ಕವಿ ನರಸಿಂಹಭಟ್ ರವರು 'ಸೂತ್ರ ಭಾಷ್ಯಾ' ಎಂದು ಶೀರ್ಷಿಕೆಯ ಅಡಿಯಲ್ಲಿ ಶ್ರೀ ಶಂಕರಾಚಾರ್ಯರ ಅನೇಕ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಐವತ್ತಕ್ಕು ಹೆಚ್ಚಿನ ಕೃತಿಗಳನ್ನು ರಚಿಸಿದ್ದಾರೆ. ಕೊಡೂರು ಕೃಷ್ಣಜೋಯಿಸರು 'ಶರನ್ನವರಾತ್ರಿ ಚಂಪೂ' 'ವೇದಾಂತಗ್ರಂಥ'ಗಳನ್ನು ರಚಿಸಿದ್ದಾರೆ. ವೈಕುಂಠಪುರ ಕೃಷ್ಣಶಾಸ್ತ್ರಿಗಳು 'ರತ್ನಗರ್ಭಗಣಪತಿಯ ಸಮಾಶ್ರಯಮಿ ಸಂತತ' ಕೀರ್ತನೆ ಹಾಗೂ ಕೀರ್ತನೆಗೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾರೆ. ಇವರು ಶ್ರೀಮಠದ ಆಸ್ಥಾನ ವಿದ್ವಾಂಸರಾಗಿದ್ದರು.

ಶ್ರೀ ಕಿರಕೋಡು ಸೀತಾರಾಮ ಭಟ್ಟರು 'ಧೃವಚರಿತಂ' ಮಹಾಕಾವ್ಯವನ್ನೂ 'ಚಂದ್ರ' ಎಂಬ ಕಿರುಕಾವ್ಯವನ್ನೂ ರಚಿಸಿದ್ದಾರೆ. 'ಕುಮುದವನ' 'ಲಲಿತಾಸ್ತವರತ್ನ' 'ಸ್ತವಕುಂಜ' 'ದ್ವಿಪೇಂದ್ರ ನಿರ್ಯಾಣ' ಮೊದಲಾದವುಗಳು ಅವರ ಇತರೆ ಕೃತಿಗಳು. ಅಡ್ಡಗದ್ದೆಯ ಶೃಂಗೇಶ್ವರ ಶಾಸ್ತ್ರಿಗಳು "ಶೃಂಗೇರಿ ಕ್ಷೇತ್ರಕೈಗನ್ನಡಿ" ಕೃತಿಯನ್ನು ರಚಿಸಿದ್ದಾರೆ. ಶ್ರೀ ವಿ.ಆರ್. ರಾಮಭಟ್‌ರವರು "ಭಜನಾಮೃತ"ವೆಂಬ ಭಜನಾ ಕೃತಿ ಹೊರತಂದಿದ್ದಾರೆ. ಶ್ರೀ ಬಾಲಗಣಪತಿ ಭಟ್ ರವರು "ಗಣೇಶ ಗೀತ" "ಗಾಯತ್ರಿ ಮಹಿಮೆ" ಕೃತಿಗಳನ್ನು ರಚಿಸಿದ್ದಾರೆ.

ಕಿಗ್ಗಾದ ಹೊ.ನಾ.ಕೃಷ್ಣಪ್ಪ ಗೌಡರು 'ಕಣ್ಣಾಮುಚ್ಚಾಲೆ', 'ಕಲಾಶಕ್ತಿ', 'ಹುಚ್ಚನ ಎಚ್ಚರಿಕೆ', 'ಹೂದುಂಬಿ' ಕೃತಿಗಳನ್ನು ರಚಿಸಿದ್ದಾರೆ. ಕೀರ್ತನಾಕೇಸರಿ ಶ್ರೀಯಶವಂತದಾಸ್‌ಭಟ್ ರವರು 'ಸ್ತೋತ್ರ ಮಂಜರಿ' ಕೃತಿ ರಚಿಸಿದ್ದಾರೆ. ಡಾ.ವಾಗೇಶ್ವರಿ ಶಿವರಾಮ್‌ರವರು ಮೂರುಭಾಗಗಳ 'ಬಾಲಕಥಾ ಮಾಲಾ' 'ಸಂಸ್ಕೃತ ಗಾದೆಗಳು''ಕಂಬರಾಮಾಯಣ'ಕೃತಿಗಳನ್ನು ರಚಿಸಿದ್ದಾರೆ. ಶ್ರೀ ಟಿ.ಎಸ್.ವೆಂಕಣ್ಣಯ್ಯನವರು ಸಂಸ್ಕೃತದ ಹಾಗೂ ಆಂಗ್ಲ ಭಾಷೆಯ ಅನೇಕ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಆಂಗ್ಲಭಾಷೆಗೂ ಭಾಷಾಂತರಿಸಿದ್ದಾರೆ. ಡಾ.ಹುಲ್ಸೆ ಮಂಜಪ್ಪ ಗೌಡರ ಪ್ರವಾಸ ಸಾಹಿತ್ಯ 'ಪ್ರವಾಸಿ' ವಿದೇಶಿ ಸಂಸ್ಕೃತಿಯ ಚಿತ್ರಣವನ್ನೂ ಹೊರಹಾಕುತ್ತದೆ.

ಶ್ರೀ ಸಂಪಗೋಡು ಸೂರ್ಯನಾರಾಯಣ ಭಟ್ಟರು ಶ್ರೇಷ್ಠವಾಗ್ಗೇಯಕಾರರಾಗಿದ್ದು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ.'ಶ್ರೀ ಮೂಕಾಂಬಿಕ ಅಷ್ಟಕ' 'ಶ್ರೀ ಮಂಜುನಾಥೇಶ್ವರ ಅಷ್ಟಕಗಳನ್ನು ರಚಿಸಿದ್ದಾರೆ. ಶ್ರೀ ಬಾಕುರ್ಡಿ ನರಸಿಂಹಮೂರ್ತಿ ಶಾಸ್ತ್ರಿಗಳು 'ಶ್ರೀ ಋಷ್ಯಶೃಂಗೇಶ್ವರ ಸ್ವಾಮಿ ಸುಪ್ರಭಾತ' ರಚಿಸಿದ್ದಾರೆ. ಕೊರಡಕಲ್ಲು ಶ್ರೀನಿವಾಸರಾಯರು 'ರಾಯರಮನೆ ಸತ್ಯನಾರಾಯಣ ಕಥೆ' ಎಂಬ

ಸಣ್ಣಕಥೆಯನ್ನು ರಚಿಸಿದ್ದಾರೆ. ಪ್ರೊ.ಕೆ.ಪುಟ್ಟಯ್ಯನವರು 'ಸಾಧನೆ','ಯೋಜನಾ' ಮತ್ತು ವಿವಿಧ ಪತ್ರಿಕೆಗಳಲ್ಲಿ ವಿಮರ್ಶಾಲೇಖನಗಳನ್ನು ಪ್ರಕಟಿಸಿದ್ದಾರೆ. ಪ್ರೊ.ಜಿ.ಎಂ.ಭಟ್‌ರವರು 'ಬೇಂದ್ರೆ ಮತ್ತು ನಿರಾಲರ ಕಾವ್ಯಗಳ ಸಾಮಾಜಿಕ ಪ್ರಜ್ಞೆ' ಮಹಾಕವಿ ದ.ರಾ.ಬೇಂದ್ರೆ ಕುರಿತಾಗಿ ಲೇಖನ ಬರೆದಿದ್ದಾರೆ.

ನವೋದಯ ಹಿನ್ನೆಲೆಯ ಆಧುನಿಕ ಕವಿ ಕವಯತ್ರಿಯರಲ್ಲಿ ಉಳುವೆ ಶಾರದರವರು ಸಾರಸ್ವತಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. 'ಸುಪ್ರಭಾತ','ಬ್ರಹ್ಮಗಂಟು','ಹೊಸಹಾದಿಯಲ್ಲಿ','ನನಸಾದಕನಸು', ಮೊದಲಾದ ಕಾದಂಬರಿ ಕಥಾಸಂಕಲನಗಳನ್ನು ರಚಿಸಿದ್ದಾರೆ. ಇಪ್ಪತ್ತಕ್ಕೂ ಅಧಿಕ ಕೃತಿಗಳನ್ನು ನಿರ್ಮಿಸಿದ್ದಾರೆ. 'ಅತ್ತಿಮಬ್ಬೆ ಪ್ರಶಸ್ತಿ','ಅಳಸಿಂಗ ಪ್ರಶಸ್ತಿ' ಪಡೆದಿದ್ದಾರೆ. ದ.ರಾಜಣ್ಣರವರು 'ಗಿರಿಸ್ಪಂದನ','ತತ್ಸಮ-ತದ್ಭವ ಪಡೆನುಡಿಕೋಶ' ಹಾಗೂ ಇತರೆ ಸೃಜನಾತ್ಮಕ ಕೃತಿಗಳನ್ನು ಹೊರತಂದಿದ್ದಾರೆ.

ಹೆಚ್.ಎಂ.ನಾಗರಾಜರಾವ್ ರವರು 'ಬಾಲ್ಯಸ್ಪಂದನ','ಪ್ರೇಮಸ್ಪಂದನ','ನಿತ್ಯಪುಷ್ಪತಪೋಧನ', 'ನಮ್ಮ ನಮ್ಮಲ್ಲಿ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಕರುವಾನೆ ಶ್ರೀನಿವಾಸಮೂರ್ತಿಯವರ 'ಗೂಡು'ಕವನ ಸಂಕಲನ ನವೋದಯ ಹಿನ್ನೆಲೆಯ ಪ್ರಕೃತಿ ರಮಣೀಯತೆಯನ್ನು ಸೆರೆಹಿಡಿದ ಕವನಸಂಕಲದವಾಗಿದೆ. ಶ್ರೀಮತಿ ಲಲಿತಾಗೋಪಾಲ್‌ರವರು 'ಆರದ ಜ್ಯೋತಿ' 'ನೆರಳು' 'ಪೂರ್ಣಿಮ ಚಂದ್ರ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಕೆ.ಎಸ್.ವೆಂಕಪ್ಪನವರು 'ಬಾಳುಬೆಳಗಿತು','ಅಕಾಲ ಮರಣ','ಘರ್ಷಣೆ', 'ವರದಕ್ಷಿಣೆ', 'ಕೊಲೆಮಾಡಿದ್ದು ನೀನು?' ಎಂಬ ಸಾಮಾಜಿಕ ನಾಟಕಗಳನ್ನು, 'ಮಂತ್ರಿ ದುಷ್ಟ ಬುದ್ಧಿ' ಎಂಬ ಗೀತರೂಪಕವನ್ನು 'ಬಂದ ದಾರಿ' ಕವನ ಸಂಕಲನವನ್ನು ಹೊರತಂದಿದ್ದಾರೆ. ಟಿ.ಎಲ್.ಉಮೇಶ್‌ರವರ 'ಬದುಕು ಕೊಳೆಯುತ್ತಿದೆ'ಎಂಬ ಸಾಮಾಜಿಕ ನಾಟಕವು ಪ್ರಸ್ತುತ ಸನ್ನಿವೇಶದ ದುರವಸ್ಥೆ, ಶೋಷಣೆ, ದೌರ್ಜನ್ಯಗಳನ್ನು ಬಿಂಬಿಸುತ್ತಿದೆ. ಬೇಗಾರ್ ರಮೇಶ್‌ರವರು ವಿಶಿಷ್ಟಕಲಾವಿದರಾಗಿದ್ದು ನಾಟಕ, ಸಿನೆಮಾ, ಕಿರುತೆರೆ, ಯಕ್ಷಗಾನದಲ್ಲಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ರಚನೆ ಹಾಗೂ ನಿರ್ದೇಶನ ಮಾಡಿ ಜನಮೆಚ್ಚುಗೆ ಗಳಿಸಿದ್ದಾರೆ.

ಹೊಸ್ಕೆರೆ ವೆಂಕಟೇಶರವರು ಇಪ್ಪತ್ತೈದು ಸಾಮಾಜಿಕ ನಾಟಕಗಳನ್ನು ಬರೆದಿದ್ದಾರೆ. ಶೃಂಗೇರಿ ಸುಬ್ಬಣ್ಣರವರು ಹಾಸ್ಯ ಚುಟುಕು ಕವಿಯಾಗಿದ್ದಾರೆ. 'ಬೆಳ್ಳಿ ಚುಕ್ಕಿ' ಎಂಬ ಕವನ ಸಂಗ್ರಹ ಪ್ರಕಟಿಸಿದ್ದಾರೆ. ಶ್ರೀ ಋಷ್ಯಶೃಂಗರು ರಚಿಸಿದ 'ಮಹರ್ಷಿ ಋಷ್ಯಶೃಂಗ' ಕೃತಿಯು ಕಿಗ್ಗಾ ದೇವಾಲಯದ ಹಿನ್ನೆಲೆ ಇತಿಹಾಸ ಮಹತ್ವವನ್ನು ತಿಳಿಸುತ್ತದೆ. ಶ್ರೀ ಸೂರಗೋಡು ಕೃಷ್ಣಮೂರ್ತಿಯವರು ಮೂವತ್ತಕ್ಕೂ ಹೆಚ್ಚು ಸಾಮಾಜಿಕ ನಾಟಕಗಳನ್ನು ರಚಿಸಿದ್ದು, ಅವೆಲ್ಲವನ್ನೂ ರಂಗದ ಮೇಲೆ ಯಶಸ್ವಿಯಾಗಿ ಅಭಿನಯಿಸಲಾಗಿದೆ.

ಡಾ.ಹೆಚ್.ರಾಮಚಂದ್ರ ಸ್ವಾಮಿಯವರು ರಾಮಕೃಷ್ಣಾಶ್ರಮದಲ್ಲಿ ಪ್ರಕಟಿಸಿದ ಅನೇಕ ಕೃತಿಗಳನ್ನೂ

ಆಂಗ್ಲಭಾಷೆಗೆ ತರ್ಜುಮೆ ಮಾಡಿದ್ದಾರೆ. ಡಾ.ಸಿ.ಪಿ.ಗಿರಿಧರ ಶಾಸ್ತ್ರಿಗಳು ಅನೇಕ ಕೃತಿಗಳನ್ನು ಆಂಗ್ಲ ಹಾಗೂ ಸಂಸ್ಕೃತ ಭಾಷೆಯಿಂದ ತರ್ಜುಮೆ ಮಾಡಿದ್ದಾರೆ.

ಬಿ.ಎಲ್.ರವಿಕುಮಾರ್, ಕಿಗ್ಗಾ ಶ್ರೀನಿವಾಸ, ಶೋಭಾ ಅನಂತಯ್ಯ, ಶೈಲಜಾರತ್ನಾಕರ ಹೆಗ್ಗಡೆ,ರೇಣುಕ, ಗುತ್ತಳಿಕೆ ಕೇಶವ, ಮೆ.ನಾ. ರಮೇಶ್, ಆಗುಂಬೆ ಗಣೇಶ್‌ಹೆಗ್ಡೆ, ಛಾಯಾಪತಿ, ಚಂದ್ರು ಎಸ್.ಅವಧಾನಿ, ಪದ್ಮಿನಿ ಕಕ್ಕರಣೆ, ವಸಂತಿ ರಾಮಣ್ಣ ಮೊದಲಾದ ಉದಯೋನ್ಮುಖ ಸಾಹಿತಿಗಳು ಕಥೆ, ಕವನ, ಸಾಹಿತ್ಯ ನಿರ್ಮಾಣದಲ್ಲಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ಆಧುನಿಕ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಹಿನ್ನೆಲೆಯಲ್ಲಿ ಸಾಹಿತ್ಯ ರಚನೆಗೊಂಡಿದ್ದು ನಾಡಿನ ಇತರ ಭಾಗಗಳಲ್ಲಿ ಆದ ಬದಲಾವಣೆಯಂತೆ ಶೃಂಗೇರಿಯಲ್ಲಿಯೂ ಆಗಿದೆ, ಆಗುತ್ತಲಿದೆ. ಸಂಪ್ರದಾಯಬದ್ಧ ಸಾಹಿತ್ಯ ನಿರ್ಮಾಣ ಪ್ರೋತ್ಸಾಹ ಇಲ್ಲವಾಗಿದೆ. ಇರುವ ಕಡಿಮೆ ಪ್ರಮಾಣದ ಸಾಹಿತಿಗಳು ಪಾಶ್ಚಾತ್ಯ ಸಾಹಿತ್ಯ ಶೈಲಿಯನ್ನು ಅನುಕರಿಸಿದ್ದಾರೆ, ಅನುಸರಿಸಿದ್ದಾರೆ.

ಸಾಹಿತ್ಯ ಪರಿಷತ್ ಕೊಡುಗೆ:

ಕರ್ನಾಟಕ ರಾಜ್ಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಬಹಳ ಹಿಂದೆಯೇ ಸ್ಥಾಪನೆಗೊಂಡಿದ್ದರೂ ಶೃಂಗೇರಿಯಲ್ಲಿ ತಾಲ್ಲೂಕು ಸಾಹಿತ್ಯ ಪರಿಷತ್ ಘಟಕ ಮೂರುದಶಕದ ಹಿಂದೆ ಆರಂಭಗೊಂಡು ಕಾರ್ಯಪ್ರವೃತ್ತವಾಗಿದೆ. ಚಿ.ನಾ.ವಿಶ್ವನಾಥ ಶಾಸ್ತ್ರಿಗಳು ಸಾಹಿತ್ಯ ಪರಿಷತ್ತಿನ ತಾಲ್ಲೂಕು ಪ್ರತಿನಿಧಿಯಾಗಿದ್ದರು. ತಾಲ್ಲೂಕು ಮಟ್ಟದ ಸಾಹಿತ್ಯ ಪರಿಷತ್ ಸ್ವತಂತ್ರ ಅಸ್ತಿತ್ವಕ್ಕೆ ಬಂದಲ್ಲಿನಿಂದ ಸಾಹಿತ್ಯಗೋಷ್ಠಿ, ವಿಚಾರಸಂಕಿರಣ, ಕಮ್ಮಟಗಳು, ದತ್ತಿ ಉಪನ್ಯಾಸ, ಕವಿಗೋಷ್ಠಿ, ವಿಚಾರಗೋಷ್ಠಿ, ಸಾಹಿತ್ಯೋತ್ಸವ, ಸಾಹಿತ್ಯಾ ಸಮ್ಮೇಳನಗಳು ನಡೆದಿವೆ. ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಇಲ್ಲಿ ನಡೆಸಲಾಗಿದೆ. ಶೃಂಗೇರಿಯಂತಹ ಗುಡ್ಡಗಾಡು ಪ್ರದೇಶದಲ್ಲಿ ಸಾಹಿತ್ಯಕ ಬದಲಾವಣೆಗೆ ಸಾಹಿತ್ಯ ಪರಿಷತ್ತಿನ ಕೊಡುಗೆ ಅಪಾರವಾದುದು. ಅನೇಕ ಕೃತಿಗಳು ಈ ಸಮಾರಂಭಗಳಲ್ಲಿ ಬಿಡುಗಡೆಗೊಂಡಿವೆ. ಸಾಹಿತಿಗಳಿಗೆ ಪುರಸ್ಕರಿಸಿ ಪ್ರೋತ್ಸಾಹಿಸಲಾಗಿದೆ. ಶೃಂಗೇರಿಯಲ್ಲಿ ಆಧುನಿಕ ಸಂಪ್ರದಾಯದ ಸಾಹಿತ್ಯ ನಿರ್ಮಾಣವಾಗಿ ಸಾರಸ್ವತಲೋಕದಲ್ಲಿ ಶೃಂಗೇರಿ ಗುರುತಿಸಿಕೊಳ್ಳಲು ತಾಲ್ಲೂಕು ಸಾಹಿತ್ಯ ಪರಿಷತ್ತು ಪ್ರಮುಖ ಪಾತ್ರವಹಿಸಿದೆ".[26]

ಪತ್ರಿಕೆಗಳು:

ಶ್ರೀ ಶೇಷಶಾಸ್ತ್ರಿಗಳು ಹೊರತಂದ 'ಧನ್ವಂತರಿ ಪತ್ರಿಕೆ', ಹಂಚಿನಮನೆ ಸುಬ್ರಹ್ಮಣ್ಯರವರ 'ಮೈಸೂರು ಮಲ್ಲಿಗೆ' ತ್ರೈಮಾಸಿಕ ಪತ್ರಿಕೆ, ಶ್ರೀ ಎನ್.ಎಸ್. ಚಂದ್ರಶೇಖರ್‌ರವರ 'ಶೃಂಕೊನ' ಪತ್ರಿಕೆಗಳು ಜನಪ್ರಿಯಗೊಂಡಿದ್ದವು. ಕಾಲಾಂತರದದಲ್ಲಿ ಒತ್ತಡ, ಸಮಸ್ಯೆ, ಹಣಕಾಸಿನ ತೊಂದರೆ

ಮೊದಲಾದವುಗಳಿಂದಾಗಿ ಈ ಪತ್ರಿಕೆಗಳು ಸ್ಥಗಿತಗೊಂಡವು. ನಂತರ ಸಾಮಾಜಿಕ ಅಭಿರುಚಿಗೆ ತಕ್ಕಂತಹ ಕ್ರಾಂತಿಕಾರರ ನೇರ ನುಡಿಯ ಪತ್ರಿಕೆಗಳಾದ 'ನಾಗೇಶ್ ಪತ್ರಿಕೆ','ಡಿ.ವಿ.ಜಿ.ಸತ್ಯಕ್ರಾಂತಿ','ನಮ್ಮ ಲೋಕ', 'ಮಲ್ನಾಡ್ ವಾರ್ತೆ', 'ತುಂಗಾವಾಣಿ', 'ಶೃಂಗಗಿರಿ ವಾರ್ತೆ'ಗಳು ಬಂದವು. ಈ ಪತ್ರಿಕೆಗಳು ಈಗ ಜನಮನ್ನಣೆಗಳಿಸಿ ಚಾಲನೆಯಲ್ಲಿವೆ.

ವಾರ್ತಾಪತ್ರಿಕೆಗಳಲ್ಲದೆ ಅನೇಕ ಸಂಚಿಕೆಗಳು ಶೃಂಗೇರಿಯಲ್ಲಿ ಚಲಾವಣೆಯಲ್ಲಿವೆ. ವಿಮರ್ಶಾಪತ್ರಿಕೆ, ಮಕ್ಕಳ ಪತ್ರಿಕೆ, ವಿಜ್ಞಾನಲೇಖನ ಪತ್ರಿಕೆ, ಕ್ರೀಡೆ, ಕಲೆ, ಸಾಹಿತ್ಯಕ ಪತ್ರಿಕೆಗಳು ಇವೆ. ಶೃಂಗೇರಿಯಲ್ಲಿ ಶ್ರೀ ಜೆ.ಸಿ.ಬಿ.ಎಂ.ಕಾಲೇಜು ಗ್ರಂಥಾಲಯವು ಉತ್ಕೃಷ್ಟವಾದ ಅನೇಕ ಗ್ರಂಥಗಳನ್ನು, ನಿಯತಕಾಲಿಕಗಳನ್ನು ಹೊಂದಿದ ಗ್ರಂಥಾಲಯವೆಂದು ಮಾನ್ಯತೆ ಪಡೆದಿದೆ. ತಾಲ್ಲೂಕಿನ ವಿವಿಧ ಶಾಲಾಕಾಲೇಜುಗಳಲ್ಲಿ, ಸರ್ಕಾರಿ ಗ್ರಂಥಾಲಯಗಳಲ್ಲಿ ಪುಸ್ತಕ ಹಾಗೂ ಪತ್ರಿಕೆಗಳು ಸಿಗುತ್ತವೆ. ಕೆರೆಮನೆ ಗೋಪಾಲಕೃಷ್ಣರವರ ನೇತೃತ್ವದಲ್ಲಿ 'ಕೆರೆಮನೆ ಗ್ರಂಥಾಲಯ' ಮೂರುದಶಕದ ಹಿಂದೆ ಆರಂಭಮಾಡಿದ್ದು ಶೃಂಗೇರಿಯ ಸುತ್ತಮುತ್ತಲ ವಿದ್ಯಾರ್ಥಿಗಳಿಗೆ ಸಾಹಿತ್ಯಾಸಕ್ತರಿಗೆ ಅನುಕೂಲವಾಗಿದೆ. ಕಾಲೇಜಿನ 'ಭಾಮತಿ'ವಾರ್ಷಿಕ ಸಂಚಿಕೆ ಹಾಗೂ ಕೆಲವು ಶಾಲಾ ಕಾಲೇಜುಗಳಲ್ಲಿ ಹೊರತಂದ ಸಂಚಿಕೆಗಳು ಉದಯೋನ್ಮುಖ ಬರಹಗಾರರಿಗೆ ಸಾಹಿತ್ಯಾಸಕ್ತಿ ಮೂಡಿಸುವ ಭೂಮಿಕೆಗಳಾಗಿವೆ.

ತಂತ್ರಜ್ಞಾನದ ಕ್ರಾಂತಿಯಿಂದಾಗಿ ಎಲ್ಲಾ ಕ್ಷೇತ್ರದಲ್ಲೂ ಬದಲಾವಣೆಯಾಗಿದ್ದು ಅಂತರ್ಜಾಲ, ಕಂಪ್ಯೂಟರ್, ಮೊಬೈಲ್ ಇತರೆ ಮಾಧ್ಯಮಗಳು ವ್ಯಾಪಿಸಿರುವುದರಿಂದ . ಯುವಪೀಳಿಗೆಯವರಿಗೆ ಸಾಂಪ್ರಾದಾಯಿಕ ಪತ್ರಿಕೆ, ಪುಸ್ತಕಗಳ ಮೇಲಿನ ಆಸಕ್ತಿ ಕಡಿಮೆಯಾಗಿದೆ. ಜ್ಞಾನಾರ್ಜನೆಗೆ ಹೊಸ ತಂತ್ರಜ್ಞಾನದ ನೆರವನ್ನೂ ಪಡೆಯುತ್ತಿದ್ದಾರೆ. ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಇದೊಂದು ಕ್ರಾಂತಿಕಾರಕ ಬದಲಾವಣೆಯಾಗಿದ್ದು, ಪಲ್ಲಟಕ್ಕೆ ಪ್ರಮುಖ ಕಾರಣವಾಗಿದೆ.

ಚುಟುಕು ಸಾಹಿತ್ಯ ಪರಿಷತ್:

ಶೃಂಗೇರಿಯಲ್ಲಿ 'ಚುಟುಕು ಸಾಹಿತ್ಯ ಪರಿಷತ್' ಕಾರ್ಯರಂಭಗೊಂಡಿದ್ದು ಚುಟುಕು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ದತ್ತಿಉಪನ್ಯಾಸ, ವಿವಿಧ ಗೋಷ್ಠಿಗಳನ್ನು ನಡೆಸಿ ಉದಯೋನ್ಮುಖ ಸಾಹಿತಿಗಳಿಗೆ ಪುರಸ್ಕರಿಸುತ್ತಾ ಬಂದಿದೆ. ಚುಟುಕು ಸಾಹಿತ್ಯ ಸಮ್ಮೇಳನಗಳನ್ನು ನಡೆಸಿ ಪ್ರಸಿದ್ಧ ಕವಿ, ಚಿಂತಕರ ಉಪನ್ಯಾಸ ಗೋಷ್ಠಿಗಳನ್ನು ನಡೆಸಿ ಸಾರಸ್ವತ ಲೋಕಕ್ಕೆ ತನ್ನ ಕೊಡುಗೆ ನೀಡುತ್ತಿದೆ. ಇತ್ತೀಚೆಗೆ ಚುಟುಕು ಸಾಹಿತ್ಯ ಪರಿಷತ್ ಹೆಚ್ಚು ಕ್ರಿಯಾಶೀಲವಾಗಿ ತೊಡಗುತ್ತಿದೆ.

ಸಾಂಸ್ಕೃತಿಕವಾಗಿ ಶೃಂಗೇರಿಯ ಕೊಡುಗೆ:

ಸಾಂಸ್ಕೃತಿಕವಾಗಿ ಶೃಂಗೇರಿ ಶ್ರೀಮಠದ ಕೊಡುಗೆ ಅಪಾರವಾದುದು. ಮಠದಲ್ಲಿ ಹಿಂದಿನಿಂದಲೂ

ಧರ್ಮಸಮ್ಮೇಳನಗಳು, ಸಾಹಿತ್ಯ ಸಮ್ಮೇಳನಗಳು, ವಸಂತ ನವರಾತ್ರಿ, ಸಂಗೀತೋತ್ಸವ(ರಾಮೋತ್ಸವ) ಶಂಕರ ಜಯಂತಿ ಸಭೆ, ಧರ್ಮ, ತತ್ವಶಾಸ್ತ್ರ ಮೊದಲಾದವುಗಳ ಕುರಿತು ಚರ್ಚೆ, ವಿದ್ವತ್ ಗೋಷ್ಠಿ ಮೊದಲಾದವುಗಳು ನಡೆಯುತ್ತಿವೆ.[27] ನವರಾತ್ರಿ ಆಚರಣೆಯ ಸಂದರ್ಭದಲ್ಲಿ ದೇಶದ ಹೆಸರಾಂತ ಸಂಗೀತಗಾರರಿಂದ ವೈವಿಧ್ಯಮಯ ಸಂಗೀತ ಕಛೇರಿ ಏರ್ಪಡಿಸಲಾಗುತ್ತದೆ. ಶ್ರೀ ಮಠದಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳಲ್ಲಿ ಕಲೆ, ಸಾಹಿತ್ಯ, ಸಂಗೀತಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಶ್ರೀ ಕಾಳಿಕಾಂಬ ದೇವಾಲಯ, ಶ್ರೀ ದುರ್ಗಾಂಬ ದೇವಾಲಯ, ಶೃಂಗೇರಿಯ ಚಪ್ಪರದಾಂಜನೇಯ ದೇವಾಲಯಗಳಲ್ಲಿ ಭಜನೆಗಳು ಹಿಂದಿನಿಂದಲೂ ನಡೆದು ಬರುತ್ತಿವೆ.

ಯಕ್ಷಗಾನ ಕ್ಷೇತ್ರದಲ್ಲಿ ಸಾಂಪ್ರದಾಯಿಕ ಶೈಲಿಯನ್ನು ಮುಂದುವರಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ಹೊರಹೊಮ್ಮಿಸಿದ ನಲ್ಲೂರು ಮರಿಯಪ್ಪಾಚಾರ್ ಅಗ್ರಸ್ಮರಣೀಯರು. ಕಲ್ಲೇವಸ್ಥಾನ ಸುಬ್ರಾಯರು, ಚಟ್ಕುಳಿ ಹಿರಿಯಣ್ಣಾಚಾರ್, ಗೋಪಾಲಕೃಷ್ಣ ಮಾಕರಸು, ಶ್ರೀ ವೆಂಕಟೇಶ್ವರ ಯಕ್ಷಗಾನ ಮಂಡಳಿ ಹೊನ್ನವಳ್ಳಿ, ಆಧುನಿಕ ಶೈಲಿಯ ಪ್ರಯೋಗ ನಡೆಸಿ ಜನಮೆಚ್ಚುಗೆಗಳಿಸಿದ ರಮೇಶ್‌ಬೇಗಾರ್, ಸಾಂಪ್ರದಾಯಿಕ ಹಿನ್ನಲೆ ಮೃದಂಗವಾದಕರಾದ ನಲ್ಲೂರ್ ಶ್ರೀ ಜನಾರ್ದನ ಆಚಾರ್, ಹಳಕ ರಮೇಶ್, ಕಿಗ್ಗಾ ಶ್ರೀಕಂಠರವರ ಕೊಡುಗೆ ಅಪಾರವಾದುದು. ಹಾಸ್ಯ ಪಾತ್ರಧಾರಿಯಾಗಿ ಶ್ರೀ ಶ್ರೀನಿವಾಸಾಚಾರ್ ವಿದ್ಯಾರಣ್ಯಪುರ ಯಶಸ್ವಿಯಾಗಿದ್ದಾರೆ.

ಪ್ರಮುಖ ಯಕ್ಷಗಾನ ಮೇಳಗಳಾದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಯಕ್ಷಗಾನ, ಬೈಂದೂರು ಮೇಳ, ಸುರತ್ಕಲ್ ಮೇಳ, ಕಮಲಶಿಲೆ ಮೇಳ, ಸಾಲಿಗ್ರಾಮ ಮೇಳ, ಪೆರಡೂರು ಮೇಳ, ಮಂಗಳೂರು ಮೇಳ ಹೀಗೆ ಅನೇಕ ತಂಡದ ಯಕ್ಷಗಾನಗಳು ಆಗಿಂದ್ದಾಗ್ಗೆ ನಡೆಯುತ್ತಿರುತ್ತವೆ.

ನಾಟಕ:

ವೃತ್ತಿ ರಂಗಭೂಮಿ ಇಲ್ಲದಿದ್ದರೂ ಹವ್ಯಾಸಿ ನಾಟಕ ತಂಡಗಳು, ಸಂಘ ಸಂಸ್ಥೆಗಳು ಇಲ್ಲಿ ಇವೆ. ಶ್ರೀ ರಮೇಶ್ ಬೇಗಾರ್ ನೇತೃತ್ವದ ತಂಡ ಅನೇಕ ಪ್ರದರ್ಶನ ನಡೆಸಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಅನೇಕ ಕಲಾವಿದರನ್ನೂ ಪರಿಚಯಿಸಿಕೊಟ್ಟಿದ್ದಾರೆ. ಶೃಂಗೇರಿಯ ಸರ್ವವ್ಯಾಪಿ ಸಾಂಸ್ಕೃತಿಕ ತಂಡ, ಯಡದಾಳು ಯುವಕ ಸಂಘ ಹಾಗೂ ಯುವತಿಮಂಡಳಿ, ನವೋದಯ ಯುವತಿ ಮಂಡಳಿ ಶೃಂಗೇರಿ, ಯುವಕ ಸಂಘ ಉಳುವೆಬೈಲು, ಗೆಳೆಯರ ಬಳಗ ವೈಕುಂಠಪುರ, ಸಂತೋಷ ಯುವಕ ಸಂಘ ಬೆಟ್ಟಗೆರೆ, ಮಿತ್ರಯುವಕ ಸಂಘ ಬೆಳಂದೂರು, ಹಾಗೆಯೆ ತೆಕ್ಕೂರು, ಮೆಣಸೆ, ಕುಂಚೇಬೈಲು, ನೆಮ್ಮಾರು, ಕೆರೆಕಟ್ಟೆ, ಮೊದಲಾದ ಸ್ಥಳಗಳಲ್ಲಿ ಎಪ್ಪತ್ತೂರಕ್ಕೂ ಹೆಚ್ಚು ಸಂಘ ಹಾಗೂ ಮಂಡಳಿಗಳನ್ನು ಶೃಂಗೇರಿ ಹೊಂದಿದೆ. ಶಾಲಾ ಕಾಲೇಜು ವಾರ್ಷಿಕೋತ್ಸವದ ಸಂದರ್ಭದಲ್ಲಿ

ನಾಟಕಗಳನ್ನು ಅಭಿನಯಿಸುತ್ತಾರೆ. ಶ್ರೀ ರಮೇಶ್ ಬೇಗಾರು, ಹೊಸ್ಕೆರೆ ವೆಂಕಟೇಶ್, ಟಿ.ಎಲ್.ಉಮೇಶ್, ಸೂರಗೋಡು ಕೃಷ್ಣಮೂರ್ತಿ, ಕೆ.ಎಸ್.ವೆಂಕಪ್ಪರವರು ನಾಟಕಗಳನ್ನು ರಚಿಸುವುದರೊಂದಿಗೆ ರಂಗದ ಮೇಲೆ ತಂದಿದ್ದಾರೆ. ಗುಬ್ಬಿ ಕಂಪನಿಯ ನಾಟಕಗಳು, ಹಿರಿಯಣ್ಣಯ್ಯ ಮಿತ್ರಮಂಡಳಿ ನಾಟಕಗಳು ಹಾಗೂ ಇತರೆ ವೃತ್ತಿ ಕಲಾವಿದರ ನಾಟಕ ತಂಡಗಳು ಬರುತ್ತಿದ್ದವು.

ವೈಜ್ಞಾನಿಕ ಕ್ರಾಂತಿಕಾರಕ ಬದಲಾವಣೆಯಿಂದಾಗಿ ಟಿ.ವಿ., ಕಂಪ್ಯೂಟರ್, ಮೊಬೈಲ್, ಅಂತರ್ಜಾಲ ಸೌಲಭ್ಯ ಹಾಗೂ ಇತರ ಎಲೆಕ್ಟ್ರಾನಿಕ್ ಮಾಧ್ಯಮಗಳಿಂದಾಗಿ ಸಾಂಪ್ರದಾಯಿಕ ನಾಟಕ, ಕಲೆ, ಸಂಗೀತ, ಸಾಹಿತ್ಯ, ಗಳ ಮೇಲಿನ ಅಭಿರುಚಿ ಮರೆಯಾಗುತ್ತಿವೆ. ಯುವ ಜನಾಂಗದವರಲ್ಲಿ ಸಾಂಪ್ರದಾಯಿಕ ಕಲೆಯ ಬಗ್ಗೆ ಆಸಕ್ತಿ ಇಲ್ಲವಾಗಿದೆ. ಮುಂದಿನ ಕೆಲವೇ ದಿನಗಳಲ್ಲಿ ಸಂಪೂರ್ಣವಾಗಿ ಇಂತಹ ಕಲೆಗಳು ನಶಿಸಿ ಹೋಗುವುದರಲ್ಲಿ ಯಾವ ಅನುಮಾನವೂ ಇಲ್ಲ. ಆಧುನಿಕ ಶೈಲಿಯ ಕ್ರೀಡೆಗಳಾದ ಕ್ರಿಕೆಟ್, ಫುಟ್‌ಬಾಲ್, ಟೆನ್ನಿಸ್ ಮೊದಲಾದವುಗಳೂ ಸಹ ಯುವಕರ ಆಸಕ್ತಿ ಕ್ಷೇತ್ರವನ್ನು ಬದಲಾಯಿಸಲು ಕಾರಣವಾಗಿವೆ.

ಸಂಗೀತ:

ಶೃಂಗೇರಿಯು ಸಂಗೀತ ಕ್ಷೇತ್ರದಲ್ಲಿ ತನ್ನದೇ ಆದ ಹಿನ್ನಲೆಯನ್ನು ಒಳಗೊಂಡ ತಾಲ್ಲೂಕು ಆಗಿದೆ. ಸಂಪಗೋಡು ಸೂರ್ಯನಾರಾಯಣ ಭಟ್ ಹಾಗೂ ಅವರ ಮಗನಾದ ವಿಘ್ನರಾಜರವರು ದಕ್ಷಿಣ ಭಾರತದಲ್ಲಿಯೆ ಪ್ರಸಿದ್ಧಿ ಪಡೆದಿದ್ದಾರೆ. ಕೀರ್ತನಾ ಕೇಸರಿ ಯಶವಂತದಾಸ ಭಟ್, ನುಗ್ಗಿಮಕ್ಕಿ ರಾಮಚಂದ್ರರಾವ್, ವೈಕುಂಠಪುರ ಕೃಷ್ಣಶಾಸ್ತ್ರೀ, ಶೃಂಗೇರಿ ರಾಮಚಂದ್ರಭಟ್, ಅಡಗಂದೂರು ಕೃಷ್ಣಮೂರ್ತಿ, ವೈಕುಂಠಪುರ ಸೂರ್ಯನಾರಾಯಣರಾವ್, ರಾಮದೇವಸ್ಥಾನ ಕೃಷ್ಣಭಟ್, ವಿದ್ಯಾರಣ್ಯಪುರ ಶ್ರೀಪಾದ ಭಟ್ ಮೊದಲಾದವರು ಪ್ರಸಿದ್ಧಿ ಪಡೆದಿದ್ದಾರೆ. ಶೃಂಗೇರಿಯ ಶ್ರೀ ಮಠದಲ್ಲಿ ಹಿಂದಿನಿಂದಲೂ ಸಂಗೀತ ಕಛೇರಿಗಳು ನಡೆಯುತ್ತಾ ಬಂದಿದೆ. ಶೃಂಗೇರಿಯಲ್ಲಿ ಎರಡು ಸಂಗೀತ ಶಿಕ್ಷಣ ವಿದ್ಯಾಮಂದಿರಗಳಿವೆ. ಗಮಕಿಗಳ ಗಮಕ ವಾಚನ, ಭರತನಾಟ್ಯಗಳು ನಡೆಯುತ್ತವೆ.

ಆಧುನಿಕತೆಯ ಪ್ರಭಾವದಿಂದ ಎಲ್ಲಾ ಕ್ಷೇತ್ರದಲ್ಲೂ ಬದಲಾವಣೆಯಾದಂತೆ ಸಂಗೀತ ಕ್ಷೇತ್ರದಲ್ಲೂ ಆಗಿದೆ. ಹಿಂದಿನಂತೆ ಸಂಗೀತಕಲಿಯುವ ಆಸಕ್ತಿಯಾಗಲಿ, ಶ್ರದ್ಧೆಯಾಗಲಿ ಇಲ್ಲ. ಸಂಗೀತ ವಿದ್ವಾಂಸರ ಕಛೇರಿಯನ್ನು ಕೇಳುವ ವ್ಯವದಾನವೂ ಇಲ್ಲ. ಸಂಗೀತ ಕಲಾವಿದರಿಗೆ ಪ್ರೋತ್ಸಾಹ ಸಿಗುತ್ತಿಲ್ಲ. ಸಂಗೀತಾಭಿಮಾನಿಗಳು ತೀರಾ ಕಡಿಮೆಯಾಗಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಸಂಗೀತ ಕ್ಷೇತ್ರ ದುರ್ಬಲವಾಗಿದೆ.[28]

ಭಾಷಾವೈಶಿಷ್ಟ್ಯತೆ:

ಮಲೆನಾಡಿನ ಸೊಗಡನ್ನು ಹೊಂದಿದ ಇಲ್ಲಿಯದೇ ಆದ ಭಾಷೆಯಿದೆ. ಒಕ್ಕಲಿಗರು, ಗಿರಿಜನರು, ಹರಿಜನರು, ಹಸಲರು ಹೆಚ್ಚಾಗಿ ಅಪ್ಪಟ ಮಲೆನಾಡಿನ ಭಾಷೆಯನ್ನು ಬಳಸುತ್ತಿದ್ದರು. ಇತ್ತೀಚಿನ ಶಿಕ್ಷಣ ಪದ್ಧತಿ, ಇತರರೊಡಗಿನ ಒಡನಾಟ, ಮಾಧ್ಯಮದ ಪ್ರಭಾವ, ಬಾಹ್ಯ ಸಂಪರ್ಕದಿಂದ ಮಲೆನಾಡಿನ ಸೊಗಡನ್ನು ಹೊಂದಿದ ಭಾಷೆಯು ಮರೆಯಾಗುತ್ತಿದೆ. ಕೆಲವರು ಈ ಭಾಷೆಯನ್ನಾಡಿದರೆ ಸಮಾಜದ ಎದುರು ಅನಕ್ಷರಸ್ಥರೆಂದೋ ಅಜ್ಞಾನಿಗಳೆಂದೋ ಬೆಲೆಸಿಗುವುದಿಲ್ಲವೆಂಬ ಕಾರಣದಿಂದ ಭಾಷೆಯನ್ನು ಬಳಸುತ್ತಿಲ್ಲ. ಇಂಗ್ಲೀಷ್ ವ್ಯಾಮೋಹವಿದೆ. ಕೆಲವು ಪದ ಹಾಗೂ ಅರ್ಥಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಮಲೆನಾಡಿನ ಭಾಗದಲ್ಲಿ ಒತ್ತಕ್ಷರಗಳನ್ನು ಒತ್ತಿ ಉಚ್ಚರಿಸದೆ ತೇಲಿಸಿ ಉಚ್ಚರಿಸಲಾಗುತ್ತದೆ. ಹೆಚ್ಚಾಗಿ 'ತ' ಕಾರವನ್ನು ಬಳಸಲಾಗುತ್ತದೆ. ಊಟ ಆಯ್ತಾ ಬದಲಾಗಿ ಊಟ ಆತಾ. ಹೋತೀಯಾ, ಹೋತದೆ, ಬತ್ತದೆ, ಆತು, ಉಂಡಾತ, ಸಾನ, ಮಿಂದಾತ, ಕೂತಾನೆ, ಬತ್ತೀನಿ, ಹಾಕೂದು, ತಿನೂದು, ತಗುಬಾ... ಇತ್ಯಾದಿ ಈ ಮಣ್ಣಿನ ಅನನ್ಯತೆಯನ್ನು ಹೊಂದಿದೆ. ಕೆಲವಷ್ಟು ಹೊರತಾಲ್ಲೂಕಾದ ತೀರ್ಥಹಳ್ಳಿ, ಮೂಡಿಗೆರೆ, ಎನ್.ಆರ್.ಪುರ ಗಳಲ್ಲಿ ಬಳಸುವ ಆಡುಭಾಷೆಗಳು ಸೇರ್ಪಡೆಗೊಂಡು ಹೊಸರೂಪವನ್ನು ಪಡೆದಿವೆ. ಕಡ್ಬು, ಎರಕುಣುದು, ಒಗೆಯುವುದು, ಹಂಚೀರ್ಕಿ, ಹಿಂಡ್ಲು, ಸರ್ಲು, ಜಗಿ, ಕೊರಕಲು, ತಂಟೆ, ಓಣಿ, ಕುಲುಮರೆ....ಇತ್ಯಾದಿ

ಬಯ್ಗುಳ:

ಬೋಳಿಮಗ, ಸೂಳೆಮಗ, ಹಡ್ಪಲ್, ಹಡ್ಬೆ, ರಂಡೆ, ಮುಂಡೆ, ಕಂತ್ರಿನನ್ಮಗ, ಬಿಕನಾಸಿ, ಬೇವರ್ಸಿ, ಮಿಂಡ್ರಿಗೆ ಹುಟ್ಟವ, ನಾಯಿ, ಮಂಗ, ಕತ್ತೆ, ಬಡ್ಡಿಮಗ, ತಾಯ್ಗಂಡ, ...ಕೆಲವಷ್ಟು ಬಯ್ಗುಳಗಳು ಬೇರೆ ಭಾಗದಿಂದ ಆಮದಾಗಿ ಬಂದವುಗಳಾಗಿ ಇಲ್ಲಿಯವೇ ಅನ್ನುವಷ್ಟರಮಟ್ಟಿಗೆ ಉಳಿದು ಬೆಳೆದುಬರುತ್ತಿವೆ. ಶೃಂಗೇರಿಯ ಸುತ್ತಮುತ್ತಲ ತಾಲ್ಲೂಕಿನ ಒಳಗೆ ವೈವಾಹಿಕ ಸಂಬಂಧ, ನೆಂಟಸ್ಥಿಕೆಗಳು ನಡೆಯುತ್ತಿದ್ದವು. ಭಾಷಾ ವಿನಿಮಯವಾಗಿ ಸ್ವಲ್ಪ ಮಾರ್ಪಾಟುಗಳಾಗಿವೆ.

ಸಮಯ ಸಂದರ್ಭಾನುಸಾರವಾಗಿ ಮಲೆನಾಡ ಭಾಷಾಬಳಕೆಯಾಗುತ್ತಿತ್ತು. ಆವೇಶ,ದುಃಖ, ನೋವು, ನಲಿವುಗಳಲ್ಲಿ ಸಭೆ ಸಮಾರಂಭಗಳಲ್ಲಿ ತನ್ನದೇ ಆದ ಸ್ವರೂಪವನ್ನು ಪಡೆದು ಉಚ್ಚರಿಸಲ್ಪಡುತ್ತದೆ. ಆದರೆ ಇತ್ತೀಚಿನ ಭಾಷಾವ್ಯಾಮೋಹದಿಂದ ಮಾತನಾಡುವಾಗ ಆಂಗ್ಲಭಾಷೆಯ ಪ್ರವೇಶ ಯಥೇಚ್ಛವಾಗಿ ಬಳಸಲ್ಪಡುತ್ತದೆ. ಇದರೊಂದಿಗೆ ಹಿಂದಿ, ಮರಾಠಿ, ತುಳು, ಕೊಂಕಣಿ, ಮೊದಲಾದ ಭಾಷೆಗಳೂ ಸೇರ್ಪಡೆಗೊಂಡು ಮೂಲ ಸೊಗಡು ಹೊರಟುಹೋಗಿದೆ.ಕನ್ನಡವನ್ನು ಗ್ರಂಥಸ್ಥವಾಗಿ ಆಡುತ್ತಾರೆ. ಅನ್ಯಭಾಷೆಯ ಸೇರ್ಪಡೆಯೊಂದಿಗೆ ಸ್ಪಷ್ಟ ಉಚ್ಚಾರಮಾಡಿದರೆ ಅಂತಹವರಿಗೆ ವಿಶೇಷವಾದ ಗೌರವ

ಮರ್ಯಾದೆ ಸಿಗುವುದು, ಅಂತಹವರು ಪ್ರಾಜ್ಞರು, ವಿದ್ಯಾವಂತರು, ಬುದ್ಧಿವಂತರೆಂಬ ನಂಬಿಕೆ ಜನಜನಿತವಾಗಿರುವುದರಿಂದ ಹೆಚ್ಚಿನವರು ಅಪ್ಪಟ ಮಲೆನಾಡ ಭಾಷೆಯನ್ನು ಬಳಸದೆ ರೂಪಾಂತರ ಮಾಡಿ ಆಡುತ್ತಿದ್ದಾರೆ. ಹಳ್ಳಿ ಹಳ್ಳಿಯಲ್ಲೂ ಸಹ ಇಂತಹ ಬದಲಾವಣೆಯನ್ನು ಕಾಣಬಹುದಾಗಿದೆ. ಆಧುನಿಕ ಶಿಕ್ಷಣ, ವೈಜ್ಞಾನಿಕ ಕ್ರಾಂತಿ, ಮಾಧ್ಯಮದ ಪ್ರಭಾವದಿಂದಾಗಿ ಬದಲಾವಣೆಗಳಾಗುತ್ತಿವೆ.

"ಭಾಷೆ ಬದಲಾದರೆ ವೇಷ ಬದಲಾಗುತ್ತದೆ. ವೇಷ ಬದಲಾದರೆ ಭೂಷಣ(ತೊಡುಗೆ) ಬದಲಾಗುತ್ತದೆ. ಇಂಗ್ಲೀಷ್ ಮಾತನಾಡುವ ಮಹಿಳೆಯರು ಇಂಗ್ಲೀಷ್ ಸಂಸ್ಕೃತಿಗೆ ತಕ್ಕಂತೆ ಟೈಟ್ ಪ್ಯಾಂಟ್, ಶರ್ಟ್ ಧರಿಸುತ್ತಾರೆ. ಕೂದಲು ಬಿಚ್ಚಿಕೊಳ್ಳುತ್ತಾರೆ. ಕುಂಕುಮವಾಗಲಿ, ಹೂವಾಗಲಿ, ಬಳೆ, ಸರ, ಓಲೆಗಳನ್ನಾಗಲಿ ಧರಿಸುವುದಿಲ್ಲ. ಈ ರೀತಿಯ ಬದಲಾವಣೆಗೆ ಭಾಷೆಯೇ ಪ್ರಮುಖ ಕಾರಣ.[29] ಅಪ್ಪಟವಾಗಿ ಮಲೆನಾಡ ಕನ್ನಡವನ್ನು ಬಳಸುವವರು ಮಲೆನಾಡ ಸಂಸ್ಕೃತಿಯನ್ನು ಬಿಂಬಿಸುವಂತಹ ವೇಷ ಭೂಷಣವನ್ನೂ ಮಾಡಿಕೊಂಡಿರುತ್ತಾರೆ. "ಅನ್ಯ ಭಾಷಾವ್ಯಾಮೋಹ ಹಾಗೂ ಬಳಕೆ ಸಂಸ್ಕೃತಿ ನಾಶದ ಮೊದಲ ಹಂತಗಳು"[30] ಭಾಷೆ ಪ್ರಮುಖವಾಗಿದ್ದು ಅದು ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಡಿ.ಆರ್.ನಾಗರಾಜ್‌ರವರು ಹೇಳಿದಂತೆ "ಭಾಷೆ ಬಡವಾದರೆ ಸಂಸ್ಕೃತಿ ಸೊರಗುತ್ತದೆ" ಎಂಬ ಮಾತು ಪ್ರಸ್ತುತ ಶೃಂಗೇರಿ ಪರಿಸರದಲ್ಲಿ ಕಾಣಬಹುದಾಗಿದೆ.

ಕೊನೆ ಟಿಪ್ಪಣಿ :

1. ರಾಧಾಕೃಷ್ಣ ರಾವ್ ಎಂ., ಮತ್ತು ಗಿರಿಧರ ಶಾಸ್ತ್ರೀ ಸಿ.ವಿ. (ಸಂ), ಭಾಮತಿ ಪುಟ: 26–27
2. ಅದೇ; ಪುಟ:31
3. ಅದೇ; ಪುಟ:32
4. ಮಂಜುನಾಥಯ್ಯ, ಸೂರ್ಡಿ, ಭೋವಿ
5. ಅಣ್ಣಯ್ಯ ಹೆಗ್ಗಡೆ, ನೆಮ್ಮಾರು, ಒಕ್ಕಲಿಗ
6. ಅಪ್ಪಾಚಾರಿ ಕೆ., ಕುಂಬಾರಕೊಪ್ಪ, ವಿಶ್ವಕರ್ಮ
7. ಅದೇ;
8. ಅದೇ;
9. ಮಂಜುನಾಥ, ಹೊನ್ನವಳ್ಳಿ, ಬಿಲ್ಲವ
10. ಶಾಮನಾಯ್ಕ, ನೀಲಂದೂರು, ದೀವರು
11. ಅದೇ;
12. ಗೌರಮ್ಮ, ಅಡ್ಡಗದ್ದೆ, ವಿಶ್ವಕರ್ಮ
13. ನಾಗಮ್ಮ, ಕೆರೆಮನೆ, ಮಡಿವಾಳ
14. ರಾಮಚಂದ್ರ ಜಿ.ಎನ್., ಶೃಂಗೇರಿ ವಿದ್ಯಾರಣ್ಯಪುರ ಇತಿಹಾಸ ದರ್ಶನ; ಪುಟ 7
15. ಉಳುವೆ ರಮೇಶ್, ಶೃಂಗಗಿರಿಯ ಒಡಲಿನಿಂದ; ಪುಟ 11
16. ಅದೇ; ಪುಟ:8
17. ಅದೇ; ಪುಟ:11–19

18. ಅದೇ; ಪುಟ:7
19. ಅದೇ; ಪುಟ:7
20. ಅದೇ; ಪುಟ:8
21. ಅದೇ; ಪುಟ:8
22. ಅದೇ; ಪುಟ:9
23. ಎ.ಕೆ. ಶಾಸ್ತ್ರೀ, ಶೃಂಗೇರಿ ಧರ್ಮಸಂಸ್ಥಾನ, ಪುಟ 8
24. ನರಸಿಂಹಮೂರ್ತಿ ಎ.ವಿ., ಶೃಂಗೇರಿ ದಕ್ಷಿಣ ಭಾರತದ ಶಾಂಕರ ಪೀಠದ ಇತಿಹಾಸ; ಪುಟ: 206-209
25. ನಾಗಾರ್ಜುನ ಹಾ.ಮ. (ಸಂ), ಸಾಹಿತ್ಯಾವಲೋಕನ, ವೆಂಕಪ್ಪ ಕೆ.ಎಸ್. (ಲೇ), ಪುಟ:220
26. ರಾಜಣ್ಣ ದ., ಪೂರ್ವಾಧ್ಯಕ್ಷರು ತಾಲ್ಲೂಕು ಕ.ಸಾ.ಪ., ಶೃಂಗೇರಿ
27. ಗಣಪತಿ ಸುಬ್ರಹ್ಮಣ್ಯ ಅವಧಾನಿ, ಶೃಂಗೇರಿ, ಬ್ರಾಹ್ಮಣ
28. ಸೂರ್ಯನಾರಾಯಣ ಭಟ್ ವೈ.ಎಸ್., ವೈಕುಂಠಪುರ, ಸಂಗೀತ ವಿದ್ವಾಂಸರು
29. ವೆಂಕಟರಮಣ ಭಟ್, ವೈಕುಂಠಪುರ, ಬ್ರಾಹ್ಮಣ
30. ಗಣಪತಿ ಸುಬ್ರಹ್ಮಣ್ಯ ಅವಧಾನಿ, ಶೃಂಗೇರಿ, ಬ್ರಾಹ್ಮಣ

ಅಧ್ಯಾಯ – 4

ಶ್ರೀಮಠ ಮತ್ತು ಶೃಂಗೇರಿ

4.1 ಶ್ರೀಮಠದ ಆರ್ಥಿಕ ಕೊಡುಗೆ

4.2 ಶ್ರೀಮಠದ ಸಾಮಾಜಿ ಕೊಡುಗೆ

4.3 ಶ್ರೀಮಠದ ಧಾರ್ಮಿಕ ಕೊಡುಗೆ

4.4 ಭಾವನಾತ್ಮಕವಾಗಿ ಶ್ರೀಮಠ

4.5 ಶ್ರೀಮಠದ ಸಾಂಸ್ಕೃತಿಕ ಕೊಡುಗೆ

4.6 ಶ್ರೀಮಠದ ಶೈಕ್ಷಣಿಕ ಕೊಡುಗೆ

ಶ್ರೀಮಠ ಮತ್ತು ಶೃಂಗೇರಿ

ಶೃಂಗೇರಿಯ ಸಾಂಸ್ಕೃತಿಕ ಅಧ್ಯಯನ ಮಾಡಬೇಕಾದರೆ ಶ್ರೀಮಠವನ್ನು ಹೊರತುಪಡಿಸಿ ಅಧ್ಯಯನ ಮಾಡಲು ಸಾಧ್ಯವಿಲ್ಲ. ಶೃಂಗೇರಿಯ ಬಹುತೇಕ ಭಾಗವು ಶ್ರೀಮಠದ ಜಹಗೀರಿನ ವ್ಯಾಪ್ತಿಯೊಳಗಿದ್ದು ಅದರ ನಿಯಂತ್ರಣದಲ್ಲಿತ್ತು. ಅಂತೆಯೇ ಶೃಂಗೇರಿಯ ಜನತೆ ಭಾವನಾತ್ಮಕವಾಗಿ ಶ್ರೀಮಠವನ್ನು ನಚ್ಚಿಕೊಂಡಿದ್ದು ಯಾವುದೇ ಕಾರ್ಯಚಟುವಟಿಕೆಗಳು ನಡೆಯಬೇಕಾದರೂ, ನಡೆಸಬೇಕಾದರೂ ಶ್ರೀಮಠವನ್ನೇ ಅನುಸರಿಸುತ್ತಾ ಬಂದಿದ್ದಾರೆ. ಅಲ್ಲಿಯ ರೀತಿ, ರಿವಾಜು, ಕ್ರಮ, ಆಚರಣೆ ಮೊದಲಾದವುಗಳನ್ನು ಪಾಲಿಸುತ್ತಾರೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಶೃಂಗೇರಿ ಪ್ರಾಂತ್ಯಕ್ಕೆ ಶ್ರೀಮಠದ ಸಾಮಾಜಿಕ ಕೊಡುಗೆ, ಸಾಂಸ್ಕೃತಿಕ ಕೊಡುಗೆ, ಆರ್ಥಿಕ ಕೊಡುಗೆ, ಧಾರ್ಮಿಕ ಕೊಡುಗೆ, ಶೈಕ್ಷಣಿಕ ಕೊಡುಗೆ, ಆಡಳಿತಾತ್ಮಕವಾದ ಕೊಡುಗೆ ಹಾಗೂ ಭಾವನಾತ್ಮಕವಾಗಿ ಶ್ರೀಮಠದೊಂದಿಗೆ ಜನರ ಸಂಬಂಧವನ್ನು ಕುರಿತಂತೆ ಈ ಅಧ್ಯಾಯದಲ್ಲಿ ವಿಸ್ತರಿಸಲಾಗಿದೆ.

4.1 ಶ್ರೀಮಠದ ಆರ್ಥಿಕ ಕೊಡುಗೆ:

ಇಲ್ಲಿ ನಡೆಯುವ ಯಾವುದೇ ಆರ್ಥಿಕ ವ್ಯವಹಾರಗಳಿಗೆ ಶ್ರೀಮಠದ ಅನುಮತಿ ಅವಶ್ಯವಾಗಿತ್ತು. ಜನರು ಸಂಸ್ಥಾನಕ್ಕೆ ತೆರಿಗೆ ನೀಡುತ್ತಿದ್ದರು. ಮಠವೇ ನೇರವಾಗಿ ಆರ್ಥಿಕ ವ್ಯವಹಾರಗಳಲ್ಲಿ ಭಾಗವಹಿಸುತ್ತಿತ್ತು. ಉದಾಹರಣೆಗೆ ಭೂ ವ್ಯವಹಾರಗಳು, ಭೂ ಹಿಡುವಳಿ ಸಂಬಂಧಗಳು, ಹಣಕಾಸು ಸಂಬಂಧಿ ವ್ಯವಹಾರಗಳು, ಭೂಮಿಯ ಆದಾಯ, ರಾಜರುಗಳಿಂದ ದಾನ (ಭೂ ದಾನ), ವ್ಯಕ್ತಿಗಳಿಂದ ಬಂದಂತಹ ದಾನ ಇತ್ಯಾದಿ. ವಾರಸುದಾರರಿಲ್ಲದೆ ನಿರ್ಗತಿಕವಾದಾಗ ಅದು ಮಠಕ್ಕೆ ಸೇರುತ್ತಿತ್ತು. ಭೂ ಸಂಬಂಧಿ ವ್ಯವಹಾರದಲ್ಲಿ ಭೂಮಿಯ ನಿರ್ವಹಣೆ, ವೃತ್ತಿಗಳು, ಮನೆಗಳು, ಮೇಲ್ವಿಚಾರಣೆ ಹಸ್ತಾಂತರ, ವ್ಯಾಜ್ಯಗಳು, ಭೂಮಿ ವಿವಾದ, ಹಣಕಾಸಿನ ವ್ಯವಹಾರಗಳು, ಮುದುವಟ್ಟು (ವಿಶಿಷ್ಟ ಸೇವೆ) ದೀಪಾರಾಧನೆ ಕಾಣಿಕೆ, ಕೃಷಿ ಆದಾಯ, ತೆರಿಗೆ – ದವಸ ಧಾನ್ಯ ರೂಪದಲ್ಲಿ, ನಗದು ರೂಪದಲ್ಲಿ, ವ್ಯಾಪಾರ ವಹಿವಾಟು, ಹಣಕಾಸು ವ್ಯವಹಾರ, ನಾಣ್ಯ ಪದ್ಧತಿ, ನಿವೇಶನ, ಮನೆ, ತೂಕ ಮತ್ತು ಅಳತೆ. ಇತ್ಯಾದಿ.[1]

ಶೃಂಗೇರಿ ಮಹಾಸಂಸ್ಥಾನದ ಆರ್ಥಿಕತೆ ಎಂದರೆ ಶೃಂಗೇರಿ ಮಠವು ದೈನಂದಿನ ವ್ಯವಹಾರಗಳ ಮೂಲಕ ತನ್ನ ಆದಾಯವನ್ನು ಹೆಚ್ಚಿಸಿಕೊಂಡು ಕಲ್ಯಾಣ ಹೊಂದುವುದರೊಂದಿಗೆ ಆರ್ಥಿಕ ನಿಯಂತ್ರಣ ಸಾಧಿಸುವುದು ಎಂಬುದಾಗಿದೆ. ಆರ್ಥಿಕ ವ್ಯವಹಾರಗಳೆಂದರೆ ಆದಾಯ, ಖರ್ಚು, ವೆಚ್ಚ, ತೆರಿಗೆ, ಸಾಲ, ಬಡ್ಡಿ, ಗೇಣಿ ಇತ್ಯಾದಿ ಅಂಶಗಳನ್ನೊಳಗೊಳ್ಳುತ್ತವೆ.[2] ಶೃಂಗೇರಿ ಸಂಸ್ಥಾನದಲ್ಲಿ ಸರ್ವಮಾನ್ಯ, ಅರ್ಧಮಾನ್ಯ ಸೀಮೆಗಳೆಂದು ತೆರಿಗೆ ಸಂಪೂರ್ಣ ವಿನಾಯಿತಿ, ಅರ್ಧ ವಿನಾಯಿತಿಯನ್ನು ನೀಡುತ್ತಿದ್ದುದು. ಸಾಲಕ್ಕೆ ಬಡ್ಡಿ ನೀಡುವುದು, ಪಡೆಯುವುದು, ಗೇಣಿ ವಿಧಿಸುವುದು, ಆದಾಯ

ಖರ್ಚಿನ ವಿವರ ಇಡುವುದು, ಇತ್ಯಾದಿ ಆರ್ಥಿಕ ವ್ಯವಹಾರಗಳನ್ನು ಕಾಣಬಹುದು.

ಶೃಂಗೇರಿಯ ಜನತೆ ಶ್ರೀಮಠದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದು ತಮ್ಮ ಆರ್ಥಿಕಾಭಿವೃದ್ಧಿಯೊಂದಿಗೆ ಶ್ರೀಮಠದ ಕೀರ್ತಿ ಘನತೆಯ ಶ್ರೇಷ್ಠತೆಯಲ್ಲೂ ಇವರ ಪಾತ್ರ ಬಹುಮುಖ್ಯವಾದುದಾಗಿದೆ. ಅನಾದಿಕಾಲದಿಂದಲೂ ಈ ಸಂಬಂಧ ಮುಂದುವರಿಯುತ್ತಿದ್ದು ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಹಾಗೂ ಜಹಗೀರಿನ ನಂತರದ ಸಂದರ್ಭದಲ್ಲಿ ಬಂದ ಭೂ ಸುಧಾರಣೆ ಕಾಯ್ದೆಯಂತೆ ಉಳುವವನೇ ಒಡೆಯನಾಗಿ, ಶ್ರೀಮಠದ ಜಮೀನನ್ನು ಯಾರು ಉಳುಮೆ ಮಾಡಿ ಗೇಣಿಯನ್ನು ನೀಡುತ್ತಾ ಬಂದಿದ್ದರೋ ಅವರಿಗೆ ಆ ಭೂಮಿ ದೊರಕಿತು. ಭಾವನಾತ್ಮಕವಾದ ಘರ್ಷಣೆಯನ್ನು ನಾವು ಈ ಸಂದರ್ಭದಲ್ಲಿ ಕಾಣಬಹುದಾಗಿದೆ. ಅನ್ನ ಕೊಟ್ಟ ತಾಯಿಯ ಭೂಮಿಯನ್ನು ನಮ್ಮದಾಗಿಸಿಕೊಳ್ಳುವಾಗ ಅನೇಕರು ಸಂಕಟಕ್ಕೆ ಸಿಲುಕಿದ್ದಾರೆ, ನೊಂದವರೂ ಇದ್ದಾರೆ, ಕೆಲವರು ಸಂತಸಪಟ್ಟವರೂ ಇದ್ದಾರೆ. ಅನೇಕ ಕುಟುಂಬದವರು ತಾವು ಆ ಭೂಮಿಯಲ್ಲಿ ಬೆಳೆದ ಫಸಲಿನ ಕೆಲವಷ್ಟನ್ನು ಈಗಲೂ ಶ್ರೀಮಠಕ್ಕೆ (ದೇವರಿಗೆ) ನೀಡಿ ಧನ್ಯತಾಭಾವನ್ನು ಪಡೆಯುತ್ತಾರೆ[3].

ಶ್ರೀಮಠದ ಆಡಳಿತದಿಂದ ಮುಕ್ತವಾಗಿ ಪ್ರಜಾರಾಜ್ಯ ನಿರ್ಮಾಣವಾಗಿರುವುದು, ತಮ್ಮದೇ ಆದ ಆಡಳಿತ ನಿರ್ವಹಣೆಯಲ್ಲಿ ಪಂಚಾಯ್ತಿ, ತಾಲ್ಲೂಕು ಬೋರ್ಡ್‌ಗಳು, ಕಾರ್ಯ ಪ್ರವೃತ್ತವಾಗಿ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿರುವುದು, ಶ್ರೀಮಠದ ಭದ್ರ ಸಂಸ್ಕೃತಿಯನ್ನು ಚಾಚೂ ತಪ್ಪದೆ ಅನುಸರಿಸುತ್ತಿರುವವರ ಸಾಂಸ್ಕೃತಿಕ ಘರ್ಷಣೆಯ ಹಾಗೂ ಸ್ಥಿತ್ಯಂತರದ ಪರ್ವಕಾಲ[4].

ಮಠದ ಭೂಮಿಯನ್ನು ಉಳುಮೆ ಮಾಡುತ್ತಿದ್ದ ಗೇಣಿದಾರರು ಕಾಲಕಾಲಕ್ಕೆ ಮಠಕ್ಕೆ ಗೇಣಿಯನ್ನು ನೀಡುತ್ತಿದ್ದರು. ಈ ಗೇಣಿಯು ಮಠದ ಆದಾಯದ ಒಂದು ಭಾಗವಾಗಿದ್ದರೂ, ಗೇಣಿದಾರರ ಜೀವನ ನಿರ್ವಹಣೆಗೆ ಪೂರಕವಾಗಿರುವಂತೆ ವಿಧಿಸಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ. ಮಠದ ಮತ್ತು ಗೇಣಿದಾರರ ನಡುವೆ ಸಮನ್ವಯತೆಯಿತ್ತು. ಕೆಲವೊಮ್ಮೆ ಪ್ರಕೃತಿ ವಿಕೋಪದಿಂದ ನಷ್ಟ ಸಂಭವಿಸಿದರೆ ಗೇಣಿ ರಿಯಾಯಿತಿ ನೀಡಿ ಸಂಕಷ್ಟದಲ್ಲಿರುವವರಿಗೆ ಸಹಾಯವನ್ನು ನೀಡಿದ ಔದಾರ್ಯ ಮಠದ್ದಾಗಿತ್ತು.

ಶ್ರೀಮಠವು ಇತರರಿಗೆ ಸಾಲ ನೀಡಿ ಬಡ್ಡಿ ಪಡೆದಿರುವುದು ಹಾಗೂ ಮಠದ ನಿರ್ವಹಣೆಗಾಗಿ ಸಾಲವನ್ನು ಪಡೆದು ಬಡ್ಡಿ ಸಮೇತ ತೀರಿಸಿರುವುದಿದೆ. "ಬಡ್ಡಿಯೆನ್ನುವ ಪ್ರಕ್ರಿಯೆ ಆರ್ಥಿಕವಾಗಿ ದುರ್ಬಲರಾದವರಿಗೆ ಸಾಲ ನೀಡಿ ಸಹಕರಿಸುವುದು ಧರ್ಮ. ಬಡ್ಡಿಯನ್ನು ಪಡೆಯುವುದು ಅಥವಾ ವಿಧಿಸುವುದು ಮಹಾಪಾಪ[5] ವೆಂದು ಪರಿಗಣಿಸಲಾಗಿತ್ತು. ಆದರೆ, ಆಧುನಿಕ ಆರ್ಥಿಕ ಚಟುವಟಿಕೆಗಳಲ್ಲಿ ಬಂಡವಾಳದ ಹೂಡಿಕೆಯಿಂದ ಲಾಭ ಪಡೆಯುವುದು ಬಡ್ಡಿ ವಿಧಿಸುವುದು ಅಥವಾ ನೀಡುವುದು ಪರಸ್ಪರ ಆರ್ಥಿಕ ಬೆಳವಣಿಗೆಗೆ ಪೂರಕವಾಗಿದೆ ಎಂದು ಭಾವಿಸಲಾಗುತ್ತದೆ.

ಶೃಂಗೇರಿ ಮಠವು ಸ್ವತಂತ್ರ ಆಡಳಿತ ಸಂಸ್ಥೆಯಾಗಿದ್ದು, ಆರ್ಥಿಕ ನಿರ್ವಹಣೆ ನಡೆಸಬೇಕಾದ್ದರಿಂದ

ಸರ್ಕಾರ ಅಥವಾ ಆರ್ಥಿಕ ಸಂಸ್ಥೆಯಂತೆಯೇ ಇದು ವ್ಯವಹಾರ ನಡೆಸಬೇಕಾದ ನಿರ್ಬಂಧವಿದ್ದುದರಿಂದ ಬಡ್ಡಿ ವಿಧಿಸಬೇಕಾಗಿರುತ್ತಿತ್ತು. ಮಠವು ಇತರ ರಾಜಮನೆತನದವರಿಂದ ಪಡೆದ ಸಾಲಕ್ಕೆ ಬಡ್ಡಿ ಪಾವತಿಸುತ್ತಿದ್ದರು. ಮತ್ತು ಮಠವು ಇತರರಿಗೆ ಸಾಲ ನೀಡಿದಾಗ ಬಡ್ಡಿಯನ್ನು ಪಡೆಯುತ್ತಿತ್ತು. ಆದರೆ ಮಠ ಧಾರ್ಮಿಕ ಸಂಸ್ಥೆಯಾಗಿ ತಮ್ಮ ಸಿಬ್ಬಂದಿ ವರ್ಗದವರೊಂದಿಗೆ ವ್ಯವಹಾರ ನಡೆಸುವಾಗ ಅವರು ಪಡೆದ ಸಾಲಕ್ಕೆ ಬಡ್ಡಿಯನ್ನು ಪಡೆಯುತ್ತಿರಲಿಲ್ಲ. ಅದು ಇಂದಿಗೂ ಮುಂದುವರೆದುಕೊಂಡು ಬಂದಿದೆ. ಮಠವು ಧಾರ್ಮಿಕ ಸಂಸ್ಥೆಯಾಗಿದ್ದರೂ ಧರ್ಮನಿರಪೇಕ್ಷ ಸಂಸ್ಥಾನವಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವುದು ಸ್ಪಷ್ಟವಾಗುತ್ತದೆ[6].

ಶೃಂಗೇರಿ ಮಠವು ಆರ್ಥಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸಿದೆ. ಅದು ಒಂದು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಬ್ಯಾಂಕ್ ಎಂದರೆ ಬೇರೆಯವರಿಂದ ಹಣವನ್ನು ಪಡೆಯುವುದು ಬೇರೆಯವರಿಗೆ ಹಣವನ್ನು ಸಾಲ ನೀಡುವುದು ಆಗಿದೆ. ಕ್ರಿ.ಶ.1949 ರ ಭಾರತೀಯ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯ ಪ್ರಕಾರ ಬ್ಯಾಂಕ್ ಎಂದರೆ "ಹೂಡಿಕೆ ಮಾಡುವ ಅಥವಾ ಸಾಲ ನೀಡುವ ಉದ್ದೇಶದಿಂದ ಸಾರ್ವಜನಿಕ ರಿಂದ ಹಣವನ್ನು ಪಡೆದು ಕೇಳಿದ ಕೂಡಲೆ ಮರುಪಾವತಿ ಮಾಡುವ ಸಂಸ್ಥೆಯೇ ಬ್ಯಾಂಕ್"[7] ಶೃಂಗೇರಿ ಮಠವು ಹಣ ಪಡೆಯುವ ಹಾಗೂ ಸಾಲ ನೀಡುವ ಕಾರ್ಯದಲ್ಲಿ ತೊಡಗಿ ಒಂದು ಬ್ಯಾಂಕಿನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಶ್ರೀ ಮಠವು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗಣನೀಯವಾಗಿ ಪ್ರಗತಿ ಸಾಧಿಸಿತ್ತು. ಮುಂದೆ ಶ್ರೀ ಶಾರದಾ ಬ್ಯಾಂಕ್ ಸ್ಥಾಪಿಸಿ ತನ್ನ ವ್ಯಾಪ್ತಿಯಲ್ಲಿನ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾ ಬಂದಿತು.

ಮಠವು ಕರ್ನಾಟಕದಲ್ಲಿ ಅಷ್ಟೇ ಅಲ್ಲದೆ ಇತರ ರಾಜ್ಯಗಳಲ್ಲಿಯೂ ಜಮೀನನ್ನು ಹೊಂದಿತ್ತು. ಅನುಕೂಲಕರವಾದ ಸ್ಥಳಗಳಲ್ಲಿ ಮಠದವರೇ ಸಾಗುವಳಿ ಮಾಡಿಸಿ ಉಳಿದ ಭಾಗಗಳಲ್ಲಿ ಗೇಣಿದಾರರಿಂದ ಒಕ್ಕಲು ಮಾಡಿಸುತ್ತಿದ್ದರು. ಕೃಷಿಯಿಂದಲೇ ಹೆಚ್ಚು ಆದಾಯ ಮಠಕ್ಕೆ ಬರುತ್ತಿತ್ತು. ಶ್ರೀಮಠದ ಕೃಷಿ ಭೂಮಿಯನ್ನು ಒಕ್ಕಲಿಗಾಗಿ ಇತರರಿಗೆ ನೀಡಿರುವುದಲ್ಲದೆ ಸ್ವತ: ಶ್ರೀಮಠವೇ ಭೂಮಿಯ ನಿರ್ವಹಣೆ ಮಾಡಿಕೊಂಡು ಬರುತ್ತಿತ್ತು.

ಒಂದು ಬಿನ್ನವತ್ತಳೆಯಲ್ಲಿ ತಿಳಿಯುವುದೇನೆಂದರೆ ರಂಗ ಮತ್ತು ಬಡಯ್ಯನವರು ಆ ವರ್ಷ ಮಳೆಯಿಲ್ಲದೆ ಭತ್ತವು ಒಣಗಿ ಹೋಗಿದ್ದಕ್ಕೆ ಸಂಸ್ಥಾನವು ನಿಗದಿ ಪಡಿಸಿದ ಭತ್ತವನ್ನು ಸಲ್ಲಿಸುವಲ್ಲಿ ನಮಗೆ ರಿಯಾಯಿತಿ ನೀಡಬೇಕೆಂದು ಕ್ರಿ.ಶ.1832ರಲ್ಲಿ ಶ್ರೀಮಠದ ಭಂಡಾರಕ್ಕೆ ಮನವಿ ಸಲ್ಲಿಸಿದ್ದಾರೆ. ಈ ವರ್ಷದಲ್ಲಿ ನಾಲ್ಕು ಖಂಡುಗ ಭತ್ತ ಕೊಟ್ಟು ಉಳಿದ 28 ಖಂಡುಗ ಭತ್ತವನ್ನು ಮುಂಬರುವ ವರ್ಷದಲ್ಲಿ ಸಂದಾಯ ಮಾಡುವುದಾಗಿ ತಿಳಿಸಲಾಗಿದೆ.[8]

ಶೃಂಗೇರಿಯಲ್ಲಿ ಕೃಷಿಯೇ ಪ್ರಧಾನವಾಗಿದ್ದು ಭತ್ತ, ಅಡಿಕೆ, ಏಲಕ್ಕಿ, ಮೆಣಸು, ತೆಂಗು, ವೀಳ್ಯೆದೆಲೆ

ಮುಂತಾದವುಗಳನ್ನು ಬೆಳೆಯುತ್ತಿದ್ದರು. ಭತ್ತವು ಪ್ರಧಾನ ಬೆಳೆಯಾಗಿದ್ದು ಅದರಿಂದ ಶ್ರೀಮಠಕ್ಕೆ ಸಾಕಷ್ಟು ಉತ್ಪನ್ನ ಹಾಗೂ ಆದಾಯ ದೊರೆಯುತ್ತಿತ್ತೆಂದು ದಾಖಲೆಗಳಿಂದ ತಿಳಿಯಬಹುದು.[9] ಶ್ರೀಮಠದ ಸಹಕಾರ ಹಾಗೂ ಪ್ರೋತ್ಸಾಹದಿಂದ ಬಹಳಷ್ಟು ಕುಟುಂಬಗಳಿದ್ದವು. ಶ್ರೀಮಠದೊಂದಿಗೆ ನಿಕಟ ಸಂಬಂಧವಿತ್ತು. ಶ್ರೀಮಠದ ಭೂಮಿಯನ್ನು ಸ್ವಂತ ಭೂಮಿಯಂತೆ ಕಾಪಾಡಿಕೊಂಡು ಬರುತ್ತಿದ್ದರು.

ಶೃಂಗೇರಿ ಸುತ್ತಮುತ್ತಲ ಅನೇಕರು ಶ್ರೀಮಠದ ಚಾಕರಿ (ನೌಕರಿ) ಮಾಡುತ್ತಿದ್ದರು. ಕೆಲವರು ಮಠದಲ್ಲಿಯೇ ಒಕ್ಕಲಿರುತ್ತಿದ್ದರು. ಜಾತ್ರೆ, ಉತ್ಸವ ಇತ್ಯಾದಿ ಸಮಾರಂಭಗಳಲ್ಲೂ ಖಾಯಂ ಕೆಲಸಗಾರರಲ್ಲದೆ ಇತರೆಯವರು ಮಾಡುತ್ತಿದ್ದರು. ನವರಾತ್ರಿ ಉತ್ಸವದ ಸಂದರ್ಭದಲ್ಲಿ ಛತ್ರಿ, ಛಾಮರ, ಪಲ್ಲಕ್ಕಿ ಕಾರ್ಯಗಳಲ್ಲಿ ತೊಡಗುತ್ತಿದ್ದರು. ತೇರಿಗೆ ಪೆಟ್ನೆಮಣೆ ಮಾಡುವುದು ಹಾಗೂ ರಥೋತ್ಸವದ ದಿನ ಪಟ್ನೆ ಕಟ್ಟುವುದನ್ನು ಪರಂಪರಾಗತವಾಗಿ ಕುಂಬಾರಕೊಪ್ಪದ ಅಚಾರ್ಯರು ನಡೆಸುತ್ತಿದ್ದರು. ಇವರಿಗೆ ಅನುಕೂಲವಾಗಲು ಹಾಗೂ ಪ್ರತಿಭಾವಂತರು ಬೇಕಾಗುವುದರಿಂದ ಅವರು ಕಲ್ಲಾಳಿ, ಕುಂತೂರು, ಹರಿಕೆ ಮೊದಲಾದ ಭಾಗದ ಆಚಾರ್ಯರನ್ನು ಬರಮಾಡಿಕೊಳ್ಳುತ್ತಿದ್ದರು. ಇಂದಿಗೂ ಈ ಪರಂಪರೆ ಹಾಗೆಯೇ ಮುಂದುವರಿದುಕೊಂಡು ಬರುತ್ತಿದೆ. ಸ್ವತಂತ್ರಜೀವನ ನಿರ್ವಹಣೆಯ ಆರ್ಥಿಕ ಸದೃಢತೆಯಿದ್ದರೂ ಶ್ರೀಮಠದೊಂದಿಗಿನ ದೈವೀ ಸಂಬಂಧ ಹಾಗೂ ಸೇವಾ ಕೈಂಕರ್ಯದ ಸಂಬಂಧ ಮುಂದುವರಿದಿದೆ.[10]

ಮೊದಲಿನಿಂದಲೂ ಇಂದಿನವರೆಗೂ ಶ್ರೀಮಠವನ್ನೇ ನಂಬಿ, ನೆಚ್ಚಿಕೊಂಡು ಜೀವನ ಸಾಗಿಸುವ ಅನೇಕ ಕುಟುಂಬಗಳು ಈಗ ಭಾಗಶ: ಮಠದ ಸಂಪರ್ಕದಲ್ಲಿದ್ದು ಸ್ವತಂತ್ರ ನಿರ್ವಹಣೆ ಮಾಡುತ್ತಿದ್ದಾರೆ. ಈ ಭಾಗಕ್ಕೆ ವಲಸೆ ಬಂದವರು ತೀರಾ ಕ್ರಾಂತಿಕಾರಕ ಮನೋಧರ್ಮವನ್ನು ಹೊಂದಿದವರು, ಶ್ರೀಮಠದ ಸಂಪರ್ಕದಿಂದ, ಪ್ರಭಾವದಿಂದ ದೂರವಿದ್ದು ಜೀವನ ನಿರ್ವಹಣೆ ಮಾಡುವವರಿದ್ದಾರೆ. ಶ್ರೀಮಠವು ಜಾತಿ, ಧರ್ಮ, ಮತವೆನ್ನದೆ ಎಲ್ಲಾ ಮತಧರ್ಮೀಯರಿಗೂ ಆರ್ಥಿಕ ಸಹಕಾರ ನೀಡಿದೆ. ಇಂದಿಗೂ ಇತರೆ ಧರ್ಮದವರು ಶ್ರೀಮಠಕ್ಕೆ ಬರುತ್ತಾರೆ ಹಾಗೂ ಭಾವನಾತ್ಮಕವಾಗಿ ಶ್ರೀಮಠದೊಂದಿಗಿನ ಸಂಬಂಧವನ್ನು ಹೊಂದಿರುವುದನ್ನು ಕಾಣಬಹುದು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆ ಸುಧಾರಣೆಗಳು ನಡೆದಿದ್ದರೂ, ಶ್ರೀಮಠದ ಸಂಬಂಧವಿಲ್ಲದೆ ಜೀವಿಸುವ ಸಾಧ್ಯತೆಯಿದ್ದರೂ, ಬಹುತೇಕರು ಮಠದ ನೀತಿ, ನಿಯಮದಂತೆ ನಡೆದುಕೊಂಡು ಬರುತ್ತಿದ್ದಾರೆ. ಮಠವನ್ನು ಹೊರತುಪಡಿಸಿ ಶೃಂಗೇರಿಯನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲವೆನ್ನುವಂತೆ ಇಂದಿಗೂ ಸಹ ಆ ಸಂಬಂಧ ಮುಂದುವರಿದೆ.[11]

4.2 ಶ್ರೀಮಠದ ಸಾಮಾಜಿಕ ಕೊಡುಗೆ

ಶೃಂಗೇರಿ ಧರ್ಮ ಸಂಸ್ಥಾನವು ಒಂದು ಆಡಳಿತ ಕೇಂದ್ರವಾಗಿಯೂ ಕಾರ್ಯ ನಿರ್ವಹಿಸುತ್ತಿದ್ದುದರಿಂದ ಇಲ್ಲಿ ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಹಾಗೂ ಸಾಮಾಜಿಕ ಅಂಶಗಳನ್ನು ಗಮನಿಸಬೇಕಾಗಿದೆ. ಶೃಂಗೇರಿ ಸಂಸ್ಥಾನವು ತನ್ನ ವ್ಯಾಪ್ತಿಯೊಳಗೆ ಸಾಮಾಜಿಕ ಕಟ್ಟುಪಾಡುಗಳನ್ನು ಕಾಯ್ದುಕೊಂಡು ಹೋಗುವಾಗ ಪರೋಕ್ಷವಾಗಿ ತನ್ನ ಆಡಳಿತಕ್ಕೆ ಸಹಾಯಕವಾಗುವಂತೆ ಸಮಕಾಲೀನ ರಾಜಮನೆತನಗಳೊಂದಿಗೆ, ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿರುವುದನ್ನು ಕಾಣಬಹುದು. ಸಂಸ್ಥಾನದ ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣವರ್ಗವು ಪ್ರಮುಖವಾಗಿತ್ತೆಂಬುದು ಕಡತಗಳಿಂದ ಸ್ಪಷ್ಟವಾಗುತ್ತದೆ. ಟಿಪ್ಪುಸುಲ್ತಾನನು ಶೃಂಗೇರಿ ಜಗದ್ಗುರುಗಳಿಗೆ ಕ್ರಿ.ಶ. 1791ರಲ್ಲಿ ಬರೆದ ಪತ್ರದಲ್ಲಿ ತನ್ನ ರಾಜ್ಯದಲ್ಲಿ 45000 ಬ್ರಾಹ್ಮಣರು ಸೇವೆಯಲ್ಲಿ (ಉದ್ಯೋಗ) ಇದ್ದರೆಂಬುದನ್ನು ಉಲ್ಲೇಖಿಸಿದ್ದಾನೆ.[12]

ಆದರೂ ಶೃಂಗೇರಿ ಧರ್ಮಸಂಸ್ಥಾನದಲ್ಲಿ ಸರ್ವಧರ್ಮದವರಿಗೂ ಆಶ್ರಯ ನೀಡಿರುವುದನ್ನು ಅಲ್ಲಗಳೆಯುವಂತಿಲ್ಲ. ಬ್ರಾಹ್ಮಣರು, ಕ್ಷತ್ರಿಯರು, ಶೂದ್ರರು, ವೈಶ್ಯರು, ಮುಸಲ್ಮಾನರು ಇದ್ದರೂ ಇವರ ನಡುವೆ ವೃತ್ತಿ ಆಧಾರಿತ ಕರ್ತವ್ಯಗಳೇ ಪ್ರಧಾನವಾಗಿದ್ದರೂ ಜಾತಿಯ ಕಟ್ಟು ಪಾಡುಗಳನ್ನು ಅನುಸರಿಸಬೇಕಾಗುತ್ತಿತ್ತು.

ಪುರಾತನ ಕಾಲದಿಂದಲೂ ಭಾರತದಲ್ಲಿದ್ದಂತೆ ಶೃಂಗೇರಿಯಲ್ಲಿಯೂ ಜಾತಿ ಪದ್ಧತಿ ಸಾಮಾನ್ಯವಾಗಿತ್ತು. ಆದರೆ ಕಾಲ ಬದಲಾದಂತೆ ಜಾತಿ ಪದ್ಧತಿಯಲ್ಲೂ ಬದಲಾವಣೆಗಳುಂಟಾಗಿದೆ. ಈ ಬಗ್ಗೆ ಅಂಕಿ ಅಂಶಗಳೇನು ಲಭ್ಯವಿಲ್ಲದ ಕಾರಣ ಸಂಸ್ಥಾನಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಜಾತಿ ಸೇರಿದವರ ಸಂಖ್ಯೆ ಎಷ್ಟಿತ್ತೆಂಬುದನ್ನು ಹೇಳಲು ಆಧಾರಗಳು ಲಭ್ಯವಿಲ್ಲ.[13]

ಕ್ರಿ.ಶ.16ನೇ ಶತಮಾನದಿಂದ ಈಚಿಗಿನ ಸಾಮಾಜಿಕ ಪರಿಸ್ಥಿತಿಯನ್ನು ತಿಳಿಯಲು ಕೆಲವು ದಾಖಲೆಗಳು ಹಾಗೂ ಕಡತಗಳು ದೊರೆಯುತ್ತವೆ. ಕೆಳದಿ ನಾಯಕರ ಕಾಲಕ್ಕೆ ಸಂಬಂಧಿಸಿದ ಹಾಗೆ ಶೃಂಗೇರಿ ಮಠದ ಸಾಮಾಜಿಕ ಚಿತ್ರಣ ದೊರೆಯುತ್ತದೆ. ಶೃಂಗೇರಿ ಸಂಸ್ಥಾನದಲ್ಲಿ ಬ್ರಾಹ್ಮಣರ ಪ್ರಾಬಲ್ಯವಿತ್ತಾದರೂ, ಜಗದ್ಗುರುಗಳು ತಮ್ಮ ಸಂಸ್ಥಾನದಲ್ಲಿ ಸರ್ವ ಧರ್ಮದವರಿಗೂ ಆಶ್ರಯ ನೀಡಿದ್ದರು. ಪರಧರ್ಮಸಹಿಷ್ಣತೆ ಹೊಂದಿದ್ದ ಮಠದ ಅಧಿಕಾರ ವ್ಯಾಪ್ತಿಯಲ್ಲಿ ಎಲ್ಲಾ ಜಾತಿ ವರ್ಗದವರು ಸಹಿಷ್ಣತೆಯಿಂದ ಕೂಡಿದ್ದರು, ತಮ್ಮ ತಮ್ಮ ಜಾತಿ ಪದ್ಧತಿಗಳನ್ನು ಅನುಸರಿಸುತ್ತಿದ್ದರು.

ಜಾತಿ ಪದ್ಧತಿ:

ಭಾರತದಲ್ಲಿ ವೈದಿಕ ಕಾಲದಿಂದಲೂ ಜಾತಿ ವ್ಯವಸ್ಥೆ, ನಮ್ಮ ಸಮಾಜದಲ್ಲಿ ನಡೆದುಕೊಂಡು ಬಂದಿದೆ. ಹಾಗೆಯೇ ಶೃಂಗೇರಿ ಧರ್ಮ ಸಂಸ್ಥಾನದಲ್ಲಿಯೂ ಜಾತಿ ಪದ್ಧತಿ ನಡೆದು ಬಂದಿತು.

ಆದರೆ ಕಾಲಕ್ಕನುಗುಣವಾಗಿ ಜಾತಿ ಪದ್ಧತಿಯಲ್ಲಿ ಬದಲಾವಣೆಗಳುಂಟಾಗಿದ್ದವು. ಆದರೂ ಸಮಾಜದಲ್ಲಿ ಜಾತಿ ವ್ಯವಸ್ಥೆ ಪ್ರಬಲವಾಗಿತ್ತು. ಬ್ರಾಹ್ಮಣರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳಿದ್ದವೆಂಬುದು ಕಡತಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಶೃಂಗೇರಿಯು ಕೇವಲ ಧಾರ್ಮಿಕ ಕೇಂದ್ರವಾಗಿರದೆ, ವಿದ್ಯಾರ್ಜನೆಯ ಕೇಂದ್ರವಾಗಿತ್ತು ಮತ್ತು ಅಗ್ರಹಾರಗಳ ಸ್ಥಾಪನೆಯಿಂದಾಗಿ ಬ್ರಾಹ್ಮಣರೆಲ್ಲ ಸಾಂಪ್ರದಾಯಿಕವಾಗಿ ಬಂದ ಧಾರ್ಮಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ಉಳಿದ ಎಲ್ಲಾ ಜಾತಿಯವರಿಂದಲೂ ಈ ವರ್ಗದವರಿಗೆ ಮರ್ಯಾದೆ ಸಲ್ಲುತ್ತಿತ್ತು. ಅದ್ವೈತ ಸಿದ್ಧಾಂತದಲ್ಲಿ ಶ್ರದ್ಧೆಯಿದ್ದವರೆಲ್ಲಾ ಸಹಜವಾಗಿಯೇ ಶೃಂಗೇರಿಯತ್ತ ಧಾವಿಸಿದರು. ಮಠದಲ್ಲಿಯ ಮಹತ್ವದ ಸ್ಥಾನಮಾನಗಳೆಲ್ಲವೂ ಬ್ರಾಹ್ಮಣರಿಗೆ ಮೀಸಲಾಗಿದ್ದವು. ಅವರು ಮಠದ ಪಾರಪತ್ಯಗಾರರಾಗಿ, ಅರ್ಚಕರಾಗಿ ಮತ್ತು ಬೊಕ್ಕಸ್ತರಾಗಿ ಸೇವೆ ಸಲ್ಲಿಸಿದರು.[14] ಅವರಲ್ಲಿ ಕೆಳದಿ ಮುಮ್ಮಡಿ ಸೋಮಶೇಖರ ನಾಯಕನ ಕಾಲದಲ್ಲಿ ಶೃಂಗೇರಿ ಶ್ರೀಮಠದ ಅಧಿಕಾರಿ ಶೃಂಗಶಾಸ್ತ್ರಿ ಎಂಬ ಹೆಸರು ಪ್ರಸ್ತಾಪವಾಗಿದೆ.

ಬ್ರಾಹ್ಮಣರು ವಾಸಿಸಲು ಅನುಕೂಲವಾಗುವಂತೆ ಒಂದೊಂದು ಕೇರಿಯನ್ನು ದಾನವಾಗಿ ಕೊಡುತ್ತಿದ್ದರು. ಇದನ್ನು ಅಗ್ರಹಾರವೆಂದು ಕರೆಯಲಾಗುತ್ತದೆ. ಅಗ್ರಹಾರಗಳಿಗೆ ಎಲ್ಲಾ ಬಗೆಯ ಸೌಕರ್ಯ ಹಾಗೂ ಸೌಲಭ್ಯವನ್ನು ಒದಗಿಸಲಾಗುತ್ತಿತ್ತು. ಅವರು ಧರ್ಮಕಾರ್ಯ ಮಾಡುತ್ತಿದ್ದುದರಿಂದ ಸಮಾಜದಲ್ಲಿ ವಿಶೇಷ ಮನ್ನಣೆಯಿತ್ತು. ರಾಜರೂ ಈ ವ್ಯವಸ್ಥೆಯನ್ನು ಪಾಲಿಸಿಕೊಂಡು ಹೋಗುತ್ತಿದ್ದರು. ಕೆಳದಿ ಶಿವಪ್ಪನಾಯಕನು ವಿಜಯ ಸಂವತ್ಸರ (ಕ್ರಿ.ಶ.1653–54)ದಲ್ಲಿ ಹಿಂದೆ ವಿಜಯನಗರದ ದೊರೆ ಹರಿಹರ ಮಹಾರಾಯರು ಸ್ಥಾಪಿಸಿದ್ದ ವಿದ್ಯಾರಣ್ಯಪುರ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿ ಅಲ್ಲಿಯ ಪ್ರಜಾಧರ್ಮದವರು ಅಗ್ರಹಾರಗಳಲ್ಲಿಯ ಬ್ರಾಹ್ಮಣರಿಗೆ ಕೊಡುವ ಹಣಕ್ಕೆ ದಿಂಡೇತನ ಮಾಡಲು ಪ್ರಾರಂಭಿಸಿದ್ದರಿಂದ ಅವರಿಗೆ ಎಚ್ಚರಿಕೆ ನೀಡಿ ಪುನಃ ಬ್ರಾಹ್ಮಣರಿಗೆ ವೃತ್ತಿಯನ್ನು ದಯಪಾಲಿಸಿದನು.[15]

ಕ್ರಿ.ಶ.1677ರಲ್ಲಿ ಕೆಳದಿ ಚೆನ್ನಮ್ಮಾಜಿಯವರು ತುಂಗಭದ್ರಾ ನದಿಯ ತೀರದ ಭಂಡಿಗಡಿಯಲ್ಲಿ ವಿಶ್ವನಾಥಪುರದ ಮಹಾಜನಗಳು ಮನೆಕಟ್ಟಿಕೊಂಡಿದ್ದು ಅವರಿಗೆ ಅಗ್ರಹಾರವನ್ನು ಕಟ್ಟಿಕೊಳ್ಳಲು ತಡೆಯದೆ ಅವಕಾಶ ನೀಡಬೇಕೆಂದು ತಿಳಿಸಿರುವುದು ಮತ್ತು ಅವರು ಜಿನಿಸುಗಳನ್ನು ತರುವಾಗ ಸುಂಕದ ಠಾಣೆಗಳಲ್ಲಿ ಅವರನ್ನು ತಡೆಯಬಾರದು ಎಂದು ತಿಳಿಸಲಾಗಿದೆ.

ಕೆಲವು ವಿಶೇಷ ಸಂದರ್ಭಗಳಲ್ಲಿ ಬ್ರಾಹ್ಮಣರಿಗೆ ಅಕ್ಕಿ, ಹಾಲು, ಬೆಲ್ಲ ಮುಂತಾದ ಆಹಾರ ಸಾಮಗ್ರಿಗಳನ್ನು ಪೂರೈಸಲಾಗುತ್ತಿತ್ತು. ಉದಾಹರಣೆಗೆ ಬೆಟ್ಟದ ಮಲ್ಲಿಕಾರ್ಜುನ ದೇವರ ಸನ್ನಿಧಿಯಲ್ಲಿ ಜರುಗುವ ಪರ್ಜನ್ಯ ಕಾಲದಲ್ಲಿ (ಕ್ರಿ.ಶ.1758) ಬ್ರಾಹ್ಮಣರ ಸ್ವಯಂ ಪಾಕಕ್ಕೆಂದು ಅಕ್ಕಿ, ಹೆಸರು, ಬೆಲ್ಲ, ಹಾಲು ಮುಂತಾದ ಆಹಾರ ಸಾಮಗ್ರಿಗಳ ಪೂರೈಕೆಯಾಗತಕ್ಕದೆಂದು ಮುಮ್ಮಡಿ ಸೋಮಶೇಖರ ನಾಯಕರ ಕಾಲದಲ್ಲಿ ಬಿದನೂರಿನಿಂದ ಬಂದ ಕಾಗದದ ಪ್ರತಿಯಿಂದ ತಿಳಿದುಬರುತ್ತದೆ. ಬ್ರಾಹ್ಮಣರಿಗೆ

ಇಂಥ ವಿಶೇಷ ಸಂದರ್ಭಗಳಲ್ಲಿ ದಕ್ಷಿಣೆ ಕೊಡಲಾಗುತ್ತಿತ್ತೆಂದು ಸ್ಪಷ್ಟವಾಗುತ್ತದೆ.[17] ಈ ರೀತಿಯಾಗಿ ಧರ್ಮಕಾರ್ಯಗಳಲ್ಲಿ ನಿರತರಾದ ಬ್ರಾಹ್ಮಣರು ಸಿರಿವಂತರಲ್ಲದಿದ್ದರೂ ಅವರಿಗೆ ಜೀವನ ನಿರ್ವಹಣೆಗೆ ಸಾಕಾಗುವಷ್ಟು ವೃತ್ತಿಗಳು ಮತ್ತು ವಾಸಿಸಲು ಮನೆಗಳಿದ್ದವು. ಸಮಾಜದಲ್ಲಿ ವಿಶೇಷ ಸ್ಥಾನಮಾನಗಳು ದೊರೆಯುತ್ತಿದ್ದವು.

ಕಡತಗಳಲ್ಲಿ ಕ್ಷತ್ರಿಯರ ಬಗ್ಗೆಯು ಹೇಳಲಾಗಿದೆ. ಕ್ಷತ್ರಿಯ ಕುಮಾರವರ್ಗದವರು ಶಾ.ಶ.1555 (ಕ್ರಿ.ಶ.1633) ರಲ್ಲಿ ಶೃಂಗೇರಿ ಮಠಕ್ಕೆ ಬಿನ್ನವತ್ತಳೆ ಸಲ್ಲಿಸಿ, ತಮ್ಮ ವರ್ಗದ ಗುರುಗಳಾರೂ ಇಲ್ಲದ್ದರಿಂದ ಅವರು ಶೃಂಗೇರಿಗೆ ಬಂದು ತಮ್ಮನ್ನು ಶಿಷ್ಯರನ್ನಾಗಿ ಮಾಡಿಕೊಳ್ಳುವಂತೆ ಗುರುಗಳಲ್ಲಿ ಪ್ರಾರ್ಥಿಸಿಕೊಂಡಾಗ, ಅವರ ಪ್ರಾರ್ಥನೆಯನ್ನು ಮನ್ನಿಸಿ, ಮಠಕ್ಕೆ ಸದಾ ಸೇವೆ ಸಲ್ಲಿಸುವಂತೆ ಅಪ್ಪಣೆಯಿತ್ತರು.[18]

ಜನಿವಾರ ತೊಡಲು ಕ್ಷತ್ರಿಯ ವರ್ಗದ ಸೇರೆಗಾರರು ಅರ್ಹರೋ, ಅನರ್ಹರೋ ಎಂಬ ವಿವಾದ ಕೊಂಕಣಿಗರಿಗೆ ಮತ್ತು ಸೇರೆಗಾರರಿಗೆ ಬಂದದ್ದಕ್ಕಾಗಿ ಕ್ರಿ.ಶ.1633 ರಲ್ಲಿ ಬಾರಕೂರು, ಮಂಗಳೂರು, ಬನವಾಸಿ, ಗೇರುಸೊಪ್ಪ, ಚಂದಾವರ, ಬಿಳಗಿ, ಮಿಡ್ಜೆ, ಸ್ವಾದಿ ಮತ್ತು ಕೆಳದಿಯ ಕ್ಷತ್ರಿಯ ವರ್ಗದವರು ಶೃಂಗೇರಿಯ ನರಸಿಂಹ ಭಾರತೀ ಸ್ವಾಮಿಗಳ ಶಿಷ್ಯರಾದ ಶಂಕರ ಭಾರತೀ ಸ್ವಾಮಿಗಳಿಗೆ ತಮ್ಮ ಬಿನ್ನವತ್ತಳೆಯನ್ನು ಸಮರ್ಪಿಸಿದರು.[19] ವಿಷಯವು ಸಾಮಾಜಿಕ ಮತ್ತು ಧಾರ್ಮಿಕ ಸಮಸ್ಯೆಯಾಗಿದ್ದರಿಂದ ಇದನ್ನು ಬಗೆಹರಿಸಲು ಶೃಂಗೇರಿ ಗುರುಗಳನ್ನು ಕಾಣುವಂತೆ ಭದ್ರಪ್ಪನಾಯಕನು ಸೇರೆಗಾರರಿಗೆ ತಿಳಿಸಿದನು. ನಾಯಕನ ಇಚ್ಛೆಯಂತೆ ಸೇರೆಗಾರರು ಶೃಂಗೇರಿ ಗುರುಗಳನ್ನು ಕಂಡು ತಮಗೆ ಜನಿವಾರ ತೊಡಲು ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಅನಂತರ ಶೃಂಗೇರಿಯ ದೇವತಾದಿಗಳಿಗೆ ಪೂಜೆ ಸಲ್ಲಿಸಿ, ಮಠಕ್ಕೆ ಕಾಣಿಕೆ ಸಮರ್ಪಿಸಿ ಜನಿವಾರ ತೊಡಲು ಬಹುಶಃ ಅಪ್ಪಣೆ ಪಡೆದರೆಂದು ತೋರುತ್ತದೆ. ಉಲ್ಲೇಖಿತ ಬಿನ್ನವತ್ತಳೆಯು ಶೃಂಗೇರಿಯ ಪರಂಪರೆಯಿಂದಾಗಲಿ ಅಥವಾ ಕೆಳದಿಯ ಪರಂಪರೆಯಿಂದಾಗಲಿ ಸರಿಹೊಂದದಿದ್ದರೂ ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿಯನ್ನರಿಯಲು ಇದೊಂದು ಮಹತ್ವದ ದಾಖಲೆಯಾಗುತ್ತದೆ.[20]

ಕಡತಗಳಲ್ಲಿ ವೈಶ್ಯವರ್ಗದ ಶೆಟ್ಟಿಗಳ ಉಲ್ಲೇಖವಿರುತ್ತದೆ. ಕ್ರಿ.ಶ.1600 ರ ಕೆಳದಿ ವೆಂಕಟಪ್ಪನಾಯಕರ ಕಾಲಕ್ಕೆ ಸೇರಿದ ಕೊಂಕಣಿಗರಿಗೆ ಬರೆದ ಭಾಷಾ ಪತ್ರಿಕೆಯಲ್ಲಿ ಗೋವಾ ಸೀಮೆಯಿಂದ ಬಂದ ಕೊಂಕಣಿಗರ ಪರವಾಗಿ ರಾಮಕೃಷ್ಣಶ್ರೇಣಿ ಎಂಬುವವರು ಶೃಂಗೇರಿ ಜಗದ್ಗುರುಗಳಿಗೆ ಬರೆದ ಪತ್ರದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ಬಣಜಿಗರು, ಕೋಮಟಿಗರಿಗೆ, ಸರಿಸಮಾನರಾಗಿ ಕೊಂಕಣಿವರ್ಗದ ವೈಶ್ಯರಿಗೆ ಕುಲವೈಶ್ಯಾಚಾರ, ಪುರಾಣೋಕ್ತ ಕರ್ಮಕ್ರಿಯೆ, ಕೀಳವಾದಿ ನಾಮಸ್ಮರಣೆ, ಹರಿಕಥಾ ಪ್ರಸಂಗ, ಗ್ರಹಣ, ವೈಶ್ಯೋಪನಯನ, ವಿವಾಹ, ದೇವತಾ ಸೇವೆ ಆಶ್ರಮ ವ್ಯವಸ್ಥೆ, ಆಚಾರಪಟ್ಟ, ಪುರೋಹಿತಿಕೆ, ವೇದಾಧ್ಯಯನ, ಮಠ, ದೇವಸ್ಥಾನ ಪೂಜೆ ಮತ್ತು ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿ ಕೊಂಡಿರುವುದನ್ನು ನಾವು ಕಾಣಬಹುದು.[21]

ವೈಶ್ಯ ಕೊಂಕಣಿಗರಿಗೆ ಆಶ್ರಮ ವ್ಯವಸ್ಥೆ ಅನುಸರಿಸಲು ಅವಕಾಶವಿದೆಯೇ ಎಂದು ಸ್ಥಳೀಯ ಮಠದ ಗುರುಗಳು ಹಾಗೂ ರಾಜರಲ್ಲಿ ವಿಚಾರಿಸಿದಾಗ ಗೊಂದಲ ಉಂಟಾಗಿ ಶೃಂಗೇರಿ ಜಗದ್ಗುರುಗಳವರ ನಿರ್ಣಯ ಕೈಗೊಳ್ಳಬೇಕೆಂಬ ಕೋರಿಕೆಯಂತೆ, ಶ್ರೀಗಳು ಪ್ರಮುಖ ಗ್ರಂಥಗಳನ್ನು ಅಧ್ಯಯನಮಾಡಿ ಪಂಚ ತ್ರಿವಿಧ, ಪಂಚಗೌಡ ಮತ್ತು ಬ್ರಾಹ್ಮಣ ಸಮುದಾಯದವರೊಂದಿಗೆ ಚರ್ಚಿಸಿ, ವೈಶ್ಯಕೊಂಕಣಿಗರಿಗೆ ಆಶ್ರಮ ವ್ಯವಸ್ಥೆ ಪಾಲಿಸಲು ಅವಕಾಶವಿಲ್ಲವೆಂದು ತೀರ್ಪು ಹೇಳಿದರು. ಕೆಳದಿ ಅರಸರ ಕಾಲಕ್ಕೆ ಸೇರಿದ ಎಷ್ಟೋ ಕಡತಗಳಲ್ಲಿ ಬಣಜಿಗರು, ಕೋಮಟಿಗರು, ಹರಿಕಂತರು, ಮೊಗೆರು, ಅಂಬಿಗರು, ಇತ್ಯಾದಿ ಉಳಿದ ಕೋಮಿನವರ ಬಗ್ಗೆಯು ಉಲ್ಲೇಖವಿದೆ. ದೇವಾಲಯದ ಕೆಲಸಕ್ಕೆ ದುರ್ಗಸ್ಥಳಗಳಿಂದ ಕಲ್ಲುಕುಟಿಗರನ್ನು ಕರೆಸಿಕೊಂಡು ಕೆಲಸ ಮಾಡಿಸಿರುವುದು, ಕಲ್ಲು ಕುಟಿಗರು ಸಹಾ ಇದ್ದರೆಂದು ಸ್ಪಷ್ಟವಾಗುತ್ತದೆ.[22]

ಶೂದ್ರ ಜಾತಿಯ ಬೋವಿಜನರ (ಪಲ್ಲಕ್ಕಿ ಹೊರುವವರು) ಉಲ್ಲೇಖವಿರುವ ದಾಖಲೆಯಿದೆ. ಸಂಸ್ಥಾನದಲ್ಲಿ ದಾಸ್ಯವೃತ್ತಿಯ ಕೆಲಸಕ್ಕೆಂದು ಕೆಲವು ಕೆಳವರ್ಗದವರನ್ನು ಸಂಬಳಕೊಟ್ಟು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಉದಾ: ಚನ್ನಬಸವನ ಮಗ ನಂಜ ಮತ್ತು ರುದ್ರನ ಮಗ ವೀರ ಇವರಿಗೆ ಮಠದಲ್ಲಿ ದಾಸ್ಯ ವೃತ್ತಿಗೆ ಸೇವೆ ಸಲ್ಲಿಸುತ್ತಿದ್ದಕ್ಕಾಗಿ ಸಂಬಳ ಕೊಟ್ಟ ವಿಷಯವು ಕಡಿತದ ದಾಖಲೆಯಲ್ಲಿದೆ.[23] ಮಠದಲ್ಲಿ ಸ್ವಚ್ಛತೆ ಕಾಪಾಡಲೆಂದು ಪರಿಚಾರಕರನ್ನು ನೇಮಕ ಮಾಡಲಾಗುತ್ತಿತ್ತು. ಉತ್ಸವದ ದಿನಗಳಲ್ಲಿ ಸ್ವಯಂಪಾಕಕ್ಕೆಂದು ಅವರಿಗೆ ಅಕ್ಕಿ, ಹೆಸರು, ಬೆಲ್ಲ ಮುಂತಾದವುಗಳನ್ನು ಪೂರೈಸಲಾಗುತ್ತಿತ್ತು.[24]

ಇಂದಿಗೂ ಬೋವಿ ಜನರು ಶೃಂಗೇರಿಯ ಸುತ್ತಮುತ್ತಲಿದ್ದಾರೆ. ವಂಶಪಾರಂಪರ್ಯದಿಂದ ಶ್ರೀಮಠದೊಂದಿಗೆ ನಡೆದುಕೊಂಡು ಬಂದ ಹಾಗೆಯೇ ಅವರ ಮುಂದಿನ ಪೀಳಿಗೆಯವರು ಮುಂದುವರಿಸುತ್ತಿದ್ದಾರೆ. ಆಧುನಿಕತೆಯ ಬದಲಾವಣೆಯಿಂದಾಗಿ ಜನರಲ್ಲಿ ಬದಲಾವಣೆಯಾಗಬೇಕೆಂಬ ಮಾನಸಿಕ ತುಮುಲದಿಂದ ಅನೇಕ ಯುವ ಪೀಳಿಗೆಯವರು ಈ ಉದ್ಯೋಗವನ್ನು ಮಾಡುತ್ತಿಲ್ಲ. ಮುಖಂಡನ ನೇತೃತ್ವದಲ್ಲಿ ಇತರೆ ಜಾತಿ ಜನಾಂಗದವರು ಸಹ ಪಲ್ಲಕ್ಕಿ ಹೊರಲು ಹಾಗೂ ದಾಸ್ಯವೃತ್ತಿ ಮಾಡಲು ತೊಡಗಿದ್ದಾರೆ. ಶ್ರೀಮಠದ ಇಂತಹ ಸೇವೆ ಮಾಡುವುದು ಸೇವೆಯೆಂದು ಪರಿಗಣಿಸಿ ಯಾತ್ರಾರ್ಥಿಗಳು ಹಾಗೂ ಭಕ್ತರು ಸಹ ಪಲ್ಲಕ್ಕಿಯನ್ನು ಹೊರುತ್ತಾರೆ. ಹಿಂದೆ ಪರಿಚಾರಕರಿಗೆ ದವಸ ದಾನ್ಯಗಳನ್ನು ಕೊಟ್ಟು ಸಂಬಳವನ್ನು ಕೊಡುತ್ತಿದ್ದರು. ಈಗ ಸಂಬಳವನ್ನು ಮಾತ್ರ ಕೊಡಲಾಗುತ್ತಿದೆ. ವಿಶೇಷ ಕಾರ್ಯಕ್ರಮಗಳಂದು ವಸ್ತ್ರ ಮೊದಲಾದವುಗಳನ್ನು ಕೊಡಲಾಗುತ್ತದೆ. ಬ್ರಾಹ್ಮಣ ಮಹಿಳೆಯರಿಗೆ ವಿಶೇಷ ಸಂದರ್ಭದಲ್ಲಿ ದಾನ ಧರ್ಮಾದಿಗಳನ್ನು ಮಾಡಲಾಗುತ್ತದೆ.

ಸಂಸ್ಥಾನದಲ್ಲಿ ಅಕ್ಕಸಾಲಿಗರು ಮತ್ತು ಗಾಣಿಗರಿದ್ದರು. ಅಕ್ಕಸಾಲೆ ಯಲ್ಲಪ್ಪನ ಮಗ ತಿಮ್ಮಪ್ಪನು ಗಾಣಿಗರ ಕೆಂಚಯ್ಯನಿಂದ ಮನೆಯನ್ನು ಬಾಡಿಗೆಗೆ ಪಡೆದುಕೊಂಡ ಸಂಗತಿಯು ಕಡತದಲ್ಲಿಯ ಭಿನ್ನವತ್ತಳೆಯಿಂದ ತಿಳಿದುಬರುತ್ತದೆ. ಹಾಗೆಯೇ ಕ್ಷೌರಿಕರು, ಅಗಸರು, ಕುರುಬರು, ವಾಲೆಕಾರರು,

ಚಾಂಡಾಲರು ಮುಂತಾದ ಕೋಮಿನವರು ಶ್ರೀಮಠದೊಂದಿಗೆ ಸಂಬಂಧವನ್ನು ಹೊಂದಿ ಸೇವೆಯಲ್ಲಿ ನಿರತರಾಗಿದ್ದರು. ಇವರ ಬಗ್ಗೆ ಉಲ್ಲೇಖವಿದ್ದರೂ ಹೆಚ್ಚಿನ ಮಾಹಿತಿಯೇನೂ ದೊರೆಯುವುದಿಲ್ಲ.[25] ಈ ಜನಾಂಗದವರು ಶೃಂಗೇರಿಯ ಸುತ್ತಮುತ್ತಲು ವಾಸವಿದ್ದಾರೆ. ಈಗಲೂ ಮಠದ ಸೇವೆಯಲ್ಲಿ ಕೆಲವರು ನಿರತರಾಗಿದ್ದಾರೆ, ಕೆಲವರು ಉದ್ಯೋಗಾರ್ಥವಾಗಿ ಬೇರೆ ಭಾಗಗಳಲ್ಲಿ ದುಡಿಯುತ್ತಿದ್ದಾರೆ. ಆಧುನಿಕ ಶಿಕ್ಷಣ ಕ್ರಮ ಹಾಗೂ ಹೊಸ ಚಿಂತನೆಯಿಂದ ಪರಿವರ್ತನೆಯ ದಾರಿಯಲ್ಲಿದ್ದಾರೆ. ಹಿರಿಯ ತಲೆಮಾರಿನವರ ಸಂಬಂಧ ಅನ್ಯೋನ್ಯವಾಗಿಯೆ ಮುಂದುವರಿಯುತ್ತಿದೆ.

ಮಹಾಸಂಸ್ಥಾನವು ಆಡಳಿತ ಹಾಗೂ ಧಾರ್ಮಿಕ ಕೇಂದ್ರವಾಗಿ ಸ್ಥಳೀಯರಿಗೆ ಹಾಗೂ ಇತರೆ ಭಾಗದವರಿಗೆ ಸಹಕಾರ ಮಾರ್ಗದರ್ಶನ ನೀಡಿದೆ. ಸ್ವಾತಂತ್ರ್ಯೋತ್ತರದ ಸಂದರ್ಭದಲ್ಲಿ ಸರ್ಕಾರ ಮಾಡಬೇಕಾದ ಕಾರ್ಯಗಳನ್ನು ಶ್ರೀಮಠವೇ ನೆರವೇರಿಸಿ ಸ್ಥಳೀಯರ ಜೀವನ ಸುಧಾರಣೆಗೆ ಕಾರಣವಾಗಿದೆ. ಅನಾಥರಿಗೆ ಸಹಾಯ, ಅಸಹಾಯಕರಿಗೆ ನೆರವು, ಬಡವರ ಮನೆ ನಿರ್ಮಾಣಕ್ಕೆ ಸಹಕಾರ, ಸ್ವಚ್ಛಗ್ರಾಮಕ್ಕಾಗಿ ಶೌಚಾಲಯ ನಿರ್ಮಾಣದ ಪರಿಕರಗಳನ್ನು ಒದಗಿಸಿರುವುದು, ಸರಕಾರಿ ಯೋಜನೆಯೊಂದಿಗೆ ಸಹಕಾರ ಹಸ್ತನೀಡಿ ಗ್ರಾಮೀಣ ಕುಡಿಯುವ ನೀರಿನ ಪೂರೈಕೆ, ಹೊಲಿಗೆಯಂತ್ರ, ಇಡ್ಲಿಸೆಟ್, ಇಸ್ತ್ರಿಪೆಟ್ಟಿಗೆ, ತ್ರಿಚಕ್ರ ಸೈಕಲ್ ಮೊದಲಾದವುಗಳನ್ನು ಅರ್ಹರಿಗೆ ವಿತರಿಸಿರುವುದು, ಶುಭಸಮಾರಂಭಗಳಿಗೆ ಆರ್ಥಿಕ ನೆರವು, ವಸ್ತ್ರ ಇತ್ಯಾದಿ ಉಡುಗೊರೆಗಳ ವಿತರಣೆ, ಆರು ಸಾವಿರಕ್ಕೂ ಹೆಚ್ಚಿನ ಶಾಲಾಮಕ್ಕಳಿಗೆ ಮಧ್ಯಾಹ್ನದ ಉಚಿತ ಊಟದ ವ್ಯವಸ್ಥೆ, ಶ್ರೀಮಠದಲ್ಲಿ ಸಾರ್ವಜನಿಕರಿಗೆ ಭೋಜನ ವ್ಯವಸ್ಥೆ, ಸನಿಹದಲ್ಲಿ ನಡೆದ ಸ್ಥಳೀಯ, ರಾಜ್ಯ, ರಾಷ್ಟ್ರಮಟ್ಟದ ಕಾರ್ಯಾಗಾರಗಳಿಗೆ ಸಹಕಾರ, ಸ್ಥಳೀಯ ಸಂಘ ಸಂಸ್ಥೆಗಳು ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳಿಗೆ ನೆರವು, ಅನಾರೋಗ್ಯ ಪೀಡಿತರಿಗೆ ಸಹಕಾರ ಇತ್ಯಾದಿ. ಅನೇಕ ಆರೋಗ್ಯ, ಶಿಕ್ಷಣ, ಸಂಸ್ಥೆಗಳ ಸ್ಥಾಪನೆ, ಜನಪರ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ. ಪ್ರತಿಯೊಬ್ಬ ಸ್ಥಳೀಯರಿಗೂ ಶ್ರೀಮಠದ ನೆರವು ಸಿಗುವುದರಿಂದ ಆತ್ಮಸ್ಥೈರ್ಯ ಧೈರ್ಯದಿಂದ ಕಾರ್ಯಕ್ರಮಗಳನ್ನು ನಡೆಸಲು ಮುಂದಾಗುತ್ತಿದ್ದಾರೆ. ಇದು ಸಾಮಾಜಿಕ ಕ್ಷೇತ್ರದಲ್ಲಾದ ಪ್ರಮುಖ ಬದಲಾವಣೆಯಾಗಿದೆ.

ಮಹಿಳೆಯರ ಸ್ಥಾನಮಾನ

ಶೃಂಗೇರಿ ಸಂಸ್ಥಾನದಲ್ಲಿ ಮಹಿಳೆಯರ ಸ್ಥಾನಮಾನಗಳು ಹೇಗಿದ್ದವೆಂದು ಹೇಳಲು ಕಡತಗಳಲ್ಲಿ ಸಾಕಷ್ಟು ಆಧಾರಗಳಿಲ್ಲ. ಮೇಲ್ವರ್ಗದ ಮಹಿಳೆಯರ ಬಗ್ಗೆ ಹೆಚ್ಚೇನು ಕಡತಗಳಲ್ಲಿ ಹೇಳುವುದಿಲ್ಲ. ಅಂದರೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮಹಿಳೆಯರು ಈಗಿನಂತೆ ವಿಶೇಷ ಪಾತ್ರ ವಹಿಸುತ್ತಿದ್ದಂತೆ ತೋರುವುದಿಲ್ಲ. ಬಹುಶ: ಅವರು ತಮ್ಮ ಗೃಹ ಕೆಲಸಗಳಿಗೇ ಸೀಮಿತವಾಗಿರುತ್ತಿದ್ದರು. ಆದರೂ ಕೆಲವು ಮೇಲ್ವರ್ಗದ ಮಹಿಳೆಯರ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ.

ಶೃಂಗೇರಿ ಹರಿಹರೇಶ್ವರ ದೇವಾಲಯದ ಬಲಭಾಗದಲ್ಲಿರುವ ಶಾಸನವು ಕ್ರಿ.ಶ. 1608ರ ಕಾಲಕ್ಕೆ ಸೇರಿದ್ದಾಗಿದ್ದು ಈ ದಾಖಲೆಗಳಲ್ಲಿ ಆತ್ರೇಯ ಗೋತ್ರದ ಯಜುಶ್ಯಾಖೆಯ ವಿಷ್ಣುಭಟ್ಟರ ಪುತ್ರಿ ನರಸಮ್ಮಳು ಶೃಂಗೇರಿ ಗುರುಗಳಾದ ಶ್ರೀ ನರಸಿಂಹ ಭಾರತೀ ಸ್ವಾಮಿಗಳ ಆಜ್ಞೆಯಂತೆ ಸ್ವಲ್ಪ ಭೂಮಿಯನ್ನು ದಾನ ಕೊಟ್ಟಿರುವುದು ಉಲ್ಲೇಖಿತವಾಗಿದೆ. ಮೇಲ್ವರ್ಗದ ಮಹಿಳೆಯರು ಕೂಡ ಭೂದಾನ ನೀಡಿರುವುದು ವಿಶೇಷವಾದ ಸಂಗತಿಯಾಗಿದೆ.[26]

ಮತ್ತೊಂದು ದಾಖಲೆಯಲ್ಲಿ ಶೃಂಗೇರಿ ಜಗದ್ಗುರುಗಳಾದ ಸಚ್ಚಿದಾನಂದ ಭಾರತಿಗಳು ವಿದ್ಯಾರಣ್ಯಪುರ ಅಗ್ರಹಾರದಲ್ಲಿನ ಭೂಮಿಯನ್ನು ಕಪನೀಪತಿ ಭಟ್ಟನ ಹೆಂಡತಿ ತಿಮ್ಮವ್ವಳ ವಂಶದವರಿಗೆ ದಾನವಾಗಿ ನೀಡಿದ್ದು ಅವಳ ಗಂಡ, ಪುತ್ರ ಸಂತಾನವಿಲ್ಲದೆ ಮರಣ ಹೊಂದಿದ ಮೇಲೆ ತನ್ನ ಹನ್ನೆರಡು ವರಹ ಉತ್ಪತ್ತಿಯುಳ್ಳ ಭೂಮಿಯನ್ನು ವಾಲೆ ಸಿಂಗಣ್ಣನು ಕ್ರಯಕ್ಕೆ ತೆಗೆದುಕೊಂಡರೂ, ಆಕೆಯ ಜೀವನ ನಿರ್ವಹಣೆಯನ್ನು ಕೊನೆಯವರೆಗೂ ನೋಡಿಕೊಳ್ಳಬೇಕೆಂದು ಕೆಳದಿ ದೊರೆ ಇಮ್ಮಡಿ ಸೋಮಶೇಖರ ನಾಯಕರು ಆಜ್ಞೆ ಹೊರಡಿಸಿದ ಸಂಗತಿಯು ಈ ಕಡತದ ದಾಖಲೆಯಿಂದ ತಿಳಿದು ಬರುತ್ತದೆ. ವಿಧವೆಯರಿಗೆ ಸಾಮಾಜಿಕ, ಆರ್ಥಿಕ ಭದ್ರತೆಯನ್ನು ಕೆಳದಿ ಅರಸರು ಒದಗಿಸಿಕೊಟ್ಟು ಅವರ ಜೀವನ ಸಾಗಲು ಅವಕಾಶ ಮಾಡಿಕೊಟ್ಟಿರುವುದನ್ನು ಕಾಣಬಹುದು.[27]

ಬಹು ಪಾಲು ಕಡತಗಳಲ್ಲಿ ಕೆಳವರ್ಗದ ಮಹಿಳೆಯರ ಬಗ್ಗೆ ಸ್ವಲ್ಪ ಮಾಹಿತಿ ದೊರೆಯುತ್ತದೆ. ಇಂಥ ಮಹಿಳೆಯರು ಮಠದಲ್ಲಿ ದಾಸ್ಯ ವೃತ್ತಿಯಲ್ಲಿ ಕೆಲಸ ಮಾಡುತ್ತಿದ್ದರು. ಶೂದ್ರ ಕಂದಾಚಾರಿಕೆ ಎಂಬ ಶೀರ್ಷಿಕೆಯ ಕೆಳಗೆ ವಾಲಗದವರಿಗೆ, ತಾಳದ ಚಾಕರಿಗೆ, ಚಾಮರದ ಜನರಿಗೆ, ವಿನಿಯೋಗದವರಿಗೆ ಮತ್ತು ದೇವರ ಬಾಗಿಲು ಚಾಕರಿ ಮಾಡುವವರಿಗೆ, ಮಠದಲ್ಲಿ ಚಾಕರಿ ಮಾಡುವ ಹೆಣ್ಣು ಮಕ್ಕಳಿಗೆ ಸಂಬಳ ಸಂದಾಯವಾಗುತ್ತಿತ್ತು.[28]

ಎಲ್ಲಾ ಜಾತಿ ವರ್ಗಗಳಲ್ಲಿಯ ನಿರ್ಗತಿಕ ಬಡ ಹೆಂಗಸರು ಶ್ರೀಮಠದ ಚಾವಡಿಗೆ ಬಂದು ತಮಗೊದಗಿಬಂದ ಆಪತ್ತನ್ನು ಹೇಳಿಕೊಂಡಾಗ ಅಂಥ ಹೆಣ್ಣುಗಳ ವಿಚಾರಣೆ ಚಾವಡಿಯಲ್ಲಾಗುತ್ತಿತ್ತು. ಅನಾಥ ಹೆಣ್ಣುಗಳನ್ನು ಮಠದಲ್ಲಿ ದಾಸ್ಯವೃತ್ತಿಯ ಕೆಲಸಕ್ಕೆಂದು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಸಮಾಜದಿಂದ ತಿರಸ್ಕರಿಸಲ್ಪಟ್ಟ ಹೆಣ್ಣುಗಳನ್ನು ಮಠದ ಚಾವಡಿಯಿಂದ ಖರೀದಿಸಿ ತಮ್ಮ ಮನೆಯ ಹೊರ ಕೆಲಸಕ್ಕಾಗಿ ಇಟ್ಟುಕೊಳ್ಳುತ್ತಿದ್ದರು.[29] ಕಡತಗಳಲ್ಲಿ ಬರುವ ಹೆಣ್ಣಿನ ಕ್ರಯಚೀಟಿನ ಕೆಲವು ದಾಖಲೆಗಳಲ್ಲಿ ಶೃಂಗೇರಿ ಮಠದ ಪಾರುಪತ್ಯಕಾರ ನರಸೀಭಟ್ಟರು ಗೋಧಿ ಎಂಬ ವಿಧವೆಯನ್ನು ಅವಳ ಸಹೋದರ ಚಿಂತಾಮಣಿ ಭಟ್ಟಗೆ ಹನ್ನೆರಡು ವರಹಗಳಿಗೆ ಮಾರಾಟ ಮಾಡಿದರೆಂದು ಇದೆ. ಬಹುಶ: ಈ ಚಿಂತಾಮಣಿಭಟ್ಟನು ತನ್ನ ಸಹೋದರಿ ಅನಾಥೆಯಾಗಿ ಮನೆಯಿಂದ ಮನೆಗೆ ತಿರುಗದೆ ತನ್ನ ಮನೆಯಲ್ಲಿಯೇ ಮರ್ಯಾದೆಯಿಂದಿರಲೆಂದು ಚಾವಡಿಯಿಂದ ತಾನೇ ಖರೀದಿಸಿದನೆಂದು ತೋರುತ್ತದೆ.[30]

ಶ್ರೀಮಠದ ಚಾವಡಿಯಲ್ಲಿ ತಪ್ಪಿತಸ್ಥ ಸ್ತ್ರೀಯರ ವಿಚಾರಣೆಯಾಗಿ ಅಂಥ ಹೆಣ್ಣುಗಳ ಹೇಳಿಕೆಗಳು ಸಾಬೀತಾದಲ್ಲಿ ಅವರನ್ನು ಶಿಕ್ಷಿಸಲಾಗುತ್ತಿತ್ತು ಎಂಬುದಕ್ಕೆ ಕಡತದಲ್ಲಿ ಕೆಲ ದಾಖಲೆಗಳಿವೆ. ಸಕ್ಕರ ಪಟ್ಟಣದ ಚನ್ನಿ ಎಂಬುವವಳಿಗೆ ಹಿರೇಮಗಳೂರಿನ ಹೊನ್ನನು ಆರು ವರ್ಷಗಳಿಂದ ತಪ್ಪಿ ನಡೆಯುತ್ತಿದ್ದು ಇಬ್ಬರು ತಾವು ಮಾಡಿದ ತಪ್ಪನ್ನು ಒಪ್ಪಿಕೊಂಡರು. ಚಾವಡಿಯ ತೀರ್ಪಿನಂತೆ ತಾನು ನಡೆದುಕೊಳ್ಳುವುದಾಗಿ ಹೇಳಿ ಎರಡು ಗದ್ಯಾಣ ಮತ್ತು ನಾಲ್ಕು ಹಣಗಳನ್ನು ತಪ್ಪಿನ ದಂಡವೆಂದು ಸಲ್ಲಿಸಿದನು. ಹೀಗೆ ಚಾವಡಿಯಲ್ಲಿ ತಪ್ಪಿತಸ್ಥರಿಂದ ದೊರೆಯುತ್ತಿದ್ದ ದಂಡವು ಮಠದ ಅಲ್ಪಆದಾಯವಾಗಿತ್ತೆಂದು ಹೇಳಬಹುದು.[31] ಕ್ರಿ.ಶ.1818ರಲ್ಲಿ ಶೃಂಗೇರಿ ಮಠದ ಪಾರುಪತ್ಯೇಗಾರ ವೆಂಕಟಾಚಲಶಾಸ್ತ್ರಿಗಳು ಚಾವಡಿಗೆ ಕೊಪ್ಪದ ಸೀಮೆಯ ಸೀಸಲೆ ಮಂಜನ ಹೆಂಡತಿ ಫಣಿ ಎಂಬ ವಿಧವೆಯನ್ನು ಅಹೋಬಲಸೋಮಯಾಜಿಗಳಿಗೆ ಮೂರು ವರಹಗಳಿಗೆ ಮಾರಿದನೆಂದು ತಿಳಿಯುತ್ತದೆ.[32] ಪೂರ್ವಾರಂಭದಿಂದಲೂ ಶ್ರೀಮಠಕ್ಕೆ ಸೇರಿದ ಶಿಷ್ಯ ಜನರಲ್ಲಿಯ ಕೆಟ್ಟ ಹೆಣ್ಣುಗಳನ್ನು ಮಠದ ಹವಾಲೆಗೆ ಕೊಟ್ಟು ರಶೀದಿ ಪಡೆಯುವಂತೆ ಮೈಸೂರು ಸರ್ಕಾರವು 1826ರಲ್ಲಿ ಅರಮನೆಯ ಸೀಮೆ ಅಮೀನ್ ಮತ್ತು ಕಿಲ್ಲೆದಾರರಿಗೆ ನಿರೂಪ ಹೊರಡಿಸಿದ್ದರು. [33]

ಕಡತದಲ್ಲಿ ಹೆಣ್ಣಿನ ಬಗ್ಗೆ ಬಂದ ರಹದಾರಿ ಪ್ರತಿಯೊಂದರಲ್ಲಿ ಜಾತಿ ಕಾಯಿದೆಗೆ ವಿರೋಧವಾಗಿ ನಡೆದಂತ ಹೆಂಗಸರನ್ನು ಪಹರೆಯಲ್ಲಿ ಹಾಕಿಡಬೇಕೆಂಬ ಕಮಿಷನರ್ ಬ್ರಿಕ್ಸ್ ಸಾಹೇಬರ ಆಜ್ಞೆಯನ್ನು ಕಾರ್ಯಗತಗೊಳಿಸುವಂತೆ ನಗರದ ಫೌಜುದಾರ ತಿಮ್ಮಪ್ಪಯ್ಯನವರು ಕ್ರಿ.ಶ.1834ರಲ್ಲಿ ಅಮೀಲ್‌ದಾರ್ ಮತ್ತು ಕಿಲ್ಲೇದಾರರಿಗೆ ನಿರೂಪ ರಚಿಸಿದ್ದರು. ಅವರವರ ಜಾತಿ ಧರ್ಮದ ಮೇರೆಗೆ ಮಠದವರೇ ವ್ಯವಸ್ಥೆ ಮಾಡುತ್ತಿದ್ದರು. ಆದರೆ ಸರ್ಕಾರದ ಪೂರ್ವಾನುಮತಿ ಇಲ್ಲದೇ ಮಠದವರಾಗಲಿ ಸರ್ಕಾರದ ಅಧಿಕಾರಿಗಳಾಗಲಿ ಕ್ರಯ ವಿಕ್ರಯ ಮಾಡಬಾರದೆಂದು ಕಟ್ಟಪ್ಪಣೆ ಇತ್ತು.[34] ಮಹಿಳೆ ಅಬಲೆಯಾಗಿದ್ದಾಗ ಅವಳ ಜೀವನ ನಿರ್ವಹಣೆಗೆ ಆರ್ಥಿಕ ರಕ್ಷಣೆ ನೀಡಿ ಸ್ವಾವಲಂಬನೆಯಾಗಿ ಸಮಾಜದಲ್ಲಿ ಬದಕಲು ಅವಕಾಶ ಮಾಡಿಕೊಡುತ್ತಿದ್ದರೆಂಬುದು ಕೂಡ ತಿಳಿದು ಬರುತ್ತದೆ.

ಕ್ರಿ.ಶ.1816ರ ದಾಖಲೆಯಲ್ಲಿ ಪಾದೆ ಮಠದ ಸುಬ್ಬಯ್ಯ ಅಡಿಗಳಿಗೆ ಅರಗದ ಸುಬ್ಬಮ್ಮನು ಬರೆಸಿಕೊಟ್ಟ ತುಂಡು ಮಾನ್ಯದ ಸ್ವಾಸ್ಥಿ ಕ್ರಯದ ಪಟ್ಟಿಯಲ್ಲಿ ವಿಧವೆಯರು ಯಾರಾದರೂ ಇದ್ದರೆ ಅವರ ಜೀವನ ನಿರ್ವಹಣೆಗಾಗಿ ಆಸ್ತಿ ಮತ್ತು ಹಣವು ದೊರೆಯುತ್ತಿತ್ತೆಂದು ತಿಳಿಯುತ್ತದೆ. ಕಡತಗಳ ದಾಖಲೆಗಳಲ್ಲಿ ಕಂಡು ಬರುವಂತೆ ಕೆಲವು ಕುಟುಂಬದವರು ಹೊಲೆಯಾಳುಗಳನ್ನು ಚರಾಸ್ತಿಯಂತೆ ಪಿತ್ರಾರ್ಜಿತವಾಗಿ ಪಡೆಯುತ್ತಿದ್ದರೆಂದು ತಿಳಿಯುತ್ತದೆ. ಇಂತಹ ಜಾತಿ ಪದ್ಧತಿಯು ಆಗಿನ ಕಾಲದಲ್ಲಿ ಕೇವಲ ಶೃಂಗೇರಿ ಸಂಸ್ಥಾನಕ್ಕೆ ಮಾತ್ರ ಸೀಮಿತವಾಗಿರದೆ ದೇಶದ ಇತರ ಭಾಗಗಳಲ್ಲಿ ವ್ಯಾಪಿಸಿರುವುದು ಗಮನಿಸಬೇಕಾದ ವಿಷಯವಾಗಿದೆ. ಇದನ್ನು ಗಮನಿಸಿದಾಗ ಜೀತಪದ್ಧತಿಯು ಆಗಿನ ಕಾಲದಲ್ಲಿರುವುದು ಹಾಗೂ ಅದೂ ಎಲ್ಲಾ ಕಡೆ ವ್ಯಾಪಿಸಿರುವುದು ಕಂಡುಬರುತ್ತದೆ.

ಶೃಂಗೇರಿಯ ಸಂಸ್ಥಾನವು ಜೀತಮುಕ್ತ ಸಮಾಜ ನಿರ್ಮಾಣದ ಹೋರಾಟದ ಹಾದಿಯಲ್ಲಿ ತನ್ನ ಕೊಡುಗೆಯನ್ನು ನೀಡಿರುವುದು ವೇದ್ಯವಾಗುತ್ತದೆ. ಅಬಲೆಯರು, ಅಸಹಾಯಕರು, ಶ್ರೀಮಠವನ್ನು ಆಶ್ರಯಿಸಿ ಬಂದರೆ ಆತ್ಮಸ್ಥೈರ್ಯ, ಧೈರ್ಯತುಂಬಿ, ಅವರ ಬಾಳಿಗೊಂದು ದಾರಿಯನ್ನು ತೋರಿದಂತೆ ಕಂಡುಬರುತ್ತದೆ. ಈ ಭಾಗದ ಜನರೂ ಸಹ ಮಠದ ಸಹಕಾರದಿಂದ ಜೀವನ ನಿರ್ವಹಣೆ ಮಾಡಿ ಶ್ರೀಮಠದ ಕೃಪೆಗೆ ಪಾತ್ರರಾಗಿದ್ದಾರೆ. ಅನೇಕ ಕುಟುಂಬಗಳು ಮಠವನ್ನೇ ನಂಬಿ ಮಠದ ವಿವಿಧ ಉದ್ಯೋಗವನ್ನು ನಚ್ಚಿ ಈಗ ಸ್ವತಂತ್ರ ಜೀವನ ನಿರ್ವಹಣೆ ಮಾಡಿಕೊಂಡು ಬದುಕುತ್ತಿದ್ದಾರೆ.

ಧರ್ಮಶಾಸ್ತ್ರಕ್ಕನುಗುಣವಾಗಿ ಆಯಾಯ ಜಾತಿಯವರು ಮಠದ ನೀತಿ ನಿಯಮಗಳನ್ನು, ಕಟ್ಟುಪಾಡುಗಳನ್ನು ಅನುಸರಿಸಬೇಕಾಗುತ್ತಿತ್ತು. ಜಾತಿ ಪದ್ಧತಿಗೆ ವಿರೋಧವಾಗಿ ನಡೆದು ಕೊಂಡವರನ್ನು ಹಾಗೂ ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ವರ್ತಿಸಿದವರನ್ನು ಸಮಾಜದಿಂದ ಬಹಿಷ್ಕರಿಸಲಾಗುತ್ತಿತ್ತು. ನರಹರಿ ಶಾಸ್ತ್ರಿ ಎಂಬುವವನು ಧರ್ಮಶಾಸ್ತ್ರಕ್ಕೆ ವಿರೋಧವಾಗಿ ವರ್ತಿಸಿ ಮುದ್ರಾ ಅತಿಕ್ರಮ ಮಾತುಗಳನ್ನಾಡಿದ್ದರಿಂದ ಆತನನ್ನು ಶೃಂಗೇರಿ ಜಗದ್ಗುರುಗಳಾದ ಅಷ್ಟಮ ನರಸಿಂಹಭಾರತೀಗಳು ಬಹಿಷ್ಕರಿಸಿದರೆಂದು ಕಡತಗಳ ನಿರೂಪಗಳಲ್ಲಿ ಹೇಳಲಾಗಿದೆ.[35] ಈಗ ಶ್ರೀಮಠವು ಎಲ್ಲಾ ಜಾತಿ ಜನಾಂಗದವರ ಧಾರ್ಮಿಕ, ಸಾಮಾಜಿಕ ಏಳಿಗೆಗಾಗಿ ಎಲ್ಲಾ ರೀತಿಯ ನೆರವು, ಪ್ರೋತ್ಸಾಹವನ್ನು ನೀಡುತ್ತಾ ಬಂದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಈ ಪದ್ಧತಿಯಲ್ಲಿ ಸಮಾನತೆಯಿರುವುದರಿಂದ ಯಾರ ಮೇಲು ಹೇರಿಕೆಯನ್ನು ಉಂಟು ಮಾಡುವಂತಿಲ್ಲ. ಇಚ್ಛಾನುಸಾರ ಬದುಕಲು ಸ್ವಾತಂತ್ರ್ಯವಿದೆ.

ಶ್ರೀಮಠದ ಕಟ್ಟುಪಾಡು, ನೀತಿ ನಿಯಮಗಳು ಎಷ್ಟು ಬಲಿಷ್ಠವಾಗಿತ್ತೆಂದರೆ ಕ್ರಿ.ಶ.1828ರ ನಿರೂಪದಲ್ಲಿ ವ್ಯಕ್ತವಾದಂತೆ ಜಗದ್ಗುರುಗಳು ನರಹರಿಶಾಸ್ತ್ರಿಯನ್ನು ಬಹಿಷ್ಕರಿಸಿದ ಮೇಲೆ ಚಿಕ್ಕಬಳ್ಳಾಪುರದ ಅಮೀನ ಅನಂತಯ್ಯನು ತನ್ನ ಮಗನ ಉಪನಯನಕ್ಕೆ ನರಹರಿಶಾಸ್ತ್ರಿಯನ್ನು ಆಮಂತ್ರಿಸಿ ಫಲತಾಂಬೂಲಾದಿಗಳನ್ನು ಕೊಟ್ಟು ಅವನಿಂದ ವಟುವಿಗೆ ಆಶೀರ್ವಾದ ಮಾಡಿಸಿದನು. ಬಹಿಷ್ಕೃತನನ್ನು ಆಮಂತ್ರಿಸಿದ ವಿಷಯವು ಮುಮ್ಮಡಿ ಕೃಷ್ಣರಾಜ ಒಡೆಯರ್ ರವರ ಗಮನಕ್ಕೆ ಬಂದು ನರಹರಿ ಶಾಸ್ತ್ರಿಯು ಪುನ: ಗುರುಗಳಿಂದ ಅಪ್ಪಣೆ ಪಡೆಯುವ ತನಕ ಆತನ ಆಸ್ತಿ ಪಾಸ್ತಿಗಳನ್ನು ಮುಟ್ಟುಗೋಲು ಹಾಕಿ ಫಲ ಮುಂತಾದವುಗಳನ್ನು ಕೊಡಬಾರದೆಂದು ಅಮೀನ ಅನಂತಯ್ಯನಿಗೆ ಅಜ್ಞಾಪಿಸಿದರು.[36] ನರಹರಿಶಾಸ್ತ್ರಿಗೆ ಬಹಿಷ್ಕಾರ ಹಾಕಿದ ವಿಷಯವನ್ನು ಕ್ಷೌರಿಕ, ಮಡಿವಾಳರಿಗೆ ತಿಳಿಸಿ ನರಹರಿಶಾಸ್ತ್ರಿಗೆ ತಮ್ಮ ಯಾವ ಸೇವೆಯನ್ನು ಮಾಡಬಾರದೆಂದು ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಹೊಸಕೊಪ್ಪದ ಅಮಲ್ದಾರ್ ಚೆನ್ನಯ್ಯಗೆ- ನಿರೂಪ ಬರೆಸಿ ಕಳುಹಿಸಿರುವ ಸಂಗತಿ ಕಡತಗಳಿಂದ ತಿಳಿದುಬರುತ್ತದೆ.[37]

ಕಡತಗಳನ್ನು ಪರಿಶೀಲಿಸಿದಾಗ ತಿಳಿದುಬರುವ ಅಂಶವೇನೆಂದರೆ ಬಹಿಷ್ಕೃತರಿಗೆ ಸಮಾಜದಲ್ಲಿ ಯಾವ ಸ್ಥಾನ ಮಾನಗಳು ದೊರೆಯುತ್ತಿರಲಿಲ್ಲ. ಬಹಿಷ್ಕೃತನೊಂದಿಗೆ ಯಾರೂ ಸಂಪರ್ಕ ಇಟ್ಟುಕೊಳ್ಳಬಾರದೆಂದು ಸರ್ಕಾರವು ಆಜ್ಞೆ ವಿಧಿಸುತ್ತಿತ್ತು. ಇಂತಹ ಸಂದರ್ಭದಲ್ಲಿ ಬಹಿಷ್ಕೃತನಿಗೆ

ಉಳಿದ ಮಾರ್ಗವೆಂದರೆ ಒಂದೋ ಸಂಸ್ಥಾನ ಬಿಟ್ಟು ಹೋಗಬೇಕಾಗುತ್ತಿತ್ತು, ಇಲ್ಲವೆ ಮರ್ಯಾದೆಯಿಂದ ಸಮಾಜದಲ್ಲಿ ಬದುಕಬೇಕಾದರೆ ಮಾಡಿದ ತಪ್ಪಿಗೆ ಪಶ್ಚಾತ್ತಾಪಪಟ್ಟು ದಂಡತೆತ್ತು ಗುರುಗಳಲ್ಲಿ ಕ್ಷಮೆ ಯಾಚಿಸಬೇಕಾಗುತ್ತಿತ್ತು. ಬಹಿಷ್ಕಾರ ಪದ್ಧತಿಯು ಶೃಂಗೇರಿ ಸಂಸ್ಥಾನದ ಧಾರ್ಮಿಕ ಕಟ್ಟುಪಾಡುಗಳನ್ನು ಅನುಸರಿಸಿಕೊಂಡು ಹೋಗುವುದರ ಮೂಲಕ ಸಮಾಜದಲ್ಲಿ ನೈತಿಕ ಜೀವನ ನಡೆಸಲು ಸಹಕಾರಿಯಾಗುತ್ತಿತ್ತು. ಇದರಿಂದ ಸಮಾಜದಲ್ಲಿ ಉಂಟಾಗುವ ಧರ್ಮಬಾಹಿರ ಚಟುವಟಿಕೆಗಳನ್ನು ತಡೆಗಟ್ಟುವಲ್ಲಿ ಸಮಕಾಲೀನ ರಾಜ ಮನೆತನಗಳು ಕಾಲ ಕಾಲಕ್ಕೆ ಸಹಕರಿಸುತ್ತಿದ್ದವೆಂಬುದಕ್ಕೆ ದಾಖಲೆಗಳು ಪುಷ್ಟೀಕರಿಸುತ್ತವೆ.

4.3 ಧಾರ್ಮಿಕ ಕೊಡುಗೆ:

ಶೃಂಗೇರಿ ಮಠದ ಪರಂಪರೆಯು ಅವಿಚ್ಛಿನ್ನವಾಗಿ ಮುಂದುವರಿದುಕೊಂಡು ಬರಲು ಮುಖ್ಯ ಕಾರಣ ಅದ್ವೈತ ಮತದ ಪ್ರಮುಖ ಕೇಂದ್ರವಾಗಿದ್ದರೂ ಬೇರೆ ಬೇರೆ ಜಾತಿ ಮತ, ಮತ್ತು ಪಂಗಡದವರನ್ನು ಜಗದ್ಗುರುಗಳು ಸಮಾನವಾಗಿ ಕಾಣುತ್ತಲೇ ಬಂದಿರುವುದು. ಈ ಕಾರಣದಿಂದಲೇ ಸಮಾಜದಲ್ಲಿನ ಎಲ್ಲಾ ಜಾತಿ ವರ್ಗದವರು ಶೃಂಗೇರಿ ಗುರುಗಳನ್ನು ಗೌರವಿಸುತ್ತಾ ಬಂದಿದ್ದಾರೆ ಮುಸಲ್ಮಾನರು, ವೀರಶೈವರು ಹಾಗೂ ನಾಡಿನ ಇತರೆ ಜಾತಿಯವರೊಂದಿಗೆ ಉತ್ತಮ ಬಾಂಧವ್ಯ ಹೊಂದಿರಲು ಮಠದ ಪರಧರ್ಮಸಹಿಷ್ಣತೆಯೇ ಕಾರಣ. ಇತರೆ ಕೋಮಿನವರಿಗೆ ಭೂದಾನ ಮಾಡಿದ ದಾಖಲೆಯಿದೆ. ದ್ವಿತೀಯ ಅಭಿನವಸಚ್ಚಿದಾನಂದ ಸ್ವಾಮೀಜಿ ಮಠಕ್ಕೆ ಉತ್ತರದ ಹರಕೇರಿ ಮಾಗಣಿವೊಳಗಿನ ಮಂಡಳಿ ಗ್ರಾಮದ ಸ್ಥಳದ ನೀಡಿಕೆಯನ್ನು ಪಾಳ್ಯದ ಮುಸಲ್ಮಾನ ಯಾಕೂಬಿಯ ಮಗ ಅಲ್ಲಾಬಿಗೆ ಕ್ರಿ.ಶ.1815ರಲ್ಲಿ ದಯಪಾಲಿಸಿರುವುದನ್ನು ಕಾಣಬಹುದು.[38]

ಕ್ರಿ.ಶ.1795ರಲ್ಲಿ ಟಿಪ್ಪು ಸುಲ್ತಾನನು ಸಚ್ಚಿದಾನಂದ ಭಾರತೀ ಸ್ವಾಮೀಜಿಯವರಿಗೆ ಬರೆದ ಪತ್ರದಲ್ಲಿ "ನಾನು ಮೂರು ಅಂಶಗಳಲ್ಲಿ ನಂಬಿಕೆಯನ್ನಿಟ್ಟು ಬಲವನ್ನು ವೃದ್ಧಿಸಿಕೊಂಡು ಯಶಸ್ಸನ್ನು ಸಾಧಿಸಬಹುದು" ಎಂದು ತಿಳಿಸಿದ್ದಾನೆ. ಅವುಗಳೆಂದರೆ ದೇವರ ದಯೆ, ಜಗದ್ಗುರುಗಳ ಆಶೀರ್ವಾದ, ಆಯುಧ ಬಲ ಎಂದು ತಿಳಿಸುತ್ತಾ ಸ್ಪಟಿಕದ ಲಿಂಗವನ್ನು ಗುರುಗಳಿಗೆ ಕಳುಹಿಸಿಕೊಟ್ಟು ಅದನ್ನು ವಿಶೇಷವಾಗಿ ಪೂಜಿಸುವಂತೆ ವಿನಂತಿಸಿಕೊಂಡಿದ್ದನು. ಇದು ಈತನ ಜಾತ್ಯಾತೀತ ನಿಲುವನ್ನು ತೋರಿಸುತ್ತದೆ. ಮಠವು ಹಿಂದೂ ದೊರೆಗಳಂತೆ ಮುಸಲ್ಮಾನ ದೊರೆಗಳಿಂದಲೂ ಕೂಡ ಭಕ್ತಿ ಪೂರ್ವಕವಾದ ಸಹಕಾರವನ್ನು ಪಡೆದುಕೊಂಡಿರುವುದು ಶ್ರೀಮಠದ ಧಾರ್ಮಿಕ ಸಹಿಷ್ಣತೆಯಿಂದ ಸ್ಪಷ್ಟವಾಗುತ್ತದೆ.[39] ಶೃಂಗೇರಿಯ ಮಸೀದಿಗೆ ಶ್ರೀಮಠವೇ ಭೂಮಿಯನ್ನು ನೀಡಿರುವುದು ಇದಕ್ಕೆ ಪುಷ್ಟಿ ಕೊಡುತ್ತದೆ.

ಸ್ವಾತಂತ್ರ್ಯೋತ್ತರದ ಈಗಿನ ಸಂದರ್ಭದಲ್ಲಿ ಅನೇಕ ಮುಸಲ್ಮಾನರು ಶ್ರೀಮಠಕ್ಕೆ ಬರುತ್ತಿದ್ದಾರೆ.

ಇತರೆ ಹಿಂದೂ ಭಕ್ತರಂತೆಯೇ ಅನೇಕರು ದೇವರ ದರ್ಶನ ಪಡೆದು ತೀರ್ಥಪ್ರಸಾದಾದಿಗಳನ್ನು ಪಡೆಯುತ್ತಿದ್ದಾರೆ. ಶ್ರೀಗಳ ಆಶೀರ್ವಾದವನ್ನೂ ಪಡೆಯುತ್ತಿದ್ದಾರೆ. ಶ್ರೀಮಠ ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ಕೋಮಿನವರಿಗೂ ಸೌಲಭ್ಯ ನೀಡುತ್ತಿದೆ. ಈಗಲೂ ಸಹ ಶ್ರೀಮಠ ಹಳೆಯ ಸತ್ಪರಂಪರೆಯನ್ನು ಮುಂದುವರಿಸಿಕೊಂಡು ಧರ್ಮ ಸಹಿಷ್ಣತೆಯನ್ನು ಮೆರೆಯುತ್ತಿದೆ.

ದೇಶದ ಬೇರೆ ಬೇರೆ ಭಾಗದ ಹಿಂದೂ ದೇವಾಲಯಗಳ ಮೇಲೆ ಮುಸ್ಲಿಮರು ದಾಳಿ ಮಾಡಿ, ಲೂಟಿ ಮಾಡಿರುವುದಲ್ಲದೆ ದೇವರ ವಿಗ್ರಹ, ವಾಸ್ತುಶಿಲ್ಪವನ್ನು ನಾಶ ಮಾಡಿದ ಉದಾಹರಣೆ ಬಹಳಷ್ಟು ದೊರೆಯುತ್ತವೆ. ಆದರೆ ಶ್ರೀಮಠವು ಆಗಿನಿಂದಲೂ ಧಾರ್ಮಿಕ ಹಿನ್ನೆಲೆಯ ಶ್ರೇಷ್ಠತೆಯನ್ನು ಹೊಂದಿದ್ದರೂ ಇತರರ ವಕ್ರದೃಷ್ಟಿಗೆ ಸಿಗದಿರುವುದು ವಿಶೇಷವಾಗಿದೆ.

ಆದಿಶಂಕರಾಚಾರ್ಯರ ಕಾಲದಿಂದಲೂ ಶೃಂಗೇರಿಯು ಸನಾತನ ಧರ್ಮ ಮತ್ತು ಸಂಸ್ಕೃತಿಗಳ ಪ್ರತೀಕವಾಗಿದೆ. ಇದೊಂದು ಪವಿತ್ರ ಯಾತ್ರಾಸ್ಥಳವಾಗಿದ್ದು ಭಾರತದ ಮೂಲೆ ಮೂಲೆಗಳಿಂದ ಯಾತ್ರಾರ್ಥಿಗಳು ಭಕ್ತಾದಿಗಳು ಬರುತ್ತಿದ್ದಾರೆ. ಇದೊಂದು ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದ್ದು, ನವರಾತ್ರಿ ಉತ್ಸವ, ಶಾರದಮ್ಮನವರ ದೇಗುಲದ ಜೀರ್ಣೋದ್ಧಾರ, ರಥೋತ್ಸವ, ವಿದ್ಯಾಶಂಕರ ದೇವಾಲಯದ ನಂದಾದೀಪಾರಾಧನೆ, ಮಲ್ಲಿಕಾರ್ಜುನ ದೇವಾಲಯದ ಪರ್ಜನ್ಯ, ಶತರುದ್ರಾಭಿಷೇಕ, ದೀಪಾರಾಧನೆ, ಗುರುಗಳ ಚಾತುರ್ಮಾಸ್ಯ, ಗುರುಗಳ ವಿಜಯ ಯಾತ್ರೆ, ವಿದ್ವತ್ ಸಭೆಗಳು ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ.

ದಂಡಶಕ್ತಿ, ಧರ್ಮಶಕ್ತಿ ಒಂದು ಸಮುದಾಯಕ್ಕೆ ಎರಡು ಕಣ್ಣುಗಳಿದ್ದಂತೆ, ಧರ್ಮದ ನೆಲೆ ಅಹಿಂಸೆ, ದಂಡಶಕ್ತಿಯ ಆಧಾರ ಪ್ರಮುಖವಾಗಿ ಹಿಂಸೆ ಮತ್ತು ಆ ಮೂಲಕ ನಿಯಂತ್ರಣ. ಧರ್ಮಪ್ರಸಾರಕ್ಕಾಗಿ ಮಠಗಳು ಹುಟ್ಟಿಕೊಂಡರೆ ಅವುಗಳ ರಕ್ಷಣೆ, ಪೋಷಣೆಯ ಜವಾಬ್ದಾರಿಯನ್ನು ಹೊತ್ತ ಅರಸು ಮನೆತನಗಳು ಆ ಮಠಗಳನ್ನು ಪ್ರಾಚೀನ ಕಾಲದಿಂದಲೂ ಪೋಷಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಅಂತಹ ಮಠಗಳ ಪರಂಪರೆಯಲ್ಲಿ ಸುಮಾರು ಹನ್ನೆರಡು ನೂರು ವರ್ಷಗಳ ಹಿಂದೆ ಆದಿ ಶಂಕರಾಚಾರ್ಯರು ಸ್ಥಾಪಿಸಿದ ಶೃಂಗೇರಿ ಜಗದ್ಗುರು ಪರಂಪರೆ ಅವಿಚ್ಛಿನ್ನವಾಗಿ ಸಾಗಿ ಬಂದು ರಾಜಾಶ್ರಯದಿಂದ ಧರ್ಮಸಂಸ್ಥಾನವಾಗಿ ಬಂದಿದೆ.

ಪುರಾಣ ಪ್ರಸಿದ್ಧವಾದ ಶೃಂಗೇರಿಗೆ ಆದಿ ಶಂಕರಾಚಾರ್ಯರು ಬಂದಾಗ ತುಂಗಾ ನದಿ ತೀರದ ಬಂಡೆಯ ಮೇಲೆ ಬಿಸಿಲಿನಿಂದ ಪರಿತಪಿಸುತ್ತಿದ್ದ ಕಪ್ಪೆಯೊಂದಕ್ಕೆ ಸರ್ಪವು ತನ್ನ ಹೆಡೆ ಬಿಚ್ಚಿ ಛತ್ರಿಯಂತೆ ನೆರಳು ನೀಡುತ್ತಿತ್ತೆಂದು, ಈ ದೃಶ್ಯವನ್ನು ಶಂಕರಾಚಾರ್ಯರು ನೋಡಿ, ಇದು ಶಾಂತಿ, ಮೈತ್ರಿ ಮತ್ತು ಸೌಹಾರ್ದಗಳ ತಾಣವೆಂದು ನಿಶ್ಚಯಿಸಿ ಶ್ರೀ ಶಾರದಾಪೀಠವನ್ನು ಇಲ್ಲಿ ಸ್ಥಾಪಿಸಿದರೆಂದು ಐತಿಹ್ಯವಿದೆ. ಇಂದಿಗೂ ಶೃಂಗೇರಿಯು ಸಮನ್ವಯ ಹಾಗೂ ಸಾಮರಸ್ಯದ ಕೇಂದ್ರವಾಗಿರುವುದು ವೇದ್ಯ. ಶ್ರೀ ಶಂಕರರನ್ನೊಳಗೊಂಡಂತೆ ಉಳಿದ ಯತಿವರ್ಯರೂ ಸಹ ಸಂಸ್ಥಾನದ ಘನತೆ

ಗಾಂಭೀರ್ಯವನ್ನು ವೃದ್ಧಿಸಿದ್ದಾರೆ. ವಿಜಯನಗರ ಸಂಸ್ಥಾನದ ಸ್ಥಾಪನೆಗೆ ಕಾರಣರಾದ ಶ್ರೀ ವಿದ್ಯಾರಣ್ಯರ ಕೃಪೆಗಾಗಿ ಜಗದ್ಗುರುಗಳಿಗೆ "ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ" ಎಂಬ ಬಿರುದು ಪ್ರಾಪ್ತವಾಯಿತು ಎಂದು ದಾಖಲೆಗಳಿಂದ ತಿಳಿದು ಬರುತ್ತದೆ.

ಶೃಂಗೇರಿ ಮಠವು ಎಲ್ಲಾ ಮಠಗಳಿಗಿಂತ ಪುರಾತನವಾದದ್ದರಿಂದ ಅದು ಶತಮಾನಗಳುದ್ದಕ್ಕೂ ಶ್ರೇಷ್ಠತೆಯನ್ನು ಕಾಪಾಡಿಕೊಂಡು ಬಂದಿದೆ. ಗುರುಗಳ ಬಿರುದು ಬಾವಲಿಗಳು ಮತ್ತು ಮಠಕ್ಕೆ ಹಿಂದಿನಿಂದಲೂ ದೊರೆತ ಮರ್ಯಾದೆ ಮತ್ತು ಸೌಲಭ್ಯಗಳನ್ನು ಗಮನಿಸಿದಾಗ ಮಠದ ಧಾರ್ಮಿಕ ವೈಶಿಷ್ಟ್ಯವನ್ನು ಕಾಣಬಹುದು. ಎಲ್ಲಾ ಅದ್ವೈತ ಮಠಗಳಿಗೆ ಶೃಂಗೇರಿ ಮಠವೇ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ.[40]

ನಾಡಿನ ಬೇರೆ ಬೇರೆ ಭಾಗದಲ್ಲಿ ಇಂತಹ ಮರ್ಯಾದೆ ದೊರೆತಿರುವುದರಿಂದ ಶ್ರೀಮಠವನ್ನೇ ನಂಬಿದ ಸ್ಥಳೀಯಜನರ ಬಗ್ಗೆ ವಿವರಣೆಯೇ ಬೇಡ. ಈಗಲೂ ಸಹ ಎಲ್ಲಾ ಜಾತಿ ಜನಾಂಗದವರು ಶ್ರೀಮಠವನ್ನು ನಂಬಿದ್ದಾರೆ. ಅಲ್ಲಿಯ ಕಾರ್ಯಕ್ರಮಗಳಿಗೆ ಭಾಗಿಗಳಾಗಿ ಸಂಭ್ರಮಿಸುತ್ತಾರೆ. ನಮ್ಮ ಮಠವೆಂಬ ಅಭಿಮಾನ ಸ್ಥಳೀಯರಲ್ಲಿ ಕಾಣಬಹುದಾಗಿದೆ. ಆಧುನಿಕತೆಯ ರಭಸವಿದ್ದರೂ ಶ್ರೀಮಠದ ಧಾರ್ಮಿಕ ಶ್ರದ್ಧಾಭಕ್ತಿಯಲ್ಲಿ ಯಾವ ನ್ಯೂನತೆಯೂ ಕಂಡುಬಂದಿಲ್ಲ. ಒಂದೆರಡು ಜನ, ಒಂದೆರಡು ಸಂಘಟನೆಗಳು ಶ್ರೀಮಠ ಹಾಗೂ ಜಗದ್ಗುರುಗಳನ್ನು ತಾವು ಹಗುರವಾಗಿ ಕಂಡಿದೆ. ತಮ್ಮ ಪ್ರಚಾರಪ್ರಿಯತೆ ಹಾಗೂ ದೊಡ್ಡಸಾಧನೆ ಮಾಡಿದ್ದೇವೆಂಬುದನ್ನು ಸಮಾಜಕ್ಕೆ ತೋರಿಸುವ ಸಲುವಾಗಿ ಹೀಗಳೆದಿದ್ದಾರೆ. ಇದರಿಂದ ಶ್ರೀಮಠದ ಘನತೆ, ಗಾಂಭೀರ್ಯಕ್ಕೆ ಚ್ಯುತಿಯಾಗಿಲ್ಲ. ಇನ್ನಷ್ಟು ಪ್ರಜ್ವಲವಾಗಿ ಕಂಗೊಳಿಸುವಂತಾಯ್ತು.

ಶ್ರೀಮಠವು ರಥೋತ್ಸವ ಹಾಗೂ ಇತರೆ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದೆ. ಅದರಲ್ಲೂ ನವರಾತ್ರಿ ಉತ್ಸವ ಹಾಗೂ ರಥೋತ್ಸವವು ಅನೇಕ ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆದುಬರುತ್ತಿದೆ. ಕ್ರಿ.ಶ.1406ರ ಸುಮಾರಿಗೆ ವಿಜಯನಗರ ವೀರ ಬುಕ್ಕ ಮಹಾರಾಯರು, ಶೃಂಗೇರಿಯ ವಿದ್ಯಾತೀರ್ಥರ ದರ್ಶನ ಮಾಡಿ ಶಾರದಾ ಅಮ್ಮನವರ ನವರಾತ್ರಿ ಮಹೋತ್ಸವ, ಚಂದ್ರಮೌಳೀಶ್ವರ ಸ್ವಾಮಿಯ ಸನ್ನಿಧಿಯಲ್ಲಿ ನಡೆಯುವ ಅಮೃತ ಪಡಿ, ನಂದಾದೀಪ್ತಿ, ಬ್ರಾಹ್ಮಣ ಸಂತರ್ಪಣೆಗಾಗಿ ಸಾಂತಳಿಗೆ ನಾಡೊಳಗಣ ಒಟ್ಟು 3001 ವರಹ ಮತ್ತು ಪಣ 201/2 ಯ ಭೂಮಿಯನ್ನು ಸಮರ್ಪಿಸಿದ್ದು ಶಿಲಾಶಾಸನದಲ್ಲಿ ತಿಳಿದುಬರುತ್ತದೆ. ಆದರೆ ಇಲ್ಲಿ ಸೂಚಿಸಿರುವ ಕಾಲವು ವಿಜಯನಗರ ಕಾಲಕ್ಕೆ ಸರಿ ಹೊಂದುವುದಿಲ್ಲ.[41] ಧಾರ್ಮಿಕ ವಿಧಿ ವಿಧಾನಗಳು ನಡೆದು ಬಂದಿರುವುದು ಕಂಡುಬರುತ್ತದೆ.

ವಿಜಯನಗರದ ಅರಸರು, ಕೆಳದಿಯ ನಾಯಕರು, ಹೈದರಾಲಿ ಟಿಪ್ಪುಸುಲ್ತಾನರು, ಮೈಸೂರಿನ ಒಡೆಯರು ಧರ್ಮಕಾರ್ಯಕ್ಕಾಗಿಯೇ ಶ್ರೀಮಠಕ್ಕೆ ಭೂಮಿಯನ್ನು ದಾನ ನೀಡಿದ ದಾಖಲೆಗಳಿವೆ.

ಶ್ರೀಮಠಕ್ಕೆ ಬೇಕಾದ ಒಡವೆ, ವೈಡೂರ್ಯ, ರಥ ಮೊದಲಾದವುಗಳನ್ನು ನಾಡಿನ ಬೇರೆ ಬೇರೆ ರಾಜರುಗಳು ಆಯಾ ಕಾಲದಲ್ಲಿ ನೀಡಿ ಧರ್ಮ ಕಾರ್ಯ ನಡೆಸಲು ಸಹಕಾರ ನೀಡಿದ್ದಾರೆ. ಈಗಲೂ ಸಹ ಭಕ್ತಾದಿಗಳು, ನಾಡಿನ ಬೇರೆ ಬೇರೆ ಭಾಗದ ಶ್ರೀಮಂತರು, ರಾಜಕಾರಣಿಗಳು, ದೇವತಾಸೇವೆ ಮಾಡುವುದರೊಂದಿಗೆ ದಕ್ಷಿಣೆಗಳನ್ನು ನೀಡುತ್ತಾರೆ. ದಾನಿಗಳ ನೆರವಿನಿಂದ ನಿತ್ಯ ಅನ್ನ ದಾಸೋಹ ನಡೆಯುತ್ತಿದೆ. ಅಸಹಾಯಕರಿಗೆ ನೆರವನ್ನು ಶ್ರೀಮಠ ನೀಡುತ್ತಾ ಬಂದಿದೆ. ಯಾತ್ರಾರ್ಥಿಗಳಿಗೆ ಅನುಕೂಲವಾಗುವ ಸಲುವಾಗಿ ವಸತಿಗಳನ್ನು ನಿರ್ಮಾಣ ಮಾಡಿದ್ದಾರೆ. ಧರ್ಮ ಕಾರ್ಯ ನಿರತರ ಸಹಕಾರ ಪಡೆಯುವ ಸಲುವಾಗಿ ಕೈಂಕರ್ಯಗಳನ್ನು ಭಕ್ತ ಸಮೂಹ ಮಾಡುತ್ತಾ ಬಂದಿದೆ.

4.4 ಭಾವನಾತ್ಮಕವಾಗಿ ಶ್ರೀಮಠ:

ಶೃಂಗೇರಿಯ ಶ್ರೀಮಠವು ಸ್ವತಂತ್ರ ಆಡಳಿತವ್ಯವಸ್ಥೆಯ ಸಂಸ್ಥೆಯಾಗಿತ್ತು. ರಾಜ ಮಹಾರಾಜರು ಭೂಮಿಯನ್ನು ದಾನ ನೀಡಿದ್ದರು, ಆರ್ಥಿಕ ಸಹಕಾರ ನೀಡಿ ಮಠದ ಅಭಿವೃದ್ಧಿಗೆ ಸಹಕರಿಸಿದ್ದ ಶ್ರೀಮಠವು ಜಹಗೀರಾಗಿ ತನ್ನ ಆಡಳಿತವ್ಯವಸ್ಥೆಯನ್ನು ನಿರ್ವಹಿಸಿಕೊಂಡು ಬಂದಿದೆ. ಧಾರ್ಮಿಕ ಹಿನ್ನೆಲೆಯಲ್ಲಿ ಅಗ್ರಮಾನ್ಯವಾಗಿದ್ದು, ಮಠದ ಶ್ರೀಗಳು ಜಗದ್ಗುರುಗಳಾಗಿ ಸರ್ವರಿಂದಲೂ ಪೂಜನೀಯರಾಗಿದ್ದರು. ನಾಡಿನ ಮೂಲೆ ಮೂಲೆಗಳಿಂದ ಭಕ್ತಾದಿಗಳು, ಸಮಾಜದ ಗಣ್ಯರು ಬಂದು ಗುರುಗಳ ಹಾಗೂ ದೇವಿಯ ದರ್ಶನ ಪಡೆದು ಆಶೀರ್ವಾದ ಪಡೆಯುತ್ತಿದ್ದರು. ಈ ಎಲ್ಲಾ ಹಿನ್ನೆಲೆಯಿಂದ ಶೃಂಗೇರಿಯ ಸುತ್ತಮುತ್ತಲ ಜನರು ಶ್ರೀಮಠದೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದರು. ಶ್ರೀಮಠವನ್ನು ಹೊರತುಪಡಿಸಿ ಶೃಂಗೇರಿಯ ವಿವಿಧ ಜಾತಿ ಜನಾಂಗದವರ ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಅಷ್ಟರಮಟ್ಟಿಗೆ ಶೃಂಗೇರಿಯ ಸುತ್ತಮುತ್ತಲ ಜನರು ಶ್ರೀಮಠದೊಂದಿದೆ ಅನ್ಯೋನ್ಯ ಸಂಬಂಧವನ್ನು ಹೊಂದಿದ್ದರು.

ಶ್ರೀಮಠದ ಭೂಮಿಯನ್ನು ಗೇಣಿ ರೂಪದಲ್ಲಿ ಕೃಷಿಕರಿಗೆ ಕೊಟ್ಟು ಗೇಣಿಯನ್ನು ಪಡೆಯುತ್ತಿದ್ದರು. ಮಠದ ಭೂಮಿ ಎಂಬ ಅಭಿಮಾನ ಹಾಗೂ ಭೂಮಿಯನ್ನು ಕೊಟ್ಟ ಋಣದಿಂದ ಜನರು ಕೃತಜ್ಞತೆಯನ್ನು ಇಟ್ಟುಕೊಂಡಿದ್ದರು. ಶಾರದಾದೇವಿಯ ಪ್ರಸಾದವೆಂದೇ ನಂಬಿ ಅನೇಕ ಕುಟುಂಬಗಳು ಕೃಷಿ ಚಟುವಟಿಕೆಗಳನ್ನು ನಿರ್ವಹಿಸಿಕೊಂಡು ಬರುತ್ತಿದ್ದರು. ನಿಯಮದಂತೆ ಗೇಣಿಯನ್ನು ಶ್ರೀಮಠಕ್ಕೆ ಸಲ್ಲಿಸಿ ಕೃತಾರ್ಥರಾಗುತ್ತಿದ್ದರು. ಇದೊಂದು ಭಾವನಾತ್ಮಕ ಸಂಬಂಧವನ್ನು ಭದ್ರಗೊಳಿಸಲು ಕಾರಣವಾಗಿದೆ. ಈಗ ಭೂಸುಧಾರಣೆಯ ಕಾಯ್ದೆಯಂತೆ ಯಾರು ಶ್ರೀಮಠದ ಭೂಮಿಯನ್ನು ಗೇಣಿರೂಪದಲ್ಲಿ ಮಾಡುತ್ತಿದ್ದರೋ ಅವರಿಗೆ ಆ ಭೂಮಿ ಈಗ ದೊರೆತರು ಶ್ರೀಮಠದ್ದೆಂಬ ಭಾವನೆಯಿದೆ. ಹಾಗೂ ದೇವಿಯ ಅನುಗ್ರಹವೆಂದು ನಂಬಿದ್ದಾರೆ. ಇತ್ತೀಚಿನ ಯುವ ಪೀಳಿಗೆಯವರಿಗೆ ಈ

ಭೂಮಿಯ ಒಸ್ನೆಲೆ ಮತ್ತು ಮಹತ್ವ ತಿಳಿಯದಿರುವುದರಿಂದ ಹಿರಿಯರಲ್ಲಿರುವಂತಹ ಭಾವನಾತ್ಮಕ ಬಾಂಧವ್ಯವನ್ನು ಇವರಲ್ಲಿ ಕಾಣಲು ಸಾಧ್ಯವಾಗುವುದಿಲ್ಲ. ಇದೊಂದು ಗುರುತಿಸಬಹುದಾದ ಪರಿವರ್ತನೆಯ ಅಂಶವಾಗಿದೆ.

ಶ್ರೀಮಠದಲ್ಲಿ ಅನುಸರಿಸುತ್ತಿರುವ ಹಬ್ಬಾಚರಣೆ, ಪೂಜೆ ಇತ್ಯಾದಿಗಳನ್ನು ಸುತ್ತಮುತ್ತಲ ಜನರು ಅನುಸರಿಸುತ್ತಿದ್ದರು. ಶ್ರೀಗಳ ದರ್ಶನ ಮಾಡಿ ಆಶೀರ್ವಾದ ಪಡೆಯುತ್ತಿದ್ದರು. ದೇವಿಯ ದರ್ಶನ ಪಡೆದು ಪುನೀತರಾಗುತ್ತಿದ್ದರು. ಈಗಲೂ ಸಹ ತಾವು ಬೆಳೆದ ದವಸ, ಧಾನ್ಯ ಪದಾರ್ಥಗಳನ್ನು ಶ್ರೀಮಠಕ್ಕೆ ನೀಡುತ್ತಾರೆ. ರಥೋತ್ಸವ ವರ್ಧಂತಿ, ಮೊದಲಾದ ಆಚರಣೆಯಂದು ಭಾಗವಹಿಸುತ್ತಾರೆ. ಶ್ರೀಮಠಕ್ಕೆ ಏನನ್ನಾದರೂ ಕೊಡಬೇಕೆಂಬ ಬಯಕೆ ಭಕ್ತರಲ್ಲಿದ್ದು, ಮೆರವಣಿಗೆಯ ಮೂಲಕ ಫಲಸಮರ್ಪಣೆ ಮಾಡುವುದು, ಉತ್ಸವಗಳಲ್ಲಿ ಭಾಗವಹಿಸುವುದು, ಧಾರ್ಮಿಕ ಕಾರ್ಯಗಳು ನಡೆಯುವಾಗ ತೊಡಗುವುದು ಕಂಡುಬರುತ್ತದೆ. ಕೆಲವೊಮ್ಮೆ ಇದು ಯಾಂತ್ರಿಕ ಹಾಗೂ ಹಾಗೂ ಸ್ವಪ್ರತಿಷ್ಠೆಯ ಸ್ವರೂಪವನ್ನು ಪಡೆದಂತೆ ಕಾಣುತ್ತದೆ.[42]

ಮನೆ ನಿರ್ಮಾಣದಲ್ಲಿ, ನಿರಾವರಿ ವ್ಯವಸ್ಥೆಯಲ್ಲಿ, ಮದುವೆ ಇತ್ಯಾದಿ ಕಾರ್ಯಗಳನ್ನು ಮಾಡಬೇಕಾದಲ್ಲಿ ಶ್ರೀಮಠವು ವಸ್ತು , ಹಣ ಇತ್ಯಾದಿ ರೂಪದಲ್ಲಿ ನೆರವನ್ನು ನೀಡುತ್ತಾ ಬಂದಿದೆ. ಈ ಎಲ್ಲಾ ಕಾರಣಗಳಿಂದ ಸ್ಥಳೀಯರು ಮಠದೊಂದಿಗೆ ಅನ್ಯೋನ್ಯವಾದ ಭಾವನಾತ್ಮಕ ಸಂಬಂಧವನ್ನು ಹೊಂದಿರುವುದು ಕಂಡುಬರುತ್ತದೆ.

4.5 ಶ್ರೀಮಠದ ಸಾಂಸ್ಕೃತಿಕ ಕೊಡುಗೆ:

ಶೃಂಗೇರಿ ಸಂಸ್ಥಾನದ ಆಡಳಿತ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದ ಕುಟುಂಬದವರಿಗೆ ಬಾಹ್ಯ ಆಡಳಿತವ್ಯವಸ್ಥೆಯ ಅರಿವಿರಲಿಲ್ಲ. ನೇರವಾಗಿ ಶ್ರೀಮಠದೊಂದಿಗೆ ಸಂಪರ್ಕವಿತ್ತು. ಮಠದ ಭೂಮಿಗೆ ಗೇಣಿಯನ್ನು ನೀಡಿ ಮಠದ ಕೃಪೆಯಲ್ಲಿ ಇರುತ್ತಿದ್ದರು. ಈ ಹಿನ್ನೆಲೆಯಿಂದಲೆ ಶ್ರೀಮಠದ ಆಡಳಿತ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಮೊದಲಾದ ಎಲ್ಲವುಗಳ ನೇರ ಪ್ರಭಾವವನ್ನು ಕಾಣಬಹುದಾಗಿದೆ. ಸಾಂಸ್ಕೃತಿಕವಾಗಿ ಶ್ರೀಮಠದ ಕೊಡುಗೆ ಅಪಾರವಾದುದ್ದು. ಶ್ರೀಮಠದ ಸಾಂಸ್ಕೃತಿಕ ವಿಧಿ ವಿಧಾನ, ಆಚಾರ–ವಿಚಾರಗಳು ಏನಿವೆಯೋ ಅವುಗಳ ಯಥಾ ಅನುಕರಣೆಯನ್ನು ಹಳ್ಳಿಗಳಲ್ಲಿ ಕಾಣಬಹುದಾಗಿದೆ.

ಶ್ರೀಮಠದಲ್ಲಿ ಗೋಪೂಜೆ ಮಾಡುವ ಮಹೂರ್ತದಲ್ಲಿಯೇ ಸ್ಥಳೀಯರು ಗೋಪೂಜೆಯನ್ನು ಮಾಡುವುದು, ಗೋಮಾಲೆಯನ್ನು ಮಾಡುವಾಗ ಅದಕ್ಕೆ ಹಾಕಬೇಕಾದ ಹಣ್ಣು, ಹೂವುಗಳನ್ನು ಸಹ ಮಠದವರು ಏನು ಮಾಡುತ್ತಿದ್ದರೋ ಅದನ್ನೇ ಅನುಸರಿಸುವುದು, ಭೂಮಿ ಪೂಜೆ, ಗೌರಿ ಗಣೇಶಹಬ್ಬ ಮೊದಲಾದ ಯಾವೆಲ್ಲ ಹಬ್ಬಾಚರಣೆಗಳನ್ನು ಶ್ರೀಮಠದವರು ಅನುಸರಿಸಿಕೊಂಡು

ಬರುತ್ತಿದ್ದರೋ ಆ ಎಲ್ಲಾ ಅಂಶಗಳನ್ನು ಸುತ್ತಮುತ್ತಲ ಗ್ರಾಮಸ್ಥರಲ್ಲಿ ಕಾಣಬಹುದಾಗಿದೆ. ಪ್ರತಿಯೊಂದು ಆಚರಣೆಯಲ್ಲಿ ಶ್ರೀಮಠವನ್ನು ಅನುಸರಿಸಿ, ಅದರಂತೆಯೇ ನಡೆದುಕೊಳ್ಳುತ್ತಿದ್ದರು.

ಇತ್ತೀಚಿನ ಆಧುನಿಕತೆ, ಅನಾದರಣೆಯಿಂದಾಗಿ ಬಹಳಷ್ಟು ಬದಲಾವಣೆಗಳಾಗಿರುವುದನ್ನು ಗಮನಿಸಬಹುದಾಗಿದೆ. ಶೃಂಗೇರಿ ಸುತ್ತಮುತ್ತಲ ಸ್ಥಳೀಯರಲ್ಲಿ ಹಿರಿಯರು ಮಾತ್ರ ಈ ಎಲ್ಲಾ ಆಚರಣೆಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಕಿರಿಯರ ಅನಾದರಣೆಯಿಂದ ಬಹಳಷ್ಟು ಮಾರ್ಪಾಟುಗಳುಂಟಾಗಿದೆ. ಆದರೂ ಮಾಮೂಲಿಯಂತೆ ನಡೆಸಿಕೊಂಡು ಹೋಗಬೇಕಾದ ಒತ್ತಡದಿಂದ ಹಾಗೂ ಮಾನಸಿಕ ಹೊಯ್ದಾಟದ ನಡುವೆಯಲ್ಲಿ ಆಚರಿಸುತ್ತಿದ್ದಾರೆ. ಯುವ ಪೀಳಿಗೆಯವರಿಗೆ ಆಚಾರ ಸಂಪ್ರದಾಯದ ರೀತಿ ರಿವಾಜುಗಳು ಬೇಕಾಗಿಲ್ಲ. ಅವರಲ್ಲಿ ಹೆಚ್ಚಿನವರು ಈ ಧಾರ್ಮಿಕ ಆಚರಣೆಯಲ್ಲಿ ಭಾಗಿಯಾಗುವುದಿಲ್ಲ. ಹಿರಿಯರಿಗೆ ಸಂಪ್ರದಾಯ ಬಿಟ್ಟು ಆಚರಣೆ ಬಿಟ್ಟು ಹಾಗೆ ಇರಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ. ಭೂಮಿ ಪೂಜೆ ಮಾಡುವಾಗ ಬೆಳಿಗ್ಗೆ ಮುಂಚೆ ಐದು ಗಂಟೆಗೆ ಗದ್ದೆಗೆ ಹೋಗಿ ಪೂಜೆ ಮಾಡಿ ಪನಿವಾರಗಳನ್ನು ಭೂ ತಾಯಿಗೆ ನೀಡಿ ಪ್ರಸಾದ ಹಂಚಲು ವಯಸ್ಸಾದವರೇ ಹೋಗುತ್ತಾರೆ. ಜಾಗಂಟೆ ಬಾರಿಸಲೋ, ಸಲಕರಣೆಗಳನ್ನು ತಂದು ಕೊಡಲೊ ಇತರೆ ಸಹಾಯ ಮಾಡಲೊ ಬನ್ನಿ ಎಂದು ಕರೆದರೆ ಯುವಕರಾರೂ ಬರುವುದಿಲ್ಲ. ಅದರಲ್ಲೂ ವಿದ್ಯಾವಂತರೆನಿಸಿಕೊಂಡವರು ಹತ್ತಿರ ಸುಳಿಯುವುದಿಲ್ಲ.[43] ಹಿರಿಯ ತಲೆ ಮಾರಿನವರು ಶ್ರೀಮಠದಲ್ಲಿ ನಡೆಸುವ ಆಚರಣೆ ರೀತಿ, ರಿವಾಜನ್ನು ಅನುಸರಿಸುತ್ತಾರೆ. ಸಹಕಾರ, ಪ್ರೋತ್ಸಾಹ, ನೆರವು ಯುವ ಪೀಳಿಗೆಯವರಲ್ಲಿ ದೊರೆಯದಿದ್ದಾಗ ಹಿರಿಯರು ಮಾನಸಿಕ ಗೊಂದಲದಲ್ಲಿ ತೊಳಲಾಡುತ್ತಾರೆ.

ಸಾಹಿತ್ಯ, ಸಂಗೀತ, ಕಲೆಗೆ ಶ್ರೀಮಠವು ತನ್ನದೇ ಆದ ಕೊಡುಗೆಯನ್ನು ನೀಡಿದೆ. ಶ್ರೀಮಠದ ಹೆಚ್ಚಿನ ಗುರುವರ್ಯರು ಕೃತಿಗಳನ್ನು ರಚಿಸಿದ್ದಾರೆ. ಸಂಗೀತಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಸಂಗೀತ ವಿದ್ವಾಂಸರನ್ನು ಗೌರವಿಸಿ ಕಲೆಯನ್ನು ಅಭಿವೃದ್ಧಿ ಪಡಿಸುವಂತೆ ಪ್ರೇರೆಪಿಸಿದ್ದಾರೆ. ಶ್ರೀಮಠದಲ್ಲಿ ನಡೆಯುವ ನವರಾತ್ರಿ ಉತ್ಸವ, ವರ್ಧಂತಿ ಉತ್ಸವ ಹಾಗೂ ಇತರೆ ಪ್ರಮುಖ ಆಚರಣೆಯ ಸಂದರ್ಭದಲ್ಲಿ ನಾಡಿನ ಹಾಗೂ ಹೊರನಾಡಿನ ಪ್ರಸಿದ್ಧ ಸಂಗೀತ ತಜ್ಞರನ್ನು ಕರೆಸಿ ನಾಧಸುಧೆ ಹರಿಸಲಾಗುತ್ತಿರುವುದನ್ನು ಈಗಲೂ ಸಹ ಶ್ರೀಮಠದಲ್ಲಿ ಕಾಣಬಹುದಾಗಿದೆ. ಇಂತಹ ಸಂದರ್ಭದಲ್ಲಿ ಶೃಂಗೇರಿಯ ಸುತ್ತಮುತ್ತಲಿನ ಭಕ್ತರು ದೇವರ ದರ್ಶನ ಪಡೆದು ಪುನೀತರಾಗುತ್ತಿದ್ದು, ಸಂಗೀತ ಸುಧೆಯ ಸವಿಯನ್ನು ಸವಿಯುತ್ತಿದ್ದರು. ಇದರ ಪ್ರಭಾವದಿಂದಾಗಿ ಶೃಂಗೇರಿಯ ಸುತ್ತಮುತ್ತಲ ಅನೇಕ ಮನೆಗಳಲ್ಲಿ ಸಂಗೀತ ವಿದ್ವಾಂಸರು, ವಾಗ್ಗೇಯಕಾರರು ಸಂಗೀತಾಸಕ್ತರಿದ್ದರು. ಈಗಲೂ ಆ ಸಂಗೀತ ಪರಂಪರೆ ಆಯಾಯ ಮನೆಗಳಲ್ಲಿ ಮುಂದುವರಿದು ಬರುತ್ತಿರುವುದು ಕಂಡು ಬರುತ್ತಿದೆ. ಹಿರಿಯ ತಲೆಮಾರಿನವರಲ್ಲಿ ಈ ಕಲೆಯಿದೆಯೇ ವಿನಃ ಹೊಸ ಪೀಳಿಗೆಯವರು ಇದನ್ನು ಸಂಪ್ರಾದಾಯಬದ್ಧವಾಗಿ ಮುಂದುವರಿಸುತ್ತಿಲ್ಲ. ಟಿ.ವಿ.

ರೇಡಿಯೋ, ಮೊಬೈಲ್, ಟೇಪ್ ರೆಕಾರ್ಡರ್ ಮೊದಲಾದ ಎಲೆಕ್ಟ್ರಾನಿಕ್ ಯಂತ್ರಗಳು ಬಂದಿರುವುದರಿಂದ ಸಂಗೀತವು ಮರೆಯಾಗಿದೆ. ಅಳಿದುಳಿದ ಸಂಗೀತ ಹಾಡುಗಾರರು ಅಪಹಾಸ್ಯಕ್ಕೆ ಗುರಿಯಾಗುತ್ತಿದ್ದಾರೆ. ನಗರ ಪ್ರದೇಶಕ್ಕಿಂತ ಹಳ್ಳಿಗಾಡಿನ ಜನರಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕಾಣಲು ಸಾಧ್ಯವಿದೆ. ಇಲ್ಲಿಯ ಸಂಗೀತದ ವಾತಾವರಣ ನಿರ್ಮಾಣವಾಗಲು ಶ್ರೀಮಠದ ಕೊಡುಗೆಯನ್ನು ಯಾರೂ ಮರೆಯುವಂತಿಲ್ಲ. [44]

ಸಂಗೀತ ಕಲಾವಿದರಿಗೆ ಶ್ರೀಮಠದಿಂದ ಪುರಸ್ಕಾರ ಪ್ರೋತ್ಸಾಹ ಸಿಗುತಿತ್ತು. ನವರಾತ್ರಿಯ ಸಮಯದಲ್ಲಿ ಹಾಗೂ ಮಠದಲ್ಲಿ ನಡೆಯುವ ವಿಶೇಷ ಸಂದರ್ಭದಲ್ಲಿ ನಾಡಿನ ಹಾಗೂ ಹೊರರಾಜ್ಯದ ಪ್ರಮುಖ ವಿದ್ವಾಂಸರನ್ನು, ವಿದುಷಿಯರನ್ನು ಕರೆಸಿ ಸಂಗೀತ ಕಛೇರಿ ಗೋಷ್ಠಿಗಳನ್ನು ನಡೆಸುತ್ತಾರೆ. ಶೃಂಗೇರಿ ಸುತ್ತಮುತ್ತಲ ಜನರು ಬಹಳ ಆಸಕ್ತಿಯಿಂದ ಇಂತಹ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರು. ಕಾಲಘಟ್ಟದ ಪರಿವರ್ತನೆಯಿಂದಾಗಿ ಹೊಸತಂತ್ರಗಾರಿಕೆಯ ಪರಿಣಾಮ ಹಾಗೂ ಆಧುನಿಕತೆಯ ಪ್ರಭಾವದಿಂದಾಗಿ ಜನರಲ್ಲಿ ಆಸಕ್ತಿ ಕಡಿಮೆಯಾಗಿ ಬೇರೆ ಕ್ಷೇತ್ರದತ್ತ ಹೊರಳಿದೆ. ಸಂಗೀತ ಕಛೇರಿಗಳಿಗೆ ಯುವಕರು ಭಾಗವಹಿಸುವುದಿಲ್ಲ ಬದಲಾಗಿ ಆರ್ಕೇಷ್ಟ್ರ, ನಾಟಕ, ವಿವಿಧ ಬಗೆಯ ಮನರಂಜನೆಗಳಿದ್ದರೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಇದೊಂದು ಪಲ್ಲಟದ ಪ್ರಮುಖ ಅಂಶವಾಗಿದೆ. ಶ್ರೀಮಠದಲ್ಲೂ ಸಹ ಪರಂಪರಾಗತವಾಗಿ ನಡೆಯಿಸಿಕೊಂಡು ಬರುತ್ತಿರುವ ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಆಧುನಿಕವಾಗಿ ಆಕರ್ಷಿತಗೊಳ್ಳುತ್ತಿರುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಸಂಘಸಂಸ್ಥೆ, ಶಾಲಾ ಕಾಲೇಜುಗಳ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ. ಇಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರೇಕ್ಷಕರು ಭಾಗವಹಿಸುತ್ತಾರೆ. ಕಾಲಘಟ್ಟದ ಸನ್ನಿವೇಶಕ್ಕೆ ಹೊಂದಿಕೆಯಾಗುವಂತೆ ಪರಿವರ್ತನೆಯಾಗಿರುವುದನ್ನು ಗಮನಿಸಬಹುದಾಗಿದೆ.

4.6 ಶ್ರೀ ಮಠದ ಶೈಕ್ಷಣಿಕ ಕೊಡುಗೆ

ಶೃಂಗೇರಿಯ ಶ್ರೀ ಮಠವು ಧಾರ್ಮಿಕ ವಿಧಿ ವಿಧಾನವನ್ನೇ ಪ್ರಧಾನವಾಗಿಟ್ಟುಕೊಂಡು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ವೇದಾಧ್ಯಯನದ ಜೊತೆಗೆ ಯಜ್ಞ, ಯಾಗ, ಹೋಮ ಹವನಾದಿಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಆಧ್ಯಾತ್ಮಿಕ ನೆಲೆಯಲ್ಲಿ ಬೌದ್ಧಿಕ ಶಿಕ್ಷಣವನ್ನು ಸಕಲ ಸದ್ಭಕ್ತರಿಗೂ ನೀಡುತ್ತಿದೆ. ನಾಡಿನ ಉಳಿದೆಲ್ಲ ಮಠ ಮಾನ್ಯಗಳಂತಿಲ್ಲದೆ ತನ್ನದೇ ಆದ ವಿಶೇಷ ಹಿರಿಮೆ, ಮಹತ್ವವನ್ನು ಹೊಂದಿ ಸಾಗಿಬಂದಿದೆ. ಶ್ರೀಮಠವಾಗಲಿ ಅಥವಾ ಸ್ವಾಮೀಜಿಯವರಾಗಲಿ ಧಾರ್ಮಿಕ ಕ್ಷೇತ್ರದ ಹೊರತಾಗಿ ಅಗ್ಗದ ಜನಪ್ರಿಯತೆಯನ್ನು, ಪ್ರಚಾರಪ್ರಿಯತೆಯನ್ನು ಇಷ್ಟಪಡುವುದಿಲ್ಲ. ಧಾರ್ಮಿಕೇತರ ವೇದಿಕೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ. ರಾಜಕೀಯ ಸಲಹೆ ಸೂಚನೆ ನೀಡುವುದಾಗಲಿ ಸಂಘರ್ಷಗಳೇನಾದರು ಸಂಭವಿಸಿದರೆ ಮಧ್ಯ ಪ್ರವೇಶಸುವುದಾಗಲಿ ಇಲ್ಲ.

"ಸಮಾಜ ಸುಧಾರಣೆ, ಅಭಿವೃದ್ಧಿ, ಪರಿಹಾರೋಪಾಯ ಮೊದಲಾದವುಗಳನ್ನು ಸರ್ಕಾರ, ಸಂಘ ಸಂಸ್ಥೆಗಳು ಮಾಡಬೇಕೆ ವಿನಾ ಧಾರ್ಮಿಕ ಮಠಮಾನ್ಯಗಳಲ್ಲ, ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿ ಮನುಷ್ಯರನ್ನು ಸತ್ಸಂಗದಲ್ಲಿ, ಧರ್ಮಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡಿ ವಿಧಿ, ನಿಯಮಗಳನ್ನು ಪರಿಪಾಲಿಸುವಂತೆ ಪ್ರೇರೇಪಿಸಿ ಮನಶ್ಶಾಂತಿಯನ್ನುಂಟು ಮಾಡುವ ಕಾರ್ಯವನ್ನು ಮಾಡಿದರೆ ಸರ್ವರ ಕಲ್ಯಾಣವಾಗಿ ಜಗತ್ತಿಗೆ ಶ್ರೇಯಸ್ಸಾಗುತ್ತದೆ. ಮನಶ್ಶಾಂತಿ ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸವನ್ನು ಧರ್ಮೀಯರಿಗೆ ಭಗವಂತ ಅನುಗ್ರಹಿಸುತ್ತಾನೆ" ಎಂದು ಶ್ರೀ ಮಠದ ಮಠಾಧೀಶರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳು ಅನುಗ್ರಹ ಭಾಷಣದ ಸಂದರ್ಭದಲ್ಲಿ ತಮ್ಮ ಅಭಿಪ್ರಾಯವನ್ನು ಹೊರಹಾಕಿದ್ದಾರೆ.

ಸದ್ವಿದ್ಯಾ ಸಂಜೀವಿನಿ ಸಂಸ್ಕೃತ ಪಾಠಶಾಲೆಯು ಬಹಳ ವರ್ಷಗಳಿಂದ ಇದ್ದು ನಾಡಿನ ಹಾಗೂ ದೇಶದ ಬೇರೆ ಬೇರೆ ಭಾಗದಿಂದ ಬಂದ ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೊಡಗುತ್ತಿದ್ದಾರೆ. ಶೃಂಗೇರಿಯಂತಹ ಚಿಕ್ಕ ತಾಲ್ಲೂಕಿನಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಮಹಿಳೆಯರು ಶಿಕ್ಷಣ ಪಡೆಯುವುದು ಕಷ್ಟಸಾಧ್ಯವಾದ ಹಿನ್ನಲೆಯನ್ನು ಗಮನಿಸಿ ಶೃಂಗೇರಿಯಲ್ಲಿ ಶ್ರೀ ಅಭಿನವ ವಿದ್ಯಾತೀರ್ಥ ಬಾಲಿಕಾ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು. ಈಗ ಈ ಪ್ರೌಢಶಾಲೆಯಲ್ಲಿ ಬಾಲಕರಿಗೂ ವ್ಯಾಸಂಗ ಮಾಡುವ ಅವಕಾಶ ದೊರೆತಿದೆ. ಕೇಂದ್ರ ಸರ್ಕಾರದ ಶ್ರೀ ರಾಜೀವಗಾಂಧಿ ಸಂಸ್ಕೃತ ವಿದ್ಯಾಪೀಠ ಪ್ರಾರಂಭಗೊಳ್ಳಲು ಶ್ರೀಮಠ ಪ್ರಮುಖ ಪಾತ್ರ ವಹಿಸಿದೆ. ದೇಶದ ನಾನಾ ಭಾಗದಿಂದ ವಿದ್ಯಾರ್ಥಿಗಳು ಬಂದು ಉನ್ನತ ವ್ಯಾಸಂಗ ಮಾಡಲು ಸಹಕಾರಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಶೃಂಗೇರಿ, ಕೊಪ್ಪ, ಎನ್.ಆರ್.ಪುರ, ತಾಲ್ಲೂಕುಗಳ ಕೆಲವು ಶಾಲಾಕಾಲೇಜು ಮಕ್ಕಳಿಗೆ ಮಧ್ಯಾಹ್ನದ ಭೋಜನವನ್ನು ಒದಗಿಸಿಕೊಡುತ್ತಿದೆ. ಇದರಿಂದ ಪ್ರತಿದಿನ ಆರುಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ಸಿಗುತ್ತಿದೆ. ಶಾಲಾಕಾಲೇಜು, ವಿವಿಧ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆ, ಧಾರ್ಮಿಕ ಕಾರ್ಯಕ್ರಮ ಹಾಗೂ ಇತರ ಜನೋಪಯೋಗಿ ಕಾರ್ಯಕ್ರಮಗಳಿಗೆ ಭೋಜನ ಸೌಲಭ್ಯ ಅಥವಾ ಧವಸಧಾನ್ಯಗಳನ್ನು ನೀಡಿ ಪ್ರೋತ್ಸಾಹಿಸುತ್ತಾ ಬರುತ್ತಿದೆ. ಶ್ರೀಮಠದ ಉದ್ಯೋಗದಲ್ಲಿರುವ ಅರ್ಚಕರು ಹಾಗೂ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ಸಹಕಾರ ನೀಡಿ ಪ್ರೋತ್ಸಾಹಿಸಿದೆ. ಬಡ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಆರ್ಥಿಕ ಸಹಕಾರವನ್ನು ನೀಡುತ್ತಿದೆ. [45]

ಇತ್ತೀಚೆಗೆ ಶ್ರೀ ಶಾರದಾ ನರ್ಸಿಂಗ್ ಕಾಲೇಜನ್ನು ಪ್ರಾರಂಭಿಸಿದ್ದು ನಾಡಿನ ಬೇರೆಬೇರೆ ಭಾಗದ ವಿದ್ಯಾರ್ಥಿಗಳು ನರ್ಸಿಂಗ್ ತರಬೇತಿ ಪಡೆಯಲು ಅನುಕೂಲವಾಗಿದೆ. ನರ್ಸಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಕೆಲವು ಉಚಿತ ಸೌಲಭ್ಯಗಳಿದ್ದು ಕಡಿಮೆ ಹಣದಲ್ಲಿ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿದೆ. ಉದ್ಯೋಗಖಾತ್ರಿ ಯೋಜನೆಯಲ್ಲಿ ತರಬೇತಿ ನೀಡುತ್ತಿರುವುದು ಶೃಂಗೇರಿಯಂತಹ ಚಿಕ್ಕ ತಾಲ್ಲೂಕಿಗೆ ದೊಡ್ಡ ಕೊಡುಗೆಯಾಗಿದೆ. ಶೃಂಗೇರಿಯ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ

ಸ್ಮಾರಕ ಕಾಲೇಜು ಕ್ರಿ.ಶ. 1965ರಲ್ಲಿ ಶ್ರೀ ಭಾರತೀ ವಿದ್ಯಾಸಂಸ್ಥೆ ಹಾಕೂ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಮಣಿಪಾಲದ ಸಹಭಾಗಿತ್ವದಲ್ಲಿ ಪ್ರಾರಂಭಗೊಂಡರೂ ಶ್ರೀಮಠದ ಕೃಪಾಶೀರ್ವಾದ ಸದಾ ಸಂಸ್ಥೆಯ ಮೇಲಿದೆ. ವಿದ್ಯಾರ್ಥಿಗಳಿಗೆ ಭೋಜನ ವ್ಯವಸ್ಥೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಕಾರ ಹಾಗೂ ಇತರೆ ಸೌಲಭ್ಯಗಳನ್ನು ನೀಡಿ ಪ್ರೋತ್ಸಾಹಿಸುತ್ತಾ ಬಂದಿದೆ.

4.7 ಆಡಳಿತಾತ್ಮಕವಾಗಿ ಶ್ರೀಮಠ:

ಶ್ರೀಮಠದಿಂದ ಇಡೀ ತಾಲ್ಲೂಕಿನ ವ್ಯವಸ್ಥಾ ಮೋಜಣಿ (ಸರ್ವೆ ಮತ್ತು ಸೆಟಲ್‌ಮೆಂಟ್) ಮಾಡಿಸಿ ಪ್ರತಿಯೊಬ್ಬರ ಹಕ್ಕುಗಳನ್ನು ದಾಖಲಿಸಲಾಯಿತು. ರೆಕಾರ್ಡ್ ಆಫ್ ರೈಟ್ಸ್ ಅನ್ನು ಜಾರಿಗೆ ತಂದ ಮೊದಲ ತಾಲ್ಲೂಕುಗಳಲ್ಲಿ ಶೃಂಗೇರಿಯು ಒಂದು. ಆಗಿನ ಮೈಸೂರು ಸರ್ಕಾರದ ನಿಯಂತ್ರಣದಲ್ಲಿ ಅಡಮಾನ ಬ್ಯಾಂಕ್ ಕಾರ್ಯ ನಡೆಸುತ್ತಿತ್ತು. ಕ್ರಿ.ಶ.1884ರಲ್ಲಿ ಶೃಂಗೇರಿಯಲ್ಲಿ ಪುರಸಭೆಯನ್ನು ನಾಮಕರಣಗೊಂಡ ಸದಸ್ಯರ ಮೂಲಕ ಪ್ರಾರಂಭಿಸಲು ಶ್ರೀಮಠವು ಸರ್ಕಾರಕ್ಕೆ ಯೋಜನೆ ಸಲ್ಲಿಸಿತು. ಸರ್ಕಾರವು ಬೇರೆ ತಾಲ್ಲೂಕುಗಳಲ್ಲಿದ್ದಂತೆ ಪುರಸಭೆಯನ್ನು ಮಂಜೂರು ಮಾಡಿತಾದರೂ ಶ್ರೀಮಠದ ಡೆಪ್ಯೂಟಿ ಅಮಲ್ದಾರ್‌ರ ನಿರ್ದೇಶನದಂತೆ ನಡೆಯಲು ಏರ್ಪಡಿಸಿತು. 1952 ರಲ್ಲಿ ಮೊದಲ ಸಾರ್ವಜನಿಕ ಅಧ್ಯಕ್ಷರು ಚುನಾಯಿತರಾದದು. ಶ್ರೀಮಠವು ವಸೂಲು ಮಾಡುತ್ತಿದ್ದ 'ಸಾಯರ್' ಸ್ಥಾನದಲ್ಲಿ 'ಆಕ್ಟ್ರಾಯ್' ವಸೂಲಿ ಕ್ರಿ.ಶ. 1893ರಿಂದ ಪ್ರಾರಂಭವಾಯಿತು. ಈ ಆದಾಯದಲ್ಲಿ ಶ್ರೀಮಠ ಮತ್ತು ಪುರಸಭೆಗಳಿಗೆ ಅರ್ಧರ್ಧ ಪಾಲು ಇರುತ್ತಿತ್ತು.

ಕ್ರಿ.ಶ.1903ರ ವರೆಗೆ ಶ್ರೀಮಠವೇ ಬೇರೆ ತಾಲ್ಲೂಕುಗಳಲ್ಲಿದ್ದಂತೆ ಕಂದಾಯ ವಸೂಲು ಮಾಡುತ್ತಿತ್ತು. ಆ ವರ್ಷ ತಾಲ್ಲೂಕು ಬೋರ್ಡ್ ಸ್ಥಾಪನೆಗೊಂಡು 1927ರ ವರೆಗೆ ಕಾರ್ಯ ಮಾಡಿತು. 1929ರಲ್ಲಿ ಸಂಪರ್ಕ, ಪೊಲೀಸ್, ನ್ಯಾಯಾಲಯ, ವೈದ್ಯಕೀಯ ಕ್ಷೇತ್ರಗಳನ್ನು ಮೈಸೂರು ಸರ್ಕಾರ ಜಿಲ್ಲಾ ಬೋರ್ಡಿಗೆ ವಹಿಸಿಕೊಟ್ಟಿತು. ಜಹಗೀರು ಇದ್ದಾಗ ಶೃಂಗೇರಿ ತಾಲೂಕಿನ ಆಡಳಿತ ವ್ಯವಸ್ಥೆ ಹೇಗಿತ್ತು ಎಂಬುದಕ್ಕೆ 1946ರ ಜನಗಣತಿಯ ಅಂಕಿ ಅಂಶಗಳು ಅಧ್ಯಯನಾರ್ಹವಾಗಿದೆ.

ಜಹಗೀರಿನ ಆಡಳಿತವಿದ್ದಾಗಲೇ ಶೃಂಗೇರಿಯಲ್ಲಿ ಪ್ರೌಢಶಾಲೆ ಆರಂಭವಾಯಿತು. ಶಾಲೆಯನ್ನು ಪುರಸಭೆಯು ನಡೆಸುತ್ತಿದ್ದು ಸ್ಥಳವನ್ನು ಮುಫತ್ತಾಗಿ ನೀಡಿದ್ದಲ್ಲದೇ ಶ್ರೀಮಠದಿಂದ 28,000/- ರೂಗಳ ಅನುದಾನವನ್ನು ಕೊಡಲಾಗಿತ್ತು. ಶ್ರೀಮಠದ ಅಧಿಕಾರಿಗಳು ಅಧ್ಯಕ್ಷರಾಗಿದ್ದು ನಿಯಮಿತ ಪಾಲುಗಾರಿಕೆಯ ಶ್ರೀ ಶಾರದಾ ಬ್ಯಾಂಕ್ ಲಿ. ಪ್ರಾರಂಭವಾಗಿದ್ದು ಜಹಗೀರಿನ ಕಾಲದಲ್ಲೇ, ತರೀಕೆರೆ, ಜಯಪುರ, ಕೊಪ್ಪ ಮತ್ತು ಕಳಸಗಳಲ್ಲಿ ಶಾಖೆಗಳನ್ನು ಹೊಂದಿದ್ದ ಈ ಬ್ಯಾಂಕ್ ಕ್ರಿ.ಶ. 1960 ರಲ್ಲಿ ಕರ್ನಾಟಕ ಬ್ಯಾಂಕಿನಲ್ಲಿ ವಿಲೀನಗೊಂಡಿತು. ಜಹಗೀರಿನ ಆಡಳಿತದಲ್ಲಿ ಸಹಕಾರಾಂದೋಲನಕ್ಕೂ ಗಮನ ಹರಿಸಿ ಕ್ರಿ.ಶ. 1914ರಲ್ಲಿ ಸಹಕಾರ ಸಂಘವೊಂದು ಆರಂಭವಾಯಿತು. ತಾಲ್ಲೂಕು ಮಟ್ಟದಲ್ಲಿ

ಆರಂಭವಾದ ಸಹಕಾರ ಸಂಘ ಇದೇ ಮೊದಲನೆಯದು.

ಕ್ರಿ.ಶ.1959ರಲ್ಲಿ ಶೃಂಗೇರಿ ಜಹಗೀರಿ ರದ್ಧತಿ ಶಾಸನ ಬಂದ ನಂತರ ಶೃಂಗೇರಿ ತಾಲ್ಲೂಕಿನ ಆಡಳಿತ ಸಂಪೂರ್ಣವಾಗಿ ಸರ್ಕಾರದ ನಿಯಂತ್ರಣಕ್ಕೆ ಬಂತು. ಕ್ರಿ.ಶ. 1960–61ರಲ್ಲಿ ಕೊಪ್ಪ ತಾಲ್ಲೂಕಿಗೆ ಸೇರಿದ ಕಿಗ್ಗ ಹೋಬಳಿಯನ್ನು ಶೃಂಗೇರಿ ತಾಲ್ಲೂಕಿಗೆ ಸೇರಿಸಲಾಯಿತು. ಹೀಗೆ ಎರಡು ಹೋಬಳಿಯನ್ನು ಹೊಂದಿರುವ ಈ ತಾಲ್ಲೂಕು ರಾಜ್ಯದಲ್ಲಿಯೇ ಅತಿ ಚಿಕ್ಕ ತಾಲ್ಲೂಕಾಗಿದೆ. ಸರ್ಕಾರದ ನಿಯಂತ್ರಣಕ್ಕೆ ಬಂದ ಮೇಲೆ ಈ ತಾಲ್ಲೂಕಿನ ಆಡಳಿತ, ಕಾನೂನು, ಪ್ರಜಾತಂತ್ರ ವ್ಯವಸ್ಥೆಗೆ ಒಳಪಟ್ಟು ನಡೆಯುತ್ತಿದೆ.[46]

ರಸ್ತೆಗಳು ಮೈಲಿಗಳಲ್ಲಿ	ಉದ್ದ ಮೈಲಿಗಳಲ್ಲಿ	ಚದರ ವಿಸ್ತೀರ್ಣ	ನೂರು ಚದರ ಮೈಲಿ ವಿಸ್ತೀರ್ಣಕ್ಕೆ ಮೈಲಿಗಳು
ಶೃಂಗೇರಿ ಜಹಗೀರು	22	44	50
ಕಡೂರು ಜಿಲ್ಲೆ	764	2783	28
ಕ.ಮಾದರಿ ಜಿಲ್ಲೆ	1287	3157	41

ವಿದ್ಯಾಭ್ಯಾಸ ಪ್ರಾಥಮಿಕ ಶಾಲೆಗಳು

ಶಾಲೆ	ಜನಸಂಖ್ಯೆ	ಪುರುಷ	ಸ್ತ್ರೀ	ಒಟ್ಟು
ಶೃಂಗೇರಿ	566	74	52	64
ಕೊಪ್ಪ ತಾ	679	50	36	44
ರಾಜ್ಯ ಸರಾಸರಿ	884	77	36	57

ಮಾಧ್ಯಮಿಕ ಶಾಲೆ

ಶೃಂಗೇರಿ	9000	29	10	20
ಕೊಪ್ಪ ತಾ	17000	13	4.1	9.6
ರಾಜ್ಯ ಸರಾಸರಿ	14634	15.8	4.2	10.2

ಸಾಕ್ಷರತೆ: [47]

ಶೃಂಗೇರಿ ನಗರ	57.3%
ರಾಜ್ಯನಗರ ಸರಾಸರಿ	39.6%
ರಾಜ್ಯ ಒಟ್ಟು ಸರಾಸರಿ	20.6%
ಶೃಂಗೇರಿ ತಾ	35.7%
ರಾಜ್ಯ ಗ್ರಾಮೀಣ ಸರಾಸರಿ	14.6%

ಕೊನೆ ಟಿಪ್ಪಣಿ

1 ಶಂಕರಪ್ಪಗೌಡ ಕೆ.ಎನ್., ಹೆಚ್ಚುಂದ, ಒಕ್ಕಲಿಗ.
2 ವೀರಪ್ಪಗೌಡ ಹೆಚ್.ಸಿ., ಚಾರಿತ್ರಿಕ ಹಿನ್ನೆಲೆಯಲ್ಲಿ ಶೃಂಗೇರಿ ಮಠದ ಆರ್ಥಿಕ ಅಧ್ಯಯನ, ಪುಟ: 33
3 ಸುಬ್ಬಣ್ಣ ಹೆಗ್ಗಡೆ, ಶಿಡ್ಲುಮನೆ., ಒಕ್ಕಲಿಗ.
4 ಶಂಕರಪ್ಪಗೌಡ ಕೆ.ಎನ್., ಹೆಚ್ಚುಂದ, ಒಕ್ಕಲಿಗ.
5 ವೀರಪ್ಪಗೌಡ ಹೆಚ್.ಸಿ., ಚಾರಿತ್ರಿಕ ಹಿನ್ನೆಲೆಯಲ್ಲಿ ಶೃಂಗೇರಿ ಮಠದ ಆರ್ಥಿಕ ಅಧ್ಯಯನ. ಪುಟ: 34
6 ಅದೇ; ಪುಟ:35
7 ವೀರಪ್ಪಗೌಡ ಹೆಚ್.ಸಿ.(ವಿ.ಜಿ), ಹಣ ಹಾಗೂ ಹಣಕಾಸು ಪದ್ಧತಿ. ಪುಟ:90–94
8 ಶಾಸ್ತ್ರಿ ಎ.ಕೆ., ಶೃಂಗೇರಿ ಧರ್ಮ ಸಂಸ್ಥಾನ. ಪುಟ: 143–144
9 ಅದೇ; ಪುಟ: 143
10 ಹೂವಯ್ಯ ಆಚಾರ್ ಕೆ.ಹೆಚ್., ಕಲ್ಲಾಳಿ, ವಿಶ್ವಕರ್ಮ
11 ಸುಬ್ಬಣ್ಣ, ಕೆರೆಮನೆ. ಮಡಿವಾಳ
12 ದಿ ಆರ್.ಎಸ್.ಡಿ.ಎ. ಕೆ.ಎಸ್. ಯುಜಿಸಿ 2009. ಪುಟ: 197, 198, 199
13 ವೀರಪ್ಪಗೌಡ ಹೆಚ್.ಸಿ., ಚಾರಿತ್ರಿಕ ಹಿನ್ನೆಲೆಯಲ್ಲಿ ಶೃಂಗೇರಿ ಮಠದ ಆರ್ಥಿಕ ಅಧ್ಯಯನ, ಪುಟ: 44
14 ಮೈ.ಪು.ವ. 1924, ಪುಟ: 68–69
15 ಶಾಸ್ತ್ರಿ ಎ.ಕೆ., ದಿ ರೆ.ಶೃ.ಮ.ರಿ.ಕೆ.ಕೆ.ಮ್ಯೂ.ಅ.ಹಿ.ರಿ.ಬ್ಯೂ., ಕೆಳದಿ 2001 ಪುಟ 59–60
16 ಅದೇ; ಪುಟ:35–36
17 ಅದೇ; ಪುಟ:33–34
18 ಶಾಸ್ತ್ರಿ ಎ.ಕೆ., ಶೃಂಗೇರಿ ಧರ್ಮಸಂಸ್ಥಾನ, ಪುಟ: 177
19 ಅದೇ; ಪುಟ: 178
20 ಅದೇ
21 ಶಾಸ್ತ್ರಿ ಎ.ಕೆ., ದಿ ರೆ.ಶೃ.ಮ.ರಿ.ಕೆ.ಕೆ.ಮ್ಯೂ.ಅ.ಹಿ.ರಿ.ಬ್ಯೂ., ಕೆಳದಿ 2001 ಪುಟ ಪುಟ 1–2
22 ಅದೇ; ಪುಟ 2–7
23 ಶಾಸ್ತ್ರಿ ಎ.ಕೆ., ಶೃಂಗೇರಿ ಧರ್ಮಸಂಸ್ಥಾನ, ಪುಟ: 180
24 ಅದೇ
25 ಅದೇ
26 ವೀರಪ್ಪಗೌಡ ಹೆಚ್.ಸಿ., ಚಾರಿತ್ರಿಕ ಹಿನ್ನೆಲೆಯಲ್ಲಿ ಶೃಂಗೇರಿ ಮಠದ ಆರ್ಥಿಕ ಅಧ್ಯಯನ, ಉ

27 ಶಾಸ್ತ್ರಿ ಎ.ಕೆ., ದಿ ರೆ.ಶ್ರೀ.ಮು.ರಿ.ಕೆ.ಕೆ.ಮ್ಯೂ.ಅ.ಪಿ.ರಿ.ಬ್ಯೂ., ಕೆಳದಿ 2001 ಪುಟ 49–50

28 ಶಾಸ್ತ್ರಿ ಎ.ಕೆ., ಶೃಂಗೇರಿ ಧರ್ಮಸಂಸ್ಥಾನ, ಪುಟ: 216

29 ಅದೇ; ಪುಟ ಪುಟ: 182

30 ಅದೇ; ಪುಟ: 183

31 ಅದೇ; ಪುಟ: 184

32 ಅದೇ; ಪುಟ:182–183

33 ರಾಮಚಂದ್ರ ಎಸ್.ಜಿ., ಶೃಂಗೇರಿ ವಿದ್ಯಾರಣ್ಯಪುರ ಪುಟ:183–184

34 ಶಾಸ್ತ್ರಿ ಎ.ಕೆ., ಶೃಂಗೇರಿ ಧರ್ಮಸಂಸ್ಥಾನ, ಪುಟ: 185

35 ಅದೇ; ಪುಟ: 188

36 ಅದೇ; ಪುಟ:195

37 ಅದೇ; ಪುಟ:195–196

38 ಅದೇ; ಪುಟ: 181

39 ಅದೇ; ಪುಟ: 213,214,215

40 ಅದೇ; ಪುಟ: 196

41 ಎ.ಆರ್.ಎಂ.ಎ.ಒ.ವಾರ್ಷಿಕ ವರದಿ, ಮೈಸೂರು ಪತ್ರಾಗಾರ ಮತ್ತು ಪ್ರಾಚ್ಯವಸ್ತು ಇಲಾಖೆ, ಪಿ.ಆರ್.ಎಮ್.ಎಡಿ 1916, ಪುಟ: 71

42 ಸುಬ್ಬಣ್ಣ, ಕರೆಮನೆ, ಮಡಿವಾಳ

43 ಚಿನ್ನಮ್ಮ, ಕುಂತೂರು, ವಿಶ್ವಕರ್ಮ

44 ಕಾಡುಕುಂಬಾರ, ವೈಕುಂಠಪುರ, ಕುಂಬಾರ

45 ವೆಂಕಟರಮಣ ಭಟ್, ವೈಕುಂಠಪುರ. ಬ್ರಾಹ್ಮಣ

46 ಗಿರಿಧರ ಶಾಸ್ತ್ರೀ ಸಿ.ವಿ., ಭಾಮತಿ ವಾರ್ಷಿಕ ಸಂಚಿಕೆ ಶ್ರೀ ಜೆ.ಸಿ.ಬಿ.ಎಂ.ಕಾಲೇಜು ಶೃಂಗೇರಿ. 2005–06 ಪುಟ: 94,95

47 ಅದೇ

ಅಧ್ಯಾಯ – 5

ಉಪಸಂಹಾರ

ಉಪಸಂಹಾರ

ಭಾರತೀಯ ಸಂಸ್ಕೃತಿಯು ವಿಶ್ವಕ್ಕೆ ಮಾದರಿಯಾಗಿದ್ದು, ಸ್ಥಿರವಾದ ತಳಹದಿಯ ಮೇಲೆ ಈಗಲೂ ಮುಂದುವರೆಯುತ್ತಿದೆ. ವಿಶ್ವ ಮನ್ನಣೆಗೆ ಭಾರತ ಕಾರಣವಾಗಲು ಇಲ್ಲಿಯ ಸಂಸ್ಕೃತಿಯೇ ಪ್ರಧಾನ. ಆಧುನಿಕತೆಯ ಭರಾಟೆಯಲ್ಲಾದ ಬದಲಾವಣೆಯಿಂದಾಗಿ ನಗರದಲ್ಲಿ ಹೆಚ್ಚು ಪರಿವರ್ತನೆಯಾಗಿದ್ದು ಗ್ರಾಮೀಣ ಭಾಗದಲ್ಲಿ ಮೂಲ ಸ್ವರೂಪಕ್ಕೆ ಹತ್ತಿರದಲ್ಲಿರುವುದು ಕಂಡುಬರುತ್ತದೆ. ಇಂದಿಗೂ ಸಂಸ್ಕೃತಿಯ ಪೋಷಣೆ ಹಾಗೂ ರಕ್ಷಣೆ ಗ್ರಾಮೀಣ ಪ್ರದೇಶದಲ್ಲಿದೆ. ಸಂಸ್ಕೃತಿಯ ಅಧ್ಯಯನದ ಮೂಲಕ ಆಗಿನ ಜನಪದೀಯ ಸೊಗಡನ್ನು, ಆಚಾರ ವ್ಯವಹಾರ, ನಂಬಿಕೆ ಮೊದಲಾದವುಗಳನ್ನು ಅರಿಯಬಹುದಾಗಿದೆ. ಪ್ರಸ್ತುತ ಸನ್ನಿವೇಶಕ್ಕೆ ಅದರ ಕೊಡುಗೆಯನ್ನು ತಿಳಿಯಬಹುದಾಗಿದೆ. "ಭಾರತದ ಹಳ್ಳಿಗಳು ಶೀಘ್ರ ಪ್ರಗತಿಯಿಂದ ಬದಲಾಗುತ್ತಿರುವ ಈ ಕಾಲದಲ್ಲಿ ಕೂಲಂಕಷವಾಗಿ, ಶಾಸ್ತ್ರೋಕ್ತವಾಗಿ ಅಭ್ಯಸಿಸಿ ಅವುಗಳ ವ್ಯಕ್ತಿತ್ವವನ್ನು ರೂಪಿಸುವ ಅವಶ್ಯಕತೆ ಎಂದಿಗಿಂತಲೂ ಇಂದು ಹೆಚ್ಚಾಗಿದೆ" ಎಂದು ಡಾ। ಹಿರೇಮಲ್ಲೂರ್ ಈಶ್ವರನ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಹಿಂದೆ ಗ್ರಾಮ ಅಥವಾ ಹಳ್ಳಿಗಳು ಸ್ವತಂತ್ರವಾಗಿದ್ದು, ಆಚಾರ, ವ್ಯವಹಾರ, ನಂಬಿಕೆ, ವಿನಿಮಯ ಮೊದಲಾದವುಗಳು ತಮ್ಮ ಪರಿಧಿಯೊಳಗೇ ನಡೆಯುತ್ತಿತ್ತು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಇತರ ಹಳ್ಳಿಗಳ ಸಂಪರ್ಕವನ್ನು, ನಗರ ಸಂಪರ್ಕವನ್ನು ಪಡೆಯುತ್ತಿದ್ದರು. ಕೃಷಿ ಚಟುವಟಿಕೆಯನ್ನು ಹೊಟ್ಟೆಪಾಡಿಗಾಗಿ, ಅಗತ್ಯತೆಗಾಗಿ ಮಾಡುತ್ತಿದ್ದರು. ಬರಬರುತ್ತಾ ಆಧುನಿಕತೆಯ ಪ್ರಭಾವದಿಂದಾಗಿ ಕ್ಷೇತ್ರ ವಿಶಾಲವಾಯಿತು ಸಂಪರ್ಕ ವಿಸ್ತರಿಸಿತು. ಸಂಸ್ಕೃತಿಯಲ್ಲೂ ವಿನಿಮಯವಾಯಿತು. ಹೊಸ ಸೇರ್ಪಡೆ ಮತ್ತು ಮಾರ್ಪಾಡುಗಳಾದವು. ಮೂಲ ಸಂಸ್ಕೃತಿಯ ಜೊತೆ ಆಧುನಿಕತೆಯ ಘರ್ಷಣೆ ನಿರಂತರವಾಗಿ ನಡೆಯತೊಡಗಿದೆತು. ಆಧುನಿಕತೆಯ ಪ್ರಭಾವವೂ ತೀವ್ರತರವಾಗಿದ್ದು ಸಂಸ್ಕೃತಿಯ ಅಪ್ಪಟತೆಯ ಬುಡವನ್ನೇ ಅಲ್ಲಾಡಿಸಲಾರಂಭಿಸಿತು.

ಭಾರತದ ಗ್ರಾಮೀಣ ಬದುಕನ್ನು ಅಧ್ಯಯನ ಮಾಡಿದರೆ ಮೇಲು ನೋಟಕ್ಕೆ ಹೋಲಿಕೆಗಳು ಕಂಡುಬಂದರೂ ಪ್ರತಿಯೊಂದು ಗ್ರಾಮದಲ್ಲೂ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವುದು ಕಂಡು ಬರುತ್ತದೆ. ಈ ನೆಲೆಯಲ್ಲಿ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಅಧ್ಯಯನವನ್ನು ಮಾಡಲಾಗಿದ್ದು ಸ್ವಾತಂತ್ರ್ಯ ಪೂರ್ವ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಸನ್ನಿವೇಶ ಹಾಗೂ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಾದ ಬದಲಾವಣೆಯನ್ನು ದಾಖಲಿಸಲಾಗಿದೆ.

ಭಾರತೀಯ ಸಂಸ್ಕೃತಿಯು ವೇದ, ಉಪನಿಷತ್, ಗೀತೆ, ಮಹಾಭಾರತ, ರಾಮಾಯಣ ಮೊದಲಾದವುಗಳ ನೆಲೆಯಲ್ಲಿ ರೂಪುಗೊಂಡಿರುವುದರಿಂದ, ಭಾರತದ ಯಾವುದೇ ಭಾಗದಲ್ಲಿ ಆಚರಣೆ, ನಂಬಿಕೆ, ಶಾಸ್ತ್ರ ಮೊದಲಾದವುಗಳ ಅಂತಃಸತ್ವ ಒಂದೇ ಆಗಿರುವುದು ಕಂಡುಬರುತ್ತದೆ. ಆಯಾಯ ಪ್ರಾಂತ್ಯದ ಸ್ಥಳೀಯ ಪ್ರಭಾವದಿಂದಾಗಿ ಕೆಲವಷ್ಟು ಮಾರ್ಪಾಡುಗಳಾಗಿದ್ದರೂ ಮೂಲ ಸೊಗಡು ಹಾಗೇ ಉಳಿದಿದೆ. ಶೃಂಗೇರಿಯು ಇದಕ್ಕೆ ಹೊರತಾಗಿಲ್ಲ. ಅದ್ವೈತಧರ್ಮ ಸಂಸ್ಥಾಪಕರಾದ

ಶ್ರೀ ಶಂಕರಾಚಾರ್ಯರು ದಕ್ಷಿಣಾವಮ್ನಾಯ ಶ್ರೀ ಶಾರದಾ ಪೀಠವನ್ನು ಶೃಂಗೇರಿಯಲ್ಲಿ ಸ್ಥಾಪಿಸಿರುವುದರಿಂದ ಧಾರ್ಮಿಕ ಭದ್ರಾಬುನಾದಿಯ ಅಸ್ತಿತ್ವದಲ್ಲಿ ಇಲ್ಲಿನ ಸಂಸ್ಕೃತಿ ಹೊರ ಹೊಮ್ಮಿರುವುದು ಕಂಡು ಬಂದಿದೆ. ಜೈನಧರ್ಮದ ಪ್ರಭಾವ ಈ ಭಾಗದ ಮೇಲಾಗಿರುವುದರಿಂದ ಅದರ ಪ್ರಭಾವವನ್ನು ಸಹ ಇಲ್ಲಿ ಕಾಣಬಹುದಾಗಿದೆ. ಈ ಪ್ರದೇಶದ ಮೇಲೆ ವಿವಿಧ ಜಾತಿ ಹಾಗೂ ಮತೀಯರ ಪ್ರಭಾವ ಆಗಿದ್ದರೂ ಭಾರತೀಯ ಸನಾತನ ಸಂಸ್ಕೃತಿಯ ನೆಲೆಯಲ್ಲಿ ಸಂಸ್ಕೃತಿ ನಿಂತಿರುವುದು ಕಾಣುತ್ತದೆ.

ಸಾಂಸ್ಕೃತಿಕ ಅಧ್ಯಯನವು ವಿಶಾಲವ್ಯಾಪ್ತಿಯನ್ನು ಹೊಂದಿರುವುದರಿಂದ ಸ್ವಾತಂತ್ರ್ಯೋತ್ತರ ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಪಲ್ಲಟಗಳ ಅಧ್ಯಯನವು ನಿಯಮಿತ ಚೌಕಟ್ಟಿನೊಳಗೆ ಮಾಡಲಾಗಿದೆ. ಹೆಚ್ಚಾಗಿ ಸಾಂಸ್ಕೃತಿಕ ಪಲ್ಲಟವು ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಆಗಿರುವುದರಿಂದ ಆರು ದಶಕದಿಂದೀಚೆಗಿನ ಅಂಶಗಳನ್ನು ಪ್ರಧಾನವಾಗಿ ನೋಡಲಾಗಿದೆ. ಸ್ವಾತಂತ್ರ್ಯಪೂರ್ವದ ಸಾಂಸ್ಕೃತಿಕ ಸ್ಥಿತಿ, ಸ್ವಾತಂತ್ರ್ಯಾನಂತರದ ಪರಿವರ್ತನೆಯನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಪಲ್ಲಟಕ್ಕೆ ಕಾರಣವಾದ ಅಂಶಗಳನ್ನು ಗುರುತಿಸಿ ದಾಖಲಿಸಲಾಗಿದೆ.

ಶೃಂಗೇರಿ ಶ್ರೀಮಠದ ಜಹಗೀರಿನ ಆಡಳಿತ ವ್ಯವಸ್ಥೆಯಲ್ಲಿದ್ದ ಈ ಊರಿಗೆ ಪರಕೀಯರ ದಾಳಿಯಾಗಲಿ ಅನ್ಯಮತೀಯರಿಂದ ತೊಂದರೆಯಾಗಲಿ ಆಗದಿರುವುದರಿಂದ ಸಾಂಸ್ಕೃತಿಕ ಪಲ್ಲಟ ತೀವ್ರಗತಿಯಲ್ಲಿ ಆಗದಿರುವುದು ಕಂಡು ಬಂದಿದೆ. ಗಿರಿಜನರು, ಹಸಲರು, ಮಲೆಕುಡಿಯರು, ಹರಿಜನರು ಈ ಊರಿನ ಮೂಲನಿವಾಸಿಗಳಾಗಿದ್ದು, ಮಲೆನಾಡ ಸಂಸ್ಕೃತಿಯ ಅಧ್ಯಯನವು ನಿಖರವಾಗಿ ನಡೆಯಬೇಕಾದರೆ ಈ ಜನಾಂಗದವರ ಅಧ್ಯಯನ ಹೆಚ್ಚು ಮಹತ್ವ ಪಡೆದಿದ್ದು, ಈ ಜನಾಂಗದವರಲ್ಲಿ ಸಾಂಸ್ಕೃತಿಕ ಪಲ್ಲಟವಾಗಿದ್ದು ಬುಡಕಟ್ಟು ಸಂಸ್ಕೃತಿಯನ್ನು ಪ್ರಧಾನವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಶೃಂಗೇರಿಯು ಪೌರಾಣಿಕ, ಧಾರ್ಮಿಕ ಹಾಗೂ ಐತಿಹಾಸಿಕ ಮಹತ್ವವನ್ನು ಪಡೆದ ಪ್ರದೇಶವಾಗಿದೆ. ರಾಜ ಮಹಾರಾಜರು ದೇವಿಯ ದರ್ಶನ ಹಾಗೂ ಸ್ವಾಮೀಜಿಯ ಆಶೀರ್ವಾದ ಪಡೆದುದಲ್ಲದೆ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ನೀಡಿದ್ದಾರೆ. ಈಗಲೂ ದೇಶದ ನಾನಾಭಾಗಗಳಿಂದ ಭಕ್ತಾದಿಗಳು, ಉದ್ಯಮಿಗಳು, ರಾಜಕಾರಣಿಗಳು, ನಾಡಿನ ಪ್ರಮುಖರು ದೇವಾಲಯಕ್ಕೆ ಭೇಟಿ ನೀಡಿ ಸಹಾಯ ಹಸ್ತ ನೀಡುತ್ತಿದ್ದಾರೆ. ಪ್ರಜಾರಾಜ್ಯದ ಜಾತ್ಯತೀತ ನಿಲುವು, ಸಮಾನತೆಯ ತತ್ವವು ಸಾಮಾಜಿಕ ವ್ಯವಸ್ಥೆಯ ಬದಲಾವಣೆಗೆ ಕಾರಣವಾಗಿದ್ದು ಅಂತರ್ಜಾತೀಯ ವಿವಾಹವು ಸರ್ವೇಸಾಮಾನ್ಯವಾಗಿದೆ. ಅನ್ಯಜಾತಿ ಮತೀಯರ ನಡುವಿನ ವೈವಾಹಿಕ ಸಂಬಂಧದಿಂದಾಗಿ ಸಾಂಸ್ಕೃತಿಕ ಸಂಘರ್ಷವಾಗಿ ಕೆಲವಷ್ಟು ಅನುಸಂಧಾನವಾಗಿದೆ. ಕೆಲವರಲ್ಲಿ ಧಾರ್ಮಿಕ ನಂಬಿಕೆ ಕಡಿಮೆಯಾಗಿರುವುದು, ದೇವರು ಮತ್ತು ಕರ್ಮಾಚರಣೆಗಳ ಬಗ್ಗೆ ಆಸಕ್ತಿ ಕಡಿಮೆಯಾಗಿರುವುದು ಅಧ್ಯಯನದಿಂದ ಕಂಡುಬಂದಿದೆ.

ಪಲ್ಲಟಕ್ಕೆ ಕಾರಣವಾದ ಅಂಶಗಳು ಹಾಗೂ ಫಲಿತಾಂಶ

ಶೃಂಗೇರಿಯು ಮಲೆನಾಡಿನ ದಟ್ಟ ಅರಣ್ಯದ ಗುಡ್ಡಗಾಡಿನ ನಡುವಿನ ಜನವಿರಳ ಸಂಪದ್ಭರಿತ ಚಿಕ್ಕ ತಾಲ್ಲೂಕಾಗಿದೆ. ಆಹಾರ, ವಾಣಿಜ್ಯ ಹಾಗೂ ಸಾಂಬಾರು ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ಋತುಚಕ್ರದ ಮೂರು ಕಾಲದಲ್ಲೂ ಅತಿಯಾದ ಮಳೆ, ಚಳಿ ಹಾಗೂ ಶೆಖೆಯನ್ನು ಕಾಣಬಹುದು. ಸಮತೋಲನ ಹವಾಮಾನವನ್ನು ಹೊಂದದಿದ್ದರೂ ದೈಹಿಕ, ಮಾನಸಿಕ ಆರೋಗ್ಯಕ್ಕೆ ಪೂರಕವಾದ ವಾತಾವರಣವಿದೆ. ನಾಡಿನ ಬೇರೆಲ್ಲಾ ಭಾಗಗಳಲ್ಲಿ ಆದ ತೀವ್ರಗತಿಯ ಬದಲಾವಣೆ ಇಲ್ಲಿ ಆಗದಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಯಾವುದೇ ಕೈಗಾರಿಕೆ, ವಾಣಿಜ್ಯ ಸಂಕೀರ್ಣ, ವೃತ್ತಿಪರ ಉನ್ನತ ಶಿಕ್ಷಣ ಸಂಸ್ಥೆ ಇತ್ಯಾದಿಗಳು ಇಲ್ಲಿ ಇಲ್ಲ. ಇಲ್ಲಿಯ ಪರಿಸರ ಕೃಷಿಯೇತರ ವೃತ್ತಿಗೆ ಅನುಕೂಲಕರವಾಗಿಲ್ಲ. ಸಾರಿಗೆ ಸಂಪರ್ಕ ಸಮರ್ಪಕವಾಗಿಲ್ಲ. ವಿಮಾನ, ರೈಲ್ವೆ, ಸಾರಿಗೆಯ ಅನುಕೂಲತೆಗಳಿಲ್ಲ. ಸ್ಥಳೀಯರು ಉದ್ಯೋಗಾರ್ಥವಾಗಿ ಅನ್ಯಪ್ರದೇಶಕ್ಕೆ ಹೋಗುವುದು ಅನಿವಾರ್ಯವಾಗಿದೆ. ತಮ್ಮ ಜಮೀನು ಮನೆಗಳನ್ನು ಮಾರಾಟಮಾಡಿ ಬೇರೆ ಬೇರೆ ಕಡೆ ಜೀವನ ನಡೆಸುತ್ತಿರುವುದು ಅಧ್ಯಯನದಿಂದ ತಿಳಿದು ಬಂದಿದೆ.

ಶೃಂಗೇರಿಯ ಮೂಲನಿವಾಸಿಗಳಾದ ಗಿರಿಜನರು, ಹಸಲರು, ಮಲೆಕುಡಿಯ, ಹರಿಜನರು ಇಲ್ಲಿಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದರು. ಶೃಂಗೇರಿಗೆ ಬ್ರಾಹ್ಮಣ, ಒಕ್ಕಲಿಗ, ವಿಶ್ವಕರ್ಮ, ಭೋವಿ, ಭಂಟ, ಮುಸ್ಲಿಂ, ಕ್ರೈಸ್ತ ಮೊದಲಾದ ಜಾತಿ ಧರ್ಮೀಯರು ವಲಸೆ ಬಂದು ನೆಲೆಸಿರುವುದರಿಂದ ತಮ್ಮ ಮೂಲಸಂಸ್ಕೃತಿಯು ಇಲ್ಲಿಯ ಸಂಸ್ಕೃತಿಯೊಂದಿಗೆ ಘರ್ಷಣೆಹೊಂದಿ, ಅನುಸಂಧಾನಗೊಂಡು ಹೊಸರೂಪವನ್ನು ಪಡೆಯಲು ಕಾರಣವಾಗಿದೆ. ಹೆಚ್ಚಿನವರು ದಕ್ಷಿಣ ಕನ್ನಡದಿಂದ ಇಲ್ಲಿಗೆ ವಲಸೆ ಬಂದಿದ್ದಾರೆ. ವಲಸಿಗರಿಂದಾಗಿ ಮಲೆನಾಡ ಸಂಸ್ಕೃತಿಯು ಮಾರ್ಪಾಟುಹೊಂದಿದೆ.

ಈಚೆಗಿನ ಕಾಲದಲ್ಲಿ ಶೃಂಗೇರಿ ಕ್ಷೇತ್ರಕ್ಕೆ ದೇಶದ ಹಾಗೂ ನಾಡಿನ ಇತರೆ ಜಾತಿ ಮತೀಯರು ಬಂದುಹೋಗುತ್ತಿರುವುದರಿಂದ ಅನ್ಯ ಸಂಸ್ಕೃತಿಯ ಪ್ರಭಾವ ಈ ಭಾಗದ ಮೇಲಾಗಿರುವುದು ಕಂಡುಬರುತ್ತಿದೆ. ಭಾಷೆ, ಭಾವನೆ, ಸಂಸ್ಕೃತಿ, ಆಚಾರ ಪದ್ಧತಿ ಮೊದಲಾದವುಗಳು ಮಿಲನಹೊಂದಲು ಸಂಪರ್ಕ ಸಾಧನಗಳು ಪ್ರಮುಖ ಅಂಶಗಳಾಗಿ ಗೋಚರಿಸಿವೆ.

ಕೃಷಿ ಸಂಬಂಧಿ ಸಮಸ್ಯೆಗಳಾದ ಅಡಿಕೆಹಳದಿಎಲೆರೋಗ, ಬೇರುಹುಳ ರೋಗ, ಕಾಫಿಯ ಕಾಂಡ ಕೊರಕರೋಗ, ಬಾಳೆ, ಏಲಕ್ಕಿ, ಕಾಳುಮೆಣಸಿನ ಕಟ್ಟೆರೋಗ, ಸರಿಯಾದ ಮಾರುಕಟ್ಟೆಯಿಲ್ಲದಿರುವುದು, ಕೃಷಿ ಕಾರ್ಮಿಕರ ಕೊರತೆ, ಸಮರ್ಪಕವಾಗಿ ಯಂತ್ರಗಳನ್ನು ಬಳಕೆ ಮಾಡಲಾಗದಿರುವುದು, ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗದಿರುವುದು, ರಾಸಾಯನಿಕ ಗೊಬ್ಬರದ ಬೆಲೆ ಗಗನಕ್ಕೇರಿರುವುದು ಯುವಜನಾಂಗದವರಿಗೆ ಕೃಷಿಯಲ್ಲಿ ಆಸಕ್ತಿಯಿಲ್ಲದಿರುವುದು ಹೀಗೆ ಹತ್ತು ಹಲವಾರು ಸಮಸ್ಯೆಗಳು ಕೃಷಿಯ ಮೇಲೆ ಪರಿಣಾಮವನ್ನುಂಟುಮಾಡಿದ್ದು, ಆತ ಕೃಷಿಯನ್ನು ಬಿಟ್ಟು ಊರನ್ನು ಬಿಟ್ಟು ಹೋಗುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಅನೇಕ ಕುಟುಂಬಗಳು ಈ ಊರನ್ನು ಬಿಟ್ಟು ಹೊರಊರಿನಲ್ಲಿ ಜಮೀನನ್ನು ಖರೀದಿ ಮಾಡಿಯೋ ಅಥವಾ ಬೇರೆ ಬೇರೆ ವೃತ್ತಿಗಳನ್ನು

ಮಾಡಿಯೋ ಜೀವನನಿರ್ವಹಣೆ ಮಾಡುತ್ತಿದ್ದಾರೆ. ಇತ್ತೀಚೆಗೆ ಉದ್ಯೋಗಾರ್ಥವಾಗಿ ವಿದೇಶಗಳಲ್ಲಿ ಕೆಲವರು ನೆಲೆಸಿದ್ದಾರೆ.

ನಕ್ಸಲ್ ಸಮಸ್ಯೆಯು ಈ ಭಾಗದ ಪ್ರಮುಖ ಸಮಸ್ಯೆಯಲ್ಲೊಂದಾಗಿದೆ. ಇದು ಶೃಂಗೇರಿ ತಾಲ್ಲೂಕಿನ ಸ್ವಾತಂತ್ರ್ಯೋತ್ತರ ಸಾಂಸ್ಕೃತಿಕ ಪಲ್ಲಟಕ್ಕೆ ಕಾರಣವಾದ ಪ್ರಮುಖ ಅಂಶವಾಗಿದೆ.ಕುದುರೆಮುಖ ರಾಷ್ಟ್ರೀಯ ಉದ್ಯಾನ ಘೋಷಣೆ, ಕುದುರೆಮುಖ ಗಣಿಗಾರಿಕೆ, ಗಂಗಡಿಕಲ್ಲು ಗಣಿಗಾರಿಕೆ, ಭದ್ರಾನದಿ ಉಳಿಸಿ ಹೋರಾಟ ಮೊದಲಾದವುಗಳು ನಕ್ಸಲರ ಹುಟ್ಟಿಗೆ ಕಾರಣವಾಗಿವೆ. ಶೃಂಗೇರಿಯ ಮೂಲನಿವಾಸಿಗಳಿಗೆ ಸರ್ಕಾರಿ ಯೋಜನೆಗಳಿಂದಾಗಿ ಬದುಕಲು ದುಸ್ತರ ಸನ್ನಿವೇಶ ನಿರ್ಮಾಣವಾಗಿದೆ. ಇದರೊಂದಿಗೆ ಸರ್ಕಾರಿ ಕಾನೂನು ಕಾಯಿದೆ, ಧೋರಣೆ, ಪೋಲೀಸ್ ದೌರ್ಜನ್ಯ, ನಕ್ಸಲ್ ಸಮಸ್ಯೆಗಳು ಈ ಜನಾಂಗದವರ ಬುಡವನ್ನೇ ಅಲುಗಿಸಿದೆ. ಈ ಭಾಗಗಳಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯದೆ ಸಂಕಷ್ಟದಲ್ಲಿ ಇವರಿದ್ದಾರೆ. ಯುವಜನಾಂಗದವರು ಊರನ್ನೇ ಬಿಟ್ಟುಹೊರಡಬೇಕು ಇಲ್ಲವೆ ನಕ್ಸಲರೊಂದಿಗೆ ಕೈಜೋಡಿಸಬೇಕಾದ ಸ್ಥಿತಿ ನಿರ್ಮಾಣಗೊಂಡಿದೆ. ಗಿರಿಜನರ ಬದುಕೇ ದುಸ್ತರವಾದ ಸಂದರ್ಭದಲ್ಲಿ ಅವರ ರೂಢಿ ಸಂಪ್ರದಾಯ ಆಚಾರವಿಚಾರಾದಿಗಳು ಯಥಾಪ್ರಕಾರನಡೆಯಲು ಸಾಧ್ಯವಾಗುತ್ತಿಲ್ಲ. ಯುವಜನಾಂಗದವರು ಇವುಗಳನ್ನು ಅನುಸರಿಸುತ್ತಿಲ್ಲ.

ರಾಷ್ಟ್ರೀಯ ಉದ್ಯಾನವ್ಯಾಪ್ತಿಯೊಳಗೆ ಶ್ರೀಮಂತರು ಅಕ್ರಮವಾಗಿ ಸಾಗುವಳಿ ಭೂಮಿಯನ್ನು ಹೊಂದಿದ್ದು, ಮೂಲನಿವಾಸಿಗಳು ಒಕ್ಕಲೇಳದಂತೆ ನೋಡಿಕೊಂಡು ತಮ್ಮ ಜಮೀನು ಉಳಿಯುವಂತೆ ತಂತ್ರಗಾರಿಕೆ ರೂಪಿಸಿದ್ದಾರೆ. ಒತ್ತಡದಲ್ಲಿ ಜೀವನ ನಿರ್ವಹಿಸಬೇಕಾದ ಬುಡಕಟ್ಟುಜನರ ಕರಕುಶಲ ಕಲೆ ಹವ್ಯಾಸ, ಕ್ರೀಡೆ, ಮನರಂಜನೆ, ಪ್ರವೃತ್ತಿ ಮೊದಲಾದವುಗಳು ನಶಿಸಿ ಹೋಗಿವೆ. ಸಂಪ್ರದಾಯ, ಆಚಾರ, ನಂಬಿಕೆಗಳು ಮರೆಯಾಗುತ್ತಾ ಬಂದಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಬುಡಕಟ್ಟು ಜನಾಂಗದ ಕೆಲವು ಕುಟುಂಬವು ನಾಗರಿಕ ಸಂಪರ್ಕಗೊಂಡು ವೇಷಭೂಷಣ, ಭಾಷೆ, ಕಲೆ, ಮೊದಲಾದವುಗಳಲ್ಲಿ ಪರಿವರ್ತನೆಯಾಗಿರುವುದನ್ನು ಗುರುತಿಸಲಾಗಿದೆ.

ಸಂಸ್ಕೃತಿ ಉಳಿಯಬೇಕಾದರೆ ಮೂಲನಿವಾಸಿಗಳು ಅಲ್ಲೆ ಜೀವನ ಮುಂದುವರಿಸಬೇಕು. ಅಲ್ಲಿ ಜೀವಿಸಲು ಅಭಿವೃದ್ಧಿ ಕಾರ್ಯಗಳು ನಡೆಯಬೇಕು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕೆಲಸಮಾಡುತ್ತಿಲ್ಲ. ಸಮರ್ಪಕ ಪರಿಹಾರ ದೊರೆತರೆ ಆ ಊರನ್ನೇ ಬಿಟ್ಟು ಬರಲು ಸಿದ್ಧರಿದ್ದಾರೆ. ಕೆಲವರು ಪರಿಹಾರವನ್ನು ಪಡೆದು ಅಲ್ಲಿಂದ ಹೊರಬರುತ್ತಿದ್ದಾರೆ.

ಹಿಂದೆ ಸಾಂಪ್ರದಾಯಿಕ ಶಿಕ್ಷಣವ್ಯವಸ್ಥೆಯಿದ್ದು ಐಗಳು ಶಿಕ್ಷಣ ಕೊಡುತ್ತಿದ್ದರು. ಬ್ರಾಹ್ಮಣ ಹಾಗೂ ಇತರೆ ಮೇಲ್ವರ್ಗದ ಜನರು ಶಿಕ್ಷಣವನ್ನು ಪಡೆಯುತ್ತಿದ್ದರು. ನಾಗರಿಕ ಸಂಪರ್ಕದಿಂದ ದೂರವಿದ್ದ ಬುಡಕಟ್ಟು ಹಾಗೂ ಹಿಂದುಳಿದ ವರ್ಗದ ಜನರಿಗೆ ಶಿಕ್ಷಣ ಸಿಗುತ್ತಿರಲಿಲ್ಲ. ಆಧುನಿಕತೆಯ ತೀವ್ರ

ಬದಲಾವಣೆಯ ಭರಾಟೆಯು ಈ ಜನಾಂಗದವರ ಮೇಲಾಗದೆ ಸಂಸ್ಕೃತಿಯ ಮೂಲ ಸೊಗಡನ್ನು ಕಾಣಲು ಸಾಧ್ಯವಾದರೂ ಇತ್ತೀಚಿನ ಕ್ರಾಂತಿಕಾರಕ ಕಾರಣಗಳಿಂದಾಗಿ ಸಂಸ್ಕೃತಿ ಕ್ಷೀಣಿಸಿರುವುದನ್ನು ಕಾಣಬಹುದಾಗಿದೆ.

ಸರ್ವರಿಗೂ ಶಿಕ್ಷಣ ಸಿಗಬೇಕೆಂಬ ನೀತಿ ಹಾಗೂ ಕಡ್ಡಾಯ ಶಿಕ್ಷಣ ಕಾಯಿದೆಯಂತೆ ಹಳ್ಳಿಯ ಮೂಲೆ ಮೂಲೆಗಳಲ್ಲಿ ಶಾಲೆ, ವಿದ್ಯಾರ್ಥಿನಿಲಯ, ವಸತಿ ನಿಲಯ, ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆ. ಗಿರಿಜನರ ವಸತಿನಿಲಯ, ಮಹಿಳಾ ವಸತಿ ನಿಲಯಗಳು ಅಗತ್ಯಕ್ಕೆ ತಕ್ಕಷ್ಟು ನಿರ್ಮಾಣಗೊಂಡಿವೆ. ವಿದ್ಯಾರ್ಥಿಗಳಿಗೆ ಉಚಿತ ಬಟ್ಟೆ, ಪುಸ್ತಕ, ಪಠ್ಯ ಪರಿಕರಗಳು, ಮಧ್ಯಾಹ್ನದ ಬಿಸಿಯೂಟ, ಸೈಕಲ್‌ವಿತರಣೆ, ವಿದ್ಯಾರ್ಥಿವೇತನ, ಸಾರಿಗೆ ಭತ್ಯೆ ಮೊದಲಾದವುಗಳನ್ನು ಒದಗಿಸಿ ಕೊಟ್ಟು ಎಲ್ಲರೂ ಶಿಕ್ಷಣಪಡೆಯುವಂತಾಗಲು ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಸಂಘಸಂಸ್ಥೆ, ಧಾರ್ಮಿಕ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಬಟ್ಟೆ, ಪುಸ್ತಕ ಇತರೆ ಅಗತ್ಯ ಸೌಕರ್ಯಗಳನ್ನು ಒದಗಿಸಿ ಕೊಡುತ್ತಿವೆ. ಶೃಂಗೇರಿಯ ಶ್ರೀಮಠವು ಪ್ರತಿದಿನ ಆರುಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ಒದಗಿಸಿ ಕೊಡುತ್ತಿದೆ. ಆಧುನಿಕ ಪದ್ಧತಿಯ ಶಿಕ್ಷಣ ಹಾಗೂ ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಿವೆ.

ನೂತನ ಶಿಕ್ಷಣ ಪದ್ಧತಿ ಹಾಗೂ ಶಿಕ್ಷಣ ಕ್ರಮದಿಂದಾಗಿ ಕಂದಾಚಾರ, ಮೂಢನಂಬಿಕೆ, ಅಂಧಾನುಕರಣೆಗಳು ಕಡಿಮೆಯಾಗಿರುವುದು ಕಂಡು ಬಂದಿದೆ. ಕೌಟುಂಬಿಕ ಬಾಂಧವ್ಯ, ಸಂಪ್ರದಾಯ, ಆಚರಣೆ, ಹಬ್ಬಹರಿದಿನಗಳ ಸಂಭ್ರಮ ಸಡಗರ ಮೊದಲಾದವುಗಳು ಕ್ಷೀಣಿಸಲು ಇದು ಕಾರಣವಾಗಿದೆ.

ಸ್ವತಂತ್ರಭಾರತದ ಜಾತ್ಯತೀತ ನಿಲುವು, ಸಮಾನತೆಯ ತತ್ವ, ಜಾತಿ ಸಾಮರಸ್ಯದ ಕುರಿತು ಸರ್ಕಾರ ರೂಪಿಸಿದ ಅನೇಕ ಕಾನೂನು ಕಾಯಿದೆಗಳು ಸಾಂಸ್ಕೃತಿಕ ಪಲ್ಲಟಕ್ಕೆ ಕಾರಣವಾಗಿರುವುದು ಕಂಡುಬಂದಿದೆ. ಆಯಾ ಜಾತಿಗೆ ಸೀಮಿತವಾದ ಸಂಪ್ರದಾಯಾದಿಗಳು ಇತರೆ ಜಾತಿ, ಜನಾಂಗದವರ ಸಮಾಗಮದಿಂದಾಗಿ ರೂಪಾಂತರಗೊಂಡು, ಪಲ್ಲಟಗೊಂಡು ಹೋಗಿರುವುದು ಕಂಡುಬಂದಿದೆ. ಮಡಿ ಮೈಲಿಗೆ, ಮೇಲು ಕೀಳು ಎಂಬ ಸಾಮಾಜಿಕ ವ್ಯವಸ್ಥೆಯು ಬದಲಾದರೂ ಜಾತ್ಯತೀತ ನಿಲುವಿನಿಂದಾಗಿ ಸಂಸ್ಕೃತಿಯ ಅಳಿವು ಸನ್ನಿಹಿತವಾಗಿದೆ. ಜಾತಿತಾರತಮ್ಯ ಸಂಪೂರ್ಣವಾಗಿ ಅಳಿದು ಹೋಗಿಲ್ಲದಿರುವುದು ಸಂಶೋಧನೆಯಿಂದ ತಿಳಿದು ಬಂದಿದೆ. ಶೃಂಗೇರಿ ಭಾಗದಲ್ಲಿ ಸಮಾನತೆಯು ಬರಬೇಕಾದರೆ ಕನಿಷ್ಠ ಎರಡು ದಶಕಗಳಾದರೂ ಬೇಕಾಗಬಹುದು ಎಂಬುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ.

ಯಾಂತ್ರಿಕತೆಯ ಕ್ರಾಂತಿಕಾರಕ ಬದಲಾವಣೆಯು ಸಾಂಸ್ಕೃತಿಕ ಪಲ್ಲಟದ ಪ್ರಮುಖ ಅಂಶದಲ್ಲಿ ಒಂದಾಗಿದೆ.ಯಾವುದೋ ಸತ್ಯಾಂಶದ ಹಿನ್ನೆಲೆಯಿಂದ ಸೃಷ್ಟಿಯಾದ ಜಾನಪದೀಯ ಆಚರಣೆಸಂಪ್ರದಾಯ ರೀತಿ ರಿವಾಜುಗಳು ಆಧುನಿಕತೆಯ ಪ್ರಭಾವದಿಂದಾಗಿ ಬದಲಾವಣೆಯಾಗುವುದು

ಈಗಿನ ಕಾಲ ಘಟ್ಟದ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿದೆ. ಉದಾಹರಣೆಗೆ ಸಾಂಪ್ರದಾಯಿಕ ರೋಗನಿರೋಧಕ ಪದ್ಧತಿ ಈಗ ಉಪಯೋಗಕ್ಕೆ ಬರುತ್ತಿಲ್ಲ. ಸಾಂಪ್ರದಾಯಿಕ ಕೃಷಿ ಪದ್ಧತಿಯು ಈಗ ಲಾಭದಾಯಕವಲ್ಲ. ಹೀಗೆ ಕೈಗಾರಿಕಾ ಕ್ರಾಂತಿಯಿಂದಾಗಿ ಎಲ್ಲಾ ಕ್ಷೇತ್ರದಲ್ಲೂ ಬದಲಾವಣೆಯಾಗಿದೆ. ವೇಷ, ಭೂಷಣ, ಮನೆನಿರ್ಮಾಣ, ಕೃಷಿ, ಸಾರಿಗೆ, ಮನರಂಜನೆ, ಕ್ರೀಡೆ ಹೀಗೆ ಎಲ್ಲಾ ರಂಗದಲ್ಲೂ ಬದಲಾವಣೆಯನ್ನು ಗುರುತಿಸಲಾಗಿದೆ. ಮಲೆನಾಡ ಭಾಗದ ಹಳ್ಳಿಗಳಲ್ಲೂ ಈ ಬದಲಾವಣೆಗಳನ್ನು ಕಾಣಲು ಸಾಧ್ಯವಾಗಿದೆ. ಇತ್ತೀಚಿನವರೆಗೂ ಸೋಗೆ, ಹುಲ್ಲಿನ ಮನೆ, ಕೊಟ್ಟಿಗೆಗಳನ್ನು ಕಾಣಲು ಸಾಧ್ಯವಿತ್ತು. ಅವರು ಬಳಸುತ್ತಿದ್ದ ಮಣ್ಣಿನ ಪಾತ್ರೆ, ಬಿದಿರಿನ ಬುಟ್ಟಿ, ತಟ್ಟಿ, ಮನೆಯನ್ನು ಶೃಂಗರಿಸುವ ಕ್ರಮ, ವಿಧಿ ವಿಧಾನ ಮೊದಲಾದವುಗಳು ಹಳ್ಳಿಗಳಲ್ಲಿ ನಗರಕ್ಕಿಂತ ಭಿನ್ನವಾದ ಮೂಲ ಸ್ವರೂಪವನ್ನು ಕಾಣಲು ಸಾಧ್ಯವಿದೆ. ಶ್ರೀಮಂತರು ಶಿಕ್ಷಿತರು ಆಧುನಿಕತೆಯತ್ತ ಬೇಗ ಸ್ಪಂದಿಸುತ್ತಿದ್ದಾರೆ. ಆಧುನಿಕ ಕಾಲದ ಯಾಂತ್ರಿಕತೆ ಹಾಗೂ ವೈಜ್ಞಾನಿಕ ಪ್ರಯೋಗಗಳ ಫಲವಾಗಿ ಬದಲಾವಣೆಗಳಾಗಿರುವುದು ಹಾಗೂ ಆಗುತ್ತಿರುವುದು ಕಂಡು ಬಂದಿದೆ.

ಆಧುನಿಕ ಶಿಕ್ಷಣ ಪದ್ಧತಿ, ವೈಜ್ಞಾನಿಕ ಬದಲಾವಣೆ, ರಾಜಕೀಯ ಅವಕಾಶಗಳು, ಮಾಧ್ಯಮಗಳ ಪ್ರಭಾವದಿಂದ ವೈಚಾರಿಕ ಚಿಂತನೆಯುಂಟಾಗಿ ತಮ್ಮ ಜೀವನ ನಿರ್ವಹಣೆಯಲ್ಲಿ ಸುಧಾರಣೆಯಾಗಿದೆ. ಸತ್ಯಾಸತ್ಯತೆಯ ಬಗ್ಗೆ ಆಲೋಚಿಸುವ ಮನೋಭಾವ ಬೆಳೆದಿದೆ. ಮೂಢನಂಬಿಕೆ, ಅಂಧಾನುಕರಣೆ, ಅಂಧ ಶ್ರದ್ಧೆ ಮೊದಲಾದವುಗಳನ್ನು ತಾರ್ಕಿಕವಾಗಿ ಚಿಂತಿಸಿ, ಸ್ವತಂತ್ರನಿರ್ಣಯ ಕೈಗೊಳ್ಳುವ ಹಂತದವರೆಗೆ ಬದಲಾವಣೆಯಾಗಿದೆ. ಇದರಿಂದ ಅರ್ಥಬದ್ಧ ಆಚಾರ ಸಂಪ್ರದಾಯಾದಿಗಳನ್ನು ಮೂಲೆಗೆ ತಳ್ಳಿದ ಉದಾಹರಣೆ ಸಿಗುತ್ತವೆ. ಹಬ್ಬಾಚರಣೆಗಳು ತಮ್ಮ ಮೂಲಸ್ವರೂಪವನ್ನು ಕಳಕೊಂಡು ಅದರ ಮಹತ್ವ ತಿಳಿಯದೆ ಯಾಂತ್ರಿಕವಾಗಿ ಆಚರಿಸುವವರಿದ್ದಾರೆ. ವೈಚಾರಿಕ ಚಿಂತನೆ ಹಾಗೂ ವೈಜ್ಞಾನಿಕ ಮನೋಭಾವವು ಸಾಂಸ್ಕೃತಿಕ ಪಲ್ಲಟದ ಅಂಶವಾಗಿವೆ. ಸಂಪ್ರದಾಯ ಬದ್ಧ ತಮ್ಮ ಜೀವನ ನಿರ್ವಹಣೆಯಿಂದ ಸಮಾಜದಲ್ಲಿ ಗೌರವ ಮಾನ್ಯತೆಗಳು ಸಿಗದಿರುವುದರಿಂದ ಅನಿವಾರ್ಯವಾಗಿ ಬದಲಾವಣೆಗಳನ್ನು ಸಮ್ಮತವಿದ್ದೋ ಇಲ್ಲದೆಯೋ ಅನುಸರಿಸಬೇಕಾಗಿದೆ. ಸಂಪೂರ್ಣವಾಗಿ ಆಧುನಿಕ ಶೈಲಿಯನ್ನು ಅಳವಡಿಸಲಾಗದೆ. ಹಳೆಯ ಶೈಲಿಯನ್ನು ಅಪ್ಪಟವಾಗಿ ಉಳಿಸಿಕೊಳ್ಳದೆ ಡೋಲಾಯ ಸ್ಥಿತಿಯಲ್ಲಿರುವುದು ಗೋಚರಿಸುತ್ತದೆ. ಕೆಲವನ್ನು ಒಪ್ಪಿಕೊಂಡು ಇನ್ನಷ್ಟನ್ನು ಬಿಟ್ಟು ಗೊಂದಲದ ಸ್ಥಿತಿಯಲ್ಲಿ ಮುಂದುವರಿಯುತ್ತಿದ್ದಾರೆ. ಬೇರೆಡೆ ನೋಡಿ, ಕೇಳಿ, ತಿಳಿದು ಸತ್ಯಾಸತ್ಯತೆಯನ್ನು ಅರಿತು ತಾರ್ಕಿಕ ಮನೋಭಾವದಿಂದ ವೈಜ್ಞಾನಿಕ ಚಿಂತನೆಯತ್ತ ಸಾಗುತ್ತಿರುವುದು ಅಧ್ಯಯನದಿಂದ ತಿಳಿದು ಬಂದಿದೆ.

ಮಲೆನಾಡಿಗೆ ಸೀಮಿತವಾದ ಜಾನಪದ ಹಾಡು, ಕುಣಿತ, ಕಲೆ, ಹವ್ಯಾಸಗಳು ಮರೆಯಾಗಿ ನಾಟಿ ಮಾಡುವಾಗ, ಅಕ್ಕಿ ಕುಟ್ಟುವಾಗ, ಜೋಗುಳದ ಸಮಯ ಹೀಗೆ ಆಯಾಯ ಕಾಲ ಸಂದರ್ಭಾನುಸಾರ

ಹೇಳುವ ಹಾಡುಗಳು ಮುಂದಿನ ಪೀಳಿಗೆಯವರಿಗೆ ವರ್ಗಾವಣೆಗೊಂಡಿಲ್ಲ. ಹಿರಿಯ ತಲೆಮಾರಿನವರ ಅಂತ್ಯದೊಂದಿಗೆ ಅವರ ಕಲೆಯೂ ಅಂತ್ಯವಾಗಿಹೋಗುತ್ತಿದೆ. ಯುವಜನಾಂಗದವರಿಗೆ ಇವುಗಳನ್ನು ಕಲಿಯುವುದಿರಲಿ ಕೇಳುವ ವ್ಯವಧಾನವೂ ಇಲ್ಲವಾಗಿದೆ. ಆಧುನಿಕ ಯಂತ್ರೋಪಕರಣಗಳಾದ ರೇಡಿಯೋ, ಟೇಪ್‌ರೆಕಾರ್ಡರ್, ಟ.ವಿ. ಮೊಬೈಲ್ ಮೊದಲಾದವುಗಳು ಜಾನಪದೀಯ ಅಂಶಗಳ ಸಾವಿಗೆ ಕಾರಣವಾದವುಗಳಾಗಿವೆ. ಆಧುನಿಕ ಕಾಲಘಟ್ಟದ ವಿನೂತನ ಶೈಲಿಯ ಸಾಹಿತ್ಯವೂ ಸಹ ಸಮಾಧಾನಕರವಾಗಿ ಮೂಡಿಬಂದಿಲ್ಲ. ಆಸಕ್ತಿ ಮತ್ತು ಶ್ರದ್ಧೆಯ ಕೊರತೆ ಎದ್ದುಕಾಣುತ್ತಿದೆ.

ಮಲೆನಾಡಿನ ಜಾನಪದ ಕ್ರೀಡೆಗಳು ಮರೆಯಾಗುತ್ತಿವೆ. ಇದಕ್ಕೆ ಪ್ರಮುಖ ಕಾರಣ ಕ್ರಿಕೆಟ್ ಆಟ. ಪ್ರತಿಹಳ್ಳಿಹಳ್ಳಿಯಲ್ಲಿಯು ಕ್ರಿಕೆಟ್ ಬಗ್ಗೆ ಆಸಕ್ತಿ ಹೊಂದಿದ ಮಕ್ಕಳು ಆ ಆಟದ ಹೊರತಾಗಿ ಬೇರೆ ಆಟಗಳಲ್ಲಿ ತೊಡಗುತ್ತಿಲ್ಲ. ಅಲ್ಲದೆ ಶಾಲಾಕಾಲೇಜುಗಳಲ್ಲಿ ವಾಲಿಬಾಲ್, ಟೆನ್ನಿಸ್, ಪುಟ್‌ಬಾಲ್, ಖೋಖೋ, ಕಬಡ್ಡಿ, ಥ್ರೋಬಾಲ್, ನೆಗೆತ, ಎಸೆತ ಹಾಗೂ ಒಳಾಂಗಣ ಆಟಗಳನ್ನು ಆಡಿಸುವುದರಿಂದ ಜಾನಪದ ಆಟಗಳಿಗೆ ಪ್ರೋತ್ಸಾಹ ಸಿಗುತ್ತಿಲ್ಲ. ಜಾನಪದ ಆಟಗಳನ್ನು ಆಡಲು ಪ್ರಶಸ್ತವಾದ ಸ್ಥಳ, ಸಮಯ, ಸಮಾನ ಅಭಿರುಚಿಯ ಮಕ್ಕಳಗುಂಪು ಇಲ್ಲವಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಗ್ರಾಮೀಣ ಕ್ರೀಡೆ ನಶಿಸಿ ಹೋಗಿವೆ.

ಜಾನಪದ ಕಲೆಗಳಾದ ಹುಲಿವೇಷ, ಕರಡಿಕುಣಿತ, ಕೋಲಾಟ ಮೊದಲಾದವುಗಳು ಸಹ ಈಗ ಇಲ್ಲವಾಗಿವೆ. ಹಿರಿಯ ಪ್ರವೃತ್ತಿದಾರರು ಕಾಲ ಸಂದರ್ಭಾನುಸಾರವಾಗಿ ಒಮ್ಮೊಮ್ಮೆ ತಮ್ಮ ಕಲೆಗಳನ್ನು ಅಭಿನಯಿಸುವುದು ಕಂಡುಬರುತ್ತಿದೆ ವಿನಾ ಯುವಪೀಳಿಗೆಯವರು ಯಾರೂ ಇದನ್ನು ಮುಂದುವರಿಸುತ್ತಿಲ್ಲ ಅಲ್ಲದೆ ಪ್ರೋತ್ಸಾಹವನ್ನು ಕೊಡುತ್ತಿಲ್ಲ. ಈ ಕಲೆಗಳಿಗೆ ಬದಲಿಯಾಗಿ ವೈಜ್ಞಾನಿಕ ಕ್ರಾಂತಿಯಿಂದಾಗಿ ವಿವಿಧ ಬಗೆಯ ಯಂತ್ರೋಪಕರಣಗಳು ಬಂದಿವೆ. ಜನರ ಅಭಿರುಚಿಯಲ್ಲೂ ಬದಲಾಗಿದ್ದು ಹಳೆಯದಾವುದು ರುಚಿಸುವುದಿಲ್ಲ.

ಶೃಂಗೇರಿ ಸುತ್ತಮುತ್ತಲ ಹಬ್ಬಾಚರಣೆಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಕೆಲವಷ್ಟು ಮೂಲ ಸ್ವರೂಪವನ್ನು ಬದಲಿಸಿಕೊಂಡಿವೆ, ಕೆಲವಷ್ಟು ರೂಪಾಂತರಗೊಂಡಿವೆ, ಕೆಲವು ತನ್ನ ಸ್ವರೂಪವನ್ನು ಕಳಕೊಂಡಿವೆ. ಈಗ ಯಥಾಪ್ರಕಾರದ ಆಚರಣೆ, ಸಂಪ್ರದಾಯಗಳನ್ನು ಕಾಣಲು ಸಾಧ್ಯವಾಗುವುದಿಲ್ಲ. ಕೆಲವಷ್ಟು ಯಾಂತ್ರಿಕವಾಗಿ ನಡೆಯುತ್ತಿವೆ. ಅವುಗಳ ಮಹತ್ವವೇ ಗೊತ್ತಿರುವುದಿಲ್ಲ. ಹಿಂದೆ ಮದುವೆಯಾದ ತರುವಾಯ ಸರಿಬೆಸ, ಅಕ್ಕಿಯಲ್ಲಿ ಚಕ್ರಹುಡುಕುವುದು, ಓಕುಳಿ ಆಡುವುದು, ಗಂಡ ಮತ್ತು ಹೆಂಡತಿಯ ನಡುವೆ ಅನ್ಯೋನ್ಯ ಸಂಬಂಧ ಬೆಸೆಯಲು, ಒಬ್ಬರನ್ನೊಬ್ಬರು ಅರಿತುಕೊಳ್ಳಲು ಬಂದ ಈ ಸಂಪ್ರದಾಯಗಳು ಈಗ ಇಲ್ಲವಾಗಿವೆ. ಕೆಲವು ಕಡೆ ನಡೆದರೂ ಅದರ ಮಹತ್ವ ಗೊತ್ತಿಲ್ಲದೆ ಸುಮ್ಮನೆ ಆಚರಿಸುತ್ತಾರೆ. ಹೀಗೆ ಎಲ್ಲಾ ಆಚರಣೆ, ಸಂಪ್ರದಾಯ ರೀತಿ ರಿವಾಜುಗಳಲ್ಲೂ ಅರ್ಥಮಹತ್ವಗಳಿತ್ತು. ಪ್ರತಿಯೊಂದು ಹಬ್ಬವು ತನ್ನದೇ ಆದ ವಿಶೇಷತೆಯನ್ನು ಭಕ್ಷ್ಯ ಭೋಜನಗಳನ್ನು ಹೊಂದಿರುತ್ತಿತ್ತು.

ಇಂತಹ ಹಬ್ಬಕ್ಕೆ ಇಂತಹ ತಿಂಡಿ ಅಡಿಗೆ ಎಂಬುದು ಮೊದಲೇ ಗೊತ್ತಿರುತ್ತಿತ್ತು. ಹಬ್ಬ ಎಂದಾಗ ಏನೋ ಆನಂದ, ಉಲ್ಲಾಸ, ಸಡಗರ, ಸಂಭ್ರಮ, ಊಟ, ತಿಂಡಿಯಲ್ಲಿಯೂ ಖುಷಿ ಇರುತ್ತಿತ್ತು. ಈಗ ಇಷ್ಟ ಬಂದಾಗ ಬೇಕಾದ ಪದಾರ್ಥಗಳನ್ನು ಮಾಡಿ ತಿನ್ನುತ್ತಾರೆ. ಸಿದ್ಧ ಪಡಿಸಿಟ್ಟ ತಿಂಡಿ ತಿನಿಸುಗಳು ದೊರೆಯುತ್ತದೆ. ವಿನೂತನ ರೀತಿಯ ತಿಂಡಿ, ಪಾನೀಯಗಳು ದೊರೆಯುವುದರಿಂದ ಹಬ್ಬದ ವಿಶೇಷತೆ ಮಹತ್ವ ಕಡಿಮೆಯಾಗಿದೆ. ನಗರ ಪ್ರದೇಶದಲ್ಲಿ ಕೆಲವಷ್ಟು ಹಬ್ಬಗಳನ್ನು ಆಚರಿಸುವುದೇ ಇಲ್ಲ.

ಹಿಂದಿನ ವೇಷಭೂಷಣ, ವೈಯಕ್ತಿಕ ಶೃಂಗಾರವು ಅವರ ಘನತೆ, ಗಾಂಭೀರ್ಯ, ಸ್ಥಾನಮಾನ, ಅಂತಸ್ತನ್ನು ಬಿಂಬಿಸುವಂತೆ ಇರುತ್ತಿತ್ತು. ಮೊಮ್ಮಕ್ಕಳು ಅಜ್ಜನ ವೇಷಭೂಷಣಗಳನ್ನು ತೊಡುವುದು, ಅಥವಾ ತೊಟ್ಟಂತೆ ಅನುಕರಣೆ ಮಾಡುತ್ತಿದ್ದರು. ಮಲೆನಾಡಿನ ಪರಿಸರಕ್ಕೆ ಹೊಂದಿಕೆಯಾಗುವ ವೇಷಭೂಷಣಗಳನ್ನು ತೊಡುತ್ತಿದ್ದರು. ಈಗ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಹಾಗೂ ಮಾಧ್ಯಮದ ಪ್ರಭಾವದ ಮೂಲಕ ಇತರೆ ಭಾಗದವರ ಅನುಕರಣೆಯಿಂದ ಕಾಲ ಕಾಲಕ್ಕೆ ಬದಲಾವಣೆಗಳಾಗುತ್ತ ಸಾಗುತ್ತಿದೆ. ಹಿಂದೆ ಮೈತುಂಬಾ ಬಟ್ಟೆ ಹಾಕಿಕೊಂಡು ಆಭರಣ ಹಾಗೂ ಮಂಗಳಕರ ವಸ್ತುಗಳನ್ನು ಧರಿಸುವುದರ ಮೂಲಕ ಶೃಂಗರಿಸಿಕೊಂಡು ಎಲ್ಲರ ಗೌರವ ಮನ್ನಣೆಗೆ ಪಾತ್ರರಾಗುತ್ತಿದ್ದರು. ಈಗ ಕಡಿಮೆ ಬಟ್ಟೆ ಧರಿಸುವುದಕ್ಕೆ ಹಾಗೂ ತೊಡುಗೆಗಳನ್ನು ಕಡಿಮೆ ಪ್ರಮಾಣದಲ್ಲಿ ತೊಡುವ ಬಗ್ಗೆ ಸ್ಪರ್ಧೆ ನಡೆಯುತ್ತಿದೆ. ಪುರುಷರಿಗಿಂತ ಮಹಿಳೆಯರಲ್ಲಿ ಈ ಬದಲಾವಣೆಯನ್ನು ಹೆಚ್ಚಾಗಿ ಗಮನಿಸಬಹುದಾಗಿದೆ. ಮಕ್ಕಳೂ ಸಹ ನೂತನ ಮಾದರಿಯ ವಸ್ತ್ರಾಭರಣಗಳನ್ನು ತೊಡುತ್ತಿದ್ದಾರೆ. ಮದುವೆ ಹಾಗೂ ಇತರೆ ಮಂಗಳ ಕಾರ್ಯಕ್ರಮಗಳಂದು ಕೆಲವು ಕುಟುಂಬಗಳಲ್ಲಿ ಸಂಪ್ರದಾಯ ಬದ್ಧ ವೇಷಭೂಷಣಗಳನ್ನು ಧರಿಸುತ್ತಾರೆ. ಉಳಿದಂತೆ ಬಹಳಷ್ಟು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಕಾಲದ ಪರಿವರ್ತನೆಗೆ ಅನುಗುಣವಾಗಿ ವೇಷ ಭೂಷಣದ ಬದಲಾವಣೆಯ ಅನಿವಾರ್ಯತೆಯೂ ಇದೆ.

ಇಲ್ಲಿಯ ಜನರು ಅಕ್ಷರಸ್ಥರಾಗಿದ್ದು ನಂಬಿಕೆ ಮತ್ತು ಮೂಢನಂಬಿಕೆಗಳ ಬಗ್ಗೆ ಅರಿವಿದೆ. ಯಾವುದು ಸೂಕ್ತ, ಯಾವುದು ಅನಿವಾರ್ಯವೆಂದು ಮನಗಂಡು ಅಂತಹವುಗಳನ್ನು ರೂಢಿಯಲ್ಲಿ ಇಟ್ಟುಕೊಂಡಿದ್ದಾರೆ. ಕಂದಾಚಾರದ ಆಚರಣೆಗಳು ಅಪ್ರಯೋಜಕ ಸಂಪ್ರದಾಯಗಳು ಅವೈಜ್ಞಾನಿಕ ವಿಧಿ ವಿಧಾನ ನಂಬಿಕೆಗಳನ್ನು ಬಿಟ್ಟಿದ್ದಾರೆ. ಅವರಲ್ಲಿರುವ ಶೈಕ್ಷಣಿಕ ಉನ್ನತಿ ಹಾಗೂ ಸಂಪರ್ಕ ಸಾಧನವು ಪ್ರಮುಖ ಕಾರಣವಾಗಿದೆ.

ಇಲ್ಲಿಯ ಮೂಲನಿವಾಸಿಗಳಾದ ದಲಿತಜನಾಂಗ, ಗೌಡ್ಲು, ಮಲೆಕುಡಿಯ, ಹಸಲರು ಆಧುನಿಕತೆಯತ್ತ ಬರುತ್ತಿದ್ದಾರೆ. ಅವರ ಜೀವನ ಶೈಲಿ ಹಿಂದಿನಂತಿಲ್ಲದೆ ಸ್ವಲ್ಪ ಮಾರ್ಪಾಟಾಗಿದೆ. ಹುಲ್ಲು ಸೋಗೆ ಮನೆಗಳು ಬದಲಾಗಿ ಸರ್ಕಾರ ನೀಡಿದ ಸೈಟ್ ಮನೆಗಳಲ್ಲಿ ವಾಸವಿದ್ದಾರೆ. ದಲಿತ ಕೇರಿಗಳು ಈಗ

ಬದಲಾಗಿವೆ. ಇವರ ಅಭಿವೃದ್ಧಿಗಾಗಿ ಸರ್ಕಾರ ಅನೇಕ ಯೋಜನೆಗಳು ಇವರಿಗೆ ಸಮರ್ಪಕವಾಗಿ ಸಲ್ಲದೆ ಕೆಲಸ ಮಾಡುತ್ತಿರುವ ಶ್ರೀಮಂತರ ಮನೆಗೆ ಹೋಗುತ್ತಿವೆ. ಜಮೀನಾಗಲಿ, ಒಳ್ಳೆಯ ಹುದ್ದೆಯಾಗಲಿ, ವ್ಯಾಪಾರ ಉದ್ದಿಮೆಯಾಗಲಿ, ಹೊಂದಿದವರಿಲ್ಲವೆಂದೇ ಹೇಳಬಹುದು. ಜೀತದಾಳುಗಳ ಸಂಖ್ಯೆ ಕಡಿಮೆಯಿದ್ದು ಯುವಜನಾಂಗದವರು ಬೇರೆ ಬೇರೆ ಬಗೆಯ ಉದ್ಯೋಗವಾದ ಗಾರೆ, ಸಣ್ಣಪುಟ್ಟ ವ್ಯಾಪಾರ, ವಿವಿಧ ಇಲಾಖೆಯಲ್ಲಿಯ ಹಂಗಾಮಿ ಉದ್ಯೋಗದಲ್ಲಿ ನಿರತರಾಗಿದ್ದಾರೆ. ಆದರೂ ನಿರೀಕ್ಷಿತ ಮಟ್ಟದ ಜೀವನ ಸುಧಾರಣೆಯಾಗಿಲ್ಲ. ಈ ಜನಾಂಗದವರಿಗೆ ಶಿಕ್ಷಣ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದಲ್ಲದೆ ಅದರ ಸದ್ಬಳಕೆಯ ಬಗ್ಗೆ ತರಬೇತಿಯನ್ನು ಕೊಡಬೇಕು.

ಹಿಂದೆ ಮಾದಾರಿಕೆ ಅನಿವಾರ್ಯವಾಗಿತ್ತು. ಆದರೆ ಈಗ ಮಾದಾರಿಕೆ ಇಲ್ಲವೆಂದೇ ಹೇಳಬಹುದು. ಶೃಂಗೇರಿಯ ಸುತ್ತಮುತ್ತ ಕೆಲವೇ ಕೆಲವರು ತಮ್ಮ ಹಿಂದಿನವರ ಮಾದಾರಿಕೆಯನ್ನು ಮುಂದುವರಿಸುತ್ತಿದ್ದಾರೆ. ಹಿಂದಿನಂತೆ ಎಲ್ಲಾ ಕೆಲಸಕಾರ್ಯಗಳನ್ನು ಮಾಡುತ್ತಿಲ್ಲ. ಶುಭ ಅಶುಭಗಳಂದು ಅವರನ್ನು ಕರೆಸಿ ಅವರಿಗೆ ಅಗತ್ಯ ಮರ್ಯಾದೆಯನ್ನು ಸಲ್ಲಿಸುತ್ತಾರೆ. ಹಿಂದೆ ಭತ್ತ, ಅಕ್ಕಿ, ಹಳೆ ಬಟ್ಟೆ, ವಸ್ತು, ಎಡೆ ಕೊಡುತ್ತಿದ್ದರು. ಈಗ ಅಕ್ಕಿ ಹಣವನ್ನು ಕೊಡುತ್ತಾರೆ.

ನಗರ ಪ್ರದೇಶದಲ್ಲಿ ಅಸ್ಪೃಶ್ಯತೆಯ ತೀವ್ರತೆ ಕಡಿಮೆಯಿದೆ. ಆದರೆ ಹಳ್ಳಿಗಳಲ್ಲಿ ಹೆಚ್ಚಾಗಿದೆ ಅಂತೆಯೆ ಆ ಜನಾಂಗದವರು ಪಾಪಪ್ರಜ್ಞೆಯಿಂದ ಯಾರನ್ನು ಎದುರುಹಾಕಿಕೊಳ್ಳದೆ ಭಯ ಭಕ್ತಿಯಿಂದ ಹಿಂದಿನಂತೆ ನಡೆದುಕೊಳ್ಳುತ್ತಿದ್ದಾರೆ. ಶಿಕ್ಷಣವನ್ನು ಪಡೆದರೂ ಉದ್ಯೋಗವನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ಗೌಡ್ಲು, ಮಲೆಕುಡಿಯ ಹಾಗೂ ಹಸಲರ ಸ್ಥಿತಿಯೂ ಇವರಿಗಿಂತ ಉತ್ತಮವೇನು ಆಗಿಲ್ಲ. ನಕ್ಸಲ್ ಸಮಸ್ಯೆ, ಪೋಲೀಸ್ ದೌರ್ಜನ್ಯ, ಸರ್ಕಾರದ ಕಾನೂನು ಕಾಯಿದೆಯ ತೊಡಕಿನಿಂದಾಗಿ ಬದುಕು ದುರ್ಭರವಾಗಿದೆ. ಊರುಬಿಡಲಾಗದೆ,ಬದುಕಲಾಗದೆ ಆತಂಕದ ದಿನಗಳನ್ನು ಕಳೆಯುತ್ತಿದ್ದಾರೆ. ಈ ಜನಾಂಗದವರ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಈ ಜನಾಂಗದವರ ಸಾಂಸ್ಕೃತಿಕ ಅಂಶಗಳನ್ನು ಉಳಿಸಿ ಬೆಳೆಸುವುದರ ಕಡೆಗೆ ಗಮನಕೊಟ್ಟಿಲ್ಲ.

ಶೃಂಗೇರಿಯ ಸುತ್ತಮುತ್ತಲು ಕೃಷಿಗೆ ಮಾರಕರೋಗ ಹಾಗೂ ನಕ್ಸಲ್ ಸಮಸ್ಯೆಯಿರುವುದರಿಂದ ಬೇರೆ ಭಾಗದ ಹೆಣ್ಣುಮಕ್ಕಳು ಮದುವೆಯಾಗಿ ಇಲ್ಲಿಗೆ ಬರಲು ಇಷ್ಟಪಡುವುದಿಲ್ಲ. ಎಷ್ಟೋ ಜನ ಯುವಕರು ಮದುವೆಯಿಲ್ಲದೆ ಬ್ರಹ್ಮಾಚಾರಿಯಾಗಿಯೆ ಇರಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅದರಲ್ಲೂ ಬ್ರಾಹ್ಮಣ ಕುಟುಂಬದ ಪುರುಷರಿಗೆ ಹೆಣ್ಣು ಸಿಗುತ್ತಿಲ್ಲ. ಬ್ರಾಹ್ಮಣ ಹೆಣ್ಣು ಮಕ್ಕಳು ಸಹ ಶ್ರೀಮಂತ ಒಳ್ಳೆಯ ಉದ್ಯೋಗದಲ್ಲಿರುವ ಪುರುಷರನ್ನು ಮದುವೆ ಆಗುತ್ತಿದ್ದಾರೆ. ಶೃಂಗೇರಿ ನಗರ ಹೊರತಾದ ಪ್ರದೇಶದಲ್ಲಿ ವಾಸವಿರುವ ಇತರೆ ಜಾತಿಯ ಪುರುಷರ ಪರಿಸ್ಥಿತಿಯೂ ಇದೇ ರೀತಿ ಇದೆ.

ವರದಕ್ಷಿಣೆ ಉಡುಗೊರೆ ಮೊದಲಾದವುಗಳು ದಶಕದ ಹಿಂದೆ ಬಹಳಷ್ಟು ಪ್ರಚಲಿತವಿದ್ದು ಸಾಮಾಜಿಕ ಸಮಸ್ಯೆಯಾಗಿತ್ತು. ಈಗ ಇವುಗಳ ಸಮಸ್ಯೆ ಅಷ್ಟಾಗಿ ಕಂಡುಬರುವುದಿಲ್ಲ. ಕೆಲವು ಜಾತಿ ಜನಾಂಗದವರಲ್ಲಿ

ಮಾತ್ರ ಈಗಲೂ ಮುಂದುವರಿಯುತ್ತಿದೆ. ತನ್ನ ಆರ್ಥಿಕ ಸಾಮರ್ಥ್ಯ ಕಡಿಮೆಯಿದ್ದರೂ ಪ್ರತಿಷ್ಠೆಯ ಕಾರಣದಿಂದ ವಿಜೃಂಭಣೆಯಿಂದ ಕಾರ್ಯಕ್ರಮ ನಡೆಸುತ್ತಿದ್ದಾರೆ.

ಸಾಹಿತ್ಯಕವಾಗಿ ಶೃಂಗೇರಿಯು ಅಂತಹದೇನು ಹಿರಿಮೆಗರಿಮೆಗಳನ್ನು ಹೊಂದಿಲ್ಲದಿರುವುದು ಅಧ್ಯಯನದಿಂದ ತಿಳಿದಿದೆ. ಶೃಂಗೇರಿ ಮಠದ ಯತಿಗಳು ಸಂಸ್ಕೃತ ಹಾಗೂ ಕನ್ನಡ ಭಾಷೆಯಲ್ಲಿ ಕೃತಿ ರಚಿಸಿದ್ದಾರೆ. ಹದಿನೈದನೆಯ ಶತಮಾನಕ್ಕೆ ಸೇರಿದ ಬಾಹುಬಲಿ ಕವಿಯ ಕೃತಿಯು ಐತಿಹಾಸಿಕ ಧಾರ್ಮಿಕ ಮಹತ್ವ ಉಳ್ಳದ್ದಾಗಿದೆ. ನವೋದಯ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಪ್ರೊ. ಎಸ್.ವಿ.ಪರಮೇಶ್ವರ ಭಟ್ಟರವರು ಅಗ್ರಮಾನ್ಯ ಸಾಹಿತಿಯಾಗಿ ಸಿಗುತ್ತಾರೆ. ಉಳಿದಂತೆ ಹೊಸಗನ್ನಡ ಕಾಲಘಟ್ಟದ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಸಾಹಿತ್ಯಗಳು ನಾಡಿನ ಬೇರೆ ಬೇರೆ ಭಾಗಗಳಲ್ಲಿದ್ದಂತೆ ಇಲ್ಲಿ ಅಧಿಕವಾಗಿ ನಿರ್ಮಾಣವಾಗಿರುವುದು ಕಂಡುಬರುವುದಿಲ್ಲ. ಜನವಿರೋಧಿ ಸರ್ಕಾರಿ ನೀತಿ, ದೌರ್ಜನ್ಯ, ಅಸಮಾನತೆ, ಜಾತಿ ತಾರತಮ್ಯ, ಶೋಷಣೆ ಮೊದಲಾದ ಸಾಮಾಜಿಕ ಪಿಡುಗಿನ ವಿರುದ್ಧವಾದ ಪ್ರತಿಭಟನಾತ್ಮಕ ನಾಟಕ, ಕಥೆ,ಕವನ, ಯಕ್ಷಗಾನ ಮೊದಲಾದವುಗಳು ನಿರ್ಮಾಣವಾಗಿವೆ. ಪತ್ರಿಕಾರಂಗದಲ್ಲೂ ಬದಲಾವಣೆಯಾಗಿದ್ದು ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವ ಹಾಗೂ ಪ್ರತಿಭಟಿಸುವ ನಾಗೇಶ್ ಪತ್ರಿಕೆ, ಸತ್ಯಕ್ರಾಂತಿ,ನಮ್ಮ ಲೋಕ ಪತ್ರಿಕೆಗಳು ನಿರ್ಮಾಣಗೊಂಡಿವೆ. ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಇಲ್ಲಿಯ ಪ್ರತಿನಿಧಿಗಳು ವರದಿ ನೀಡಿ ತಮ್ಮ ಧ್ವನಿಯನ್ನು ಹೊರಹಾಕಿದ್ದಾರೆ. ಸಮ್ಮೇಳನ, ಗೋಷ್ಠಿ, ವಿಚಾರ ಸಂಕಿರಣ ಮೊದಲಾದವುಗಳು ಹೆಚ್ಚಿನ ಪ್ರಮಾಣದಲ್ಲಿ ಈಗ ನಡೆಯುತ್ತಿವೆ. ಸಾಹಿತ್ಯ ಅಹ್ಲಾದವನ್ನುಂಟು ಮಾಡುವುದಲ್ಲದೆ ಸಾಮಾಜಿಕ ಸುಧಾರಣೆಯ ಅಂಗವಾಗಿಯು ಕೆಲಸಮಾಡಿರುವುದನ್ನು ಗುರುತಿಸಲಾಗಿದೆ.

ಪ್ರತಿಯೊಂದು ಸಮುದಾಯವೂ ನೂರಾರು ವರ್ಷಗಳಿಂದ ತನ್ನದೇ ಆದ ಜೀವನ ಶೈಲಿ ಸಂಪ್ರದಾಯ ಆಚರಣೆ, ಶಿಷ್ಟಾಚಾರ ಇತ್ಯಾದಿಗಳನ್ನು ಅನುಸರಿಸುವುದರ ಮೂಲಕ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಬಹಳಷ್ಟು ವಿಷಯಗಳನ್ನು ಸಾಮಾಜಿಕ, ಆರ್ಥಿಕ, ಧಾರ್ಮಿಕ, ವೈಚಾರಿಕ ಹಾಗೂ ವೈಜ್ಞಾನಿಕ ತಳಹಳದಿಯ ಮೇಲೆ ಚಿಂತಿಸಿ ರೂಢಿಯಲ್ಲಿ ಮುಂದುವರಿಯುತ್ತಿರುವುದು ಅಧ್ಯಯನದಿಂದ ತಿಳಿದು ಬಂದಿದೆ.

ಇತ್ತೀಚಿನವರೆಗೂ ಸಂಘಜೀವಿಯಾಗಿ ನೆಮ್ಮದಿಯಿಂದ ಬದುಕುತ್ತಿದ್ದವರು ನಗರ ಪ್ರದೇಶದಲ್ಲಿ ನೆಲೆಸಿ ನಗರ ಜೀವನ ಒತ್ತಡದಿಂದ ಅನಿವಾರ್ಯವಾಗಿ ಅನ್ಯ ಸಂಸ್ಕೃತಿಗೆ ಮಾರುಹೋಗಿ ಮೂಲ ಸಂಸ್ಕೃತಿಯನ್ನು ಉಳಿಸುವಲ್ಲಿ ವಿಫಲರಾಗಿದ್ದಾರೆ. ರೀತಿ ರಿವಾಜುಗಳನ್ನು ಗಾಳಿಗೆ ತೂರಿ ನಿರ್ಲಿಪ್ತ ಜೀವನ ನಡೆಸುತ್ತಿರುವುದು ಹಳ್ಳಿಗಳಿಗಿಂತ ನಗರಗಳಲ್ಲಿ ಹೆಚ್ಚಾಗಿ ಕಂಡು ಬಂದರೂ ಹಳ್ಳಿಯ ಶಿಷ್ಟಾಚಾರ, ಕಟ್ಟುಪಾಡುಗಳು ಶಿಥಿಲವಾಗಿರುವುದು ಕಂಡುಬಂದಿದೆ. ಜೀವನ ಪದ್ಧತಿಯ ಪರಿವರ್ತನೆ, ವಾಸಮಾಡುವ ಪ್ರದೇಶದ ಸನ್ನಿವೇಶಗಳಿಂದ ಸಂಪ್ರದಾಯಾದಿಗಳನ್ನು ಯಥಾವತ್ತಾಗಿ ಆಚರಿಸಲು ಅಡಚಣೆಯಾದರೂ

ಕಾಲಧರ್ಮ ಗಮನಿಸಿ ಮೂಲತತ್ವಕ್ಕೆ ವಿರೋಧವಾಗದಂತೆ ಸೂಕ್ತ ಬದಲಾವಣೆಯನ್ನು ಒಪ್ಪಿಕೊಂಡು ನಡೆಯಬೇಕಾದ ಅಂಶವು ಹೊರಹೊಮ್ಮಿದೆ.

'ಹಿಂದಣ ಹೆಜ್ಜೆಯನರಿಯದೆ ಮುಂದಣ ಹೆಜ್ಜೆಯ ಅರಿಯಲಾರರು' ಎಂದು ಅಲ್ಲಮಪ್ರಭು ಹೇಳಿದಂತೆ ಪರಂಪರಾಗತವಾಗಿ ಹರಿದುಬಂದ ಸಂಸ್ಕೃತಿಯನ್ನು ಯಥಾವತ್ತಾಗಿಯಲ್ಲದಿದ್ದರೂ ಜೀವನ ನಿರ್ವಹಣೆಗೆ ಅಗತ್ಯವಾಗಿ ಬೇಕಾದಷ್ಟನ್ನು ಅನುಸರಿಸಿ ನಡೆಯುವುದು ಸೂಕ್ತವೆಂದು ಅಧ್ಯಯನದಿಂದ ತಿಳಿದು ಬಂದಿದೆ. ಹಳ್ಳಿಗಳಲ್ಲಿ ಗಟ್ಟಿಯಾಗಿರುವ ಇಂತಹ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ದ್ಯೋತಕವಾಗಿದೆ.

ಪ್ರತಿಯೊಂದು ಸಮುದಾಯದಲ್ಲೂ ವೈದಿಕ ಕರ್ಮಗಳ ಜೊತೆ ಜೊತೆಯಾಗಿ ಸಾಂಪ್ರದಾಯಿಕವಾಗಿ ಆಚರಿಸಿಕೊಂಡು ಬಂದಿರುವ ಕ್ರಿಯೆಗಳಿರುತ್ತವೆ. ಇವುಗಳಿಗೆ ಶಾಸ್ತ್ರಾಧಾರ ಕಂಡುಬರುವುದಿಲ್ಲ. ಆದರೂ ಯಾವುದೋ ಒಂದು ಸದುದ್ದೇಶದಿಂದ ರೂಢಿಗೆ ಬಂದಿದೆ. ಹೆಚ್ಚಾಗಿ ಇವು ಸ್ತ್ರೀಯರಿಗೆ ಮೀಸಲಾಗಿದೆ. ವೈದಿಕ ಕ್ರಿಯೆಗಳೆಲ್ಲಾ ಪುರುಷ ಆಚರಿಸಿದರೆ, ಮಹಿಳೆಯರು ಪಾಲ್ಗೊಂಡು ಕಾರ್ಯಕ್ರಮಕ್ಕೆ ಶೋಭೆ ತರುತ್ತಾರೆ. ಜೊತೆಗೆ ಆಯಾ ಸನ್ನಿವೇಶಕ್ಕೆ ಸಂಬಂಧಿಸಿದ ಸಂಪ್ರದಾಯದ ಹಾಡುಗಳು ಮಾರ್ಮಿಕವಾಗಿ ಆ ಕ್ರಿಯೆಯ ಅರ್ಥವನ್ನು ಒಳಗೊಂಡಿರುತ್ತದೆ. ಇದರ ಜೊತೆಗೆ ಅಜ್ಜ-ಅಜ್ಜಿ, ಸಹೋದರ-ಸಹೋದರಿ, ಸೋದರಮಾವ-ಸೋದರತ್ತೆ, ಭಾವ ಹೀಗೆ ಸಮೀಪ ಬಂಧುಗಳಿಗೆ ನಿರ್ದಿಷ್ಟ ಕರ್ತವ್ಯವನ್ನು ನೀಡಿರುವುದು ಬಾಂಧವ್ಯ ವೃದ್ಧಿಗೆ, ಆತ್ಮೀಯತೆ ಬೆಳೆಯಲು ಪೂರಕವಾಗಿದೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಕಲ್ಯಾಣ ಯೋಜನೆಯ ಫಲಶೃತಿಯಾಗಿ ಅವರ ಜೀವನ ಶೈಲಿ ಬದುಕು ಕಲೆ ವೇಷಭೂಷಣ ವೃತ್ತಿ ಮೊದಲಾದವುಗಳು ಬದಲಾಗಿದೆ. ಇತರೆ ಮೇಲುಜಾತಿಯವರಂತೆ ತಮ್ಮಲ್ಲೂ ಸ್ವಲ್ಪಮಟ್ಟಿನ ಬದಲಾವಣೆಯಾಗಿರುವುದನ್ನು ಗುರುತಿಸಲಾಗಿದೆ. ಹಿಂದಿನಂತೆ ತೀರಾ ನಿಕೃಷ್ಟವಾಗಿ ಕಾಣದೆ ಸಾಮಾಜಿಕ ಸ್ಥಾನಮಾನದಲ್ಲಿ ಸ್ವಲ್ಪಮಾರ್ಪಾಟಾಗಿದೆ. ಹಳ್ಳಿಗಿಂತ ನಗರಪ್ರದೇಶದಲ್ಲಿ ಸ್ವಲ್ಪಹೆಚ್ಚಿನ ಸುಧಾರಣೆಯಾಗಿದೆ.

ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನ ಹಕ್ಕು, ಮಹಿಳಾ ಮೀಸಲಾತಿ, ಕಡ್ಡಾಯ ಶಿಕ್ಷಣ, ಕಾನೂನಿನ ರಕ್ಷಣೆ, ಮೊದಲಾದವುಗಳಿಂದ ಸ್ತ್ರೀಯರ ಬದುಕು ಸುಧಾರಿಸಿದೆ. ಪುರುಷರಿಗೆ ಸರಿಸಮವಾಗಿ ಎಲ್ಲಾ ಕ್ಷೇತ್ರದಲ್ಲೂ ಕಾಣಿಸಿಕೊಂಡಿದ್ದಾರೆ. ಸಾಹಿತ್ಯ ರಂಗದಲ್ಲೂ ಬದಲಾವಣೆಯಾಗಿದೆ. ಮಹಿಳಾ ಶೋಷಣೆ ಹಾಗೂ ದೌರ್ಜನ್ಯಗಳು ಕಡಿಮೆಯಾಗಿದೆ. ಒಂಟಿಹೆಣ್ಣು ಓಡಾಡುವ ಮಟ್ಟದಲ್ಲಿ ಶೃಂಗೇರಿಯ ಸುತ್ತಮುತ್ತಲ ಪರಿಶುದ್ಧವಾದ ಸಾಮಾಜಿಕ ವಾತಾವರಣ ನಿರ್ಮಾಣವಾಗಿರುವುದು ಅಧ್ಯಯನದಿಂದ ತಿಳಿದು ಬಂದಿದೆ.

ಎಲ್ಲಾ ಜಾತಿ ಜನಾಂಗ ಹಾಗೂ ಸ್ತ್ರೀಪುರುಷರಲ್ಲಿ ಆರ್ಥಿಕ ಸುಧಾರಣೆಯಾಗಿರುವುದು ಕಂಡುಬಂದಿದೆ. ಜೀವನ ಮಟ್ಟ ಹಾಗೂ ಜೀವನ ಶೈಲಿ ಸುಧಾರಿಸಿದೆ. ಪ್ರತಿಯೊಬ್ಬರು ಕನಿಷ್ಠ ಕೂಲಿಯನ್ನು ಪಡೆದರೂ

ಹೊರ ಭಾಗದವರು ಶೃಂಗೇರಿಯ ಪರಿಸರದಲ್ಲಿ ಭೂಮಿ ಖರೀದಿಸಿ ಮನೆ, ಸಂಕೀರ್ಣಗಳನ್ನು ಮಾಡುತ್ತಿದ್ದಾರೆ. ಅಧಿಕ ಬೆಲೆ ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ. ಶೃಂಗೇರಿಯ ಜನತೆಗೆ ಕಾರ್ಮಿಕರ ಕೊರತೆ, ರೋಗಬಾಧೆ, ನಕ್ಸಲ್ ಸಮಸ್ಯೆ, ಇತ್ಯಾದಿ ಕಾರಣದಿಂದ ಹೆಚ್ಚಿನವರು ಜಮೀನು ಭೂಮಿಯನ್ನು ಮಾರಾಟಮಾಡಿ ಊರನ್ನೇ ಬಿಟ್ಟು ಹೊರಊರಿನಲ್ಲಿ ಜೀವನ ನಡೆಸುತ್ತಿದ್ದಾರೆ.

ಸಾಂಪ್ರದಾಯಿಕ ಪಶುಪಾಲನೆಯಲ್ಲಿ ಹಸುಕರು, ಎಮ್ಮೆ, ಕೋಳಿ, ಹಂದಿಗಳನ್ನು ಸಾಕುತ್ತಿದ್ದರು. ಈಗ ಹಂದಿ ಕೋಳಿಗಳನ್ನು ಸಾಕುವವರ ಸಂಖ್ಯೆ ತೀರಾ ಕಡಿಮೆಯಾಗಿದೆ. ನಾಟಿ ಕೋಳಿ ಹಾಗೂ ಮೊಟ್ಟೆ ಸಿಗುತ್ತಿಲ್ಲ. ಬದಲಾಗಿ ಫಾರಂ ಕೋಳಿ, ಹಂದಿಗಳು ಮಾರುಕಟ್ಟೆಗೆ ಬರುತ್ತಿವೆ. ವಿವಿಧ ಬಗೆಯ ಸಾಕುಮೀನುಗಳು ಮಾರಾಟವಾಗುತ್ತಿವೆ ವಿನೂತನ ಹಾಲಿನ ಉತ್ಪನ್ನಗಳು ಮಾರುಕಟ್ಟೆಯಲ್ಲಿ ದೊರಕುತ್ತಿವೆ.

ಕೇಪಿನ ಕೋವಿಯಿಂದ ಶಿಕಾರಿಮಾಡಿ ಪ್ರಾಣಿಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದರು. ಈಗ ತೋಟದಕೋವಿ ಬಳಕೆಯಲ್ಲಿದೆ ರಾತ್ರಿ ಶಿಕಾರಿಗೆ ವಿನೂತನ ಶೈಲಿಯ ಬೆಳಕಿನ ವ್ಯವಸ್ಥೆ, ಇತರೆ ಬೇಟೆಯ ವಸ್ತು ಉಪಕರಣಗಳು ಇರುವುದರಿಂದ ಪ್ರಾಣಿಗಳನ್ನು ಸುಲಭವಾಗಿ ಶಿಕಾರಿ ಮಾಡಬಹುದು. ಆದರೆ ಹಿಂದೆ ಇದ್ದ ಪ್ರಮಾಣದಷ್ಟು ಅರಣ್ಯಪ್ರದೇಶವಾಗಲೀ ಪ್ರಾಣಿ ಪಕ್ಷಿಗಳಾಗಲೀ ಇಲ್ಲ. ರಾಷ್ಟ್ರೀಯ ಉದ್ಯಾನ ಘೋಷಣೆಯಿಂದಾಗಿ ಪ್ರಾಣಿಗಳನ್ನು ಬೇಟೆಯಾಡಿ ಮಾಂಸ ತಿನ್ನುವುದರ ಕಡೆ ಗಮನ ಕಡಿಮೆಯಾಗಿದೆ.

ಜಾತ್ರೆ, ರಥೋತ್ಸವಗಳಿಗೆ ಶ್ರದ್ಧಾ ಭಕ್ತಿಯಿಂದ ಹೋಗಿ ಭಾಗವಹಿಸುತ್ತಿದ್ದರು. ಊಟ ತಿಂಡಿಯನ್ನು ಮಾಡಿ ಖುಷಿಯಿಂದ ಹೋಗಿ ಬರುತ್ತಿದ್ದರು. ಈಗ ಕಾಟಾಚಾರಕ್ಕೆ ಮಾಡುತ್ತಾರೆ. ಆಧುನಿಕತೆಯ ಬದಲಾವಣೆಯು ಯುವಜನತೆಯ ಆಸಕ್ತಿಯ ಕ್ಷೇತ್ರವನ್ನು ಬದಲಿಸಿದೆ. ಅವರ ವಿರಾಮ ಸಮಯದ ಸದುಪಯೋಗಕ್ಕೆ ಕ್ರೀಡೆ, ಮನರಂಜನೆ ಮೊದಲಾದವುಗಳಿವೆ. ವೈಚಾರಿಕತೆಯು ಧಾರ್ಮಿಕ ಶ್ರದ್ಧಾ ಭಕ್ತಿಯ ಮೇಲೆ ಪರಿಣಾಮವನ್ನುಂಟುಮಾಡಿದೆ.

ಸಾಮಾಜಿಕ, ಆರ್ಥಿಕ, ಬೌದ್ಧಿಕ, ಸುಧಾರಣೆಯಾಗಿದ್ದರೂ ಶೃಂಗೇರಿಯ ಸುತ್ತಮುತ್ತಲ ಮೂಢನಂಬಿಕೆ, ಅಂಧಾನುಕರಣೆ, ಜಾತೀಯತೆ, ವರ್ಗತಾರತಮ್ಯ, ಅಜ್ಞಾನ, ಬಡತನ, ನಿರುದ್ಯೋಗ, ಮೊದಲಾವುಗಳು ಮುಂದುವರಿಯುತ್ತಿರುವುದು ಅಧ್ಯಯನದಿಂದ ಕಂಡುಬಂದಿದೆ.

ರಾಜಕೀಯವಾಗಿ ಕ್ರಾಂತಿಕಾರಕ ಬದಲಾವಣೆಯಾಗಿದ್ದು ಸಮಾಜದಲ್ಲಿ ಎಲ್ಲಾ ವರ್ಗದವರು ಮತ್ತು ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರುವಂತಾದರೂ ಗೌರವ ಮಾನ್ಯತೆಗಳು ದೊರೆಯದೆ ಸಮಾಜದ ನಿಂದನೆಗೆ ಗುರಿಯಾಗಿದ್ದಾರೆ. ರಾಜಕೀಯ ದುರಾಡಳಿತವೂ ನಡೆಯುತ್ತಿದೆ. ದುರ್ಬಲ ರಾಜಕಾರಣಿಗಳನ್ನು ಮುಂದಿಟ್ಟುಕೊಂಡು ಆಡಳಿತ ಶಾಹಿ ಅಧಿಕಾರಿವರ್ಗದವರು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಕಂಡುಬಂದಿದೆ. ಸಂಪೂರ್ಣ ತಿಳುವಳಿಕೆಯ ಕೊರತೆ,

ಅನಕ್ಷರತೆ, ಆರ್ಥಿಕ ದುರ್ಬಲತೆ ವ್ಯಕ್ತಿಗತ ಮತ್ತು ರಾಜಕೀಯದ ಅಧೋಗತಿಗೆ ಕಾರಣವಾಗಿದೆ. ಜಾತಿ ಹಾಗೂ ಮಹಿಳಾ ಮೀಸಲಾತಿಯು ವರವಾಗದೆ ಶಾಪವಾಗಿರುವುದು ಕಂಡುಬಂದಿದೆ.

ನಾಟಿ ವೈದ್ಯ ಪದ್ಧತಿ ಕ್ಷೀಣಿಸಿದೆ. ಆಧುನಿಕ ವೈದ್ಯಪದ್ಧತಿ ಹಳ್ಳಿ ಹಳ್ಳಿಯಲ್ಲಿ ಬಳಕೆಯಲ್ಲಿದೆ. ಮಕ್ಕಳ ಔಷಧಿ, ಹೆರಿಗೆ, ಬಾಣಂತಿ ಆರೈಕೆ,ಯಾವುದೂ ಸಹ ಹಿಂದಿನಂತಿಲ್ಲದೆ ನಗರಗಳಿಗೆ ಬಂದು ವೈದ್ಯರನ್ನು ಸಂಪರ್ಕಿಸುತ್ತಾರೆ. ಸಾರ್ವಜನಿಕ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಆಧುನಿಕತೆಯ ಪ್ರಭಾವದಿಂದಾಗಿ ಈ ಬದಲಾವಣೆಯಾಗಿದೆ. ಇಷ್ಟಾದರೂ ನಾಟಿ ವೈದ್ಯರು, ಮುಂತ್ರವಾದಿ, ಜೋಯಿಸರು, ಗಣಮಗ, ಮಾಟಮಂತ್ರ, ತಂತ್ರಗಳು ಅಲ್ಲಲ್ಲಿ ಇನ್ನೂ ಜೀವಂತವಾಗಿವೆ.

ಮಲೆನಾಡ ಭಾಷೆಯು ವಿಶೇಷವಾದುದಾಗಿದೆ. ಆಯ ಸಂದರ್ಭಾನುಸಾರ ಭಾಷಾಬಳಕೆಯು ತನ್ನದೇ ಆದ ಅರ್ಥ ಮಹತ್ವವನ್ನು ಕೊಡುತ್ತದೆ. ಆಧುನಿಕತೆಯ ಕ್ರಾಂತಿಕಾರಕ ಬದಲಾವಣೆ, ಸಂಪರ್ಕಸಾಧನಗಳಿಂದಾಗಿ ಭಾಷೆಯಲ್ಲೂ ಬದಲಾಗಿದೆ. ಅಪ್ಪಟ ಮಲೆನಾಡಿನ ಭಾಷೆ ಮರೆಯಾಗುತ್ತಿದೆ. ಇಲ್ಲಿಯ ಮೂಲನಿವಾಸಿ ಹಿರಿಯರಲ್ಲಿ ಮಾತ್ರ ಈಗಲೂ ಅಪ್ಪಟ ಮಲೆನಾಡ ಭಾಷೆಯನ್ನು ಕಾಣಲು ಸಾಧ್ಯವಿದೆ. ಕೆಲವು ಪದಗಳನ್ನು ಪ್ರಬಂಧದಲ್ಲಿ ದಾಖಲಿಸಲು ಸಾಧ್ಯವಾಗಿದೆ. ಅಧ್ಯಯನದ ಪರಿಮಿತತೆಯ ಕಾರಣದಿಂದಾಗಿ ಕೆಲವಷ್ಟು ಪದಗಳನ್ನು ಮಾತ್ರ ಸಂಗ್ರಹಿಸಲಾಗಿದೆ.

ಶೃಂಗೇರಿ ಶ್ರೀಮಠವನ್ನು ಹೊರತುಪಡಿಸಿ ಅಧ್ಯಯನಮಾಡಲು ಸಾಧ್ಯವಿಲ್ಲ. ಶೃಂಗೇರಿಯ ಕಸಬಾ ಹೋಬಳಿಯು ಶ್ರೀಮಠದ ಜಹಗೀರಾಗಿತ್ತು. ಆಡಳಿತ, ನ್ಯಾಯಾಂಗ, ತೆರಿಗೆ, ಹಣಕಾಸು, ಇತ್ಯಾದಿ ಅಧಿಕಾರವನ್ನು ಸ್ವತಂತ್ರವಾಗಿ ಚಲಾಯಿಸುತ್ತಿತ್ತು. ಈ ಭಾಗದ ಜನರಿಗೆ ರಾಜರ ಆಡಳಿತವಾಗಲಿ, ಕ್ರಿ.ಶ.1959 ರ ವರೆಗಿನ ಪ್ರಜಾ ವ್ಯವಸ್ಥೆಯ ಅನುಭವವಾಗಲಿ ಇಲ್ಲ. ಈ ಕಾರಣದಿಂದಾಗಿ ಶ್ರೀಮಠದ ಸಂಬಂಧ ಹಾಗೂ ಅದರ ಕೊಡುಗೆಯನ್ನು ಪ್ರಬಂಧದಲ್ಲಿ ಬರೆಯಲಾಗಿದೆ. ಅಧ್ಯಯನದ ಪರಿಮಿತತೆಯ ದೃಷ್ಟಿಯಿಂದ ಎಲ್ಲಾ ವಸ್ತುವಿಚಾರಗಳನ್ನು ದಾಖಲಿಸಲು ಸಾಧ್ಯವಾಗಿಲ್ಲ. ಸಾಂಸ್ಕೃತಿಕ ಅನನ್ಯತೆಗೆ ಶ್ರೀಮಠದ ಕೊಡುಗೆ ಹಾಗೂ ಇತರೆ ಕ್ಷೇತ್ರಗಳಲ್ಲಿ ಅದರ ಕೊಡುಗೆಗಳನ್ನು ದಾಖಲಿಸಲಾಗಿದೆ.

ಸಂಸ್ಕೃತಿಯ ಸಮಗ್ರ ಅಧ್ಯಯನವನ್ನು ಮಾಡುವುದು ಪರಿಮಿತ ವ್ಯಾಪ್ತಿಯೊಳಗೆ ಚರ್ಚಿಸುವುದು ಕಷ್ಟಸಾಧ್ಯವಾದ ಮಾತು. ಮೂಲಸಂಸ್ಕೃತಿಯ ಸೊಗಡು ಬದಲಾವಣೆಗೆ ಕಾರಣವಾದ ಪ್ರಮುಖ ಅಂಶಗಳು ಹಾಗೂ ಈಗಿನ ಸ್ವರೂಪವನ್ನು ಅಧ್ಯಯನದ ಪರಿಮಿತಿಯೊಳಗೆ ತಂದು ಪಟ್ಟಣ ಮತ್ತು ಗ್ರಾಮೀಣ ಸಂಸ್ಕೃತಿಯ ಸಂಘರ್ಷವನ್ನು ದಾಖಲಿಸಲಾಗಿದೆ. ಶೃಂಗೇರಿಯ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ಒಂದು ಭಾಗವಾಗಿದೆ. ಇಲ್ಲಿಯ ಪ್ರಮುಖ ಅಂಶಗಳನ್ನು ದೇಶದ ಬೇರೆ ಬೇರೆ ಭಾಗಗಳಲ್ಲಿ ಕಾಣಲು ಸಾಧ್ಯವಾಗಿದೆ. ಸ್ವಾತಂತ್ರ್ಯೋತ್ತರ ಸಂದರ್ಭದ ತೀವ್ರ ಸ್ವರೂಪದ ಬದಲಾವಣೆಯನ್ನು ಗಮನಿಸಿದರೆ ಇನ್ನೂ ಕೆಲವಾರು ವರ್ಷಗಳಲ್ಲಿ ಶೃಂಗೇರಿಯ ಬದಲಾವಣೆಯಾದ ಸಾಂಸ್ಕೃತಿಕ

ಹೊಸರೂಪವನ್ನು ಕಾಣಬಹುದೇ ವಿನಾ ಹಿಂದಿನ ಸಂಸ್ಕೃತಿಯ ಚಹರೆಯೂ ಸಿಗುವುದಿಲ್ಲವೆಂಬ ಸತ್ಯ ಅಧ್ಯಯನದಿಂದ ದೃಢಪಟ್ಟಿದೆ.

ಆಚಾರ, ಸಂಪ್ರದಾಯ, ನಂಬಿಕೆ ಮೊದಲಾದವುಗಳಲ್ಲಿ ಮೌಢ್ಯತೆಗಳನ್ನು ಹೊರತುಪಡಿಸಿ ಒಳ್ಳೆಯ ಅಂಶಗಳನ್ನು ಗಮನಿಸಿದಾಗ ಅಂತಹವುಗಳು ಪ್ರಸ್ತುತ ಕಾಲಘಟ್ಟದ ಸನ್ನಿವೇಶಕ್ಕೆ ಅನಿವಾರ್ಯವೆಂದು ಕಂಡುಬಂದಿದೆ. ತಂದೆ ಮಕ್ಕಳ ಸಂಬಂಧ, ಗಂಡ ಹೆಂಡಿರ ಸಂಬಂಧ, ಕುಟುಂಬದ ಸದಸ್ಯರ ನಡುವಿನ ಸಂಬಂಧ, ಬಂಧು ಬಾಂಧವರೊಡಗಿನ ಸಂಬಂಧಗಳು ಹಿಂದಿನಂತೆ ಬಂಧುರತೆ ರಹಿತ ಯಾಂತ್ರಿಕವಾಗಿ ಶೋಕೀ ಜೀವನ ಮಾಡುತ್ತಿರುವುದು ಕಾಣುತ್ತಿದೆ. ನೆಂಟರಿಷ್ಟರು, ಕುಟುಂಬದವರಲ್ಲಿ ಸಂಘಟನೆ, ಸಂಭ್ರಮ, ಹಬ್ಬಾಚರಣೆಯ ಸಡಗರಗಳು, ಹರಕೆ, ಜಾತ್ರೆ, ಉತ್ಸವ, ಮೊದಲಾದವುಗಳಿಂದ ಸಂಘಟಿಸುತ್ತಿದ್ದವು. ಅವಿಭಕ್ತ ಕುಟುಂಬವು ಯಜಮಾನನ ಅಧೀನದಲ್ಲಿ ಸುವ್ಯವಸ್ಥಿತವಾಗಿ ನಡೆಯಲು ಇವುಗಳು ಪ್ರಮುಖ ಅಂಶಗಳಾಗಿದ್ದವು. ಈಗಲೂ ಸಹ ಇಂತಹ ಆಚರಣೆಗಳ ಅಗತ್ಯತೆ ಕಂಡುಬರುತ್ತಿದೆ.

ಜನಪದ ಕ್ರೀಡೆ, ಕುಣಿತ, ಹಾಡು, ಬೇಟೆ ಮೊದಲಾವುಗಳು ಪ್ರತಿಯೊಬ್ಬ ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕಾರಣವಾಗಿದ್ದವು, ಜವಾಬ್ದಾರಿಯುತ ವ್ಯಕ್ತಿಯಾಗಿ ನಿರ್ಮಾಣಹೊಂದಲು ಇವುಗಳು ಸಹಕಾರಿಯಾಗಿದ್ದವು. ಆಧುನಿಕ ಕಾಲದ ಯಂತ್ರೋಪಕರಣಗಳು ಹಾಗೂ ಮಾಧ್ಯಮಗಳು ಮನುಷ್ಯರನ್ನು ಸಂಕುಚಿತಗೊಳಿಸಿದ್ದಲ್ಲದೆ ಸೋಮಾರಿಗಳನ್ನಾಗಿ ಮಾಡಿವೆ. ಬೌದ್ಧಿಕವಾಗಿ ಕ್ರಿಯಾಶೀಲರಾಗಿಲ್ಲದಿದ್ದುದರಿಂದ ಅನ್ಯಮಾರ್ಗಕ್ಕೆ ಹೋಗುತ್ತಿದ್ದಾರೆ.

ಇಂದಿಗೂ ಜನಪದ ವೈದ್ಯ ಪದ್ಧತಿಯು ಪ್ರಚಲಿತದಲ್ಲಿದೆ. ಪಾರ್ಶ್ವವಾಯು, ಮೂಳೆ ಮುರಿತ, ಮಕ್ಕಳ ಕಾಯಿಲೆಗಳಿಗೆ ಜನಪದ ವೈದ್ಯವೇ ಹೆಚ್ಚು ಪ್ರಚಲಿತದಲ್ಲಿರುವುದು ಇದರ ಪ್ರಸ್ತುತತೆಯನ್ನು ತೋರಿಸುತ್ತದೆ. ಮಂತ್ರವಾದಿ, ಗಣ, ದೇವರು, ದೆವ್ವಗಳ ನಂಬಿಕೆಯು ನರದೌರ್ಬಲ್ಯವಿರುವವರ ಆರೋಗ್ಯ ಸುಧಾರಣೆಗೆ ಅನಿವಾರ್ಯವೆಂದೆನಿಸಿದೆ. ಮಾನಸಿಕ ಶಾಂತಿ, ನೆಮ್ಮದಿ, ಪ್ರಾಮಾಣಿಕತನ, ಭಯ, ಭಕ್ತಿ ಮೊದಲಾದವುಗಳಿಗೆ ಇವುಗಳ ಪಾತ್ರ ಬಹುಮುಖ್ಯವಾದುದಾಗಿದೆ.

ಬುಡಕಟ್ಟು ಜನಾಂಗದವರು ಮುಗ್ಧರಾಗಿದ್ದು ಗುಡ್ಡಗಾಡು ಪರಿಸರದ ಒಂದು ಭಾಗವಾಗಿ ಜೀವಿಸುತ್ತಿದ್ದಾರೆ. ಅವರನ್ನು ಆ ವಾತಾವರಣದಿಂದ ಹೊರತಂದರೆ ನೀರಿನಿಂದ ಮೇಲೆ ತಂದ ಮೀನಿನಂತಾಗುತ್ತಾರೆ. ಪ್ರಾಣಿಸಂಕುಲ ಹಾಗೂ ವನಸಂಪತ್ತನ್ನು ಪ್ರೀತಿಯಿಂದ ಕಂಡು ಅಗತ್ಯಕ್ಕೆ ಬೇಕಾದಷ್ಟನ್ನೇ ಮಿತವಾಗಿ ಬಳಸುತ್ತಿದ್ದಾರೆ. ಅಭಿವೃದ್ಧಿಯೋಜನೆಯ ಹಿನ್ನೆಲೆಯಲ್ಲಿ ಅವರನ್ನು ಸ್ಥಳಾಂತರಿಸಿದರೆ ನಾಗರಿಕ ಸಮಾಜದವರೊಂದಿಗೆ ಬೆರೆತು ಬದುಕನ್ನು ಹೊಂದಾಣಿಕೆ ಮಾಡಿಕೊಳ್ಳುವುದು ಕಷ್ಟಸಾಧ್ಯವಾದುದು. ಅದೇ ಪರಿಸರಕ್ಕೆ ಹೊಂದಿಕೆಯಾಗಬಲ್ಲ ಅಗತ್ಯ ಸೌಲಭ್ಯವನ್ನು ಒದಗಿಸಿದರೆ ಅವರ ಅಭಿವೃದ್ಧಿಯೊಂದಿಗೆ ಮೂಲ ಸಂಸ್ಕೃತಿಯ ಈಗಿನ ರೂಪ ಉಳಿಯುತ್ತದೆ. ಅವರ ಮುಗ್ಧತನ, ವಾಸ್ತವ ಬದುಕು, ಅನ್ಯೋನ್ಯ ಸಂಬಂಧ ಮೊದಲಾದವುಗಳು ಅವ್ಯಾಹತವಾಗಿ ಹರಿದು ಬಂದು

ಈಗಲೂ ಸ್ಥಿರವಾಗಿರಲು ಅವರು ಜೀವಿಸುವ ಪರಿಸರದ ಪ್ರಭಾವವೇ ಕಾರಣವೆಂದು ತಿಳಿದುಬಂದಿದೆ. ಅವರ ಮಾನವೀಯ ಸಂಬಂಧ ಹಾಗೂ ಕೌಟುಂಬಿಕ ವ್ಯವಸ್ಥೆಯು ಜಗತ್ತಿಗೆ ಮಾದರಿಯಾಗಿದೆ.

ಶೃಂಗೇರಿ ತಾಲ್ಲೂಕಿನ ಸಾಂಸ್ಕೃತಿಕ ಅಂಶಗಳನ್ನು ಪರಿಮಿತ ವ್ಯಾಪ್ತಿಯೊಳಗೆ ಸಮಗ್ರವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯವಾದುದು. ಸಾಂಸ್ಕೃತಿಕ ಪರಂಪರೆಯ ಸಮಗ್ರ ಹೊಳಹು ದೊರೆಯಬೇಕಾದರೆ ಇನ್ನಷ್ಟು ಆಳ ಹಾಗೂ ವಿಸ್ತಾರವಾದ ಸಂಶೋಧನೆಯ ಅಗತ್ಯವಿರುವುದನ್ನು ಮನಗಾಣಲಾಗಿದೆ. ಅದ್ವೈತ ಮತಧರ್ಮದ ಪ್ರಧಾನ ಭೂಮಿಕೆಯಾದ ಶೃಂಗೇರಿಯಲ್ಲಿ ಸಂಸ್ಕೃತಿಯ ಭದ್ರ ತಳಪಾಯವನ್ನು ಕಾಣಬಹುದಾಗಿದೆ. ಸುತ್ತಮುತ್ತಲ ಜನರು ಶ್ರೀಮಠದ ಪ್ರಭಾವಕ್ಕೆ ಒಳಗಾಗಿರುವುದರಿಂದ ಶೃಂಗೇರಿ ಶ್ರೀಮಠದ ಸಾಂಸ್ಕೃತಿಕ ಪರಂಪರೆಯನ್ನೇ ಪ್ರತ್ಯೇಕ ಸಂಶೋಧನಾ ಕಾರ್ಯಕ್ಕೆ ಒಳಪಡಿಸಿದರೆ ಇಲ್ಲಿನ ಸಂಸ್ಕೃತಿಯ ಸಮಗ್ರ ಚಿತ್ರಣ ದೊರೆಯುತ್ತದೆ. ಶೃಂಗೇರಿಯಲ್ಲಿ ಬೇರೆ ಬೇರೆ ಜಾತಿ ಜನಾಂಗದವರಿದ್ದು ತಮ್ಮದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿದವರಾಗಿದ್ದಾರೆ. ಮುಂದಿನ ತಲೆಮಾರಿನ ವೇಳೆ ಪ್ರತ್ಯೇಕತೆಗಳನ್ನು ಗುರುತಿಸಲಾಗದೆ ಸಾಮಾನ್ಯೀಕರಿಸುವ ಸಾಧ್ಯತೆಗಳಿರುವುದರಿಂದ ಶೀಘ್ರವಾಗಿ ಪ್ರತಿಯೊಂದು ಜಾತಿ ಜನಾಂಗದ ಪ್ರತ್ಯೇಕ ಸಾಂಸ್ಕೃತಿಕ ಸಂಶೋಧನೆಯ ಅನಿವಾರ್ಯತೆ ಕಂಡುಬಂದಿದೆ. ಶೃಂಗೇರಿ ಸುತ್ತಮುತ್ತಲಿರುವ ಬುಡಕಟ್ಟು ಜನಾಂಗದವರ ಮೇಲೆ ನಾಗರಿಕತೆಯ ಪ್ರಭಾವವು ತೀರಾ ಇತ್ತೀಚೆಗೆ ಆಗಿರುವುದರಿಂದ, ಹಿರಿಯ ನಾಗರಿಕರ ಸಂದರ್ಶನಮಾಡಿ ಪ್ರತ್ಯೇಕ ಸಂಶೋಧನಾಕಾರ್ಯ ನಡೆದರೆ ಮಲೆನಾಡಭಾಗದ ಮೂಲಸಂಸ್ಕೃತಿಯ ಚಿತ್ರಣ ದೊರೆಯುವಂತಾಗುತ್ತದೆ. ಇವುಗಳಲ್ಲದೆ ರೂಢಿ–ಸಂಪ್ರದಾಯ, ಆಚಾರ–ವಿಚಾರ, ಆಚರಣೆ, ನಂಬಿಕೆ, ಪದ್ಧತಿ, ಜನಪದವೈದ್ಯ, ಜನಪದಕ್ರೀಡೆ, ಸಾಹಿತ್ಯ, ಮೊದಲಾದವುಗಳ ಪ್ರತ್ಯೇಕವಾದ ಸಂಶೋಧನಾಕಾರ್ಯಕ್ಕೆ ಬೇಕಾಗುವಷ್ಟು ಸಂಪನ್ಮೂಲಗಳು ಲಭ್ಯವಿರುವುದು ತಿಳಿದುಬಂದಿದೆ.

ಅನುಬಂಧ

1. ವಿಶಿಷ್ಟ ಪದಗಳ ಶಬ್ದಕೋಶ
2. ಪ್ರಶ್ನಾವಳಿ
3. ವಕ್ತೃಗಳ ಪಟ್ಟಿ
4. ನಕ್ಷೆ
5. ಛಾಯಾಚಿತ್ರ
6. ಪರಾಮರ್ಶನ ಗ್ರಂಥ

ಅನುಬಂಧ -1

ವಿಶಿಷ್ಟ ಪದಗಳ ಶಬ್ದಕೋಶ

ಅಂಡೆ-ಬಿದಿರುಗೊಳವೆ

ಅಗಚು- ಪ್ರತ್ಯೇಕಿಸು

ಅಡಕಾಯಿಸು-ಅಡ್ಡಿಮಾಡು, ಬೆನ್ನುಹತ್ತು

ಅಡ್ಡಿಸಡ್ಡಿ – ಅಡಚಣೆ

ಅಪದಾನ- ಉದಾತ್ತವಾದ ಕೆಲಸ

ಅಪ್ರೋಪ್ರ- ಅಪರೂಪ

ಅವಾಂತರ- ಗದ್ದಲ

ಅಳವೆ- ರೈತರಿಗೆ ಸಾಗುವಳಿ ಬಗ್ಗೆ ಬರೆದುಕೊಡುವ ಒಪ್ಪಂದ

ಆಂದೂಳಿಕ- ತೂಗುಮಂಚ

ಆಂಬ್ರ- ಸಾರು

ಆಯಾರ ಕೊಡು- ಪ್ರಾಣಿಬಲಿಕೊಡು

ಇಕಾಲ- ಈ ವರ್ಷ

ಇಕ್ಕು- ಬಡಿಸು

ಇಚಿತ್ರ- ಆಶ್ಚರ್ಯ, ವಿಚಿತ್ರ

ಇನಾಮತಿ ಗ್ರಾಮ- ದಾನಕ್ಕೆ ಬಂದ ಗ್ರಾಮ

ಉಂಬಳಿ- ಮಾನ್ಯವಾಗಿ ಕೊಡುವ ಭೂಮಿ ಗ್ರಾಮ ಮುಂತಾದವುಗಳು

ಉಪಾಯನ-ಬಾಗಿನ

ಉಫೀಟ್-ಆಟದಲ್ಲಿ ಬಳಸುವ ಪದ-ಹೀಗೆ ಹೇಳಿದರೆ ಔಟ್ ಆಗುವುದಿಲ್ಲ.

ಊರಾತ- ಒತ್ತಾಯ

ಎತ್ತುವಳಿ- ವಸೂಲಿ

ಐಗಳಮಠ- ಪಾಠಶಾಲೆ

ಐಗಳು-ಉಪಾಧ್ಯಾಯರು

ಐವಜು- ಉತ್ಪತ್ತಿ, ಕಿಮ್ಮತ್ತು

ಒಯ್ನ-ಚೆನ್ನಾಗಿ

ಒರಳು- ಭತ್ತ ಕುಟ್ಟುವ ಹೊಂಡ

ಒಸಗೆ-ಋತುಮತಿಯಾದ ವಿಷಯ ತಿಳಿಸುವುದು

ಕಕ್ಕರೆ– ಬೇಜಾರು

ಕಡ– ಸಾಲ

ಕಡಚ– ಕೈಗಡ

ಕಡಿತ– ಕಡತ

ಕಾಸು– ಹಾಗದ ಹದಿನಾರನೇ ಒಂದು ಭಾಗ

ಕಿರಿಗೆ–ಕಡಿಮೆ ಉದ್ದದ ಸೀರೆ

ಕಿಸಾಕೋಳಿ– ತಾಪತ್ರಯ,

ಕುಡುಪ– ಹಜಾಮ

ಕುಮ್ಮಕ್ಕು– ಸಹಾಯ

ಕುಲುಮಾರೆ–ಹರಿಜನರ ಮದುವೆ

ಕೇಲು–ಕಂದೀಲು – ಗೂಡೆ

ಕೊರೆತನ– ಸೋಮಾರಿತನ

ಕ್ರಯಚೀಟು– ವಿಕ್ರಯ ಪತ್ರ

ಗಂಠಿ– ಜಾನುವಾರು

ಗರ್ಭಾದಾನ–ಋತುವಾದ ನಂತರ ಗಂಡನ ಮನೆಯಲ್ಲಿ ನಡೆಸುವ ಹೋಮ

ಗುತ್ತಿಗೆ– ಒಪ್ಪಂದ

ಗುದ್ದುಮುರಿ– ಹೊಡೆದಾಟ

ಗುನ್ನ–ಗಾಯ

ಗೌಡ– ಗ್ರಾಮಾಧಿಕಾರಿ

ಗ್ಯಾನ– ಜ್ಞಾಪಕ, ನೆನಪು

ಘನಾಗಿದೆ– ಚೆನ್ನಾಗಿ ಇದೆ

ಚಟ್ಪ– ಹೆಣ ಹೊರುವ ಸಾಧನ

ಚಡಾವು – ಉಬ್ಬು, ಗುಡ್ಡ, ತುಟ್ಟು,

ಚಾವಡಿ– ಗ್ರಾಮಕಛೇರಿ

ಚೋಜಿಗ– ಬಹಳ ಆಶ್ಚರ್ಯ

ಛಾಜ– ಶಾಸ್ತ್ರ

ಜಮಾದಾರ– ಪೋಲೀಸ್ ಅಧಿಕಾರಿ

ತತ್ತು– ಸಾಮೂಹಿಕ

ತನಿ ಎರೆಯುವುದು–ನಾಗರಿಗೆ ಅಭಿಷೇಕ

ತಪರಾಕಿ– ಪೆಟ್ಟು

ತುರ್ಚೆಪ್ – ಚಿನ್ನಿದಾಂಡು ಆಟದಲ್ಲಿ ಬಳಸುವ ಪದಗಳು

ತುರ್ದಾಂಡ್– ಚಿನ್ನಿದಾಂಡು ಆಟದಲ್ಲಿ ಬಳಸುವ ಪದಗಳು

ದಗಲೆ–ಅಂಗಿ

ದರೋಗ– ಸಂಸ್ಥಾನದ ಒಬ್ಬ ಅಧಿಕಾರಿ

ದರೋಬಸ್ತು– ಜಬರ್‌ದಸ್ತು

ದಿಂಡೆತನ– ನೀಚತನ

ದುಡ್ಡು– ಆಣೆಯ ಮೂರನೆಯ ಒಂದು ಭಾಗ

ದುರುಸು– ಡ್ರೆಸ್ಸು

ನಿಗುರು– ನೆಟ್ಟಗಾಗು

ನಿವೀತಿ–ಮಾಲಾಕಾರ

ನೆಗೆದುಬಿದ್ದ– ಹಾರಿಬಿದ್ದ, ಸತ್ತ

ನೌಟು– ಜಿಡ್ಡು, ತುಪ್ಪ

ಪಕಳೆಗಾರ– ಹಾಸ್ಯಗಾರ

ಪಡಪೊಸಿ– ಮೊಸಗಾರ

ಪಡ್ಚಆದ– ಸತ್ತುಹೋದ

ಪಣತೆ– ಹಣತೆ

ಪರಿಕಾಲ–ಲಂಗ

ಪಾಕ್ದ – ತಪ್ಪಿಸಿಕೊಳ್ಳು, ನುಣುಚು

ಪಿಠಾರಿ– ಪೆಟ್ಟಿಗೆ

ಪಿರ್ಕಿ– ಬುದ್ಧಿಯಿಲ್ಲದವ

ಬಗಳೆ–ಸುಳ್ಳು

ಬಜ್ಜ–ಸತ್ತವನ ತಿಥಿ

ಬಡ್ರುಬಿದ್ದ– ಗಡಿಬಿಡಿ ಆದ

ಬದುಕು– ಜೀವನೋಪಾಯಕ್ಕಾಗಿ ಮಾಡುವ ಕೆಲಸ

ಬದ್ಯಾಗು– ನಿಜವಾಗ್ಲು

ಬರಾಕಲಿ– ವಿದ್ಯೆಕಲಿ

ಬರ್ಗಾಲ- ಕ್ಷಾಮ

ಬಸಪುರಾಣ- ಹಳೇಕಥೆ

ಬಿಂಗ್ರಿ- ಬುದ್ಧಿ ಇಲ್ಲದವ

ಬಿಕನಾಸಿ- ಯಾರು ಇಲ್ಲದವ

ಬಿದ್ದಿನೋರು- ನೆಂಟರು

ಬುರುಡೆ- ಉರುಟು ಪಾತ್ರೆ, ಸುಳ್ಳು

ಬುರ್ನಾಸು- ಪ್ರಯೋಜನವಿಲ್ಲ

ಬೆಳಕಂಡಿ- ಕಿಟಕೆ, ಕಿಟಕಿ

ಬೈಗಾತು- ಸಂಜೆ ಆಯಿತು

ಬೊಕ್ಕಣ್ಣ- ಜೇಬು

ಬೊಕ್ಕಸ್ತ- ಖಜಾಂಚಿ

ಬೊದತಪ್ಪಿದೆ- ಪ್ರಜ್ಞೆತಪ್ಪಿದೆ

ಬೊಳ್ಳು- ನರಿ

ಭರ್ಧಂಡು- ಜೋರಾಗಿ

ಮಂಗಾನ- ಮಲಗೋಣ

ಮಕ್ಕಿಗದ್ದೆ- ಮಳೆಯಾಶ್ರಯದ ಎತ್ತರದ ಸಾಗುವಳಿ ಭೂಮಿ

ಮಜಲು- ತಂಗುವಿಕೆ

ಮರಮಸಲಗಾರ- ಅಪಾಯಗಾರ

ಮರಮಸಲತನ- ಒರಟುತನ

ಮಾಗಣಿ- ಹೋಬಳಿ

ಮಿರಾಸು- ಮಠದಿಂದ ಧಾನ್ಯ ಅಥವಾ ಹಣವನ್ನು ಪಡೆಯುವ ಅನುವಂಶಿಕ ಹಕ್ಕು

ಮೀಯು-ಸ್ನಾನ ಮಾಡು

ಮುಂಡಾಸು- ಪೇಟ

ಮುಟ್ಟುಚಿಟ್ಟು- ಅಶುದ್ಧ

ಮೆಲಾರ-ಸಾಂಬಾರು

ಯಪ್ಪೆಹಾಕು- ಮೋಸಮಾಡು

ರಹದಾರಿ- ಒಪ್ಪಿಗೆ ಪತ್ರ

ರಿವಾಜು- ಪದ್ಧತಿ

ರೊತ್ತೆ– ಕಾಯಿಲೆ

ರ್‍ಹುಣ–ಸಾಲ

ವಗತನ– ಅಚ್ಚುಕಟ್ಟು

ವಟ್ಟವರಾಡ– ಕಮಿಷನ್ನು ಮತ್ತು ಸುಂಕ

ವತಾವತಿ– ಜನಸಮೂಹ

ವಪ್ಪ– ಸಮ್ಮತಿ

ವರಹ– ನಾಣ್ಯ

ವಾಲೆ– ಓಲೆ

ವಿದ್ಯಮಾನ– ಸಮಾಚಾರ

ವೃತ್ತಿ– ವೃತ್ತಿ, ಸಣ್ಣ ಭೂಭಾಗ

ವೆಗ್ಗಳ– ಹೆಚ್ಚು

ವೈನಾಗಿದೆ– ಅಚ್ಚುಕಟ್ಟಾಗಿದೆ

ಶಿಖೆ–ಹಣೆಯಮೇಲೆ ವೃತ್ತಾಕಾರವಾಗಿ ಕೂದಲನ್ನು ಕತ್ತರಿಸಿ ಜುಟ್ಟನ್ನು ಬಿಡುವುದು

ಶಿಸ್ತು– ಪ್ರಮಾಣಬದ್ಧವಾದ ಭೂಕಂದಾಯ

ಸಂಪ್ರತಿ– ಸದ್ಯದ ಪರಿಸ್ಥಿತಿ

ಸಣಕಲ– ಬಡಕಲ

ಸುಬೇದಾರ– ಸಂಸ್ಥಾನದ ಮುಖ್ಯಾಧಿಕಾರಿಯಲ್ಲಿ ಒಬ್ಬ

ಸೇಕದಾರ– ಕಂದಾಯದ ಅಧಿಕಾರಿ

ಸೇನಬವ– ಶಾನುಭೋಗ

ಸೇರೆಗಾರ– ಮೇಸ್ತ್ರಿ

ಹಂಗ್ರಾಣಿ– ದಾಕ್ಷಿಣ್ಯ

ಹಕ್ಕಲು– ಬೆಳೆಕೊಯ್ದ ಜಮೀನು

ಹಟ್ಟಿ– ಹಸುವಿನ ಕೊಟ್ಟಿಗೆ

ಹಡ್ಲುಬಿದ್ದಿದೆ– ಹಾಳು ಬಿದ್ದಿದೆ

ಹತ್ಯಾರ– ಆಯುಧ

ಹರಿಕಾರ– ಸಮಾಚಾರ ಒಯ್ಯುವ

ಹಮರ್ಾಗಾಲ– ಕಷ್ಟದ ಕಾಲ

ಹವಾಲೆ– ವಶ

ಹಸಾಳಿ– ತಂಬುಳಿ

ಹಾಗ– ಹಣದ ನಾಲ್ಕನೇ ಒಂದು ಭಾಗ

ಹಾಡ್ಯ– ಹಿತ್ತಲ ಬದಿಯ ಕುರುಚಲು ಕಾಡು

ಹಿರೇತನ– ಹೆಚ್ಚುಗಾರಿಕೆ

ಹುರಮಂಜಿ – ಕೆಮ್ಮಣ್ಣು

ಹೈಲು– ತಮಾಶೆ, ಯಡಬಿಡಂಗಿ

ಹೊನ್ನು– ಅರ್ಧವರಹ

ಹೊರಗಾಗು–ಮುಟ್ಟಾಗು

ಹೊಸೆಯುವುದು– ತಿರುಪುಮಾಡು

ಹೋಬಳಿ– ತಾಲ್ಲೂಕಿನ ಒಂದು ಭಾಗ

ಶಿಕ್ಕ–ಮಡಿಕೆ ಕುಡಿಕೆಗಳನ್ನು ನೇತುಹಾಕುವ ವಸ್ತು

ಅನುಬಂಧ – 2

ಪ್ರಶ್ನಾವಳಿ

1. ಹೆಸರು .... ಊರು .... ಗ್ರಾಮ ....
   ವಯಸ್ಸು .... ಜಾತಿ .... ಉಪಜಾತಿ .... ಉದ್ಯೋಗ ....
   ಮತ .... ಶಿಕ್ಷಣ.......................
   ಕೃಷಿಯಾದರೆ, ಹಿಡುವಳಿ .... ಪ್ರಮುಖ ಬೆಳೆಗಳು .... ವಿಸ್ತೀರ್ಣ ....
   ಆದಾಯ .... ಇತರೆ ಆದಾಯದ ಮೂಲ ....
   ಕುಟುಂಬ ಸದಸ್ಯರು ....
   ಅಣ್ಣ .... ತಮ್ಮ .... ಅಕ್ಕ .... ತಂಗಿ ....
   ಮಗ .... ಮಗಳು .... ಮೊಮ್ಮಕ್ಕಳು

2. ತಂದೆಯ ಹೆಸರು .... ಉದ್ಯೋಗ ....
   ಹಿಡುವಳಿ .... ಪ್ರಮಾಣ ....
   ಬೆಳೆ .... ಆದಾಯದ ಇತರೆ ಮೂಲಗಳು ....
   ಜೀವಿತದ ಕಾಲಾವಧಿ ....
   ತಾಯಿಯ ಹೆಸರು .... ಉದ್ಯೋಗ ....
   ಜೀವಿತದ ಕಾಲಾವಧಿ ....

3. ಅಜ್ಜನ ಹೆಸರು .... ಅಂದಾಜು ಜೀವಿತಾವಧಿ ....
   ಉದ್ಯೋಗ .... ಅವರ ಮೂಲ ....
   ಜನಪದ ಕಲೆ ....
   ಅಜ್ಜಿಯ ಹೆಸರು .... ಅಂದಾಜು ಜೀವಿತಾವಧಿ ....
   ಜನಪದ ಕಲೆ..................................

1. ಹಬ್ಬಾಚರಣೆಯ ಬಗ್ಗೆ

ಹಬ್ಬಗಳು	ಅಜ್ಜನ ಕಾಲದಲ್ಲಿ	ತಂದೆಯ ಕಾಲದಲ್ಲಿ	ನಿಮ್ಮ ಕಾಲದಲ್ಲಿ
ಈಗಿನ ಬದಲಾವಣೆ			
ದೀಪಾವಳಿ			
ವರ್ಷತೊಡಕು			
ಗೌರಿಹಬ್ಬ			
ಗಣಪತಿ ಹಬ್ಬ			
ಇಲಿವಾರ/ಇಲಿಹಬ್ಬ			
ಶಿವರಾತ್ರಿ			
ಮಹಾಲಯ			
ನವರಾತ್ರಿ			
ಕೊಡೆ ಅಮಾವಾಸ್ಯೆ			

ಬಸವನ ಅಮಾವಾಸ್ಯೆ
ಸಂಕಷ್ಟ
ಪಾರಾಚರಣೆ
ತುಳಸಿದೀಪ
ದೇವರ ದೀಪ
ಜಾತಿವಾರು ಇತರೆ ಹಬ್ಬಗಳು

ನಾಗರದೀಪ

	ಅಜ್ಜನ ಕಾಲದಲ್ಲಿ	ತಂದೆಯ ಕಾಲದಲ್ಲಿ	ನಿಮ್ಮ ಕಾಲದಲ್ಲಿ
ಈಗಿನ ಬದಲಾವಣೆ			
ಭೂತಾರಾಧನೆ			
ದೇವರಪೂಜೆ			
ವ್ರತಾಚರಣೆ			
ಹರಕೆ			
ಬಲಿ			
ಪ್ರತಿಷ್ಠೆ			
ಗಣ			
ಮೈಮೇಲೆ ದೇವರು			
ಮಾಟ			
ಮಂತ್ರ			
ತಂತ್ರ			
ಜಾತ್ರೆ			
ಊರ ಜಾತ್ರೆ			
ಮಾರಿ ಜಾತ್ರೆ			
ರಥೋತ್ಸವ			
ಕೋಲ			
ಪಿತೃ ಆರಾಧನೆ			
ಅಂತ್ಯಕರ್ಮ			
ಪ್ರಥಮ ವರ್ಷಾಚರಣೆ			
ವಾರ್ಷಿಕ ಆಚರಣೆ			
ಮಹಾಲಯ			
ಊಟ – ತಿಂಡಿ			
ಪದಾರ್ಥಗಳ ಬಳಕೆ			
ವರ್ಜ್ಯ ಪದಾರ್ಥಗಳು			
ಹಬ್ಬದಲ್ಲಿ ಮಾಡುವ ಭಕ್ಷ್ಯ, ಭೋಜನ ಪದಾರ್ಥಗಳು			
ಸಹ ಭೋಜನ			
ಬಡಿಸುವ ವಿಧಾನ			
ಭೋಜನದ ರೀತಿ-ರಿವಾಜು			
ಮಾಂಸಾಹಾರಿ			
ವಿವಿಧ ಹಬ್ಬದಂದು ಮಾಡುವ ಮಾಂಸಾಹಾರ			
ಕೊಲ್ಲಗಿಡುವ ಕ್ರಮ			

ಕೂಪ್ಗಿಡುವ ಉದ್ದೇಶ
ಮದ್ಯಪಾನಗಳು
ಮದ್ಯಪಾನದ ಪರಿಣಾಮ

2. ಹಳ್ಳಿಗಳು

ರಸ್ತೆ
ಮೋರಿ
ಸಾಲುಮರ
ಕುಡಿಯುವ ನೀರಿನ ವ್ಯವಸ್ಥೆ

3.ಭಿಕ್ಷೆ ಬೇಡುವುದು
ಸನ್ಯಾಸಿಗಳು
ಯತಿಗಳು
ಧರ್ಮಗುರುಗಳು
ಯಾತ್ರಿಕರು
ಅನಾಥ
ಅಂಗವಿಕಲ
ಜೋಗಿಗಳು
ಹಾಲಕ್ಕಿ ಜನ
ಗಿಳಿ ಶಕುನ
ಶಕುನ
ಕೊರವಂಜಿ
ಕೊರಗರು
ಹುಲಿವೇಷ
ಕರಡಿ ವೇಷ
ಕೊರವಂಜಿ ವೇಷ
ಯಕ್ಷಗಾನ ಚಿಕ್ಕಮೇಳ
ನಾಟಕ
ಹರಿಕಥೆ
ಕೋಲಾಟ

4. ಗಾಯಕರು

ಜನಪದ ಗೀತೆ
ಜನಪದ ಲಾವಣಿ
ಕಥೆ
ಜೋಗುಳ ಹಾಡು
ಸೋಬಾನೆ ಪದ
ಅಂಟಿಕೆ ಪಿಂಟಿಕೆ

5. ಕಸುಬುಗಳು :

ತಯಾರಿಸುವ ವಸ್ತುಗಳು ಮತ್ತು ಬಳಸುವ ಪರಿಕರಗಳು :

ಮರಗೆಲಸ [ ] ಕಂಚು [ ] ತಾಮ್ರ [ ] ಒತ್ತಾಳೆ [ ] ಕಬ್ಬಿಣ [ ] ಕಲ್ಲು [ ] ಮಡಿಕೆ [ ]
ಬುಟ್ಟಿ [ ] ಚಿನ್ನ [ ] ಬೆಳ್ಳಿ [ ] ಕರಕುಶಲ ವಸ್ತುಗಳು [ ]
ತಟ್ಟೆ [ ] ಚಾಪೆ [ ] ಕೊಳಗ [ ] ಸೇರು [ ] ಸಿದ್ದೆ [ ] ಚಟಾಕು [ ] ಕಂಡುಗ [ ] ಪಲ್ಲ [ ]ಮಣ [ ] ಬೈನೆ ಕಟ್ಟುವುದು [ ] ಮಾದಕ ವಸ್ತುಗಳ ತಯಾರಿ [ ]

6. ಜಾತಿವಾರು ವೃತ್ತಿ ಹಾಗೂ ಕಸುಬು :

ಬ್ರಾಹ್ಮಣ	**ಒಕ್ಕಲಿಗ**	**ಮೊಗವೀರ**	**ಮಡಿವಾಳ**	**ಶೆಟ್ಟರು**	**ಕೊಂಕಣಿ**	**ಲಿಂಗಾಯಿತ**
ವಿಶ್ವಕರ್ಮ	**ಬೋವಿ**	**ಭೋವಿ**	**ಮಾಲೇರು**	**ಕುಂಬಾರ**	**ಬಂಟರು**	**ಬೇಲರು**
ಪ.ಜಾ.	**ಪ.ಪಂ.**	**ಪೂಜಾರಿ**	**ವಡ್ಡರು**	**ಹಸಲರು**	**ಈಡಿಗರು**	

7. ವಸ್ತುಗಳು :

ಮಳೆಗಾಲ ಸಂಬಂಧಿ ವಸ್ತುಗಳು **ಬೇಸಿಗೆ ಸಂಬಂಧಿ ವಸ್ತುಗಳು** **ಚಳಿಗಾಲ ಸಂಬಂಧಿ ವಸ್ತುಗಳು**

ಗೊರಬು, ಕಂಬಳಿಕೊಪ್ಪೆ, ಹಾಳೆಟೊಪ್ಪಿ, ಎಲೆ ಅಡಿಕೆ ಚೀಲ, ಶಿಕಾರಿ ಚೀಲ, ಮಂಕರಿ, ಕೂಳೆ, ಗೂಡೆ, ಕುಕ್ಕೆ, ಬಲೆ, ನೇಗಿಲು, ನೊಗ, ಗಾಡಿ ತೊಟ್ಟಿಲು, ಓಲೆಕೊಡೆ, ಚತ್ರಿ ಕಂಬಳಿ, ರಗ್ಗು

8. ವಿವಾಹ ಪದ್ಧತಿ :

ಸಜಾತೀಯ ವಿವಾಹ:
ಅಂತರಜಾತೀಯ ವಿವಾಹ :
ರಕ್ತಸಂಬಂಧಗಳ ನಡುವೆ :
ಸಂಬಂಧಿಕರ ನಡುವೆ:
ಹೊಸ ಸಂಬಂಧ:

9. ಶಾಸ್ತ್ರ :

ತೊಟ್ಟಿಲು ಶಾಸ್ತ್ರ : ಕಿವಿ ಚುಚ್ಚುವುದು :

10. ಗ್ರಾಮೀಣ ಔಷಧಿ :

ಮದ್ದು ಹಾಕುವುದು :
ಬಾಣಂತಿ :
ಗರ್ಭಿಣಿ :
ಮಕ್ಕಳ ಪಾಲನೆ :
ಗರ್ಭನಿರೋಧಕ :
ಬೇಗ ಋತುವಾಗಲು :

11. ಗ್ರಾಮೀಣ ತಿಂಡಿ–ತಿನಿಸು :

ಹಬ್ಬಹರಿದಿನಗಳಲ್ಲಿಯ ವಿಶೇಷತೆಗಳು :
ಬೇರೆ ಬೇರೆ ಜಾತಿ ಜನಾಂಗದವರು ಮಾಡುವ ತಿಂಡಿ–ತಿನಿಸುಗಳು :

12. ಶಿಕಾರಿ ಮಾಡುವ ಕ್ರಮ : ಉದ್ದೇಶ, ಹಿನ್ನೆಲೆ, ಸಂದರ್ಭ

ಮರಸು ಬೇಟೆ :

ರಾತ್ರಿ ಬೇಟೆ :

ಹಳು ನುಗ್ಗಿ ಬೇಟೆ :

ಕಾಡು ಸೋಸುವುದು :

ಮೀನು ಬೇಟೆ :

ಪ್ರಾಣಿಪಕ್ಷಿಗಳನ್ನು ಹಿಡಿಯುವ ತಂತ್ರಗಾರಿಕೆ :

ಬಳಸುವ ಉಪಕರಣ :

13 ಆಟದ ಬಗ್ಗೆ:

ಆಟದ ವಸ್ತು :

ಆಡುವ ವಿಧಾನ :

ಬಳಸುವ ಕ್ರಮ :

ಮಹಿಳೆಯರ ಆಟಗಳು :

ಪುರುಷರ ಆಟಗಳು :

ಮದುವೆ ಇತರ ಸಮಾರಂಭಗಳಲ್ಲಿ ಆಡುವ ಆಟಗಳು :

ಮಕ್ಕಳ ಆಟಗಳು :

ಹುಡುಗರ ಆಟಗಳು :

ಆಟದ ಉದ್ದೇಶ :

14. ಉಡುಗೆ ತೊಡುಗೆಗಳು :

ಪುರುಷರು :

ಮಹಿಳೆಯರು :

ಮಕ್ಕಳು :

ವಯಸ್ಕರು :

15. ಸಾಕುಪ್ರಾಣಿ–ಪಕ್ಷಿಗಳು :

ಪ್ರಾಣಿಗಳು–ಪಕ್ಷಿಗಳು	ಸಾಕುವ ಕ್ರಮ	ಸಾಕುವ ಉದ್ದೇಶ
ಹಸು		
ಎಮ್ಮೆ		
ಎತ್ತು		
ಕುರಿ		
ಹಂದಿ		
ಕೋಳಿ		
ನಾಯಿ		
ಬೆಕ್ಕು		
ಮೀನು		
ಗಿಳಿ		
ನವಿಲು		
ಪಾರಿವಾಳ		

16. ಜನಪದರ ವಸ್ತುಗಳು :

ಮನೆಯಲ್ಲಿ ಬಳಸುವ ವಸ್ತುಗಳು :
ಕೃಷಿ ಸಂಬಂಧಿ ವಸ್ತುಗಳು :
ಕರಕುಶಲ ವಸ್ತುಗಳು :

ಗೃಹಕೈಗಾರಿಕೆ :

17. ಜನಪದ ಹಾಡು, ಕಥೆ, ಕುಣಿತ :

ಹಬ್ಬದ ಸಮಯದಲ್ಲಿ ಮಂಗಳಕರ ಸಂದರ್ಭ ಬೇಸಾಯದ ಸಂದರ್ಭ ಸೋಬಾನೆ ಪದ ಸಂಪ್ರದಾಯಗಳು

18. ಸಂಸ್ಕಾರಗಳು ಮತ್ತು ಆಚರಣೆ :

ಋತು ವಾದಾಗ ಶಾಂದಿ ಮದುವೆ ಬಯಕೆ ಶಾಸ್ತ್ರ ನಾಮಕರಣ

ಸೂತಕ ವೃದ್ಧಿ ಉಪ ನಯನ ಚೌಲ ಆಷಾಢ ಹುಣ್ಣಿಮೆ

19. ಮನೆಯ ಶೃಂಗಾರ :

	ಶ್ರೀಮಂತರ ಮನೆ	ಮಧ್ಯಮವರ್ಗದವರ ಮನೆ	ಬಡವರ ಮನೆ
ಬ್ರಾಹ್ಮಣ			
ಶೂದ್ರ			
ದಲಿತ			
ಅಲ್ಪಸಂಖ್ಯಾತ			

20. ವೈಯಕ್ತಿಕ ಶೃಂಗಾರ :

ಮಹಿಳೆಯರು
ಪುರುಷರು
ಯುವಕರು
ಯುವತಿಯರು
ಮಕ್ಕಳು
ಮಗು
ವೃದ್ಧರು

21. ಕುಟುಂಬ ವ್ಯವಸ್ಥೆಯ ಸಾಮಾಜಿಕ ಚಿತ್ರಣ :

(ಅ) ವಿಭಕ್ತ ಕುಟುಂಬ

ವಿಶೇಷತೆ ಗುಣದೋಷ

(ಆ) ಅವಿಭಕ್ತ ಕುಟುಂಬ

ವಿಶೇಷತೆ ಗುಣದೋಷ

22. ಆರ್ಥಿಕ ಸ್ಥಾನಮಾನ :

ಶಿಕ್ಷಣ ಉದ್ಯೋಗ ಕಲೆ ಹವ್ಯಾಸ ಸಾಹಿತ್ಯ ಕ್ರೀಡೆ

ಮನರಂಜನೆ

ಬ್ರಾಹ್ಮಣ
ಶೂದ್ರ
ಅಲ್ಪ ಸಂಖ್ಯಾತ
ದಲಿತ

23. ಭಾಷೆ:
ಮೂಲಭಾಷೆ ಬದಲಾವಣೆಯಾದವುಗಳು ಕಣ್ಮರೆಯಾದವುಗಳು ಅನ್ಯಾರ್ಥ ಪ್ರಧಾನ ಹೀನಾರ್ಥವಾದವುಗಳು

24. ಕಲೆ :
ಹಾಡು ಕುಣಿತ ವೇಷ ರಂಗಕಲೆ ಸುಗ್ಗಿ ಕುಣಿತ ಇತರೆ

25. ಆಹಾರ ಬೆಳೆಗಳು :
ವಾಣಿಜ್ಯ ಬೆಳೆ ಆಹಾರ ಬೆಳೆ ಅಗತ್ಯ ಬೆಳಗಳು ತರಕಾರಿ ಹಣ್ಣುಹಂಪಲು

26. ರೋಗ :
ಅಡಿಕೆ ಕಾಫಿ ಭತ್ತ ತೆಂಗು ಬಾಳೆ ಕಬ್ಬು ಕೋಕೊ ಮೆಣಸು ಮುರುಗ ಹೂವುಗಳು ಹಣ್ಣುಗಳು ಇತರೆ

27. ರೋಗನಿರೋಧಕ ಪದ್ಧತಿ :
ವಾಣಿಜ್ಯ ಬೆಳೆಯ ಸವಾಲುಗಳು
ಮೊದಲ ಸ್ಥಿತಿ
ಈಗಿನ ಸ್ಥಿತಿ
ಭವಿಷ್ಯದ ಸ್ಥಿತಿ
ಮಾರುಕಟ್ಟೆ

28. ತರಕಾರಿ :
ಸಾಂಪ್ರದಾಯಿಕ ತರಕಾರಿ :
ಹೊಸತಂತ್ರಜ್ಞಾನದಿಂದಾದ ಬದಲಾವಣೆ :

29. ವಿದ್ಯಾಭ್ಯಾಸ ಕ್ರಮ :

	ಹಿಂದಿನ ಕಾಲ	ಮಧ್ಯಂತರ ಕಾಲ	ಈಗಿನ ಕಾಲದಲ್ಲಿ
ಶಾಲಾ ಪದ್ಧತಿ			
ವಿದ್ಯಾರ್ಥಿಗಳು			
ಶಿಕ್ಷಕರು			
ವಿದ್ಯಾರ್ಜನೆಯ ಮಟ್ಟ			

ಏಥೇಯಿತೆ

30. ಆಡಳಿತ ವ್ಯವಸ್ಥೆ :

ಜಹಗೀರಿಗೆ ಮುಂಚೆ	**ಜಹಗೀರಿಗೆ ನಂತರ**
ಪಟೇಲ	
ಗೌಡ	
ಶಾನುಭೋಗ	
ಸುಭೇದಾರ	
ತಹಶೀಲ್ದಾರ್	
ದಫೇದಾರ	

31. ಆಡಳಿತಾತ್ಮಕ ವಿಭಾಗಗಳು :

ಹಳ್ಳಿ ಮತ್ತು ಪುರ :

ಗ್ರಾಮ :

ಪಂಚಾಯ್ತಿ :

ಹೋಬಳಿ :

ನಗರ :

32. ಜಹಗೀರಿ ಇದ್ದಾಗಿನ ಅನುಭವ :

33. ಜಹಗೀರಿ ರದ್ದತಿಯ ನಂತರದ ಅನುಭವ :

ಅನುಬಂಧ – 3

ವಕ್ತೃಗಳು

ಹೆಸರು	ಗಂಡ ತಂದೆಯ ಹೆಸರು	ಊರು	ಲಿಂಗ	ವಯಸ್ಸು	ಜಾತಿ	ವೃತ್ತಿ
ಅಣ್ಣಪ್ಪ	ಗುಂಡ	ಕುಂಚಿಹಕ್ಲು	ಗಂಡು	90	ಬೇಲರು	ಕೂಲಿ
ಅಣ್ಣಯ್ಯ ಹೆಗ್ಗಡೆ ಎನ್.ಎಲ್.	ಲಿಂಗಪ್ಪ ಹೆಗ್ಗಡೆ	ನೆಮ್ಮಾರು	ಗಂಡು	81	ಒಕ್ಕಲಿಗ	ವ್ಯವಸಾಯ
ಅನಂತಪದ್ಮನಾಭ ಭಟ್	ರಾಮಭಟ್	ಹೇರೂರು	ಗಂಡು	75	ಬ್ರಾಹ್ಮಣ	ವ್ಯವಸಾಯ
ಅಪ್ಪಾಚಾರಿ ಕೆ.	ಅಯ್ಯಾಚಾರಿ	ಕುಂಬಾರಕೊಪ್ಪ	ಗಂಡು	76	ವಿಶ್ವಕರ್ಮ	ವ್ಯವಸಾಯ
ಆನಂದರಾವ್	ಸಿಂಗಪ್ಪಯ್ಯ	ನಾಯ್ಕಾಡು	ಗಂಡು	78	ಬ್ರಾಹ್ಮಣ	ವ್ಯವಸಾಯ
ಇಬ್ರಾಹಿಂ	ಖಾದರ್ ಸಾಹೇಬ್	ಶೃಂಗೇರಿ	ಗಂಡು	68	ಮುಸ್ಲಿಂ	ವ್ಯಾಪಾರ
ಕಾಡು ಮೂಲ್ಯ	ಬಾಬು ಮೂಲ್ಯ	ವೈಕುಂಠಪುರ	ಗಂಡು	80	ಕುಂಬಾರ	ಕೂಲಿ
ಕಾಳಮ್ಮ	ಮಂಜಪ್ಪಾಚಾರಿ	ಸೂರುಗೋಡು	ಹೆಣ್ಣು	78	ವಿಶ್ವಕರ್ಮ	ಗೃಹಿಣಿ
ಕೃಷ್ಣಮೂರ್ತಿ ಹೆಚ್.ಎಸ್.	ಸೀತಾರಾಮಯ್ಯ	ವಿದ್ಯಾರಣ್ಯಪುರ	ಗಂಡು	77	ಬ್ರಾಹ್ಮಣ	ಶಾನುಬೋಗ
ಕೆಂಚಮ್ಮ	ಸಿಂಗೇಗೌಡ	ಶೀರ್ಲು	ಹೆಣ್ಣು	70	ಗೌಡ್ಲು	ವ್ಯವಸಾಯ
ಗಣಪತಿ ಸುಬ್ರಹ್ಮಣ್ಯ ಅವಧಾನಿ	ವೆಂಕಟಸುಬ್ಬಾವಧಾನಿ	ಶೃಂಗೇರಿ	ಗಂಡು	91	ಬ್ರಾಹ್ಮಣ	ಪೌರೋಹಿತ್ಯ
ಗಿಡ್ಡೇ ನಾಯ್ಕರು	ಗುಂಡೇನಾಯ್ಕರು	ಚಟ್ನುಣಿ	ಗಂಡು	78	ಒಕ್ಕಲಿಗ	ವ್ಯವಸಾಯ
ಗಿರಿಯಪ್ಪ ಗೌಡ	ಪುಟ್ಟಣ್ಣ ಗೌಡ	ಗಂಡಘಟ್ಟ	ಗಂಡು	80	ಒಕ್ಕಲಿಗ	ವ್ಯವಸಾಯ
ಗೀತಾ	ಶ್ರೀನಿವಾಸ ನಾಯಕ್	ನೆಮ್ಮಾರು	ಹೆಣ್ಣು	65	ದೀವರು	ಗೃಹಿಣಿ
ಗುಂಡ	ಗಿಡ್ಡ	ಕಲ್ಕಟ್ಟೆ	ಗಂಡು	76	ಹರಿಜನ	ಕೂಲಿ
ಗುಂಡಣ್ಣ	ಗುತ್ತಿಯಣ್ಣ	ತಿಪ್ಪನಕೊಪ್ಪ	ಗಂಡು	80	ಮೊಗವೀರ	ವ್ಯವಸಾಯ
ಗುಂಡಣ್ಣಗೌಡ	ದುಗ್ಗಣ್ಣ ಗೌಡ	ಹುಲುಗಾರುಮನೆ	ಗಂಡು	80	ಒಕ್ಕಲಿಗ	ವ್ಯವಸಾಯ
ಗುಲಂ ಮುಸ್ತಫ್	ಮಹಮ್ಮದ್ ಸಾಹೇಬ್	ಶೃಂಗೇರಿ	ಗಂಡು	87	ಮುಸ್ಲಿಂ	ವ್ಯಾಪಾರ
ಗೌರಮ್ಮ	ಸುಬ್ಬಾಚಾರಿ	ಅಡ್ಡಗದ್ದೆ	ಹೆಣ್ಣು	75	ವಿಶ್ವಕರ್ಮ	ಗೃಹಿಣಿ
ಚಂದ್ರಯ್ಯ ಕೆ.ಜಿ.	ಗುಂಡಯ್ಯ	ಕಕ್ಕರಣೆ	ಗಂಡು	83	ಬ್ರಾಹ್ಮಣ	ವ್ಯವಸಾಯ
ಚಂದ್ರಶೇಖರ ರಾವ್	ಸಿಂಗಪ್ಪಯ್ಯ	ಹೆಬ್ಬಿಗೆ	ಗಂಡು	72	ಬ್ರಾಹ್ಮಣ	ವ್ಯವಸಾಯ
ಚೆನ್ನಮ್ಮ	ವೆಂಕಪ್ಪಾಚಾರ್	ಕುಂತೂರು	ಹೆಣ್ಣು	98	ವಿಶ್ವಕರ್ಮ	ಗೃಹಿಣಿ
ಚೆನ್ನಯ್ಯ ಹೆಗ್ಗಡೆ	ಗುಂಡೇ ಹೆಗ್ಗಡೆ	ಕಲ್ಲುಳಿ	ಗಂಡು	80	ಒಕ್ಕಲಿಗ	ವ್ಯವಸಾಯ
ದುಗ್ಗಮ್ಮ	ಗಿಡ್ಡಾಚಾರಿ	ಮೇಲ್ಗೊಟ್ಟ	ಹೆಣ್ಣು	75	ವಿಶ್ವಕರ್ಮ	ಗೃಹಿಣಿ
ನಾಗ	ತಿಮ್ಮ	ಶಿಡ್ಲುಮನೆ	ಗಂಡು	77	ಹರಿಜನ	ಕೂಲಿ
ನಾಗಭೂಷಣ ಭಿಡೆ	ಮಹಾಬಲ ಭಿಡೆ	ಮೆಣಸೆ	ಗಂಡು	87	ಬ್ರಾಹ್ಮಣ	ವ್ಯವಸಾಯ
ನಾಗಮ್ಮ	ತಮ್ಮಯ್ಯ	ಕೆರೆಮನೆ	ಹೆಣ್ಣು	85	ಮಡಿವಾಳ	ಗೃಹಿಣಿ

ನಾಗೇಂದ್ರ ಶ್ರೇಷ್ಠಿ ಎಲ್.ಕೆ.	ಕೃಷ್ಣಯ್ಯ ಶ್ರೇಷ್ಠಿ	ಶೃಂಗೇರಿ	ಗಂಡು	70	ಆರ್ಯವೈಶ್ಯ	ವೈದ್ಯರು
ನಿರಂಜನ ಕುಮಾರ್	ರಾಜಶೇಖರಯ್ಯ	ಶೃಂಗೇರಿ	ಗಂಡು	51	ಜೈನ	ವೈದ್ಯ
ಭಾಸ್ಕರಾಚಾರ್ ಕೆ.ಆರ್.	ರಂಗಾಚಾರ್	ಕಿತ್ಲೇಜ್ಬೈಲು	ಗಂಡು	66	ವಿಶ್ವಕರ್ಮ	ನಿವೃತ್ತ ನೌಕರ
ಭುವನೇಶ್ವರಿ ಬಲ್ಲಾಳ್	ನಿರಂಜನ ಕುಮಾರ್	ಶೃಂಗೇರಿ	ಹೆಣ್ಣು	48	ಜೈನ	ವೈದ್ಯೆ
ಮಂಜುನಾಥ	ರಾಮಪ್ಪ ಪೂಜಾರಿ	ಹೊನ್ನವಳ್ಳಿ	ಗಂಡು	58	ಪೂಜಾರಿ	ವ್ಯವಸಾಯ
ಮಂಜುನಾಥಯ್ಯ	ಸುಬ್ಬಣ್ಣ	ಸೂರ್ಡಿ	ಗಂಡು	82	ಭೋವಿ	ವ್ಯವಸಾಯ
ಮಂಜಪ್ಪ ಗೌಡ	ಚಿನ್ನೇಗೌಡ	ಕೆರೆಕಟ್ಟೆ	ಗಂಡು	85	ಗೌಡ್ಲು	ವ್ಯವಸಾಯ
ರಾಮಪ್ಪ ಪೂಜಾರಿ	ಕೊರಗ ಪೂಜಾರಿ	ಹಂದಿಜಿಡ್ಡಿ	ಗಂಡು	75	ಪೂಜಾರಿ	ಕೂಲಿ
ಲಕ್ಷ್ಮೀನರಸಿಂಹ ಮೂರ್ತಿ	ಸುಬ್ರಾಯರು ಸಿ.ಎನ್	ಶೃಂಗೇರಿ	ಗಂಡು	92	ಬ್ರಾಹ್ಮಣ	ವ್ಯವಸಾಯ
ಲಲಿತಮ್ಮ	ರಾಮಚಂದ್ರ	ಕೆರೆಮನೆ	ಹೆಣ್ಣು	60	ಮಡಿವಾಳ	ಗೃಹಿಣಿ
ವರ್ಗಿಸ್	ಪಿಂಟೋ	ಶೃಂಗೇರಿ	ಗಂಡು	70	ಕ್ರಿಶ್ಚಿಯನ್	ಗುತ್ತಿಗೆದಾರರು
ವಾಸುದೇವಾಚಾರ್ ಎಲ್.	ಲಿಂಗಯ್ಯ ಆಚಾರ್	ಶೃಂಗೇರಿ	ಗಂಡು	75	ವಿಶ್ವಕರ್ಮ	ನಿವೃತ್ತ ನೌಕರ
ವೆಂಕಟರಮಣ ಕೆ.	ಕಿಟ್ಟಣ್ಣ	ಹೆಮ್ಮನೆ	ಗಂಡು	85	ಭೋವಿ	ಶ್ರೀಮಠದ ನೌಕರ
ವೆಂಕಟರಮಣ ಭಟ್	ರಾಮ ಭಟ್	ವೈಕುಂಠಪುರ	ಗಂಡು	93	ಬ್ರಾಹ್ಮಣ	ಪೌರೋಹಿತ್ಯ
ಶಂಕರಪ್ಪ ಗೌಡ ಕೆ.ಎನ್.	ನಾಗಪ್ಪ ಗೌಡ	ಹೆಬ್ಬುಂದ	ಗಂಡು	77	ಒಕ್ಕಲಿಗ	ವ್ಯವಸಾಯ
ಶಾಂತಮ್ಮ	ಲೋಕಯ್ಯ ಪೂಜಾರಿ	ಕೊಡತಲು	ಹೆಣ್ಣು	86	ಪೂಜಾರಿ	ಗೃಹಿಣಿ
ಶಾಮನಾಯ್ಕ	ಸಿಂಗಪ್ಪ	ನೀಲಂದೂರು	ಗಂಡು	79	ನಾಯ್ಕ	ವ್ಯವಸಾಯ
ಶ್ರೀನಿವಾಸ ಗೌಡ	ತಮ್ಮಣ್ಣ ಗೌಡ	ಬೆಳಂದೂರು	ಗಂಡು	80	ಒಕ್ಕಲಿಗ	ವ್ಯವಸಾಯ
ಸರೋಜಮ್ಮ ಕೆ.	ತೌಡ ದೇವಾಡಿಗ	ಕಿಗ್ಗಾ	ಹೆಣ್ಣು	65	ದೇವಾಡಿಗ	ವ್ಯವಸಾಯ
ಸೀತಾರಾಮಯ್ಯ	ಮಂಜಪ್ಪಯ್ಯ	ಕೊಡತಲು	ಗಂಡು	76	ಬ್ರಾಹ್ಮಣ	ವ್ಯವಸಾಯ
ಸುಬ್ಬಣ್ಣ	ಸಣ್ಣಗುಂಡ	ಕೆರೆಮನೆ	ಗಂಡು	75	ಮಡಿವಾಳ	ವ್ಯವಸಾಯ
ಸುಬ್ಬಣ್ಣ ಹೆಗ್ಗಡೆ	ಗುಂಡಣ್ಣ ಹೆಗ್ಗಡೆ	ಕಲ್ಕುಳಿ	ಗಂಡು	90	ಒಕ್ಕಲಿಗ	ವ್ಯವಸಾಯ
ಸುಬ್ರಾ ಭಟ್ಟರು	ವೆಂಕಟಾಚಲ ಭಟ್ಟರು	ಕಾವಡಿ	ಗಂಡು	94	ಬ್ರಾಹ್ಮಣ	ಪೌರೋಹಿತ್ಯ
ಸುಬ್ರಾಯ ನಾಯಕ್	ತಿಮ್ಮಯ್ಯ ನಾಯಕ್	ಕೆಲ್ಲಾರು	ಗಂಡು	74	ದೀವರು	ವ್ಯಾಪಾರ
ಸುಬ್ರಾಯ ಭಟ್	ಮಂಜಪ್ಪಯ್ಯ	ತಾಳಕೋಡು	ಗಂಡು	84	ಬ್ರಾಹ್ಮಣ	ವ್ಯವಸಾಯ
ಸುಭದ್ರಮ್ಮ	ತಮ್ಮಯ್ಯ ಆಚಾರ್	ನಲ್ಲೂರು	ಹೆಣ್ಣು	74	ವಿಶ್ವಕರ್ಮ	ಗೃಹಿಣಿ
ಸುಶೀಲಮ್ಮ	ಶಾಮಾಚಾರಿ ಕೆ.	ತನಿಕೋಡು	ಹೆಣ್ಣು	78	ವಿಶ್ವಕರ್ಮ	ಗೃಹಿಣಿ
ಹೂವಯ್ಯ ಆಚಾರ್	ಗುಂಡಾಚಾರ್	ಕಲ್ಕಾಳಿ	ಗಂಡು	83	ವಿಶ್ವಕರ್ಮ	ಬಡಗಿ
ಹೊನ್ನೇಗೌಡ	ಗುಂಡೇಗೌಡ	ಶಿರ್ಲು	ಗಂಡು	80	ಗೌಡ್ಲು	ವ್ಯವಸಾಯ

ಅನುಬಂಧ – 4

ಶೃಂಗೇರಿ ಮಹಾಸಂಸ್ಥಾನದ ಜಹಗೀರು





ಶೃಂಗೇರಿ ತಾಲ್ಲೂಕು ನಕ್ಷೆ



ಅನುಬಂಧ – 5



ಎತ್ತಿನ ಗಾಡಿ



ಮರದ ಕೃಷಿ ಉಪಕರಣಗಳು



ಮೀನು ಗೋಚುವುದು









ಬುಡಕಟ್ಟು ಜನರ ಊರ ದೇವರ ಗುಡಿ



ಜನಪದ ಕ್ರೀಡೆ – ಚೌಕಾಬಾರ



ಒಕ್ಕಲಾಟ









ಶ್ರೀ ಶಾರದಾಂಬಾ ರಥೋತ್ಸವ



ಹೋಮ



ಮೇಳದೇವರ ಪೂಜೆ









ಫಲಾಸ್ತ್ರ (ಫಲವಸ್ತು)



ಅಂಟಿಕೆ–ಪಿಂಟಿಕೆ



ಕೃಷಿಕಾರ್ಯ – ಸಸಿ ಕೀಳುವುದು







ಅನುಬಂಧ – 6
ಪರಾಮರ್ಶನ ಗ್ರಂಥಗಳು

ಅನಂತಕೃಷ್ಣ ಅಯ್ಯರ್ ಮತ್ತು
ನಂಜುಂಡಯ್ಯ ಹೆಚ್.ವಿ. : ದಿ ಮೈಸೂರ್ ಟ್ರೈಬ್ಸ್ ಅಂಡ್ ಕಾಸ್ಟ್, ಪ್ರಸಾರಾಂಗ ಮೈಸೂರು ವಿ.ವಿ., 1930

ಅರ್ಫಿಯಸ್ ಸುಂದರಂ ಮತ್ತು
ತಾರಾನಾಥ್ ಎಸ್.ಎಸ್. : ಸಂಶೋಧನಾಪಥ, ಪ್ರಸಾರಾಂಗ ಮೈಸೂರು ವಿ.ವಿ. 2006

ಈಶ್ವರನ್ ಹಿರೇಮಲ್ಲೂರ್ : ಬಸವಣ್ಣ ಹಾಗೂ ಲಿಂಗಾಯಿತ ಧರ್ಮ, ಸಂಸ್ಕೃತಿ ಮತ್ತು ಸಮಾಜ ಭಾಗ 2, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು 1997

: ಭಾರತದ ಹಳ್ಳಿಗಳು, ಪ್ರಸಾರಾಂಗ ಮೈಸೂರು ವಿ.ವಿ. ಮೈಸೂರು 1972

ಕನ್ನಡ ವಿ.ವಿ. ಹಂಪಿ ಪ್ರಸಾರಾಂಗ : ಕನ್ನಡ ಶೈಲಿ ಕೈಪಿಡಿ 1995

ಕಲ್ಲಾಪುರ ಜಿ.ವಿ (ಸಂ) : ಕೆಳದಿ ಶ್ರೀ ಗುಂಡಾಜೋಯಿಸ್ ಅಭಿನಂದನಾ ಗ್ರಂಥ, ಮಲ್ನಾಡ್ ರಿಸರ್ಚ್ ಅಕಾಡೆಮಿ, ಶಿವಮೊಗ್ಗ 1997

ಖಂಡೋಬಾ ಪಿ.ಕೆ. : ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ, ಕನ್ನಡ ಸಾಹಿತ್ಯ ಪರಿಷತ್, 1999

ಗಂಡಾ ಜೋಯಿಸ್ : ಕೆಳದಿ ಸಂಕ್ಷಿಪ್ತ ಇತಿಹಾಸ, ಕೆಳದಿ 1967

ಗಣನಾಥ ಎಕ್ಕಾರು : ಜನಪದ ಆಟಗಳು, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ 2000

ಗುಂಡಪ್ಪ ಡಿ.ವಿ. : ಸಂಸ್ಕೃತಿ, ವೆಸ್ಲಿ ಪ್ರೆಸ್, ಮೈಸೂರು 1953

ಗೋವಿಂದರಾಜು ಟಿ. : ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ, ಪುಸ್ತಕ ಜೇನು, ಚನ್ನದೇವಿ ಅಗ್ರಹಾರ 1993

ಚಂದ್ರ ಪೂಜಾರಿ ಎಂ. : ಸಂಶೋಧಕರು ಮತ್ತು ಕ್ಷೇತ್ರ ಕಾರ್ಯ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ 2008

ಚಂದ್ರಶೇಖರ್ ಹೆಬ್ಬಿಗೆ : ಮಲೆನಾಡು ಹೆಬ್ಬಾರ ಸಮಾಜದಲ್ಲಿನ ಸಂಪ್ರದಾಯಗಳು, ಮಲೆನಾಡು ಹೆಬ್ಬಾರ ಬ್ರಾಹ್ಮಣ ಮಹಾಸಭಾ, ಕೊಪ್ಪ ಪ್ರಕಟಣೆ 2012

ಚಂದ್ರಶೇಖರ ಕಂಬಾರ : ಕನ್ನಡ ಜಾನಪದ ವಿಶ್ವಕೋಶ, ಸಂ –1, ಸಂ–2, ಕನ್ನಡ ಸಾಹಿತ್ಯ ಪರಿಷತ್ 1985

ಚನ್ನಣ್ಣ ವಾಲೀಕಾರ : ಒಂದು ಗ್ರಾಮದ ಜನಪದೀಯ ಅಧ್ಯಯನ, ಅಕ್ಷರ ಪ್ರಕಾಶನ, ಹೆಗ್ಗೋಡು 1970

ಚನ್ನಬಸಪ್ಪ ಗೊ.ರು. (ಸಂ) : ಕರ್ನಾಟಕ ಜನಪದ ಕಲೆಗಳು, ಕರ್ನಾಟಕ ಸಾಹಿತ್ಯ ಪರಿಷತ್ 1977

ಚಲುವೇಗೌಡ ತ.ಚಿ. : ಕೆಲವು ಜನಪದ ಸಂಪ್ರದಾಯಗಳು, ತಳವಾಡಿ ಪ್ರಕಾಶನ, ಮೈಸೂರು 1978

ಚಿದಾನಂದ ಮೂರ್ತಿ ಎಂ. : ಗ್ರಾಮೀಣ, ಬಾಪ್ಕೋ ಪ್ರಕಾಶನ, ಬೆಂಗಳೂರು 1997

: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿ.ವಿ. ಮೈಸೂರು 1966

: ಪರಗಣ, ಪುಸ್ತಕ ಚಿಲುಮೆ ಪ್ರಕಾಶನ, ಮೈಸೂರು 1984

ಜವರೇಗೌಡ ದೇ : ಜಾನಪದ ಅಧ್ಯಯನ, ಚೇತನ ಬುಕ್ ಹೌಸ್, ಮೈಸೂರು 1991

ತಿಪ್ಪೇರುದ್ರ ಸ್ವಾಮಿ ಹೆಚ್ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು 1968

ನಂದೀಮಠ ಎಸ್.ಸಿ. : ಕರ್ನಾಟಕ ಧರ್ಮಗಳು, ಪ್ರಥಮ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ ವಿಚಾರ ಸಾಹಿತ್ಯ 7, ಕರ್ನಾಟಕ ಸರ್ಕಾರ ಬೆಂಗಳೂರು 1983

ನಟರಾಜ್ ಹುಳಿಯಾರ್ : ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ 2004

ನರಸಿಂಹಮೂರ್ತಿ ಎ.ವಿ. : ಶೃಂಗೇರಿ ದಕ್ಷಿಣ ಭಾರತದ ಶಾಂಕರ ಪೀಠದ ಇತಿಹಾಸ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು 2007

ನಾಗಭೂಷಣ ಸ್ವಾಮಿ ಓ.ಎಲ್. : ವಿಮರ್ಶೆಯ ಪರಿಭಾಷೆ, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ –1983

ನಾಗರಾಜ ರಾವ್ ಹೆಚ್.ಎಂ. : ಶೃಂಗೇರಿ ಪ್ರಾಚೀನತೆ, ಮಾನವಿಕ ಕರ್ನಾಟಕ, ಪ್ರಸಾರಾಂಗ ಮೈಸೂರು ವಿ.ವಿ. ಮೈಸೂರು 1971

ನಾಗಾರ್ಜುನ ಹಾ.ಮ. (ಸಂ) : ಸಾಹಿತ್ಯಾವಲೋಕನ, ಚಿಕ್ಕಮಗಳೂರು ಜಿಲ್ಲಾ ಕ.ಸಾ.ಪ. ಪ್ರಕಟಣೆ 2009

ನಾಗೇಗೌಡ ಹೆಚ್.ಎಲ್. : ಪ್ರವಾಸಿ ಕಂಡ ಇಂಡಿಯಾ, ಮೈಸೂರು 1972

ನಾಗೇಶ್ ಹೆಚ್.ವಿ. : ಗ್ರಾಮಾಂತರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು 2000

ನಾಯಕ್ ಹಾ.ಮಾ. : ಜನಪದ ಸ್ವರೂಪ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು 1971

ಪರಮಶಿವಯ್ಯ ಜೀ.ಶಂ. : ದಕ್ಷಿಣ ಕರ್ನಾಟಕ ಜನಪದ ಕಥೆಗಳು, ಸಾಹಿತ್ಯ ಅಕಾಡೆಮಿ, ಹೊಸದೆಹಲಿ 1988

ಪಾಟೀಲ್ ಬಿ.ವಿ. : ಗ್ರಾಮದೇವತೆಗಳು, ಕರ್ನಾಟಕ ವಿ.ವಿ. ಧಾರವಾಡ, 1996

ಪ್ರಶಾಂತ್ : ಶ್ರೀ ಶೃಂಗೇರಿ ಶಾರದಾ ಪೀಠ ಮತ್ತು ಮೈಸೂರು ಸಂಸ್ಥಾನ, ಚಾರಿತ್ರಿಕ ಅಧ್ಯಯನ, ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ, ಶೃಂಗೇರಿ 2007

ಬೋರಲಿಂಗಯ್ಯ ಹಿ.ಚಿ. : ದಾಸಪ್ಪ–ಜೋಗಪ್ಪ, ಕನ್ನಡ ಸಾಹಿತ್ಯ ಪರಿಷತ್, 1981

ಮಹಾಬಲೇಶ್ವರ ರಾವ್ : ಸಂಶೋಧನಾ ಮಾರ್ಗ, ನವಕರ್ನಾಟಕ ಪ್ರಕಾಶನ, ಬೆಂಗಳೂರು – 1996

ರಮೇಶ್ ಉಳುವೆ : ಶೃಂಗಗಿರಿಯ ಒಡಲಿನಿಂದ, ನಿಸರ್ಗ ಪ್ರಕಾಶನ, ಉಳುವೆ 2010

ರಹಮತ್ ತರೀಕೆರೆ : ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ 2008

: ಪ್ರತಿ ಸಂಸ್ಕೃತಿ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು 1993

ರಾಮಚಂದ್ರ ಎಸ್.ಜಿ. : ಶೃಂಗೇರಿ ವಿದ್ಯಾಋಣ್ಯಪುರ, ಶ್ರೀ ರಾಮಸೇವಾ ಸಮಿತಿ ವಿದ್ಯಾರಣ್ಯಪುರ 2009

ರಾಮಚಂದ್ರಪ್ಪ ಬರಗೂರು (ಸಂ) : ಕನ್ನಡ ಸಾಹಿತ್ಯದಲ್ಲಿ ನಿಸರ್ಗ ಮತ್ತು ಸಾಮಾಜಿಕ ಸ್ಥಿತ್ಯಂತರ, ಕನ್ನಡ ಸಾಹಿತ್ಯ ಪುನರ್‌ಮೌಲ್ಯೀಕರಣ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ 1993

: ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ 1993

: ಸಂಸ್ಕೃತಿ ಮತ್ತು ಸೃಜನಶೀಲತೆ, ಜನಸ್ನೇಹಿ ಪ್ರಕಾಶನ ಬೆಂಗಳೂರು, 1991

ರಾಮಪ್ಪ ಕಡಿದಾಳು : ಮಲೆನಾಡು ಶ್ರೀ ವೈಷ್ಣವ ನಾಮಧಾರಿ ಗೌಡ ಸಂಸ್ಕೃತಿ ಪ್ರಕಟನೆ ತೀರ್ಥಹಳ್ಳಿ ತಾಲ್ಲೂಕು ಒಕ್ಕಲಿಗ ಸಂಘ 1998

ವೆಂಕಟಪ್ಪ ಕೂಡ್ಲೂರು : ಗೊಂಬೆ ಚಿತ್ತಾರದ ಮಡಕೆಕಡೆದೋ....., ಧಾತ್ರಿ ಪುಸ್ತಕ ಪ್ರಕಾಶನ, ಬೆಂಗಳೂರು, 2009

ವೆಂಕಟರಾಮನ್ ಕೆ.ಆರ್. : ದಿ ಥ್ರೋನ್ ಆಫ್ ಟ್ರಾನ್ಸೆಂಡೆಂಟಲ್ ವಿಸ್‌ಡಂ, ಪರಿಷ್ಕೃತ, ಮದ್ರಾಸ್ 1991 ದಿ ಏಜ್ ಆಫ್ ವಿದ್ಯಾಶಂಕರ ವ್ಯಾಲ್ಯೂಮ್1, ಕಲಾ ಪ್ರಿಂಟರ್ಸ್ ಅಂಡ್ (ಪ್ರೈ) ಲಿಮಿಟೆಡ್, ಕಲ್ಕತ್ತ, 1976

ಶಂಕರನಾರಾಯಣ ತೀ.ನಂ. : ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಮೈಸೂರು ವಿ.ವಿ. ಮೈಸೂರು 1982

ಶಂಕರರಾವ್ ಚ.ನ. : ಸಮಾಜಶಾಸ್ತ್ರ, ಜೈ ಭಾರತ ಪ್ರಕಾಶನ, ಮಂಗಳೂರು, 1992

ಶಾಂತಿರಾಜ ಶಾಸ್ತ್ರಿಗಳು ವರ್ತೂರು (ಸಂ): ನಾಗಕುಮಾರ ಚರಿತಂ (ಬಾಹುಬಲಿಕವಿ ವಿರಚಿತ) ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಬೆಂಗಳೂರು 1993

ಶಾಸ್ತ್ರೀ ಎ.ಕೆ. : ಶೃಂಗೇರಿ ಧರ್ಮಸಂಸ್ಥಾನ, ಶೃಂಗೇರಿ ಮಠ, ಶೃಂಗೇರಿ 1983

: ಶೃಂಗೇರಿ ಇತಿಹಾಸ, ಕರ್ನಾಟಕ ವಿ.ವಿ. ಧಾರವಾಡ 1973

: ದಿ ರೆಕಾರ್ಡ್ಸ್ ಆಫ್ ದಿ ಶೃಂಗೇರಿ ಮಠ ರೆಲೇಟಿಂಗ್ ಟು ಕೆಳದಿ ಮ್ಯೂಸಿಯಂ ಅಂಡ್ ರೀಸರ್ಚ್ ಬ್ಯೂರೋ, ಕೆಳದಿ 2001

: ಶೃಂಗೇರಿ ಮಠದ ಆಯ್ದ ಚಾರಿತ್ರಿಕ ದಾಖಲೆಗಳು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು 2003

ಶಿವಸ್ವಾಮಿ ಶರ್ಮಾ ಹೆಚ್.ಎಸ್. : ಧರ್ಮದ ಕೈಪಿಡಿ, ಯುವ ವಿಪ್ರ ವೇದಿಕೆ, ಶೃಂಗೇರಿ 2012

ಶೃಂಗೇರಿ ಸೊವೆನೀರ್ : ದಿ ಶೃಂಗೇರಿ ಸೊವೆನೀರ್ ಕಮಿಟಿ, ಮದ್ರಾಸ್ 1963

ಸುಬ್ರಹ್ಮಣ್ಯ ಐಯ್ಯರ್ ವಿ : ಸೆಲೆಕ್ಷನ್ ಫ್ರೇಮ್ ದಿ ರೆಕಾರ್ಡ್ಸ್ ಆಫ್ ದಿ ಶೃಂಗೇರಿ ಮಠ ವಾಲ್ಯೂಮ್-1, ಗೌರ್ನಮೆಂಟ್ ಪ್ರೆಸ್, ಮೈಸೂರು 1927

ಸೊವೆನೀರ್ : ಸುಧರ್ಮ ಸಮಿತಿ, ಶೃಂಗೇರಿ 1972

ಹಯವದನ ರಾವ್ ಪಿ. : ಮೈಸೂರು ಗೆಜೆಟಿಯರ್, ವಾಲ್ಯೂಮ್ 2,3,5 ಗೌರ್ನಮೆಂಟ್ ಪ್ರೆಸ್, ಬೆಂಗಳೂರು 1930 ಸಂ-1, 1943 ಮತ್ತು ಶಮ2 1946

: ಹಿಸ್ಟರಿ ಆಫ್ ಮೈಸೂರು, ಬೆಂಗಳೂರು

ಹಿರಿಯಣ್ಣ ಅಂಬಳಿಕೆ : ಜಾನಪದ ಕೆಲವು ವಿಚಾರಗಳು, ಪ್ರಜ್ವಲ ಪ್ರಕಾಶನ, ಮೈಸೂರು 1984

: ಮಲೆನಾಡ ವೈಷ್ಣವ ಒಕ್ಕಲಿಗ ಸಂಸ್ಕೃತಿ, ಕರ್ನಾಟಕ ಪುಸ್ತಕ ಪ್ರಾಧಿಕಾರ ಬೆಂಗಳೂರು 1999

: ಶಿವಮೊಗ್ಗ ಜಿಲ್ಲೆಯ ಜನಪದ ಕಥೆಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ., ಮೈಸೂರು 1976

ಸಂಶೋಧನಾ ಪ್ರಬಂಧಗಳು

ಪಾಂಡುರಂಗ ಡಿ.ಆರ್. : ದಕ್ಷಿಣ ಕನ್ನಡ ಜಿಲ್ಲೆಯ ಬೈರರ ಸಾಹಿತ್ಯಕ ಸಾಂಸ್ಕೃತಿಕ ಅಧ್ಯಯನ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ, ಮಂಗಳೂರು ವಿ.ವಿ. 1989

ರಮೇಶ್ ಡಿ.ಜಿ. : ಮಲೆನಾಡ ಬೇಲ ಜನಾಂಗ ಒಂದು ಸಂಸ್ಕೃತಿ ಅಧ್ಯಯನ, ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧ, ಬೆಂಗಳೂರು ವಿ.ವಿ. 2001

ವಿಷ್ಣುವರ್ಧನ್ ಹೆಚ್. : ಕೆಳದಿ ವೀರಶೈವ ನಾಯಕರು ಮತ್ತು ಶೃಂಗೇರಿ ಮಠ ಒಂದು ಸಮಗ್ರ ಅಧ್ಯಯನ, ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧ, ಕುವೆಂಪು ವಿ.ವಿ. ಜ್ಞಾನಸಹ್ಯಾದ್ರಿ, ಶಂಕರಘಟ್ಟ 2007

ವೀರಪ್ಪಗೌಡ ಹೆಚ್.ಸಿ. : ಚಾರಿತ್ರಿಕ ಹಿನ್ನೆಲೆಯಲ್ಲಿ ಶೃಂಗೇರಿ ಮಹಾಸಂಸ್ಥಾನದ ಆರ್ಥಿಕ ಅಧ್ಯಯನ, ಕ್ರಿ.ಶ. 1336-1959. ಪಿಹೆಚ್.ಡಿ. ಮಹಾ ಪ್ರಬಂಧ, ಕನ್ನಡ ವಿ.ವಿ. ಹಂಪಿ 2010

ಸುರೇಶ್ ವೈ.ಎಸ್. : ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರಾಣ ವ್ಯಕ್ತಿಗಳ ಪ್ರತಿನಿಧೀಕರಣ, ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧ, ಕನ್ನಡ ವಿ.ವಿ. ಹಂಪಿ 2007

ನಿಯತ ಕಾಲಿಕೆಗಳು (ಜರ್ನಲ್ಸ್)

ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ

ನಾಗೇಶ್ ಪತ್ರಿಕೆ, ಶೃಂಗೇರಿ

ಪ್ರಬುದ್ಧ ಕರ್ನಾಟಕ

ಭಾಮತಿ, ಕಾಲೇಜು ವಾರ್ಷಿಕ ಸಂಚಿಕೆ

ಮಲೆನಾಡುವಾರ್ತೆ, ಶೃಂಗೇರಿ

ಶೃಂಕೋನ, ಶೃಂಗೇರಿ

ಶ್ರೀ ಶಂಕರ ಕೃಪ (ಕನ್ನಡ ಮಾಸಪತ್ರಿಕೆ), ಮೈಸೂರು

ಸಂಸ್ಕೃತಿ ಸುವರ್ಣ ಪರಂಪರೆ ಮಾಲೆ

ಸಾಧನೆ, ಬೆಂಗಳೂರು ವಿಶ್ವವಿದ್ಯಾನಿಲಯ

ಸಾಹಿತ್ಯಾವಲೋಕನ